ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ
ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ
ಮಂಜುನಾಥ ಪಾಟೀಲ

ಮಾರ್ಗದರ್ಶಕರು
ಡಾ. ವಾಸುದೇವ ಬಡಿಗೇರ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೦೬

743

ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ಮಂಜುನಾಥ ಪಾಟೀಲ

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೬

ಸಂಶೋಧಕರ ಪ್ರಮಾಣ ಪತ್ರ

ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವಾಸುದೇವ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಮತ್ತು ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

(ಮಂಜುನಾಥ ಪಾಟೀಲ)
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

ದಿನಾಂಕ: 28/11/2016
ಸ್ಥಳ: ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಮಂಜುನಾಥ ಪಾಟೀಲ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಹಾಗೂ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ವಾಸುದೇವ ಬಡಿಗೇರ)
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

ದಿನಾಂಕ: 28/11/2016
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸಮೀಕ್ಷೆ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಮೀಕ್ಷೆ ಮತ್ತು ವಿಧಾನ

ಪ್ರಸ್ತಾವನೆ

ಪೃಥ್ವಿಯ ತೊಟ್ಟಿಲಲ್ಲಿ ಬೆಳೆದು ಬಂದ ಬುದ್ಧಿಜೀವಿ ಮಾನವರು ಕಾಲ ಗತಿಸಿದಂತೆ ಕೌಟುಂಬಿಕ, ಸಾಂಘಿಕ ಹಾಗೂ ಸಾಮಾಜಿಕ ಜೀವನಗಳ ಚೌಕಟ್ಟಿನಲ್ಲಿ ವಾಸಿಸಲು ಪ್ರಾರಂಭಿಸಿದರು. ಆಗ ಅವರಿಗೆ ತಮ್ಮ ಸ್ವಂತಿಕೆಯ ವಾಸಸ್ಥಾನ, ತಮ್ಮ ಸಮುದಾಯದ ಮನೆಗಳು ಹಾಗೂ ಇವೆಲ್ಲವುಗಳನ್ನೊಳಗೊಂಡ ಗ್ರಾಮಗಳ ರಚನೆ ಮತ್ತು ರಕ್ಷಣೆಗಳಿಗಾಗಿ ಪ್ರಯತ್ನಿಸತೊಡಗಿದರು. ತದನಂತರ ಗ್ರಾಮ ಹಾಗೂ ಗ್ರಾಮಗಳಿಂದ ಕೂಡಿದ ಚಿಕ್ಕ ಅಥವಾ ಸೀಮಿತವಾದ ಮಂಡಲಗಳನ್ನು ರಚಿಸಿಕೊಂಡರು. ಇಂಥ ಮಂಡಲಗಳ ಸಮೂಹದಿಂದ ಕೂಡಿದ ಮಹಾಮಂಡಲ ಹಾಗೂ ಮಹಾಮಂಡಲಗಳಿಂದ ಕೂಡಿದ ರಾಜ್ಯ, ಸಾಮ್ರಾಜ್ಯ, ಆನಂತರ ರಾಷ್ಟ್ರಗಳೆಂಬ ರಾಜಕೀಯ ಸೀಮಾಧೀನ ಸಂಸ್ಥೆಗಳನ್ನು ರಚಿಸಿಕೊಂಡರು. ಗ್ರಾಮದಿಂದ ಹಿಡಿದು, ರಾಜ್ಯಗಳ ರಾಜಧಾನಿಗಳವರೆಗೂ ಅವುಗಳ ಸುತ್ತ ರಕ್ಷಣಾವ್ಯೂಹಗಳನ್ನು ರಚಿಸುವ ಈ ಕ್ರಮವು ಐತಿಹಾಸಿಕ ಕಾಲದ ರಕ್ಷಣಾ ವಾಸ್ತುಶಿಲ್ಪದ ಮೈಲುಗಲ್ಲು.

ರಾಜ್ಯಗಳು ಮತ್ತು ಸಾಮ್ರಾಜ್ಯಗಳು ಉದಯವಾದಾಗಿನಿಂದ ಜಗತ್ತಿನ ಪ್ರತಿಯೊಂದು ದೇಶಗಳಲ್ಲಿ ಯುದ್ಧಗಳು ಅನಿವಾರ್ಯ ಎಂಬಂತಹ ಪದ್ಧತಿಯಾಗಿ ಬೆಳೆದುಬಂದವು. ಹಿಂದೆ ಯುದ್ಧಗಳು ದೇಶ, ರಾಜ್ಯ, ಜಿಲ್ಲೆ, ಹಳ್ಳಿಗಳ ಮಧ್ಯೆ ಪರಸ್ಪರ ಸ್ವರಕ್ಷಣೆಗಾಗಿ ನಡೆಯುತ್ತಿದ್ದವು. ಈಗ ಅದೊಂದು ಹವ್ಯಾಸವಾಗಿದೆ. ಇದಕ್ಕೆ ಕಾರಣ ಮಾನವನ ಮಹಾತ್ವಾಕಾಂಕ್ಷೆ, ಸ್ವಾರ್ಥ, ಸ್ಪರ್ಧೆ, ಅಸಹನೆ, ಕಲಹಪ್ರಿಯತೆ, ಅಹಂಕಾರದಂತಹ ಮನೋಭಾವನೆಗಳೇ ಯುದ್ಧಕ್ಕೆ ಪ್ರೇರಕಶಕ್ತಿಗಳಾಗಿವೆ. ಈ ರೀತಿ ನಾಗರಿಕತೆ ಜನ್ಮ ತಳೆದಾಗಿನಿಂದಲೂ ಸಂಘರ್ಷ ಬೆಳೆದುಬಂದಿದೆ. ಪ್ರಾಚೀನಕಾಲದಲ್ಲಿ ರಾಜ್ಯಾಡಳಿತದ ಒಂದು ಅವಿಭಾಜ್ಯ ಅಂಗವೆಂಬಂತೆ ಯುದ್ಧವು ಬೆರೆತುಹೋಗಿತ್ತು. ಇದನ್ನು ಪ್ರಾಚೀನ ಶಾಸ್ತ್ರಗ್ರಂಥಗಳು, ರಾಜನೀತಿಜ್ಞರು ಸ್ಪಷ್ಟಪಡಿಸಿದ್ದಾರೆ. ಇಂದಿನ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೂ ಯುದ್ಧವು ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಇತಿಹಾಸಕಾಲದುದ್ದಕ್ಕೂ ರಾಜರು ಸ್ವರಕ್ಷಣೆಗಾಗಿ, ರಾಜ್ಯರಕ್ಷಣೆಗಾಗಿ, ರಾಜ್ಯವಿಸ್ತರಣೆಗಾಗಿ, ಸಂಪತ್ತಿನ ಸಂಗ್ರಹಕ್ಕಾಗಿ ಯುದ್ಧ ಮಾಡಿರುವುದುಂಟು. ಈ ಯುದ್ಧದಲ್ಲಿ

ಅನುಸರಿಸಬೇಕಾದ ಕೆಲವು ನಿಶ್ಚಿತ ನಿಯಮಗಳನ್ನು ನಮ್ಮ ಶಾಸ್ತ್ರಗ್ರಂಥಗಳು ಹೇಳುತ್ತಾ ಬಂದಿವೆ. ಅಲ್ಲದೆ ಇಂತಹ ಯುದ್ಧಗಳ ಹಿಂದೆ ಸಾಕಷ್ಟು ಪೂರ್ವಸಿದ್ಧತೆ ಇರುತಿತ್ತು. ಅದರಲ್ಲಿ ಕೋಟೆ-ಕೊತ್ತಲಗಳ ನಿರ್ಮಾಣವೂ ಒಂದಾಗಿತ್ತು. ಕೌಟಿಲ್ಯನು ಹೇಳುವಂತೆ ರಾಜ್ಯದ ಸಪ್ತಾಂಗಗಳಾದ ಸ್ವಾಮಿ, ಅಮಾತ್ಯ, ಸುಹೃತ್ತು, ಕೋಶ, ಬಲ, ರಾಷ್ಟ್ರ ಮತ್ತು ದುರ್ಗ ಇವುಗಳಲ್ಲಿ ದುರ್ಗ ಅಥವಾ ಕೋಟೆಯು ಒಂದಾಗಿದ್ದು ಅತ್ಯಂತ ಪ್ರಮುಖ ಅಂಗವಾಗಿದೆ. ಹೀಗಾಗಿ ರಾಜನು ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಕೇಂದ್ರಸ್ಥಳದಲ್ಲಿ ಸುಭದ್ರವಾದ ಕೋಟೆಯನ್ನು ನಿರ್ಮಿಸಿಕೊಳ್ಳುವುದು ಅವಶ್ಯಕವಾಗಿತ್ತು. ಕೋಟೆಯು ರಾಜನ ರಕ್ಷಣೆಯನ್ನು ಮಾಡುವುದಲ್ಲದೆ ಶತ್ರುಗಳಿಗೆ ದುರ್ಗಮವಾಗಿಯೂ ಇದ್ದು ಆಪತ್ಕಾಲದಲ್ಲಿ ರಕ್ಷಣೆ ಪಡೆಯಲು ಬಲವಾದ ಆಶ್ರಯವನ್ನು ನೀಡುತ್ತಿತ್ತು. ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನೀತಿ, ಮಾನಸಾರ, ದುರ್ಗಸಿಂಹನ ಪಂಚತಂತ್ರ ಮತ್ತು ಮಾನಸೋಲ್ಲಾಸದಂತಹ ಪ್ರಾಚೀನ ಗ್ರಂಥಗಳು ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವವನ್ನು ಕುರಿತಾಗಿ ತಿಳಿಸುತ್ತವೆ.

ಕೆಲವು ಪೂರ್ವಯೋಜಿತ ಮತ್ತು ಸಂಭವನೀಯ ದಾಳಿಗಳಿಂದ ರಕ್ಷಿಸಿಕೊಳ್ಳಲು ಕೋಟೆಯ ನಿರ್ಮಾಣದ ಅವಶ್ಯಕತೆ ಇದ್ದದ್ದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಕೋಟೆಗಳು ಸಾಮ್ರಾಜ್ಯಗಳಲ್ಲಷ್ಟೇ ಅಲ್ಲದೆ ಗ್ರಾಮಗಳಲ್ಲಿಯೂ ನಿರ್ಮಾಣವಾಗಿವೆ. ಅದಕ್ಕೆ ವಿಜಾಪುರ ಜಿಲ್ಲೆಯು ಹೊರತಾಗಿಲ್ಲ. ಕಾಲದಿಂದ ಕಾಲಕ್ಕೆ ಯುದ್ಧ ಅಥವಾ ಆಕ್ರಮಣಗಳಲ್ಲಿಯ ತಂತ್ರಗಳ ಬದಲಾವಣೆ ಹಾಗೂ ಹೊಸದಾಗಿ ಆವಿಷ್ಕಾರಗೊಂಡ ಆಯುಧಗಳಿಗೆ ತಕ್ಕಂತೆ ಕೋಟೆಗಳ ರಚನೆಯ ವಿಧಾನದಲ್ಲಿಯೂ ಮಾರ್ಪಾಡುಗಳಾದವು. ನಂದ, ಮೌರ್ಯ, ಶಾತವಾಹನರ ಕಾಲದಿಂದಲೂ ಬಯಲುಯುದ್ಧಗಳೇ ಹೆಚ್ಚಾಗಿ ಕಂಡುಬರುತ್ತವೆ. ಯಾವಾಗ ಕೇಂದ್ರೀಕೃತವಾದ ದೊಡ್ಡ ದೊಡ್ಡ ಸಾಮ್ರಾಜ್ಯಗಳು ಒಡೆದು ಅನೇಕ ಸಣ್ಣಪುಟ್ಟ ಸಾಮ್ರಾಜ್ಯಗಳಾಗಿ ಉದಯವಾದ ಮೇಲೆ ಸಾಮಾನ್ಯವಾಗಿ ಸಂಘರ್ಷಗಳು ಕೂಡ ಹೆಚ್ಚಾಗತೊಡಗಿದವು. ಹೀಗೆ ತಮ್ಮ ಪರಿವಾರ, ಪ್ರಜೆಗಳು ಮತ್ತು ಸಂಪತ್ತಿನ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿಕೊಳ್ಳಲು ಪ್ರಾರಂಭಿಸಿದರು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ರಾಜಧಾನಿಕೇಂದ್ರಿತ ಪ್ರದೇಶಗಳಲ್ಲಷ್ಟೇ ಅಲ್ಲದೆ ಗ್ರಾಮಗಳಲ್ಲಿಯೂ ಕೋಟೆಗಳು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣವಾಗಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಲ್ಲಿ ಗ್ರಾಮಗಳ ರಕ್ಷಣೆಗೆ ಕೋಟೆಗಳು ಇಲ್ಲವೆಂದು ಅರ್ಥವಲ್ಲ. ರಾಜ್ಯಗಳು, ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತಲೂ ಮೊದಲು ಎಲ್ಲ ಜನರು ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಆಗ ತಮ್ಮನ್ನು, ತಮ್ಮ ಸಂಪತ್ತನ್ನು ಕಳ್ಳರಿಂದ, ವೈರಿಗಳಿಂದ ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಅವರು ಗ್ರಾಮಗಳ ಸುತ್ತಲೂ ಬಲಿಷ್ಠವಾದ ರಕ್ಷಣಾಗೋಡೆಯನ್ನು ನಿರ್ಮಿಸುತ್ತಿದ್ದರು. ಇವು ಮೊದಲು ಹೆಚ್ಚಾಗಿ ಸಮುದಾಯಕೇಂದ್ರಿತವಾಗಿ ರಚನೆಯಾಗಿದ್ದರೆ, ನಂತರದ ಕಾಲಘಟ್ಟದಲ್ಲಿ ಗ್ರಾಮಗಳಲ್ಲಿಯೂ ಪ್ರಭುತ್ವಕೇಂದ್ರಿತ ವ್ಯವಸ್ಥೆಯ ಹಿನ್ನೆಲೆಯಲ್ಲಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಅವುಗಳಲ್ಲಿ ಬಹುತೇಕ ಕೋಟೆಗಳು ಸಂಪೂರ್ಣವಾಗಿ ನಾಶ ಹೊಂದಿದ್ದು, ಅದರ ಅವಶೇಷಗಳು

ಕಂಡುಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಕೋಟೆಯಿರಬಹುದಾದ ಕುರುಹಾಗಿ ಶಾಸನ, ಹಸ್ತಪ್ರತಿಗಳು, ಪ್ರಾಚೀನ ಕಾವ್ಯಗಳು ಹಾಗೂ ಮೌಖಿಕ ಆಕರಗಳಿಂದ ಕಂಡುಕೊಳ್ಳಬಹುದು.

ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ವಿಜಾಪುರ ಜಿಲ್ಲೆಯ ಇತಿಹಾಸ ರಾಷ್ಟ್ರಕೂಟರ ಕಾಲದಿಂದ ಹೆಚ್ಚು ಸ್ಪಷ್ಟತೆ ಪಡೆದುಕೊಳ್ಳುತ್ತದೆ. ಈ ಜಿಲ್ಲೆಯ ಭೌಗೋಳಿಕ ಪ್ರದೇಶದಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿವೆ. ಆದಿಲ್‌ಶಾಹಿಗಳು ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಿಂದ ಈ ಪ್ರದೇಶವು ರಾಜಕೀಯವಾಗಿ ಪ್ರಾಬಲ್ಯತೆ ಪಡೆದುಕೊಂಡಿತು. ಇದು ಮುಂದೆ ೧೯ನೇ ಶತಮಾನದವರೆಗೂ ಜೀವಂತವಾಗಿ ಉಳಿದುಬಂದುದಕ್ಕೆ ಆಧಾರಗಳಿವೆ. ಹೀಗಾಗಿ ಇದೊಂದು ರಾಜಕೀಯ ಜ್ವಲಂತ ವೇದಿಕೆಯಾಗಿ ಮುಂದುವರಿದುಕೊಂಡು ಬಂದಿದ್ದು ಕಂಡುಬರುತ್ತದೆ. ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದ ಸಂದರ್ಭದಲ್ಲಿ ಜಿಲ್ಲೆಯ ಭೂಪ್ರದೇಶವು ರಣರಂಗವಾಗಿಯೇ ಮಾರ್ಪಟ್ಟಿತು. ಅಲ್ಲದೆ ಮರಾಠರು, ಹೈದರಾಬಾದ್ ನಿಜಾಮ, ಹೈದರ್ ಮತ್ತು ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷರ ನಡುವಿನ ಸಂಘರ್ಷಗಳಿಂದ ರಕ್ಷಣೆ ಪಡೆಯಲು ಈ ಪ್ರದೇಶದಲ್ಲಿ ರಾಜಧಾನಿ ಪಟ್ಟಣದಲ್ಲಷ್ಟೇ ಅಲ್ಲದೆ ಬಹುತೇಕ ನಗರ, ಪಟ್ಟಣ, ಗ್ರಾಮಗಳಲ್ಲಿ ಕೋಟೆ-ಕೊತ್ತಲಗಳು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಬಹಮನಿ, ಆದಿಲ್‌ಶಾಹಿ, ಹೈದರಾಬಾದ್ ನಿಜಾಮ, ಮರಾಠ, ಮೊದಲಾದವರ ಆಡಳಿತಾವಧಿಯಲ್ಲಿ ದೇಸಾಯಿ, ದೇಶಮುಖ, ನಾಡಗೌಡ, ಪಾಟೀಲ ಅನೇಕ ಅಧಿಕಾರಿವರ್ಗದವರನ್ನು ನೇಮಿಸಲಾಗುತ್ತಿತ್ತು. ಒಂದು ಅಥವಾ ಅದಕ್ಕಿಂತ ಹೆಚ್ಚಿನ ಗ್ರಾಮಗಳನ್ನು 'ಇನಾಂ' ರೂಪದಲ್ಲಿ ಇವರಿಗೆ ಕೊಟ್ಟು ಅವುಗಳ ರಕ್ಷಣೆಯ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿತ್ತು. ಹೀಗಾಗಿ ಈ ಆಡಳಿತವರ್ಗದವರು ತಮ್ಮ ನಾಡು ನೆಲದ ರಕ್ಷಣೆ, ಸ್ವರಕ್ಷಣೆ, ಜೊತೆಗೆ ಅಲ್ಲಿಯ ಜನರ ಹಾಗೂ ಸಂಪತ್ತಿನ ರಕ್ಷಣೆಯನ್ನು ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಶತ್ರುಗಳಿಂದ, ಕಳ್ಳಕಾಕರಿಂದ, ಯುದ್ಧದಂತಹ ಸಂದರ್ಭದಲ್ಲಿ ಸೈನಿಕರ ದಾಳಿಗಳಿಂದ ತಪ್ಪಿಸಿಕೊಳ್ಳಲು ಕೋಟೆಗಳನ್ನು ಕಟ್ಟಿಸಿಕೊಂಡರು. ಇವು ಗ್ರಾಮದ ರಕ್ಷಣೆಯನ್ನಷ್ಟೇ ಅಲ್ಲದೆ ಕೆಲವು ಕೋಟೆಗಳು ರಾಜ್ಯದ ರಾಜಧಾನಿಯ ಸುತ್ತ ರಕ್ಷಣಾವ್ಯೂಹಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಕೆಲವೊಂದು ಗ್ರಾಮದಲ್ಲಿ ಕೋಟೆಯ ಬದಲಿಗೆ ಹುಡೆವುಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ.

ಈ ರೀತಿಯಾಗಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡ ಕೋಟೆಗಳು ಕಾಲ ಗತಿಸಿದಂತೆ ಬದಲಾವಣೆ ಹೊಂದುತ್ತ ತಮ್ಮ ಮಹತ್ವವನ್ನು ಕಳೆದುಕೊಂಡವು. ಅವು ಇಂದು ಕೇವಲ ಸ್ಮಾರಕಾವಶೇಷಗಳಾಗಿ ಕಾಣುತ್ತವೆ. ವಿಜಾಪುರ ಜಿಲ್ಲೆಯ ಕೋಟೆ-ಕೊತ್ತಲಗಳು ಮತ್ತು ಇತರೆ ರಕ್ಷಣಾಸಂಬಂಧಿ ಸ್ಮಾರಕಗಳ ಕುರಿತಾಗಿ ಆದ ಅಧ್ಯಯನಗಳು ಕಡಿಮೆ. ಕೇವಲ ರಾಜಧಾನಿಕೇಂದ್ರಿತ ವಿಜಾಪುರ ಕೋಟೆಯನ್ನು ಹೊರತುಪಡಿಸಿದಂತೆ ಜಿಲ್ಲೆಯ ಪ್ರತಿ ತಾಲೂಕುಗಳಲ್ಲಿ ಕಂಡುಬರುವ ಗ್ರಾಮ ರಕ್ಷಣಾ ಕೋಟೆ-ಕೊತ್ತಲಗಳ ಕುರಿತಾಗಿ ಇದುವರೆಗೆ ಯಾವುದೇ ಅಧ್ಯಯನಗಳು

ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ನಿರ್ಲಕ್ಷ್ಯಕ್ಕೆ ಒಳಗಾಗಿ ಇಂದು ವಿನಾಶದ ಅಂಚಿನಲ್ಲಿರುವ ವಿಜಾಪುರ ಜಿಲ್ಲೆಯಲ್ಲಿನ ಕೋಟೆಗಳು, ಗ್ರಾಮ ರಕ್ಷಣಾಸಂಬಂಧಿ ಸ್ಮಾರಕಗಳ ಐತಿಹಾಸಿಕ ಹಿನ್ನೆಲೆ, ಭೌಗೋಳಿಕ ಲಕ್ಷಣಗಳು, ಅವುಗಳ ನಿರ್ಮಾಣದ ಉದ್ದೇಶ ಮತ್ತು ಮಹತ್ವವನ್ನು ಕುರಿತಂತೆ ಅಧ್ಯಯನ ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ವಿಜಾಪುರ ಜಿಲ್ಲೆಯ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕೆಲವು ಗ್ರಂಥಗಳು ಪ್ರಕಟವಾಗಿವೆ. ಆದರೆ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ ಅಂದರೆ ಕೋಟೆ-ಕೊತ್ತಲಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಬೆಳವಣಿಗೆಯನ್ನು ಪೂರ್ಣಪ್ರಮಾಣದಲ್ಲಿ ಚಿತ್ರಿಸುವ ಪ್ರಯತ್ನ ಸಮರ್ಪಕವಾಗಿ ನಡೆದಿಲ್ಲ. ಇಂತಹ ಒಂದು ಪ್ರಯತ್ನವನ್ನು ಕೈಗೊಳ್ಳುವ ಉದ್ದೇಶದಿಂದ "ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ" ಎಂಬ ವಿಷಯವನ್ನು ಆಯ್ದುಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ.

ಕಲ್ಯಾಣ ಚಾಳುಕ್ಯರ ಕಾಲಾವಧಿಯಿಂದಲೇ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಕೋಟೆಗಳ ಬಗ್ಗೆ ಆಧಾರಗಳು ಕಂಡುಬರುತ್ತವೆ. ಇವರ ಕಾಲಾವಧಿಯ ಇಂಗಳೇಶ್ವರ ಕೋಟೆಯನ್ನು ಹೊರತುಪಡಿಸಿದರೆ, ಯಾವುದೇ ಕೋಟೆಗಳ ಅವಶೇಷಗಳು ಉಳಿದುಬಂದಿಲ್ಲ. ಚಾಳುಕ್ಯರ ನಂತರ ಭೀಮಾ, ಕೃಷ್ಣಾ ಮತ್ತು ತುಂಗಭದ್ರಾ ನಡುವಿನ ಫಲವತ್ತಾದ ಭೂಪ್ರದೇಶಗಳು ಪ್ರಾಚೀನಕಾಲದಿಂದ ಯುದ್ಧದಲ್ಲಿ ಅಂತಿಮ ನಿರ್ಣಯವನ್ನು ಕೊಡುವ ರಣರಂಗವಾಗಿ ಕಂಡುಬರುತ್ತವೆ. ಯಾದವರು ಮತ್ತು ಹೊಯ್ಸಳರಿಗೆ ಕೃಷ್ಣಾನದಿ ಗಡಿರೇಖೆಯಾಗಿದ್ದರೂ ಹೊಯ್ಸಳರು ಭೀಮಾನದಿಯವರೆಗೆ, ಯಾದವರು ತುಂಗಭದ್ರಾ ನದಿಯವರೆಗೂ ದಂಡೆತ್ತಿ ಹೋಗಿ ಅನೇಕ ಯುದ್ಧಗಳಲ್ಲಿ ತೊಡಗಿದುದರ ಬಗ್ಗೆ ಇತಿಹಾಸದಿಂದ ತಿಳಿದುಬರುತ್ತದೆ. ಅದೇ ರೀತಿ ಇವರ ನಂತರ ಬಂದಂತಹ ಬಹಮನಿ ಮತ್ತು ವಿಜಯನಗರದ ಅರಸರಿಗೆ ಕೃಷ್ಣಾನದಿಯು ಗಡಿರೇಖೆಯಾಯಿತು. ಮುಂದೆ ಆದಿಲ್‌ಶಾಹಿಗಳು ಅಧಿಕಾರ ಚುಕ್ಕಾಣಿ ಹಿಡಿದ ಮೇಲೆಯೂ ಕೃಷ್ಣಾನದಿ ಗಡಿರೇಖೆಯಾಗಿ ಮುಂದುವರಿಯಿತು. ಆದರೂ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಮಧ್ಯದ ಫಲವತ್ತಾದ ಭೂಮಿಯನ್ನು ಪಡೆಯಲು ಇವರ ಮಧ್ಯೆ ಸುದೀರ್ಘವಾದ ಕದನಗಳು ನಡೆದಿದ್ದು ಕಂಡುಬರುತ್ತವೆ. ಇವು ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಪತನ ಹೊಂದುವವರೆಗೂ ಮುಂದುವರಿದುಕೊಂಡು ಬಂದವು. ಇದೇ ಅವಧಿಯಲ್ಲಿ ಜೊತೆ ಜೊತೆಗೆ ಅಹಮದ್‌ನಗರದ ನಿಜಾಮ್‌ಶಾಹಿಗಳಿಗೂ ಮತ್ತು ವಿಜಾಪುರದ ಆದಿಲ್‌ಶಾಹಿಗಳಿಗೂ ಭೀಮಾನದಿಯ ಅಚ್ಚುಕಟ್ಟಾದ ಪ್ರದೇಶವನ್ನು ಮತ್ತು ಸೊಲ್ಲಾಪುರ ಕೋಟೆಯನ್ನು ಪಡೆಯುವ ಉದ್ದೇಶದಿಂದ ಅನೇಕ ಸಂಘರ್ಷಗಳು ಹುಟ್ಟಿಕೊಂಡು ಅವು ಇಡೀ ದಕ್ಷಿಣ ಭಾರತವು ಮೊಗಲರ ಕೈವಶವಾಗುವವರೆಗೂ ಯಥಾವತ್ತಾಗಿ ನಡೆದುಕೊಂಡು ಬಂದವು. ಮೊಗಲರ ಅವನತಿಯ ನಂತರವೂ ಹೈದರಾಬಾದ್ ನಿಜಾಮ, ಮರಾಠರು ಹಾಗೂ ಬ್ರಿಟಿಷರ ಮಧ್ಯೆ ಅನೇಕ ಸಂಘರ್ಷಗಳು ಈ

ಅಚ್ಚುಕಟ್ಟಾದ ನದಿ ಬಯಲುಗಳಲ್ಲಿ ನಡೆದಿರುವುದು ಕಂಡುಬರುತ್ತವೆ. ಕ್ರಿ.ಶ. ೧೮೧೮ ರಲ್ಲಿ ಈ ಪ್ರದೇಶ ಬ್ರಿಟಿಷರ ಅಧೀನವಾಗುವವರೆಗೂ ಇಂತಹ ಅನೇಕ ಕದನಗಳು ನಿರಂತರವಾಗಿ ಮುಂದುವರಿದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ರಾಜಧಾನಿಕೇಂದ್ರಿತವಾದ ವಿಜಾಪುರ ಕೋಟೆಯ ಜೊತೆಗೆ ಅಲ್ಲಿಯ ಸ್ಥಳೀಯ ಪ್ರತಿನಿಧಿಗಳು ತಮ್ಮ ಹಾಗೂ ಗ್ರಾಮದ ಜನರನ್ನು ಇಂತಹ ಸಂಘರ್ಷಗಳಿಂದ ರಕ್ಷಿಸಲು ಈ ಭಾಗದಲ್ಲಿ ಪ್ರಾಚೀನ ಕಾಲದಿಂದ ೧೯ನೇ ಶತಮಾನದವರೆಗೆ ಅನೇಕ ಕೋಟೆ-ಕೊತ್ತಲಗಳನ್ನು ನಿರ್ಮಿಸಿ ಕೊಂಡಿರುವುದನ್ನು ಕಾಣುತ್ತೇವೆ.

ಈ ಕೋಟೆಗಳ ನಿರ್ಮಾಣದಲ್ಲಿ ಅನೇಕ ವೈವಿಧ್ಯತೆಯನ್ನು ಕಾಣುತ್ತೇವೆ. ಜಿಲ್ಲೆಯಲ್ಲಿ ನಿರ್ಮಾಣವಾದ ಎಲ್ಲಾ ಕೋಟೆಗಳು ಸ್ಥಳದುರ್ಗಗಳಾಗಿದ್ದು, ಅದರಲ್ಲಿ ಕೆಲವು ಕೋಟೆಗಳು ಕೃಷ್ಣಾ, ಭೀಮಾ ಮತ್ತು ಡೋಣಿ ನದಿಗಳ ತೀರದಲ್ಲಿವೆ. ಇದರಿಂದಾಗಿ ಕೋಟೆಯ ಒಂದು ಪಾರ್ಶ್ವಕ್ಕೆ ನೈಸರ್ಗಿಕವಾಗಿ ರಕ್ಷಣೆಯನ್ನು ಪಡೆಯುತ್ತಿದ್ದವು. ಹೀಗಾಗಿ ಇವು ಜಲದುರ್ಗಗಳಂತೆ ಕಂಡುಬರುತ್ತವೆ. ಇವುಗಳ ಜೊತೆಗೆ ಗ್ರಾಮರಕ್ಷಣೆಗೆ ಸಂಬಂಧಿಸಿದಂತೆ ಹುಡೆ, ವಾಡೆ ಹಾಗೂ ಅಗಸೆ ಬಾಗಿಲುಗಳು ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ವಿಜಾಪುರ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಕೊಂಡಿಗಳಾಗಿರುವ ಇಂತಹ ಕೋಟೆ-ಕೊತ್ತಲಗಳು ವಿನಾಶದ ಅಂಚನ್ನು ತಲುಪಿ ಇತಿಹಾಸದ ಮೂಕ ಸಾಕ್ಷಿಗಳಾಗಿ ನಿಂತಿವೆ. ಬದಲಾದ ರಾಜಕೀಯ ಸನ್ನಿವೇಶ, ಯುದ್ಧನೀತಿ, ವೇಗವಾಗಿ ಬೆಳೆಯುತ್ತಿರುವ ನಗರೀಕರಣ ಪ್ರಕ್ರಿಯೆ, ಪ್ರಕೃತಿವಿಕೋಪ, ಮನುಷ್ಯನ ಸ್ವಾರ್ಥ ಜೀವನಕ್ಕೆ ಸಿಕ್ಕು ಕಣ್ಮರೆಯಾಗುತ್ತಿವೆ. ಅದರಲ್ಲಿ ಕೆಲವು ಕೋಟೆಯ ಅವಶೇಷಗಳು ಸಿಗದಷ್ಟು ಸಂಪೂರ್ಣವಾಗಿ ನಾಶ ಹೊಂದಿವೆ. ಪ್ರಸ್ತುತ ಜಿಲ್ಲೆಗೆ ಸಂಬಂಧಿಸಿದಂತೆ ರಾಜಧಾನಿಕೇಂದ್ರಿತ ವಿಜಾಪುರ ಕೋಟೆಯ ಬಗ್ಗೆ ಈಗಾಗಲೇ ವಿದ್ವಾಂಸರಿಂದ ಸಂಶೋಧನ ಲೇಖನಗಳು, ಪರಿಚಯಾತ್ಮಕ ಕೃತಿಗಳು, ಮಾರ್ಗದರ್ಶನ ಗ್ರಂಥಗಳು ಹೊರಬಂದಿವೆಯಾದರೂ ವಿಸ್ತೃತ ಅಧ್ಯಯನದ ಕೊರತೆ ಕಂಡುಬರುತ್ತದೆ. ಉಳಿದಂತೆ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಕಂಡುಬರುವ ಕೋಟೆ-ಕೊತ್ತಲಗಳ ಕುರಿತಾಗಿ ಇದುವರೆಗೆ ಯಾವುದೇ ಅಧ್ಯಯನಗಳು ನಡೆದಿಲ್ಲ. ಈ ಕೊರತೆಯನ್ನು ತುಂಬಲು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇತ್ತು. ಹೀಗಾಗಿ ರಕ್ಷಣಾ ವಾಸ್ತುಶಿಲ್ಪದ ಬೆಳವಣಿಗೆ, ವಿವಿಧ ಪ್ರಕಾರದ ಕೋಟೆಗಳು ಮತ್ತು ಅವುಗಳ ಲಕ್ಷಣಗಳನ್ನು, ಕಾಲಕಾಲಕ್ಕೆ ಕೋಟೆಗಳಲ್ಲಿ ಬದಲಾದ ತಂತ್ರಗಾರಿಕೆಯನ್ನು ಪರಿಚಯಿಸುವುದರ ಜೊತೆಗೆ, ಕೋಟೆಯ ರಚನೆಯಲ್ಲಿ ಭೌಗೋಳಿಕ ಅಂಶಗಳು ಯಾವರೀತಿಯಾಗಿ ಪ್ರಭಾವ ಬೀರುತ್ತವೆ ಎಂಬ ಉದ್ದೇಶವನ್ನು ಇಟ್ಟುಕೊಂಡು ಜಿಲ್ಲೆಯ ಐದು ತಾಲೂಕುಗಳಲ್ಲಿರುವ ಕೋಟೆ ಹಾಗೂ ಇತರೆ ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಕಂಡುಬರುವ ಬಹುತೇಕ ಕೋಟೆಗಳು ವಿನಾಶದ ಅಂಚನ್ನು ತಲುಪಿದ್ದು ಅವು ಸಹ ಸಂಪೂರ್ಣವಾಗಿ ನಾಶವಾಗುವ ಮುನ್ನ ಎಲ್ಲಾ ರಕ್ಷಣಾಕಟ್ಟಡಗಳ ವಾಸ್ತು, ಲಕ್ಷಣಗಳು ಮತ್ತು ಮಹತ್ವವನ್ನು ಚರ್ಚಿಸುತ್ತ ಪ್ರಾದೇಶಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನಾ ವಿಷಯ ವ್ಯಾಪ್ತಿಯು ವಿಜಾಪುರ ಜಿಲ್ಲೆಯ ಭೌಗೋಳಿಕ ಪ್ರದೇಶವನ್ನು ಒಳಗೊಂಡಿದೆ. ರಾಜಧಾನಿಕೇಂದ್ರಿತವಾದ ವಿಜಾಪುರದ ಕೋಟೆಯ ವಿಸ್ತೃತವಾದ ಅಧ್ಯಯನವನ್ನು ಪ್ರಧಾನವಾಗಿಟ್ಟುಕೊಂಡು, ವಿಜಾಪುರ, ಸಿಂದಗಿ, ಇಂಡಿ, ಬಸವನ ಬಾಗೇವಾಡಿ, ಮುದ್ದೇಬಿಹಾಳ ಈ ಐದು ತಾಲೂಕುಗಳಲ್ಲಿ ಕಂಡುಬರುವ ಕೋಟೆ, ಕೊತ್ತಲ ಅಥವಾ ಹುಡೆ ಹಾಗೂ ಇತರೆ ರಕ್ಷಣಾಸಂಬಂಧಿ ಸ್ಮಾರಕಗಳ ನಿರ್ಮಾಣ, ವಾಸ್ತುವಿನ್ಯಾಸ, ತಾಂತ್ರಿಕತೆ ಹಾಗೂ ಮಹತ್ವವನ್ನು ಕುರಿತು ವಿಶ್ಲೇಷಿಸಲಾಗಿದೆ. ಜೊತೆಗೆ ಇವುಗಳಿಗೆ ಸಂಬಂಧಿಸಿದ ಆಕರಗಳೆಲ್ಲವನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಶಾತವಾಹನರ ಕಾಲಘಟ್ಟದಿಂದ ಹತ್ತೊಂಬತ್ತನೆಯ ಶತಮಾನದ ಕೊನೆಯ ಘಟ್ಟದವರೆಗೂ ಅಧ್ಯಯನಕ್ಕೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆ. ಪ್ರಸ್ತುತ ಪ್ರಬಂಧವನ್ನು ಮಂಡಿಸುವ ಪೂರ್ವದಲ್ಲಿ ವಿಜಾಪುರ ಜಿಲ್ಲೆ ಎಂಬ ಹೆಸರನ್ನು ವಿಜಯಪುರ ಜಿಲ್ಲೆ ಎಂದು ಕರ್ನಾಟಕ ಸರಕಾರ ಬದಲಾಯಿಸಲಾಯಿತು. ಆದರೆ ಈ ಹೆಸರು ಬದಲಾವಣೆಯ ಪೂರ್ವದಲ್ಲಿಯೇ 'ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ' ಎಂಬ ಶೀರ್ಷಿಕೆಯಿಂದಲೇ ಖಾಯಂ ನೋಂದಣಿಯನ್ನು ಪಡೆದುಕೊಂಡಿದ್ದರಿಂದ ಅದೇ ಹೆಸರನ್ನು ಮುಂದುವರಿಸಲಾಯಿತು.

೧.೩. ಅಧ್ಯಯನದ ಸಮೀಕ್ಷೆ

ವಿಜಾಪುರ ಜಿಲ್ಲೆಯ ಕೋಟೆ ಕೊತ್ತಲಗಳ ಕುರಿತು ಸ್ವತಂತ್ರ ಹಾಗೂ ಪ್ರತ್ಯೇಕ ಅಧ್ಯಯನ ಈವರೆಗೂ ಪ್ರಕಟಗೊಂಡಿಲ್ಲವಾದರೂ ಈ ಪ್ರದೇಶಕ್ಕೆ ಸಂಬಂಧಿಸಿದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಧ್ಯಯನಗಳು ನಡೆದಿವೆ. ಕರ್ನಾಟಕದ ಕೋಟೆ ಕೊತ್ತಲಗಳ ಕುರಿತು ಪರಿಚಯಾತ್ಮಕ ಕೃತಿ, ಪಿಎಚ್.ಡಿ. ಮಹಾಪ್ರಬಂಧ, ಬಿಡಿಲೇಖನಗಳು ಪ್ರಕಟವಾಗಿವೆ. ಎಂ. ಚಿದಾನಂದಮೂರ್ತಿ ಅವರ **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಶ್ರೀಧರ ಎಚ್.ಜಿ. ಅವರ **ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ**, ಬೆಟಗೇರಿ ಕೃಷ್ಣಶರ್ಮ ಅವರ **ಕರ್ನಾಟಕ ಜನಜೀವನ** ಈ ಕೃತಿಗಳು ಕೋಟೆಯ ಪ್ರಕಾರ, ಮಹತ್ವ ಮತ್ತು ಕೋಟೆಕಾಳಗದ ಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತವೆ. ಇನ್ನು ಕರ್ನಾಟಕದಾದ್ಯಂತ ಹರಡಿಕೊಂಡಿರುವ ಕೋಟೆಗಳ ವಿಸ್ತೃತ ಅಧ್ಯಯನ ಕುರಿತಂತೆ ಎಸ್.ಕೆ. ಜೋಶಿಯವರ **ಕರ್ನಾಟಕದ ಪ್ರಾಚೀನ ಕೋಟೆಗಳು**, ಚನ್ನಬಸಪ್ಪ ಎಸ್. ಪಾಟೀಲ ಅವರ **ಕರ್ನಾಟಕದ ಕೋಟೆಗಳು ಸಂ.೧**, ಸುಂಕಂ ಗೋವರ್ಧನ ಅವರ **ಕನ್ನಡ ನಾಡಿನ ಪ್ರಮುಖ ಕೋಟೆಗಳು,** ನೀ.ಕೃ. ರಾಮಶೇಷನ್ ಅವರ **ಕರ್ನಾಟಕದ ಕೋಟೆ ಕೊತ್ತಲುಗಳು,** ಕೃತಿಗಳು ಪ್ರಕಟವಾಗಿವೆ. ಇವುಗಳಲ್ಲಿ ವಿಜಾಪುರ ಕೋಟೆಯ ಕುರಿತಾಗಿ ಬಿಡಿ ಲೇಖನದಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕೋಟೆ ಕೊತ್ತಲಗಳ ಕುರಿತು ಎರಡು ದಶಕಗಳಿಂದ ಜಿಲ್ಲಾವಾರು ಪ್ರತ್ಯೇಕ ಅಧ್ಯಯನಗಳು ನಡೆದಿವೆ. ಎಸ್. ತಿಪ್ಪೇಸ್ವಾಮಿ ಅವರ **ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ**

ಜಿಲ್ಲೆ, ಸುಜಾತಾ ಮಲ್ಲನಗೌಡ ಅವರ **ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು**, ಶಂಭುಲಿಂಗ ಎಸ್. ವಾಣಿ ಅವರ **ರಕ್ಷಣಾ ವಾಸ್ತುಶಿಲ್ಪ ಬೆಳಗಾವಿ ಜಿಲ್ಲೆ**, ಅರುಣ ಕಲ್ಲೋಳಿಕರ ಅವರ **ಬೆಳಗಾಂವ ಪ್ರದೇಶದ ಕೋಟೆ ಕೊತ್ತಲುಗಳು: ಒಂದು ಅಧ್ಯಯನ** ಎಂಬ ಈ ಪಿಎಚ್.ಡಿ. ಮಹಾಪ್ರಬಂಧಗಳು ಜೊತೆಗೆ ಎಂ. ಕೋಟ್ರೇಶ ಅವರ **ಬಳ್ಳಾರಿ ಜಿಲ್ಲೆಯ ಕೋಟೆಗಳು**, ಮುದ್ದುವೀರಪ್ಪ ಅವರ **ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು**, Dualari Quresh, **Forts of Daulatabad** ಎಂಬ ಅನೇಕ ಕೃತಿಗಳನ್ನು ಪರಾಮರ್ಶಿಸಲಾಗಿದೆ. ಇವು ಜಿಲ್ಲಾವಾರು ಕೋಟೆಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ, ಸಾಹಿತ್ಯ, ಪುರಾತತ್ವ ಮತ್ತು ಮೌಖಿಕ ಆಕರಗಳನ್ನು ಸಂಯೋಜಿಸಿ ವಿಶ್ಲೇಷಣೆ ಮಾಡುವ ಮೂಲಕ ಅಧ್ಯಯನಗಳಾಗಿವೆ. ಇವು ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತವೆ. ವಿಜಾಪುರ ಜಿಲ್ಲೆಯ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಪಡಿಸುವ ಕೃತಿಗಳನ್ನು ಈಗಾಗಲೇ ಪುರಾತತ್ವ ಮತ್ತು ಇತಿಹಾಸ ಅಧ್ಯಯನಾಸಕ್ತರು ಹಾಗೂ ವಿವಿಧ ವಿದ್ವಾಂಸರುಗಳು ಪ್ರಕಟಿಸಿದ್ದಾರೆ. ಎಸ್.ಕೆ. ಕೊಪ್ಪಾ ಅವರ **ತರ್ದವಾಡಿ ನಾಡು: ಒಂದು ಅಧ್ಯಯನ**, ವಾಸುದೇವ ಬಡಿಗೇರ ಅವರ **ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ: ಬಸವನ ಬಾಗೇವಾಡಿ**, ವಿ.ಎಸ್. ಶೇಕದಾರ ಅವರ **ವಿಜಾಪುರ ಜಿಲ್ಲೆಯ ದೇಸಗತಿಗಳು**, ಕೌಜಲಗಿ ಹನುಮಂತರಾಯ ಅವರ **ವಿಜಾಪುರ ದರ್ಶನ**, ಎಚ್.ಎಮ್. ಕಡಕೋಳ(ಸಂ.) ಅವರ **ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ**, ಕೃಷ್ಣ ಕೊಲ್ಹಾರಕುಲಕರ್ಣಿ ಅವರ **ಬಿಜಾಪುರ ಆದಿಲ್‌ಶಾಹಿ, ಸಿಂದಗಿ ಬಿಂದಗಿ, ವಿಸ್ಮಯ ಇದು ಬಿಜಾಪುರ ಕೃತಿಗಳು**, ಸುಭಾಸ ರಾ. ಚಿಂಚೋಳಿ ಅವರ **ಪ್ರಾಕ್ತನಶಾಸ್ತ್ರದ ಹಿನ್ನೆಲೆಯಲ್ಲಿ ವಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಳುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆ**, ಢವಳಗಿ ಸಂಗನಗೌಡ ಅವರ **ವಿಜಾಪುರ ಒಂದನೆಯ ಅಲಿ ಆದಿಲ್‌ಶಹಾನ ಜೀವನ ಮತ್ತು ಸಾಧನೆ**, ಆನಂದ ಕುಲಕರ್ಣಿ ಅವರ **ತಾಳಿಕೋಟೆ ಯುದ್ಧ: ಒಂದು ಅಧ್ಯಯನ**, ಮುಸ್ತಾಕ್ ಅಹಮ್ಮದ್ ಅವರ **ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು**, ಕೆ. ಚನ್ನಬಸಪ್ಪ ಅವರ **ಎರಡನೇ ಇಬ್ರಾಹಿಂ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು** ಈ ಪಿಎಚ್.ಡಿ. ಮಹಾಪ್ರಬಂಧಗಳು. ಅಷ್ಟೇ ಅಲ್ಲದೆ Sherwani H. K., The **Bahamanis of the Deccan**, Verma D. C., **Socio, Economic and Cultural History of Bijapur**, Joshi P. M. **Adil Shahi Admninistration** ಮತ್ತು **History of Bijapur**, Nayeem M. A., **External Relations of the Bijapur**, AbdulGani Imaratwale, **History of Bijapur Shubhah**, Kodad S.B. **The Battle of Talikota** ಈ ಗ್ರಂಥಗಳು ಮುಖ್ಯವಾಗಿ ಕಲ್ಯಾಣ ಚಾಳುಕ್ಯರ ಕಾಲಾವಧಿಯಿಂದ ಆದಿಲ್‌ಶಾಹಿಗಳು ಮತ್ತು ಅವರ ನಂತರದ ಜಿಲ್ಲೆಯ ರಾಜಕೀಯ ಇತಿಹಾಸವನ್ನು ಕುರಿತವಾದರೂ ಆ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ನಿರೂಪಿಸುವವು. ಅಲ್ಲದೇ ವಿಜಾಪುರದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತಾಗಿ ಪ್ರತ್ಯೇಕ ಅಧ್ಯಯನಗಳೇ ನಡೆದಿವೆ.

ಅವುಗಳಲ್ಲಿ ವಾಸುದೇವ ಬಡಿಗೇರ ಅವರ **'ದೇವಾಲಯ ಕೋಶ: ವಿಜಾಪುರ ಜಿಲ್ಲೆ'**, ಇದು ಜಿಲ್ಲೆಯಾದ್ಯಂತ ರಾಷ್ಟ್ರಕೂಟರ ಕಾಲಾವಧಿಯಿಂದ ಕ್ರಿ.ಶ. ೧೮ ಮತ್ತು ೧೯ನೇ ಶತಮಾನದವರೆಗೆ ನಿರ್ಮಾಣವಾದ ದೇವಾಲಯ, ಮಸೀದಿಗಳನ್ನು ಕುರಿತು ಚರ್ಚಿಸುವುದಲ್ಲದೆ, ಇತರೆ ಪುರಾತತ್ವೀಯ ಅವಶೇಷಗಳನ್ನು ಕೂಡ ದಾಖಲಿಸಿದೆ. ಎ.ಎಂ. ಅಣ್ಣೀಗೇರಿ ಅವರ **'ವಿಜಾಪುರ ಶಿಲ್ಪಕಲಾ ವೈಭವ'**, Henry Cousens, **Bijapur and its Architectural Remains**, Taylor Meadows and Ferguission, **Architecture at Bijapur**, Nayeem M. A., **The Heritage of the Adilshahis of Bijapur** ಕೃತಿಗಳು. Zandekar Anant Lalappa, **History and Antiquities of Tardawadi**, Saloumeh Bahrini Far, **The Development of Adil Shahi Architecture in Karnataka**, Fariba Mirzaei Kondori, **Indo-Islamic Architecture of Bijapur with Special Reference to Tourism** ಎಂಬ ಪಿಎಚ್.ಡಿ. ಮಹಾಪ್ರಬಂಧಗಳು ಪ್ರಮುಖವಾಗಿವೆ. ವಿಜಾಪುರದ ಅರಕಿಲ್ಲೆಯಲ್ಲಿ ದೆಹಲಿ ಸುಲ್ತಾನರ ಆಡಳಿತಾವಧಿಯಲ್ಲಿ ನಿರ್ಮಾಣವಾದ ಕರೀಮುದ್ಧೀನ್ ಮಸೀದಿಯಿಂದ ಆದಿಲ್‌ಶಾಹಿಗಳ ಕಾಲಾವಧಿಯಲ್ಲಿ ನಿರ್ಮಿಸಲ್ಪಟ್ಟ ಸ್ಮಾರಕಗಳ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತಾಗಿರುವ ಅಧ್ಯಯನಗಳಾಗಿವೆ. ಜೊತೆಗೆ ರಾಜಧಾನಿ ಕೇಂದ್ರಿತವಾದ ವಿಜಾಪುರ ಕೋಟೆ ಬಗೆಗೆ ಸಂಕ್ಷಿಪ್ತವಾಗಿ ತಿಳಿಸುತ್ತವೆ.

ಬಹಮನಿ ಮತ್ತು ಆದಿಲ್‌ಶಾಹಿಗಳ ಎಲ್ಲಾ ಸಾಹಿತ್ಯಕ ಮೂಲಾಧಾರಗಳು ಅರೇಬಿಕ್ ಮತ್ತು ಪರ್ಶಿಯನ್ ಭಾಷೆಯಲ್ಲಿವೆ. ಇವುಗಳ ಭಾಷಾಂತರದ ಕೊರತೆಯಿಂದ ಸಂಶೋಧನೆಯಲ್ಲಿ ನಿರ್ದಿಷ್ಟ ಉತ್ತರ ಕಂಡುಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಆದರೂ ಅವುಗಳ ಭಾಷಾಂತರದ ಕೊರತೆಯನ್ನು ಅಲ್ಪಮಟ್ಟಿಗೆ ನೀಗಿಸುವಲ್ಲಿ ಇತ್ತೀಚೆಗೆ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ ಈ ಸಂಸ್ಥೆಯ ವತಿಯಿಂದ ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ೧೨ ಸಂಪುಟಗಳಲ್ಲಿ ಹೊರತಂದಿದ್ದಾರೆ. ಅವುಗಳಲ್ಲಿ **ತಾರೀಖ–ಎ–ಫರಿಶ್ತಾ (ಭಾಗ–೧ ರಿಂದ ೪ ಸಂಪುಟಗಳು), ಬಸಾತೀನೆ ಸಲಾತೀನ, ಇಬ್ರಾಹೀಮ ನಾಮಾ, ಗುಲದಸ್ತಾಯೆ ಬಿಜಾಪುರ, ತಾರೀಖೆ ಹಪ್ತಕುರ್ಸಿ, ಫುತೂಹತೆ ಅಲಂಗೀರ್, ಮೊಹಮ್ಮದ ನಾಮಾ, ಅಲಿನಾಮಾ, ತಾರೀಖೇ ಸಿಕಂದರಿ, ಊರುಸೇ–ಇರ್ಫಾನ್, ತಝ್ಕೀರತುಲ್ ಮುಲೂಕ್, ಕಿತಾಬೆ ನವರಸ, ರೌಜತುಲ್ ಔಲಿಯಾಯೆ ಬಿಜಾಪುರ** ಇವು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ವಿಷಯಗಳನ್ನು ಕುರಿತು ಚರ್ಚಿಸುತ್ತವಲ್ಲದೆ ವಿಜಾಪುರ ಕೋಟೆಯ ಕುರಿತಾಗಿ ಉಪಯುಕ್ತವಾದ ಪ್ರಾಥಮಿಕ ಮಾಹಿತಿಯನ್ನು ಒದಗಿಸುತ್ತವೆ.

ಈ ಭಾಗದ ಗ್ರಾಮಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡುವ ಉದ್ದೇಶವನ್ನಿಟ್ಟುಕೊಂಡು ರಚನೆಯಾಗಿರುವ James M. Campbell(Edi.), **Gazetteer of The Bombay Presi-**

dency Vol-XXII, Bijapur, ಆರ್. ಮುನಿಸ್ವಾಮಿ(ಸಂ.), **'ವಿಜಾಪುರ ಜಿಲ್ಲೆಯ ಗ್ಯಾಸೆಟಿಯರ್'ಗಳು** ಜಿಲ್ಲೆಯ ಕುರಿತು ಸಂಕ್ಷಿಪ್ತವಾಗಿ ಮಾಹಿತಿಯನ್ನು ಒದಗಿಸುತ್ತವೆ.

ಹೀಗೆ ಪ್ರಸ್ತುತ ಅಧ್ಯಯನ ಪ್ರದೇಶದ ಬಗ್ಗೆ ಹಲವು ಪ್ರಮುಖ ಕೃತಿಗಳನ್ನು ಮಾತ್ರ ಉಲ್ಲೇಖಿಸಿದ್ದು, ಜೊತೆಗೆ ತಾಲೂಕು, ಜಿಲ್ಲಾ ಮಾರ್ಗದರ್ಶಿ ಕೃತಿಗಳು, ನಿಯತಕಾಲಿಕೆಗಳು, ಶಾಸನ ಸಂಪುಟಗಳು, ಭಾರತೀಯ ಸರ್ವೇಕ್ಷಣ ಇಲಾಖೆಯಿಂದ ಪ್ರಕಟಗೊಂಡ ನಕಾಶೆ, ಅಧ್ಯಯನಕ್ಕೆ ಪೂರಕವಾಗಿ ಹಲವು ಬಿಡಿ ಲೇಖನಗಳು ರಚಿಸಲ್ಪಟ್ಟಿದ್ದರೂ ಅವು ಬೇರೆ ಬೇರೆ ಗ್ರಂಥಗಳಲ್ಲಿ ಹಂಚಿಹೋಗಿವೆ. ಈ ಎಲ್ಲಾ ಆಕರಗಳು ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನಕ್ಕೆ ಸಹಾಯಕವಾಗಿವೆ. ಅಲ್ಲದೇ ಅವುಗಳಲ್ಲಿ ಕೆಲವೊಂದು ಮಾತ್ರ ವಿಜಾಪುರ ಕೋಟೆಯ ಕುರಿತಾಗಿ ಅಲ್ಪ ಮಾಹಿತಿಯನ್ನು ನೀಡುತ್ತಿದ್ದು, ನೇರವಾಗಿ ವಿಜಾಪುರ ಜಿಲ್ಲೆಯ ಕೋಟೆ–ಕೊತ್ತಲಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಅಧ್ಯಯನ ನಡೆಯದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಅಂತಹ ಒಂದು ಪ್ರಯತ್ನವನ್ನು ಮಾಡಲಾಗಿದೆ.

೧.೪. ಅಧ್ಯಯನದ ವಿಧಾನ

ಈ ಸಂಶೋಧನಾ ಪ್ರಬಂಧವು ಕ್ಷೇತ್ರಕಾರ್ಯಧಾರಿತ ಅಧ್ಯಯನವನ್ನು ಅವಲಂಬಿಸಿದೆ. ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಂಡ ಮೇಲೆ ಮೊದಲಿಗೆ ಜಿಲ್ಲೆಯ ಕುರಿತಾಗಿ ಇದುವರೆಗೆ ನಡೆದಿರುವ ಅಧ್ಯಯನಗಳ ಕುರಿತು ಪಟ್ಟಿ ಮಾಡಿಕೊಳ್ಳಲಾಯಿತು. ಈ ಅಧ್ಯಯನಗಳಲ್ಲಿ ಚಾರಿತ್ರಿಕವಾದ ಅಂಶಗಳ ಜೊತೆಗೆ ಐತಿಹಾಸಿಕ ಮಹತ್ವ ಪಡೆದ ಪ್ರತಿಯೊಂದು ಗ್ರಾಮಗಳಲ್ಲಿ ಕಂಡುಬರುವ ಪ್ರಾಗಿತಿಹಾಸ ನೆಲೆಗಳು, ಶಾಸನಗಳು, ದೇವಾಲಯಗಳು, ಕೋಟೆಗಳು ಇತರೆ ಪುರಾತತ್ತ್ವೀಯ ಅವಶೇಷಗಳನ್ನೊಳಗೊಂಡ ಪಟ್ಟಿ ತಯಾರಿಸಲಾಯಿತು. ಇದರ ಹೊರತಾಗಿ ಚಾರಿತ್ರಿಕ ಅಂಶಗಳ ಕುರಿತು ಪ್ರಸ್ತಾಪವಾಗದಂತಹ ಗ್ರಾಮಗಳ ಪ್ರತ್ಯೇಕ ಪಟ್ಟಿಯನ್ನು ತಯಾರಿಸಿಕೊಳ್ಳಲಾಯಿತು. ಹೀಗೆ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಲಭ್ಯವಾದ ಮಾಹಿತಿಗಳನ್ನು ಒಂದೆಡೆ ಕ್ರೋಡೀಕರಿಸಲಾಯಿತು. ಈ ಸಂಶೋಧನಾ ಪ್ರಬಂಧವು ಕ್ಷೇತ್ರಕಾರ್ಯಾಧಾರಿತವಾದುದರಿಂದ ನಾನು ಕ್ಷೇತ್ರಕಾರ್ಯ ಕೈಗೊಂಡ ಗ್ರಾಮಗಳಲ್ಲಿ ಸಂಗ್ರಹಿಸಬೇಕಾದ ವಿಷಯಗಳ ಪ್ರಶ್ನಾವಳಿ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ಗ್ರಾಮದ ಹೆಸರು, ತಾಲೂಕು, ಸ್ಥಳ ನಿರ್ದೇಶನ, ಭೌಗೋಳಿಕ ಪರಿಸರ, ಸ್ಥಳನಾಮ, ಕೋಟೆ ಇರುವ ಸ್ಥಳ, ದಿಕ್ಕು, ವಿಸ್ತೀರ್ಣ, ಕೊತ್ತಲಗಳು, ಕೋಟೆಯ ಲಕ್ಷಣಗಳು, ಕೋಟೆಯ ಕುರಿತಾದ ಐತಿಹ್ಯ, ಗ್ರಾಮದಲ್ಲಿನ ಪ್ರಾಚ್ಯಾವಶೇಷಗಳು ಹಾಗೂ ಗ್ರಾಮದ ಕುರಿತಾಗಿ ನಡೆದಿರುವ ಅಧ್ಯಯನಗಳು ಹೀಗೆ ಪ್ರಪತ್ರವೊಂದನ್ನು ರಚಿಸಿಕೊಂಡು, ಕೋಟೆ ಇರುವ ಗ್ರಾಮಕ್ಕೆ ಹೋಗಿ ಅದನ್ನು ಭರ್ತಿ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಯಿತು. ಜೊತೆಗೆ ಕೋಟೆ ಇರುವ ಸ್ಥಳದಲ್ಲಿ ಇದ್ದುಕೊಂಡೇ ಅದರ ಸ್ಥಳನಕ್ಷೆಯನ್ನು ರಚಿಸಿ, ರಕ್ಷಣಾಸಂಬಂಧಿ

ಸ್ಮಾರಕಗಳ ಪ್ರತಿಯೊಂದು ಭಾಗಗಳ ಛಾಯಾಚಿತ್ರವನ್ನು ತೆಗೆದುಕೊಳ್ಳಲಾಗಿದೆ. ಅಲ್ಲಿಯ ರಕ್ಷಣಾಸ್ಮಾರಕಗಳ ಕುರಿತಾಗಿ ಸ್ಥಳೀಯರಷ್ಟೇ ಅಲ್ಲದೆ, ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿರುವ ದೇಸಗತಿ ವಂಶಸ್ಥರನ್ನು ಭೇಟಿ ಮಾಡಿ ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಕೋಟೆಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ www.wikimapia.org ಎಂಬ ಅಂತರ್‌ಜಾಲ ತಾಣದ ಮೂಲಕ ನಕಾಶೆಗಳನ್ನು ಬಿಡಿಸುವುದರ ಜೊತೆಗೆ ಕೋಟೆಗೋಡೆಯ ಅಳತೆಯನ್ನು ಮಾಡಿಕೊಳ್ಳಲಾಗಿದೆ.

ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಜೊತೆಯಲ್ಲಿ ಅದಕ್ಕೆ ಸಂಬಂಧಿಸಿದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಪಡೆದುಕೊಂಡ ವಿಷಯಗಳನ್ನು ಸಂದರ್ಭಕ್ಕೆ ಅನುಗುಣವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಲ್ಲಿ ತಾಲೂಕುವಾರು ಕೋಟೆಗಳನ್ನು ವಿಂಗಡಿಸಿ ಕೋಟೆ ಇರುವ ಗ್ರಾಮದ ಐತಿಹಾಸಿಕ ಹಿನ್ನೆಲೆಯನ್ನು ಪರಿಚಯಿಸುವ ಜೊತೆಗೆ ಪ್ರತಿಯೊಂದು ಕೋಟೆಯನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯವು ಅವಶ್ಯಕತೆಗೆ ಅನುಗುಣವಾಗಿ ಉಪಶೀರ್ಷಿಕೆಗಳನ್ನು ಒಳಗೊಂಡಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಅಡಿಟಿಪ್ಪಣಿಗಳನ್ನು ನೀಡಲಾಗಿದೆ. ಅಲ್ಲದೇ ಎಲ್ಲಾ ಅಧ್ಯಾಯಗಳ ವಿವರಗಳು ಪೂರ್ಣಗೊಂಡ ನಂತರ ಪರಾಮರ್ಶನ ಗ್ರಂಥಗಳ ಪಟ್ಟಿಯ ವಿವರವಿದೆ. ಅನುಬಂಧದಲ್ಲಿ ಕೋಟೆಯ ಪದಕೋಶ, ಭೂಪಟ, ತಲನಕ್ಷೆಗಳು ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ.

ಪ್ರಸ್ತಾವನೆ ರೂಪದ ಮೊದಲ ಅಧ್ಯಾಯದಲ್ಲಿ ವಿಷಯವನ್ನು ಆಯ್ಕೆ ಮಾಡಿಕೊಂಡ ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ ಹಾಗೂ ಸ್ವರೂಪದ ಕುರಿತು ವಿವರಗಳನ್ನು ದಾಖಲಿಸಿ ಚರ್ಚಿಸಲಾಗಿದೆ.

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ ಎಂಬ ಎರಡನೆಯ ಅಧ್ಯಾಯದಲ್ಲಿ ಜಿಲ್ಲೆಯ ಭೌಗೋಳಿಕ ಸನ್ನಿವೇಶಗಳು, ಭೂರಚನೆ, ನದಿಗಳು, ವಾಯುಗುಣ, ಖನಿಜ ಮತ್ತು ಸಸ್ಯಸಂಪತ್ತುಗಳನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಕೋಟೆಯ ರಚನೆಯಲ್ಲಿ ಅವು ಯಾವ ರೀತಿಯಾಗಿ ಪ್ರಭಾವ ಬೀರಿವೆ ಎಂಬುದರ ಕುರಿತಾಗಿ ಚರ್ಚಿಸಲಾಗಿದೆ. ಹಾಗೂ ಪ್ರಾಗಿತಿಹಾಸ ಕಾಲದಿಂದ ಆಧುನಿಕ ಇತಿಹಾಸ ಕಾಲದ ವರೆಗಿನ ರಾಜಕೀಯ ಮತ್ತು ಇತರೆ ಚಾರಿತ್ರಿಕ ಅಂಶಗಳನ್ನು ಕುರಿತು ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಇಟ್ಟುಕೊಂಡು ವಿಶ್ಲೇಷಿಸಲಾಗಿದೆ.

ರಕ್ಷಣಾ ವಾಸ್ತುಶಿಲ್ಪದ ಉಗಮ ಮತ್ತು ಬೆಳವಣಿಗೆ ಎಂಬ ಮೂರನೆಯ ಅಧ್ಯಾಯವು ರಕ್ಷಣಾ ವಾಸ್ತುಶಿಲ್ಪದ ಉಗಮ ಮತ್ತು ಬೆಳವಣಿಗೆಯ ಕುರಿತು ಸಮಗ್ರ ಪಕ್ಷಿನೋಟವಾಗಿದೆ.

P.T.O

ಶಾಸ್ತ್ರಗ್ರಂಥಗಳು ಮತ್ತು ಐತಿಹಾಸಿಕ ಮಹತ್ವ ಪಡೆದ ಕೃತಿಗಳು ಸೂಚಿಸುವ ರಕ್ಷಣಾ ವಾಸ್ತುಶಿಲ್ಪದ ಅರ್ಥ, ಮಹತ್ವ, ಪ್ರಕಾರ ಹಾಗೂ ಲಕ್ಷಣಗಳನ್ನು ಕುರಿತು ವಿಶ್ಲೇಷಿಸುವ ಮೂಲಕ ಈ ಪ್ರದೇಶದಲ್ಲಿ ನಿರ್ಮಾಣವಾದ ಕೋಟೆಗಳು ಎಷ್ಟರ ಮಟ್ಟಿಗೆ ಅವುಗಳಿಗೆ ಸಾಮ್ಯತೆಯನ್ನು ಹೊಂದಿವೆ ಎಂಬುದರ ಕುರಿತು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಪ್ರಾಚೀನ ಕಾಲಘಟ್ಟದಿಂದ ರಾಜಕೀಯ ಸನ್ನಿವೇಶ ಮತ್ತು ತಂತ್ರಗಾರಿಕೆಗೆ ಅನುಗುಣವಾಗಿ ಕೋಟೆಗಳು ವಾಸ್ತುವಿನ್ಯಾಸದಲ್ಲಿ ಯಾವ ರೀತಿ ಬೆಳವಣಿಗೆ ಹೊಂದಿದವು ಎಂಬುದರ ಕುರಿತು ಚರ್ಚಿಸಿ ವಿಶ್ಲೇಷಿಸಲಾಗಿದೆ.

ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಜಿಲ್ಲೆಯ ರಾಜಧಾನಿ ಕೇಂದ್ರಿತವಾದ ವಿಜಾಪುರದ ಕೋಟೆಯ ವಿಸ್ತೃತವಾದ ಅಧ್ಯಯನವನ್ನು ಪ್ರಧಾನವಾಗಿಟ್ಟುಕೊಂಡು, ವಿಜಾಪುರ, ಇಂಡಿ, ಸಿಂದಗಿ, ಬಸವನ ಬಾಗೇವಾಡಿ, ಮುದ್ದೇಬಿಹಾಳ ಈ ಐದು ತಾಲೂಕುಗಳಲ್ಲಿ ಕಂಡುಬರುವ ಕೋಟೆ–ಕೊತ್ತಲ ಹಾಗೂ ರಕ್ಷಣಾಸಂಬಂಧಿ ಸ್ಮಾರಕಗಳ ನಿರ್ಮಾಣದ ಉದ್ದೇಶ, ವಾಸ್ತುವಿನ್ಯಾಸ, ತಾಂತ್ರಿಕತೆ ಹಾಗೂ ಮಹತ್ವವನ್ನು ಕುರಿತು ಕ್ಷೇತ್ರಕಾರ್ಯಾಧಾರಿತ ಹಿನ್ನೆಲೆಯಲ್ಲಿ ಹಾಗೂ ಇದುವರೆಗೆ ಪ್ರಕಟವಾಗಿರುವ ಶಾಸನ, ಸಾಹಿತ್ಯ ಕೃತಿ, ಮೌಖಿಕ ಆಕರಗಳನ್ನು ಬಳಸಿಕೊಂಡು ಪ್ರತಿಯೊಂದು ಗ್ರಾಮದ ಕೋಟೆಯನ್ನು ಬಿಡಿಬಿಡಿಯಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಇತರೆ ರಕ್ಷಣಾಸಂಬಂಧಿ ಸ್ಮಾರಕಗಳನ್ನು ಕುರಿತ ಐದನೆಯ ಅಧ್ಯಾಯದಲ್ಲಿ ಗ್ರಾಮಕೇಂದ್ರಿತವಾದ ಹುಡೆವುಗಳು, ಅಗಸೆಬಾಗಿಲುಗಳು ಹಾಗೂ ಜಿಲ್ಲೆಯ ಕೋಟೆಗಳ ಮೇಲೆ ಕಂಡುಬರುವ ಉಬ್ಬುಶಿಲ್ಪಗಳ ನಿರ್ಮಾಣದ ಹಿಂದಿನ ಉದ್ದೇಶ, ಮಹತ್ವ ಹಾಗೂ ವಾಸ್ತುವಿನ್ಯಾಸದ ಲಕ್ಷಣಗಳನ್ನು ಕ್ಷೇತ್ರಕಾರ್ಯಾಧಾರಿತ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಜೊತೆಗೆ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ರಕ್ಷಣಾಸಂಬಂಧಿ ವಸ್ತುಗಳ ವಿಶ್ಲೇಷಣೆ ಪ್ರಸ್ತುತ ಅಧ್ಯಯನ ಒಳಗೊಂಡಿದೆ.

ಕೊನೆಯ ಆರನೆಯ ಅಧ್ಯಾಯವು ಸಮಾರೋಪವಾಗಿದೆ. ಇದರಲ್ಲಿ ಮುಖ್ಯವಾಗಿ ಪ್ರತಿ ಅಧ್ಯಾಯಗಳಲ್ಲಿ ಕಂಡುಕೊಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಮತ್ತೊಮ್ಮೆ ನಿರೂಪಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಪ್ರಸ್ತುತ ಅಧ್ಯಯನದ ಸಮಗ್ರ ವಿಷಯಕ್ಕೆ ಸಂಬಂಧಪಟ್ಟಂತೆ ಕಂಡುಕೊಳ್ಳಲಾದ ಒಟ್ಟು ಫಲಿತಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಅಂತಿಮವಾದವುಗಳೇನಲ್ಲ. ಇವು ಮುಂದಿನ ಸಂಶೋಧನೆಗೆ ಪೂರಕವಾದವುಗಳಾಗಿವೆ.

ಅಧ್ಯಾಯ ಎರಡು

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕತೆ

೨.೨. ಪ್ರಾಗಿತಿಹಾಸ

೨.೩. ಇತಿಹಾಸ ಕಾಲ

ಅಧ್ಯಾಯ ಎರಡು

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ವಿಜಾಪುರ ಜಿಲ್ಲೆಯು ಒಟ್ಟು ೧೦,೫೪೧ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ೧೬.೮೨೦ ಉತ್ತರ ಅಕ್ಷಾಂಶ ಹಾಗೂ ೭೫.೭೨೦ ಪೂರ್ವ ರೇಖಾಂಶ ಮಧ್ಯದಲ್ಲಿ ಹರಡಿದೆ.[೧] ಈ ಜಿಲ್ಲೆಯು ಉತ್ತರ ಮತ್ತು ವಾಯವ್ಯ ದಿಕ್ಕುಗಳಲ್ಲಿ ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಸಾಂಗಲಿ, ಪೂರ್ವದಲ್ಲಿ ಗುಲಬರ್ಗಾ, ದಕ್ಷಿಣದಲ್ಲಿ ಬಾಗಲಕೋಟೆ ಮತ್ತು ಪಶ್ಚಿಮದಲ್ಲಿ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶವನ್ನು ಹೊಂದಿದೆ. ಆಡಳಿತದ ದೃಷ್ಟಿಕೋನವನ್ನಿಟ್ಟುಕೊಂಡು ೧೯೯೭ರಲ್ಲಿ ಜಿಲ್ಲೆಯನ್ನು ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳೆಂದು ವಿಂಗಡಿಸಲಾಯಿತು. ಈಗಿನ ವಿಜಾಪುರ ಜಿಲ್ಲೆಯಲ್ಲಿ ಇಂಡಿ, ಸಿಂದಗಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಮತ್ತು ವಿಜಾಪುರ ಎಂದು ಐದು ತಾಲೂಕುಗಳಿವೆ. ಉತ್ತರಕ್ಕೆ ಭೀಮಾನದಿ ದಕ್ಷಿಣಕ್ಕೆ ಕೃಷ್ಣಾನದಿ ಮೇರೆಯಾಗಿದ್ದು, ಒಟ್ಟು ೬೪೮ ಗ್ರಾಮಗಳನ್ನೊಳಗೊಂಡಿದೆ.

ವಿಜಾಪುರ ನಾಮ ವಿವೇಚನೆ

ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸ ಅಧ್ಯಯನದಲ್ಲಿ ಸ್ಥಳನಾಮವು ಪ್ರಮುಖ ಪಾತ್ರ ವಹಿಸುತ್ತದೆ. ಬದಲಾದ ಭೌಗೋಳಿಕ ಸ್ವರೂಪದ ಇತಿಹಾಸ ರಚನೆಗೆ ಇದು ಸುಳುಹು ನೀಡುತ್ತದೆ. ಅಲ್ಲದೆ ಐತಿಹಾಸಿಕ ಘಟನೆಗೆ ಪುಷ್ಟಿ ನೀಡುತ್ತದೆ. ಪ್ರಸ್ತುತ ಸ್ಥಳನಾಮವಾದ ವಿಜಾಪುರ ಎಂಬುದು ಕಾಲದಿಂದ ಕಾಲಕ್ಕೆ ಹೇಗೆ ಬದಲಾವಣೆಯಾಗುತ್ತಾ ಬಂದಿದೆ ಎಂಬುದನ್ನು ಅವಲೋಕಿಸಬೇಕಾಗುತ್ತದೆ.

ವಿಜಾಪುರದ ಇತಿಹಾಸವು ಬಹು ಪ್ರಾಚೀನವಾದುದು. ಜಿಲ್ಲೆಯು ವಿಭಜನೆಯಾಗುವುದಕ್ಕಿಂತ ಪೂರ್ವದಲ್ಲಿ ವಿಜಾಪುರ ಜಿಲ್ಲೆಯ ಭಾಗಗಳಾದ ಐಹೊಳೆ, ಬಾದಾಮಿ, ಬಾಗಲಕೋಟ, ಮಹಾಕೂಟ, ಹಾಗೂ ಪ್ರಸ್ತುತ ಜಿಲ್ಲೆಯಲ್ಲಿರುವ ಗಲಗಲಿ, ಧೂಳಖೇಡ, ಹಿಪ್ಪರಗಿ ಈ ಸ್ಥಳಗಳು ಪುರಾಣ ಕಥನಗಳಿಗೆ ಸಂಬಂಧಪಟ್ಟಿದ್ದು, ರಾಮಾಯಣದ ದಂಡಕಾರಣ್ಯದ ಪ್ರದೇಶದ ಸ್ಥಳಗಳ ವರ್ಣನೆಗೆ ಸರಿಹೊಂದಿಕೊಳ್ಳುತ್ತವೆ. ಹೀಗಾಗಿ ಈ ಪ್ರದೇಶವು ರಾಮಾಯಣದ ದಂಡಕಾರಣ್ಯದ ಭಾಗವಾಗಿತ್ತೆಂದು ಹೇಳುತ್ತಾರೆ.[೨] ಆದರೆ ಈ ಭಾಗದ ಐತಿಹಾಸಿಕ ದಾಖಲೆಗಳು ಕ್ರಿ.ಶ. ಎರಡನೆಯ ಶತಮಾನದ

ಈಜಿಪ್ಟಿನ ಖ್ಯಾತ ಭೂಗೋಳಶಾಸ್ತ್ರಜ್ಞ ಟಾಲೆಮಿಯು ಬೆಂಡಾಕ್ಕೊ(ಭೀಮಾನದಿ), ನಗರೂರು(ಮುದ್ದೇಬಿಹಾಳ ತಾಲೂಕಿನ ನಾಗೂರು), ಕಲ್ಲಿಗೇರಿಯುಸ್(ಕಲಕೇರಿ), ಪತಿರ್ಗಾಲ(ಹತ್ತಿರ್ಕಹಾಳ) ಎಂಬ ಸ್ಥಳಗಳನ್ನು ತನ್ನ "A Guide to Geography"ಯಲ್ಲಿ ಉಲ್ಲೇಖಿಸಿದ್ದಾನೆ.[೩] ಆದರೆ ಟಾಲೆಮಿಯು ಉಲ್ಲೇಖಿಸಿರುವ ಕೆಲವು ಸ್ಥಳಗಳು ವಿಜಾಪುರ ಜಿಲ್ಲೆಯಲ್ಲಿರುವಂತಹವೇ ಎಂಬುದರ ಕುರಿತು ವಿದ್ವಾಂಸರಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿವೆ.

ಶಾಸನೋಕ್ತ ವಿಜಯಪುರ ಸ್ಥಳನಾಮ ಭಾರತದುದ್ದಕ್ಕೂ ಬಳಕೆಗೊಂಡ 'ಪುರ', 'ಪುರಿ' ದ್ರಾವಿಡ ಸ್ಥಳನಾಮ ವಾರ್ಗಿಕ 'ಊರು'ದ ಪರ್ಯಾಯ ಪದವಾಗಿ ಕೆಲವಡೆ ಕಾಣಿಸಿಕೊಂಡಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ 'ಪುರ' ಪಟ್ಟಣ ಎನ್ನುವ ಅರ್ಥದಲ್ಲಿ ಬಳಕೆಗೊಂಡಿದ್ದು, ಅದು ಕ್ರಿ.ಶ. ಎರಡನೆಯ ಶತಮಾನದಷ್ಟು ಹಿಂದಿನಿಂದಲೇ ಕಾಣಿಸಿಕೊಂಡಿದೆ.[೪]

ಜಿಲ್ಲೆಯ ಸಿಂದಗಿ ತಾಲೂಕಿನ ದೇವೂರಿನಲ್ಲಿ ದೊರೆತಿರುವ ಕಲ್ಯಾಣ ಚಾಳುಕ್ಯ ದೊರೆ ಎರಡನೇ ಜಯಸಿಂಹನ ಕ್ರಿ.ಶ. ೧೦೨೯ರ ಶಾಸನದಲ್ಲಿ ವಿಜಾಪುರವನ್ನು ವಿಜಯಾಪುರವೆಂದು ಉಲ್ಲೇಖಿಸಿದ್ದು[೫] ಈವರೆಗೆ ಉಪಲಬ್ಧ ಪ್ರಥಮ ದಾಖಲೆಯಾಗಿದೆ. ಇದರ ತರುವಾಯ ಕಲ್ಯಾಣ ಚಾಳುಕ್ಯ ಮನೆತನಕ್ಕೆ ಸಂಬಂಧಪಡುವಂತಹ ಇನ್ನೂ ಕೆಲವು ಶಾಸನಗಳಲ್ಲಿ ರಾಜಧಾನಿ ವಿಜಯಾಪುರವೆಂದು ಕ್ರಿ.ಶ. ೧೦೩೩,[೬] ಕ್ರಿ.ಶ. ೧೦೮೪ ಕ್ರಿ.ಶ, ೧೧೫೧, ಕ್ರಿ.ಶ.. ೧೧೫೪ರ[೭] ವಿಜಾಪುರ ಶಾಸನಗಳು ಉಲ್ಲೇಖಿಸುತ್ತವೆ. ಯಾದವರ ಕಾಲಕ್ಕೆ ಸಂಬಂಧಿಸಿದ ಕ್ರಿ.ಶ. ೧೧೯೬ರ ವಿಜಾಪುರ, ಕ್ರಿ.ಶ. ೧೨೦೮ರ ಪಡಗಾನೂರ, ಕ್ರಿ.ಶ. ೧೨೩೪ರ ವಿಜಾಪುರ[೮] ಶಾಸನಗಳಲ್ಲಿ ಕೂಡ ವಿಜಯಾಪುರ ಎಂಬ ಹೆಸರು ಮುಂದುವರೆದಿದೆ.

ಒಂದು ಹೇಳಿಕೆಯಂತೆ ಬಾದಾಮಿ ಚಾಳುಕ್ಯರ ಮಾಂಡಲಿಕನೊಬ್ಬ ವಿಜಾಪುರ ಪಟ್ಟಣವನ್ನು ಕಟ್ಟಿಸಿದನೆಂದು ಹಾಗೂ ಬಿಜ್ಜನಹಳ್ಳಿಯು ಮಾಂಡಲಿಕನೊಬ್ಬನ ರಾಜಧಾನಿಯಾದಾಗ, ಬಿಜ್ಜಪುರವಾಗಿ ಅದೇ ವಿದ್ಯಾಪುರವಾಗಿರಬಹುದೆಂದು ಹೇಳಲಾಗುತ್ತದೆ.[೯] ಗಜಕನಹಳ್ಳಿ, ಬಜಕನಹಳ್ಳಿ, ಚಂದನಕೇರಿ, ಕ್ಯಾದಗಿ, ಕಾತರಕೇರಿ, ಕುರುಬನಹಟ್ಟಿ ಮತ್ತು ಕುಜನಕುಟ್ಟಿ ಎಂಬ ಏಳು ಹಳ್ಳಿಗಳು ಸೇರಿ ಬಿಜ್ಜನಹಳ್ಳಿಯಾಯಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಅದೇ ಬಿಜ್ಜನಹಳ್ಳಿ ಸಂಸ್ಕೃತೀಕರಣಗೊಂಡು ವಿದ್ಯಾಪುರವಾಗಿ, ವಿಜಯಪುರವಾಯಿತೆಂದು ಮುಂದೆ ವಿಜಾಪುರ ಅಥವಾ ಬಿಜಾಪುರ ಎಂದು ರೂಢಿಯಾಗಿರಬೇಕು. ಶಾಸನಗಳಲ್ಲಿ ವಿಜಯಪುರ ಹಾಗೂ ಬಿಜ್ಜನಹಳ್ಳಿ[೧೦] (ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ವಿಜಯಾಪುರದ ಸ್ವಯಂಭು ಸಿದ್ಧೇಶ್ವರ ದೇವರಿಗೆ ಕಂನವುರಿ ೧೨ರ ಬಳಿಯ 'ಬಿಜ್ಜಳಹಳ್ಳಿಯಲ್ಲಿ' ೩೦೦ ಮತ್ತರು ಭೂಮಿಯನ್ನು ದಾನ ಕೊಟ್ಟಿತು ಎಂದು ತಿಳಿಸುತ್ತದೆ.) ಪ್ರತ್ಯೇಕವಾಗಿ ಬರುವುದರಿಂದ ಇವೆರಡೂ ಊರುಗಳು ಬೇರೆಯಾಗಿ ಇರುವ ಸಾಧ್ಯತೆಯೂ ಇದೆ. ವಿಜಾಪುರ ಎಂಬ ಹೆಸರು ಪ್ರಾಚೀನವಾದುದರಿಂದ ವಿಜಯಪುರ ಮತ್ತು ಬಿಜ್ಜನಹಳ್ಳಿ ಎರಡೂ ಒಂದೇ ಎಂಬ ವಾದವೂ ಮೇಲೆ ಉಲ್ಲೇಖಿಸಿದ ಶಾಸನದ ಹಿನ್ನೆಲೆಯಲ್ಲಿ ದುರ್ಬಲಗೊಳ್ಳುತ್ತದೆ.

ಆದಿಲ್‌ಶಾಹಿ ಆಡಳಿತಾವಧಿಯಲ್ಲಿ ವಿಜಾಪುರ ಹೆಸರಿನ ಉಲ್ಲೇಖವು ಕಾಲಕಾಲಕ್ಕೆ ಬದಲಾವಣೆ ಹೊಂದಿದ್ದನ್ನು ಕಾಣಬಹುದು. ಬಹಮನಿ ಸುಲ್ತಾನ ಮಹಮ್ಮದನು ಯೂಸೂಫ್ ಬೇಗ್ ಸಾವೀ(ಖಾನ್)ಗೆ ಕಾನಕರ್ತಿ, ಕಲ್ಯಾಣದಿಂದ ಮುಂಜಾನ ಮತ್ತು ಗೋವೆ, ಕಂಚಿ, ಕಾಳಹಸ್ತಿ ಮತ್ತು ಪ್ರಾಚೀನ ಕಾಲದಲ್ಲಿ ರಾಜಧಾನಿಯಾಗಿದ್ದ ಮಂಗಳವೇಡವರೆಗಿನ ಪ್ರದೇಶಗಳನ್ನು ಜಾಗೀರು ಹಾಕಿಕೊಟ್ಟನು. ಈ ಪ್ರದೇಶಗಳಲ್ಲಿ 'ಬೆಂಜನಹಳ್ಳಿ' ಎಂಬ ಒಂದು ಗ್ರಾಮವಿತ್ತು. ಅಲ್ಲಿ ಯೂಸೂಫ್‌ನು ಆ ಗ್ರಾಮದ ಸುತ್ತಮುತ್ತಲೂ ಕೋಟೆಯನ್ನು ಕಟ್ಟಿಸಿ ಅದಕ್ಕೆ 'ಬಿಜಾಪುರ' ಎಂಬ ಹೆಸರನ್ನು ಇಟ್ಟನು. ಈ ಘಟನೆ ನಡೆದದ್ದು ಹಿಜರಿ ಶಕ ೯೧೯(ಇದು ಕ್ರಿ.ಶ. ೧೫೧೯ಕ್ಕೆ ಸರಿಹೊಂದುತ್ತದೆ)ರಲ್ಲಿ.[೧೧] ಆದರೆ ಕಲ್ಯಾಣ ಚಾಳುಕ್ಯ, ಕಳಚೂರಿ, ಯಾದವರ ಕಾಲಕ್ಕಾಗಲೇ ವಿಜಯಾಪುರ ಇದ್ದುದರ ಬಗ್ಗೆ ಶಾಸನಗಳು ಸ್ಪಷ್ಟಪಡಿಸುವುದರಿಂದ ಯೂಸೂಫ್‌ನು 'ಬೆಂಜನಹಳ್ಳಿ'ಯನ್ನು ಬಿಜಾಪುರವನ್ನಾಗಿ ಪರಿವರ್ತಿಸಿದ ಎಂಬ ಹೇಳಿಕೆಯು ಸಮಂಜಸ ಅನಿಸುವುದಿಲ್ಲ. ಪ್ರಾಯಶಃ ವಿಜಯಾಪುರವನ್ನು ಬಿಜಾಪುರವನ್ನಾಗಿ ಪರಿವರ್ತಿಸಿರಬಹುದು ಎಂದು ಹೇಳಬಹುದು. ಕ್ರಿ.ಶ. ೧೫೫೦ರ ಮೊದಲನೇ ಇಬ್ರಾಹಿಂ ಆದಿಲ್‌ಶಾಹನ ಕಾಲದ ಶಾಸನವು 'ಮಾಮ್ಲಾ ಬಿಜಾಪುರ್ ಕನ್ನಡಾ' (ಕನ್ನಡದ್ದಾದ ಬಿಜಾಪುರ ವಿಭಾಗ)ಎಂದು, ಎರಡನೇ ಇಬ್ರಾಹಿಂ ಆದಿಲ್‌ಶಾಹನು ಬರೆದ ಕಿತಾಬ್-ಎ-ನೌರಸ್‌ದ ೫೬ನೆಯ ಗೀತೆಯಲ್ಲಿ ವಿದ್ಯಾಪುರ(ಬಿಜಾಪುರವನ್ನು 'ಬೀಜ್‌ಪುರ', 'ಬೇಜಾಪುರ', ಎಂದೂ ಉಚ್ಚರಿಸಲಾಗುತ್ತಿತ್ತು. 'ಬೇಜಾ' ಎಂದರೆ 'ವ್ಯರ್ಥ' ಅಥವಾ 'ತಪ್ಪು' ಎಂದಾಗುತ್ತದೆ. ಅದು ಇಬ್ರಾಹಿಮನಿಗೆ ಸರಿಬೀಳಲಿಲ್ಲ. ಆದ್ದರಿಂದ ಅವನು 'ಬಿದ್ಯಾ(ವಿದ್ಯಾ)ಪುರ' ಎಂದೂ ಬದಲಾಯಿಸಿದ),[೧೨] ಮುಂದೆ ಮಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ಇದಕ್ಕೆ ಮಹಮ್ಮದಪುರ ಎಂದು ಕರೆಯಲಾಗುತ್ತದೆ.[೧೩] ಔರಂಗಜೇಬನು ೧೩ ಸೆಪ್ಟೆಂಬರ್ ೧೬೮೬ರಲ್ಲಿ ವಿಜಾಪುರವನ್ನು ವಶಪಡಿಸಿಕೊಂಡ ಮೇಲೆ ವಿಜಾಪುರಕ್ಕೆ ಧಾರುಲ್ ಜಫರ್ (ವಿಜಯದ ಪೀಠ) ಎಂಬ ಹೆಸರನ್ನಿಟ್ಟನು.[೧೪] ಆದರೆ ಈ ಹೆಸರು ಬಹುದಿನಗಳವರೆಗೆ ಉಳಿದಂತೆ ಕಾಣುವುದಿಲ್ಲ. ಮತ್ತೆ ವಿಜಾಪುರ ಅಥವಾ ಬಿಜಾಪುರವಾಗಿ ಪರಿವರ್ತನೆ ಹೊಂದಿತು. ೨೦೧೫ರಲ್ಲಿ ಕರ್ನಾಟಕ ಸರಕಾರ ಈ ಜಿಲ್ಲೆಗೆ ವಿಜಯಪುರ ಎಂದು ಮತ್ತೊಮ್ಮೆ ಮರುನಾಮಕರಣ ಮಾಡಲಾಯಿತು.

೨.೧. ಭೌಗೋಳಿಕತೆ

ಒಂದು ರಾಜ್ಯದ ಏಳಿಗೆ ಬಹುಮಟ್ಟಿಗೆ ಆ ದೇಶದ ಪ್ರಕೃತಿದತ್ತವಾದ ಸಂಪತ್ತನ್ನು ಅವಲಂಬಿಸಿರುತ್ತದೆ. ನೆಲ, ಜಲ ಮತ್ತು ಖನಿಜಗಳು ಪ್ರಕೃತಿದತ್ತವಾದ ಸಂಪತ್ತಿನ ಮೂಲ ಆಕರಗಳು. ವಿಜಾಪುರ ಜಿಲ್ಲೆಯು ಭೌಗೋಳಿಕವಾಗಿ ದಖನ್(ದಕ್ಷಿಣ) ಪ್ರಸ್ಥಭೂಮಿಯ ಒಣ ಮತ್ತು ಶುಷ್ಕ ವಾತಾವರಣ ಪ್ರದೇಶದಲ್ಲಿದೆ. ಕೃಷ್ಣಾನದಿಯ ಉತ್ತರಭಾಗ ದಖನ್ ಪದರ ಕಲ್ಲುಗಳ ಪ್ರದೇಶವಾದರೆ, ಅದರ ದಕ್ಷಿಣ ಭಾಗದಲ್ಲಿ ಕಲಾದಗಿ ಶಿಲಾವರ್ಗವಿದೆ. ಜಿಲ್ಲೆಯಲ್ಲಿ ಭೀಮಾ ಕಣಿವೆ, ಮಧ್ಯದ ಪ್ರಸ್ಥಭೂಮಿ, ಡೋಣಿ ಕಣಿವೆ, ವಿಜಾಪುರ ನಗರ ಪ್ರದೇಶ, ಕೃಷ್ಣಾನದಿ ಕಣಿವೆ

ಪ್ರದೇಶ, ಹೀಗೆ ಪ್ರಮುಖ ಭೌಗೋಳಿಕ ವಿವರಗಳನ್ನು ಗುರುತಿಸಬಹುದು. ಭೀಮಾ ಶಿಲಾವರ್ಗವು ಸಂಚಯಿತ ಜಲಜಶಿಲೆಗಳಿಂದ ಕೂಡಿದ್ದು, ಇದರಲ್ಲಿ ಗುಂಡುಶಿಲೆ, ಮರಳುಗಲ್ಲು, ಸುಣ್ಣಶಿಲೆ ಮತ್ತು ಜೇಡಿ ಚಿಪ್ಪುಶಿಲೆಗಳು ಕಂಡುಬರುತ್ತವೆ. ಭೀಮಾ ಗುಂಪಿನ ಶಿಲಾವರ್ಗ ಸಂಚಯಿಸಿದ ಮೇಲೆ ಜ್ವಾಲಾಮುಖಿಯಿಂದ ಹೊರಬಂದ ಶಿಲಾರಸವು ಘನೀಕರಣಗೊಂಡು ಗಟ್ಟಿಯಾದ ಪದರುಗಲ್ಲುಗಳು ನಿರ್ಮಾಣವಾದವು. ಇದಕ್ಕೆ ದಖನ್ ಪದರುಗಲ್ಲು ಅಥವಾ ಬೆಸಾಲ್ಟ್ ಶಿಲೆಯೆಂದು ಕರೆಯುತ್ತಾರೆ.[೧೫] ದಖನ್ ಪದರುಗಲ್ಲುಗಳಿಗೆ ಗಟ್ಟಿತನ, ಭಾರ ಮತ್ತು ಬಾಳಿಕೆ ಬರುವ ಲಕ್ಷಣವಿರುವುದರಿಂದ ಕಟ್ಟಡಕ್ಕೆ ಉತ್ತಮ ಶಿಲೆಗಳಾಗಿವೆ. ಸ್ಥಳೀಯವಾಗಿ ದೊರೆಯುವ ಈ ಶಿಲೆಗಳನ್ನೇ ಉಪಯೋಗಿಸಿಕೊಂಡು ಕಟ್ಟಿರುವ ಕೋಟೆಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಮಹಲ್‌ಗಳು, ಮಸೀದಿ ಇನ್ನಿತರ ಕಟ್ಟಡಗಳನ್ನು ಜಿಲ್ಲೆಯಲ್ಲಿ ಕಾಣಬಹುದು. ಸಾವಿರ ವರ್ಷ ಕಳೆದರೂ ಇನ್ನೂ ಅಚ್ಚಳಿಯದೆ ನಿಂತಿವೆ.

ವಿಜಾಪುರ ಜಿಲ್ಲೆಯಲ್ಲಿ ಪ್ರಮುಖವಾಗಿ ಕೃಷ್ಣಾ, ಭೀಮಾ ಮತ್ತು ಡೋಣಿ ನದಿಗಳು ಹರಿಯುತ್ತವೆ. ಈ ಮೂರು ಪ್ರಮುಖ ನದಿಗಳಲ್ಲದೆ ಅನೇಕ ಹಳ್ಳಗಳು ಹರಿಯುತ್ತಿರುವುದರಿಂದ ಅಂತರ್ಜಲ ಸಂಪನ್ಮೂಲ ಹೆಚ್ಚಳಕ್ಕೆ ಕಾರಣವಾಗಿವೆ.

ಕೃಷ್ಣಾನದಿ

ಕೃಷ್ಣಾನದಿಯು ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತಗಳ ತಪ್ಪಲಿನಲ್ಲಿರುವ ಮಹಾಬಳೇಶ್ವರದಲ್ಲಿ ಹುಟ್ಟಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಮೂಲಕ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಮಹಾರಾಷ್ಟ್ರ ರಾಜ್ಯದ ಸತಾರ, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳ ಮೂಲಕ ಹರಿದು ಕರ್ನಾಟಕವನ್ನು ಬೆಳಗಾವಿ ಜಿಲ್ಲೆಯ ಮೂಲಕ ಪ್ರವೇಶಿಸುತ್ತದೆ. ಇದು ವಿಜಾಪುರ ಜಿಲ್ಲೆಯ ವಿಜಾಪುರ, ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳಲ್ಲಿ ಬಾಗಲಕೋಟ ಜಿಲ್ಲೆಯ ಗಡಿರೇಖೆಯಾಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಕರ್ನಾಟಕದಲ್ಲಿ ಈ ನದಿಯನ್ನು ಕೃಷ್ಣಾ ಎಂದು, ಆಂಧ್ರಪ್ರದೇಶದಲ್ಲಿ ಕೃಷ್ಣವೇಣಿ ಎಂದು ಕರೆಯುತ್ತಾರೆ. ಕನ್ನಡ ಶಾಸನಗಳಲ್ಲಿ ಕೃಷ್ಣವೆಣ್ಣಾ, ಕೃಷ್ಣಬೆಣ್ಣಾ, ಕೃಷ್ಣಹೊಳೆ, ಕೃಷ್ಣವೆಣ್ಣೆ,[೧೬] ಕರಿಹೊಳೆ[೧೭] ಎಂದೂ ಕರೆಯಲಾಗಿದೆ. ಸ್ಥಳೀಯರು ಇದನ್ನು ಹಿರೇಹೊಳೆ ಎಂದು ಕರೆಯುತ್ತಾರೆ. ಈ ನದಿಯ ಪ್ರಮುಖ ಉಪನದಿಗಳೆಂದರೆ ಭೀಮಾ, ಕೋಯ್ನಾ, ಪಂಚಗಂಗಾ, ದೂಧ್‌ಗಂಗಾ, ತುಂಗಭದ್ರಾ, ಹಿರಣ್ಯಕೇಶಿ, ಘಟಪ್ರಭಾ ಮತ್ತು ಮಲಪ್ರಭಾ.[೧೮]

ಈ ನದಿಯ ಉತ್ತರಭಾಗ ದಖನ್‌ಟ್ರ್ಯಾಪ್ ಶಿಲೆಯಿಂದ ಕೂಡಿದೆ ನದಿಯ ಪ್ರವಾಹದಲ್ಲಿ ಹರಿದುಬಂದು ಸೇರಿರುವ ಮೆಕ್ಕಲುಮಣ್ಣಿನಿಂದಾಗಿ ಈ ಪ್ರದೇಶ ಫಲವತ್ತಾದ ಭೂಮಿಯನ್ನು ಹೊಂದಿದೆ. ಇದಕ್ಕೆ ಮುಂಗಾರು ಮಳೆಯೇ ಪ್ರಧಾನ ನೀರಿನ ಆಸರೆಯಾಗಿದೆ. ಮಳೆಗಾಲದಲ್ಲಿ ಮಾತ್ರ ನದಿಯ ಪ್ರವಾಹ ಅಧಿಕವಾಗಿರುತ್ತದೆ. ಆದರೆ ಬೇಸಿಗೆ ದಿನಗಳಲ್ಲಿ ನದಿ ಸುಮಾರು

ತಳಮುಟ್ಟಿ ಹರಿಯುತ್ತದೆ. ಕೃಷ್ಣಾನದಿಗೆ ನಾರಾಯಣಪುರ ಮತ್ತು ಆಲಮಟ್ಟಿಗಳಲ್ಲಿ ಆಣೆಕಟ್ಟುಗಳನ್ನು ನಿರ್ಮಿಸಿ ದಕ್ಷಿಣ ಮತ್ತು ಉತ್ತರ ಭಾಗದ ಪ್ರದೇಶಗಳಲ್ಲಿ ಕೃಷಿ ಬಳಕೆಗೆ ಮತ್ತು ಕುಡಿಯುವ ನೀರಿನ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಭೀಮಾನದಿ

ಈ ನದಿಯು ಮಹಾರಾಷ್ಟ್ರದ ಪಶ್ಚಿಮಘಟ್ಟಗಳ 'ಭೀಮಾಶಂಕರ' ಎಂಬಲ್ಲಿ ಉಗಮಿಸುತ್ತದೆ. ಆ ರಾಜ್ಯದ ಸತಾರ, ಪಂಡರಾಪುರ ಹಾಗೂ ಸೊಲ್ಲಾಪುರ ಜಿಲ್ಲೆಗಳ ಮೂಲಕ ಹರಿದು ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ದಸೂರಿನ ಬಳಿ ಕರ್ನಾಟಕವನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಇಂಡಿ ತಾಲೂಕು–ಸೊಲ್ಲಾಪುರ, ಸಿಂದಗಿ ತಾಲೂಕು–ಗುಲಬರ್ಗಾ ಜಿಲ್ಲೆಯ ಗಡಿರೇಖೆಯಾಗಿ ಹರಿದು ಶಹಾಪುರ ತಾಲೂಕಿನ ಸಂಗಮ ಎಂಬ ಸ್ಥಳದಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ವಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು ಹರಿವಿನ ಉದ್ದ ಸುಮಾರು ೯೬ ಕಿ.ಮೀ.ಗಳು. ಇದರಲ್ಲಿ ೪೮ ಕಿ.ಮೀ.ಗಳ ದೂರ ವಿಜಾಪುರ ಮತ್ತು ಗುಲಬರ್ಗಾ ಜಿಲ್ಲೆಗಳ ಗಡಿರೇಖೆಯಾಗಿ ಹರಿಯುತ್ತದೆ. ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಉತ್ತರದಲ್ಲಿ ಬೋರಿಹಳ್ಳವು, ಪೂರ್ವದಲ್ಲಿ ರೋಡಗಿಯ ಸಮೀಪ ಸಾತಲ್ಗಾಂ ಹೊಳೆಯು ಭೀಮಾ ನದಿಯನ್ನು ಬಲದಂಡೆಯ ಮೂಲಕ ಸೇರುತ್ತವೆ. ಈ ನದಿಯ ಕುರಿತು ಕ್ರಿ.ಶ. ಎರಡನೆಯ ಶತಮಾನದಲ್ಲಿ ಟಾಲೆಮಿಯು 'ಬೆಂಡಾಕ್ಕೊ'[೧೯] ಎಂದು ಉಲ್ಲೇಖಿಸಿದ್ದಾನೆ. ಕ್ರಿ.ಶ. ೧೪೫೩ರ ತೇದಿಯ ಸಂಗಮ ಶಾಸನದಲ್ಲಿ ಇದನ್ನು 'ಭೀಮನದಿ' ಎಂದು ಕರೆಯಲಾಗಿದೆ. ಕ್ರಿ.ಶ. ೧೦೪೦ರ ಬೆಳಗುಂದಿಯ ಶಾಸನದಲ್ಲಿಯೂ[೨೦] ಇದೇ ಮಾಹಿತಿ ಇದೆ.

ಈ ನದಿಯ ಪ್ರದೇಶದಲ್ಲಿ ಜ್ವಾಲಾಮುಖಿಗಳಿಂದ ಉಂಟಾದ ಗಟ್ಟಿಯಾದ ಶಿಲಾಪದರು ೬ರಿಂದ ೨೪ ಮೀ. ದಪ್ಪವಾಗಿದೆ. ಇದರ ಮೇಲ್ಭಾಗದ ಶಿಲೆಯು ಶಿಥಿಲಗೊಂಡು ಉಂಟಾದ ಕಪ್ಪುಮಣ್ಣು ಜೈವಿಕ ವಸ್ತುಗಳಿಂದ ಕೂಡಿ ಫಲವತ್ತಾಗಿದೆ.[೨೧] ಅಲ್ಲದೆ ಪ್ರತಿ ವರ್ಷ ಪ್ರವಾಹ ಕಾಲದಲ್ಲಿ ನದಿ ಹೊತ್ತು ತಂದ ಮೆಕ್ಕಲು ಮಣ್ಣಿನಿಂದ ಕೂಡ ಈ ಪ್ರದೇಶದ ಭೂಮಿಯು ಫಲವತ್ತಾಗಿದ್ದು ನೀರಿನ ತೇವಾಂಶವನ್ನು ಬಹುಪಾಲು ಹಿಡಿದಿಟ್ಟುಕೊಳ್ಳಬಲ್ಲದು.

ಡೋಣಿನದಿ

ಡೋಣಿನದಿಯು ವಿಜಾಪುರ ಜಿಲ್ಲೆಯ ಪಶ್ಚಿಮಕ್ಕೆ ಇರುವ ಸಾಂಗಲಿ ಜಿಲ್ಲೆಯ ಜತ್ ಪಟ್ಟಣದ (ಮಹಾರಾಷ್ಟ್ರ ರಾಜ್ಯ) ದಕ್ಷಿಣಕ್ಕೆ ಏಳು ಕಿಲೋಮೀಟರುಗಳ ದೂರದಲ್ಲಿ ಉಗಮಿಸುತ್ತದೆ. ಜಿಲ್ಲೆಯ ವಿಜಾಪುರ, ಬಸವನ ಬಾಗೇವಾಡಿ, ಸಿಂದಗಿ, ಮುದ್ದೇಬಿಹಾಳ ತಾಲೂಕುಗಳಲ್ಲಿ ಪೂರ್ವಾಭಿಮುಖವಾಗಿ ಹರಿದು ಯಾದಗಿರಿ ಜಿಲ್ಲೆಯ ಜಮಾಲಪುರ ಬಳಿ ಕೃಷ್ಣಾನದಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿ ೧೪೦ ಕಿ.ಮೀ. ಉದ್ದ ಹರಿಯುತ್ತದೆ. ಈ ನದಿಗೆ ಸಣ್ಣಡೋಣಿ, ಸೋಗ್ಲಿ,

ಹೀರಾ ಇನ್ನೂ ಅನೇಕ ಸಣ್ಣಪುಟ್ಟ ಹೊಳೆಗಳು ಸೇರುತ್ತವೆ.[೨೨] ಕ್ರಿ.ಶ. ೧೨೬೫ರ ಇಂಗಳೇಶ್ವರ ಶಾಸನ ಈ ನದಿಯನ್ನು 'ದೋಣಿ' ಎಂದು ಉಲ್ಲೇಖಿಸುತ್ತದೆ.[೨೩] ಭೂಮಿಯ ಫಲವತ್ತತೆಯನ್ನು ತಿಳಿಸುತ್ತದೆ. 'ಡೋಣಿ ಬೆಳೆದರೆ ಓಣೆಲ್ಲ ಕಾಳು' ಎನ್ನುವ ನಾಣ್ಣುಡಿಯು ಚಾಲ್ತಿಯಲ್ಲಿರುವುದು. ಈ ನದಿಯು ಪ್ರವಾಹದಲ್ಲಿ ಹೊತ್ತು ತರುವ ಮೆಕ್ಕಲುಮಣ್ಣಿನಿಂದ ಈ ಭೂಮಿ ಫಲವತ್ತಾಗಿದ್ದು ಕಡಿಮೆ ಪ್ರಮಾಣದ ಮಳೆ ಬಂದರೂ ದೀರ್ಘಾವಧಿಯವರೆಗೆ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವನ್ನು ಹೊಂದಿದೆ. ಹೀಗಾಗಿ ಅಧಿಕ ಪ್ರಮಾಣದ ಇಳುವರಿ ಕೂಡ ಈ ಡೋಣಿ ಪ್ರದೇಶದಲ್ಲಿ ಕಂಡುಬರುತ್ತದೆ.

ಈ ಮೂರು ಪ್ರಮುಖ ನದಿಗಳಲ್ಲದೆ ಜಿಲ್ಲೆಯಲ್ಲಿ ಅನೇಕ ಹಳ್ಳಕೊಳ್ಳಗಳು ಇವೆ. ಇವೆಲ್ಲವೂ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಉಳಿದ ಅವಧಿಯಲ್ಲಿ ಅಂತರ್ಜಲ ಬಳಕೆ ಅಧಿಕವಾಗಿದ್ದು, ಬಾವಿಗಳು, ಕೊಳವೆಬಾವಿಗಳು ಮತ್ತು ಇತರೆ ಮೂಲಗಳಿಂದ ನೀರನ್ನು ಕೃಷಿ ಹಾಗೂ ಮಾನವ ಬಳಕೆಗೆ ಉಪಯೋಗಿಸಲಾಗುತ್ತದೆ.

ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣ ೫೦ ಸೆಂ.ಮೀ.ನಿಂದ ೭೦ ಸೆಂ.ಮೀನಷ್ಟು ಕಡಿಮೆ. ಹೀಗಾಗಿ ವರ್ಷದಿಂದ ವರ್ಷಕ್ಕೆ ಆಗುವ ಮಳೆಯಲ್ಲಿನ ಅಗಾಧ ವ್ಯತ್ಯಾಸವು ಜಿಲ್ಲೆಯು ಬರಗಾಲ ಹಾಗೂ ಕ್ಷಾಮಕ್ಕೆ ತುತ್ತಾಗುತ್ತಿರುವುದಕ್ಕೆ ಬಹುಮುಖ್ಯ ಕಾರಣವಾಗಿದೆ. ಮುಂಗಾರು ಮತ್ತು ಹಿಂಗಾರು ಮಾರುತಗಳ ಮಳೆಯೇ ಜಿಲ್ಲೆಗೆ ಪ್ರಧಾನ ನೀರಿನ ಆಸರೆಯಾಗಿರುವುದರಿಂದ ಮಳೆಗಾಲದಲ್ಲಿ ಮಾತ್ರ ಅಧಿಕ ಪ್ರಮಾಣದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಈ ಪ್ರದೇಶದಲ್ಲಿ ಕಪ್ಪುಮಣ್ಣಿನ ಫಲವತ್ತಾದ ಭೂಮಿ ಹೆಚ್ಚು ಪ್ರಮಾಣದಲ್ಲಿದ್ದು, ಉಳಿದಂತೆ ಮಡ್ಡಿ, ಮಸಾರಿ ಮಣ್ಣು ಕಂಡುಬರುತ್ತದೆ. ಜೋಳ, ಸಜ್ಜೆ, ಹತ್ತಿ, ತೊಗರಿ, ಗೋಧಿ, ಮೆಕ್ಕೆಜೋಳ, ಕುಸುಬಿ, ಹುರುಳಿ, ಹೆಸರು, ಕಡಲೆ ಈ ಭಾಗದ ಪ್ರಮುಖ ಬೆಳೆಗಳಾಗಿದ್ದು ಮಳೆಯಾಶ್ರಯದಲ್ಲಿ ಬೆಳೆಯುತ್ತಾರೆ.

ಕಡಿಮೆ ಪ್ರಮಾಣದ ಮಳೆ ಬೀಳುವ ಪ್ರದೇಶವಾಗಿರುದರಿಂದ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ ೪.೮೩ರಷ್ಟು ಪ್ರದೇಶವನ್ನು ಮಾತ್ರ ಅರಣ್ಯಪ್ರದೇಶವೆಂದು ಗುರುತಿಸಲಾಗಿದೆ. ಈ ಅರಣ್ಯ ಪ್ರದೇಶವನ್ನು ಉಷ್ಣವಲಯದ ಒಣ ಮುಳ್ಳು ಗಿಡಗಂಟೆಗಳ ವಿಭಾಗಕ್ಕೆ ಸೇರಿಸಬಹುದು. ಇದರಲ್ಲಿ ಒಣ ಪ್ರದೇಶದ ಇಳಿಜಾರಿನಲ್ಲಿ ಸಣ್ಣ ಗಿಡಮರಗಳನ್ನು ಹಾಗೂ ಬಯಲು ಪ್ರದೇಶದಲ್ಲಿ ಉರುವಲು ಮತ್ತು ಬೇವಿನ ಮರಗಳನ್ನು ಕಾಣಬಹುದು. ಬೆಟ್ಟಗುಡ್ಡಗಳ ಮತ್ತು ನದಿ ತೀರದ ಅರಣ್ಯಪ್ರದೇಶದಲ್ಲಿ ಕಕ್ಕೆ, ದಿಂಡಲು, ಗಂಧದ ಮರಗಳನ್ನು ಮೈದಾನಪ್ರದೇಶದಲ್ಲಿ ಹೆಚ್ಚಾಗಿ ಜಾಲಿಮರಗಳನ್ನು ಕಾಣಬಹುದು. ಜೊತೆಗೆ ಬೇವು, ಹುಣಸೆ, ನೇರಳೆ, ಆಲ ಮುಂತಾದ ಮರಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಈ ಮೇಲೆ ಉಲ್ಲೇಖಿಸಿದ ಮೂರು ನದಿಗಳ ತೀರದಲ್ಲಿ ಜಿಲ್ಲೆಯಲ್ಲಿ ಅನೇಕ ಕೋಟೆಗಳು ನಿರ್ಮಾಣಗೊಂಡಿವೆ. ಈ ನದಿಗಳು ರಾಜ್ಯದ ರಾಜಧಾನಿಯ ಗಡಿರೇಖೆಗಳಾಗಿದ್ದವಲ್ಲದೆ ಸಾಮ್ರಾಜ್ಯದ

ಸುತ್ತಲೂ ನೈಸರ್ಗಿಕವಾಗಿ ಕೋಟೆಯ ಸುತ್ತಲೂ ಇರುವ ಕಂದಕದ ಹಾಗೆ ರಕ್ಷಣೆಯನ್ನು ಒದಗಿಸುತ್ತಿದ್ದವು. ಈ ನದಿ ಮುಖಜ ಭೂಮಿಯನ್ನು ತಮ್ಮ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಅನೇಕ ರಾಜಮನೆತನಗಳ ಮಧ್ಯೆ ಹೋರಾಟಗಳು ನಡೆದುಕೊಂಡು ಬಂದಿವೆ. ಸ್ಥಳೀಯ ಆಡಳಿತ ವರ್ಗದವರು ಕೂಡ ಈ ಪ್ರದೇಶವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಮತ್ತು ತಮ್ಮ ಭದ್ರತೆಗೋಸ್ಕರ ಇಲ್ಲಿ ಕೋಟೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವು ಭೀಮಾ ಮತ್ತು ಕೃಷ್ಣಾನದಿಗಳ ತೀರದುದ್ದಕ್ಕೂ ಅಲ್ಲದೆ ಜಿಲ್ಲೆಯ ಮಧ್ಯಭಾಗದಲ್ಲಿ ಹರಿಯುವ ಡೋಣಿನದಿಯುದ್ದಕ್ಕೂ ಕೋಟೆಗಳನ್ನು ನಿರ್ಮಿಸಿಕೊಂಡಿದ್ದು ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದುಬರುತ್ತದೆ.

೨.೨. ಪ್ರಾಗಿತಿಹಾಸ ಕಾಲ

ವಿಜಾಪುರ ಜಿಲ್ಲೆಯ ಭೌಗೋಳಿಕ ಪರಿಸರವು ಪ್ರಾಗಿತಿಹಾಸ ಮಾನವನ ವಸತಿಗೆ ಪ್ರಶಸ್ತವಾಗಿದ್ದು ಈ ಜಿಲ್ಲೆಯಲ್ಲಿ ಹರಿಯುವ ಕೃಷ್ಣಾ, ಭೀಮಾ, ಡೋಣಿ ನದಿಗಳು ಮತ್ತು ಅವುಗಳ ಉಪನದಿಗಳ ಬಯಲು ಪ್ರದೇಶಗಳಲ್ಲಿ ಆದಿ ಹಳೆಶಿಲಾಯುಗದಿಂದ ಬೃಹತ್‌ಶಿಲಾಯುಗ ಸಮಾಧಿ ಯುಗದವರೆಗಿನ ಹಂತದ ಅನೇಕ ನೆಲೆಗಳು ಕಂಡುಬಂದಿವೆ. ಸುಮಾರು ೫ ಲಕ್ಷ ವರ್ಷಗಳ ಹಿಂದಿನಿಂದ ಆದಿ ಇತಿಹಾಸ ಕಾಲದವರೆಗಿನ ಬೆಳವಣಿಗೆ ಕರ್ನಾಟಕ ಅದರ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿಯ ಕ್ಷೇತ್ರಶೋಧನೆ ಮತ್ತು ಉತ್ಖನನಗಳಿಂದ ಅತಿ ಪ್ರಾಚೀನ ೭ ಘಟ್ಟಗಳು ತಿಳಿದುಬಂದಿವೆ.

೧. ಆದಿ ಹಳೆಶಿಲಾಯುಗ(೫ ಲಕ್ಷ ಅಥವಾ ಅದಕ್ಕೂ ಮುಂಚೆ)

೨. ಮಧ್ಯ ಹಳೆಶಿಲಾಯುಗ(ಕ್ರಿ.ಪೂ. ೭೦,೦೦೦-೩೦,೦೦೦)

೩. ಅಂತ್ಯ ಹಳೆಶಿಲಾಯುಗ(ಕ್ರಿ.ಪೂ. ೪೦,೦೦೦-೧೦,೦೦೦)

೪. ಮಧ್ಯ(ಸೂಕ್ಷ್ಮ) ಶಿಲಾಯುಗ(ಕ್ರಿ.ಪೂ. ೭,೦೦೦-೩,೦೦೦)

೫. ನವಶಿಲಾ ಶಿಲಾ-ತಾಮ್ರಯುಗ(ಕ್ರಿ.ಪೂ. ೨೨೦೦-೮೦೦)

೬. ಕಬ್ಬಿಣ ಬೃಹತ್ ಶಿಲಾಯುಗ(ಕ್ರಿ.ಪೂ. ೧೨೦೦-೨೦೦)[೨೪]

ಈ ಪ್ರಾಗಿತಿಹಾಸ ಕಾಲದ ಪ್ರತಿಯೊಂದು ಹಂತವನ್ನು ಮಾನವನು ಉಪಕರಣಗಳನ್ನು ತಯಾರಿಸಲು ಬಳಸಿದ ತಂತ್ರ ಮತ್ತು ಅವುಗಳ ಮೂಲಕ ಸಿದ್ಧಮಾಡಿದ ಉಪಕರಣಗಳ ಆಕೃತಿಗಳಿಗನುಗುಣವಾಗಿ ನಿರ್ಧರಿಸಲಾಗಿದೆ. ಈ ಲಕ್ಷಣಗಳು ಮಾನವನ ಸಾಂಸ್ಕೃತಿಕ ಪ್ರಗತಿಪಥದಲ್ಲಿಯ ಸ್ಪಷ್ಟವಾದ ಕ್ರಮಬದ್ಧ ಹಂತಗಳನ್ನು ನಿರ್ದೇಶಿಸುತ್ತ ಮಾನವಸಂಸ್ಕೃತಿ ಬೆಳವಣಿಗೆಯಲ್ಲಿಯ ವಿವಿಧ ಘಟ್ಟಗಳನ್ನು ಸ್ಪಷ್ಟಗೊಳಿಸುತ್ತವೆ.[೨೫]

ಭಾರತದಲ್ಲಿ ಪ್ರಾಗಿತಿಹಾಸ ಕಾಲದ ಅಧ್ಯಯನಗಳಿಗೆ ಬುನಾದಿಯನ್ನು ಹಾಕಿದವರು ರಾಬರ್ಟ್ ಬ್ರೂಸ್‌ಪುಟ್. ೩೦ ಮೇ ೧೮೬೩ರಲ್ಲಿ ಚೆನ್ನೈ ಬಳಿಯ ಪಲ್ಲಾವರಮ್‌ದಲ್ಲಿ ಪ್ರಾಚೀನ ಶಿಲಾಯುಗಕ್ಕೆ

ಸೇರಿದ ಉಪಕರಣವೊಂದನ್ನು ಪ್ರಥಮ ಬಾರಿಗೆ ಪತ್ತೆ ಹಚ್ಚಿದರು. ಹಾಗೆಯೇ ಕರ್ನಾಟಕದಲ್ಲಿ ೧೮೭೩ ರಲ್ಲಿ ಮಲಪ್ರಭಾ ನದಿ ಪ್ರದೇಶದಲ್ಲಿಯ ಖ್ಯಾಡ್, ಢಾಣಕ ಶಿರೂರ, ಮೇಣಸಗಿಗಳಲ್ಲಿ ಮಾನವಸಂಸ್ಕೃತಿಯ ಅತ್ಯಂತ ಪ್ರಾಚೀನ ಹಂತದ ಸುಮಾರು ಎರಡು ಲಕ್ಷಕ್ಕೂ ಪೂರ್ವದ ಆದಿ ಹಳೆಶಿಲಾಯುಗ ಹಂತದ ಕಲ್ಲಿನ ಉಪಕರಣಗಳನ್ನು ಹೇರಳ ಸಂಖ್ಯೆಯಲ್ಲಿ ಶೋಧಿಸಿದರು.[೨೬] ಇವುಗಳನ್ನು ಗಮನದಲ್ಲಿಟ್ಟುಕೊಂಡು ೧೯೫೦ರ ದಶಕದಲ್ಲಿ ಆರ್.ವಿ. ಜೋಶಿಯವರು ಇಡೀ ನದಿಯ ಬಯಲು ಪ್ರದೇಶವನ್ನು ಅನ್ವೇಷಣೆ ಮಾಡಿ, ತೊರಗಲ್ಲಿನಿಂದ ಕೂಡಲ ಸಂಗಮದವರೆಗೆ ೨೦ಕ್ಕೂ ಹೆಚ್ಚು ನೆಲೆಗಳನ್ನು ಶೋಧಿಸಿದರು.[೨೭]

ಸುಮಾರು ೧೯೫೭ರಲ್ಲಿ ಕೇಂದ್ರ ಸರಕಾರದ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಔರಂಗಬಾದ್ ವೃತ್ತವು ವಿಜಾಪುರ ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲೂ ಕ್ಷೇತ್ರಕಾರ್ಯ ಕೈಗೊಂಡು ಪ್ರಾಚೀನ ನೆಲೆಗಳನ್ನು ಶೋಧಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಅ. ಸುಂದರ ಅವರು ಇಂಡಿ, ಸಿಂದಗಿ ಮತ್ತು ಮುದ್ದೇಬಿಹಾಳ ತಾಲೂಕಿನ ಪ್ರತಿಗ್ರಾಮ ಹಾಗೂ ಪರಿಸರದಲ್ಲಿ ೧೯೬೩ರವರೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾ, ಶಿಲಾ-ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದ ನೆಲೆಗಳನ್ನು ಬೆಳಕಿಗೆ ತಂದರು. ಅಲ್ಲದೆ ಇದರೊಂದಿಗೆ ಆದಿ ಇತಿಹಾಸ ಕಾಲದ ನೆಲೆಗಳು, ದೇವಾಲಯ, ಮಧ್ಯ-ಅಂತ್ಯ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ಮುದ್ದೇಬಿಹಾಳ ತಾಲೂಕಿನ ೫ ನೆಲೆಗಳನ್ನು ಸಾಲವಾಡಗಿಯಲ್ಲಿ ಶೋಧಿಸಿದರು. ಎಂ. ಶೇಷಾದ್ರಿ ಮತ್ತು ಕೆ. ಪದ್ದಯ್ಯ ಅವರು ಈ ನೆಲೆಗಳನ್ನು ಕುರಿತು ವಿಶೇಷ ಅಧ್ಯಯನವನ್ನು ಕೈಗೊಂಡಿದ್ದಾರೆ.[೨೮]

೧೯೭೦ರಲ್ಲಿ ಡೆಕ್ಕನ್ ಕಾಲೇಜಿನ ಸಂಶೋಧನಾ ವಿದ್ಯಾರ್ಥಿ ಆರ್.ಎಸ್. ಪಪ್ಪು ಅವರು ಕೃಷ್ಣಾನದಿ ಪ್ರದೇಶವನ್ನು ಪರಿಶೀಲನೆ ಮಾಡಿ ಅಲ್ಲಿಯ ಹಳೆಶಿಲಾಯುಗದ ಆದಿ ಮತ್ತು ಮಧ್ಯ ಹಂತಗಳ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿದರು. ಬಾಗಲಕೋಟೆ ಸಮೀಪದಲ್ಲಿರುವ ಆದಿ ಹಳೆಶಿಲಾಯುಗದ ನೆಲೆ ಅನಗವಾಡಿಯಲ್ಲಿ ಉತ್ಖನನವನ್ನು ಮಾಡಿದರು.[೨೯] ೧೯೯೨ರಲ್ಲಿ ವಾಸುದೇವ ಬಡಿಗೇರ ಅವರು ಬಸವನ ಬಾಗೇವಾಡಿ ತಾಲೂಕಿನ ಗ್ರಾಮಗಳಲ್ಲಿ ಸಂಶೋಧನೆ ಕೈಗೊಂಡು ಮಧ್ಯ-ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ಆದಿ ಮತ್ತು ಮಧ್ಯ ಇತಿಹಾಸ ಕಾಲದ ನೆಲೆಗಳನ್ನು ಪತ್ತೆ ಹಚ್ಚಿದರು. ೧೯೯೬ರಲ್ಲಿ ಅ. ಸುಂದರ ಅವರ ಮಾರ್ಗದರ್ಶನದಲ್ಲಿ ಆರ್.ಎಸ್. ಬಿರಾದಾರ ಅವರು ಇಂಡಿ, ಸಿಂದಗಿ ಮತ್ತು ಮುದ್ದೇಬಿಹಾಳ ತಾಲೂಕುಗಳಲ್ಲಿ ಕೈಗೊಂಡ ಕ್ಷೇತ್ರಾನ್ವೇಷಣೆಯಿಂದ ಆದಿ-ಮಧ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ಬೃಹತ್‌ಶಿಲಾಯುಗ ಮತ್ತು ಆದಿ ಇತಿಹಾಸ ಕಾಲಕ್ಕೆ ಸೇರಿದ ನೆಲೆಗಳನ್ನು ಶೋಧಿಸಿದರು. ೨೦೦೮ರಲ್ಲಿ ಅ. ಸುಂದರ ಅವರು ಬಸವನ ಬಾಗೇವಾಡಿಯಿಂದ ವಾಯವ್ಯ ಭಾಗಕ್ಕೆ ಸುಮಾರು ೫ ಕಿ.ಮೀ. ದೂರದಲ್ಲಿರುವ ಮಸಬಿನಾಳ ರಸ್ತೆಯ ಹೊಲದಲ್ಲಿ ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗಕ್ಕೆ ಸೇರಿದ ಅವಶೇಷಗಳನ್ನು ಗುರುತಿಸಿದ್ದಾರೆ.[೩೦]

ಹಳೆಶಿಲಾಯುಗ

ಮಾನವನ ಸಾಂಸ್ಕೃತಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಆದಿ ಹಳೆಯ ಶಿಲಾಯುಗದಿಂದ ಪುರಾತತ್ವೀಯ ಅವಶೇಷಗಳು ಕಂಡುಬರುತ್ತವೆ. ಹಳೆಶಿಲಾಯುಗವನ್ನು ಆದಿ, ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗವೆಂದು ಮೂರು ಘಟ್ಟಗಳನ್ನಾಗಿ ವಿಂಗಡಿಸಲಾಗಿದೆ. ಈ ಮೂರು ಕಾಲಘಟ್ಟಗಳಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅನೇಕ ನೆಲೆಗಳು ಪತ್ತೆಯಾಗಿವೆ. ಪ್ರಮುಖವಾಗಿ ಚನ್ನೆಗಾಂವ(ಇಂಡಿ ತಾಲ್ಲೂಕು), ಅಮರಗೋಳ, ಆಲಮಟ್ಟಿ, ಇಂಗಳೇಶ್ವರ, ಕಾತರಕಿ, ಕೊಲ್ಹಾರ, ಸಾತಿಹಾಳ,[೩೧] ಮಸಬಿನಾಳ[೩೨](ಬಸವನ ಬಾಗೇವಾಡಿ ತಾಲೂಕು), ಹೊನ್ನಳ್ಳಿ(ವಿಜಾಪುರ ತಾಲೂಕು), ಕುಚಬಾಳ, ಯಲಗೂರು, ಶೆಲ್ಲಗಿ, ಸಾಲವಾಡಗಿ(ಮುದ್ದೇಬಿಹಾಳ ತಾಲೂಕು), ಭಂಟನೂರು(ಸಿಂದಗಿ ತಾಲೂಕು) ಗ್ರಾಮಗಳಾಗಿವೆ. ಈ ಸಂಸ್ಕೃತಿಯ ಘಟ್ಟಕ್ಕೆ ಸಂಬಂಧಿಸಿದಂತೆ ಹೆರೆಚಕ್ಕೆ, ಮೊನೆ, ಇಬ್ಬದಿ ನೀಳಚಕ್ಕೆ, ಮಚ್ಚುಗತ್ತಿ, ಕೈಗೊಡಲಿ ಪತ್ತೆಯಾಗಿದ್ದು ಇವು ಜಾಸ್ಪರ್, ಕ್ವಾರ್ಟ್ಸೈಟ್, ಚರ್ಟ್ ಶಿಲೆಗಳಲ್ಲಿ[೩೩] ಕಂಡುಬರುತ್ತವೆ.

ಸೂಕ್ಷ್ಮಶಿಲಾಯುಗ

ಅಂತ್ಯ ಹಳೆಶಿಲಾಯುಗದ ಮುಂದಿನ ಹಂತವನ್ನು ಸೂಕ್ಷ್ಮಶಿಲಾಯುಗ ಎಂದು ಕರೆಯಲಾಗಿದೆ. ಈ ಹಂತದ ಕಲ್ಲಿನ ಉಪಕರಣಗಳು ಆದಿ ಹಳೆಶಿಲಾಯುಗದ ದೊಡ್ಡ ದೊಡ್ಡ ಕಲ್ಲಿನ ಉಪಕರಣಗಳಿಗೆ ಹೋಲಿಸಿದಾಗ ಅತಿ ಸೂಕ್ಷ್ಮವಾಗಿವೆ. ಈ ಹಂತಕ್ಕೆ ಸಂಬಂಧಿಸಿದ ನೆಲೆಗಳು ಇಂಡಿ ತಾಲೂಕಿನ ನಿಂಬಾಳ, ಬಸವನ ಬಾಗೇವಾಡಿ ತಾಲೂಕಿನ ಸಾತಿಹಾಳ, ಗೊಳಸಂಗಿ, ಡೋಣೂರ.[೩೪] ವಿಜಾಪುರ ತಾಲೂಕಿನ ಇಟ್ಟಂಗಿಹಾಳ, ಕಗ್ಗೋಡ, ಗೊಳಸಂಗಿ, ತಿಗಣೆಬಿದರಿ, ಬೂದಿಹಾಳ, ಯಕ್ಕುಂಡಿ, ಯತ್ನಾಳ, ಲೋಹಗಾಂವ, ಸಾರವಾಡ, ಹಳಗಣಿ, ಹೊನಗನಹಳ್ಳಿ. ಮುದ್ದೇಬಿಹಾಳ ತಾಲೂಕಿನ ಅಡವಿ ಹುಲಗಬಾಳ, ಅರಸನಾಳ, ಇಂಚಗಾಳ, ಕಣಿಕೇರಿ, ಕವಡಿಮಟ್ಟಿ, ಕುಚಬಾಳ, ಕುಂಟೋಜಿ, ಗೋನಾಳ, ಚವ್ವನಬಾವಿ, ಜಕ್ಕೇರಲ, ಜಂಗಮುರಾಳ, ಡೊಂಕಮೇಡು, ನಾಗೂರು, ಪತೇಪುರ, ಬನೋಶಿ, ಬೈಚಬಾಳ, ಬಂಗಾರಗುಂಡ, ಮಟಕ ದೇವನಹಳ್ಳಿ, ಮಸಕನಾಳ, ಮಾಸನ್‌ಗೇರಿ, ಶಿವಪುರ, ಸಾಲವಾಡಗಿ, ಸಿದ್ಧಾಪುರ, ಹೊಕ್ರಾಣಿ, ಸಿಂದಗಿ ತಾಲೂಕಿನ ಇಬ್ರಾಹಿಂಪುರ, ದೇವೂರ[೩೫] ಗ್ರಾಮಗಳಲ್ಲಿವೆ. ಡೋಣಿ ನದಿ ಮತ್ತು ಅದರ ಆಸುಪಾಸಿನಲ್ಲಿ ಸೂಕ್ಷ್ಮಶಿಲಾಯುಗದ ಶಿಲೆಯ ಉಪಕರಣಗಳು, ಮಡಿಕೆ ಚೂರು ಮತ್ತು ಮೊಳೆಯ ಚೂರುಗಳು ಕಂಡುಬಂದಿವೆ. ಈ ನೆಲೆಗಳಲ್ಲಿ ಕಾಣಸಿಗುವ ಶಿಲಾ ಉಪಕರಣಗಳು, ಸಮೂರವಾದ ನೀಳವಾದ ಚಕ್ಕೆಗಳು, ಕೊರೆಯುವ ಉಪಕರಣಗಳು, ಬಾಣದ ಮೊನೆಗಳು ಹಾಗೂ ಅರ್ಧಚಂದ್ರಾಕೃತಿಯ, ತ್ರಿಕೋನಾಕೃತಿಯ ಮತ್ತು ಟ್ರೆಪಿಜಿಯಮ್ ಆಕೃತಿಯ ಉಪಕರಣಗಳು ಮುಂತಾದವುಗಳನ್ನು ಚರ್ಟ್, ಬ್ಯಾಂಡೆಡ್, ಅಗೆಟ್, ಶಿಲೆಗಳಲ್ಲಿ ತಯಾರಿಸಲಾಗಿದೆ.[೩೬]

ನೂತನ ಶಿಲಾ ಮತ್ತು ಶಿಲಾ ತಾಮ್ರಯುಗ

ಮಾನವ ವಿಕಾಸದಲ್ಲಿ ಅತ್ಯಂತ ಮಹತ್ವದ ಹಂತ ಇದಾಗಿದೆ. ಉಜ್ಜಿ ನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು, ಕೃಷಿ ವಿಸ್ತರಣೆ, ಅಧಿಕ ಆಹಾರ ಉತ್ಪಾದನೆ, ಪಶುಸಂಗೋಪನೆ, ಮಡಕೆಗಳ ತಯಾರಿಕೆಯಲ್ಲಿ ವೈವಿಧ್ಯತೆ, ಸಂಘಟಿತ ಸಮಾಜ ಹಾಗೂ ವ್ಯವಸ್ಥಿತ ಗ್ರಾಮೀಣ ಬದುಕನ್ನು ಸಾಧಿಸಿದ ಹಂತವೇ ಇದಾಗಿದೆ. ನವಶಿಲಾಯುಗ ಸಂಸ್ಕೃತಿ ವಿಕಸನಗೊಳ್ಳುವ ಕೊನೆಯ ವೇಳೆಗೆ ತಾಮ್ರದ ಪರಿಚಯವಾಯಿತು. ತಾಮ್ರದ ಲೋಹಗಳಿಂದ ತಯಾರಿಸಿದ ಆಯುಧಗಳ ಬಳಕೆಯೊಂದಿಗೆ ಶಿಲಾಯುಧಗಳು ಬಳಕೆಯಲ್ಲಿದ್ದುದರಿಂದ ಈ ಸಾಂಸ್ಕೃತಿಕ ಕಾಲಘಟ್ಟವನ್ನು ಶಿಲಾ-ತಾಮ್ರಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಹಂತಕ್ಕೆ ಸಂಬಂಧಪಟ್ಟ ಸುಮಾರು ೭೦ಕ್ಕಿಂತಲೂ ಹೆಚ್ಚು ನೆಲೆಗಳು[೩೭] ಜಿಲ್ಲೆಯಲ್ಲಿ ಕಂಡುಬರುತ್ತವೆ. ಅಲ್ಲದೆ ಈ ನೆಲೆಗಳಲ್ಲಿ ಸೂಕ್ಷ್ಮಶಿಲಾಯುಗದ ಮುಂದುವರೆದ ಸಾಂಸ್ಕೃತಿಕ ಹಂತವನ್ನು ಇಂಗಳೇಶ್ವರ ಮತ್ತು ಕೆಲವು ನೆಲೆಗಳಲ್ಲಿ ಗುರುತಿಸಬಹುದು.[೩೮] ಉಜ್ಜಿ ನಯಗೊಳಿಸಿದ ಕೊಡಲಿಗಳು(ಟ್ರ್ಯಾಪ್ ಶಿಲೆಯಲ್ಲಿವೆ) ಇಬ್ಬದಿ ನೀಳಚಕ್ಕೆ, ಕೆಂಪುವರ್ಣದ ಮಡಕೆಯ ಮೇಲೆ ಕಪ್ಪುಬಣ್ಣದಲ್ಲಿ ಚಿತ್ರಿತವಾಗಿರುವ ಮಡಕೆ ಭಾಗ ದೊರೆತಿದ್ದು ಬ್ರಹ್ಮಗಿರಿ ಮತ್ತು ಜೋರ್ವೆ ಮಾದರಿಯಲ್ಲಿವೆ.

ಕಬ್ಬಿಣ-ಬೃಹತ್‌ಶಿಲಾಯುಗ

ದೊಡ್ಡ ದೊಡ್ಡ ಶಿಲಾಬಂಡೆಗಳನ್ನು ಬಳಸಿ ಶಿಲಾವೃತ್ತ, ಕಲ್ಮನೆ, ನಿಲಿಸುಗಲ್ಲುಗಳ ಸಮಾಧಿಗಳ ನಿರ್ಮಾಣ ಹೀಗೆ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್‌ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಕಬ್ಬಿಣ ತಯಾರಿಸುವ ತಂತ್ರಗಾರಿಕೆ ಈ ಸಂಸ್ಕೃತಿಯ ಮತ್ತೊಂದು ವಿಶಿಷ್ಟ ಲಕ್ಷಣ. ಈ ಹಂತಕ್ಕೆ ಸಂಬಂಧಿಸಿದಂತೆ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಕಿಲರಹಟ್ಟಿ, ತಾಳಿಕೋಟೆ, ಬೂದಿಹಾಳ, ಮಾವಿನಭಾವಿ, ಸಾಲವಾಡಗಿ, ಸಿಂದಗಿ ತಾಲೂಕಿನ ಕುಮಶಿ, ಜಲಪುರ, ಮಾದನಹಳ್ಳಿಗಳಲ್ಲಿ ವಾಸ್ತವ್ಯದ ಮತ್ತು ಗೋರಿನೆಲೆಗಳು[೩೯] ಕಂಡುಬಂದಿವೆ. ಈ ಸಂಸ್ಕೃತಿಗೆ ಸಂಬಂಧಿಸಿದ ಕಲ್ಲುಗುಪ್ಪೆಗಳು, ಶಿಲಾವೃತ್ತಗಳು, ಕಪ್ಪು-ಕೆಂಪು ಮಡಕೆ ಚೂರುಗಳ ಅವಶೇಷಗಳು ಈ ನೆಲೆಗಳಲ್ಲಿ ಪತ್ತೆಯಾಗಿವೆ. ಕಬ್ಬಿಣವು ಬಳಕೆಯಲ್ಲಿದ್ದುದರಿಂದ ದೊಡ್ಡ ಪ್ರಮಾಣದಲ್ಲಿ ಗಿಡ ಮರಗಳನ್ನು ಕಡಿದು ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಲು ಸಾಧ್ಯವಾಯಿತು. ಸಾಮಾಜಿಕ ಸಂಘಟನೆ ಹಾಗೂ ವ್ಯಾಪಾರೀಕರಣದಿಂದ ಆರ್ಥಿಕಾಭಿವೃದ್ಧಿಯಾಗಿ ಸಾಂಸ್ಕೃತಿಕ ಸುಧಾರಣೆ ಮತ್ತು ನಗರ ಪಟ್ಟಣಗಳ ಬೆಳವಣಿಗೆಯಾದವು.[೪೦]

೨.೩. ಇತಿಹಾಸ ಕಾಲ

ಮೌರ್ಯರು

ಕ್ರಿ.ಪೂ. ೪ನೇ ಶತಮಾನದಲ್ಲಿ ನಂದ ವಂಶದ ಧನನಂದನನ್ನು ಸೋಲಿಸಿ ಚಂದ್ರಗುಪ್ತನು ಮೌರ್ಯವಂಶವನ್ನು ಸ್ಥಾಪಿಸಿದನು. ಈತನ ಕಾಲಾವಧಿಯು ಭಾರತೀಯ ಇತಿಹಾಸದಲ್ಲೇ ಉಜ್ವಲವಾದದ್ದು.

ಏಕೆಂದರೆ ಮ್ಯಾಸಿಡೋನಿಯಾದ ಸಂಕೋಲೆಯಿಂದ ಈ ದೇಶವನ್ನು ವಿಮುಕ್ತಗೊಳಿಸಿ ಮೊಟ್ಟಮೊದಲ ಬಾರಿಗೆ ಭಾರತದ ಬಹುಭಾಗವನ್ನು ಒಂದೇ ಪ್ರಭುತ್ವದ ಅಡಿಯಲ್ಲಿ ಒಗ್ಗೂಡಿಸಿ ರಾಜಕೀಯ ಏಕೀಕರಣ ಸಾಧಿಸಿದನು.[೪೧] ಈ ಮನೆತನದ ಪ್ರಮುಖ ಅರಸನಾದ ಅಶೋಕನು ಹೊರಡಿಸಿದ ಶಾಸನಗಳು ತನ್ನ ರಾಜ್ಯದ ದಕ್ಷಿಣದಲ್ಲಿದ್ದ ಕರ್ನಾಟಕದಲ್ಲಿಯೂ ಕಂಡುಬಂದಿದ್ದು ಅವು ಬೃಹತ್‌ಬಂಡೆ ಮತ್ತು ಲಘುಪ್ರಸ್ತರ ಶಾಸನಗಳಾಗಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕವು ತನ್ನ ಚಾರಿತ್ರಿಕ ಘಟ್ಟವನ್ನು ಗುರುತಿಸಿಕೊಳ್ಳುವುದು ಮೌರ್ಯರ ಕಾಲದಿಂದ. ಈ ಶಾಸನಗಳು ದೊರೆತಿರುವ ಸ್ಥಳಗಳೆಂದರೆ ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದಯಗೊಳಂ, ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗೊಂಡಂ, ಚಿತ್ರದುರ್ಗ ಜಿಲ್ಲೆಯ ಮಸ್ಕಿ, ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆತಿವೆ.[೪೨] ಈ ಪ್ರದೇಶಗಳು ನೇರವಾಗಿ ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ಹೇಳಬಹುದು. ಅಲ್ಲದೆ ಬನವಾಸಿ, ಚಂದ್ರವಳ್ಳಿ, ಹಲವಾಗಿಲು, ಧಾರವಾಡ, ಚಿಕ್ಕಸಿಂದಗಿ, ಮಸ್ಕಿ, ವಡಗಾಂವ್–ಮಾಧವಪುರ, ರಾಯಚೂರು, ಸನ್ನತಿ ಮತ್ತು ಗುಲಬರ್ಗಾಗಳಲ್ಲಿ ಪತ್ತೆಯಾಗಿರುವ ಪಂಚ್‌ಮಾರ್ಕ್ಡ್ ನಾಣ್ಯಗಳು[೪೩] ಮೌರ್ಯರ ಕಾಲಾವಧಿಯದಾಗಿದ್ದು. ಕರ್ನಾಟಕದಲ್ಲಿ ಇವರ ಆಳ್ವಿಕೆಯನ್ನು ಖಚಿತಪಡಿಸುತ್ತವೆ. ಆದರೆ ವಿಜಾಪುರ ಜಿಲ್ಲೆಯಲ್ಲಿ ಮೌರ್ಯರಿಗೆ ಸಂಬಂಧಿಸಿದ ಯಾವುದೇ ಪುರಾತತ್ವೀಯ ಅವಶೇಷಗಳು ಇದುವರೆಗೂ ಪತ್ತೆಯಾಗಿಲ್ಲ. ಆದರೂ ಈ ಪ್ರದೇಶದ ಸುತ್ತಮುತ್ತಲಿರುವ ಜಿಲ್ಲೆಗಳಲ್ಲಿ ಮೌರ್ಯರ ಆಡಳಿತಾವಧಿಗೆ ಸಂಬಂಧಿಸಿದ ಅವಶೇಷಗಳು ಲಭಿಸಿರುವುದರಿಂದ ವಿಜಾಪುರ ಜಿಲ್ಲೆಯೂ ಇವರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ತರ್ಕಿಸಬಹುದು.

ಶಾತವಾಹನರು(ಕ್ರಿಪೂ. ೧೨೧ ರಿಂದ ಕ್ರಿಶ. ೧೭೪)

ಮೌರ್ಯರ ನಂತರ ಶುಂಗರು, ಕಣ್ವರು, ಶಾತವಾಹನರು, ಚೇದಿ ರಾಜಮನೆತನಗಳು ತಲೆಯೆತ್ತಿದವು. ಆದರೆ ಇವರ ಆಳ್ವಿಕೆಗೆ ಸಂಬಂಧಿಸಿದ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲದ ಕಾರಣ ಈ ಕಾಲಾವಧಿಯ ರಾಜಕೀಯ ಇತಿಹಾಸವು ಸಾಕಷ್ಟು ಬೆಳಕಿಗೆ ಬಂದಿಲ್ಲ. ದಕ್ಷಿಣದಲ್ಲಿ ಶಾತವಾಹನರು, ಪೂರ್ವದಲ್ಲಿ ಅವರ ಸಮಕಾಲೀನರಾಗಿ ಚೇದಿರಾಜರು ಆಳುತ್ತಿದ್ದರು ಎಂದು ಲಭ್ಯವಾದ ಶಾಸನಗಳಿಂದ ತಿಳಿದು ಬರುವುದು.[೪೪] ಶಾತವಾಹನರ ಶಾಸನಗಳು ಮತ್ತು ನಾಣ್ಯಗಳು ಸಿಕ್ಕಿರುವ ಸ್ಥಳಗಳಿಂದ ಇವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ದಖ್ಖನಿನ ಪಶ್ಚಿಮಭಾಗದಲ್ಲಿ ಆರಂಭಿಸಿ ಪೂರ್ವ ಮತ್ತು ದಕ್ಷಿಣದ ಕಡೆಗೆ ವಿಸ್ತರಿಸಿ ರಾಜಕೀಯ ಪ್ರಭಾವವನ್ನು ಸ್ಥಾಪಿಸಿದರೆಂಬ ಅಭಿಪ್ರಾಯವಿದೆ. ಈ ಭಾಗಗಳೇ ಕ್ರಮೇಣ ಆಂಧ್ರ, ಕರ್ನಾಟಕ ಎಂದು ಹೆಸರು ಪಡೆಯಿತು.[೪೫]

ಒಂದು ಸಮೀಕ್ಷೆಯಂತೆ ಕರ್ನಾಟಕದಲ್ಲಿ ಶಾತವಾಹನರ ಕಾಲದ ಸಂಸ್ಕೃತಿ ನೆಲೆಗೊಂಡಿದ್ದ ಅಥವಾ ಆ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿದ್ದ ನೆಲೆಗಳ ಸಂಖ್ಯೆ ಸುಮಾರು ೨೫೦. ಈ ಸಂಸ್ಕೃತಿಯ ಸಮಾನ ಲಕ್ಷಣಗಳು ಇಲ್ಲಿಯ ಬಹುಪಾಲು ನೆಲೆಗಳಲ್ಲಿ ಕಂಡುಬಂದಿರುವುದುಂಟು.[೪೬] ಬನವಾಸಿಯಲ್ಲಿ ದೊರೆತ ಹಾರಿತೀಪುತ್ರ ಮತ್ತು ಆತನ ಮಗಳು ನಾಗಶ್ರೀ ಹಾಕಿಸಿದ ನಾಗಪ್ರತಿಮೆ

ಮೇಲಿನ ದಾನಶಾಸನ, ತಾಳಗುಂದ ದೇವಾಲಯದಲ್ಲಿ ಶಾತಕರ್ಣಿಯು ಪ್ರಣವೇಶ್ವರ ಲಿಂಗವನ್ನು ಉಪಾಸಿಸಿದುದನ್ನು ಪ್ರಸ್ತಾಪಿಸುವ ತಾಳಗುಂದ ಸ್ತಂಭಶಾಸನ, ಕರ್ನಾಟಕದ ಉತ್ತರಭಾಗದ ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ಕೈಗೊಂಡಿರುವ ಭೂಶೋಧನೆಯಿಂದ ಶಾತವಾಹನರಿಗೆ ಸಂಬಂಧಿಸಿದ ೪೦ ಪ್ರಮುಖ ಶಾಸನಗಳು, ಸೇರಿ ೮೦ಕ್ಕೂ ಹೆಚ್ಚು ಕಲ್ಬರಹಗಳು ಪತ್ತೆಯಾಗಿವೆ.[೬೭] ಈ ಭೂಶೋಧನೆಯಿಂದ ಬೆಳಕಿಗೆ ಬಂದ ಹಲವಾರು ವಸ್ತು-ವಿಶೇಷಗಳ ಆಧಾರದಿಂದ ಸನ್ನತಿ ಇದೊಂದು ಶಾತವಾಹನರ ರಾಜಧಾನಿಯಾಗಿರಬಹುದು ಎಂದು ಅಜಯ್‌ಮಿತ್ರಶಾಸ್ತ್ರೀಯವರು ಅಭಿಪ್ರಾಯ ಪಡುತ್ತಾರೆ.

ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ಶಾತವಾಹನರಿಗೆ ಸಂಬಂಧಿಸಿದ ಇಟ್ಟಿಗೆಯ ಕಟ್ಟಡಗಳು, ನಾಣ್ಯಗಳೂ ಮಣ್ಪಾತ್ರೆಯ ಚೂರುಗಳು ಕಂಡುಬಂದಿವೆ. ತದ್ದೆವಾಡಿ(ಇಂಡಿ ತಾಲೂಕು) ಮಸ್ಕನಾಳ ಮತ್ತು ಐಹೊಳೆಯಲ್ಲಿ ಬ್ರಾಹ್ಮಿಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿ 'ಸಿರಿಸತಕಣಿಸ'(ಶ್ರೀ ಸಾತಕರ್ಣಸ್ಯ), ವಾಸಿಠಿ ಪುತನ ಪುಳುಮಾವಿಸ(ವಾಸಿಷ್ಠೀ ಪುತ್ರ ಪುಳುಮಾವಿಸ್ಯ) ಮೊದಲಾದ ಶಾತವಾಹನ ಅರಸುಗಳ ಹೆಸರುಳ್ಳ ಸತುವಿನ ನಾಣ್ಯಗಳು ಸಿಕ್ಕಿವೆ. ಮಲಪ್ರಭಾ ನದಿ ಬಲದಂಡೆ ಮೇಲಿರುವ ವಾಸನ(ನರಗುಂದ ತಾಲೂಕು, ಧಾರವಾಡ ಜಿಲ್ಲೆ) ದಲ್ಲಿ ವಾಸಿಷ್ಠೀ ಪುತ್ರ ಪುಳುಮಾವಿ ಅರಸನ ಕಾಲದಲ್ಲಿ ಚಂಡ ಶಿವದೇವಾಲಯವನ್ನು ಕಟ್ಟಿಸಿದ ವಿಷಯವುಳ್ಳ ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯ ಶಾಸನವೂ ಬೆಳಕಿಗೆ ಬಂದಿದೆ. ಕ್ರಿ.ಶ. ಎರಡನೆಯ ಶತಮಾನದಲ್ಲಿ ಟಾಲೆಮಿಯು ತನ್ನ "A Guide to Geography"ಯಲ್ಲಿ ವಿಜಾಪುರ ಮತ್ತು ಬಾಗಲಕೋಟ ಜಿಲ್ಲೆಯಲ್ಲಿರುವ ಇಂಡಿ, ಕಲಕೇರಿ, ಪಟ್ಟದಕಲ್, ಬಾದಾಮಿ, ಭೀಮಾನದಿಯನ್ನು ಉಲ್ಲೇಖಿಸಿದ್ದಾನೆ.[೬೮] ಈ ಮೇಲೆ ಉಲ್ಲೇಖಿಸಿದ ಎಲ್ಲ ಆಕರಗಳ ಹಿನ್ನೆಲೆಯಲ್ಲಿ ವಿಜಾಪುರ ಪ್ರದೇಶವು ಶಾತವಾಹನರ ಆಡಳಿತಕ್ಕೆ ಒಳಪಟ್ಟಿತು ಎಂದು ಹೇಳಬಹುದು.

ಕದಂಬರು(ಕ್ರಿ.ಶ. ೪ನೆಯ ಶತಮಾನದಿಂದ ಕ್ರಿ.ಶ. ೬ನೆಯ)

ಬನವಾಸಿ ಕದಂಬರು ಶಾತವಾಹನರ ಸಾಮಂತರಾದ ಚುಟುಗಳ ನಂತರ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೩೨೫ರಿಂದ ಕ್ರಿ.ಶ. ೫೪೦ರವರೆಗೆ ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದಾರೆ. ಕರ್ನಾಟಕವನ್ನಾಳಿದ ಕನ್ನಡ ಮೂಲದ ಮೊಟ್ಟ ಮೊದಲ ರಾಜಮನೆತನವೆಂಬ ಹೆಗ್ಗಳಿಕೆಯನ್ನು ಪಡೆದಿದೆ. ಕದಂಬ ವಂಶದ ಮೂಲಪುರುಷನಾದ ಮಯೂರಶರ್ಮನು ಪಲ್ಲವರಿಂದ ಪಶ್ಚಿಮದಲ್ಲಿ ಸಮುದ್ರ, ಪೂರ್ವದಲ್ಲಿ ಪ್ರೇಹಾರಗಳ ಮಧ್ಯದಲ್ಲಿದ್ದ ರಾಜ್ಯವನ್ನು ಪಡೆದನೆಂದು ತಾಳಗುಂದ ಶಾಸನದಿಂದ ತಿಳಿದುಬರುತ್ತದೆ. ಪ್ರೇಹಾರವು ಘಟಪ್ರಹಾರ(ಘಟಪ್ರಭಾ) ಅಥವಾ ಮಲಪ್ರಹಾರ(ಮಲಪ್ರಭಾ) ನದಿಯಾಗಿರಬೇಕೆಂದು ಕೆಲವು ಇತಿಹಾಸಕಾರರು ಅಭಿಪ್ರಾಯವಾಗಿದೆ.[೬೯] ಮಯೂರಶರ್ಮನ ನಂತರ ಕಂಗವರ್ಮ, ಭಗೀರಥವರ್ಮ, ಕಾಕುಸ್ಥವರ್ಮ, ಶಾಂತಿವರ್ಮ, ಒಂದನೆಯ ಕೃಷ್ಣವರ್ಮ, ಮೃಗೇಶವರ್ಮ, ಶಿವಸ್ಕಂದವರ್ಮ, ವಿಷ್ಣುವರ್ಮ, ಸಿಂಹವರ್ಮ, ಎರಡನೆಯ ಕೃಷ್ಣವರ್ಮರು ಈ ವಂಶದಲ್ಲಿ ಆಡಳಿತ ಮಾಡಿದ ಅರಸರಾಗಿದ್ದಾರೆ.

ಬನವಾಸಿ, ಗುಡ್ನಾಪುರ, ಹಲಸಿ, ಪಟ್ಟದಕಲ್ಲು, ಐಹೊಳೆ, ಹೊಸ ಮಹಾಕೂಟ ಮತ್ತು ನಾಗರಾಳಗಳಲ್ಲಿ ಇವರ ಕಾಲಾವಧಿಯ ಹಲವು ದೇವಾಲಯದ ಇಟ್ಟಿಗೆಯ ಅವಶೇಷಗಳು ಬನವಾಸಿ ಕದಂಬರ ಕಾಲದವು ಎಂದು ಅ. ಸುಂದರ ಅವರು ಅಭಿಪ್ರಾಯಪಡುತ್ತಾರೆ.[೫೦] ಈ ಪ್ರದೇಶಗಳಲ್ಲಿ ಮಣ್ಣಿನ ಮತ್ತು ಇಟ್ಟಿಗೆಯಿಂದ ನಿರ್ಮಿಸಿದ ಕೋಟೆಗೋಡೆಗಳು ಕಂಡುಬಂದಿದ್ದು ಅವು ಕದಂಬರ ಕಾಲಾವಧಿಯಲ್ಲಿ ನಿರ್ಮಿಸಲ್ಪಟ್ಟವುಗಳಾಗಿವೆ ಎಂದು ಎಸ್.ಕೆ. ಜೋಶಿ ಅವರು ಹೇಳುತ್ತಾರೆ.

ಕದಂಬರ ಕಾಲದ ಶಾಸನಗಳು ಮತ್ತು ಪುರಾತತ್ವ ಅವಶೇಷಗಳನ್ನಿಟ್ಟುಕೊಂಡು ನೋಡಿದಾಗ ಕದಂಬರ ರಾಜ್ಯವು ಉತ್ತರದಲ್ಲಿ ವಿಜಾಪುರ ಜಿಲ್ಲೆ(ಸಿಂಧುಥಯರಾಷ್ಟ್ರ–ಸಿಂದಗಿ ತಾಲೂಕು, ಕರ್ಣೇಸಕನದಿ–ಕೃಷ್ಣಾನದಿ), ದಕ್ಷಿಣದಲ್ಲಿ ಹಾಸನ(ಮರುಕರ ವಿಷಯ–ತುಮಕೂರು ತಾಲೂಕಿನ ಭಾಗ, ತಗರೇ–ಹಾಸನ ಜಿಲ್ಲೆಯ ಬೇಲೂರು ತಾಲೂಕು), ಪಶ್ಚಿಮಕ್ಕೆ ಶಿವಮೊಗ್ಗ ಜಿಲ್ಲೆ ಮತ್ತು ಸಮುದ್ರ(ಮಳವಳ್ಳಿ, ತಾಳಗುಂದ–ಶಿವಮೊಗ್ಗ ಜಿಲ್ಲೆ), ಪೂರ್ವದಲ್ಲಿ ಶ್ರೀಶೈಲ ಇವು ಮೇರೆಯಾಗಿದ್ದ ಪ್ರದೇಶವನ್ನು ಒಳಗೊಂಡಿತ್ತೆಂದು ಗೊತ್ತಾಗುತ್ತದೆ.[೫೧] ಇದರಿಂದ ವಿಜಾಪುರ ಜಿಲ್ಲೆಯ ಪ್ರದೇಶವು ಇವರ ರಾಜ್ಯದಲ್ಲಿ ಅಂತರ್ಗತವಾಗಿತ್ತೆಂದು ತಿಳಿಯಬಹುದು.

ಬಾದಾಮಿ ಚಾಳುಕ್ಯರು(ಕ್ರಿ.ಶ. ೫೭೮ ರಿಂದ ಕ್ರಿ.ಶ. ೭೫೭)

ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚಾಳುಕ್ಯರು ಕ್ರಿ.ಶ. ೫೪೦ರಿಂದ೭೫೭ ರವರೆಗೆ ಆಳ್ವಿಕೆಯನ್ನು ಮಾಡಿದ್ದಾರೆ. ಶಾತವಾಹನರ ನಂತರ ದಕ್ಷಿಣ ಭಾರತದಲ್ಲಿ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕ್ರಿ.ಶ. ೫೪೦ರಲ್ಲಿ ಕದಂಬರನ್ನು ಸೋಲಿಸಿ ಒಂದನೇ ಪುಲಕೇಶಿಯು ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈತನ ಕಾಲಾವಧಿಯಲ್ಲಿ ಕ್ರಿ.ಶ. ೫೪೩ರಲ್ಲಿ ಬಾದಾಮಿಯಲ್ಲಿ ಅಭೇದ್ಯವಾದ ಕೋಟೆಯನ್ನು ಕಟ್ಟಿ ತನ್ನ ರಾಜ್ಯವನ್ನು ಭದ್ರಪಡಿಸಿದನೆಂದು ಬಾದಾಮಿಯಲ್ಲಿ ದೊರೆತ ಬಂಡೆಗಲ್ಲು ಶಾಸನದಿಂದ ತಿಳಿಯುತ್ತದೆ.[೫೨] ಕ್ರಿ.ಶ. ೫೪೩ರಲ್ಲಿ ಬಾದಾಮಿಯಲ್ಲಿ ನಿರ್ಮಿಸಿದ ಕೋಟೆಯು ಪ್ರಥಮ ಶಾಸನೋಕ್ತ ಕೋಟೆಯಾಗಿದೆ. ಅನಂತರ ಅಧಿಕಾರಕ್ಕೆ ಬಂದ ಒಂದನೆಯ ಕೀರ್ತಿವರ್ಮ ಮಂಗಳೇಶ, ಎರಡನೇ ಪುಲಕೇಶಿ ಅವಧಿಯಲ್ಲಿ ರಾಜ್ಯವನ್ನು ವಿಸ್ತರಿಸಿದ್ದು ಕಂಡುಬರುತ್ತದೆ. ಎರಡನೇ ಪುಲಕೇಶಿಯು ದಕ್ಷಿಣ ಭಾರತದ ಎಲ್ಲ ರಾಜರುಗಳನ್ನು ಸೋಲಿಸಿ ಸಾರ್ವಭೌಮನಾಗಿದ್ದನು. ರವಿಕೀರ್ತಿ ರಚಿಸಿದ ಐಹೊಳೆ ಶಾಸನವು ಈತನ ಪ್ರಶಸ್ತಿಯನ್ನು ವಿವರಿಸುತ್ತದೆ. ಈತನ ಅವಧಿಯಲ್ಲಿ ಸಾಮ್ರಾಜ್ಯವು ಪೂರ್ವದಿಂದ ಪಶ್ಚಿಮ ಸಮುದ್ರದವರೆಗೆ ಉತ್ತರದಲ್ಲಿ ನರ್ಮದಾ ನದಿಯವರೆಗೆ ವಿಸ್ತರಿಸಿತ್ತು. ಇವನ ನಂತರ ಸಿಂಹಾಸನವೇರಿದ ಒಂದನೆಯ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ಎರಡನೆಯ ವಿಕ್ರಮಾದಿತ್ಯ ಪ್ರಮುಖರಾಗಿದ್ದಾರೆ. ರಾಷ್ಟ್ರಕೂಟ ಒಂದನೆಯ ಕೃಷ್ಣನು ಕ್ರಿ.ಶ. ೭೫೭ರಲ್ಲಿ ಕೊನೆಯ ಅರಸ ಎರಡನೆಯ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸುವುದರ ಮೂಲಕ ದಂತಿದುರ್ಗನಿಂದ ಸ್ಥಾಪಿಸಲ್ಪಟ್ಟ ರಾಷ್ಟ್ರಕೂಟ ಮನೆತನಕ್ಕೆ ಸ್ವತಂತ್ರ ಅಡಿಪಾಯವನ್ನು ಹಾಕಿದನು.

ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟಗಳಲ್ಲಿ ಅವರ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳು ಕೇಂದ್ರೀಕೃತವಾದ್ದುದು ಅಲ್ಲಿಯ ಶಾಸನಗಳು ಮತ್ತು ಸ್ಮಾರಕಗಳಿಂದ ಸ್ಪಷ್ಟವಾಗುತ್ತದೆ. ಆದರೆ ಸದ್ಯದ ವಿಜಾಪುರ ಜಿಲ್ಲೆಯಲ್ಲಿ ಇವರ ಆಳ್ವಿಕೆಯ ಕುರಿತಾಗಿ ಯಾವುದೇ ಪುರಾತತ್ವೀಯ ಅವಶೇಷಗಳು ಕಂಡುಬಂದಿಲ್ಲ.

ರಾಷ್ಟ್ರಕೂಟರು(ಕ್ರಿ.ಶ. ೭೫೭ ರಿಂದ ೯೭೩)

ಬಾದಾಮಿ ಚಾಲುಕ್ಯರ ಕೊನೆಯ ದೊರೆ ಎರಡನೆಯ(ಇಮ್ಮಡಿ) ಕೀರ್ತಿವರ್ಮನನ್ನು ದಂತಿದುರ್ಗನು ಸೋಲಿಸುವುದರ ಮುಖಾಂತರ ಕ್ರಿ.ಶ. ೭೫೩ರಲ್ಲಿ ರಾಷ್ಟ್ರಕೂಟ ಮನೆತನವನ್ನು ಸ್ಥಾಪಿಸಿದನು. ಮೊದಲು ಏಲಾಪುರ(ಎಲ್ಲೋರ) ಇವರ ರಾಜಧಾನಿಯಾಗಿದ್ದು ಮುಂದೆ ಇಂದಿನ ಗುಲಬರ್ಗಾ ಜಿಲ್ಲೆಯ ಮಳಖೇಡ ಅಥವಾ ಮಾನ್ಯಖೇಟ ಇವರ ರಾಜಧಾನಿಯಾಯಿತು. ದಂತಿದುರ್ಗನ ನಂತರ ಅವನ ಚಿಕ್ಕಪ್ಪ ಒಂದನೇ ಕೃಷ್ಣನು ಸಿಂಹಾಸನವೇರಿದನು. ಈತನು ಚಾಲುಕ್ಯರ ಎರಡನೇ ಕೀರ್ತಿವರ್ಮನನ್ನು ಸಂಪೂರ್ಣವಾಗಿ ಸೋಲಿಸಿ ರಾಷ್ಟ್ರಕೂಟರ ಸಾಮ್ರಾಜ್ಯವನ್ನು ವಿಸ್ತರಿಸುತ್ತಾನೆ. ಹೀಗೆ ಪ್ರಾರಂಭವಾದ ಆಳ್ವಿಕೆಯು ಕ್ರಿ.ಶ. ೯೭೪ರ ವರೆಗೆ ಮುಂದುವರಿಯುತ್ತದೆ. ಇವರ ಆಡಳಿತಕ್ಕೆ ಸಂಬಂಧಪಟ್ಟಂತೆ ವಿಜಾಪುರ ಜಿಲ್ಲೆಯಲ್ಲಿ ಒಟ್ಟು ೮ ಶಾಸನಗಳು ದೊರೆತಿದ್ದು ಜಿಲ್ಲೆಯು ಇವರ ಆಡಳಿತಕ್ಕೆ ಒಳಪಟ್ಟಿದ್ದನ್ನು ಸ್ಪಷ್ಟಪಡಿಸುತ್ತವೆ.

ಅಮೋಘವರ್ಷನಿಗೆ ಸಂಬಂಧಪಟ್ಟಂತೆ ಕ್ರಿ.ಶ. ೮೬೨ರ ಕಾಲಾವಧಿಯ ಎರಡು ಶಾಸನಗಳು ಬಸವನ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿಯಲ್ಲಿ ದೊರೆತಿವೆ. ಇದರಲ್ಲಿ ಎರಡನೇ ಶಾಸನವು ಯಾದವ ವಂಶೋದ್ಭವ ಕನ್ನರಸ(ಮೊದಲನೆಯ ಕೃಷ್ಣ), ನಿರುಪಮದೇವ(ದೃವ), ಜಗತ್ತುಂಗದೇವ (ಮೂರನೆಯ ಗೋವಿಂದ) ಮತ್ತು ಅಮೋಘವರ್ಷರನ್ನು ಹೆಸರಿಸಿ ಗೋಲೆಯಭಟ್ಟನಿಗೆ ಪೂವಿನ ಪಿಪ್ಪರಿಗೆಯನ್ನು ದಾನ ಕೊಟ್ಟಿದ್ದನ್ನು ಹೇಳಲಾಗಿದೆ.[೫೩]

ಅಮೋಘವರ್ಷನ ನಂತರ ಅಧಿಕಾರಕ್ಕೆ ಬಂದ ಎರಡನೆಯ ಕೃಷ್ಣನ ಉಲ್ಲೇಖ ಕಲ್ಯಾಣ ಚಾಳುಕ್ಯ ಅರಸ ಜಗದೇಕಮಲ್ಲನ ಬಸವನ ಬಾಗೇವಾಡಿ ತಾಲೂಕಿನ ಸಾಲವಾಡಗಿ ಶಾಸನದಲ್ಲಿದೆ. ಅಕಾಲ ವರ್ಷೋರ್ಬ್ಬೀನಾಥ ಚಕ್ರವರ್ತಿ ಮಣಿನಾಯಕ ಎಂದು ನಳ, ನಹುಷ ಮೊದಲಾದ ಪೌರಾಣಿಕ ವ್ಯಕ್ತಿಗಳೊಡನೆ ಹೋಲಿಸಿ "ರಾಜಗುಣವಂ ಮೆರೆದಂ"[೫೪] ಎಂದಿದೆ.

ಎರಡನೆಯ ಅಮೋಘವರ್ಷನಿಗೆ ಸಂಬಂಧಿಸಿದೆಂದು ಹೇಳುವ ಇಂಡಿ ತಾಲೂಕಿನ ರೂಗಿ ಶಾಸನವು ಬಹಳ ತೃಟಿತವಾಗಿದ್ದು ನಾಗರಿ ಲಿಪಿಯಲ್ಲಿದೆ. ಈ ಶಾಸನವು ಶಕ ೮೬೩ ಅಂದರೆ ಕ್ರಿ.ಶ. ೯೪೧ಕ್ಕೆ ಸೇರಿದ್ದೆಂದು ಊಹಿಸಬಹುದು. ಕಾರಣ ಹನ್ನೊಂದನೆಯ ಸಾಲಿನಲ್ಲಿ ಅಮೋ........ ಎಂಬ ಉಲ್ಲೇಖವಿದೆ. ಇವನು ಅಮೋಘವರ್ಷನೆಂದು ಕೊಂಡರೆ, ಈ ಶಾಸನವು ರಾಷ್ಟ್ರಕೂಟರದ್ದೆಂದು ತೀರ್ಮಾನಿಸಬಹುದು. ಶಾಸನದಲ್ಲಿ ಕಾಲವನ್ನು ಶಕ. ೮೬೩ ಎಂದು ನಮೂದಿಸಿದ್ದು, ಮಿಕ್ಕ ವಿವರಗಳು ಅಳಿಸಿ ಹೋಗಿವೆ.[೫೫]

ರಾಷ್ಟ್ರಕೂಟರ ಕೊನೆಯ ಅರಸರಲ್ಲಿ ಅತ್ಯಂತ ಸಮರ್ಥನಾದ ಮೂರನೇ ಕೃಷ್ಣನಿಗೆ ಸಂಬಂಧಿಸಿದ ಎರಡು ಶಾಸನಗಳು ಜಿಲ್ಲೆಯಲ್ಲಿ ದೊರೆತಿವೆ. ವಿಜಾಪುರ ಮ್ಯೂಸಿಯಂನಲ್ಲಿರುವ ಕ್ರಿ.ಶ. ೯೪೫ರ ಶಾಸನ ಅಮೋಘವರ್ಷನ ಮಗನಾದ ಅಕಾಲವರ್ಷನು(ಮುಮ್ಮಡಿ ಕೃಷ್ಣ) ಮಾನ್ಯಖೇಟದಲ್ಲಿದ್ದ ಈತನ ನಿಕಟವರ್ತಿ ಮಂತ್ರಿ ನಾರಾಯಣ ಎಂಬುವವನು ಮಹಿಷನಾಡಿನ ಕಾಂಚನ ಮುದುವೊಳಲಿನವನು ಎಂದು ಕ್ರಿ.ಶ. ೯೫೭ರ[೫೬] ಕಾರ್ಜೋಳ ಶಾಸನ ರಾಷ್ಟ್ರಕೂಟ ಕೃಷ್ಣನು ಮೇಲ್ಪಾಟಿಯಲ್ಲಿದ್ದಾಗ, ಇವನ ಸಾಮಂತನಾಗಿ ತೈಲಪಯ್ಯನು ನಾಡನ್ನು(ನಾಡಿನ ಹೆಸರನ್ನು ತಿಳಿಸಿಲ್ಲ) ಆಳುತ್ತಿದ್ದ. ಆಗ ವಿರೇಳು ಕೋಟೆಯ ವ್ಯಕ್ತಿಯೊಬ್ಬ (ಹೆಸರು ಹಾಳಾಗಿದೆ) ಸಂಬಯ್ಯನ ಕೆರೆಗೆ ಹತ್ತು ಮತ್ತರು ಹೊಲವನ್ನು ದಾನ ಬಿಟ್ಟಂತೆ ಹೇಳಿದೆ.[೫೭] ಆದರೆ ಈ ವಿರೇಳು ಕೋಟೆ ಯಾವುದು ಎಂಬುದರ ಬಗ್ಗೆ ತಿಳಿದುಬರುವುದಿಲ್ಲ.

ಕ್ರಿ.ಶ. ೯೬೫ರ ನರಸಲಗಿ ಶಾಸನವು ರಾಷ್ಟ್ರಕೂಟ ದೊರೆ ಅಕಾಳವರ್ಷನು(ಮೂರನೆಯ ಕೃಷ್ಣ) ಆಳುತ್ತಿದ್ದಾಗ, ಅವನ ಸಾಮಂತನಾಗಿ ತೈಲಪರಸನು ತರ್ದವಾಡಿ ಸಾವಿರವನ್ನು ಅಣುಗ ಜೀವಿತದಿಂದ ಆಳುತ್ತಿದ್ದುದನ್ನು ಹೇಳುತ್ತದೆ.[೫೮] ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದಂತೆ ಮುದ್ದೇಬಿಹಾಳ ತಾಲೂಕಿನ ಬಸರಕೋಡ ಗ್ರಾಮದಲ್ಲಿರುವ ಶಾಸನವು ಸುಮಾರು ಎಂಟನೆಯ ಶತಮಾನಕ್ಕೆ ಸೇರುತ್ತದೆ. ಈ ಶಾಸನವು ದೇವಾಲಯವೊಂದನ್ನು ಕಟ್ಟಿಸಿದ ಬಗೆಗೆ ಉಲ್ಲೇಖ ಮಾಡುತ್ತದೆ.[೫೯] ಯರಗಲ್ ಗ್ರಾಮದಲ್ಲಿರುವ ಕ್ರಿ.ಶ. ೭೭೭ರ ವೀರಗಲ್ಲು ಶಾಸನವು ವ್ಯಕ್ತಿಯೋರ್ವನ ಮರಣವನ್ನು ಉಲ್ಲೇಖಿಸಿದೆ.[೬೦] ಈ ಮೇಲಿನ ಎರಡು ಶಾಸನಗಳು ಹೆಚ್ಚು ತೃಟಿತಗೊಂಡಿರುವುದರಿಂದ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

ಈ ಮೇಲೆ ಉಲ್ಲೇಖಿಸಿದ ಶಾಸನಗಳು ಹಾಗೂ ಯಂಕಂಚಿ, ಯರಗಲ್, ಜಟ್ಟಗಿಯಲ್ಲಿರುವ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಪಟ್ಟ ದೇವಾಲಯಗಳು ವಿಜಾಪುರ ಜಿಲ್ಲೆಯಲ್ಲಿ ಇವರ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ. ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದ ಇವರು ರಾಜಧಾನಿ ಮಳಖೇಡದಲ್ಲಿ ಕೋಟೆಯನ್ನು ಕಟ್ಟಿಸಿದ್ದು ತಿಳಿದುಬರುತ್ತದೆ. ಆದರೆ ತದನಂತರ ಕಾಲದಲ್ಲಿ ಅದನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಿದ್ದರಿಂದ ಮೂಲ ಅವಶೇಷಗಳು ಕೂಡ ಉಳಿದುಬಂದಿಲ್ಲ. ಜಿಲ್ಲೆಯಲ್ಲಿ ರಾಷ್ಟ್ರಕೂಟರ ದೇವಾಲಯ, ಶಾಸನ ಹಾಗೂ ವೀರಗಲ್ಲುಗಳು ಕಂಡುಬಂದರೂ ಕೋಟೆಯ ನಿರ್ಮಾಣದ ಕುರಿತಾಗಿ ಯಾವುದೇ ಪುರಾತತ್ವೀಯ ಆಕರಗಳು ಲಭ್ಯವಾಗಿಲ್ಲ.

ಮೂರನೇ ಕೃಷ್ಣನ ಆಳ್ವಿಕೆಯ ನಂತರ ಬಂದ ದೊರೆಗಳು ಅಸಮರ್ಥರಾಗಿದ್ದು, ಸಾಮ್ರಾಜ್ಯದಲ್ಲಿ ಆಂತರಿಕ ಅಂತಃಕಲಹಗಳು ಏರ್ಪಟ್ಟವು. ಈ ಸಮಯವನ್ನು ಸದುಪಯೋಗಪಡಿಸಿಕೊಂಡ ಇವರ ಸಾಮಂತನಾದ ಎರಡನೆಯ ತೈಲಪನು ಕರ್ಕನನ್ನು ಸೋಲಿಸಿ ಕಲ್ಯಾಣ ಚಾಳುಕ್ಯರ ಸಾಮ್ರಾಜ್ಯವನ್ನು ಸ್ಥಾಪಿಸಿದನು.

ಕಲ್ಯಾಣದ ಚಾಳುಕ್ಯರು(ಕ್ರಿ.ಶ. ೯೭೩ ರಿಂದ ಕ್ರಿ.ಶ. ೧೧೮೯)

ಕ್ರಿ.ಶ. ೯೫೭ರಿಂದ೧೧೫೦ರ ವರೆಗೆ ಸುಮಾರು ಎರಡುನೂರು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಕರ್ನಾಟಕಕ್ಕೆ ಬಾದಾಮಿ ಚಾಲುಕ್ಯರು ತಂದುಕೊಟ್ಟ ಹಿರಿಮೆಯನ್ನು ಕಲ್ಯಾಣದ ಚಾಲುಕ್ಯರು ಉಜ್ವಲವಾದ ರೀತಿಯಲ್ಲಿ ಮುಂದುವರಿಸಿದರು. ವಿಜಾಪುರ ಜಿಲ್ಲೆಯಲ್ಲಿ ಇವರ ಕಾಲಾವಧಿಗೆ ಸಂಬಂಧಪಟ್ಟಂತೆ ಸುಮಾರು ೧೨೪ ಶಾಸನಗಳು ಇದುವರೆಗೆ ಲಭ್ಯವಾಗಿವೆ. ಅವು ಇವರ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಸಮರ್ಥಿಸುವಲ್ಲಿ ಉಪಯುಕ್ತವಾಗಿವೆ.

ಎರಡನೆಯ ತೈಲಪ(ಕ್ರಿ.ಶ. ೯೭೩–೯೯೭)

ಕ್ರಿ.ಶ. ೯೫೭ರ ಕಾರ್ಜೋಳ ಶಾಸನ ರಾಷ್ಟ್ರಕೂಟ ಕೃಷ್ಣನು ಮೇಲ್ಪಾಟಿಯಲ್ಲಿದ್ದಾಗ, ಇವನ ಸಾಮಂತನಾಗಿ ತೈಲಪಯ್ಯನು ನಾಡನ್ನು(ನಾಡಿನ ಹೆಸರನ್ನು ತಿಳಿಸಿಲ್ಲ) ಆಳುತ್ತಿದ್ದ ಎಂದು, ಮುಂದೆ ಕ್ರಿ.ಶ. ೯೬೫ರ ನರಸಲಗಿ ಶಾಸನವು ಸಾಮಂತನಾದ ತೈಲಪರಸನು ತರ್ದವಾಡಿ ಸಾವಿರವನ್ನು ಅಣುಗ ಜೀವಿತದಿಂದ ಆಳುತ್ತಿದುದನ್ನು ಸ್ಪಷ್ಟಪಡಿಸುತ್ತದೆ.[೬೧] ಇದೇ ವೇಳೆಯಲ್ಲಿ ರಾಷ್ಟ್ರಕೂಟ ಕೊನೆಯ ದೊರೆ ಕರ್ಕನನ್ನು ಸೋಲಿಸಿ ಸ್ವತಂತ್ರವನ್ನು ಘೋಷಿಸಿಕೊಳ್ಳುತ್ತಾನೆ. ಎರಡನೇ ಜಗದೇಕಮಲ್ಲನ ಮುತ್ತಗಿಯ ಶಾಸನ "ಸುವರ್ಣ್ನದಾನಿ ಅವಧೀರಿತ ವೈರಿಬಲಾವಶೇಷ ಅಜಿಲೋಲುಪ ಕಲಿತೈಲ ಕುಂತಳ ದೇಶವನ್ನು ನಿಜಭುಜಾಬಳದಿಂದ ಸಮರಧಾರಿಣಿಯಲ್ಲಿ ರಾಷ್ಟ್ರಕೂಟ ಭೂಕಾಂತರನ್ನು ಕಾದಿಕೊಂದು ಗೆಲ್ದುದಾಗಿ" ಹೇಳಿದೆ.[೬೨] ತೈಲಪನು ಸ್ವತಂತ್ರ ಘೋಷಿಸಿಕೊಂಡ ಮೇಲೆ ಮಾನ್ಯಖೇಟದಿಂದಲೇ ಆಳ್ವಿಕೆ ಮಾಡುತ್ತಿದ್ದನು ಎಂದು ಕ್ರಿ.ಶ. ೯೯೫ರ ಕಾಖಂಡಕಿ ಶಾಸನ ತಿಳಿಸುತ್ತದೆ.[೬೩] ತೈಲಪನಿಗೆ ಸಂಬಂಧಿಸಿದ ಇನ್ನೊಂದು ಶಾಸನ ಕಾರ್ಜೋಳದಲ್ಲಿದ್ದು, ತೆರಿಗೆ ನಿಗದಿಗೊಳಿಸಿದ ಬಗ್ಗೆ ತಿಳಿಸುತ್ತದೆ.[೬೪]

ತೈಲಪನ ಸಾಹಸ ಪರಾಕ್ರಮಾದಿ ಗುಣಗಳು ಅವನ ನಂತರದ ಅರಸರ ಶಾಸನಗಳಲ್ಲಿ ವರ್ಣಿಸಲ್ಪಟ್ಟಿವೆ. ಆರನೇ ವಿಕ್ರಮಾದಿತ್ಯನ ಮುತ್ತಗಿ ಶಾಸನ ಅವನನ್ನು "ಚಾಲುಕ್ಯ ಶಿಕ್ಷಾಮಣಿ, ತ್ರೈಲೋಕ್ಯಮಲ್ಲನಾಹವಮಲ್ಲ, ಭೀಮಬಳ ರಾಜನ್ವತಿ" ಎಂದಿದೆ, ನೂರೆಂಟು ಬಯಲ ಕಾಳಗವನ್ನು ಕಾದಿ ಎಂಬತ್ತೆಂಟು ಕೋಟೆಗಳನ್ನು ಪ್ರತಾಪದಿಂದ ಕೊಂಡ ಬಂಟನ ಮೆಯ್ಗಲಿ; ತೈಲನ ಬಾಹು ಸಾಹಸ ಸಮಗ್ರತೆಗೆ ಬೆದರದೆ ಮನ್ನೆಯರು, ಬಿರುತು ಪೋಗದ ಮಂಡಳನಾಥರು, ತರ್ಗದನೆಲಗೋಟೆ, ಧೂಳಿಪಟವಾಗದ ದುರ್ಗಕುಲ, ಕುನುಂಗಿ ಪಿಂಗದ ಪರಮಂಡಳ ನಡುಗಿ ಕಪ್ಪಮನೀಯದ ವೈರಿರಾಯರು ಯಾರಿದ್ದಾರೆ? ಎಂದು ಪ್ರಶ್ನಿಸುವ ಎರಡನೇ ಜಗದೇಕಮಲ್ಲನ ಮನಗೂಳಿ ಶಾಸನ ಆತನ ವಿಷಯದಲ್ಲಿ ಹಲವಾರು ಅಂಶಗಳನ್ನು ಹೊರಹಾಕಿದೆ. ಈ ಶಾಸನ ಏಕಾಂಗವೀರ ತೈಲರಾಜನನ್ನು "ಚಾಳುಕ್ಯ ರಾಜ್ಯಮನುದ್ಧರಿಸಿದ ಮರ್ತ್ಯಮುಕುಂದ"ನೆಂದಿದೆ.[೬೫]

ಸತ್ಯಾಶ್ರಯ(ಕ್ರಿ.ಶ. ೯೯೭-೧೦೦೮)

ಎರಡನೇ ತೈಲಪನ ತರುವಾಯ ಇವನ ಹಿರಿಯ ಮಗ ಸತ್ಯಾಶ್ರಯ ಅಧಿಕಾರಕ್ಕೆ ಬಂದನು. ಸತ್ಯಾಶ್ರಯನಿಗೆ ಸಂಬಂಧಿಸಿದ ಒಂದು ಶಾಸನ ತುಂಬಗಿಯಲ್ಲಿ ದೊರೆತಿದೆ. ಇವನ ಪಾದಪದ್ಮೋಪಜೀವಿಯಾದ ಬ್ರಹ್ಮಯ್ಯನು ಪಗಲಟ್ಟಿ ೩೦೦ರ ಬಳಿಯ ಅಗ್ರಹಾರ ತುಂಬಿಗೆಯ ಪೊಸಳದೇವರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಶಾಸನ ತೃಟಿತವಾಗಿರುವುದರಿಂದ ಹೆಚ್ಚಿನ ವಿಷಯಗಳು ತಿಳಿದುಬರುವುದಿಲ್ಲ.[೬೬]

ಅಯ್ಯಣ

ಕ್ರಿ.ಶ. ೧೦೧೫ರ ರೂಗಿ ಶಾಸನವು ಬಾದಾಮಿ ಚಾಲುಕ್ಯರಿಂದ ಕಲ್ಯಾಣ ಚಾಳುಕ್ಯ ಅಯ್ಯಣನವರೆಗಿನ ವಂಶಾವಳಿಯನ್ನು ತಿಳಿಸುತ್ತದೆ.[೬೭] ಅಲ್ಲದೆ ಅಯ್ಯಣದೇವನ ತಮ್ಮ ಮಹಾಸಾಮಂತ ಅಣ್ಣನಭಂಟ ದೇವಣರಸನ ಉಲ್ಲೇಖದೊಂದಿಗೆ ಅಯ್ಯಣದೇವ ವಸುದೈಕ ಮಲ್ಲನೆಂಬ ಬಿರುದಿನೊಂದಿಗೆ ಸ್ವಲ್ಪಕಾಲ ರಾಜ್ಯವಾಳಿದ ಮಹತ್ವಪೂರ್ಣ ಮಾಹಿತಿಯನ್ನು ಈ ಶಾಸನ ಕೊಟ್ಟಿದೆ.[೬೮]

ಇಮ್ಮಡಿ ಜಯಸಿಂಹ(ಕ್ರಿ.ಶ. ೧೦೧೫-೧೦೪೨)

ಅಯ್ಯಣದೇವನ ಆಳ್ವಿಕೆಯ ನಂತರ ಈತನ ತಮ್ಮ ಇಮ್ಮಡಿ ಜಯಸಿಂಹ ಅಧಿಕಾರಕ್ಕೆ ಬರುತ್ತಾನೆ. ಈತನಿಗೆ ಸಂಬಂಧಿಸಿದ ೧೨ ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಾಗಿವೆ. ಕ್ರಿ.ಶ. ೧೦೧೯ರ ರೂಗಿ ಶಾಸನವು ಜಯಸಿಂಹನು(ಜಗದೇಕಮಲ್ಲ) ಏತಗಿರಿ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಿದೆ. ಇವನ ಮಗನಾದ ಹಾಗೂ ಮಹಾಸಾಮಂತನಾದ ದಾಸರಸನು ತರ್ದ್ದವಾಡಿ ಸಾಸಿರದ ನಾಡಿನಲ್ಲಿ ರೂವಿಗೆ ಮುಂತಾದ ಹದಿನೆಂಟು ಅಗ್ರಹಾರಗಳನ್ನು ಆಳುತ್ತಿದ್ದನೆಂದು, ಜಯಸಿಂಹನನ್ನು 'ರಾಜೇಂದ್ರ ಚೋಳ ಮದಭಂಜನ', 'ಬೋಜಕುಳಕಾಳಾನಳಂ', 'ಗೂರ್ಜರವಜ್ರಪಾತಂ', 'ಮಾಳವನಿರ್ಮೂಳನಂ ಜಗದೇಕಮಲ್ಲಂ', ಎಂದು ಉಲ್ಲೇಖಿಸುತ್ತದೆ.[೬೯] ಕ್ರಿ.ಶ. ೧೦೩೨ರ ಬಾವೂರು ಶಾಸನ ಅವನ ಸಾಮಂತ ಮೈಲರಸನು ಪಗಲಟ್ಟಿ ನಾಡಿನ ಕಾನ್ತಿಪಟ್ಟಣವನ್ನು[೭೦] ಕ್ರಿ.ಶ. ೧೦೩೩ರ ವಿಜಾಪುರ ಶಾಸನ ಇವನ ಸೇನಾಧಿಪತಿ ಆನಂದಪಾಳ ದಂಣಾಯಕನು ತರ್ದವಾಡಿಯನ್ನು ಆಳುತ್ತಿದ್ದುದನ್ನು ತಿಳಿಸುತ್ತವೆ.[೭೧] ಕ್ರಿ.ಶ. ೧೦೪೦ರ ವಿಜಾಪುರ ಶಾಸನ ಚಾಳುಕ್ಯ ಜಗದೇಕಮಲ್ಲನ ಆಳ್ವಿಕೆಯಲ್ಲಿ ಅವನ ಸಾಮಂತನಾಗಿ ಮೂಕರಸನು ಪಗರಟಿಗೆ ನಾಡನ್ನು ಆಳುತ್ತಿದ್ದ.[೭೨] ಕ್ರಿ.ಶ. ೧೦೪೧ರ ಕನ್ನೊಳ್ಳಿ ಶಾಸನ ಚಾಳುಕ್ಯ ಜಗದೇಕಮಲ್ಲನು ಪೊಟ್ಟಳಕೆರೆ ನೆಲೆವೀಡಿನಿಂದ ಆಳುತ್ತಿದ್ದಾಗ ಅವನ ಮಹಾಸಾಮಂತನಾದ ಗೋಪಾಲರಸನು ಕನ್ನವಳ್ಳಿಯನ್ನು ಆಳುತ್ತಿದ್ದನೆಂದು ತಿಳಿಸುತ್ತವೆ.[೭೩] ಅಲ್ಲದೆ ಕ್ರಿ.ಶ. ೧೦೨೭ರ ಗೊಲಗೇರಿ, ಕ್ರಿ.ಶ. ೧೦೨೯ರ ದೇವೂರು, ಬಿದರಕುಂದಿ, ಕ್ರಿ.ಶ. ೧೦೩೩ರ ವಿಜಾಪುರ ಮತ್ತು ತಮದಡ್ಡಿ ಕ್ರಿ.ಶ. ೧೦೩೭-೩೮ರ ತಡವಲಗಾ ಮತ್ತು ಕುಂಟೋಜಿ ಶಾಸನಗಳು[೭೪] ಚಾಳುಕ್ಯ ಜಗದೇಕಮಲ್ಲನು ಕಲ್ಯಾಣದ ಅಥವಾ ಪೊಟ್ಟಳಕೆರೆ(ಆಂಧ್ರದ ಪೊಟ್ಲಚೆರವು) ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದುದನ್ನು ತಿಳಿಸುತ್ತವೆ.

ಒಂದನೆಯ ಸೋಮೇಶ್ವರ(ಕ್ರಿ.ಶ. ೧೦೪೨–೧೦೬೮)

ಜಯಸಿಂಹನ ನಂತರ ಅವನ ಮಗ ಒಂದನೆಯ ಸೋಮೇಶ್ವರನು ಪಟ್ಟವೇರಿದನು. ಇವನ ಕಾಲಾವಧಿಯಲ್ಲಿಯೇ ಕಲ್ಯಾಣವು ಇವರ ರಾಜಧಾನಿಯಾಯಿತು. ಇಮ್ಮಡಿ ಜಯಸಿಂಹನ ಕಾಲದ ವಿಜಾಪುರ ಪ್ರದೇಶದಲ್ಲಿರುವ ಶಾಸನಗಳನ್ನು ನೋಡಿದಾಗ ಕೆಲವು ಶಾಸನಗಳು ಇವನು ಕಲ್ಯಾಣದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದ ಎಂದು, ಇನ್ನೂ ಕೆಲವು ಶಾಸನಗಳು ಪೊಟ್ಟಳಕೆರೆಯಿಂದ ರಾಜ್ಯಭಾರ ಮಾಡುತ್ತಿದ್ದ ಎಂದು ತಿಳಿಸುತ್ತವೆ. ಬಹುಶಃ ಜಯಸಿಂಹನ ಕಾಲಕ್ಕಾಗಲೆ ಕಲ್ಯಾಣವು ಉಪರಾಜಧಾನಿಯಾಗಿದ್ದು, ಅದನ್ನು ಪ್ರಮುಖ ರಾಜಧಾನಿಯನ್ನಾಗಿ ಮಾಡುವ ಪ್ರಯತ್ನ ನಡೆದಿತ್ತು ಎಂಬುದು ತಿಳಿದುಬರುತ್ತದೆ. ಇದು ಒಂದನೆಯ ಸೋಮೇಶ್ವರನ ಅವಧಿಯಲ್ಲಿ ಪೂರ್ಣಗೊಂಡಿತು. ಇವನಿಗೆ ಸಂಬಂಧಿಸಿದ ಶಾಸನಗಳು ಈ ಪ್ರದೇಶದಲ್ಲಿ ಹಲವಾರು ಕಡೆ ಕಂಡುಬರುತ್ತವೆ.

ಕ್ರಿ.ಶ. ೧೦೪೪ರ ಆಲಮೇಲ್ ಶಾಸನ ಚಾಳುಕ್ಯರಾಜ ತ್ರೈಲೋಕ್ಯಮಲ್ಲನು ಆಳುತ್ತಿದ್ದಾಗ, ಮಹಾಸಾಮಂತ ತಗರ ನಗರಾಧೀಶ್ವರ ಏಳಮೇಲವನ್ನು ಆಳುತ್ತಿದ್ದ ಎಂದು ಉಲ್ಲೇಖಿಸುತ್ತದೆ.[೫೫] ಕ್ರಿ.ಶ. ೧೦೪೯ರ ಬಾಗೇವಾಡಿ ಶಾಸನ ಚಾಳುಕ್ಯ ತ್ರೈಲೋಕ್ಯಮಲ್ಲನು ಪಲ್ಲವರ ಮೇಲೆ(ಬಹುಶಃ ಇವನ ಸಾಮಂತರಾದ ನೊಳಂಬ ಪಲ್ಲವರಿರಬಹುದು) ದಿಗ್ವಿಜಯ ಮಾಡಿ, ಕರಹಡನಾಡಿನ, ವಗ್ಘಾಪುರದ ನೆಲೆವೀಡಿನಲ್ಲಿದ್ದುದನು ಮತ್ತು ಇವನ ಪತ್ನಿ ಪಿರಿಯರಸಿ ಮೈಲಳದೇವಿಯನ್ನು ಸಹ ಈ ಶಾಸನ ಉಲ್ಲೇಖಿಸುತ್ತದೆ.[೫೬] ಕ್ರಿ.ಶ. ೧೦೬೨ರ ಹೊನವಾಡ ಶಾಸನ ಈತನ ಮತ್ತೋರ್ವ ಪತ್ನಿ ಕೇತಲದೇವಿ ಅಗ್ರಹಾರ ಪೊನ್ನವಾಡವನ್ನು ಆಳುತ್ತಿದ್ದಳು ಎಂದು ತಿಳಿಸುತ್ತದೆ.[೫೭] ಕ್ರಿ.ಶ. ೧೦೬೪ರ ದೇವೂರು[೫೮] ಮತ್ತು ಕ್ರಿ.ಶ. ೧೦೬೬ರ ಮಾರಸನಹಳ್ಳಿ[೫೯] ಶಾಸನಗಳು ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಅವನ ಮಗ ಜಯಸಿಂಹದೇವನು ತರ್ದವಾಡಿ ನಾಡನ್ನು ಆಳುತ್ತಿದ್ದನು. ಇಷ್ಟೇ ಅಲ್ಲದೆ ಜಿಲ್ಲೆಯ ಬ್ಯಾಕೋಡ, ಮಣ್ಣೂರು, ಆಲೂರು, ಚಡಚಣ, ಜಾಲವಾದ, ಸರೂರು, ಕನ್ನೊಳ್ಳಿ[೬೦] ಕುಂಟೋಜಿ[೬೧] ಶಾಸನಗಳು ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಎರಡನೆಯ ಸೋಮೇಶ್ವರ(ಕ್ರಿ.ಶ. ೧೦೬೮–೧೦೭೬)

ಒಂದನೆಯ ಸೋಮೇಶ್ವರನ ನಂತರ ಅವನ ಮಗ ಭುವನೈಕಮಲ್ಲ(ಎರಡನೆಯ ಸೋಮೇಶ್ವರ) ಅಧಿಕಾರಕ್ಕೆ ಬಂದನು. ಈತನ ಆಡಳಿತಾವಧಿಯು ಅಲ್ಪಾವಧಿಯದಾಗಿದ್ದು, ಈತನಿಗೆ ಸಂಬಂಧಿಸಿದಂತೆ ಕ್ರಿ.ಶ.೧೦೬೯ರ ಕಾಖಂಡಕಿ ಶಾಸನವು ಭುವನೈಕಮಲ್ಲನು 'ಸಂಕನಕೆಜೆವೂರ ನೆಲೆವೀಡಿನಿಂದ ರಾಜ್ಯಂಗೆಯುತ್ತಿದ್ದನು' ಎಂದು ತಿಳಿಸುತ್ತದೆ. ಈ ಶಾಸನದಲ್ಲಿ ಬರುವ ಮಧುವರಸನನ್ನು ಚಾಳುಕ್ಯ ರಾಜ್ಯಾಭ್ಯುದಯ ಕಾರಣನೆಂದು ಕರೆಯಲಾಗಿದೆ.[೬೨] ರೂಗಿ ಶಾಸನವು ಮಹಾಮಂಡಳೇಶ್ವರ ಪಾಯ್ಯರಸನು,[೬೩] ನಂತರ ಕ್ರಿ.ಶ. ೧೦೭೪ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ

ಇವನ ದಂಡನಾಯಕ ನಾಕಿಮಯ್ಯ ತರ್ದವಾಡಿನಾಡನ್ನು[೮೪] ಆಳುತ್ತಿದ್ದರು ಎಂದು ತಿಳಿಸುತ್ತವೆ. ಕ್ರಿ.ಶ. ೧೦೭೧ರ ನಾಗಾವಿ ಬಿ.ಕೆ. ಶಾಸನವು ಏಳಮೇಲವನ್ನು ವಂಗರಸನು ಆಳುತ್ತಿದ್ದನೆಂದು,[೮೫] ಕ್ರಿ.ಶ. ೧೦೭೩ರ ಹೊನವಾಡ ಶಾಸನವು ಚಾಳುಕ್ಯ ಭುವನೈಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಗುರು ಸಮಾನನಾದ ದಂಡನಾಯಕ ಭಾಸ್ಕರಭಟ್ಟನು ಅಗ್ರಹಾರ ಪೊನ್ನವಾಡವನ್ನು ಆಳುತ್ತಿದ್ದನೆಂದು ಹಾಗೂ ಭುವನೈಕಮಲ್ಲನು ಪೊಡೆವೆಟ್ಟದ ಪಯಣದ ಬೀಡಿನಲ್ಲಿದ್ದ ಸಂಗತಿ ತಿಳಿಸುತ್ತದೆ.[೮೬]

ಆರನೆಯ ವಿಕ್ರಮಾದಿತ್ಯ(ಕ್ರಿ.ಶ. ೧೦೭೬-೧೧೨೬)

ಎರಡನೆಯ ಸೋಮೇಶ್ವರನು ಅಸಮರ್ಥನಾಗಿದ್ದರಿಂದ ಅವನ ಆಳ್ವಿಕೆಯು ಅಲ್ಪಕಾಲಾವಧಿಯಲ್ಲಿಯೇ ಕೊನೆಗೊಂಡಿತು. ಇವನ ನಂತರ ಇವನ ತಮ್ಮ ಅರನೆಯ ವಿಕ್ರಮಾದಿತ್ಯನು ಅಧಿಕಾರಕ್ಕೆ ಬಂದನು. ಸುಮಾರು ಐವತ್ತು ವರ್ಷಗಳ ಕಾಲ ಆಳ್ವಿಕೆ ಮಾಡಿದ ಇವನು ಕಲ್ಯಾಣ ಚಾಲುಕ್ಯರ ಅರಸರಲ್ಲಿ ಬಲಿಷ್ಠನಾಗಿದ್ದು ಸಮರ್ಥವಾಗಿ ಆಡಳಿತ ನಿರ್ವಹಿಸಿದ್ದಾನೆ. ಹೀಗಾಗಿ ಕರ್ನಾಟಕ ಇತಿಹಾಸದಲ್ಲಿ ಅಗ್ರಸ್ಥಾನ ಪಡೆದಿದ್ದಾನೆ. ಈತನು ತಾನು ಅಧಿಕಾರಕ್ಕೆ ಬಂದಂದಿನಿಂದ ಶಕವರುಷದ ಎಣಿಕೆಯನ್ನು ಬಿಟ್ಟು ಹೊಸದಾಗಿ ವಿಕ್ರಮ ಶಕೆಯನ್ನು ಜಾರಿಗೆ ತಂದನು. ವಿಜಾಪುರ ಜಿಲ್ಲೆಯ ಕ್ರಿ.ಶ. ೧೧೦೦ರ ಮಲಘಾಣ ಶಾಸನವು[೮೭] ಕೂಡ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಇವನ ಕಾಲಾವಧಿಗೆ ಸಂಬಂಧಿಸಿದ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿದ್ದು ಇವನ ಆಳ್ವಿಕೆಯನ್ನು ಕುರಿತಾಗಿ ತಿಳಿಸುತ್ತವೆ.

ಕ್ರಿ.ಶ. ೧೦೭೭ರ ಕುಳೇಕುಮಟಗಿ ಶಾಸನವು ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಿಗುವ ಮೊದಲ ಶಾಸನವಾಗಿದೆ. ಇದು ತ್ರಿಭುವನಮಲ್ಲನು ಪೊನಗುಪ್ಪೆಯ ಪಯಣದ ಬೀಡಿನಲ್ಲಿದ್ದುದನ್ನು ತಿಳಿಸುತ್ತದೆ.[೮೮] ಕ್ರಿ.ಶ. ೧೦೮೩ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ಮಹಾಮಂಡಳೇಶ್ವರ ಭೀಮಣದೇವನು[೮೯] ಈತನ ನಂತರ ಕ್ರಿ.ಶ. ೧೦೯೫ರ ಹೆಬ್ಬಾಳ,[೯೦] ಕ್ರಿ.ಶ. ೧೧೧೨ರ ದಿಂಡವಾರ,[೯೧] ಕ್ರಿ.ಶ. ೧೧೧೫ರ ನಿಡೋಣಿ[೯೨] ಶಾಸನಗಳು ತ್ರಿಭುವನಮಲ್ಲನ ಮಗ ಯುವರಾಜ ಮಲ್ಲಿಕಾರ್ಜುನನು ಹಾಗೂ ಕಾಲದ ಉಲ್ಲೇಖವಿಲ್ಲದ ಕ್ರಿ.ಶ. ಹನ್ನೊಂದನೆಯ ಶತಮಾನದ ಮಣ್ಣೂರು ಶಾಸನ ಕುಮಾರ ಸತ್ಯಾಶ್ರಯದೇವನು[೯೩] ಕ್ರಮವಾಗಿ ತರ್ದ್ದವಾಡಿ ಸಾಸಿರವನ್ನು ಆಳುತ್ತಿದ್ದರು ಎಂದು ಈ ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೦೮೯ರ ದೇವರಗೆಣ್ಣೂರು ಶಾಸನ ತರ್ದವಾಡಿ ೧೦೦೦ದಲ್ಲಿನ ಕಂಪಣ ಬಾಗೆ ಎಪ್ಪತ್ತು ಮತ್ತು ಇದರ ಬಳಿಯ ಕೃಷ್ಣವೇಣ್ಣಾ ನದಿಯ ಉತ್ತರಕ್ಕೆ ಗಂಡೆಗ ಗ್ರಾಮವನ್ನು ಉಲ್ಲೇಖಿಸುತ್ತವೆ.[೯೪] ಇವನ ಕಾಲಾವಧಿಯ ಕ್ರಿ.ಶ. ೧೦೯೭ರ ಮುತ್ತಗಿ ಶಾಸನವು ತದ್ದವಾಡಿ ೧೦೦೦ರ ಬಳಿಯ ಕಂಪಣವಾದ ಮುತ್ತಗೆ ಮೂವತ್ತರ ಅಗ್ರಹಾರವನ್ನು ಉಲ್ಲೇಖಿಸುತ್ತದೆ.[೯೫] ಕ್ರಿ.ಶ. ೧೧೦೦ರ ಮಲಘಾಣ

ಶಾಸನ ಚಾಲುಕ್ಯ ತ್ರಿಭುವನಮಲ್ಲನು ಭೋಜನ ಮೇಲೆ ಯುದ್ಧಕ್ಕೆ ಹೊರಟಾಗ ಪಶ್ಚಿಮ ದಿಕ್ಕಿನ ಭೀಮರತಿಯ ತೀರದಲ್ಲಿ ಪಯಣದ ಕುಪ್ಪ ಬೀಡಿನಲ್ಲಿ ಬೀಡು ಬಿಟ್ಟಿದ್ದನ್ನು ತಿಳಿಸುತ್ತದೆ.[೯೬] ಕ್ರಿ.ಶ. ೧೧೧೧ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ತ್ರಿಭುವನಮಲ್ಲನು ಜಯಂತಿಪುರದಿಂದ ರಾಜ್ಯಭಾರ ಮಾಡುತ್ತಿದ್ದಾಗ, ಇವನ ಮಹಾಮಂಡಳೇಶ್ವರ ಕುಮಾರ ಜಯಕರ್ಣದೇವನು ಮಹಾಗ್ರಹಾರ ಸಿಂದಿಗೆಯನ್ನು ಆಳುತ್ತಿದ್ದ.[೯೭] ಕ್ರಿ.ಶ. ೧೧೨೦ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ವಿಕ್ರಮಾದಿತ್ಯನು ಕೂರ್ಮಾವತಾರದಂತೆ ಭೂಮಿಯನ್ನು ಉದ್ದರಿಸಲು ಹುಟ್ಟಿದನೆಂದು ಹೇಳುತ್ತದೆ.[೯೮] ಕ್ರಿ.ಶ. ೧೧೨೫ರ ಕಡ್ಲೇವಾಡ ಶಾಸನ ಚಾಲುಕ್ಯ ತ್ರಿಭುವನಮಲ್ಲನು ಜಯಂತಿಪುರದಿಂದ ರಾಜ್ಯಭಾರ ಮಾಡುತ್ತಿದ್ದಾಗ, ಅವನ ಮಹಾಸಾಮಂತನಾಗಿ ಸಿಯಾಳ ವಂಶದ ಸಿಂಗರಸನಿರುತ್ತಾನೆ ಮತ್ತು ತರ್ದವಾಡಿ ಸಾವಿರ, ಕಂಪಣ ಕುಮ್ಮಸಿ ಮೂವತ್ತನ್ನು ಉಲ್ಲೇಖಿಸುತ್ತದೆ.[೯೯] ಚಟ್ಟರಕಿಯ ಶಾಸನವು ತ್ರಿಭುವನಮಲ್ಲನು ಆಳುತ್ತಿರುವಾಗ, ಅವನ ಮೊಮ್ಮಗ ಜಗದೇಕಮಲ್ಲನ ಪಾದಾರಾಧಕನಾಗಿ ಸೆಳರ ಕುಲದ ಮಹಾಮಂಡಳೇಶ್ವರ ಗೋವಣರಸನು ರಾಜಧಾನಿ ಕನ್ನವಳ್ಳಿಯಲ್ಲಿ ಪನ್ನಿರ್ವನಾಯಕರ ಸಮೇತ ರಾಜ್ಯಭಾರ ಮಾಡುತ್ತಿದ್ದಾಗ ಕಾರಣಾಂತರಗಳಿಂದ ಚೆಟ್ಟುರಗೆಯಲ್ಲಿದ್ದ ದಾಯಾದಿಗಳ ಮೇಲೆ ಯುದ್ಧ ಮಾಡಿ ಗೆಲುವು ಪಡೆಯುತ್ತಾನೆ. ಈ ಗೆಲುವಿಗೆ ಚೆಟ್ಟುರಗೆಯ ಮಹಾಜನರು ಕಾರಣರೆಂದು ತಿಳಿಸುತ್ತದೆ.[೧೦೦]

ವಿಕ್ರಮಾದಿತ್ಯನಿಗೆ ೨೫ಕ್ಕೂ ಹೆಚ್ಚು ರಾಣಿಯರಿದ್ದರು. ಈ ಪ್ರದೇಶದಲ್ಲಿನ ಶಾಸನಗಳು ಮೂವರು ರಾಣಿಯರನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೦೭೭ರ ಕುಳೇಕುಮಟಗಿ ಶಾಸನವು ಆತನ ರಾಣಿಯಾದ ಕೇತಲದೇವಿಯನ್ನು,[೧೦೧] ಕನ್ನೊಳ್ಳಿ ಶಾಸನವು ಅವನ ಪಟ್ಟಮಹಾದೇವಿಯಾದ ಮೈಳಲದೇವಿಯನ್ನು,[೧೦೨] ಖೇಡಗಿ ಶಾಸನವು ಅವನ ರಾಣಿ ಲಕ್ಷ್ಮಾದೇವಿಯನ್ನು[೧೦೩] ಮತ್ತು ಪ್ರಿಯಾಂಗನೆ ಮಲ್ಲಣಿದೇವಿಯರನ್ನು[೧೦೪] ಹೆಸರಿಸುತ್ತವೆ. ಅಲ್ಲದೆ ಕ್ರಿ.ಶ. ೧೦೭೯ರ ಮುತ್ತಗಿ ಶಾಸನವು ಆರನೆಯ ವಿಕ್ರಮಾದಿತ್ಯನ ಮೊಮ್ಮಗಳು ಯುವರಾಜ ಮಲ್ಲಿಕಾರ್ಜುನನ ಮಗಳೆಂದು ಕೊಂಮಳದೇವಿಯನ್ನು[೧೦೫] ಉಲ್ಲೇಖಿಸಿದೆ.

ಜಿಲ್ಲೆಯ ಇನ್ನೂ ಹಲವಾರು ಶಾಸನಗಳು ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣದಿಂದ ಮತ್ತು ಜಯಂತಿಪುರ(ಬನವಾಸಿ)ದಿಂದ ಆಳುತ್ತಿದ್ದನು ಎಂದು ತಿಳಿಸುತ್ತವೆ. ಅವು ಕಣ್ಣೂರು, ತಾಳಿಕೋಟೆ, ಕುಳೇಕುಮಟಗಿ, ಸಿಂದಗಿ, ಕಕ್ಕಳಮೇಲ, ಯರಗಲ್, ವಿಜಾಪುರ(ಎರಡು ಶಾಸನ), ಕಣ್ಣೂರು, ಕಾಖಂಡಕಿ, ಮಲಘಾಣ, ಕೊಂಡಗೂಳಿ(ಮೂರು ಶಾಸನ), ಶಿರ್ಕನಳ್ಳಿ, ಕೋಳುರು, ಚಾಂದಕವಟೆ, ಆಲಮೇಲ್[೧೦೬] ಶಾಸನಗಳು ಈ ಪ್ರದೇಶದಲ್ಲಿ ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಮೂರನೆಯ ಸೋಮೇಶ್ವರ(ಕ್ರಿ.ಶ. ೧೧೨೭–೧೧೩೮)

ಆರನೆಯ ವಿಕ್ರಮಾದಿತ್ಯನ ನಂತರ ಅವನ ಮಗ ಮೂರನೆಯ ಸೋಮೇಶ್ವರನು ಅಧಿಕಾರಕ್ಕೆ ಬಂದನು. ಇವನು ಕವಿಯೂ, ವಿದ್ವಾಂಸನೂ ಆಗಿದ್ದು ಜಗದಾಚಾರ್ಯ ಗ್ರಂಥವೆಂದು ಹೆಸರುಗೊಂಡು

ಖ್ಯಾತವಾದ ವಿಶ್ವಕೋಶ 'ಅಭಿಲಷಿತಾರ್ಥ ಚಿಂತಾಮಣಿ'(ಮಾನಸೋಲ್ಲಾಸ) ಮತ್ತು 'ವಿಕ್ರಮಾಂಕಾಭ್ಯುದಯ' ಎಂಬ ಚಾರಿತ್ರಿಕ ಚಂಪು ಕಾವ್ಯಗಳನ್ನು ರಚಿಸಿ ಬಹುಶ್ರುತ ಪಂಡಿತನೆಂದು ಪ್ರಸಿದ್ಧನಾಗಿದ್ದ. ಹೀಗಾಗಿ ಇವನನ್ನು ಸರ್ವಜ್ಞ ಚಕ್ರವರ್ತಿಯೆಂದು ಕ್ರಿ.ಶ. ೧೧೭೪ರ ನಾದ(ಕುರ್ದ್), ಕ್ರಿ.ಶ. ೧೧೩೭ರ ಇಂಗಳೇಶ್ವರ, ಕ್ರಿ.ಶ. ೧೧೪೯ರ ಶಿರಸಗಿ ಶಾಸನಗಳು ಉಲ್ಲೇಖಿಸುತ್ತವೆ.[೧೦೭]

ಜಿಲ್ಲೆಯಲ್ಲಿನ ಇತರ ಶಾಸನಗಳು ಮೂರನೇ ಸೋಮೇಶ್ವರ ಆಳ್ವಿಕೆ ಮಾಡುತ್ತಿದ್ದಾಗ ತರ್ದವಾಡಿ ನಾಡನ್ನು ಆಳುತ್ತಿದ್ದ ಆಡಳಿತಾಧಿಕಾರಿಗಳನ್ನು, ಮಹಾಮಂಡಳೇಶ್ವರರನ್ನು ಕುರಿತು ಹೇಳುತ್ತವೆ. ಕ್ರಿ.ಶ. ೧೧೨೫ರ ಶಾಸನ ಅವನು ಜಯಂತಿಪುರದ ನೆಲೆವೀಡಿನಿಂದ ಆಳುತ್ತಿದ್ದ ಎಂದು,[೧೦೮] ಕ್ರಿ.ಶ. ೧೧೩೪ರ ಮಣ್ಣೂರು ಶಾಸನ ಕಲ್ಯಾಣದ ನೆಲವೀಡಿನಿಂದ ಆಳುತ್ತಿದ್ದನು ಎಂದು ತಿಳಿಸುತ್ತವೆ.[೧೦೯] ಕ್ರಿ.ಶ. ೧೧೨೯ರ ವಿಜಾಪುರ ಶಾಸನ ಮಹಾಮಂಡಳೇಶ್ವರನಾದ ತರೆಕಾಡ ಪೆರ್ಮಾಡಿದೇವನು ತರ್ದವಾಡಿ ಸಾವಿರವನ್ನು ಆಳುತ್ತಿದ್ದ ಎಂದು, ಸಿಂದಿಗೆ ಹನ್ನೆರಡು, ಕುಮಸೆ ಮೂವತ್ತು, ಅಂಕುಲಗೆ ಐವತ್ತನ್ನು ಶಾಸನವು ಉಲ್ಲೇಖಿಸುತ್ತದೆ.[೧೧೦] ಕ್ರಿ.ಶ. ೧೧೩೧ರ ಕಕ್ಕಳಮೇಲಿಯ ಎರಡು ಶಾಸನಗಳಲ್ಲಿ ದಂಡನಾಯಕ ಮಂಡಳೇಶ್ವರ ಬಮ್ಮರಸನ ಹೆಸರನ್ನು ಉಲ್ಲೇಖಿಸುತ್ತದೆ.[೧೧೧] ಕ್ರಿ.ಶ. ೧೧೩೩ರ ಮಲಘಾಣ ಶಾಸನ ಶಿಲಾರವಂಶದ ಮಹಾಮಂಡಳೇಶ್ವರ ಕುಮಾರ ಸೋವರಸ ಅವನ ತಂದೆ ಸಿಂಗರಸನನ್ನು ಉಲ್ಲೇಖಿಸುತ್ತದೆ. ಸಿಂಗರಸನು ವಿಕ್ರಮಾದಿತ್ಯ ಮತ್ತು ಕೇತಲದೇವಿಯರಿಗೆ ಗಂಧವಾರಣ(ನಂಬಿಕೆಯವ)ನೆನಿಸಿಕೊಂಡಿದ್ದ.[೧೧೨] ಕ್ರಿ.ಶ. ೧೧೩೪ರ ನಾದ(ಕುರ್ದ್) ಶಾಸನ ಮೂವತ್ತಾರು ಬಾಡದ ಹಳ್ಳಿ ಚಿಕ್ಕನಾಡ ಪ್ರಭುವಾದ ಚಂಡಿಮರಸನನ್ನು ಉಲ್ಲೇಖಿಸುತ್ತದೆ.[೧೧೩] ಈ ಎಲ್ಲ ಶಾಸನಗಳು ಇವನ ಆಳ್ವಿಕೆಯನ್ನು ತಿಳಿಸುತ್ತವೆ.

ಎರಡನೆಯ ಜಗದೇಕಮಲ್ಲ(ಕ್ರಿ.ಶ. ೧೧೩೮–೧೧೪೯)

ಮೂರನೆಯ ಸೋಮೇಶ್ವರನ ನಂತರ ಅವನ ಹಿರಿಯಮಗ ಎರಡನೆಯ ಜಗದೇಕಮಲ್ಲನು ಅಧಿಕಾರಕ್ಕೆ ಬರುತ್ತಾನೆ. ಇವನು ತನ್ನ ಅಜ್ಜ ಆರನೆಯ ವಿಕ್ರಮಾದಿತ್ಯನ ಕಾಲದಿಂದಲೇ ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ಇದನ್ನು ಚಟ್ಟರಕಿ ಶಾಸನ ಸ್ಪಷ್ಟಪಡಿಸುತ್ತದೆ.[೧೧೪] ಶಾಸನಗಳು ಇವನನ್ನು ಪ್ರತಾಪ ಚಕ್ರವರ್ತಿ ಜಗದೇಕಮಲ್ಲನೆಂದು ಕರೆದು ಪ್ರಸಿದ್ಧಿಪಡಿಸಿವೆ. ದೇವರನಾವದಗಿ ಶಾಸನ 'ಪೆರ್ಮಾಡಿನೃಪ'[೧೧೫] ಎಂದು ಹೆಸರಿಸಿದೆ. ಇವನಿಗೆ ಸಂಬಂಧಿಸಿದಂತೆ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿವೆ.

ದೇವರನಾವದಗಿ, ಮುತ್ತಗಿ[೧೧೬] ಶಾಸನಗಳು ಆರಂಭದಲ್ಲಿ ಚಾಳುಕ್ಯ ವಂಶಾವಳಿಯನ್ನು ಹೇಳಿವೆ. ಜಗದೇಕಮಲ್ಲನು ಮಗಧ, ಮಾಳವ, ಚೋಳ, ಗುರ್ಜರನ್ನು ಸೋಲಿಸಿದಂತೆ ತಿಳಿಸುತ್ತವೆ. ಮುತ್ತಗಿಯ ಇನ್ನೊಂದು ಶಾಸನವು ಜಗದೇಕಮಲ್ಲನ ಅಣತಿಯಂತೆ ಬರ್ಮ್ಮಣ ದಂಡನಾಥನು ಹೊಯ್ಸಳರ ಮೇಲೆ ಯುದ್ಧ ಮಾಡಿದಂತೆ ಹೇಳಿದೆ.[೧೧೭] ಇವನನ್ನು ಕುರಿತಂತೆ ಕ್ರಿ.ಶ. ೧೧೪೨ರ

ಮನಗೂಳಿ ಶಾಸನವು ಕೂಡ ಉಲ್ಲೇಖಿಸುತ್ತದೆ.[೧೧೮] ಕ್ರಿ.ಶ. ೧೧೪೫ರ ಬೇಲೂರು ಶಾಸನವು ಇವನ ಮಹಾಮಂಡಳೇಶ್ವರನಾದ ಸೇವುಣ ವಂಶದ ಹೆರ್ಮ್ಮಾಡಿದೇವನ ಮಹಾಪಸಾಯಿತ, ಹಿರಿಯ ಹೆಗ್ಗಡೆ, ಹಂದೆಯ ನಾಯಕನು ಹಗರಟಿಗೆ ಮೂನ್ನುರನ್ನು ತ್ರಿಭೋಗಾಭ್ಯಂತರದಿಂದ ಆಳುತ್ತಿದ್ದ[೧೧೯] ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೪೬ರ ಯರಗಲ್‌ನಲ್ಲಿರುವ ಎರಡು ಶಾಸನಗಳು ಎರಂಗಲ್ಲಿನ ಪ್ರಭು ಅಪ್ಪರಸ, ನಂದಿಮರಸ, ಪೆರ್ಗ್ಗಡೆ ನಕ್ಕರಸರು, ಸಿಲಾರ ವಂಶದ ಸೋಯಿದೇವರಸರನ್ನು ಉಲ್ಲೇಖಿಸುತ್ತದೆ.[೧೨೦]

ಇವನ ಕಾಲಕ್ಕಾಗಲೇ ಕಳಚುರಿ ವಂಶದ ಬಿಜ್ಜಳ ಮಹಾಮಂಡಳೇಶ್ವರನಾಗಿದ್ದನ್ನು ಮತ್ತು ದಕ್ಷಿಣ ಭಾಗದಲ್ಲಿ ಹೊಯ್ಸಳರು ಕೂಡ ಕ್ರಮೇಣ ಪ್ರಭಾವಶಾಲಿಯಾಗುತ್ತಿರುವುದನ್ನು ಮುತ್ತಗಿ ಶಾಸನಗಳಿಂದ ತಿಳಿದುಬರುತ್ತದೆ. ಕಳಚುರ್ಯ ಅಹಮಲ್ಲ ದೇವವರ್ಷ, ಕಳಚುರ್ಯ ಭುಜಮಲ್ಲದೇವ ವರ್ಷ ಎಂದು ಕಕ್ಕಳಮೇಲಿ ಶಾಸನವು ಕೂಡ ಉಲ್ಲೇಖಿಸುತ್ತದೆ.[೧೨೧] ಎರಡನೆಯ ಜಗದೇಕಮಲ್ಲನ ವಿಜಾಪುರ, ಮನಗೂಳಿ, ಮುತ್ತಗಿ, ನಾಲತವಾಡ, ಮಲಘಾಣ[೧೨೨] ಶಾಸನಗಳು ಈತನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದುದನ್ನು ಸ್ಪಷ್ಟಪಡಿಸುತ್ತವಲ್ಲದೆ, ಇವನ ಆಳ್ವಿಕೆ ವ್ಯಾಪಾರ-ಉದ್ಯೋಗಗಳಿಂದ ಸುಖ ಸಮೃದ್ಧಿ ಪಡೆದಿತ್ತೆನ್ನಲು ಈ ಎಲ್ಲಾ ಶಾಸನಗಳು ಸಾಕ್ಷಿಯನ್ನೊದಗಿಸುತ್ತವೆ.

ಮೂರನೆಯ ತೈಲಪ(ಕ್ರಿ.ಶ. ೧೧೪೯–೧೧೬೩)

ಎರಡನೆಯ ಜಗದೇಕಮಲ್ಲನ ತರುವಾಯ ಅವನ ಸಹೋದರ ಮೂರನೆಯ ತೈಲಪನು ಅಧಿಕಾರಕ್ಕೆ ಬಂದನು. ಇವನಿಗೆ ತ್ರಿಭುವನಮಲ್ಲ, ತ್ರೈಲೋಕ್ಯಮಲ್ಲ ಎಂಬ ಬಿರುದುಗಳಿದ್ದವು. ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿದ್ದು ಕಲ್ಯಾಣದ ನೆಲವೀಡಿನಿಂದ ಆಳುತ್ತಿದ್ದನೆಂದು ತಿಳಿಸುತ್ತವೆ. ಆದರೆ ಇವನು ಅಸಮರ್ಥನಾಗಿದ್ದುದರಿಂದ ಅನೇಕ ಸಾಮಂತರು ಸ್ವತಂತ್ರರಾಗಲು ಪ್ರಯತ್ನಿಸಿದರು. ಕ್ರಿ.ಶ. ೧೧೫೦ರ ಸಂಖ ಮತ್ತು ಕಣ್ಣೂರು ಶಾಸನಗಳು ಬಿಜ್ಜಳನು ಚಾಳುಕ್ಯರ ಬಿರುದಾವಳಿಗಳನ್ನು ಧರಿಸಿ ಮಂಗಳವೇಡದಿಂದ ರಾಜ್ಯಭಾರ ಮಾಡುತ್ತಿದ್ದನು ಎಂದು ತಿಳಿಸುತ್ತವೆ.[೧೨೩] ಈ ಶಾಸನಗಳಲ್ಲಿ ಚಾಳುಕ್ಯರ ಯಾವ ಅರಸನ ಹೆಸರನ್ನು ಉಲ್ಲೇಖಿಸದೆ ಸ್ವತಂತ್ರ ಮನೋಭಾವನೆಯನ್ನು ತಳೆದಿದ್ದ ಎಂದು ತಿಳಿದುಬರುತ್ತದೆ. ಇದಕ್ಕೆ ವ್ಯತಿರಿಕ್ತವೆಂಬಂತೆ ಕ್ರಿ.ಶ. ೧೧೫೧ರ ವಿಜಾಪುರ ಶಾಸನವು ತೈಲಪನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಆಶ್ರಿತನಾಗಿ ಬಿಜ್ಜಳನಿರುತ್ತಾನೆ. ಕೇರಳ, ಮಾಳವ, ಲಾಳ, ನೇಪಾಳ, ಗೂರ್ಜರ, ಆಂಧ್ರ ಮುಂತಾದ ದೇಶಗಳ ಅರಸರು ಈತನಿಂದ ಪರಾಜಿತಗೊಂಡಂತೆ ತಿಳಿಸುತ್ತದೆ.[೧೨೪] ಅದೇ ರೀತಿ ಕ್ರಿ.ಶ. ೧೧೫೪ರ ವಿಜಾಪುರದ ಇನ್ನೊಂದು ಶಾಸನವು ಬಿಜ್ಜಳನು ಸಾಮಂತನಾಗಿದ್ದು ಇವನ ಮಂತ್ರಿ ಬಿಲ್ಲಣ ದಂಡನಾಯಕನು ತದ್ದೆವಾಡಿ ಸಾವಿರವನ್ನು ತ್ರಿಭೋಗಾಭ್ಯಂತರವಾಗಿ ಆಳ್ವಿಕೆ ನಡೆಸುತ್ತಿದ್ದ ಎಂದು ತಿಳಿಸುತ್ತವೆ.[೧೨೫] ಕ್ರಿ.ಶ. ೧೧೫೨ರ ಬಾಗೇವಾಡಿ, ಕ್ರಿ.ಶ. ೧೧೫೭ರ ನಾಗಾವಿ ಮತ್ತು ಮಸೂತಿ[೧೨೬] ಶಾಸನಗಳು ಕೂಡ ತೈಲಪನ ಆಳ್ವಿಕೆಯನ್ನು ತಿಳಿಸುತ್ತವೆ. ಕ್ರಿ.ಶ. ೧೧೫೮ರ

ಕಡ್ಲೇವಾಡ ಶಾಸನ ಇವನ ಅಳ್ವಿಕೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಿಗುವ ಕೊನೆಯ ಶಾಸನವಾಗಿದೆ.[೧೨೭] ಈ ವೇಳೆಗಾಗಲೆ ಸ್ವತಂತ್ರ ಮನೋವೃತ್ತಿಯನ್ನು ಹೊಂದಿದ್ದ ಬಿಜ್ಜಳ, ಶಿಲಾಹಾರರು, ಕಾಕತೀಯರು ಮತ್ತು ಹೊಯ್ಸಳರು ತೈಲಪನ ದುರ್ಬಲತೆಯನ್ನು ಕಂಡು ದಂಗೆ ಏಳತೊಡಗಿದರು. ಕೊನೆಗೆ ಹೊಯ್ಸಳ ಮೊದಲನೆಯ ನರಸಿಂಹ ಬಂಡೆದ್ದು ತೈಲಪನನ್ನು ಹತ್ಯೆಗೈದನು. ಇವನ ಮರಣದೊಂದಿಗೆ ಚಾಳುಕ್ಯ ಸಾಮ್ರಾಜ್ಯ ಕೊನೆಗೊಂಡಿತು. ಆದರೆ ತೈಲಪನ ನಂತರ ಅವನ ಮಗ ನಾಲ್ಕನೇ ಸೋಮೇಶ್ವರ ಅಧಿಕಾರಕ್ಕೆ ಬಂದನಾದರೂ ಅದು ಅಲ್ಪಕಾಲಾವಧಿಯಲ್ಲಿ ಕೊನೆಗೊಂಡಿತು.

ನಾಲ್ಕನೆಯ ಸೋಮೇಶ್ವರ(ಕ್ರಿ.ಶ. ೧೧೮೪–೧೧೮೯)

ತೈಲಪನ ನಂತರ ಕ್ರಿ.ಶ. ೧೧೬೨ರಲ್ಲಿ ರಾಜ್ಯವನ್ನು ಆಕ್ರಮಿಸಿದ ಕಳಚುರಿಗಳು ಸುಮಾರು ೨೦ ವರ್ಷಗಳ ಕಾಲ ಆಳ್ವಿಕೆಯನ್ನು ಮಾಡಿದರು. ಆದರೆ ಇದಕ್ಕೆ ಅನೇಕ ಸಾಮಂತರ ವಿರೋಧವಿತ್ತು ಅಲ್ಲದೆ ಕಳಚುರಿಗಳ ಆಂತರಿಕ ಕಲಹಗಳ ಲಾಭ ಪಡೆದು ತೈಲಪನ ಮಗ ನಾಲ್ಕನೇ ಸೋಮೇಶ್ವರ ಅಧಿಕಾರಕ್ಕೆ ಬಂದನು. ಇವನು ದ್ರೋಹಿಗಳಾದ ಕಳಚುರಿಗಳನ್ನು ಕೊಂದು ರಾಜ್ಯವನ್ನು ಪಡೆದ ಎಂದು ಹುಲಬೆಂಚಿ ಶಾಸನವು ಸ್ಪಷ್ಟಪಡಿಸುತ್ತದೆ. ಅಲ್ಲದೆ ಲಾಳ, ಚೋಳ, ಚೇರರನ್ನು ಸೋಮೇಶ್ವರ ಗೆದ್ದಂತೆ ಹೇಳಲಾಗಿದೆ.[೧೨೮] ಇವನಿಗೆ ತ್ರಿಭುವನಮಲ್ಲ ವೀರಸೋಮೇಶ್ವರ ಎಂಬ ಬಿರುದಿತ್ತು ಎಂದು ಕುಮಟಗಿ ಶಾಸನದಿಂದ ತಿಳಿದುಬರುತ್ತದೆ.[೧೨೯] ಕ್ರಿ.ಶ. ೧೧೮೪ರ ಮಿಣಜಗಿ ಶಾಸನ ಇವನು ಗೋದಾವರಿ ತಟದ ಮಂಜರಾ ತೀರ್ಥದಲ್ಲಿದಂತೆ ಉಲ್ಲೇಖಿಸಿದೆ. ಅವನ ಮಹಾಪ್ರಧಾನ, ಸೇನಾಧಿಪತಿ, ಕುಮಾರ ನರನಾರಸಿಂಹನ ಅಧಿಕಾರಿಯಾದ ಹಗರಟ್ಟಿಗೆ ಮೂನ್ನರರ ಮಹಾಗ್ರಾಮ ಮಿಣಂಜಿಗೆಯ ಮಹಾಪ್ರಭು ಮಾಚಿರಾಜನನ್ನು ಹೆಸರಿಸುತ್ತದೆ.[೧೩೦] ಕ್ರಿ.ಶ. ೧೧೮೬ರ ಕಡ್ಲೇವಾಡದ ಶಾಸನ ಸೋಮೇಶ್ವರನು ಗೋಕಾಗೆಯ ನೆಲೆವೀಡಿನಲ್ಲಿ ಬೀಡು ಬಿಟ್ಟಿದ್ದ ಎಂದು ಅವನ ದಂಡನಾಥ, ಮಹಾಪ್ರಧಾನಿ ಕುಮಾರ ಬೊಮ್ಮಿದೇವರಸನು ರಾಯದಂಡನಾಥ, ಗಂಡ, ಪೆಂಡಾರ, ರಣರಂಗ ಭೀಮ, ಕಳಚುರ್ಯ್ಯ ರಾಜ್ಯ ನಿರ್ಮೂಳನಃ, ಚಾಳುಕ್ಯರಾಜ್ಯ ಸಮುದ್ಧರಣಂ ಬಿರುದುಗಳನ್ನು ಧರಿಸಿದ್ದನು. ಹೀಗಾಗಿ ಸೋಮೇಶ್ವರನನ್ನು ಅಧಿಕಾರಕ್ಕೆ ತರುವಲ್ಲಿ ಇವನು ಭಾಗವಹಿಸಿದಂತೆ ತೋರುತ್ತದೆ. ಅಲ್ಲದೆ ಯೆಳಮೇಲವನ್ನು ಆಳುತ್ತಿದ್ದ ಸಿಳಾರವಂಶದ ಆನೆಮರಸನನ್ನು ಉಲ್ಲೇಖಿಸುತ್ತದೆ.[೧೩೧] ತಾಳಿಕೋಟೆ, ಕುಮಟಗಿ, ಕಡ್ಲೇವಾಡ[೧೩೨] ಶಾಸನಗಳು ತ್ರಿಭುವನಮಲ್ಲನ ಆಳ್ವಿಕೆಯ ವರ್ಷವನ್ನು ತಿಳಿಸುತ್ತವೆ. ವೀರಸೋಮೇಶ್ವರನಿಗೆ 'ವೀರನಾರಾಯಣದೇವ' ಎಂಬ ಹೆಸರಿದ್ದಂತೆ ಕ್ರಿ.ಶ. ೧೧೮೭ರ ಬೆಕ್ಕಿನಾಳ ಶಾಸನ ತಿಳಿಸುತ್ತದೆ.[೧೩೩] ಈ ಜಿಲ್ಲೆಯಲ್ಲಿ ಇದೇ ಇವನ ಆಳ್ವಿಕೆಯನ್ನು ಉಲ್ಲೇಖಿಸುವ ಕೊನೆಯ ಶಾಸನವಾಗಿದೆ.

ಸುಮಾರು ಕ್ರಿ.ಶ. ೧೧೮೨ರಿಂದ ಆಳ್ವಿಕೆ ಮಾಡಿದ ಸೋಮೇಶ್ವರನು ಅಸಮರ್ಥನಾಗಿದ್ದರಿಂದ ಇವನ ಆಳ್ವಿಕೆ ಅಲ್ಪಕಾಲಾವಧಿಗೆ ಸೀಮಿತವಾಯಿತು. ಕಳಚುರಿಗಳು ಮತ್ತು ಹೊಯ್ಸಳರಿಂದ ಪ್ರಾರಂಭವಾದ ಸ್ವತಂತ್ರ ಆಳ್ವಿಕೆಯ ಮನೋಭಾವನೆಯು ಇವನ ಆಳ್ವಿಕೆಯ ಕಾಲದಲ್ಲಿ ಮತ್ತಷ್ಟು ಸಾಮಂತರಲ್ಲಿ

ವಿಸ್ತರಿಸಿತು. ಹೀಗಾಗಿ ಕೊನೆಗೆ ಸೇವುಣ ಬಿಲ್ಲಮನು ಈತನನ್ನು ಸೋಲಿಸಿ ಕಲ್ಯಾಣ ಚಾಳುಕ್ಯ ಮನೆತನವನ್ನು ಕೊನೆಗೊಳಿಸುವುದರ ಮೂಲಕ ಸೇವುಣ ವಂಶವನ್ನು ಸ್ಥಾಪಿಸಿದನು. ತುಂಗಭದ್ರಾ ನದಿಯು ಸೇವುಣ ಮತ್ತು ಹೊಯ್ಸಳರ ಸಾಮ್ರಾಜ್ಯದ ಗಡಿರೇಖೆಯಾಯಿತು. ಆದರೂ ಸಾಮ್ರಾಜ್ಯ ವಿಸ್ತರಿಸುವ ದೃಷ್ಟಿಕೋನದಿಂದ ಇವರ ಮಧ್ಯೆಯೂ ಕದನಗಳು ಪ್ರಾರಂಭವಾದವು.

ಕಳಚುರಿಗಳು(ಕ್ರಿ.ಶ. ೧೧೬೨ ರಿಂದ ೧೧೮೪)

ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ಮಹಾಮಂಡಳೇಶ್ವರರಾಗಿ ಅಧಿಕಾರಕ್ಕೆ ಬಂದ ಕಳಚುರಿಗಳು ಕ್ರಮೇಣ ಪ್ರಬಲರಾಗುತ್ತಾ ಬಂದು ಮೂರನೆಯ ತೈಲಪನನ್ನು ಸೋಲಿಸುವುದರ ಮೂಲಕ ಅಧಿಕಾರವನ್ನು ಪಡೆದುಕೊಂಡರು. ಇವರ ಕಾಲಾವಧಿಯಲ್ಲಿ ನಡೆದ ಸಮಾಜೋಧಾರ್ಮಿಕ ಕ್ರಾಂತಿಯಿಂದಾಗಿ ಕರ್ನಾಟಕ ಇತಿಹಾಸದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ.

ಮಧ್ಯಭಾರತದ ಕಟಚ್ಚುರಿ ವಂಶದ ಹೈಹಯ ಕುಲಕ್ಕೆ ಸೇರಿದ ಕರ್ನಾಟಕದ ಕಳಚೂರಿಗಳು ಮೊದಲು ತರ್ದವಾಡಿ ನಾಡಿನ ಪಶ್ಚಿಮೋತ್ತರ ಗಡಿಗೆ ತಗುಲಿದ ತರಿಕಾಡ ನಾಡನ್ನು ತಮ್ಮ ನೆಲೆವೀಡನ್ನಾಗಿಸಿಕೊಂಡರು. ಆ ನಾಡಿನ ಮುಖ್ಯಪಟ್ಟಣವಾದ ಮಂಗಳವಾಡ(ಇಂದಿನ ಮಹಾರಾಷ್ಟ್ರ ರಾಜ್ಯದ ಸೋಲ್ಲಾಪುರ ಜಿಲ್ಲೆಯ ತಾಲೂಕು ಸ್ಥಳ ಮಂಗಳವೇಡ) ಅವರ ರಾಜಧಾನಿಯಾಯಿತು.[೧೩೪] ಕ್ರಿ.ಶ. ೧೦೫೭ರ ಚಡಚಣ ಶಾಸನವು ಒಂದನೆಯ ಸೋಮೇಶ್ವರನು(ತ್ರೈಲೋಕ್ಯಮಲ್ಲನು) ಆಳುತ್ತಿದ್ದಾಗ, ಅವನ ಮಹಾಮಂಡಳೇಶ್ವರನಾಗಿ ಬಿಜ್ಜರಸ(ಒಂದನೇ ಬಿಜ್ಜಳ)ನು ಮಂಗಳವಾಡ ನೆಲವೀಡಿನಿಂದ ಆಳುತ್ತಿದ್ದ ಎಂದು ಉಲ್ಲೇಖಿಸುತ್ತದೆ.[೧೩೫] ಹೀಗಾಗಿ ಇವರು ಈ ವೇಳೆಗಾಗಲೆ ರಾಜಕೀಯದಲ್ಲಿ ಪ್ರಭಾವಶಾಲಿಗಳಾಗಿದ್ದರು ಎಂಬುದು ತಿಳಿದುಬರುತ್ತದೆ. ಅದೇ ರೀತಿ ಕ್ರಿ.ಶ. ೧೦೬೭ರ ಚಡಚಣ ಶಾಸನ ಒಂದನೆಯ ಬಿಜ್ಜಳನ ಮಗ ಕನ್ನಮರಸನು ಕೂಡ ಮಂಗಳವೇಡದಿಂದ ಆಳುತ್ತಿದ್ದನು ಎಂದು ಮತ್ತು ಇವನು ಐವತ್ತೇಳು ಕದನಗಳಲ್ಲಿ ಗೆದ್ದು ಹನ್ನೆರಡು ಮನ್ನೆಯರನ್ನು ಕೊಂದನು ಎಂದು ತಿಳಿಸುತ್ತದೆ.[೧೩೬] ಈ ಶಾಸನವನ್ನು ಹೊರಡಿಸುವ ಕಾಲಕ್ಕೆ ಕಲ್ಯಾಣ ಚಾಳುಕ್ಯ ಅರಸ ಒಂದನೇ ಸೋಮೇಶ್ವರ ಅಧಿಕಾರದಲ್ಲಿದ್ದನು. ಆದರೆ ಯಾವುದೇ ಕಲ್ಯಾಣ ಚಾಳುಕ್ಯ ಅರಸನನ್ನು ಶಾಸನದಲ್ಲಿ ಉಲ್ಲೇಖಿಸಿಲ್ಲ. ಬಹುಶ ಕಳಚುರಿಗಳು ಈ ವೇಳೆಗಾಗಲೆ ಸ್ವತಂತ್ರವನ್ನು ಘೋಷಿಸಿಕೊಳ್ಳುವ ಮನೋಭಾವನೆಯನ್ನು ತಳೆದ್ದಿದರಬಹುದು ಎಂಬುದು ಗೊತ್ತಾಗುತ್ತದೆ.

ಅಲ್ಲದೆ ವೈವಾಹಿಕ ಸಂಬಂಧಗಳ ಮೂಲಕ ಸಾಮ್ರಾಜ್ಯದಲ್ಲಿ ತಮ್ಮ ಪ್ರಭುತ್ವವನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರಯತ್ನಿಸುತ್ತಾರೆ. ಇವನ ಮಗ ಜೋಗಮನು ತನ್ನ ಮಗಳು ಸಾವಳದೇವಿಯನ್ನು ಆರನೇ ವಿಕ್ರಮಾದಿತ್ಯನಿಗೆ ಮದುವೆ ಮಾಡಿಕೊಡುವ ಮೂಲಕ ಚಾಲುಕ್ಯ ಕಳಚುರಿ ಸಂಬಂಧವನ್ನು ಸ್ಥಿರಗೊಳಿಸಿದನು. ಇವನ ಮಗ ಪೆರ್ಮಾಡಿಯು(ಹೆರ್ಮಾಡಿ) ವಿಕ್ರಮಾದಿತ್ಯ ಹಾಗೂ ಚಂದಲದೇವಿಯರ ಮಗಳಾದ ನಾಗಲದೇವಿಯನ್ನು ಮದುವೆಯಾಗುವ ಮೂಲಕ ಮೊದಲಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿದನು.[೧೩೭] ಈತನು ಮೂರನೆಯ ಸೋಮೇಶ್ವರನ ಕಾಲದಲ್ಲಿ ಸಾಮಂತನಾಗಿ ತರ್ದವಾಡಿ

ನಾಡನ್ನು ಆಳುತ್ತಿದ್ದನೆಂದು ಇಂಗಳೇಶ್ವರ ಮತ್ತು ವಿಜಾಪುರ ಶಾಸನಗಳು[೧೩೮] ತಿಳಿಸುತ್ತವೆ. ಮಹಾಮಂಡಳೇಶ್ವರ ವೀರಹೆಮ್ಮಾಡಿ ಎಂದು ಕೋಳೂರು ಶಾಸನ ಉಲ್ಲೇಖಿಸುತ್ತದೆ.[೧೩೯] ಇವನು ತರ್ದವಾಡಿ ಸಾವಿರದ ಆಳ್ವಿಕೆಯನ್ನು ಪಡೆವುದರ ಮೂಲಕ ಸಣ್ಣ ಸಾಮಂತರಾಗಿದ್ದ ಕಳಚೂರಿಗಳು ಪ್ರಮುಖ ಸಾಮಂತರಾಗಿ ರಾಜಕೀಯ ಸ್ಥಾನವನ್ನು ಸುಭದ್ರಗೊಳಿಸಿಕೊಂಡರು. ಈತನು ಕ್ರಿ.ಶ. ೧೧೨೯ರಲ್ಲಿ ತಾನು ಸ್ವತಂತ್ರನೆಂಬಂತೆ ತನ್ನ ಆಳ್ವಿಕೆಯ ಹನ್ನೆರಡನೆಯ ವರ್ಷವನ್ನು ಉಲ್ಲೇಖಿಸಿ ಶಾಸನ ಬರೆಯಿಸಿದ್ದಾನೆ.[೧೪೦] ಇವನ ನಂತರ ಮಗನಾದ ಎರಡನೆಯ ಬಿಜ್ಜಳನು ಅಧಿಕಾರಕ್ಕೆ ಬಂದನು.

ಎರಡನೆಯ ಬಿಜ್ಜಳ(ಕ್ರಿ.ಶ. ೧೧೬೨-೧೧೮೪)

ಇದುವರೆಗೂ ಸಾಮಂತರಾಗಿದ್ದ ಕಳಚುರಿಗಳು ಬಿಜ್ಜಳನ ಆಳ್ವಿಕೆಯ ದ್ವಿತೀಯಾರ್ದದಲ್ಲಿ ಕಳಚುರಿ ವಂಶವನ್ನು ಕಲ್ಯಾಣದ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿದನು. ಮೊದಲು ಚಾಳುಕ್ಯರ ಸಾಮಂತನಾಗಿದ್ದ ಎರಡನೇ ಬಿಜ್ಜಳ ಸ್ವತಂತ್ರವಾಗಿ ಆಳ್ವಿಕೆ ಮಾಡುತ್ತಿರುವನೆಂಬಂತೆ ಶಾಸನಗಳನ್ನು ಹೊರಡಿಸಿದ್ದಾನೆ. ಕ್ರಿ.ಶ. ೧೧೫೦ರ ಸಂಖಶಾಸನವು ಮಹಾಮಂಡಳೇಶ್ವರ ಎಂದು ಉಲ್ಲೇಖಿಸುತ್ತದೆ.[೧೪೧] ಆದರೆ ಅದೇ ವರ್ಷದ ಕ್ರಿ.ಶ. ೧೧೫೦ರ ಕಣ್ಣೂರು ಶಾಸನವು ತ್ರಿಭುವನಮಲ್ಲ ವೀರಬಿಜ್ಜಲದೇವ ವರ್ಷದ ಪ್ರಥಮ ವರ್ಷದ ಆಳ್ವಿಕೆಯಲ್ಲಿ ಹೊರಡಿಸಲಾಗಿದ್ದು ಎಂದು ತಿಳಿಸುತ್ತದೆ.[೧೪೨] ಆದರೆ ಈ ವೇಳೆಗೆ ತೈಲಪನು ಸಿಂಹಾಸನಕ್ಕೆ ಬಂದಿದ್ದರಿಂದ ಬಿಜ್ಜಳನು ಸ್ವತಂತ್ರವನ್ನು ಘೋಷಿಸಿಕೊಳ್ಳುವ ಪ್ರಯತ್ನದಲ್ಲಿದ್ದನು ಎಂಬುದು ತಿಳಿದುಬರುತ್ತದೆ. ಆದರೆ ಕ್ರಿ.ಶ. ೧೧೫೧ರ ವಿಜಾಪುರ ಶಾಸನವು ತ್ರೈಲೋಕ್ಯಮಲ್ಲನು ಆಳುತ್ತಿರುವಾಗ ಬಿಜ್ಜಳನು ಆತನ ಪಾದ ಪದ್ಮೋಪಜೀವಿಯಾಗಿ ಇದ್ದನೆಂದು[೧೪೩] ಮತ್ತು ಕ್ರಿ.ಶ. ೧೧೫೪ರ ಮುತ್ತಗಿ ಶಾಸನವನ್ನು ನೋಡಿದಾಗ ಶ್ರೀಮತ್ಕಳಚುರ್ಯ ಭುಜಬಲ ಚಕ್ರವರ್ತಿ ಬಿಜ್ಜಳನು ಆಳುತ್ತಿರುವಾಗ ತರ್ದವಾಡಿ ಸಾವಿರವನ್ನು ಶ್ರೀಧರ ದಂಡನಾಥನು ಆಳುತ್ತಿದ್ದನೆಂದು ಹೇಳಲಾಗಿದೆ.[೧೪೪] ಕ್ರಿ.ಶ. ೧೧೫೮ರ ಯಾಳವಾರ, ಕಡ್ಲೇವಾಡ ಶಾಸನಗಳು[೧೪೫] ಕಳಚುರ್ಯ ತ್ರಿಭುವನೈಕಮಲ್ಲದೇವ(ಬಿಜ್ಜಳ)ನ ಮೂರನೆಯ ವರ್ಷವನ್ನು ಉಲ್ಲೇಖಿಸುತ್ತವೆ. ಚಾಳುಕ್ಯ ಜಗದೇಕಮಲ್ಲನ ಕಾಲಾವಧಿಯ ಮನಗೂಳಿ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದ್ದು ಎರಡನೆಯ ಕಾಲಾವಧಿಯು ಕ್ರಿ.ಶ. ೧೧೬೧ಕ್ಕೆ ಸರಿಹೊಂದುತ್ತದೆ.[೧೪೬] ಆದರೆ ಕ್ರಿ.ಶ. ೧೧೬೨ರ ಭುಯ್ಯಾರ ಶಾಸನವು ಕಳಚೂರಿ ಭುಜಬಲ ಚಕ್ರವರ್ತಿ ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದುದಾಗಿ ಹೇಳುತ್ತದೆ.[೧೪೭] ಈ ಶಾಸನಗಳನ್ನು ನೋಡಿದಾಗ ಕ್ರಿ.ಶ. ೧೧೫೭ರ ವೇಳೆಗೆ ಬಿಜ್ಜಳನು ತೈಲಪನನ್ನು ಬದಿಗೊತ್ತಿ ಸಾರ್ವಭೌಮತ್ವ ಸ್ಥಾಪಿಸಿದ್ದನು ಎಂದು ಹೇಳಬಹುದು.

ಇವನ ಆಳ್ವಿಕೆ ಅವಧಿಯ ಕ್ರಿ.ಶ. ೧೧೬೩ರ ಕಡ್ಲೇವಾಡ, ಕ್ರಿ.ಶ. ೧೧೬೪ರ ಕನ್ನೊಳ್ಳಿ, ಕ್ರಿ.ಶ. ೧೧೬೫ರ ಮನಗೂಳಿ, ಕ್ರಿ.ಶ. ೧೧೬೫ರ ಮುತ್ತಗಿ ಶಾಸನಗಳು[೧೪೮] ಇವನ ಕಾಲಾವಧಿಯದ್ದಾಗಿದ್ದು ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತವೆ. ಆದರೆ ಕ್ರಿ.ಶ. ೧೧೬೬ರ ಕೊಂಡಗೂಳಿ ಶಾಸನವು ಇವನು

ಕಂಗಾರದ ನೆಲವೀಡಿನಲ್ಲಿದ್ದ ಉಲ್ಲೇಖವಿದೆ. ಇವನ ನಂತರದ ಅಂದರೆ ಕ್ರಿ.ಶ. ೧೧೬೮ರ ಕಡ್ಲೇವಾಡ ಶಾಸನವು ರಾಯಮುರಾರಿ ಸೊವಿದೇವನು ಮಂಗಳವೇಡ ನೆಲದಿಂದ ಆಳ್ವಿಕೆ ಮಾಡುತ್ತಿದ್ದನು ಎಂದು ತಿಳಿಸುತ್ತದೆ.[೧೪೯] ಹೀಗಾಗಿ ಇವನ ಕಾಲಾವಧಿಯು ಕ್ರಿ.ಶ. ೧೧೬೭ರಲ್ಲಿ ಕೊನೆಗೊಂಡಿತಲ್ಲದೆ, ರಾಜಧಾನಿಯು ಬದಲಾಗಿ ಬಿಜ್ಜಳನು ಮಂಗಳವೇಡದಿಂದಲೇ ಆಳುತ್ತಿದ್ದನು ಎಂಬುದು ತಿಳಿದುಬರುತ್ತದೆ. ಇವನ ಆಡಳಿತದ ಕೊನೆಯ ಘಟ್ಟದಲ್ಲಿ ಸಮಾಜೋ-ಧಾರ್ಮಿಕ ಕ್ರಾಂತಿಯಿಂದಾಗಿ ಅನೇಕ ಸಮಸ್ಯೆಗಳು ಹುಟ್ಟಿಕೊಂಡವು. ಅವು ಬಿಜ್ಜಳನ ಕೊಲೆಗೂ ಎಡೆಮಾಡಿಕೊಟ್ಟಿತು. ನಂತರ ಇವನ ಮಗ ರಾಯಮುರಾರಿ ಸೋವಿದೇವನು ಪಟ್ಟಕ್ಕೆ ಬಂದನು. ರಾಯಮುರಾರಿ ಸೋವಿದೇವನು ಪಟ್ಟಕ್ಕೆ ಬರುವುದಕ್ಕಿಂತ ಮುಂಚೆ ಸ್ವಲ್ಪ ಕಾಲ ಬಿಜ್ಜಳನ ತಮ್ಮ ಮೈಳುಗಿದೇವ ಅಧಿಕಾರಕ್ಕೆ ಬಂದಿದ್ದನ್ನು ಮುತ್ತಗಿ ಶಾಸನ ಖಚಿತಪಡಿಸುತ್ತದೆ.[೧೫೦]

ರಾಯಮುರಾರಿ ಸೋವಿದೇವ

ಬಿಜ್ಜಳನ ಮಗನಾದ ಸೋವಿದೇವನು ತಂದೆಯ ನಂತರ ಎಂಟು ವರ್ಷ ಆಳ್ವಿಕೆ ಮಾಡಿದನು. ಇವನು ಪಟ್ಟಕ್ಕೆ ಬರುವ ಮೊದಲು ದಾಯಾದಿಗಳ ಅಂತಃಕಲಹದಿಂದ ಅನೇಕ ತೊಂದರೆಗಳನ್ನು ಅನುಭವಿಸಿದನು. ಮುತ್ತಗಿ ಶಾಸನವು 'ಕುಂತಳದೇಶಕ್ಕರಸಾದಂ ತೋಳ್ಬಲದಿಂದೆ ಬಿಜ್ಜಲಕ್ಷ್ಮಿಪತಿಸುತಂ ಕಾಂತಾಕಾರಂ ಕಳಚುರಿ ಸಂತಾನಂ ಸೋವಿದೇವ ನೆಸವ ಗ್ರೀವಂ' ಎಂದು ತಿಳಿಸುತ್ತದೆ.[೧೫೧] ತಂದೆ ಎದುರಿಸಲಾಗದ ಬಿಕ್ಕಟ್ಟನ್ನು ಇವನು ಎದುರಿಸಿ ಕಳಚುರಿ ರಾಜ್ಯಾಭ್ಯುದಯ ಮಾಡಿದ್ದನೆಂದು ಅದು ಬಹಳ ದಿನಗಳವರೆಗೆ ಉಳಿಯಲಿಲ್ಲ. ತಮ್ಮಂದಿರಾದ ಮಲ್ಲುಗಿ ಸಂಕಮರು ಬಂಡೆದ್ದರಿಂದ ಇವನ ಆಳ್ವಿಕೆ ಅಸ್ಥಿರತೆಯಲ್ಲಿತ್ತು.[೧೫೨] ಜಿಲ್ಲೆಯಲ್ಲಿ ಸೋವಿದೇವನಿಗೆ ಸಂಬಂಧಿಸಿದ ೨೩ ಶಾಸನಗಳು ಕಂಡುಬಂದಿದ್ದು ಇವನು ಕ್ರಿ.ಶ. ೧೧೬೭ರಲ್ಲಿ ಅಧಿಕಾರಕ್ಕೆ ಬಂದಿದ್ದು ಸುಮಾರು ಹತ್ತು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದನೆಂದು ತಿಳಿಸುತ್ತವೆ. ಕ್ರಿ.ಶ. ೧೧೭೦ರ ಮುತ್ತಗಿ, ಕ್ರಿ.ಶ. ೧೧೭೦ರ ನಿಡೋಣಿ[೧೫೩] ಶಾಸನಗಳು ಸೋವಿದೇವನು ಮೊದೆಗನೂರು ನೆಲೆವೀಡಿನಿಂದ ಆಳ್ವಿಕೆ ನಡೆಸುತ್ತಿದ್ದನು ಎಂದು ತಿಳಿಸುತ್ತವೆ. ಕ್ರಿ.ಶ. ೧೧೭೧ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಮತ್ತು ಕ್ರಿ.ಶ. ೧೧೭೬ರ ಕಡ್ಲೇವಾಡ ಶಾಸನಗಳು[೧೫೪] ಇವನು ಮಂಗಳವೇಡ ನೆಲೆವೀಡಿನಿಂದ ಆಳುತ್ತಿದ್ದನೆಂದು ತಿಳಿಸುತ್ತವೆ.[೧೫೫] ಅದೇ ರೀತಿ ಕ್ರಿ.ಶ. ೧೧೭೨ರ ಕಡ್ಲೇವಾಡ ಶಾಸನವು ಸೆಲೆಯ ಹಳ್ಳಿಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಸುತ್ತವೆ. ಬಹುಶಃ ಬಿಜ್ಜಳನ ಮರಣದ ನಂತರ ಇವನು ರಾಜಧಾನಿ ಕಲ್ಯಾಣದಿಂದ ರಾಜ್ಯಭಾರ ಮಾಡಲಿಲ್ಲ ಎಂಬುದು ಈ ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೧೭೦ರ ಬಾಗೇವಾಡಿ ಶಾಸನವು ಸೋವಿದೇವನ ಪಟ್ಟಮಹಾದೇವಿ ಪಿರಿಯರಸಿ ಸೋವಲದೇವಿಯನ್ನು,[೧೫೬] ಕ್ರಿ.ಶ. ೧೧೭೬ರ ಇಂಗಳೇಶ್ವರ ಶಾಸನವು ಪೆರ್ಮಾಡಿ ರಾಯನ ಪತ್ನಿ ಮಲ್ಹಣಿದೇವಿಯನ್ನು[೧೫೭] ಉಲ್ಲೇಖಿಸುತ್ತವೆ. ಕ್ರಿ.ಶ. ೧೧೭೦ರ ಅಗರಖೇಡ್ ಶಾಸನವು ಇವನ

ಆಡಳಿತಾವಧಿಯಲ್ಲಿ ಮಹಾಮಂಡಳೇಶ್ವರ ಕೈಲಾಸರಸನು[೧೫೮] ನಂತರ ಕ್ರಿ.ಶ. ೧೧೭೨ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ಲಖಯದೇವನು ತರ್ದವಾಡಿಯನ್ನು ಆಳುತ್ತಿದ್ದರು[೧೫೯] ಎಂದು ಉಲ್ಲೇಖಿಸುತ್ತವೆ. ಕ್ರಿ.ಶ. ೧೧೭೨ರ ಕಡ್ಲೇವಾಡ ಶಾಸನವು ಎಳಮೇಲದ ಮಹಾಮಂಡಳೇಶ್ವರ ಸಿಂಗಿದೇವರಸನು ಮತ್ತು ಸಗರ, ಹಗರಟ್ಟಗೆ ಮತ್ತು ಎಳಮೇಲ ನಾಡನ್ನು ಆಳುತ್ತಿದ್ದ ದಂಡನಾಯಕ ಕುಮಾರ ಬಮ್ಮಿದೇವರಸನನ್ನು ಹೆಸರಿಸುತ್ತದೆ.[೧೬೦] ಕ್ರಿ.ಶ. ೧೧೭೬ರ ಕಡ್ಲೇವಾಡ ಶಾಸನವು ಸಿಂಗಿದೇವರಸ ಮತ್ತು ಬಮ್ಮಿದೇವನನ್ನು ಉಲ್ಲೇಖಿಸುವುದರ ಜೊತೆಗೆ ಸಿಲಾಹಾರವಂಶವನ್ನು ದೀರ್ಘವಾಗಿ ಈ ಶಾಸನ ಉಲ್ಲೇಖಿಸುತ್ತದೆ.[೧೬೧]

ಕ್ರಿ.ಶ. ೧೧೬೯ರ ಬಾಗೇವಾಡಿ, ಕ್ರಿ.ಶ. ೧೧೭೦ರ ವಿಜಾಪುರ, ಕ್ರಿ.ಶ. ೧೧೭೧ರ ಮುತ್ತಗಿ, ಕ್ರಿ.ಶ. ೧೧೭೨ರ ಭೂಯಾರ, ಕ್ರಿ.ಶ. ೧೧೭೩ರ ವಿಜಾಪುರ ಮತ್ತು ಜಂಗಮುರಾಳ, ಕ್ರಿ.ಶ. ೧೧೭೪ರ ನಿಂಬಾಳ, ಕ್ರಿ.ಶ. ೧೧೭೪ರ ಗೋಟಖಂಡ್ಕಿ, ಕ್ರಿ.ಶ. ೧೧೭೫ರ ಸಿರೋಳ, ಕ್ರಿ.ಶ. ೧೧೭೬ರ ನಿಂಬಾಳ, ಹಡ್ಗಿನಾಳ, ಆಲಮೇಲ್ ಶಾಸನಗಳು[೧೬೨] ಸೋವಿದೇವನ ಆಳ್ವಿಕೆಯ ವರ್ಷವನ್ನು ಮತ್ತು ಜಿಲ್ಲೆಯಲ್ಲಿ ಅವನ ಆಡಳಿತವನ್ನು ಕುರಿತು ವಿವರಿಸುತ್ತವೆ.

ಮಲ್ಲುಗಿ ಅಥವಾ ಮಲ್ಲಿಕಾರ್ಜುನ

ಸೋವಿದೇವನ ನಂತರ ಇವನ ಸಹೋದರ ಮಲ್ಲುಗಿದೇವ ಅಧಿಕಾರಕ್ಕೆ ಬಂದನು. ಇವನು ವಾಸಣೂರು ನೆಲವೀಡಿನಿಂದ ಆಳುತ್ತಿರುವುದಾಗಿ ಕ್ರಿ.ಶ. ೧೧೭೬ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ತಿಳಿಸುತ್ತದೆ.[೧೬೩] ಕ್ರಿ.ಶ. ೧೧೭೬ರ ತೆನಿಹಳ್ಳಿ ಮತ್ತು ರೂಗಿ ಶಾಸನವು ಕಳಚುರ್ಯ ಭುಜಬಳ ಚಕ್ರವರ್ತಿ ಮಲ್ಲುಗಿದೇವ ಎಂದು ಉಲ್ಲೇಖಿಸಿದ್ದು ಅವನ ಆಳ್ವಿಕೆಯ ಎರಡನೆಯ ವರ್ಷವನ್ನು ತಿಳಿಸುತ್ತದೆ.[೧೬೪] ಈ ಶಾಸನಗಳನ್ನು ಗಮನಿಸಿದಾಗ ಮಲ್ಲುಗಿಯು ಅವನ ಅಣ್ಣ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿಯೇ ಸ್ವತಂತ್ರವನ್ನು ಘೋಷಿಸಿಕೊಂಡಿದ್ದು ತಿಳಿದುಬರುತ್ತದೆ. ಅಣ್ಣ ಆಳುತ್ತಿರುವಾಗಲೇ ತನ್ನ ಸ್ವತಂತ್ರ್ಯವನ್ನು ಸಾರಿದ ಈ ಸಂಗತಿಯು ಇತಿಹಾಸದಲ್ಲೊಂದು ವಿಲಕ್ಷಣ ಘಟನೆಯಾಗಿ ನಿಂತಿದೆ. ಸೋವಿದೇವ, ಮಲ್ಲುಗಿಯರ ತಮ್ಮ ಸಂಕಮನು ಇದೇ ಅವಧಿಯಲ್ಲಿ ಸ್ವತಂತ್ರವಾಗಿ ಆಳುತ್ತಿದ್ದ ಸಂಗತಿ ಈ ವೈಚಿತ್ರ್ಯವನ್ನು ಇಮ್ಮಡಿಗೊಳಿಸಿದೆ.[೧೬೫] ಇವನಿಗೆ ಸಂಬಂಧಿಸಿದ ಎರಡು ಶಾಸನಗಳು ಜಿಲ್ಲೆಯಲ್ಲಿ ದೊರೆತಿದ್ದು, ಕ್ರಿ.ಶ. ೧೧೭೮ರ ಬಾಗೇವಾಡಿ ಮತ್ತು ಮನಗೂಳಿ ಶಾಸನಗಳು[೧೬೬] ಕಳಚುರ್ಯ ಭುಜಬಳ ಚಕ್ರವರ್ತಿ ಸಂಕಮದೇವ ಮೂರನೇ ವರ್ಷದ ಆಳ್ವಿಕೆಯನ್ನು ತಿಳಿಸುತ್ತವೆ. ಅಲ್ಲದೆ ಇವನು ನವಿಲೆಯ ನೆಲೆವೀಡಿನೊಳು ಇದ್ದನೆಂದು ಇದೇ ಮನಗೂಳಿ ಶಾಸನ ತಿಳಿಸುತ್ತದೆ. ಕಳಚುರಿಗಳಿಗೆ ಸಂಬಂಧಿಸಿದಂತೆ ಅಹವಮಲ್ಲನ ಶಾಸನ ಜಿಲ್ಲೆಯಲ್ಲಿ ದೊರೆತಿರುವ ಕೊನೆಯ ಶಾಸನವಾಗಿದೆ. ಅದು ಕ್ರಿ.ಶ. ೧೧೮೧ರ ತಾಳಿಕೋಟೆ ಶಾಸನವು ಕಳಚುರಿ ಅಹವಮಲ್ಲನ ಮೂರನೆಯ ವರ್ಷದ ಆಳ್ವಿಕೆಯದಾಗಿದ್ದು ಮಹಾಪ್ರಧಾನ ಲಕ್ಷ್ಮೀದೇವ, ಹಗರಟ್ಟಗೆ ೩೦೦ರ ನಾಡಾಧಿಕಾರಿಯಾದ ಪದ್ಮರಸನನ್ನು ಉಲ್ಲೇಖಿಸುತ್ತದೆ.[೧೬೭]

ಈ ಎಲ್ಲ ಶಾಸನಗಳನ್ನು ನೋಡಿದಾಗ ಕಳಚೂರಿ ದಾಯಾದಿಗಳಲ್ಲಿ ಅಧಿಕಾರಕ್ಕಾಗಿ ತಮ್ಮ ತಮ್ಮಲ್ಲೆ ಕಲಹಗಳುಂಟಾಗುತ್ತಿದ್ದದ್ದು ಸ್ಪಷ್ಟವಾಗುತ್ತದೆ. ಈ ಸಂದರ್ಭವನ್ನು ಬಳಸಿಕೊಂಡ ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರನು ಕಳಚುರಿಗಳ ಆಡಳಿತವನ್ನು ಕೊನೆಗೊಳಿಸಿ ಮತ್ತೊಮ್ಮೆ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆದರೆ ಇವನು ಅಸಮರ್ಥನಾಗಿದ್ದುದರಿಂದ ಇದು ವಿಫಲವಾಯಿತು. ಹೀಗಾಗಿ ಈ ಸಂದರ್ಭವನ್ನು ಬಳಸಿಕೊಂಡ ಸೇವುಣರು, ಹೊಯ್ಸಳರು ಮತ್ತು ಕಾಕತೀಯರು ಏಳಿಗೆಗೆ ಬಂದರು.

ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ ಮತ್ತು ಕಳಚುರಿಗಳ ಕಾಲಾವಧಿಯಲ್ಲಿ ಇಡೀ ವಿಜಾಪುರ ಜಿಲ್ಲೆಯ ಭೌಗೋಳಿಕ ಪ್ರದೇಶವು ಪ್ರಾಚೀನ ತರ್ದವಾಡಿ ಸಾವಿರ ಎಂಬ ಆಡಳಿತ ವಿಭಾಗದಲ್ಲಿ ವಿಲೀನಗೊಂಡಿತ್ತು. ಈ ಸಾವಿರ ಹಳ್ಳಿಗಳ ತರ್ದವಾಡಿಯಲ್ಲಿ ಆರುನೂರುಂ ಬಾಡ, ಅಂಕುಲಗೆ ಅಯ್ವತ್ತು, ಎಳಮೇಲ ಮೂವತ್ತು, ಕುಂಮಸಿ ಮೂವತ್ತು, ಕಾರಕುರುವ ನಾಲ್ವತ್ತು, ಖೇಡ ಮೂವತ್ತಾರುಂಬಾಡ, ಎಂಟುಬಾಡ, ಮುತ್ತುಗಿ ಮೂವತ್ತು, ರೂವಿಗೆ ಮೂವತ್ತಾರು, ಸೋಗಿಲು ಪನ್ನೆರಡು, ಹೆಬ್ಬಾಳ ಪನ್ನೆರಡು ಹೀಗೆ ಅನೇಕ ಉಪವಿಭಾಗಗಳನ್ನು ಹೊಂದಿತ್ತು. ಮತ್ತೆ ಇದರಲ್ಲಿ ಅಗ್ರಹಾರ, ಪಟ್ಟಣ, ಗ್ರಾಮಗಳನ್ನಾಗಿ ವಿಂಗಡಿಸಿದ್ದು ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರಮುಖ ಆಡಳಿತದ ವಿಭಾಗದಲ್ಲಿ ಮಹಾಮಂಡಳೇಶ್ವರರು, ಮಂಡಳೇಶ್ವರರು, ದಂಡನಾಯಕರು, ಊರೊಡೆಯರು ಹಾಗೂ ಇತರೆ ಅಧಿಕಾರಿವರ್ಗದವರ ಅಧೀನದಲ್ಲಿ ಇಲ್ಲಿ ಆಡಳಿತ ನಿರ್ವಹಿಸುತ್ತಿದ್ದರು. ಒಂದು ಕೇಂದ್ರೀಕೃತವಾದ ಪ್ರಭುತ್ವವ್ಯವಸ್ಥೆಯನ್ನು ಹೊಂದಿರುವ ಈ ಉಪವಿಭಾಗಗಳು ಮತ್ತು ಗ್ರಾಮಗಳಲ್ಲಿ ಕೋಟೆಗಳನ್ನು ನಿರ್ಮಿಸಿಕೊಂಡಿರುವ ಸಾಧ್ಯತೆಗಳುಂಟು. ವಿಜಾಪುರ, ಹೆಬ್ಬಾಳ, ಮುತ್ತಗಿ, ಸಿಂದಗಿ, ತದ್ದೆವಾಡಿ, ಆಲಮೇಲಗಳಲ್ಲಿ ಇವರ ಆಳ್ವಿಕೆ ಕಾಲದಲ್ಲಿ ನಿರ್ಮಿಸಿದ ಕೋಟೆಗಳು ಇದ್ದವು ಎಂದು ಹೇಳಲಾಗುತ್ತದೆ. ಆದರೆ ಇಂಗಳೇಶ್ವರ ಗ್ರಾಮವನ್ನು ಹೊರತುಪಡಿಸಿದರೆ ಜಿಲ್ಲೆಯಲ್ಲಿ ಇವರ ಆಡಳಿತಾವಧಿಯಲ್ಲಿ ಕೋಟೆ-ಕೊತ್ತಲಗಳು ನಿರ್ಮಿಸಿದ್ದರೂ, ಅವುಗಳ ಅವಶೇಷಗಳು ಉಳಿದುಕೊಂಡು ಬಂದಿಲ್ಲ. ಜಿಲ್ಲೆಯಲ್ಲಿ ಪ್ರಕಟವಾದ ಕೆಲವು ಶಾಸನಗಳು ಕೋಟೆಗಳ ಬಗ್ಗೆ ಉಲ್ಲೇಖಿಸುತ್ತವೆ. ಹೀಗಾಗಿ ಜಿಲ್ಲೆಯಲ್ಲಿ ಕೋಟೆ-ಕೊತ್ತಲಗಳ ನಿರ್ಮಾಣಕಾರ್ಯ ಇವರಿಂದ ಪ್ರಾರಂಭವಾಗಿರಬೇಕು ಎಂದು ಹೇಳಬಹುದು.

ಸೇವುಣರು(ಕ್ರಿ.ಶ. ೧೧೮೦-೧೩೨೦)

ಕಲ್ಯಾಣ ಚಾಳುಕ್ಯ ಮತ್ತು ಕಳಚುರಿಗಳ ಅಂತಃಕಲಹಗಳ ಲಾಭವನ್ನು ಪಡೆದುಕೊಂಡು ಹೊಯ್ಸಳ, ಸೇವುಣ, ಕಾಕತೀಯ ಇನ್ನೂ ಅನೇಕ ಸಣ್ಣಪುಟ್ಟ ಸಾಮಂತರು ಸ್ವತಂತ್ರರಾಗಲು ಪ್ರಯತ್ನಿಸಿದ್ದರು. ಅದರಲ್ಲಿ ಸೇವುಣರು ಪ್ರಮುಖರಾಗಿದ್ದಾರೆ. ಕಳಚುರಿಗಳು ಅಧಿಕಾರಕ್ಕೆ ಬಂದಾಗ ಅವರ ಸಾರ್ವಭೌಮತ್ವವನ್ನು ಇವರು ಒಪ್ಪಿಕೊಳ್ಳಲಿಲ್ಲ. ಇದು ನಾಲ್ಕನೆಯ ಸೋಮೇಶ್ವರ ಅಧಿಕಾರಕ್ಕೆ ಬಂದಾಗಲೂ ಮುಂದುವರಿಯಿತು. ಸಾಮ್ರಾಜ್ಯದ ಮೇಲೆ ಹಿಡಿತ ಸಾಧಿಸಲಾಗದ ಸೋಮೇಶ್ವರ

ರಾಜಧಾನಿಯನ್ನು ಬಿಟ್ಟು ಹೋದಾಗ ಕೂಡಲೇ ಸೇವುಣರ ಐದನೆಯ ಬಿಲ್ಲಮ ಕಲ್ಯಾಣವನ್ನು ಆಕ್ರಮಿಸಿ ಕ್ರಿ.ಶ. ೧೧೮೦ರಲ್ಲಿ ಸೇವುಣ ರಾಜ್ಯ ಸ್ಥಾಪಿಸಿದನು. ಬಹುತೇಕ ಕಲ್ಯಾಣ ಚಾಳುಕ್ಯ ಸಾಮ್ರಾಜ್ಯ ಇವರ ಅಧೀನಕ್ಕೆ ಒಳಪಟ್ಟಿತು.

ಸೇವುಣರನ್ನು ಶಾಸನಗಳಲ್ಲಿ ಸೇವುಣ, ಸೇಗು, ಸೇಉಣ, ಸೇಮುಣ, ಸೇಗುಣ್ಣ ಯಾದವರು ಎಂದು ಉಲ್ಲೇಖಿಸಲಾಗಿದೆ. ಮಹಮ್ಮದೀಯ ಚರಿತ್ರೆಕಾರರು ಕೂಡ ಇವರನ್ನು ಯಾದವರೆಂದು ಕರೆದಿದ್ದಾರೆ. ಇವರ ರಾಜ್ಯವು ಬಹುಮಟ್ಟಿಗೆ ಕನ್ನಡದ ಜಿಲ್ಲೆಗಳನ್ನೇ ಒಳಗೊಂಡಿತ್ತು. ಶಿವಮೊಗ್ಗ, ಹಾಸನ, ಚಿತ್ರದುರ್ಗ, ಧಾರವಾಡ, ವಿಜಾಪುರ, ರಾಯಚೂರು, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳು ಅಥವಾ ಅವುಗಳ ಕೆಲವು ಭಾಗಗಳು ಸೇವುಣರ ರಾಜ್ಯದಲ್ಲಿ ಸೇರಿದ್ದವು. ಕಲ್ಯಾಣದ ಚಾಲುಕ್ಯರ ಅಧೀನದಲ್ಲಿದ್ದ ಕೆಲವು ಮಾಂಡಳಿಕರು ಇವರ ಕಾಲದಲ್ಲೂ ಮುಂದುವರಿದರು. ಅವರಲ್ಲಿ ಪ್ರಮುಖವಾಗಿ ಕರ್ನಾಟಕದ ಸಿಂದರು, ಸಾಂತಾರರು, ರಟ್ಟರು, ಗುತ್ತರು, ಹೈಹೆಯರು, ಸೇವುಣರ ಅಧೀನರಾಗಿ ಆಳಿದರು.

ಭಿಲ್ಲಮ(ಕ್ರಿ.ಶ. ೧೧೮೦–೧೧೯೨)

ಸೇವುಣ ವಂಶದ ಆಳ್ವಿಕೆಯನ್ನು ಸ್ಥಾಪಿಸಿದ ಭಿಲ್ಲಮನು ಕ್ರಿ.ಶ. ೧೧೮೦ರಲ್ಲಿ ಅಧಿಕಾರಕ್ಕೆ ಬಂದನು. ಆದರೆ ಇವನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೧೮೭ರ ನಿಂಬಾಳ ಶಾಸನ ಜಿಲ್ಲೆಯಲ್ಲಿ ದೊರೆತ ಮೊದಲ ಶಾಸನವಾಗಿದ್ದು, ಅದು ಯಾದವನಾರಾಯಣ ಪ್ರತಾಪಚಕ್ರವರ್ತಿ ಭಿಲ್ಲಮದೇವ ತಡವಲಗೆಯ ನೆಲೆವೀಡಿನಿಂದಾಳುತ್ತಿದ್ದುದನ್ನೂ ಅವನ ಪ್ರಧಾನ ದಂಡನಾಯಕ ಮಾಯಿದೇವನಾಗಿರುವುದನ್ನೂ ಹೇಳಿದೆ.[೧೮] ಈತನ ಆಳ್ವಿಕೆಯ ಎರಡು ಮತ್ತು ಮೂರನೇ ವರ್ಷದಲ್ಲಿ ಹೊರಡಿಸಿದ ಕ್ರಿ.ಶ. ೧೧೮೭ರ ಬೆಕ್ಕಿನಾಳ,[೧೯] ಕ್ರಿ.ಶ. ೧೧೮೮ರ ಹಳ್ಳೂರು ಶಾಸನಗಳು[೨೦] ಹಿರಿಯದಂಡನಾಯಕ ವಿಕ್ರಮಾದಿತ್ಯನನ್ನು, ಕ್ರಿ.ಶ. ೧೧೮೯ರ ಪೀರಾಪುರ, ಐರಾಪುರ ಶಾಸನಗಳು[೨೧] ಮಹಾಪ್ರಧಾನಿ ಲಖ್ಮುದೇವನಾಯಕ ಮತ್ತು ಮಹಾಮಂಡಳೇಶ್ವರ ವಿರುಪದೇವರಸನನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೧೮೯ರ ಮುತ್ತಗಿ ಶಾಸನ ಭಿಲ್ಲಮನು ತೆನೆವಲಗೆಯ ನೆಲೆವೀಡಿನಲ್ಲಿದ್ದಂತೆಯೂ ಈತನು ಬಾಹುವಿಕ್ರಮದಿಂದ ರಾಜ್ಯವನ್ನು ಪ್ರತಿಪಾಳಿಸುತ್ತಿದ್ದನೆಂದು ಹೇಳುವುದಲ್ಲದೆ. ಅವನ ಪ್ರಧಾನ ಹಾಗೂ ಬಾಹತ್ತರ ನಿಯೋಗಾಧಿಪತಿಯಾಗಿ ಪೇಯಿಯ ಸಾಹಣಿ ಇದ್ದಂತೆಯೂ ತಿಳಿಸುತ್ತದೆ.[೨೨] ಕ್ರಿ.ಶ. ೧೧೯೦ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ದಂಡನಾಯಕ ವಯಿದೇವರಸನಿದ್ದ ಇವನ ಕೈಕೆಳಗೆ ತಂಬದ ಆರು ಗ್ರಾಮಗಳನ್ನು ಆಳುತ್ತಿದ್ದ ದಂಡನಾಯಕ ವೈಜರಸನನ್ನು ಉಲ್ಲೇಖಿಸುತ್ತದೆ.[೨೩] ಕ್ರಿ.ಶ. ೧೧೯೦ರ ಚೊರಗಿ ಶಾಸನವು ತರ್ದವಾಡಿನಾಡಿನ ಮಹಾಮಂಡಳೇಶ್ವರ ವೀರ ಬಂದುಗೀದೇವರಸ, ಮಹಾಪ್ರಧಾನಿ ಮಾಯಿದೇವ ದಣ್ಣಾಯಕ ಮೊದಲಾದವರನ್ನು ಹೆಸರಿಸುತ್ತದೆ.[೨೪] ಕ್ರಿ.ಶ. ೧೧೯೦ರ ಹಿರೇಬೇವಿನೂರು ಶಾಸನ "ಚೋಳಾಂಭೋರಾಶಿ ಯೌರ್ವ್ವಾನಳನಹಿತ ತುರುಃ ಕಾದ್ರಿ ಸಂಘಾತ ವಜ್ರಂ ಗೌಳಾಂಭೋದಾಳಿ ಝುಂಝಾನಿಳನತುಳ

ಬಳಂ ಗೂರ್ಜ್ಜರೇಬೇಂದ್ರಸಿಂಹಂ ಕಾಳಿಂಗಾನಂಗ ಗೌರೀವರ ನೆನಿಪೆಸೆವೆಂ ತಾಳ್ದಿದೀ ಭಿಲ್ಲಮೋರ್ಬ್ಬೀ ಪಾಳಂಗಾರ್ಪಡಿ" ಎಂದು ಪ್ರಶ್ನಿಸಿ ಆತನ ಅಧಿಕಾರಿ ಮಾಯಿದೇವನಿಂದ ಯಾದವರಾಜ್ಯ ಲಕ್ಷ್ಮೀಶೋಭಿಸುವುದೆಂದಿದೆ.[೧೭೫] ಸಾಲೋಟಗಿ ಶಾಸನ ಗೂರ್ಜರಾವನಿಪಾಳ ಕರೀಂದ್ರಸಿಂಹ ಕಳಚೂರ್ಯ್ಯಕುಳಾರ್ಣ್ಣವ ಬಡವಾಗ್ರಿಶ್ವರ ಬಂದರಸನ ವಂಶಾವಳಿಯನ್ನು ಹೇಳಿದೆ.[೧೭೬] ಕ್ರಿ.ಶ. ೧೧೯೨ರ ಹಿಪ್ಪರಗಿ ಶಾಸನ ಭಿಲ್ಲಮದೇವನ ರಾಜ್ಯಲಕ್ಷ್ಮಿಯೊಳು ಪದುಳದೆ ತರ್ದವಾಡಿಯಿದ್ದು ಪಟ್ಟಸಾಹಣಿ, ಪೆಯಿಯ ಸಾಹಣಿ, ಸೇಲಾರವಂಶದ ಮಹಾಮಂಡಳೇಶ್ವರ ಗೋಣರಸ ಮತ್ತು ತರ್ದವಾಡಿನಾಡನ್ನು ಆಳುತ್ತಿದ್ದ ಮಲ್ಲೆಯ ಸಾಹಣಿಯರನ್ನು ಉಲ್ಲೇಖಿಸುತ್ತದೆ.[೧೭೭] ಕ್ರಿ.ಶ. ೧೧೯೦ರ ಮದಭಾವಿ, ಕ್ರಿ.ಶ. ೧೧೯೧ರ ಬೈರವಾಡಗಿ, ಕ್ರಿ.ಶ. ೧೧೯೨ರ ಮುತ್ತಗಿ ಶಾಸನಗಳು ಭಿಲ್ಲಮನ ಆಳ್ವಿಕೆಯನ್ನು ತಿಳಿಸುತ್ತವೆ.[೧೭೮] ಜಿಲ್ಲೆಯಲ್ಲಿರುವ ಈ ಎಲ್ಲ ಶಾಸನಗಳನ್ನು ಗಮನಿಸಿದಾಗ ವೀರಸೋಮೇಶ್ವರನು ಆಳುತ್ತಿದ್ದ ಕಾಲದಲ್ಲಿಯೇ ಈತ ಸ್ವತಂತ್ರವನ್ನು ಘೋಷಿಸಿಕೊಂಡಿರಬೇಕು. ಎಂಬುದು ತಿಳಿದುಬರುತ್ತದೆ. ಭಿಲ್ಲಮನಿಗೆ ಪ್ರಬಲ ಎದುರಾಳಿ ಹೊಯ್ಸಳರ ಎರಡನೆಯ ಬಲ್ಲಾಳ ರಾಜ್ಯವಿಸ್ತರಣೆಗಾಗಿ ಸೊರಟೂರಿನಲ್ಲಿ ಇಬ್ಬರಿಗೂ ಭೀಕರ ಕದನವೇರ್ಪಟ್ಟು(ಕ್ರಿ.ಶ. ೧೧೮೯-೯೦) ಭಿಲ್ಲಮ ಅಲ್ಲಿಂದ ಹಿಮ್ಮೆಟ್ಟಬೇಕಾಯಿತು. ವ್ಯವಹಾರಗಣಿತ ಬರೆದ ರಾಜಾಧಿತ್ಯ "ವಾಜಿಸಹಿತಂ ಕೊಟ್ಟೊಡಿದಂ ಭಿಲ್ಲಮಂ" ಎಂದಿದ್ದಾನೆ. ಫ್ಲೀಟ್ ಅವನು ಮಡಿದನೆಂದು ಭಾವಿಸಿದ್ದರು. ಆದರೆ ಅವನು ಜೀವಂತವಾಗಿ ರಾಜ್ಯವಾಳಿದುದಕ್ಕೆ ತರ್ದವಾಡಿನಾಡಿನ ಶಾಸನಗಳಲ್ಲಿ ಆಧಾರವಿದೆ.[೧೭೯] ಭಿಲ್ಲಮನು ತನ್ನ ಮಗ ಜೈತುಗಿಗೆ ಕ್ರಿ.ಶ. ೧೧೯೧ರಲ್ಲಿ ರಾಜ್ಯ ವಹಿಸಿಕೊಟ್ಟನು. ಕ್ರಿ.ಶ. ೧೧೯೩ರಲ್ಲಿ ಅವನು ಕಾಲವಾಗಲು ಜೈತುಗಿಯು ಸಿಂಹಾಸನವನ್ನೇರಿದನು.[೧೮೦]

ಜೈತುಗಿ(ಕ್ರಿ.ಶ. ೧೧೯೨-೧೨೦೦)

ಭಿಲ್ಲಮನ ನಂತರ ಅವನ ಮಗ ಜೈತುಗಿ ಅಧಿಕಾರಕ್ಕೆ ಬಂದನು. ಕಡ್ಲೇವಾಡದಲ್ಲಿ ದೊರೆತ ಕ್ರಿ.ಶ. ೧೧೯೨ರ ಶಾಸನವು ಈತನಿಗೆ ಸಂಬಂಧಿಸಿದ ಪ್ರಥಮ ಶಾಸನವಾಗಿದೆ. ಇದು ಜೈತುಗಿಪಾಳನು ದೇವಗಿರಿಯಿಂದ ಆಳ್ವಿಕೆ ಮಾಡುತ್ತಿದ್ದ ಎಂದು ತಿಳಿಸುತ್ತದೆ.[೧೮೧] ವಿಜಾಪುರ ಶಾಸನವು ಇದೇ ವಿಷಯವನ್ನು ತಿಳಿಸುತ್ತದಲ್ಲದೆ ಕಿರುವಿಂಡಿಯಲ್ಲಿ ಬ್ರಾಹ್ಮಣರಲ್ಲದೆ ಜೈನ, ಬೌದ್ಧ, ಗೊರವರು ಇದ್ದರು ಎಂದು ಉಲ್ಲೇಖಿಸುತ್ತದೆ.[೧೮೨] ಕ್ರಿ.ಶ. ೧೧೯೬ರ ವಿಜಾಪುರದ ಇನ್ನೊಂದು ಶಾಸನ ಈತನ ಮಂತ್ರಿ ಹಾಗೂ ಸೇನಾಧಿಪತಿಯಾದ ಸಂಕರಸ ದಂಡನಾಯಕ, ಕರಣ ಕೇಸಿಯಣಯ್ಯನಾಯಕರು ತರ್ದವಾಡಿ ಸಾವಿರವನ್ನು ಆಳುತ್ತಿದ್ದರು ಎಂದು ಹೇಳುತ್ತದೆ.[೧೮೩]

ಕ್ರಿ.ಶ. ೧೧೯೯ರ ದೇವಣಗಾಂವ ಶಾಸನವು ಭಿಲ್ಲಮನನ್ನು "ದ್ವಾರಾವತಿ ಪುರವರಾಧೀಶ್ವರಂ ಯದುವಂಶಾಂಬ ರದ್ಯುಮಣಿ ಯಾದವ ಕುಳಕಮಳಕಳಿಕಾ ವಿಕಾಸಬಾಸ್ಕರ ಅರಿರಾಯವು(ರ)ಸ್ಸಲ್ಲ ಗೂರ್ಜರಭಯಜ್ವರ ಮಾಳವರಾಯದಿಸಾಪಟ್ಟ ತೆಲುಂಗರಾಯ ಕಠೋರ ವಲ್ಲೀಕುಠರ" ಎಂದು ಬಿರುದುಗಳನ್ನು ತಿಳಿಸುತ್ತದೆ. ಅಲ್ಲದೆ ಅವನ ಮಹಾಪ್ರಧಾನ ಮಗರ ಮುರಾರಿ

ಸೋಯಿದೇವನಾಯಕನನ್ನು ಉಲ್ಲೇಖಿಸಿದೆ.[೧೪೪] ಮನಗೂಳಿ ಶಾಸನ ಕುಂತಳದೇಶವನ್ನು ಭಿಲ್ಲಮನ ಮಗನಾದ ಜೈತುಗಿ ಆಳುತ್ತಿದ್ದನೆಂದು ಈತನು ಮಾಳವ ಕಳಿಂಗ, ತುರುಷ್ಕ, ನೇಪಾಳ ಮುಂತಾದ ದೇಶಗಳನ್ನು ನಡುಗಿಸುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೪೫] ಕ್ರಿ.ಶ. ೧೧೯೯ರ ಬಾಗೇವಾಡಿ ಶಾಸನ ಜಯಿತಪಾಳದೇವನ ಎಂಟನೆಯ ವರ್ಷದ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[೧೪೬] ಈ ಶಾಸನಗಳಲ್ಲದೆ ವಿಜಾಪುರ, ದೇವೂರು, ಸಂಖ, ನಾದ ಶಾಸನಗಳು[೧೪೭] ಇವನ ಆಳ್ವಿಕೆಯನ್ನು ಕುರಿತಾಗಿ ವಿವರಿಸುತ್ತವೆ. ಆದರೆ ಜೈತುಗಿಯ ಆಳ್ವಿಕೆಯು ಭಿಲ್ಲಮನ ಆಳ್ವಿಕೆಯಷ್ಟು ಮಹತ್ವದಿಂದ ಕೂಡಿರಲಿಲ್ಲ ಎಂದು ಹೇಳಬಹುದು. ಕ್ರಿ.ಶ. ೧೨೦೦ರಲ್ಲಿ ಜೈತುಗಿ ಮರಣ ಹೊಂದಿದ ಮೇಲೆ ಅವನ ಮಗ ಸಿಂಘಣನು ಅಧಿಕಾರಕ್ಕೆ ಬಂದನು.

ಸಿಂಘಣ(ಕ್ರಿ.ಶ. ೧೨೦೦-೧೨೪೭)

ಜೈತುಗಿ ಮತ್ತು ಚೇಲಾದೇವಿಯರ ಮಗ ಸಿಂಘಣನು ಅಧಿಕಾರಕ್ಕೆ ಬಂದನು. ಇವನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು ೨೯ ಶಾಸನಗಳು ಕಂಡುಬಂದಿವೆ. ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ನಂತರ ಅಂತಹದೇ ಘನತೆ, ಸ್ಥೈರ್ಯವನ್ನು ಸೇವುಣ ರಾಜ್ಯಕ್ಕೆ ತನ್ನ ಐವತ್ತು ವರ್ಷಗಳ ದೀರ್ಘ ಆಳ್ವಿಕೆಯಿಂದ ಇವನು ಒದಗಿಸಿಕೊಟ್ಟ.[೧೪೮]

ಸಿಂಘಣನ ರಾಜ್ಯವು ದಕ್ಷಿಣಾಪಥದ ಬಹುಭಾಗಗಳನ್ನು ಒಳಗೊಂಡಿತ್ತು. ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ವಿಜಯಯಾತ್ರೆಗಳನ್ನು ಕೈಕೊಂಡಿದ್ದನು. ಪೂರ್ವದಲ್ಲಿ ಚಾಂದವರೆಗೆ ಅವನ ರಾಜ್ಯ ಹಬ್ಬಿತ್ತು. ಆಂಧ್ರದ ಪಶ್ಚಿಮಭಾಗ ಎರಡು ದಶಕಗಳ ಕಾಲ ಇವನ ಆಳ್ವಿಕೆಗೆ ಸೇರಿದ್ದಿತ್ತು.[೧೪೯]

ಕ್ರಿ.ಶ. ೧೨೦೦ರ ಕುಮತೆ ಶಾಸನವು ಸಿಂಘಣನ ಆಳ್ವಿಕೆಯ ಕುರಿತ ಪ್ರಥಮ ಶಾಸನವಾಗಿದ್ದು ಇವನ ಆಳ್ವಿಕೆಯ ಎರಡನೆಯ ವರ್ಷದಲ್ಲಿ ಹೊರಡಿಸಲಾಗಿದೆ.[೧೫೦] ಇದೇ ಗ್ರಾಮದ ಇನ್ನೊಂದು ಕ್ರಿ.ಶ. ೧೨೦೧ರ ಶಾಸನ ಇವನ ಮೂರನೆಯ ವರ್ಷದ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[೧೫೧] ಹೀಗಾಗಿ ಕ್ರಿ.ಶ. ೧೧೮೮ ರಲ್ಲಿಯೇ ಸಿಂಘಣನು ಅಧಿಕಾರಕ್ಕೆ ಬಂದಿರಬಹುದು ಎಂದು ಹೇಳಬಹುದು. ಕ್ರಿ.ಶ. ೧೨೦೪ರ ಕಡ್ಲೇವಾಡದ ಶಾಸನವು ಸಿಂಘಣನ ಬಿರುದಾವಳಿಗಳನ್ನು ತಿಳಿಸುವುದಲ್ಲದೆ ಇವನ ತಾಯಿ ಚೇಲಾದೇವಿಯನ್ನು ಉಲ್ಲೇಖಿಸುತ್ತದೆ.[೧೫೨] ಕ್ರಿ.ಶ. ೧೨೦೭ರ ಅರ್ಜುನಗಿ, ಕನ್ನೊಳ್ಳಿ, ಕ್ರಿ.ಶ. ೧೨೦೮ರ ಪಡಗಾನೂರು, ಯರಗಲ್, ಕ್ರಿ.ಶ. ೧೨೨೨ರ ಯಾಳವಾರ, ಬಿಜ್ಜೂರು ಕ್ರಿ.ಶ. ೧೨೨೩ರ ಕೊಲ್ಹಾರ ಶಾಸನಗಳು[೧೫೩] ಸಿಂಘಣನು ದೇವಗಿರಿಯಿಂದ ಆಳ್ವಿಕೆಯನ್ನು ಮಾಡುತ್ತಿದ್ದ ಎಂದು ಉಲ್ಲೇಖಿಸುತ್ತವೆ. ಇದೇ ಪಡಗಾನೂರು ಶಾಸನವು ಈ ವೇಳೆಗೆ ತರ್ದ್ದವಾಡಿ ನಾಡನ್ನು ಕಪಿಲದೇವ ದಂಡನಾಯಕನು ಆಳುತ್ತಿದ್ದನು ಎಂದು ಹೇಳಿದೆ. ಕ್ರಿ.ಶ. ೧೨೨೫ರ ತಾಳಿಕೋಟೆ ಶಾಸನವು ಸಿಂಘಣದೇವನ ಉಪ್ಪರವಟ್ಟದ ಠಾಣಾಧಿಪತಿ ಮಗರ ಮುರಾರಿ ಜಯಿತಪಾಳದೇವ ಹಾಗೂ ಮಾಣಿಕಾದೇವಿಯನ್ನು ಉಲ್ಲೇಖಿಸಿ ಜಯಪಾಳನಾಯಕನು ಹಗರಟ್ಟಿಗೆ ನಾಡ ಮೇಲೆ

ದಾಳಿ ಮಾಡಲು ಬಂದಾಗ ತಾಳಿಕೋಟೆಯ ಶ್ರೀ ಸ್ವಯಂಭು ಸೋಮನಾಥದೇವರಿಗೆ ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೧೯೪] ಕ್ರಿ.ಶ. ೧೨೨೬-೨೭ರ ಚಡಚಣ ಶಾಸನ ಸಿಂಘಣನನ್ನು ಹೊಯಿಸಣ ಬಲ್ಲಾಳ ಗಂಧವಾರಣ ಎಂದು ಉಲ್ಲೇಖಿಸಿದೆ.[೧೯೫]

ಕ್ರಿ.ಶ. ೧೨೩೪ರ ವಿಜಾಪುರ ಶಾಸನ ತಿಕ್ಕರಸನು, ಕ್ರಿ.ಶ. ೧೨೪೪ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ಭಾಗುಬಾಯಿ ಎಂಬುವವರು ತದ್ದವಾಡಿ, ಹೆಡ, ಕಣಂಬಡೆಗಳನ್ನು ಎಂಬ ಮೂರು ನಾಡುಗಳನ್ನು ಕ್ರಮವಾಗಿ ಆಳ್ವಿಕೆ ಮಾಡಿದ್ದರ ಬಗ್ಗೆ ತಿಳಿಸುತ್ತವೆ.[೧೯೬]

ಕ್ರಿ.ಶ. ೧೨೪೪ರ ಕಲಕೇರಿ ಶಾಸನವು ಕುಂತಳದೇಶವನ್ನಾಳಿದ ಯಾದವ ವಂಶದ ಭಿಲ್ಲಮನಿಂದ ಆರಂಭಿಸಿ ಸಿಂಘಣನವರೆಗೆ ವಂಶಾವಳಿಯನ್ನು ಹೇಳಿದೆ. ಇವನ ಪ್ರಧಾನಿಗಳು ಚಿಕ್ಕದೇವನ ಮಕ್ಕಳು ಮಲ್ಲ ಮತ್ತು ಬೀಚ ಎಂಬುವವರು ಬೀಚನನ್ನು ದೋರಸಮುದ್ರವನ್ನು ಮುತ್ತಿ ಗೆದ್ದಂತೆ ಶಾಸನ ತಿಳಿಸುತ್ತದೆ.[೧೯೭]

ತದ್ದೆವಾಡಿ, ಬಟ್ಟುಗಣಿಕೆ, ಕಪ್ಪನಿಂಬರಗಿ, ಕನ್ನೊಳ್ಳಿ, ನಿಡೋಣಿ, ಸರೂರಿನ ಎರಡು, ಕೋರವಾರ, ವಿಜಾಪುರ, ಕುಮಟಗಿ, ನಾಗೂರು, ಕಡ್ನಿ, ಹೆಬ್ಬಾಳ, ಯರಗಲ್, ದೇವಣಗಾಂವ ಶಾಸನಗಳು[೧೯೮] ಜಿಲ್ಲೆಯಲ್ಲಿ ಸಿಂಘಣನ ಆಡಳಿತವನ್ನು ಕುರಿತು ತಿಳಿಸುವ ಶಾಸನಗಳಾಗಿವೆ.

ಕನ್ನರ ಅಥವಾ ಕೃಷ್ಣ(ಕ್ರಿ.ಶ. ೧೨೪೭-೧೨೬೧)

ಸಿಂಘಣನ ನಂತರ ಇವನ ಮೊಮ್ಮಗ ಜಯಿತಪಾಳನ ಮಗ ಕನ್ನರ ಅಥವಾ ಕೃಷ್ಣನು ಅಧಿಕಾರಕ್ಕೆ ಬಂದನು. ಜಿಲ್ಲೆಯ ಶಾಸನಗಳು ಇವನನ್ನು ಕಂಹ್ನರ, ಕನ್ನರ, ಕಂನ್ನರ, ಕಹ್ನರದೇವ ಎಂದು ಉಲ್ಲೇಖಿಸುತ್ತವೆ. ಕ್ರಿ.ಶ. ೧೨೪೮ರ ಅಗರಖೇಡ ಶಾಸನವು ಯಾದವ ನಾರಾಯಣ ಪ್ರತಾಪ ಭುಜಬಳ ಚಕ್ರವರ್ತಿ ಶ್ರೀ ಕಂಹ್ನರದೇವ ಎಂದು ಉಲ್ಲೇಖಿಸಿದ್ದು ಜಿಲ್ಲೆಯಲ್ಲಿ ಇವನಿಗೆ ಸಂಬಂಧಿಸಿದ ಮೊದಲ ಶಾಸನವಾಗಿದೆ.[೧೯೯] ಕಾಲದ ಉಲ್ಲೇಖವಿಲ್ಲದ ಟಾಕಳಿ ಶಾಸನವು ಕನ್ನರದೇವನವರೆಗಿನ ಸೇವುಣರ ವಂಶಾವಳಿಯನ್ನು ತಿಳಿಸುತ್ತದೆ.[೨೦೦]

ಸಾಲವಾಡಗಿಯ ಕ್ರಿ.ಶ. ೧೨೫೧ರ ಶಾಸನ ಯಾದವ ಕನ್ನರದೇವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಪ್ರಧಾನಿ ಮತ್ತು ರಾಯದಂಡಾಧಿಕಾರಿಯಾಗಿದ್ದ ಚವುಡಿಸೆಟ್ಟಿ ಎಂಬುವವನು ಬೆಳುವೊಲ, ಬನವಾಸಿ, ಪಾಂಡ್ಯನಾಡು, ಹಾನುಂಗಲ್, ಕೊಂಡಿನಾಡು, ತರ್ದವಾಡಿ ಮುಂತಾದ ಹಲವು ಮುಖ್ಯ ಗ್ರಾಮಗಳನ್ನು ಆಳುತ್ತಿದ್ದ. ಜೊತೆಗೆ ಇವನ ಮಾವ ರಂಗರಸನು ಸಾಳವಾಡಿಗೆ, ಬಾಗವಾಡಿ ಮುಖ್ಯವಾದ ಹಲವು ಗ್ರಾಮಗಳನ್ನು ಆಳುತ್ತಿದ್ದ ಎಂದು ಉಲ್ಲೇಖಿಸುತ್ತದೆ. ತುಂಗಭದ್ರಾನದಿಯ ದಕ್ಷಿಣ ಭಾಗದ ಪ್ರದೇಶವು ಇವನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೨೦೧] ಇದೇ ಶಾಸನವು ಮಾಳವರಾಯ ಮದನ ತ್ರಿಣೇತ್ರ, ಗೂರ್ಜ್ಜರ ರಾಯಭಯಂಕರಂ ತೆಲುಂಗರಾಯಸ್ತಾಪನಾಚಾರ್ಯ್ಯ ಇತ್ಯಾದಿ ಬಿರುದುಗಳನ್ನು ಹೇಳಿದೆ. ಕ್ರಿ.ಶ. ೧೨೫೭ರ ಫಡೇಕನೂರ

ಶಾಸನ "ಮಾಳವೀಮಲ್ಲ ಅರಿರಾಯವುರಸೆಲ್ಲ ಗೂರ್ಜ್ವರ ವಾರಣಾಂಕುಸ ತೆಲಂಗುರಾಯ ಸಿರಃ ಕಮಳನಾಳ ಮೂಳೋತ್ಪಾಟನ ಪುನರಪಿಸ್ಥಾಪನಾಚಾರ್ಯ್ಯ ಹಮ್ಮಿರರಾಯ ನಿರ್ಮೂಳಭೇದ ಭೂದುರ್ಗ್ಗ, ಗಿರಿದುರ್ಗ್ಗ, ಜಲದುರ್ಗ್ಗ, ವನದುರ್ಗ್ಗ ಪ್ರಮುಖ್ಯ ನಾನಾದುರ್ಗ್ಗವಿದ್ರಾವಣ ಸುವರ್ಣ ಕೀರ್ತಿಗರುಡಧ್ವಜ ಶ್ರೀಮತು ಪ್ರತಾಪಚಕ್ರವರ್ತಿ ಕಲಿಕನ್ನರದೇವ" ಎಂದು ಪ್ರಶಸ್ತಿಯನ್ನು ನೀಡಿದೆ.[೨೦೨] ಮಾಳವ, ಗೂರ್ಜ್ವರ, ತೆಲುಂಗರೊಂದಿಗೆ ಹೋರಾಡಿದ ಇವನು ಬಹುಶಃ ತೆಲುಂಗರಾಯನಿಗೆ ಮರಳಿ ಅಧಿಕಾರವನ್ನೊದಗಿಸಿ ಅವನ ಆಳ್ವಿಕೆ ಭದ್ರಪಡಿಸಿದಂತೆ ತೋರುತ್ತದೆ.[೨೦೩] ನಿಡೋಣಿಯ ಕ್ರಿ.ಶ. ೧೨೫೫ರ ಶಾಸನದಲ್ಲಿ ಕನ್ನರದೇವ ಮತ್ತು ಅವನ ತಮ್ಮ ಮಹಾದೇವನ ಉಲ್ಲೇಖವೂ ಬಂದಿದೆ. ಈ ಶಾಸನದ ಕಾಲಕ್ಕೆ ಮಹಾದೇವ ರಾಜನಾಗಿರಲಿಲ್ಲ. ಆದರೆ ಈ ಶಾಸನವು ಇಬ್ಬರು ದೇವಗಿರಿಯ ನೆಲೆವೀಡಿನಿಂದ ಆಳ್ವಿಕೆ ಮಾಡುತ್ತಿದ್ದುದಾಗಿ ತಿಳಿಸುತ್ತವೆ. ಹೀಗಾಗಿ ಇಬ್ಬರ ಹೆಸರನ್ನು ಉಲ್ಲೇಖಿಸಿದೆ.[೨೦೪] ಕ್ರಿ.ಶ. ೧೨೫೭ರ ಪಡೇಕನೂರು ಶಾಸನ ಬಸರಿಕೋಡದ ಮಹಾಪ್ರಭು ನೂಲರಸನನ್ನು ಉಲ್ಲೇಖಿಸುತ್ತದೆ.[೨೦೫] ಇನ್ನುಳಿದಂತೆ ಜಟ್ಟಗಿ, ಸಾಯನಳ್ಳಿ, ಕಲಕೇರಿ, ವಿಜಾಪುರ ಶಾಸನಗಳು[೨೦೬] ಜಿಲ್ಲೆಯಲ್ಲಿ ಇವನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಮಹದೇವ(ಕ್ರಿ.ಶ. ೧೨೬೦-೧೨೭೧)

ಈ ಮೊದಲು ಸಹೋದರನಾದ ಕನ್ನರದೇವನ ಜೊತೆ ಸಂಯುಕ್ತ ಆಳ್ವಿಕೆ ಮಾಡಿದ್ದನ್ನು ನಿಡೋಣಿ ಶಾಸನವು ಉಲ್ಲೇಖಿಸುತ್ತದೆ. ಇವನ ಸ್ವತಂತ್ರ ಆಳ್ವಿಕೆಗೆ ಸಂಬಂಧಿಸಿದಂತೆ ಕ್ರಿ.ಶ. ೧೨೬೫ರ ಇಂಗಳೇಶ್ವರ ಶಾಸನವು ಜಿಲ್ಲೆಯಲ್ಲಿ ಸಿಗುವ ಒಂದೇ ಒಂದು ಶಾಸನವಾಗಿದೆ. ಮಹದೇವನು ದೇವಗಿರಿಯಿಂದ ಆಳ್ವಿಕೆ ಮಾಡುತ್ತಿದ್ದನೆಂದು ಮತ್ತು ತರ್ದವಾಡಿಯ ಸುಂಕಾಧಿಕಾರಿಯಾಗಿ ಬಸವರಸನು ಇದ್ದ ಎಂದು ತಿಳಿಸುತ್ತದೆ.[೨೦೭]

ರಾಮಚಂದ್ರ(ಕ್ರಿ.ಶ. ೧೨೭೧-೧೩೧೨)

ಮಹದೇವನ ನಂತರ ಸೇವುಣ ರಾಜ್ಯವು ಅವನತಿಯತ್ತ ಸಾಗಿತು. ತಂದೆಯ ನಂತರ ಮಹದೇವನ ಮಗ ಆಮಣನನು ಪಟ್ಟಕ್ಕೆ ಬಂದನು. ಆದರೆ ಕನ್ನರನ ಮಗ ರಾಮಚಂದ್ರನು ಇವನನ್ನು ಕೊಂದು ತಾನೇ ಅಧಿಕಾರಕ್ಕೆ ಬಂದನು. ಸುಮಾರು ನಲವತ್ತು ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ರಾಮಚಂದ್ರನು ಹೊಯ್ಸಳ, ಕಾಕತೀಯ ಮತ್ತು ಮಹಮ್ಮದೀಯರೊಡನೆ ನಿರಂತರ ಯುದ್ಧಗಳಲ್ಲಿ ತೊಡಗಿದ್ದನು. ಈ ಪ್ರದೇಶದ ಕ್ರಿ.ಶ. ೧೨೮೧ರ ಮುದ್ದೇಬಿಹಾಳ ಶಾಸನವು ಯಾದವ ಚಕ್ರವರ್ತಿ ರಾಮಚಂದ್ರದೇವನು ಚೌರಸಿದುರ್ಗವೆಂದು ಹೆಸರಾದ ದೇವಗಿರಿ ನೆಲೆವೀಡಿನಲ್ಲಿ ರಾಜ್ಯವಾಳುತ್ತಿದ್ದನು[೨೦೮] ಎಂದು ತಿಳಿಸಿದೆ. ಕ್ರಿ.ಶ. ೧೨೮೨ರ ವಿಜಾಪುರ ಶಾಸನವು ಇವನ ಸರ್ವಾಧಿಕಾರಿ ದೇವನಾಯಕನನ್ನು, ಕ್ರಿ.ಶ. ೧೩೦೪ರ ಬರಡೋಲ ಶಾಸನ ಮಹಾಮಂಡಳೇಶ್ವರ ಜೈತಪಾಳದೇವನ ಸರ್ವಾಧಿಕಾರಿಯಾದ ವಿಠಲದೇವನಾಯಕನನ್ನು ಹೆಸರಿಸಿವೆ.[೨೦೯] ವಿಜಾಪುರದ ವಸ್ತುಸಂಗ್ರಹಾಲಯದಲ್ಲಿರುವ ಎರಡು ಶಾಸನಗಳು ಇವನ ಆಳ್ವಿಕೆಯನ್ನು ಕುರಿತು ಸ್ಪಷ್ಟಪಡಿಸುತ್ತವೆ.[೨೧೦]

ಯಾದವರ ಆಳ್ವಿಕೆಯ ಕೊನೆಯ ವೇಳೆಗೆ ದಕ್ಷಿಣ ಭಾರತದ ಮೇಲೆ ಮುಸ್ಲಿಮರ ದಾಳಿಗಳು ತೀವ್ರ ಸ್ವರೂಪ ಪಡೆದುಕೊಂಡವು. ಅಲ್ಲಾವುದ್ದೀನ್ ಖಿಲ್ಜಿ ತನ್ನ ದಂಡನಾಯಕ ಮಲ್ಲಿಕಾಫರನ ನೇತೃತ್ವದಲ್ಲಿ ಕ್ರಿ.ಶ. ೧೨೯೬ ಮತ್ತು ಕ್ರಿ.ಶ. ೧೩೦೬ರಲ್ಲಿ ಸೇವುಣರಾಜ ರಾಮಚಂದ್ರನನ್ನು ಸೋಲಿಸುವುದರ ಮೂಲಕ ಅವನ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿ ಸಾಮಂತನನ್ನಾಗಿರಿಸಿದರು. ಆದರೆ ಕ್ರಿ.ಶ. ೧೩೧೩ರ ವೇಳೆಗೆ ರಾಮಚಂದ್ರನ ಮಗ ಶಂಕರದೇವನು ಅಧಿಕಾರಕ್ಕೆ ಬಂದು ಮತ್ತೆ ಸ್ವತಂತ್ರ್ಯವನ್ನು ಘೋಷಿಸಿಕೊಂಡನು. ಆದರೆ ಈ ವೇಳೆಗೆ ಮತ್ತೊಮ್ಮೆ ಮಲ್ಲಿಕಾಫರ್ ದಾಳಿ ಮಾಡಿ ಶಂಕರದೇವನನ್ನು ಕೊಂದು ಇಡೀ ಯಾದವ ಸಾಮ್ರಾಜ್ಯವನ್ನು ಸುಲ್ತಾನನ ನೇರ ಆಡಳಿತಕ್ಕೆ ಒಳಪಡಿಸಿದನು. ಹೀಗಾಗಿ ವಿಜಾಪುರ ಪ್ರದೇಶವು ಕೂಡ ಮುಸ್ಲಿಮರ ಅಧೀನಕ್ಕೊಳಪಟ್ಟಿತು. ಈ ಪ್ರದೇಶವನ್ನು ಗೆದ್ದುಕೊಂಡ ನಂತರ ಮಲ್ಲಿಕಾಫರನು ವಿಜಾಪುರದ ಗವರ್ನರನನ್ನಾಗಿ ಮಲ್ಲಿಕ್ ಇಜ್ಜುದ್ದೀನ್ ಎಂಬ ಖಿಲ್ಜಿನೊಬಲ್‌ನನ್ನು ನೇಮಕ ಮಾಡಿದ. ಇವನು ವಿಜಾಪುರದ ಪ್ರಥಮ ಮುಸ್ಲಿಂ ಗವರ್ನರನಾಗಿದ್ದಾನೆ. ಇವನ ನಂತರ ಇವನ ಮಗ ಕರೀಮುದ್ದೀನ್ ಆಬುರಜಾ ಗವರ್ನರನಾದನು. ಇವನು ಕ್ರಿ.ಶ. ೧೩೧೬ರಲ್ಲಿ ವಿಜಾಪುರ ಅರ್ಕ್‌ಕಿಲ್ಲೆಯಲ್ಲಿ ಮಸೀದಿಯನ್ನು ಕಟ್ಟಿಸಿದನು.[೨೧೧] ಆದರೆ ಹೆನ್ರಿಕಝೀನ್ಸ ಅವರು ಕರಿಮುದ್ದೀನನು ಮಲಿಕ್‌ಕಾಫರನ ಮಗನೆಂದು ಹೇಳುತ್ತಾರೆ.[೨೧೨]

ಅಲ್ಲಾವುದ್ದೀನ್ ಖಿಲ್ಜಿಗೆ ಸಂಬಂಧಿಸಿದ ಕ್ರಿ.ಶ. ೧೩೧೫ರ ಶಾಸನವು ನಾಲ್ವತ್ತವಾಡ ಮಸೀದಿಯೊಂದರಲ್ಲಿದೆ. ಬಖ್ತಿಯಾರ ಖಾನಿಯು ತನ್ನ ಮೇಲ್ವಿಚಾರಣೆಯಲ್ಲಿ ಈ ಮಸೀದಿಯನ್ನು ಕಟ್ಟಿಸಿ ಪೂರ್ಣಗೊಳಿಸಿದನೆಂದು ಮತ್ತು ತಾನು ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನದ ಖಾನಾಜಾದ್(ಗುಲಾಂ) ಎಂಬುದಾಗಿಯೂ ಸೂಚಿಸಲಾಗಿದೆ.[೨೧೩]

ಅಲ್ಲಾವುದ್ದೀನ್ ಖಿಲ್ಜಿ ಮರಣ ಹೊಂದಿದ ನಂತರ ಉತ್ತರಾಧಿಕಾರಿಯಾದ ಮುಬಾರಕನು ಕ್ರಿ.ಶ. ೧೩೧೭ರಲ್ಲಿ ಅಧಿಕಾರಕ್ಕೆ ಬಂದನು. ಈ ವೇಳೆಗೆ ರಾಮಚಂದ್ರನ ಅಳಿಯನು ಹಾಗೂ ಸೇನಾಧಿಪತಿಯಾದ ಹರಪಾಲನ ನೇತೃತ್ವದಲ್ಲಿ ಯಾದವರು ಸ್ವತಂತ್ರರಾಗಲು ಪ್ರಯತ್ನಿಸಿದರಾದರೂ ಸುಲ್ತಾನ ಮುಬಾರಕ ಹಾಗೂ ಇವನ ಸೇನಾಧಿಪತಿಯಾದ ಖುಸ್ತವಖಾನ್ ಅಂತಿಮವಾಗಿ ಸೇವುಣ ರಾಜ್ಯವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರು.[೨೧೪] ವಿಂಧ್ಯಪರ್ವತ ಮತ್ತು ಕೃಷ್ಣಾನದಿಯ ಮಧ್ಯದ ಪ್ರದೇಶವೆಲ್ಲವು ಇವರ ವಶವಾಯಿತು.

ವಿಜಾಪುರ ಜಿಲ್ಲೆಯು ಯಾದವರ ಕಾಲದಲ್ಲಿ ತರ್ದವಾಡಿ ೧೦೦೦, ಮೂವತ್ತಾರುಂಬಾಡ (ವಿಜಾಪುರ ತಾಲೂಕಿನ ಮೂವತ್ತಾರು ಹಳ್ಳಿಗಳನ್ನೊಳಗೊಂಡ ಸಣ್ಣ ಪ್ರಾಂತ್ಯ), ಹಗರ್ತಗೆನಾಡು(ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ರಾಯಚೂರಿನ ಲಿಂಗಸೂಗೂರಿನ ವಾಯುವ್ಯ ಭಾಗಗಳನ್ನು ಒಳಗೊಂಡ ಪ್ರದೇಶ) ಪ್ರಾಂತಗಳಲ್ಲಿ ಹಂಚಿಹೋಗಿತ್ತು. ಈ ಎಲ್ಲ ಪ್ರದೇಶಗಳು ಯಾದವರ ಪತನದೊಂದಿಗೆ ದೆಹಲಿ ಸುಲ್ತಾನರ ಆಧಿಪತ್ಯದಲ್ಲಿ ವಿಲೀನವಾದವು.

ಖಿಲ್ಜಿಗಳ ಅವನತಿಯ ನಂತರ ಕ್ರಿ.ಶ. ೧೩೨೦ರಲ್ಲಿ ತುಘಲಕ್ ಸಂತತಿ ಸ್ಥಾಪನೆಯಾಯಿತು. ಮಹಮ್ಮದ್‌ಬಿನ್ ತುಘಲಕನು ತನ್ನ ಆಡಳಿತಾವಧಿಯಲ್ಲಿ ಪ್ರಾಂತಾಧಿಕಾರಿಗಳ ಆಳ್ವಿಕೆಗೆ ಒಳಪಟ್ಟಿದ್ದ ದಖನ್ ಪ್ರದೇಶಗಳ ಮೇಲೆ ಪೂರ್ಣ ಹಿಡಿತ ಸಾಧಿಸುವ ದೃಷ್ಟಿಯಿಂದ ಸುಲ್ತಾನನು ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ವರ್ಗಾಯಿಸಲು ಪ್ರಯತ್ನಿಸಿದನು. ಆದರೆ ಇದು ಯಶಸ್ವಿಯಾಗದೆ ದೌಲತಾಬಾದಿನಲ್ಲಿ ರಾಜಪ್ರತಿನಿಧಿಯನ್ನು ನೇಮಕ ಮಾಡಿ ಮತ್ತೆ ದೆಹಲಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕಾಯಿತು.

ರಾಜಧಾನಿಯ ವರ್ಗಾವಣೆಯ ಸಮಸ್ಯೆಯಿಂದ ದಖನ್‌ದಲ್ಲಿ ಅಸ್ಥಿರತೆಯುಂಟಾಗಿ ಸೋತಿದ್ದ ರಾಜ್ಯಗಳು ದೆಹಲಿ ಸುಲ್ತಾನರ ದಾಸ್ಯವನ್ನು ಕಳಚಿ ಸ್ವತಂತ್ರರಾಗತೊಡಗಿದರು. ಅಲ್ಲದೆ ದೌಲತಾಬಾದ್‌ನ ಗೌರ್ನರ್ ಆಗಿದ್ದ ಕಮಾಲುದ್ಧೀನ್ ಗರ್ಗನ ಮಗ ಮಲಿಕ್ ಹೋಷಂಗನು ದೆಹಲಿ ಆಡಳಿತದ ವಿರುದ್ಧ ದಂಗೆಯೆದ್ದನು. ಇದರಿಂದ ತುಘಲಕ್‌ನ ಸಾಮ್ರಾಜ್ಯವು ಮತ್ತಷ್ಟು ಶಿಥಿಲವಾಯಿತು.[೨೧೫] ಕಮಾಲುದ್ಧೀನ್ ಗರ್ಗನನ್ನು ತೆಗೆದು ಕುತ್ಲುಗ್‌ಖಾನನ್ನು(ಕ್ರಿ.ಶ. ೧೩೩೫ರಿಂದ ೧೩೪೫)ರ ದೌಲತಾಬಾದಿನ ಗವರ್ನರನನ್ನಾಗಿ ನೇಮಕ ಮಾಡಲಾಯಿತು. ಸಾಮ್ರಾಜ್ಯದ ಶಿಥಿಲತೆಯನ್ನು ದಖನ್‌ದಲ್ಲಿ ಒಂದು ದಶಕ ಕಾಲ ಮುಂದೂಡಿದನು. ಸಮರ್ಥ ಆಡಳಿತವನ್ನು ನಿರ್ವಹಿಸಿದ ಇವನನ್ನು ಕೂಡ ದೆಹಲಿಗೆ ಹಿಂದಕ್ಕೆ ಕರೆಸಿಕೊಂಡನು. ಇಂತಹ ರಾಜಕೀಯ ವೈಫಲ್ಯ ಮತ್ತು ದುರಾಡಳಿತದಿಂದ ಬೇಸತ್ತ ದಖನ್ನಿನ ಅಮೀರಾನ್-ಇ-ಸದಾಹ್‌ರರು ಸೇರಿ ಇಸ್ಮೈಲ್ ಮುಲ್ಕ್ ಎಂಬ ಆಫ್ಘನ್ ಕುಲೀನನ ನೇತೃತ್ವದಲ್ಲಿ ದಂಗೆಯೆದ್ದರು. ಸುಲ್ತಾನನು ಕಾನೂನು ವ್ಯವಸ್ಥೆ ಕಾಪಾಡಲು ಸೈನ್ಯವನ್ನು ಕಳುಹಿಸಿದಾಗ ಅದನ್ನು ಸಂಪೂರ್ಣವಾಗಿ ಸೋಲಿಸಲಾಯಿತು. ಇಸ್ಮೈಲ್ ಮುಲ್ಕನ ಕೈಕೆಳಗೆ ದಖ್ಖನ್ ಪ್ರದೇಶವು ಸ್ವತಂತ್ರವೆಂದು ಘೋಷಿಸಿಕೊಂಡಿತು. ಅವನನ್ನು ನಸೀರುದ್ಧೀನ್ ಇಸ್ಮೈಲ್‌ಷಹಾ ಎಂಬ ಹೆಸರಿನಲ್ಲಿ ದಖ್ಖನಿನ ಸುಲ್ತಾನನ್ನಾಗಿ ಆಯ್ಕೆ ಮಾಡಲಾಯಿತು.[೨೧೬] ದೆಹಲಿ ಸುಲ್ತಾನನ ವಿರುದ್ಧದ ದಂಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಜಫರ್‌ಖಾನನನ್ನು ಮುಂದೆ ಎಲ್ಲ ಅಮೀನರು ಒಪ್ಪಿಕೊಂಡು ದೌಲತಾಬಾದಿನ ಸಿಂಹಾಸನದಲ್ಲಿ ಕೂಡಿಸಿದರು. ಇವನು ಕ್ರಿ.ಶ. ೧೩೪೭ ಆಗಸ್ಟ್ ೩ರಂದು ಅಬುಲ್ ಮುಜಫರ್ ಅಲ್ಲಾವುದ್ಧೀನ್ ಬಹಮನ್ ಷಾ ಎಂಬ ಹೆಸರಿನಿಂದ ಸಿಂಹಾಸನವೇರಿ ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದ.

ಬಹಮನಿ ಸಾಮ್ರಾಜ್ಯ(ಕ್ರಿ.ಶ. ೧೩೪೭ ರಿಂದ ೧೫೩೮)

ಅಲ್ಲಾವುದ್ಧೀನ್ ಹಸನ್ ಬಹಮನ್ ಷಾ(ಕ್ರಿ.ಶ. ೧೩೪೭–೧೩೫೮)

ಕ್ರಿ.ಶ. ೧೩೪೭ರಲ್ಲಿ ಬಹಮನಿ ಮನೆತನ ಸ್ಥಾಪನೆಯನ್ನು ಮಾಡಿ ಅಧಿಕಾರಕ್ಕೆ ಬಂದ ಹಸನ್‌ಗಂಗು ಬಹಮನ್‌ಷಾನು ಮೊದಲು ದೆಹಲಿ ಸುಲ್ತಾನರ ಮತ್ತು ಸ್ಥಳೀಯ ನಾಯಕರ ವಿರುದ್ಧ ದಂಡಯಾತ್ರೆ ಕೈಗೊಂಡು ರಾಜ್ಯವಿಸ್ತರಣೆ ಮಾಡುವ ಯೋಜನೆ ಹಾಕಿಕೊಂಡನು. ಬಹಮನ್‌ಷಾಗೆ ಹೊಸರಾಜ್ಯ ವಿಸ್ತರಣೆಗೆ ಹಿಂದೂ ಪ್ರಾಂತಗಳಿಗಿಂತಲೂ ತುಘಲಕ್ ಪರವಾಗಿದ್ದ

ನಾಯಕರೇ ಹೆಚ್ಚು ಪ್ರತಿರೋಧ ವ್ಯಕ್ತಪಡಿಸುತ್ತಿದ್ದರು. ಹೀಗಾಗಿ ತುಘಲಕ್‌ರ ಅಧೀನದಲ್ಲಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಮುಖ್ಯ ಕಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಕೋಟಗೀರ ಮೇಲೆ ಗುರ್ಷಾಸ್ಪನು, ಮಾರಂ, ಮಹೇಂದ್ರಿ ಮತ್ತು ಅಕ್ಕಲಕೋಟೆಗಳ ಮೇಲೆ ರಜಿಯುದ್ಧೀನನು, ಕಲ್ಯಾಣದ ಮೇಲೆ ಕೀರ್‌ಖಾನನು, ಬೀದರ ಮತ್ತು ಮಳಖೇಡ ಮೇಲೆ ಸಿಕಂದರ್‌ಖಾನನು ದಾಳಿ ಮಾಡಿ ಈ ಸ್ಥಳಗಳನ್ನು ವಶಪಡಿಸಿಕೊಂಡರು. ಮಳಖೇಡದಿಂದ ರಾಜ್ಯವನ್ನು ವರಂಗಲ್‌ವರೆಗೆ ವಿಸ್ತರಿಸಲಾಯಿತು. ವರಂಗಲ್‌ನ ಕಾಪನಾಯಕನ ಜೊತೆ ರಾಜನೈತಿಕ ನೈಪುಣ್ಯದಿಂದ ಅವನನ್ನು ಬಹಮನಿ ಪ್ರಭಾವಲಯಕ್ಕೆ ಸೇರಿಸಲಾಯಿತು. ಪೋಚರೆಡ್ಡಿ ಎಂಬುವವನ ಅಧೀನದಲ್ಲಿದ್ದ ಗುಲಬರ್ಗಾವನ್ನು ವಶಪಡಿಸಿಕೊಂಡು ಅದಕ್ಕೆ ಅಹಸನಾಬಾದ್ ಎಂದು ನಾಮಕರಣ ಮಾಡಿದ. ಅಲ್ಲದೆ ದೌಲತಾಬಾದ್‌ನಿಂದ ರಾಜಧಾನಿಯನ್ನು ಗುಲಬರ್ಗಾಕ್ಕೆ ವರ್ಗಾಯಿಸಿದ. ಕ್ರಿ.ಶ. ೧೩೪೭ರ ಸುಮಾರಿಗೆ ಕೆಂಭಾವಿಯನ್ನು ವಶಪಡಿಸಿಕೊಂಡ ಮೇಲೆ ಮುಂದೆ ಸಾಗಿ ಮುಧೋಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನಾರಾಯಣ ಎಂಬ ಹಿಂದೂ ನಾಯಕನು ಆಳುತ್ತಿದ್ದನು. ಇವನನ್ನು ಸೋಲಿಸಿ ಜಮಖಂಡಿ, ಮುಧೋಳಗಳಲ್ಲದೆ ನಾರಾಯಣನ ದಂಡನಾಯಕ ಗೋಪಾಲ ಮತ್ತು ಇತರರ ರಕ್ಷಣೆಯಲ್ಲಿದ್ದ ತೇರದಾಳ ಮತ್ತು ಬಾಗಲಕೋಟೆಗಳನ್ನು ವಶಪಡಿಸಿಕೊಂಡನು.[೨೧೭] ಬಹಮನಿ ಸಾಮ್ರಾಜ್ಯವನ್ನು ನಾಲ್ಕು ಪ್ರಾಂತಗಳನ್ನಾಗಿ ವಿಂಗಡಿಸಿದ್ದು ಅವುಗಳಲ್ಲಿ ಅಹಸನಾಬಾದ್ ಅಥವಾ ಗುಲಬರ್ಗಾ ಪ್ರಧಾನ ಪ್ರಾಂತವಾಗಿತ್ತು. ಅದರಲ್ಲಿ ಇಂದಿನ ವಿಜಾಪುರ ಜಿಲ್ಲಾಪ್ರದೇಶವು ಅಂತರ್ಗತವಾಗಿತ್ತು. ಸುಲ್ತಾನನು ಈ ಪ್ರಾಂತದ ಆಡಳಿತವನ್ನು ತನ್ನ ಮಾವ ಹಾಗೂ ರಾಜ್ಯದ ಪ್ರಧಾನಮಂತ್ರಿ ಆಗಿದ್ದ ಮಾಲಿಕ್ ಸೈಫುದೀನ್ ಘೋರಿಗೆ ವಹಿಸಿಕೊಟ್ಟಿದ್ದನು. ದಖನ್‌ದಲ್ಲಿ ಒಂದು ಹೊಸ ರಾಜ್ಯವನ್ನು ಕಟ್ಟಿ ತನ್ನ ರಾಜನೈತಿಕ ನೈಪುಣ್ಯ, ನ್ಯಾಯ ಮತ್ತು ಧರ್ಮಪರ ನೀತಿಯಿಂದ ಅದನ್ನು ಭದ್ರವಾದ ಬುನಾದಿಯ ಮೇಲೆ ನಿಲ್ಲಿಸಿ ಕ್ರಿ.ಶ. ೧೩೫೮ರಲ್ಲಿ ಮೃತನಾದನು.

ಒಂದನೆಯ ಮಹಮ್ಮದ್(ಕ್ರಿ.ಶ. ೧೩೫೮-೧೩೭೫)

ಹಸನ್‌ಗಂಗು ಬಹಮನ್‌ಷಾನ ಮರಣದ ನಂತರ ಇವನ ಹಿರಿಯ ಮಗ ಒಂದನೆಯ ಮಹಮ್ಮದ್ ಅಧಿಕಾರಕ್ಕೆ ಬಂದನು. ಬಹಮನಿ ಮನೆತನಕ್ಕೆ ಭದ್ರಬುನಾದಿಯನ್ನು ಹಾಕಿದ. ಇವನ ಅವಧಿಯಲ್ಲಿಯೇ ವಿಜಯನಗರದೊಂದಿಗೆ ಪ್ರಾರಂಭವಾದ ಮುಸ್ಲಿಂ ಅರಸರ ಕದನಗಳು ಕ್ರಿ.ಶ. ೧೫೬೫ರಲ್ಲಿ ತಾಳಿಕೋಟೆ ಯುದ್ಧದವರೆಗೂ ಅವ್ಯಾಹತವಾಗಿ ನಡೆದುಕೊಂಡು ಬಂದವು. ಕ್ರಿ.ಶ. ೧೩೬೫-೬೬ರಲ್ಲಿ ಬುಕ್ಕರಾಯನ ಜೊತೆಗೆ ಮಾಡಿದ ಯುದ್ಧವು ಪ್ರಮುಖವಾದುದು. ಒಂದನೇ ಮಹಮ್ಮದನು ರಾಜ್ಯಗಳನ್ನು ನಾಲ್ಕು ತರಫ್‌ಗಳೆಂಬ ಪ್ರಾಂತ್ಯಗಳನ್ನಾಗಿ ವಿಂಗಡಿಸಿದ ಅದರಂತೆ ವಿಜಾಪುರ ಪ್ರದೇಶವನ್ನೊಳಗೊಂಡ ಗುಲಬರ್ಗಾ ಪ್ರಾಂತಕ್ಕೆ ಮಲ್ಲಿಕ್ ನಾಯಿಬ್‌ನನ್ನು ನೇಮಿಸಿದನು.[೨೧೮] ಆಧೋನಿಯ ಮುತ್ತಿಗೆಯಲ್ಲಿ ಬಹಮನಿ ಸೈನ್ಯದಲ್ಲಿ ಮೊದಲ ಬಾರಿಗೆ ಸಿಡಿಮದ್ದನ್ನು ಬಳಸಿದನು. ಇದರಿಂದ ದಕ್ಷಿಣ ಭಾರತದಲ್ಲಿ ಕೋಟೆಯ ನಿರ್ಮಾಣದ ವಾಸ್ತುಶಿಲ್ಪವೇ ಬದಲಾಯಿತು.[೨೧೯]

ಇವನ ಆಡಳಿತದ ನಂತರ ಕ್ರಿ.ಶ. ೧೩೭೫ರಿಂದ ೧೪೨೨ರವರೆಗೆ ಒಟ್ಟು ೪೭ ವರ್ಷಗಳ ಅವಧಿಯಲ್ಲಿ ಆರು ಮಂದಿ ಸುಲ್ತಾನರು ಆಳ್ವಿಕೆಯನ್ನು ಮಾಡಿದರು. ಅಲ್ಲಾವುದ್ದೀನ್ ಮುಜಾಹಿದ್(ಕ್ರಿ.ಶ. ೧೩೭೫–೭೮), ಒಂದನೆಯ ದಾವೂದ್(ಕ್ರಿ.ಶ. ೧೩೭೮), ಎರಡನೆಯ ಮುಹಮ್ಮದ್(ಕ್ರಿ.ಶ. ೧೩೭೮–೧೩೯೭), ಘೀಯಾಸುದ್ಧೀನ್ ತಹಂತನ್(ಕ್ರಿ.ಶ. ೧೩೯೭), ಎರಡನೆಯ ಶಂಸುದ್ಧೀನ್ ದಾವೂದ್(ಕ್ರಿ.ಶ. ೧೩೯೭), ತಾಜುದ್ಧೀನ್ ಫಿರೋಜ್(ಕ್ರಿ.ಶ. ೧೩೯೭–೧೪೨೨), ಈ ಅವಧಿಯು ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಮಹತ್ವವಾದದ್ದು. ಇವರ ಆಳ್ವಿಕೆಯಲ್ಲಿ ವಿಜಯನಗರದ ಜೊತೆ ತುಂಗಭದ್ರಾ ಮತ್ತು ಕೃಷ್ಣಾನದಿಗಳ ಮಧ್ಯದ ದೋ–ಅಬ್ ಪ್ರದೇಶಕ್ಕಾಗಿ ಸಂಘರ್ಷಗಳು ಮುಂದುವರಿದಿದ್ದವು. ಅಲ್ಲದೆ ಬಂಕಾಪುರ ಮತ್ತು ತೆಲಂಗಾಣದ ವಿಷಯವಾಗಿ ಇವರ ಮಧ್ಯೆ ಕಲಹಗಳು ಮತ್ತಷ್ಟು ಏರ್ಪಟ್ಟವು. ಕ್ರಿ.ಶ. ೧೩೭೫ರ ಪ್ರಾರಂಭದ ವೇಳೆಗೆ ವಿದೇಶಿಯರ ಒಳಹರಿವು ದಖ್ಖನಿನ ರಾಜಕಾರಣದಲ್ಲಿ ಆತಂಕದ ಅಂಶವಾಗಿ ಪರಿಣಮಿಸಿತು. ಬಹಮನಿ ರಾಜ್ಯ ಸ್ಥಾಪನೆಯಿಂದ ಮುಸ್ಲಿಮರು ಉತ್ತರ ಭಾರತದಿಂದ ಬರುವುದು ನಿಂತಿತು.[೨೨೦] ಅಲ್ಲದೆ ಈ ೪೭ ವರ್ಷದ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ಉತ್ತರದಲ್ಲಿ ತೈಮೂರನ ದಾಳಿಯನ್ನು ಅರಿತುಕೊಂಡ ತಾಜುದ್ಧೀನ್ ಫಿರೋಜ್ ಮಧ್ಯ ಏಷಿಯಾದ ತೈಮೂರನ ಮಧ್ಯೆ ರಾಜತಾಂತ್ರಿಕ ಒಪ್ಪಂದವನ್ನು ಬೆಳೆಸಿದನು. ಇದು ಇವನ ದೂರದೃಷ್ಟಿಯ ಪ್ರತೀಕವೆನಿಸಿದೆ. ಈ ಕಾಲಾವಧಿಯಲ್ಲಿ ದಕ್ಷಿಣದಲ್ಲಿ ಕೆಲವೊಂದು ಬದಲಾವಣೆಗಳಾದವು.

ಮೊದಲನೆಯ ಶಿಹಾಬುದ್ಧೀನ್ ಅಹಮ್ಮದ್ ಷಾ(ಕ್ರಿ.ಶ. ೧೪೨೨–೧೪೩೬)

ತಾಜುದ್ಧೀನ್ ಫಿರೋಜ್‌ನ ಮರಣದ ನಂತರ ಶಹಾಬುದ್ಧೀನ್ ಅಹಮ್ಮದ್ ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯ ಪ್ರಾರಂಭದಲ್ಲಿಯೇ ರಾಜಧಾನಿಯಲ್ಲಿ ಅಧಿಕಾರಕ್ಕಾಗಿ ಕಿತ್ತಾಟ, ಒಳಸಂಚು, ಪಿತೂರಿಗಳ ಕೇಂದ್ರವಾಗಿತ್ತು. ಹೀಗಾಗಿ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರ್‌ಗೆ ವರ್ಗಾಯಿಸಿದನು.[೨೨೧] ವಿಜಯನಗರ, ಮಾಹೋರ, ಮಾಳ್ವ, ಗುಜರಾತ, ಕೊಂಕಣ ಮತ್ತು ತೆಲಂಗಾಣದ ಮೇಲಿನ ಇವನ ದಾಳಿಗಳು ಪ್ರಮುಖವಾಗಿವೆ. ಈ ಪ್ರದೇಶಗಳ ಮೇಲೆ ದಾಳಿ ಕೈಗೊಂಡು ಯಶ ಸಾಧಿಸಿದನಲ್ಲದೆ. ಸಾಮ್ರಾಜ್ಯವನ್ನು ವಿಸ್ತರಿಸಿದನು. ದಖ್ಖನಿಯ ಹಿಂದೂ–ಮುಸ್ಲಿಂ ಸಂಸ್ಕೃತಿಯ ಬೆಸುಗೆಯ ಹರಿಕಾರನಾಗಿದ್ದ ಇವನು ಇರಾನಿಯನ್ನರು, ಇರಾಕಿಗಳು ಮತ್ತು ಅರಬರ ಆಗಮನಕ್ಕೆ ಮತ್ತು ಸಂಸ್ಕೃತಿಯ ಸಮ್ಮಿಲನಕ್ಕೆ ಕಾರಣನಾಗಿದ್ದಾನೆ. ಜೊತೆಗೆ ದಖ್ಖನದ ಕಲೆ, ವಾಸ್ತುಶಿಲ್ಪ, ಧರ್ಮ ಮೊದಲಾದ ರಂಗಗಳಲ್ಲಿ ಉತ್ತಮ ಕೊಡುಗೆಯನ್ನು ಕೊಟ್ಟಿದ್ದಾನೆ.

ಎರಡನೆಯ ಅಲ್ಲಾವುದ್ಧೀನ್ ಅಹಮದ್(ಕ್ರಿ.ಶ. ೧೪೩೬–೧೪೫೮)

ತಂದೆಯ ಮರಣಾನಂತರ ಜಫರ್‌ಖಾನನು ಅಹಮದ್ ಎಂಬ ಬಿರುದಿನಿಂದ ಸಿಂಹಾಸನವನ್ನೇರಿದನು. ಇವನ ಆಳ್ವಿಕೆಯು ದೋಷಯುಕ್ತ ನೀತಿಗಳಿಂದಲೇ ಪ್ರಾರಂಭವಾಯಿತು. ಇವನು ಕೂಡಾ ರಾಜಕೀಯ ಸಂಬಂಧಗಳಲ್ಲಿ ತನ್ನ ಪರಂಪರಾಗತ ವೈರಿಗಳಾದ ವಿಜಯನಗರ,

ತೆಲಂಗಾಣ, ಖಾನದೇಶ, ಗುಜರಾತ ಮತ್ತು ಮಾಳವಗಳೊಂದಿಗೆ ಕಲಹಗಳನ್ನು ಎದುರಿಸಿದನು. ಕ್ರಿ.ಶ. ೧೪೩೬ರ ಅವಧಿಯಲ್ಲಿ ಸಹೋದರ ಮಹಮ್ಮದ್ ಖಾನನು ತಾನೇ ಸುಲ್ತಾನನಾಗಬೇಕೆಂದು ಸುಲ್ತಾನನ ವಿರುದ್ಧ ದಂಗೆಯೆದ್ದನು. ಇದಕ್ಕೆ ಎರಡನೇ ದೇವರಾಯನ ಸಹಾಯವನ್ನು ಪಡೆದ ಎಂದು ಫೇರಿಸ್ತಾ ಹೇಳುತ್ತಾನೆ. ಮಹಮ್ಮದಖಾನ್‌ನು ಸುಲ್ತಾನನ ಮಂಡಲಾಧಿಪತಿಗಳಿಂದ ಮುದಗಲ್, ರಾಯಚೂರು, ಸೊಲ್ಲಾಪುರ, ವಿಜಾಪುರ ಮತ್ತು ನಳದುರ್ಗಗಳನ್ನು ವಶಪಡಿಸಿಕೊಂಡ. ತಕ್ಷಣ ಸುಲ್ತಾನನು ಭಾರಿ ಸೈನ್ಯದೊಂದಿಗೆ ಹೋಗಿ ದಂಗೆಯನ್ನು ನಿಗ್ರಹಿಸಿದನಲ್ಲದೆ, ಉದಾರಿ ದೊರೆ ಇವನನ್ನು ಕ್ಷಮಿಸಿ ರಾಯಚೂರಿನ ಕೋಟೆ ಮತ್ತು ಪ್ರದೇಶಗಳನ್ನು ಅವನಿಗೆ ನೀಡಿದನು.[೨೨೨] ಇದನ್ನು ಪುಷ್ಟೀಕರಿಸುವ ಶಾಸನವೊಂದು ಜಿಲ್ಲೆಯ ಹಲಸಂಗಿಯಿಂದ ವರದಿಯಾಗಿದೆ. ಇದು ಸುಲ್ತಾನನ ಸಾಮ್ರಾಜ್ಯದ ಗಡಿಯನ್ನು ನಿರ್ದೇಶಿಸುವ ಗಡಿಬಂಧ ಶಾಸನವಾಗಿದೆ.[೨೨೩]

ಕ್ರಿ.ಶ. ೧೪೪೩ರಲ್ಲಿ ಎರಡನೆಯ ದೇವರಾಯನು ಬಹಮನಿಯರ ಮೇಲೆ ದಾಳಿ ಮಾಡಿದ. ಇದೇ ವೇಳೆಯಲ್ಲಿ ಇವನ ಸೈನಿಕ ತಂಡಗಳಿಂದ ಸೌಘರ(ಸಗರ) ಮತ್ತು ವಿಜಾಪುರಗಳನ್ನು ಸುಲಿಗೆ ಮಾಡಿ ನಗರಗಳನ್ನು ಬೆಂಕಿ ಹಾಗೂ ಕತ್ತಿಗಳಿಂದ ನಾಶಪಡಿಸಿದ. ಈ ದಾಳಿಯನ್ನು ವಿಜಾಪುರದ ಮಂಡಲಾಧಿಪತಿ ಖಾನ್ ಝುಮೌನ್, ಬೇರಾರ್ ಮತ್ತು ತೆಲಂಗಾಣದ ಸೈನ್ಯಗಳ ದಂಡನಾಯಕರಾದ ಖಾನ ಅಝಿಮ್‌ರ ಮೂಲಕ ಶತ್ರುಪಡೆಯನ್ನು ನಾಶಪಡಿಸಿದ.[೨೨೪]

ಅಲ್ಲಾವುದ್ದೀನ್ ಹುಮಾಯೂನ್ ಷಾ(ಕ್ರಿ.ಶ. ೧೪೫೮–೧೪೬೧)

ಎರಡನೆಯ ಅಲ್ಲಾವುದ್ದೀನ್ ಅಹಮ್ಮದ್‌ನ ನಂತರ ಇವನ ಮಗ ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯು ಒಳಸಂಚುಗಳು, ಪಿತೂರಿಗಳು ಮತ್ತು ಆಂತರಿಕ ಅಂತಃಕಲಹಗಳಿಂದ ತುಂಬಿಹೋಗಿದ್ದವು. ಇವನು ಸಿಂಹಾಸನಕ್ಕೆ ಬರುವುದನ್ನು ವಿರೋಧಿಸಿದ ಇವನ ತಮ್ಮ ಹಸನ್‌ಖಾನ್ ಸಿಂಹಾಸನವನ್ನು ಬಲಾತ್ಕಾರದಿಂದ ಕಸಿದುಕೊಂಡನು.[೨೨೫] ಹುಮಾಯೂನನು ಕೆಲವೇ ಸಹಚರರೊಂದಿಗೆ ದಾಳಿ ಮಾಡಿದಾಗ ಈತನು ವಿಜಯನಗರಕ್ಕೆ ಓಡಿಹೋಗಿ ಆಶ್ರಯ ಪಡೆಯಲು ಪ್ರಯತ್ನಿಸಿದನು. ಆದರೆ ಮಧ್ಯೆ ವಿಜಾಪುರಕ್ಕೆ ಬಂದಾಗ ಅವನನ್ನು ಹಾಗೂ ಅವನ ಬೆಂಬಲಿಗರನ್ನು ವಿಜಾಪುರದ ಕೊತ್ವಾಲ ಸಿರಾಜುದ್ದೀನ್ ಜುನ್ಯೆದಿಯು ಇವನನ್ನು ಆದರಿಸಿದಂತೆ ನಟಿಸಿ ಅವನ ಹಿಂಬಾಲಕರನ್ನು ಕೊಂದು ಹಸನ್‌ಖಾನ್‌ನನ್ನು ಬಂಧಿಸಿ ರಾಜಧಾನಿಗೆ ಕಳುಹಿಸಿದನು.[೨೨೬] ಅಲ್ಲಾವುದ್ದೀನನು ಮುಂದೆ ಬಹಮನಿ ಸಾಮ್ರಾಜ್ಯದ ಅಭ್ಯುದಯದಲ್ಲಿ ಮಹತ್ವದ ಪಾತ್ರ ವಹಿಸಲಿದ್ದ ಮಹಮದ್ ಗವಾನನನ್ನು ವಕೀಲ್–ಉಸ್–ಸುಲ್ತಾನೇಟ್‌ನೆಂದು ನೇಮಿಸಿ ವಿಜಾಪುರದ ಆಡಳಿತವನ್ನು ಅವನಿಗೆ ವಹಿಸಿದನು.[೨೨೭] ಮುಂದೆ ಇವನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಿದನು. ನ್ಯಾಯಪರತೆ, ಸಮಾನತೆಗುಣಗಳಿಂದಲೂ ಆಳವಾದ ಚಿಂತನಶಕ್ತಿಯಿಂದ ಅವನತಿಯ ಹಂತದಲ್ಲಿದ್ದ ಬಹಮನಿ ರಾಜ್ಯವು ಮೂರು ದಶಕಗಳ ಕಾಲ ಗವಾನನ ಆಡಳಿತದಲ್ಲಿ ಮುಂದುವರೆಯಿತು.

ಮೂರನೆಯ ನಿಜಾಮುದ್ದೀನ್ ಅಹ್ಮದ್ ಷಾ(ಕ್ರಿ.ಶ. ೧೪೬೧-೬೩)

ಹುಮಾಯೂನನ ನಂತರ ಅವನ ಮಗ ಮೂರನೆಯ ನಿಜಾಮುದ್ದೀನ ಅಹ್ಮದ್ ಎಂಟು ವರ್ಷದವನಿದ್ದಾಗ ಅಧಿಕಾರಕ್ಕೆ ಬಂದನು. ಹೀಗಾಗಿ ಈ ಹಿಂದೆ ಹುಮಾಯೂನನು ರಚಿಸಿದ ಒಂದು ರಾಜಪ್ರತಿನಿಧಿ(ರೀಜೆನ್ಸಿ) ಆಡಳಿತವೇ ಇವನ ಅವಧಿಯಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸಿತು. ಅದರಲ್ಲಿ ಮೂವರು ಸದಸ್ಯರಿದ್ದರು. ಮಹಮೂದ್‌ಗವಾನ್, ಖ್ವಾಜಾ ಜಹಾನ್ ಮತ್ತು ವಿಧವೆ ರಾಣಿ ಮುಖ್ದುಂ-ಇ-ಜಹಾನ್ ಅಹ್ಮದನ ಆಳ್ವಿಕೆಯು ಅಲ್ಪಕಾಲಾವಧಿಯದ್ದಾಗಿದ್ದು, ಇವನು ಕ್ರಿ.ಶ. ೧೪೬೩ರಲ್ಲಿಯೇ ಮರಣ ಹೊಂದಿದನು.

ಶಂಸುದ್ದೀನ್ ಮಹಮ್ಮದ್ ಷಾ(ಕ್ರಿ.ಶ. ೧೪೬೩-೧೪೮೨)

ಮೂರನೆಯ ನಿಜಾಮುದ್ದೀನ್ ಅಹ್ಮದ್‌ನ ನಂತರ ಅವನ ತಮ್ಮನಾದ ಶಂಸುದ್ದೀನ್ ಮಹಮ್ಮದ್ ಷಾ ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯಲ್ಲಿ ಪ್ರಧಾನಮಂತ್ರಿಯಾಗಿದ್ದ ಮಹಮ್ಮದ್ ಗವಾನನು ಬಹಮನಿ ಸಾಮ್ರಾಜ್ಯದ ಏಳ್ಗೆಯಲ್ಲಿ ಮಹತ್ವದ ಪಾತ್ರ ವಹಿಸಿದನು. ಈ ಅವಧಿಯನ್ನು ಮಹಮ್ಮದ್ ಗವಾನನ ಯುಗ ಎಂದು ಕರೆಯಲಾಗಿದೆ. ಈ ಅವಧಿಯಲ್ಲಿ ದಕ್ಷಿಣದಲ್ಲಿ ಬಹಮನಿ ಸಾಮ್ರಾಜ್ಯವು ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತಿಕೆಯಿಂದ ಮೆರೆಯಿತು. ಕ್ರಿ.ಶ. ೧೪೭೯ರಲ್ಲಿ ಖೇರ್ಲಾ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ಗವಾನನಿಗೆ ನೆರವಾದವರಲ್ಲಿ ಇರಾನ್ ಮೂಲದ ಯೂಸೂಫ್ ಆದಿಲ್‌ಖಾನ್ ಹಾಗೂ ಧೂರಿಯಾಖಾನರು (ದತ್ತಕ ಸಹೋದರ) ಬಹಮನಿ ಸುಲ್ತಾನನ ಮತ್ತು ಗವಾನನ ವಿಶ್ವಾಸಕ್ಕೆ ಪಾತ್ರರಾದರು. ಗವಾನನು ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಪುನರ್ ವಿಭಜಿಸಿ ಪ್ರಾಂತಗಳ ಸಂಖ್ಯೆಯನ್ನು ನಾಲ್ಕರಿಂದ ಎಂಟಕ್ಕೆ ಏರಿಸಿದನು. ಅದರಂತೆ ಗುಲ್ಬರ್ಗಾ ಪ್ರಾಂತದಿಂದ ವಿಜಾಪುರ ಪ್ರದೇಶವನ್ನು ಪ್ರತ್ಯೇಕಿಸಿ ಅದಕ್ಕೆ ಪ್ರತ್ಯೇಕ ಪ್ರಾಂತೀಯ ಸ್ಥಾನಮಾನ ನೀಡಿ ಅದರ ಆಡಳಿತವನ್ನು ತಾನೇ ವಹಿಸಿಕೊಂಡನು. ಜೊತೆಗೆ ದೌಲತಾಬಾದ್ ಮತ್ತು ಜುನ್ನಾರ್ ಪ್ರಾಂತಗಳಿಗೆ ಯೂಸೊಫ್ ಆದಿಲ್‌ಖಾನ್‌ನನ್ನು ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದನು.[೨೨೮] ಗವಾನನ ಯುದ್ಧನಿಪುಣತೆಯಿಂದಾಗಿ ರಾಜ್ಯವು ಒರಿಸ್ಸಾದಿಂದ ಗೋವಾದವರೆಗೆ ವಿಸ್ತರಿಸಿತು. ಹುಬ್ಬಳ್ಳಿ, ಬೆಳಗಾವಿ, ಮತ್ತು ಬಾಗಲಕೋಟೆ ಗೆದ್ದು ಉತ್ತರ ಕರ್ನಾಟಕ ಹಾಗೂ ಕೊಂಕಣದ ಕರಾವಳಿ ಪ್ರದೇಶವನ್ನು ಸಂಪೂರ್ಣವಾಗಿ ತನ್ನ ಆಡಳಿತಕ್ಕೆ ಸೇರಿಸಿಕೊಂಡ.[೨೨೯] ಗವಾನನ ಏಳಿಗೆಯನ್ನು ಸಹಿಸಲಾಗದ ದಖನಿ ಸರದಾರರ ಕುತಂತ್ರಕ್ಕೆ ಗವಾನನು ಶಿರಶ್ಛೇದನಕ್ಕೊಳಪಟ್ಟ, ಈತನ ಸಾವಿನಿಂದ ಅಸಂತೃಪ್ತರಾದ ಪ್ರಾಂತಾಧಿಕಾರಿಗಳನ್ನು ಓಲೈಸಲು ಸುಲ್ತಾನನು ಯೂಸೂಫ್ ಆದಿಲ್‌ಖಾನ್‌ನ್ನು ವಿಜಾಪುರ ಪ್ರಾಂತಕ್ಕೆ ಪ್ರಾಂತಾಧಿಕಾರಿಯಾಗಿ ನೇಮಿಸಿದನು. ಅದೇ ವರ್ಷ ಸುಲ್ತಾನನೂ ನಿಧನ ಹೊಂದಿದನು.

ವಿಜಾಪುರದ ಆದಿಲ್‌ಶಾಹಿಗಳು(ಕ್ರಿ.ಶ. ೧೪೮೯ ರಿಂದ ೧೬೮೬)

ಬಹಮನಿ ಸಾಮ್ರಾಜ್ಯದ ಅವನತಿ ಐದು ಶಾಹಿಮನೆತನಗಳ ಅಸ್ತಿತ್ವಕ್ಕೆ ಕಾರಣವಾಯಿತು. ಅದರಲ್ಲಿ ವಿಜಾಪುರದ ಆದಿಲ್‌ಶಾಹಿಗಳೇ ಹೆಚ್ಚು ಪ್ರಬಲರು. ಕ್ರಿ.ಶ. ೧೪೮೯ರಲ್ಲಿ ಯುಸೂಫ್ ಆದಿಲ್‌ಖಾನ್‌ನಿಂದ ಸ್ಥಾಪನೆಯಾದ ಆದಿಲ್‌ಶಾಹಿ ಮನೆತನವು ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಒಂಬತ್ತು ಮಂದಿ ಸುಲ್ತಾನರು ಆಳ್ವಿಕೆಯನ್ನು ಮಾಡಿದ್ದಾರೆ. ಬಹಮನಿ ಸಾಮ್ರಾಜ್ಯದ ಉಗಮದೊಂದಿಗೆ ಪ್ರಾರಂಭವಾದ ವಿಜಯನಗರದೊಂದಿಗಿನ ಕಲಹಗಳು ಇವರ ಆಡಳಿತಾವಧಿಯಲ್ಲಿಯೂ ಮುಂದುವರಿದವು. ಇದು ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಪತನವಾಗುವುದರೊಂದಿಗೆ ಮುಕ್ತಾಯವಾಯಿತು. ಅಲ್ಲದೆ ಐದು ಶಾಹಿಮನೆತನಗಳು ಉಗಮವಾದಾಗಿನಿಂದ ಇವರಿವರ ಮಧ್ಯೆ ಅಂತಃಕಲಹಗಳು ಏರ್ಪಟ್ಟವು. ಕ್ರಿ.ಶ. ೧೬೯೦ರ ವೇಳೆಗೆ ಔರಂಗಜೇಬನು ಇಡೀ ದಕ್ಷಿಣ ಭಾರತದ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸುವವರೆಗೂ ಕಂಡುಬರುತ್ತವೆ. ಈ ಮಧ್ಯೆ ಮರಾಠ ದೊರೆ ಶಿವಾಜಿಯ ದಾಳಿಗಳು ಪ್ರಮುಖವಾಗಿವೆ. ಹೀಗೆ ರಾಜಕೀಯ ಕಲಹಗಳನ್ನು ಯಶಸ್ವಿಯಾಗಿ ಎದುರಿಸಿದರಲ್ಲದೆ ಹಿಂದೂ-ಮುಸ್ಲಿಮರನ್ನು ಐಕ್ಯತೆಯಿಂದ ಕಂಡು ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಇಂಡೋ-ಇಸ್ಲಾಮಿಕ್ ಶೈಲಿಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅಮೋಘವಾದ ಕೊಡುಗೆಯನ್ನು ನೀಡಿದ್ದಾರೆ.

ಯೂಸೂಫ್ ಆದಿಲ್‌ಶಾಹ(ಕ್ರಿ.ಶ. ೧೪೮೯-೧೫೧೦)

ಇವನು ಆದಿಲ್‌ಶಾಹಿ ಸಂತತಿಯ ಮೂಲ ಸ್ಥಾಪಕನಾಗಿದ್ದಾನೆ. ಯೂಸೂಫ್ ಆದಿಲ್‌ಶಾಹನು ತುರ್ಕಿಮೂಲದವನು ಎಂದು 'ಬಸಾತೀನೆ ಸಲಾತೀನ' ಗ್ರಂಥದಲ್ಲಿ ಹೇಳಲಾಗಿದೆ. ಅಲ್ಲದೆ ಆದಿಲ್‌ಶಾಹಿ ಆಸ್ಥಾನದ ಕೆಲವು ಕೃತಿಕಾರರು ಹೇಳುವ ಪ್ರಕಾರ ಇವನು ರೂಮದ ಬಾದಶಹಾ ಸುಲ್ತಾನ ಮುರಾದನ ಮಗ ಎಂದು ಹೇಳಲಾಗುತ್ತದೆ.[೨೩೦] ಮುರಾದನ ಮರಣದ ನಂತರ ಅವನ ಹಿರಿಯ ಮಗ ಮಹಮ್ಮದನು ಅಧಿಕಾರಕ್ಕೆ ಬಂದನು. ಯೂಸೂಫ್‌ನ ಕೊಲೆಯ ಸಂಚು ನಡೆದಾಗ ತಾಯಿಯ ಮುಖಾಂತರ ಅವನು ತಪ್ಪಿಸಿಕೊಂಡು ಭಾರತಕ್ಕೆ ಬರುತ್ತಾನೆ. ಇಲ್ಲಿ ಬೀದರ್‌ನ ಪ್ರಧಾನಿ ಮಹಮದ್ ಗವಾನ ಮತ್ತು ಬಹಮನಿ ಸುಲ್ತಾನನಿಗೆ ತನ್ನ ನಿಷ್ಠೆ ಮತ್ತು ಪ್ರತಿಭೆಗಳಿಂದ ಅವರ ಪ್ರೀತಿಗೆ ಪಾತ್ರನಾಗುತ್ತಾನೆ. ಬಹಮನಿ ರಾಜ್ಯದಲ್ಲಿ ತನ್ನ ಪ್ರತಿಭೆಯಿಂದ ಹಂತ ಹಂತವಾಗಿ ಉನ್ನತ ಹುದ್ದೆಗೇರುತ್ತಾನೆ. ಮೊದಲು ಗೋಗಿ ಮೊದಲಾದ ಊರುಗಳನ್ನು ಇವನಿಗೆ ಜಹಗೀರಾಗಿ ಕೊಡಲಾಯಿತು. ನಂತರ ನಗರದ ಕೊತ್ವಾಲನಾಗಿ, ಹವಾಲ್ದಾರನಾಗಿ ಉನ್ನತ ಸ್ಥಾನಕ್ಕೇರಿದನು.[೨೩೧] ಅಲ್ಲದೆ, ತೆಲಂಗಾಣದ ವಿಜಯದಿಂದ ಸಂತೋಷಗೊಂಡ ಸುಲ್ತಾನ ಮಹಮ್ಮದ್ ಬಹಮನಿಯು ಅವನಿಗೆ ಕನಕರ್ತಿ, ಕಲ್ಯಾಣದಿಂದ ಹಿಡಿದು ಮಂಜಾನ, ಗೋವಾ, ಕಂಚಿ, ಕಾಳಹಸ್ತಿ ಮೊದಲಾದ ಪ್ರದೇಶಗಳನ್ನು ಅವನ ವಶಕ್ಕೆ ಹಾಕಿ ಕೊಟ್ಟನು ಮತ್ತು ಹಳೆಯ ರಾಜಧಾನಿಯಾದ ಮಂಗಳವೇಡೆಯನ್ನು

ಅವನಿಗೆ ಬಹಮನಿ ಸುಲ್ತಾನ ಮಹಮ್ಮದನು ಜಹಗೀರು ಹಾಕಿಕೊಟ್ಟನು.[೨೩೨] ಈ ಪ್ರದೇಶಗಳಲ್ಲಿ ಬೆಂಜನಹಳ್ಳಿ ಎಂಬ ಒಂದು ಗ್ರಾಮವಿತ್ತು. ಅದರ ಹೆಸರನ್ನು ಯೂಸೂಫ್‌ನು ವಿಜಾಪುರ ಎಂದು ಇಟ್ಟನು.[೨೩೩] ಹೀಗೆ ಬಹಮನಿ ರಾಜ್ಯದಲ್ಲಿಯೇ ಶ್ರೇಷ್ಠ ಅಮೀರನಾದನು.

ಬಹಮನಿ ಮನೆತನದ ಪ್ರಧಾನಿಯಾದ ಮಹಮ್ಮದ್ ಗವಾನನ ಶಿರಶ್ಛೇದನವಾದ ನಂತರ ಕೆಲವೇ ದಿನಗಳಲ್ಲಿ ಸುಲ್ತಾನ ಮಹಮ್ಮದನು ತೀರಿಕೊಂಡನು. ಈ ಸದುಪಯೋಗವನ್ನು ಪಡೆದುಕೊಂಡು ಯೂಸೂಫ್ 'ಆದಿಲ್‌ಶಾಹಿ' ರಾಜ್ಯವನ್ನು ಸ್ಥಾಪಿಸಿದನು.[೨೩೪]

ಗುಲಬರ್ಗಾ, ಆಳಂದ ಮತ್ತು ಗಂಜೋಟಿಗಳ ಜಾಗೀರದಾರನಾಗಿದ್ದ ದಸ್ತೂರ್‌ದಿನಾರ, ಬೀದರ್‌ನ ಸುಲ್ತಾನ ಮಹಮ್ಮದ್ ಶಾಹನನ್ನು ತೆರೆಯ ಮರೆಗೆ ಸರಿಸಿ ಸರ್ವಾಧಿಕಾರಿಯಾದ ಖಾಸಿಂ ಬರೀದ್ ಮತ್ತು ಅಹಮದ್‌ನಗರದ ನಿಜಾಮ್‌ಮುಲ್ಕ, ವಿಜಯನಗರದ ತಿಮ್ಮರಾಜು, ಕೊಂಕಣದ ಅಧಿಕಾರಿ ಬಹದೂರ್ ಗಿಲಾನಿಯೊಂದಿಗೆ ಯುಸೂಫ್ ಅಧಿಕಾರಕ್ಕೆ ಬಂದಾಗಿನಿಂದಲೂ ಅನೇಕ ಕದನಗಳಲ್ಲಿ ತೊಡಗಿ ತನ್ನ ವಿರೋಧಿಗಳನ್ನೆಲ್ಲ ಅಡಗಿಸಿದ್ದನು. ಜೊತೆಗೆ ವಿದೇಶಿಯರಾದ ಪೋರ್ಚುಗೀಸರಿಂದ ಗೋವಾವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡನು. ಆದರೆ ಯುಸೂಫ್‌ನ ಆಡಳಿತಾವಧಿಯಲ್ಲಿ ವಿಜಾಪುರ ರಾಜ್ಯವು ಗೋವಾ, ದಾಭೋಲ, ಗುಲಬರ್ಗಾದಿಂದ ಸಹ್ಯಾದ್ರಿ ಪರ್ವತ ಶ್ರೇಣಿಯ ಪೂರ್ವದವರೆಗೆ ವಿಸ್ತರಿಸಿತ್ತು.[೨೩೫]

ಇವನು ವಿಜಾಪುರ ರಾಜ್ಯಕ್ಕೆ ಭದ್ರ ತಳಪಾಯ ಹಾಕಿದನಲ್ಲದೆ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾನೆ. ಇವನು ವಿಜಾಪುರದ ಅರ್ಕ್‌ಕಿಲ್ಲೆಯನ್ನು ನಿರ್ಮಿಸಿದನಲ್ಲದೆ, ಪರಂಡಾ, ಬೆಳಗಾವಿ, ಮಿರಜ್, ಸೊಲ್ಲಾಪುರ, ಬೀದರ, ಅಹಮದ್‌ನಗರಗಳಲ್ಲಿ ಕೋಟೆಗಳನ್ನು ನಿರ್ಮಾಣ ಮಾಡಿದನು.[೨೩೬] ದಖನಿ ಈದ್ಗಾ, ಫರೂಕ ಮಹಲ್, ಖ್ವಾಜಾಜಹಾನ ಮಸೀದಿಯನ್ನು ಕಟ್ಟಿಸಿದನು. ತೊರವಿಯಿಂದ ಕಾಲುವೆ ಮೂಲಕ ಅರ್ಕಕಿಲ್ಲೆಯಲ್ಲಿ ನೀರನ್ನು ತಂದನು. ಫತೇಪುರ ಹಳ್ಳಿಯ ಶಂಕುಸ್ಥಾಪನೆ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಒಂದು ಮಸೀದಿ ಮತ್ತು ಮಸೀದಿಯ ಆವರಣದಲ್ಲಿ ಒಂದು ನೀರಿನ ಕೊಳವನ್ನು ನಿರ್ಮಿಸಿದನು.

ಇಸ್ಮಾಯಿಲ್ ಆದಿಲ್‌ಶಾಹ(ಕ್ರಿ.ಶ. ೧೫೧೦–೧೫೩೪)

ಯೂಸೂಫ್‌ನ ನಂತರ ಇವನ ಮಗ ಇಸ್ಮಾಯಿಲ್ ಆದಿಲ್‌ಶಾಹನು ಅಧಿಕಾರಕ್ಕೆ ಬಂದನು. ಇವನು ಅಧಿಕಾರಕ್ಕೆ ಬಂದಾಗ ಅಪ್ರಾಪ್ತ ವಯಸ್ಕನಾಗಿದ್ದನು. ಹೀಗಾಗಿ ಯೂಸೂಫ್‌ನು ಅವನಿಗೆ ನಿಷ್ಠಾವಂತನಾದ ಕಮಾಲಖಾನನಿಗೆ 'ವಕೀಲೇ ಸಲ್ತನತ'(ರಾಜಪ್ರತಿನಿಧಿತ್ವ)ನಾಗಿ ನೇಮಿಸಿ ರಾಜ್ಯದ ಎಲ್ಲ ಆಡಳಿತವನ್ನು ಇವನಿಗೆ ವಹಿಸಿದನು.[೨೩೭] ರಾಜ್ಯದ ಆರ್ಥಿಕ ಹಾಗೂ ರಾಜಕೀಯ ಅಧಿಕಾರಗಳನ್ನು ತನ್ನ ಕೈಗೆತ್ತಿಕೊಂಡ ಮೇಲೆ ಸರ್ವಾಧಿಕಾರಿಯಂತೆ ಕಾರ್ಯ ನಿರ್ವಹಿಸತೊಡಗಿದನು. ಅಲ್ಲದೆ ತಾನೇ ಸುಲ್ತಾನನಾಗಬೇಕೆಂಬ ದುರಾಸೆಯಿಂದ ಇಸ್ಮಾಯಿಲ್ ಮತ್ತು ಅವನ ತಾಯಿ ಬುನಾನಿ

ಖಾತೂನಳನ್ನು ಸೆರೆಯಲ್ಲಿಟ್ಟನು. ಇದಕ್ಕೆ ಬೀದರ್‌ನಲ್ಲಿ ಸರ್ವಾಧಿಕಾರಿಯಾದ ಅಮೀರ ಬರೀದನ ಬೆಂಬಲವು ಇದ್ದಿತು.[೨೩೮] ಕಮಾಲ್‌ಖಾನನು ಪೋರ್ಚುಗೀಸರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಪರಸ್ಪರ ತಮ್ಮ ಪ್ರದೇಶಗಳ ಮೇಲೆ ಆಕ್ರಮಣ ಮಾಡುವಂತಿಲ್ಲ ಎಂದು ಹೇಳಿ, ಗೋವಾವನ್ನು ಅವರಿಗೆ ಬಿಟ್ಟುಕೊಟ್ಟನು. ಇದರಿಂದ ಗೋವಾ ಶಾಶ್ವತವಾಗಿ ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಡಲಿಲ್ಲ.[೨೩೯] ಮುಂದೆ ಕ್ರಿ.ಶ. ೧೫೧೧ರ ವೇಳೆ ಕಮಾಲ್‌ಖಾನ ಸೊಲ್ಲಾಪುರದ ಗವರ್ನರ್ ಜೆಯಾನ್‌ಖಾನನ್ನು ಸೋಲಿಸಿ ಸೊಲ್ಲಾಪುರವನ್ನು ವಶಪಡಿಸಿಕೊಂಡನು.[೨೪೦] ಕಮಲ್‌ಖಾನನು ಸುಲ್ತಾನನಾಗಲು ಹವಣಿಸುತ್ತಿದ್ದ ಸಂದರ್ಭದಲ್ಲಿ ಬುನಾನಿ ಖಾತೂನಳು ರಾಜನಿಷ್ಠ ಸೇವಕರಿಂದ ಇವನ ಕೊಲೆಯನ್ನು ಮಾಡಿಸುವಲ್ಲಿ ಯಶಸ್ವಿಯಾದಳು. ಮುಂದೆ ಇಸ್ಮಾಯಿಲ್ ಅಧಿಕಾರಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ ಖುಸ್ರೋ ಆಕಾಲಾರಿ ಎಂಬುವನನ್ನು ಇಸ್ಮಾಯಿಲ್ 'ಅಸದಖಾನ್' ಎಂಬ ಬಿರುದನ್ನು ನೀಡಿ ಬೆಳಗಾವಿಯನ್ನು ಜಾಹಗೀರಾಗಿ ನೀಡಲಾಯಿತು.

ಇಸ್ಮಾಯಿಲ್‌ನು ಅಧಿಕಾರ ವಹಿಸಿಕೊಂಡ ಮೇಲೆ ಅನೇಕ ದಾಳಿಗಳನ್ನು ಎದುರಿಸಬೇಕಾಯಿತು. ಅದರಲ್ಲಿ ಪ್ರಮುಖವಾಗಿ ಕ್ರಿ.ಶ. ೧೫೧೪ರಲ್ಲಿ ಅಮೀರ ಬರೀದ್, ಅಹಮದ ನಗರದ ಬುರ್ಹಾನ್ ನಿಜಾಮ್‌ಶಾಹ, ಗೋಲ್ಕಂಡದ ಕುಲೀ ಕುತುಬ್‌ಶಾಹರ ಒಕ್ಕೂಟ ಸೈನ್ಯವು ದಾಳಿ ಮಾಡಿತು. ಸೋಲ್ಲಾಪುರದ ಕೋಟೆಗಾಗಿ ಅಹಮ್ಮದ್‌ನಗರದ ಬುರಾನ್ ನಿಜಾಮ್‌ಶಾಹನ ಮೇಲೆ ದಾಳಿ ಮಾಡಿ ಸೊಲ್ಲಾಪುರ ಕೋಟೆಯನ್ನು ವಶಪಡಿಸಿಕೊಂಡನು.[೨೪೧] ಈ ಅವಮಾನದಿಂದ ಮತ್ತೊಮ್ಮೆ ನಿಜಾಮ್‌ಶಾಹ ದಾಳಿ ಮಾಡಿದಾಗ ಅವನನ್ನು ಯಶಸ್ವಿಯಾಗಿ ಎದುರಿಸಿದ. ಕ್ರಿ.ಶ. ೧೫೧೯–೨೦ರಲ್ಲಿ, ಇಸ್ಮಾಯಿಲ್ ಅಮೀರ್ ಬರೀದನನ್ನು ಸೋಲಿಸಿ ಬೀದರ್ ಕೋಟೆಯನ್ನು ವಶಪಡಿಸಿಕೊಂಡನು. ಕೃಷ್ಣದೇವರಾಯನು ಕ್ರಿ.ಶ. ೧೫೨೦ರ ವೇಳೆ ಇಸ್ಮಾಯಿಲ್‌ಖಾನನ ಮೇಲೆ ದಾಳಿ ಮಾಡಿ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡಿದ್ದನು. ಇದನ್ನು ಕ್ರಿ.ಶ. ೧೫೩೦ರಲ್ಲಿ ಕೃಷ್ಣದೇವರಾಯನು ಮರಣ ಹೊಂದಿದ ತರುವಾಯ ಪುನಃ ಅಚ್ಯುತರಾಯನಿಂದ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ವಶಪಡಿಸಿಕೊಂಡನು. ಕ್ರಿ.ಶ. ೧೫೩೧–೩೨ರಲ್ಲಿ ನಿಜಾಮಶಾಹ ಮತ್ತು ಅಮೀರ್ ಬರೀದ್ ಮತ್ತೆ ದಾಳಿ ಮಾಡಿದಾಗ ಅವನನ್ನು ಮತ್ತೆ ಸೋಲಿಸಿದನು. ಇಸ್ಮಾಯಿಲ್‌ನು ಅಸದ್‌ಖಾನ್‌ನ ನೇತೃತ್ವದಲ್ಲಿ ಈ ಎಲ್ಲ ದಾಳಿಗಳನ್ನು ಎದುರಿಸಿ ಹಿಮ್ಮೆಟ್ಟಿಸಿದನಲ್ಲದೆ ಸಾಮ್ರಾಜ್ಯಕ್ಕೆ ಭದ್ರಬುನಾದಿಯನ್ನು ಹಾಕಿದನು. ಮುಂದೆ ವಿಜಾಪುರವು ಸುಮಾರು ಎರಡು ಶತಮಾನಗಳ ಕಾಲ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸಿತು.

ಕ್ರಿ.ಶ. ೧೫೩೪ರ ವೇಳೆಗೆ ಕೋವಿಲಕೊಂಡ(ಗೋಲ್ಕೊಂಡ)ದ ಕುಲಿಕುತುಬ್ ಶಾಹನ ಮೇಲೆ ಇಸ್ಮಾಯಿಲ್ ದಂಡೆತ್ತಿ ಹೋದನು. ಆದರೆ ಯುದ್ಧದ ಮಧ್ಯಾವಧಿಯಲ್ಲಿ ಸುಲ್ತಾನನ ಆರೋಗ್ಯವು ಕೆಟ್ಟಿತು. ಹೀಗಾಗಿ ಯುದ್ಧವನ್ನು ನಿಲ್ಲಿಸಿ ರಾಜಧಾನಿಗೆ ವಾಪಸ್ಸು ಬರುವಾಗ ಸಾಗರದ ಹತ್ತಿರ ನಿಧನನಾದನು. ಇವನನ್ನು ತಂದೆಯ ಹತ್ತಿರವೇ ಗೋಗಿಯಲ್ಲಿ ದಫನ್ ಮಾಡಲಾಯಿತು. ಇವನು

ಕ್ರಿ.ಶ. ೧೫೨೦ರಲ್ಲಿ ಚಂದಾಪುರ ಎಂಬ ಹಳ್ಳಿಯನ್ನು ಸ್ಥಾಪನೆ ಮಾಡಿದನಲ್ಲದೆ, ಕ್ರಿ.ಶ. ೧೫೨೧ರಲ್ಲಿ ಚಂಪಾಮಹಲನ್ನು ನಿರ್ಮಿಸಿದ್ದಾನೆ.[೨೪೨]

ಒಂದನೆಯ ಇಬ್ರಾಹಿಮ್ ಆದಿಲ್‌ಶಾಹ(ಕ್ರಿ.ಶ. ೧೫೩೫–೧೫೫೮)

ಇಸ್ಮಾಯಿಲ್‌ನು ಮರಣ ಹೊಂದಿದ ಮೇಲೆ ಮಲ್ಲು ಆದಿಲ್‌ಖಾನ್ ಕೆಲವು ತಿಂಗಳು ಕಾಲ, ಆಗಸ್ಟ್ ೧೫೩೪ರಿಂದ ಮಾರ್ಚ್ ೧೫೩೫ರವರೆಗೆ ಆಳ್ವಿಕೆ ಮಾಡುತ್ತಾನೆ. ಇವನು ಅಸಮರ್ಥ ಸುಲ್ತಾನನಾಗಿದ್ದು, ಭೋಗವಿಲಾಸದಲ್ಲಿ ಹೆಚ್ಚು ಸಮಯ ಕಳೆಯತೊಡಗಿದನು. ಹೀಗಾಗಿ ಇವನನ್ನು ಸಿಂಹಾಸನದಿಂದ ಹೊರತಳ್ಳಿ ಒಂದನೆಯ ಇಬ್ರಾಹಿಮ್ ಆದಿಲ್‌ಶಾಹನನ್ನು ಅಧಿಕಾರಕ್ಕೆ ತರಲಾಯಿತು. ಮತ್ತೆ ಅಸದ್‌ಖಾನ್ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡನು.[೨೪೩] ಇಬ್ರಾಹಿಮ್‌ನು ಅಧಿಕಾರಕ್ಕೆ ಬಂದಾಗ ನಿರಂತರವಾಗಿ ಬಾಹ್ಯದಾಳಿಗಳನ್ನು ಎದುರಿಸಬೇಕಾಯಿತು. ಅದರಲ್ಲಿ ಪ್ರಮುಖವಾಗಿ ವಿಜಯನಗರದ ಜೊತೆ ದೋಅಬ್ ಪ್ರದೇಶಕ್ಕಾಗಿ ನಡೆದ ಕಲಹಗಳು ಇವನ ಅವಧಿಯಲ್ಲಿಯೂ ಮುಂದುವರಿದವು. ಈ ವೇಳೆಗೆ ಅಳಿಯ ರಾಮರಾಯನು ತನ್ನ ರಾಜತಾಂತ್ರಿಕ ನಿಪುಣತೆಯಿಂದ ಶಾಹಿಸುಲ್ತಾನರ ಮಧ್ಯೆ ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುವ ನೀತಿಯನ್ನು ಅನುಸರಿಸಿದನಲ್ಲದೆ, ಇವರ ಮಧ್ಯದ ಕಾದಾಟದಲ್ಲಿ ತಾನು ಲಾಭವನ್ನು ಪಡೆಯಲು ಪ್ರಯತ್ನಿಸಿದನು.

ಅಹಮದ್‌ನಗರದ ಬುರ್ಹಾನ್ ನಿಜಾಮ್‌ಶಾಹಿ ಸೊಲ್ಲಾಪುರ ಕೋಟೆಯನ್ನು ಪಡೆಯುವ ಉದ್ದೇಶದಿಂದ ಇಬ್ರಾಹಿಮ್‌ನ ಜೊತೆ ಶತ್ರುತ್ವವನ್ನು ಮುಂದುವರಿಸಿದನು. ಅಲ್ಲದೆ ಬೀದರ್‌ದದ ಅಮೀರ್ ಬರೀದ್ ಇವನ ಮಗ ಅಲಿಬರೀದ್ ಪ್ರಬಲವಾಗುತ್ತಿರುವ ಆದಿಲ್‌ಶಾಹಿ ಮನೆತನವನ್ನು ನಾಶ ಮಾಡಬೇಕೆಂಬ ಉದ್ದೇಶದಿಂದ ವಿಜಯನಗರ ಹಾಗೂ ಅಹಮದ್‌ನಗರದ ಜೊತೆ ಸಖ್ಯ ಬೆಳೆಸಿ ಆದಿಲ್‌ಶಾಹಿಗಳ ಮೇಲೆ ದಾಳಿ ಕೈಗೊಂಡನು. ಇದರಲ್ಲಿ ಗೋಲ್ಕೊಂಡದ ಜಂಷಿದ್ ಕುತಬ್‌ಶಾಹನು ಕಲಹಗಳಿಂದ ದೂರ ಉಳಿಯದೆ ಅವಕಾಶ ಸಿಕ್ಕಾಗಲೆಲ್ಲಾ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಇಬ್ರಾಹಿಮ್‌ನು ಅಸದ್‌ಖಾನ್‌ನ ಸಲಹೆಯಂತೆ ಎಲ್ಲ ದಾಳಿಗಳನ್ನು ಎದುರಿಸಿ ಜಯ ಸಾಧಿಸಿದನಲ್ಲದೆ, ಅಷ್ಟೇ ಸೋಲುಗಳನ್ನು ಅನುಭವಿಸಿದನು. ರಾಜ್ಯಕ್ಕೆ ಮತ್ತೊಮ್ಮೆ ಭದ್ರಬುನಾದಿಯನ್ನು ಹಾಕಿದನು.[೨೪೪] ಇವನ ಆಡಳಿತಾವಧಿಯಲ್ಲಿ ಆಂತರಿಕ ಅಂತಃಕಲಹಗಳು ಏರ್ಪಟ್ಟವು. ಅದರಲ್ಲಿ ಪ್ರಮುಖವಾಗಿ ಅವನ ತಮ್ಮ ಅಬ್ದುಲ್ಲಾ ದಂಗೆಯೆದ್ದನು. ಇವನನ್ನು ಹತ್ತಿಕ್ಕುವುದರೊಳಗಾಗಿ ಇವನು ಗೋವಾಕ್ಕೆ ಓಡಿ ಹೋಗಿ ಪೋರ್ಚುಗೀಸರೊಂದಿಗೆ ಸೇರಿಕೊಂಡನು. ಹೀಗಾಗಿ ಪೋರ್ಚುಗೀಸರು ಅಬ್ದುಲ್ಲಾನನ್ನು ಇಬ್ರಾಹಿಮ್‌ನಿಗೆ ಒಪ್ಪಿಸುವುದಾಗಿ ಕ್ರಿ.ಶ. ೧೫೪೮ರಲ್ಲಿ ಬಾರ್ಡೆಜ್ ಮತ್ತು ಸಾಲ್ಸೆಟ್ ಜಿಲ್ಲೆಗಳನ್ನು ಆದಿಲ್‌ಶಾಹಿಗಳಿಂದ ಪಡೆದುಕೊಂಡರು. ಮುಂದೆ ಅಸದ್‌ಖಾನನು ಮರಣ ಹೊಂದಿದ ನಂತರ ಈ ಸ್ಥಾನವನ್ನು ಐನ್–ಉಲ್–ಮುಲ್ಕನಿಗೆ ವಹಿಸಿದನು. ಆದರೆ ಇವನು ಅಧಿಕಾರದ ದುರಾಸೆಯಿಂದ ಕೆಲವೇ ದಿನಗಳಲ್ಲಿ ದಂಗೆಯೆದ್ದನು.[೨೪೫]

ಗೋವಾದಲ್ಲೇ ಇದ್ದ ಅಬ್ದುಲ್ಲಾನಿಗೆ ದಂಗೆಯೇಳುವಂತೆ ಬೆಂಬಲ ನೀಡಿದನಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಕೊಳ್ಳೆ ಹೊಡೆಯತೊಡಗಿದನು. ರಾಮರಾಯನ ಸಹಾಯದಿಂದ ಈ ದಂಗೆಯನ್ನು ಸದೆಬಡಿದನು.

ಇಸ್ಮಾಯಿಲ್‌ನು ತನ್ನ ತಂದೆ ಮತ್ತು ತಾತಂದಿರು ಹಾಕಿದ ಸಂಪ್ರದಾಯಗಳನ್ನು ಮುಂದುವರಿಸಿದನಲ್ಲದೆ ತನ್ನ ಆಡಳಿತಾವಧಿಯಲ್ಲಿ ಫಾರ್ಸಿ ಭಾಷೆಯ ಬದಲಾಗಿ ದಖನಿ ಭಾಷೆಯನ್ನು ಆಡಳಿತ ಭಾಷೆಯಾಗಿ, ಕ್ರಿ.ಶ. ೧೫೩೪ರಲ್ಲಿ ಷಿಯಾ ಪಂಥದ ಬದಲಿಗೆ ಮತ್ತೆ ಸುನ್ನಿ ಪಂಥವನ್ನು ಜಾರಿಗೆ ತಂದನು. ಈ ಮಧ್ಯೆ ಬಹಮನಿಯ ಕೊನೆಯ ಸುಲ್ತಾನ ಕಲೀಮುಲ್ಲಾ ಮರಣ ಹೊಂದಿದ ನಂತರ ಅದುವರೆಗೆ ಆದಿಲ್‌ಶಾಹಿಗಳು ಬಿದರೆಯ ರಾಜನನ್ನು ಸುಲ್ತಾನನೆಂದು ಪರಿಗಣಿಸಿ ತಾವು ಶಾಹ ಎಂದು ಕರೆದುಕೊಂಡಿರಲಿಲ್ಲ. ಈಗ ಇಬ್ರಾಹಿಮ್ 'ಶಹಾ' ಎಂಬ ಬಿರುದನ್ನು ಧರಿಸಿದನು.[೨೪೬] ಅತಿಜ್ವರ, ಕ್ಷಯ, ಶ್ವಾಸ ಹಾಗೂ ಧಾತುಕ್ಷಯದ ರೋಗಗಳಿಂದ ಬಳಲಿ ಕ್ರಿ.ಶ. ೧೫೫೮ರಲ್ಲಿ ಇಬ್ರಾಹಿಮ್ ಮರಣ ಹೊಂದಿದನು. ಗೋಗಿಯಲ್ಲಿ ಆತನ ತಂದೆ ಹಾಗೂ ಅಜ್ಜನ ಗೋರಿಗಳ ಹತ್ತಿರ ಆತನನ್ನೂ ದಫನ್ ಮಾಡಲಾಯಿತು.

ಇಬ್ರಾಹಿಮ್ ಆದಿಲ್‌ಶಾಹನು ಇಪ್ಪತ್ನಾಲ್ಕು ವರುಷ ಹಾಗೂ ಕೆಲವು ತಿಂಗಳುಗಳವರೆಗೆ ರಾಜ್ಯವಾಳಿದ ಈತನು ಕಲೆ ಮತ್ತು ವಾಸ್ತುಶಿಲ್ಪಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾನೆ. ವಿಜಾಪುರದ ಒಳ ಕೋಟೆಯನ್ನು ಯೂಸೂಫ್ ಆದಿಲ್‌ಶಾಹನು ಕಟ್ಟಿದ್ದು ಅದು ಗಟ್ಟಿಯಾಗಿಲ್ಲವೆಂದು ಬಂಡೆಗಲ್ಲು ಹಾಗೂ ಗಾರೆ-ಗಚ್ಚುಗಳಿಂದ ಕೋಟೆಯನ್ನು ನಿರ್ಮಿಸಿದನು. ಅಲ್ಲದೆ ಇಬ್ರಾಹಿಮ್‌ಪುರ ಎಂಬ ಊರನ್ನು ಸ್ಥಾಪಿಸಿದ. ಹದಿನಾರು ಕಂಬಗಳ ಬಂಗಲೆಯನ್ನು, ಜಾಮಿಯಾ ಮಸೀದಿಯನ್ನು ಕಟ್ಟಿಸಿದನು.

ಒಂದನೆಯ ಅಲಿ ಆದಿಲ್‌ಶಾಹ(ಕ್ರಿ.ಶ. ೧೫೫೮-೧೫೮೦)

ಹಿರಿಯ ಮಗನಾದ ಒಂದನೆಯ ಅಲಿ ಆದಿಲ್‌ಶಾಹನಿಗೆ ಶಿಯಾ ಧರ್ಮದ ಕಡೆ ಒಲವು ಇದ್ದುದರಿಂದ ಇಬ್ರಾಹಿಮ್ ಆದಿಲ್‌ಶಾಹನು ತನ್ನ ಇನ್ನೊಬ್ಬ ಮಗನಾದ ಥಮಾಸ್ಪನನ್ನೆ ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಇಚ್ಚಿಸಿದ್ದನು. ಆದರೆ ಇಬ್ರಾಹಿಮ್‌ನ ಮರಣದ ನಂತರ ಅಲಿ ಆದಿಲ್‌ಶಾಹನೆ ಪಟ್ಟಕ್ಕೆ ಬಂದನು. ಇದಕ್ಕೆ ಅಸದಖಾನ್ ಮತ್ತು ಕಿಶ್ವರ್‌ಖಾನ್‌ನ ಪಾತ್ರವು ಬಹುಮುಖ್ಯವಾಗಿತ್ತು.[೨೪೭] ತಂದೆಯ ಮರಣಾನಂತರ ಆಂತರಿಕ ಕಲಹಗಳಿಂದ ರಾಜಧಾನಿಯಲ್ಲಿ ಶಾಂತಿ ಕಾಪಾಡುವ, ಕಳೆದುಕೊಂಡ ಪ್ರದೇಶಗಳನ್ನು ಮರಳಿ ಪಡೆಯುವ ಮತ್ತು ರಾಜ್ಯ ವಿಸ್ತರಣ ನೀತಿ ಅನುಸರಿಸುವಲ್ಲಿ ಆಸಕ್ತಿ ತೋರಿದನು.

ಪಟ್ಟಾಭಿಷೇಕವಾದ ಮೊದಲನೆಯ ವರ್ಷದಲ್ಲಿ ಅಲಿ ಆದಿಲ್‌ಶಾಹನು ಸೊಲ್ಲಾಪುರ ಮತ್ತು ಕಲ್ಯಾಣದ ಕೋಟೆಗಳನ್ನು ನಿಜಾಮ್‌ಶಾಹನ ವಶದಿಂದ ವಶಪಡಿಸಿಕೊಳ್ಳುವ ಮತ್ತು ವಿಜಾಪುರದ

ವಿರೋಧಿಗಳಾಗಿದ್ದ ದಖ್ಖನಿನ ಸುಲ್ತಾನರನ್ನು ಸದೆಬಡಿಯುವ ಉದ್ದೇಶದಿಂದ ಸಹಜವಾಗಿಯೇ ರಾಮರಾಯನ ಜೊತೆ ಮೈತ್ರಿಯುತ ಸಂಬಂಧ ಬೆಳೆಸಿದನು. ಈ ಮೈತ್ರಿಯು ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದವರೆಗೆ ಮುಂದುವರಿಯಿತು. ರಾಮರಾಯನೊಂದಿಗಿನ ಮೈತ್ರಿಯಿಂದಾಗಿ ಅಲಿ ಆದಿಲ್‌ಶಾಹನು ಅಹಮದ್‌ನಗರದ ನಿಜಾಮಶಾಹ, ಗೋಲ್ಕೊಂಡದ ಇಬ್ರಾಹಿಮ್ ಕುತುಬ್‌ಶಾಹ, ಬೆರಾರಿನ ಇಮಾದ್‌ಶಾಹಿಗಳ ಜೊತೆ ಹಲವಾರು ಕದನಗಳನ್ನು ಮಾಡಿದನು. ಈ ಎಲ್ಲ ಘಟನೆಗಳ ಹಿಂದೆ ರಾಮರಾಯನ ರಾಜತಾಂತ್ರಿಕ ಕುಟಿಲನೀತಿಯು ಅಡಗಿತ್ತು. ಆ ಕಾಲದ ರಾಜಕಾರಣದಲ್ಲಿ ಅವನು ಕೇಂದ್ರ ವ್ಯಕ್ತಿಯಾಗಿದ್ದನು. ಶಾಹಿರಾಜ್ಯಗಳ ನಿರರ್ಥಕ ಯುದ್ಧಗಳಿಂದ ನಿಜವಾಗಿ ಲಾಭವಾಗುತ್ತಿದ್ದುದು ಇವನಿಗೆ ದಖ್ಖನಿನಲ್ಲಿ ಸರ್ವೋನ್ನತ ಸ್ಥಿತಿಗೆ ಏರಿದ ರಾಮರಾಯನು ದಖ್ಖನಿನ ಸುಲ್ತಾನರನ್ನು ತನ್ನ ಸಾಮಂತರ ಮಟ್ಟಕ್ಕೆ ಇಳಿಸಿದನು. ಹೀಗಾಗಿ ದಖ್ಖನ್ನಿನ ಶಾಹಿಸುಲ್ತಾನರ ಪ್ರಭಾವ ಕ್ಷೀಣವಾಗಹತ್ತಿತು. ಇದನ್ನು ಅರಿತ ಶಾಹಿ ಸುಲ್ತಾನರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ರಾಮರಾಯನ ಸೈನಿಕ ಬಲವನ್ನೆ ಕುಗ್ಗಿಸಲೇಬೇಕು ಮತ್ತು ಸಾಧ್ಯವಾದರೆ ವಿಜಯನಗರ ಸಾಮ್ರಾಜ್ಯವನ್ನೇ ಕಿತ್ತೊಗೆಯಬೇಕೆಂಬ ನಿರ್ಧಾರದಿಂದ ದಕ್ಷಿಣದ ಶಾಹಿ ಸುಲ್ತಾನರು ಒಂದಾಗಿ ಮಹಾಮೈತ್ರಿ ಕೂಟವನ್ನು ರಚಿಸಿಕೊಂಡರು. ಈ ಮೈತ್ರಿಕೂಟದಲ್ಲಿ ಅಹಮದ್‌ನಗರ, ಗೋವಳಕೊಂಡ, ಬೀದರ್, ವಿಜಾಪುರದ ಶಾಹಿಸುಲ್ತಾನರು ಕೂಡಿಕೊಂಡಿದ್ದರು. ಅಹಮದ್‌ನಗರದ ಹುಸೇನ ನಿಜಾಮ್‌ಶಾಹನು ತನ್ನ ಮಗಳು ಚಾಂದ್‌ಬೀಬಿಯನ್ನು ಅಲಿ ಆದಿಲ್‌ಶಾಹನಿಗೆ ಕೊಟ್ಟು, ಅಲಿಯ ತಂಗಿ ಹದಿಯಾ ಸುಲ್ತಾನಳನ್ನು ತನ್ನ ಮಗ ಮುರ್ತುಜಾನಿಗೆ ಮದುವೆ ಮಾಡಿ ರಕ್ತ ಸಂಬಂಧದ ಮೂಲಕ ಈ ಮೈತ್ರಿಕೂಟವನ್ನು ಮತ್ತಷ್ಟು ಗಟ್ಟಿಗೊಳಿಸಲಾಯಿತು.[೨೪೮]

ಮೈತ್ರಿಕೂಟ ರಚನೆಯಾದ ನಂತರ ಅಲಿ ಆದಿಲ್‌ಶಾಹನು ತನ್ನ ಒಬ್ಬ ರಾಯಭಾರಿಯನ್ನು ವಿಜಯನಗರಕ್ಕೆ ಕಳುಹಿಸಿ ಮೊದಲಿನಿಂದಲೂ ಆದಿಲ್‌ಶಾಹಿಗಳ ವಶದಲ್ಲಿದ್ದ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ತಕ್ಷಣ ತಮ್ಮ ವಶಕ್ಕೆ ಕೊಡಬೇಕೆಂದು ಕಾರಣವನ್ನಿಟ್ಟುಕೊಂಡು ವಿಜಯನಗರದ ಜೊತೆ ಮೈತ್ರಿಕೂಟ ಸೈನ್ಯ ಯುದ್ಧವನ್ನು ಸಾರಿದರು.[೨೪೯] ಕ್ರಿ.ಶ. ೧೫೬೫ ಜನವರಿ ೨೩ರಂದು ತಾಳಿಕೋಟೆ ಪ್ರದೇಶದಲ್ಲಿ ನಡೆದ ಕಾಳಗದಲ್ಲಿ ವಿಜಯನಗರದ ಸೈನ್ಯ ನಿರ್ಣಾಯಕವಾಗಿ ಸೋತಿತಲ್ಲದೆ, ಯುದ್ಧದಲ್ಲಿ ರಾಮರಾಯನು ಮರಣ ಹೊಂದಿದನು. ಇದರೊಂದಿಗೆ ವಿಜಯನಗರ ಸಾಮ್ರಾಜ್ಯ ಪತನ ಹೊಂದಿತು.

ಈ ವಿಜಯದಿಂದ ಪ್ರೇರಿತನಾದ ಅಲಿ ಆದಿಲ್‌ಶಾಹನು ಕ್ರಿ.ಶ. ೧೫೭೧ರಲ್ಲಿ ಪೋರ್ಚುಗೀಸರ ಮೇಲೆ ದಾಳಿ ಕೈಗೊಂಡನು. ಆದರೆ ಯುದ್ಧವು ಒಪ್ಪಂದದಲ್ಲಿ ಮುಕ್ತಾಯವಾಯಿತು.[೨೫೦] ಮುಂದುವರಿದು ವಿಜಯನಗರದ ಹಿಡಿತದಲ್ಲಿರುವ ಆದೋನಿ, ತೋರ್ಗಲ್, ಧಾರವಾಡ ಮತ್ತು ಬಂಕಾಪುರಗಳನ್ನು ವಶಪಡಿಸಿಕೊಂಡನು. ನಂತರ ವಿಜಯನಗರದ ಈಗಿನ ರಾಜಧಾನಿ ಪೆನುಗೊಂಡೆಯನ್ನು ಗೆಲ್ಲಲು ಪ್ರಯತ್ನಿಸಿ ವಿಫಲನಾದನು. ಇವನ ಕಾಲದಲ್ಲಿ ವಿಜಾಪುರವು ಮೊಟ್ಟ ಮೊದಲಬಾರಿಗೆ ದೆಹಲಿಯ

ಮೊಗಲ್ ಸುಲ್ತಾನ ಅಕ್ಬರನೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸಿತು.[೨೫೧] ಒಟ್ಟಾರೆಯಾಗಿ ದಕ್ಷಿಣದಲ್ಲಿ ನಡೆದ ರಾಜಕೀಯ ಅಂತಃಕಲಹಗಳ ಘರ್ಷಣೆಯಿಂದ ವಿಜಾಪುರ ಆದಿಲ್‌ಶಾಹಿ ರಾಜ್ಯವನ್ನು ಸ್ಥಿರವಾಗಿ ಮುನ್ನಡೆಸಿದನು. ಕ್ರಿ.ಶ. ೧೫೮೦ರಲ್ಲಿ ಅವನು ಇಬ್ಬರು ನಪುಂಸಕರಿಂದ ಕೊಲೆಯಾದನು. ಅಲಿ ಆದಿಲ್‌ಶಾಹನನ್ನು ನವಭಾಗದಲ್ಲಿ ದಫನ್ ಮಾಡಲಾಯಿತು. ಇಂದು ಅದು ಅಲಿರೋಜಾ ಎಂದು ಪ್ರಸಿದ್ಧವಾಗಿದೆ.

ಅಲಿ ಆದಿಲ್‌ಶಾಹನು ಸಮರ್ಥ ಆಡಳಿತಗಾರನಾಗಿದ್ದನಲ್ಲದೆ ಉತ್ತಮ ಕಲಾಪೋಷಕನಾಗಿದ್ದನು. ಇವನ ಕಾಲಾವಧಿಯಲ್ಲಿ ವಿಜಾಪುರ ನಗರದ ಸುತ್ತಲೂ ಬಲಿಷ್ಠವಾದ ಕೋಟೆಗೋಡೆಯನ್ನು ನಿರ್ಮಿಸಿದನಲ್ಲದೆ ನಗರಕ್ಕೆ ನೀರು ಸರಬರಾಜು ಮಾಡಲು ಕಾಲುವೆಗಳನ್ನು ತೋಡಿಸಿದನು. ಜುಮಾ ಮಸೀದ್, ಮಕ್ಕಾ ಮಸೀದ್ ಮತ್ತು ಗಗನ್ ಮಹಲ್‌ಗಳ ಕಟ್ಟಡಗಳನ್ನು ಕಟ್ಟಿಸಿದನು.

ಎರಡನೆಯ ಇಬ್ರಾಹಿಮ್ ಆದಿಲ್‌ಶಾಹ(ಕ್ರಿ.ಶ. ೧೫೮೦-೧೬೨೭)

ಅಲಿ ಆದಿಲ್‌ಶಾಹನಿಗೆ ಮಕ್ಕಳಿಲ್ಲದ ಕಾರಣ ಇವನ ಮರಣದ ನಂತರ ಸಹೋದರ ಥಮಾಸ್ಪನ ಮಗ ಇಬ್ರಾಹಿಮ್(ಎರಡನೆಯ ಇಬ್ರಾಹಿಮ್ ಆದಿಲ್‌ಶಾಹ) ತನ್ನ ಒಂಬತ್ತನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದನು.[೨೫೨] ಹೀಗಾಗಿ ರಾಜಪ್ರತಿನಿಧಿ ಅಥವಾ ರೀಜೆಂಟರ್ ಆಳ್ವಿಕೆ ಅವಶ್ಯಕವಾಯಿತು. ರಾಜಕುಮಾರನ ದೊಡ್ಡಮ್ಮ ವಿಧವೆ ರಾಣಿ ಚಾಂದ್‌ಬೀಬಿಯು ಪಾಲನೆ ಪೋಷಣೆ ಮಾಡಿದಳು. ಸುಲ್ತಾನನು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಕಾರಣ ಕಮಿಲ್‌ಖಾನ್, ಕಿಶ್ವರ್‌ಖಾನ್, ಇಕ್ಲಾಸ್‌ಖಾನ್, ಅಬುಲ್‌ಹಸನ್, ದಿಲಾವರ್‌ಖಾನ್ ಮತ್ತು ಹಮೀದ್‌ಖಾನ್‌ರು ರೀಜೆಂಟರಾಗಿ ಕ್ರಮವಾಗಿ ಆಳ್ವಿಕೆ ಮಾಡಿದರು.[೨೫೩] ಆದರೆ ಇವರು ಅಧಿಕಾರಕ್ಕೆ ಬಂದ ಮೇಲೆ ಸಮಸ್ತ ಅಧಿಕಾರವನ್ನು ತಾವೇ ಇಟ್ಟುಕೊಳ್ಳಲು ಬಯಸಿ ಸರ್ವಾಧಿಕಾರಿಯಾದರು. ಇದರಿಂದಾಗಿ ರಾಜಧಾನಿಯಲ್ಲಿ ತೀವ್ರವಾದ ಬಿಕ್ಕಟ್ಟು, ಅಶಾಂತಿ ತಲೆದೋರಿತು. ಈ ರೀಜೆಂಟರ ಆಳ್ವಿಕೆಯನ್ನು ಕೊನೆಗೊಳಿಸಲು ಪ್ರಯತ್ನಿಸಿದ ಚಾಂದ್‌ಬೀಬಿಯು ವಿಫಲಳಾದಳಲ್ಲದೆ, ವಿಜಾಪುರ ಆಸ್ಥಾನದಲ್ಲಿ ತನ್ನ ಪ್ರಭಾವ ಇಳಿಮುಖವಾಗುತ್ತಿರುವ ಅಂಶವನ್ನು ಮನಗಂಡು ತನ್ನ ತವರಾದ ಅಹಮದನಗರಕ್ಕೆ ಹೋದಳು. ಈ ರಾಜಪ್ರತಿನಿಧಿಗಳ ಆಳ್ವಿಕೆಯಿಂದ ಬೇಸತ್ತ ಇಬ್ರಾಹಿಮ್‌ನು ತನ್ನ ೧೯ನೆಯ ವಯಸ್ಸಿನಲ್ಲಿ ಎಲ್ಲ ರೀಜೆಂಟರ ಆಳ್ವಿಕೆಯನ್ನು ಕೊನೆಗಾಣಿಸಿ ರಾಜ್ಯದ ವ್ಯವಹಾರಗಳನೆಲ್ಲ ಸ್ವತಂತ್ರವಾಗಿ ನೋಡಿಕೊಳ್ಳತೊಡಗಿದನು.

ಇವನು ಅಧಿಕಾರವನ್ನು ನೇರವಾಗಿ ತನ್ನ ಕೈಗೆ ತೆಗೆದುಕೊಂಡ ಮೇಲೆ ಸಾಮ್ರಾಜ್ಯವನ್ನು ಸುಭದ್ರಗೊಳಿಸಿದನಲ್ಲದೆ, ಕಲೆ ಮತ್ತು ಸಾಹಿತ್ಯಕ್ಕೂ ಅಮೋಘವಾದ ಕೊಡುಗೆಯನ್ನು ನೀಡಿದನು. ಸ್ವತಂತ್ರ ಆಳ್ವಿಕೆಯನ್ನು ಪ್ರಾರಂಭಿಸಿದ ಎರಡನೆಯ ಇಬ್ರಾಹಿಮ್‌ನು ಮೊದಲು ಸರ್ವಾಧಿಕಾರತ್ವವನ್ನು ಹೊಂದಿದ್ದ ಕೊನೆಯ ರೀಜೆಂಟ್ ದಿಲಾವರ್ ಖಾನ್‌ನ ಕಣ್ಣು ಕೀಳಿಸಿ ಸೆರೆಮನೆಗಟ್ಟಿದನು. ನಂತರ ದಿಲಾವರ್‌ಖಾನನಿಗೆ ಸಹಾಯ ನೀಡಿದ ಅಹ್ಮದ್‌ನಗರದ ಬುರ್ಹಾಣ ನಿಜಾಮ್‌ಶಾಹನ ಮೇಲೆ

ದಂಡೆತ್ತಿ ಹೋಗಿ ಅವನನ್ನು ಸೋಲಿಸಿದನು. ಇಬ್ರಾಹಿಮ್‌ನು ಮಂಜುಖಾನ್‌ನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿ ಸಿರಾ, ಮೈಸೂರುಗಳಂತಹ ಕೆಲವು ಕರ್ನಾಟಕದ ಪಾಳೇಗಾರರು ಮತ್ತೆ ಕಪ್ಪು ಕಾಣಿಕೆ ಕೊಡುವಂತೆ ಮಾಡಿದನು. ನಂತರ ಸಿಂಹಾಸನಕ್ಕಾಗಿ ಸಹೋದರ ಇಸ್ಮಾಯಿಲ್‌ನ ನೇತೃತ್ವದಲ್ಲಿ ಬೆಳಗಾವಿಯಲ್ಲಿ ನಡೆದ ದಂಗೆಯನ್ನು ಸದೆಬಡಿದನು. ಅಲ್ಲದೆ ಅಕ್ಬರನು ತನ್ನ ಮಗ ದನಿಯಾಲನ ನೇತೃತ್ವದಲ್ಲಿ ದಕ್ಷಿಣದ ಮೇಲೆ ದಂಡಯಾತ್ರೆಗೆ ಕಳುಹಿಸಿದನು. ಇಬ್ರಾಹಿಮ್‌ನು ತನ್ನ ರಾಜನೈತಿಕತೆಯಿಂದ ಮೊಗಲರ ದಾಳಿಗಳಿಂದ ವಿಜಾಪುರವನ್ನು ರಕ್ಷಿಸಿದನು. ಆದರೆ ಅಹಮದ್‌ನಗರದ ಮಲಿಕ್‌ಅಂಬರನ ದಾಳಿಗಳಿಂದ ವಿಜಾಪುರವು ಹಾನಿಗೊಳಗಾಯಿತು.[೨೫೪] ಇಬ್ರಾಹಿಮ್‌ನು ತನ್ನ ಅಧಿಕಾರಿ ಆಕಾ ರಿಜಾ ದಾಬೂಲಿಯ ನೇತೃತ್ವದಲ್ಲಿ ಬೀದರ ಮೇಲೆ ದಾಳಿ ಕೈಗೊಂಡು ಸುಲ್ತಾನ ಮಿರ್ಜಾ ಅಲೀ ಬರೀದ್‌ನನ್ನು ಸೋಲಿಸಿದನಲ್ಲದೆ ಬೀದರದ ಎಲ್ಲ ಪ್ರದೇಶಗಳನ್ನು ವಿಜಾಪುರಕ್ಕೆ ಸೇರಿಸಿಕೊಂಡನು. ಇದರೊಂದಿಗೆ ಕ್ರಿ.ಶ. ೧೬೧೯ರ ಹೊತ್ತಿಗೆ ಬೀದರದ ಬರೀದಶಾಹಿಯ ಮನೆತನ ಅಂತ್ಯಗೊಂಡಿತು.[೨೫೫]

ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ಯುದ್ಧಗಳಿಂದ ಸಾಧಿಸಿದಕ್ಕಿಂತ ಮಿಗಿಲಾಗಿ ಕಲೆ ಮತ್ತು ಸಾಹಿತ್ಯಕ್ಕೆ ಕೊಟ್ಟ ಕೊಡುಗೆಯಿಂದ ಆದಿಲ್‌ಶಾಹಿ ಸುಲ್ತಾನರಲ್ಲೇ ಶ್ರೇಷ್ಠಮಟ್ಟದ ಸುಲ್ತಾನನಾಗಿದ್ದಾನೆ. ಅವನು ಸಂಗೀತ ಮತ್ತು ಚಿತ್ರಕಲೆಗಳ ಪ್ರೇಮಿಯಾಗಿದ್ದನು. ವಿದ್ವಾಂಸರ ಮತ್ತು ಕವಿಗಳ ಉದಾರ ಪೋಷಕನಾಗಿದ್ದನು. ಅರಮನೆಗಳು, ಮಸೀದಿಗಳು ಮತ್ತು ನಗರಗಳ ನಿರ್ಮಾಪಕನಾಗಿದ್ದನು. ಅಲ್ಲದೆ ಸರ್ವಧರ್ಮವನ್ನು ಸಮಾನತೆಯಿಂದ ಕಾಣುತ್ತಿದ್ದನು. ಹೀಗಾಗಿ ಅವನಿಗೆ ಪ್ರಜೆಗಳು 'ಜಗದ್ಗುರು' ಎಂಬ ಬಿರುದನ್ನು ಕೊಟ್ಟಿದ್ದರು. ೪೭ ವರ್ಷಗಳ ಕಾಲ ಸುದೀರ್ಘ ಆಳ್ವಿಕೆಯನ್ನು ಮಾಡಿ ಕ್ರಿ.ಶ. ೧೬೨೭ರಲ್ಲಿ ನಿಧನನಾದನು. ಇವನು ನಿರ್ಮಿಸಿದ ಇಬ್ರಾಹಿಮ್ ರೋಜಾದಲ್ಲಿಯೇ ಇವನನ್ನು ದಫನ್ ಮಾಡಲಾಯಿತು.

ಇಬ್ರಾಹಿಮ್‌ನು ತಾನು ಅಧಿಕಾರವನ್ನು ನೇರವಾಗಿ ತನ್ನ ಕೈಗೆ ತೆಗೆದುಕೊಂಡ ಮೇಲೆ ಸಾಮ್ರಾಜ್ಯವನ್ನು ಸುಭದ್ರಗೊಳಿಸಿದನಲ್ಲದೆ ಕಲೆ ಮತ್ತು ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದನು. ಈತನ ಆಡಳಿತಾವಧಿಯಲ್ಲಿ ವಿಜಾಪುರದ ಪಶ್ಚಿಮ ದಿಕ್ಕಿಗೆ ನಾಲ್ಕು ಮೈಲು ದೂರದಲ್ಲಿ ನವರಸಪುರ ಎಂಬ ನಗರವನ್ನು ನಿರ್ಮಿಸಿದನಲ್ಲದೆ ಆ ನಗರದ ಸುತ್ತಲೂ ಕೋಟೆಯನ್ನು ಕಟ್ಟಿಸಿದ. ಹಫ್ತ್‌ಕೋಹನ್ (ಸಾತ್‌ಮಂಜಿಲ್), ದಿಲ್‌ಕಶ್ ಎಂಬ ಮಹಲ್, ಹೈದರೀ ಬುರುಜು, ನೌರಸಮಹಲ್, ಆನಂದ ಮಹಲ್ ಹಾಗೂ ಜೋಹಾರಾಪುರ ಎಂಬ ನಗರವನ್ನು ಈತನ ಆಡಳಿತಾವಧಿಯಲ್ಲಿ ನಿರ್ಮಾಣಗೊಂಡವು.

ಮಹಮ್ಮದ್ ಆದಿಲ್‌ಶಾಹ(ಕ್ರಿ.ಶ. ೧೬೨೭-೧೬೫೬)

ಇಬ್ರಾಹಿಮ್ ಆದಿಲ್‌ಶಾಹನ ಇಚ್ಛೆಯಂತೆ ಮಹಮ್ಮದ್ ಆದಿಲ್‌ಶಾಹನು ತಂದೆಯ ಮರಣದ ನಂತರ ತನ್ನ ಹದಿನಾರನೆಯ ವಯಸ್ಸಿನಲ್ಲಿಯೇ ಪಟ್ಟಕ್ಕೆ ಬಂದನು.[೨೫೬] ಇವನ ಆಳ್ವಿಕೆಯಲ್ಲೂ

ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಆದಿಲ್‌ಶಾಹಿ ರಾಜ್ಯದ ವೈಭವವು ಮತ್ತಷ್ಟು ಪ್ರಸಿದ್ಧಿಯನ್ನು ಪಡೆಯಿತು. ಇವನು ಅಧಿಕಾರಕ್ಕೆ ಬಂದ ವರ್ಷವೇ ಅಹಮದ್‌ನಗರದ ಬುರ್ಹಾನ ನಿಜಾಮ್‌ಶಾಹನು ಆದಿಲ್‌ಶಾಹಿ ರಾಜ್ಯದ ಮೇಲೆ ಎರಡು ಸಲ ದಾಳಿ ಮಾಡಿ ಸೋತು ಹಿಂತಿರುಗಿದನು. ದಖ್ಖನ್ ಮೇಲೆ ಮೊಗಲರ ದಾಳಿಗಳು ನಿರಂತರವಾಗಿ ನಡೆದವು. ಷಹಾಜಹಾನ್‌ನ ಆಡಳಿತಾವಧಿಯಲ್ಲಿ ಮೊಗಲರು ಮತ್ತೆ ದಖ್ಖನ್ ಮೇಲೆ ಅನೇಕ ದಾಳಿಗಳನ್ನು ಕೈಗೊಂಡರಾದರೂ ವಿಜಾಪುರದ ಮೇಲೆ ಅವರ ಹಿಡಿತ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಕ್ರಿ.ಶ. ೧೬೩೬ರಲ್ಲಿ ಮೊಗಲರು ಮತ್ತು ಮಹಮ್ಮದ್ ಆದಿಲ್‌ಶಾಹನ ನಡುವೆ ಶಾಂತಿ ಒಪ್ಪಂದವೇರ್ಪಟ್ಟು ತತ್ಕಾಲದವರೆಗೆ ಮೊಗಲರ ದಾಳಿಯಿಂದ ವಿಜಾಪುರವು ದೂರ ಉಳಿಯಿತು.

ಮೊಗಲರೊಂದಿಗೆ ಮಹಮ್ಮದನು ಮಾಡಿಕೊಂಡ ಒಪ್ಪಂದದಂತೆ ಆದಿಲ್‌ಶಾಹಿಗಳು ಉತ್ತರದ ಕಡೆ ತಮ್ಮ ರಾಜ್ಯವನ್ನು ವಿಸ್ತರಿಸಲು ನಿರ್ಬಂಧ ವಿಧಿಸಲಾಗಿತ್ತು. ಆದರೆ ದಕ್ಷಿಣದ ಕಡೆ ದಾಳಿ ಕೈಗೊಳ್ಳಲು ಯಾವ ನಿರ್ಬಂಧವೂ ಇರಲಿಲ್ಲ. ಹೀಗಾಗಿ ದಕ್ಷಿಣದಲ್ಲಿನ ಅನೇಕ ಪಾಳೇಗಾರರು ತಮ್ಮ ತಮ್ಮಲ್ಲಿ ಅಂತಃಕಲಹಗಳಲ್ಲಿ ತೊಡಗಿದ್ದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡ ಮಹಮ್ಮದನು ತನ್ನ ದಂಡನಾಯಕರಾದ ರಣದುಲ್ಲಾಖಾನ್, ಶಹಾಜಿ, ಅಫಜಲ್‌ಖಾನ್ ಮತ್ತು ಮುಸ್ತಾಫ್‌ಖಾನ್‌ನ ನೇತೃತ್ವದ ಸೈನ್ಯ ಇಕ್ಕೇರಿಯ ವೀರಭದ್ರನಾಯಕ, ಬೆಂಗಳೂರಿನ ಕೇಂಪೇಗೌಡ, ಸಿರಾಕೋಟೆಯ ಕಸ್ತೂರಿ ರಂಗನಾಯಕ, ಮೈಸೂರಿನ ಕಂಠೀರವ ನರಸರಾಜ ಒಡೆಯರ್, ಬೇಲೂರಿನ ವೆಂಕಟಪತಿರಾಜ, ವೆಲ್ಲೂರಿನಲ್ಲಿ ಅಳಿದುಳಿದ ವೈಭವದೊಂದಿಗೆ ಆಳ್ವಿಕೆ ಮಾಡುತ್ತಿದ್ದ ವಿಜಯನಗರದ ಶ್ರೀರಂಗರಾಯ, ಜಿಂಜಿಕೋಟೆಯ ರೂಪನಾಯಕ ಹೀಗೆ ಅನೇಕ ಸಣ್ಣಪುಟ್ಟ ಪಾಳೇಗಾರರನ್ನು ಸೋಲಿಸಿ ಅವರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿದರಲ್ಲದೆ ಅವರಿಂದ ಕಪ್ಪ ಕಾಣಿಕೆಗಳನ್ನು ಪಡೆದುಕೊಂಡರು.[೨೫೭]

ಮಹಮ್ಮದ್‌ನ ಆಳ್ವಿಕೆಯ ಕೊನೆಯ ಕಾಲಘಟ್ಟದಲ್ಲಿ ಶಹಾಜಿಯ ಮಗ ಶಿವಾಜಿಯು ಮರಾಠರನ್ನು ಒಗ್ಗೂಡಿಸಿ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸುವ ಉದ್ದೇಶದೊಂದಿಗೆ ಆದಿಲ್‌ಶಾಹಿ ರಾಜ್ಯದ ಮೇಲೆ ಕ್ರಿ.ಶ. ೧೬೪೫ ರಿಂದ ೧೬೪೮ರವರೆಗೆ ಸತತ ದಾಳಿ ಮಾಡಿ ಅನೇಕ ಜಹಗೀರುಗಳನ್ನು ವಶಪಡಿಸಿಕೊಂಡನು. ಮಹಮ್ಮದ್‌ನು ಇವನ ದಾಳಿಗಳನ್ನು ಎದುರಿಸಬೇಕಾಯಿತು. ಯೂಸೂಫ್ ಆದಿಲ್‌ಖಾನ್‌ನಿಂದ ಹುಟ್ಟಿಕೊಂಡ ಪೋರ್ಚುಗೀಸರೊಂದಿಗಿನ ವೈರತ್ವ ಇವನ ಆಳ್ವಿಕೆಯಲ್ಲೂ ಮುಂದುವರಿಯಿತು. ಕ್ರಿ.ಶ. ೧೬೫೪ರಲ್ಲಿ ನಡೆದ ಕಲಹದಲ್ಲಿ ಪೋರ್ಚುಗೀಸರ ಮೇಲೆ ಆದಿಲ್‌ಶಾಹಿ ಸೈನ್ಯ ವಿಜಯ ಸಾಧಿಸಿತ್ತಾದರೂ ಇಬ್ಬರ ನಡುವೆ ಆದ ಶಾಂತಿ ಒಪ್ಪಂದದಿಂದ ಅಷ್ಟಕ್ಕೆ ಸ್ಥಗಿತಗೊಂಡಿತು.[೨೫೮]

ಮಹಮ್ಮದ್ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ರಾಜ್ಯವು ವೈಭವದ ಪರಾಕಾಷ್ಠೆಗೆ ಏರಿತು. ಅಲ್ಲದೆ ಈತನ ಆಡಳಿತಾವಧಿಯಲ್ಲಿ ಶಹಾಜಿ ಮತ್ತು ರಣದುಲ್ಲಾಖಾನ್‌ರು ಮಹತ್ವದ ಪಾತ್ರ

ವಹಿಸಿದರು. ವಿಜಾಪುರ ರಾಜ್ಯವು ಹೆಚ್ಚು ಕಡಿಮೆ ಈಗಿನ ಇಡೀ ಕರ್ನಾಟಕದ ಪ್ರದೇಶಗಳನ್ನೇ ಒಳಗೊಂಡಿತು. ಕ್ರಿ.ಶ. ೧೬೫೬ರಲ್ಲಿ ಮಹಮ್ಮದ್‌ನು ಮರಣ ಹೊಂದಿದ ನಂತರ ಆದಿಲ್‌ಶಾಹಿ ರಾಜ್ಯವು ಅವನತಿಯ ಹಾದಿಯನ್ನು ಹಿಡಿಯಿತು. ಈತನು ತನ್ನ ರಾಜಕೀಯ ವಲಯದಲ್ಲಿ ಪ್ರಭಾವ ಬೀರಿದಷ್ಟೆ ಕಲೆ ಮತ್ತು ವಾಸ್ತುಶಿಲ್ಪಕ್ಕೂ ಅಮೋಘವಾದ ಕೊಡುಗೆಯನ್ನು ನೀಡಿದ್ದಾನೆ. ಮಹಮ್ಮದ್‌ನು ಕಟ್ಟಿಸಿದ ಗೋಲ್‌ಗುಂಬಜ್ ಜಗತ್ಪ್ರಸಿದ್ಧಿಯನ್ನು ಪಡೆದಿದೆ. ದೌಲತ್‌ಪುರ ಪಟ್ಟಣ, ಬೇಗಂ ತಾಲಾಬ ಕೆರೆ ನಿರ್ಮಾಣ ಮತ್ತು ಅಸಾರ್‌ಮಹಲ್ ಕಟ್ಟಡದ ನಿರ್ಮಾಣದ ಕಾರ್ಯವನ್ನು ಪೂರ್ಣಗೊಳಿಸಿದ್ದು ಇವನ ಕೊಡುಗೆಯಾಗಿದೆ. ಕ್ರಿ.ಶ. ೧೬೩೨ರಲ್ಲಿ ಮುರಾರಿ ಪಂಡಿತನು ಮೊಘಲರ ಸೈನ್ಯವನ್ನು ಪರಾಂಡ ಕೋಟೆಯಿಂದ ಹೊರಹಾಕಿ ಅಲ್ಲಿ ಇದ್ದ ಮಾಲಿಕ್-ಇ-ಮೈದಾನ್ ತೋಫನ್ನು ವಿಜಾಪುರಕ್ಕೆ ತಂದನು. ಇದನ್ನು ಪಶ್ಚಿಮಕ್ಕೆ ಕೋಟೆಗೋಡೆಗೆ ಹೊಂದಿಕೊಂಡು ಪ್ರತ್ಯೇಕ ಬುರ್ಜನ್ನು ನಿರ್ಮಿಸಿ ಅದರ ಮೇಲೆ ಇಡಲಾಗಿದೆ. ಇದು ಕೂಡಾ ಇಂದು ಪ್ರವಾಸಿಗರ ಆಕರ್ಷಣೆಗಳಲ್ಲೊಂದಾಗಿದೆ.

ಎರಡನೆಯ ಅಲಿ ಆದಿಲ್‌ಶಾಹ(ಕ್ರಿ.ಶ. ೧೬೫೬-೧೬೭೨)

ಮಹಮ್ಮದ ಆದಿಲ್‌ಶಾಹನ ನಂತರ ಅವನ ೧೯ ವರ್ಷದ ಮಗ ಅಲಿ ಆದಿಲ್‌ಶಾಹನು ಅಧಿಕಾರಕ್ಕೆ ಬಂದನು. ಇವನು ಅಧಿಕಾರಕ್ಕೆ ಬಂದ ಮೇಲೆ ಮತ್ತಷ್ಟು ಬಾಹ್ಯದಾಳಿಗಳು ವಿಪರೀತಗೊಂಡವು. ಅದರಲ್ಲಿ ಮೊಗಲರು ದಖ್ಖನ್ ರಾಜ್ಯಗಳನ್ನು ಸಂಪೂರ್ಣವಾಗಿ ನಾಶ ಮಾಡಬೇಕೆಂಬ ಮಹತ್ವಾಕಾಂಕ್ಷೆ, ಶಿವಾಜಿಯ ಅಭ್ಯುದಯ, ದಕ್ಷಿಣದಲ್ಲಿ ಪಾಳೇಗಾರರ ದಂಗೆಗಳು ಇಂತಹ ಪರಿಸ್ಥಿತಿಯಲ್ಲಿ ಎದೆಗುಂದದೆ ಸಾಮ್ರಾಜ್ಯ ರಕ್ಷಣೆಗೆ ಕೊನೆಯವರೆಗೂ ಶ್ರಮಿಸಿದನು.

ಇವನು ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಮೇಲೆ ದೆಹಲಿ ಸುಲ್ತಾನ ಷಹಜಹಾನ್‌ನ ಮಗ ಔರಂಗಜೇಬನನ್ನು ದಕ್ಷಿಣದ ವೈಸ್‌ರಾಯ್‌ನನ್ನಾಗಿ ಮಾಡಲಾಯಿತು. ಇವನು ಕ್ರಿ.ಶ. ೧೬೫೬ರಲ್ಲಿ ಬೀದರ ಮತ್ತು ಕಲ್ಯಾಣವನ್ನು ವಶಪಡಿಸಿಕೊಂಡು ವಿಜಾಪುರದ ಮೇಲೆ ದಾಳಿಯಿಟ್ಟನು. ಈ ದಾಳಿಯನ್ನು ಎದುರಿಸದೆ ಅಲಿ ಆದಿಲ್‌ಶಾಹನು ಸಂಧಿಯನ್ನು ಕೋರಿದನು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಔರಂಗಜೇಬನು ಬಹಳ ಕಠೋರವಾದ ಮತ್ತು ಅಪಮಾನಕರ ಒಪ್ಪಂದವನ್ನು ಹೇರಿದನು. ಷಹಜಹಾನನ ಮರಣದ ನಂತರ ದೆಹಲಿ ಸಿಂಹಾಸನದ ಉತ್ತರಾಧಿಕಾರತ್ವಕ್ಕಾಗಿ ನಡೆದ ಅಂತಃಕಲಹಗಳಿಂದ ಔರಂಗಜೇಬನು ಉತ್ತರಕ್ಕೆ ಹಿಂದಿರುಗಿದನು.

ಈ ಕಾಲಾವಧಿಯಲ್ಲಿ ದಕ್ಷಿಣದಲ್ಲಿ ಶಿವಾಜಿಯು ಪ್ರಬಲನಾಗತೊಡಗಿದನು. ವಿಜಾಪುರ ರಾಜ್ಯದ ಮೇಲೆ ದಾಳಿ ಮಾಡಿ ಜಾವಳಿ ಎಂಬ ಜಹಗೀರ, ಕೊಂಕಣ ಕರಾವಳಿ, ರಾಯಗಡ, ದಾಬೋಲ್ ಮತ್ತು ಪನ್ಹಾಲ್ ಕೋಟೆಯನ್ನು ಹಸ್ತಗತ ಮಾಡಿಕೊಂಡನು. ಆದಿಲ್‌ಶಾಹಿ ರಾಜ್ಯದ ಇಡೀ ವಾಯವ್ಯಭಾಗ ಶಿವಾಜಿಯ ಹಸ್ತಗತವಾಯಿತು. ಅಲಿ ಆದಿಲ್‌ಶಾಹನು ಶಿವಾಜಿಯ ಪ್ರಭುತ್ವವನ್ನು ದಮನ ಮಾಡಲು ಪುತಃಖಾನ್, ಅಫಜಲ್‌ಖಾನ್, ಶಾಹಾಜಿ, ಅಫಜಲ್‌ಖಾನ್‌ನ ಮಗ ಫಜಲಖಾನ್‌ನ ನೇತೃತ್ವದಲ್ಲಿ ಪ್ರತ್ಯೇಕವಾಗಿ ನಿರಂತರ ದಾಳಿಯನ್ನು ಕೈಗೊಂಡನು. ಕೊನೆಗೆ ಅಲಿ

ಆದಿಲ್‌ಶಾಹನು ಶಿವಾಜಿಯ ಜೊತೆ ಒಪ್ಪಂದ ಮಾಡಿಕೊಂಡು ಅದುವರೆಗೆ ವಾಯವ್ಯ ದಿಕ್ಕಿನಲ್ಲಿ ಗೆದ್ದುಕೊಂಡ ಭಾಗಗಳನ್ನು ಶಿವಾಜಿಯು ಇಟ್ಟುಕೊಳ್ಳಬಹುದು. ಆದರೆ ಮತ್ತೆ ಅವನು ರಾಜ್ಯವಿಸ್ತರಣೆಗೆ ಕೈಹಾಕಬಾರದು ಎಂದು ಒಪ್ಪಂದವಾಯಿತು. ಆದರೆ ಶಿವಾಜಿಯು ಒಪ್ಪಂದವನ್ನು ಪಾಲಿಸಿದ್ದಕ್ಕಿಂತ ಮುರಿದದ್ದೇ ಹೆಚ್ಚು.[೨೫೯]

ಶಿವಾಜಿಯ ದಾಳಿಯ ನಂತರ ಮಹಮ್ಮದ್ ಆದಿಲ್‌ಶಾಹನ ಆಡಳಿತದಲ್ಲಿ ಬಹುತೇಕ ಕರ್ನಾಟಕದ ದಕ್ಷಿಣ ಭಾಗದ ಪಾಳೇಗಾರರು ಆದಿಲ್‌ಶಾಹಿಗಳಿಗೆ ಅಧೀನರಾಗಿದ್ದರು. ಇವನು ಮರಣ ಹೊಂದಿದ ನಂತರ ಅವರು ಮತ್ತೆ ಸ್ವತಂತ್ರರಾಗಲು ಪ್ರಯತ್ನಿಸಿದರು. ಅದರಲ್ಲಿ ಪ್ರಮುಖವಾಗಿ ಮದುರೆಯ ತಿರುಮಲನಾಯಕನು ನಿಧನನಾಗಿ ಅವನ ಮಗ ಮುತ್ತುವೀರಪ್ಪ, ಬಿದನೂರಿನ ಶಿವಪ್ಪನಾಯಕ, ಬಸವಾಪಟ್ಟಣ, ಸೊಂದಾಗಳ ಪಾಳೆಗಾರರ ಮೇಲೆ ಪುನಃ ದಾಳಿ ಕೈಗೊಂಡು ಸೋಲಿಸಿ ವಿಜಾಪುರದ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು.[೨೬೦]

ಕ್ರಿ.ಶ. ೧೬೬೬ರಲ್ಲಿ ಔರಂಗಜೇಬನು ಜಯಸಿಂಗನ ನೇತೃತ್ವದಲ್ಲಿ ಮತ್ತೆ ವಿಜಾಪುರದ ಮೇಲೆ ಆಕ್ರಮಣ ಮಾಡಿದರು. ಆದರೆ ವಿಜಾಪುರ ಆದಿಲ್‌ಶಾಹಿ ಮತ್ತು ಗೋಲ್ಕೊಂಡದ ಅಬ್ದುಲ್ ಕುತುಬ್‌ಶಾಹಿಯ ಸಂಯುಕ್ತ ಸೈನ್ಯವು ಮೊಗಲರನ್ನು ಸೋಲಿಸಿ ಔರಂಗಾಬಾದಿನೆಡೆಗೆ ಅಟ್ಟಿದರು. ಆದರೆ ಅಲಿ ಆದಿಲ್‌ಶಾಹನು ಮತ್ತೆ ವಿಜಾಪುರ ರಾಜ್ಯದ ಮೇಲೆ ಶಿವಾಜಿಯ ಆಕ್ರಮಣಗಳನ್ನು ತಡೆಯಲು ಮೊಗಲರೊಂದಿಗೆ ಆಗ್ರಾ ಒಪ್ಪಂದವನ್ನು ಮಾಡಿಕೊಂಡನು.[೨೬೧] ಒಟ್ಟಾರೆಯಾಗಿ ಮಹಮ್ಮದ್ ಆದಿಲ್‌ಶಾಹನ ನಂತರ ಆದಿಲ್‌ಶಾಹ ರಾಜ್ಯವು ಬಾಹ್ಯದಾಳಿಗಳಿಂದ ಪದೇ ಪದೇ ತುತ್ತಾಗುತಿತ್ತು. ಹೀಗಾಗಿ ರಾಜ್ಯವು ಅವನತಿಯತ್ತ ಸಾಗುತ್ತಿದ್ದರೂ ಅದನ್ನು ಸ್ಥಿರವಾದ ನೆಲೆಯಲ್ಲಿ ರಕ್ಷಣೆ ಮಾಡಿ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿದನು. ಕ್ರಿ.ಶ. ೧೬೭೨ರಲ್ಲಿ ಪಾರ್ಶ್ವವಾಯು ಪೀಡಿತನಾಗಿ ಮರಣ ಹೊಂದಿದನು. ಸ್ವತಃ ಕವಿಯೂ ಆಗಿದ್ದ ಅಲಿ ಆದಿಲ್‌ಶಾಹನು ಆಸ್ಥಾನದಲ್ಲಿ ಕವಿಗಳಿಗೆ, ಪಂಡಿತರಿಗೆ ಆಶ್ರಯ ನೀಡಿದ್ದನು. ಇವನು ಫಾರಸೀ ಭಾಷೆಗಿಂತ ಆಡಳಿತದಲ್ಲಿ ದಖನೀ ಭಾಷೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದನು.

ಸಿಕಂದರ್ ಆದಿಲ್‌ಶಾಹ(ಕ್ರಿ.ಶ. ೧೬೭೨–೧೬೮೬)

ಅಲಿ ಆದಿಲ್‌ಶಾಹ ಮರಣ ಹೊಂದಿದ ನಂತರ ಅಪ್ರಾಪ್ತವಯಸ್ಕನಾಗಿದ್ದ ಸಿಕಂದರ್ ಆದಿಲ್‌ಶಾಹನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಇವನು ವಿಜಾಪುರ ರಾಜ್ಯದ ಕೊನೆಯ ಸುಲ್ತಾನನಾಗಿದ್ದ. ಇವನ ಆಳ್ವಿಕೆಯ ಅವಧಿಯಲ್ಲಿ ರಾಜಕೀಯ ಅಂತಃಕಲಹಗಳಿಂದ ರಾಜ್ಯದ ಪರಿಸ್ಥಿತಿಯು ದಿನದಿನಕ್ಕೂ ಅಧೋಗತಿಗಿಳಿಯಿತು. ಇಂತಹ ಪರಿಸ್ಥಿತಿಯಲ್ಲಿ ಮೊಗಲರು ದಕ್ಷಿಣ ಭಾರತವನ್ನು ಮತ್ತು ವಿಜಾಪುರವನ್ನು ಸಂಪೂರ್ಣವಾಗಿ ಹಸ್ತಗತ ಮಾಡಿಕೊಳ್ಳಬೇಕೆಂಬ ಇಚ್ಛೆಯನ್ನು ಇಟ್ಟುಕೊಂಡು ಕ್ರಿ.ಶ. ೧೬೮೫ರ ಏಪ್ರಿಲ್‌ನಲ್ಲಿ ವಿಜಾಪುರದ ಕೋಟೆಗೆ ಮುತ್ತಿಗೆ

ಹಾಕಿದರು. ಇಂತಹ ತೀವ್ರ ಕಷ್ಟದ ಪರಿಸ್ಥಿತಿಯಲ್ಲಿ ಗೋಲ್ಕೊಂಡದ ಸುಲ್ತಾನನು ವಿಜಾಪುರಕ್ಕೆ ನೆರವು ನೀಡುವುದಾಗಿ ಆಶ್ವಾಸನೆಯಿತ್ತನು. ಜೊತೆಗೆ ಶಂಭೋಜಿಯ ಕಡೆಯಿಂದ ಒಂದು ಮರಾಠ ತುಕಡಿಯೂ ಬಂದು ಸೇರಿತು.[೨೬೨] ಮೊಗಲ್ ರಾಜಕುಮಾರ ಅಜಮನ ನೇತೃತ್ವದಲ್ಲಿ ವಿಜಾಪುರದ ಮೇಲೆ ೧೫ ತಿಂಗಳುಗಳವರೆಗೆ ಯುದ್ಧ ನಡೆದರೂ ಯಾವುದೇ ಫಲಿತ ಕಾಣಲಿಲ್ಲ. ಕೊನೆಗೆ ಮೊಗಲ್ ಚಕ್ರವರ್ತಿ ಔರಂಗಜೇಬನೇ ಕ್ರಿ.ಶ. ೧೬೮೬ರಲ್ಲಿ ದಾಳಿ ಮಾಡಿ ವಿಜಾಪುರವನ್ನು ವಶಪಡಿಸಿಕೊಂಡು ಸಿಕಂದರನು ಶರಣಾಗುವಂತೆ ಮಾಡಿದನು. ಸಿಕಂದರನು ಆಜೀವ ಸೆರೆಮನೆಯ ವಾಸವನ್ನು ಅನುಭವಿಸಿ ಕ್ರಿ.ಶ. ೧೭೦೦ ಏಪ್ರಿಲ್‌ನಲ್ಲಿ ಮರಣ ಹೊಂದಿದನು. ಇದರೊಂದಿಗೆ ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ಮಾಡಿದ ಆದಿಲ್‌ಶಾಹಿ ರಾಜ್ಯವು ಕೊನೆಗೊಂಡಿತು.

ಮೊಗಲರು

ಔರಂಗಜೇಬನು ವಿಜಾಪುರವನ್ನು ವಶಪಡಿಸಿಕೊಂಡ ಮೇಲೆ ಅದನ್ನು ಮೊಗಲ್ ಸಾಮ್ರಾಜ್ಯದ ಪ್ರಾಂತವನ್ನಾಗಿ ಸೇರಿಸಿಕೊಂಡನು. ಆದಿಲ್‌ಶಾಹಿ ಆಡಳಿತದಲ್ಲಿದ್ದ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕದೆ ತನ್ನ ಆಡಳಿತದಲ್ಲಿಯೂ ಮುಂದುವರಿಸಿದನು. ಅಲ್ಲದೆ ಅವರವರ ಯೋಗ್ಯತೆಯನ್ನು ಗುರುತಿಸಿ ಪದೋನ್ನತಿ ಕೊಟ್ಟು ಸಂತೋಷಪಡಿಸಿದನು.[೨೬೩] ಔರಂಗಜೇಬನು ಕ್ರಿ.ಶ. ೧೬೮೯ರವರೆಗೆ ವಿಜಾಪುರದಲ್ಲೆ ಉಳಿದು ದೂರದ ದಕ್ಷಿಣ ಪ್ರಾಂತಗಳನ್ನು ಸ್ವಾಧೀನಪಡಿಸಿಕೊಳ್ಳುವತ್ತ ಗಮನ ಹರಿಸಿದನು. ಈ ಅವಧಿಯಲ್ಲಿ ವಿಜಾಪುರ ಪ್ರಾಂತದ ಆಡಳಿತ ನಿರ್ವಹಣೆಗೆಂದು ಫೌಜುದಾರ ಹಾಗೂ ಖಾಲ್ಸ್ ದಿವಾನರೆಂಬ ಇರ್ವರು ಅಧಿಕಾರಿಗಳನ್ನು ನೇಮಿಸಿದನು. ರೊಹುಲ್ಲಾಖಾನನಿಗೆ ಪಂಜ ಹಜಾರೀ ಬಿರುದನ್ನು ನೀಡಿದನಲ್ಲದೆ, ನಾಲ್ಕು ಸಾವಿರ ಕುದುರೆ ಸವಾರರನ್ನು ಅವನ ಸ್ವಂತಕ್ಕೆ ಕೊಟ್ಟು ವಿಜಾಪುರ ಸುಬೇದಾರಿಯ ಹುದ್ದೆಯನ್ನು ನೀಡಿ ಗೌರವಿಸಿದನು.[೨೬೪] ಮಹಮ್ಮದ್ ರಫಿಯನ್ನು ದಿವಾನನನ್ನಾಗಿ ನೇಮಿಸಲಾಯಿತು.[೨೬೫] ವಿಜಾಪುರ ರಾಜ್ಯವು ಮೊಗಲರ ಅಧೀನಕ್ಕೆ ಬಂದ ಮೇಲೆ ವಿಜಾಪುರ ರಾಜ್ಯದ ಅಧೀನದಲ್ಲಿದ್ದ ಎಲ್ಲ ಕೋಟೆಗಳ ದಂಡನಾಯಕರು, ಸಂಬಂಧಪಟ್ಟ ಸಾಮ್ರಾಜ್ಯಾಧಿಕಾರಿಗಳಿಗೆ ತಮ್ಮ ಕೋಟೆಗಳನ್ನು ಒಪ್ಪಿಸಿ ಕೊಡಬೇಕು ಮತ್ತು ಸಾಮ್ರಾಟನಿಗೆ ಭೇಟಿಯಾಗಿ ವಂದನೆ ಸಲ್ಲಿಸಬೇಕು ಎಂದು ರಾಜಾಜ್ಞೆಯನ್ನು ಹೊರಡಿಸಲಾಯಿತು. ಅವರಿಗೆಲ್ಲ ಇನಾಮುಗಳನ್ನು ಮತ್ತು ಉನ್ನತ ದರ್ಜೆಯ ಮನಸಬ್‌ಗಳನ್ನು ಕೊಡಲಾಗುವುದೆಂದು ಭರವಸೆ ನೀಡಲಾಯಿತು. ಈ ಮೊದಲು ಆದಿಲ್‌ಶಾಹಿ ಅಧೀನದಲ್ಲಿದ್ದ ಎಲ್ಲ ಕೋಟೆಗಳನ್ನು ಗೆಲ್ಲುವುದಕ್ಕಾಗಿ ನಾಯಕ ಘಾಜಿ ಉದ್‌ದಿನ್ ಖಾರ್ನ ಬಹದೂರನ ನಾಯಕತ್ವದಲ್ಲಿ ಬಹುದೊಡ್ಡ ಸೈನ್ಯವನ್ನು ನೀಡಿ ಕೋಟೆಗಳನ್ನು ಕೈವಶಮಾಡಿಕೊಳ್ಳಲು ಕಳುಹಿಸಲಾಯಿತು.[೨೬೬] ಆದಿಲ್‌ಶಾಹಿ ಮನೆತನದ ಪತನದ ನಂತರ ಕ್ರಿ.ಶ. ೧೬೮೭ರಲ್ಲಿ ಗೋಲ್ಕಂಡ್ ರಾಜ್ಯಕ್ಕೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಈ ಎರಡು ರಾಜ್ಯಗಳ ಸ್ವಾಧೀನದೊಂದಿಗೆ ದಖನ್‌ನಲ್ಲಿಯ ಮೊಗಲ

ಪ್ರಾಂತಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ ಏರಿತು. ಔರಂಗಜೇಬನ ಆಳ್ವಿಕೆಯಲ್ಲಿ ವಿಜಾಪುರವು 'ಸುಭಾ' ಆಗಿದ್ದು, ಅದರಲ್ಲಿ ೧೮ ಸರ್ಕಾರಗಳಿದ್ದು ಆಡಳಿತದ ಅನುಕೂಲಕ್ಕಾಗಿ ೨೮೧ ಪರಗಣ ಅಥವಾ ಮಹಲ್‌ಗಳನ್ನಾಗಿ ವಿಂಗಡಿಸಲಾಗಿತ್ತು. ಆ 'ಸುಭಾ'ದ ೧೮ ಸರ್ಕಾರಗಳಲ್ಲಿ ವಿಜಾಪುರವು ಒಂದು ಸರ್ಕಾರವಾಗಿದ್ದು ಅದರಲ್ಲಿ ೩೦ 'ಮಹಲ್'ಗಳಿದ್ದವು. ಅವುಗಳಲ್ಲಿ ವಿಜಾಪುರ ಮಹಲ್‌ನಲ್ಲಿ ೭೬೫ 'ಕಸಬಾ'ಗಳಿದ್ದು[೨೬೭] ಅವು ಆಡಳಿತದ ಕೆಳಸ್ತರದ ಘಟಕಗಳಾಗಿದ್ದವು. ಆದಿಲ್‌ಶಾಹಿ ದಫ್ತರ್ ಮತ್ತು ಅಸಫ್‌ಜಾಹೀ ದಫ್ತರಗಳಲ್ಲಿ ಹೇಳಿದಂತೆ ಇವುಗಳಿಂದ ಒಟ್ಟು ವಾರ್ಷಿಕ ಕಂದಾಯ ಏಳುಕೋಟಿ ಎಂಬತ್ನಾಲ್ಕು ಲಕ್ಷ ಅರವತ್ತೊಂದು ಸಾವಿರದ ಎಂಟುನೂರ ಹದಿನೇಳು ರೂಪಾಯಿ ಒಂದೂವರೆ ಆಣೆ ಬರುತಿತ್ತು. ಇದಲ್ಲದೆ ವಿಜಾಪುರ ಸರ್ಕಾರದ ಅಧೀನದಲ್ಲಿ ಅನೇಕ ಬಂದರುಗಳಿದ್ದು ಅವುಗಳಿಂದಲೂ ಕಂದಾಯ ಬರುತಿತ್ತು.[೨೬೮]

ಕ್ರಿ.ಶ. ೧೬೮೯ರ ಕೊನೆಯ ವೇಳೆಗೆ ಔರಂಗಜೇಬನು ವಿಜಾಪುರ, ಗೋಲ್ಕೊಂಡಗಳನ್ನು ವಶಪಡಿಸಿಕೊಂಡನಲ್ಲದೆ, ಮರಾಠರ ಪ್ರಾಬಲ್ಯವನ್ನು ಮುರಿದು ದಖ್ಖನ್ನಿನ ಅಜೇಯ ಚಕ್ರವರ್ತಿಯಾಗಿ ಉಳಿದನು. ಇದೇ ವೇಳೆಗೆ ವಿಜಾಪುರದಲ್ಲಿ ಹರಡಿದ ಪ್ಲೇಗ್‌ರೋಗದಿಂದ ಒಂದೂವರೆ ಲಕ್ಷ ಜನ ಸತ್ತರು. ಔರಂಗಜೇಬನ ಜೊತೆಗೆ ಬಂದಿದ್ದ ಅಧಿಕಾರಿ ವರ್ಗ ಮತ್ತು ಬಾದಶಹನ ಸ್ತ್ರೀ ಔರಂಗಬಾದಿ ಅವರಲ್ಲಿ ಫಾಜೀಖಾನ್, ಕಾಜಿ, ಮುತಿಫಿ ಕರೀಬ ಮುಂತಾದ ಇಮಾಮಗಿರಿ ಮಾಡುವ ಕಾಮಗಾರರು ಮತ್ತು ರಾಜಾ ಜಸವಂತನ ಮಗ ಮಹಂಮದಿರಾಜ ಮೊದಲಾದವರು ಮರಣ ಹೊಂದಿದರು.[೨೬೯] ಅದರ ತೀವ್ರತೆ ಎಷ್ಟಿತ್ತೆಂದರೆ ಸತ್ತವರನ್ನು ಸಂಸ್ಕಾರ ಮಾಡುವಷ್ಟು ವ್ಯವಧಾನವಿಲ್ಲದೆ ಶವಗಳನ್ನು ಚಕ್ಕಡಿಗಳಲ್ಲಿ ಹೇರಿಕೊಂಡು ಪಟ್ಟಣದಾಚೆ ಸಾಗಿಸಬೇಕಾಯಿತೆಂದು ಹೇಳಲಾಗುತ್ತದೆ. ಇದರಿಂದಾಗಿ ಔರಂಗಜೇಬನು ಅನಿವಾರ್ಯವಾಗಿ ವಿಜಾಪುರವನ್ನು ತ್ಯಜಿಸಬೇಕಾಯಿತು. ಮೂರು ತಿಂಗಳ ನಂತರ ವಿಜಾಪುರ ಪ್ಲೇಗ್ ಭೀತಿಯಿಂದ ಮುಕ್ತವಾಯಿತು. ಪ್ಲೇಗ್ ಬೇನೆಯ ಅನಂತರ ಔರಂಗಜೇಬನು ದಖನ್‌ನಿಂದ ದೆಹಲಿಗೆ ಹೋಗುವಾಗ ಇಲ್ಲಿಯ ಜನಸಂಖ್ಯೆಯನ್ನು ಒಂಬತ್ತು ಲಕ್ಷ ಐವತ್ನಾಲ್ಕು ಸಾವಿರ ಎಂದು ಗುರುತಿಸಿದ್ದಾನೆ. ಕ್ರಿ.ಶ. ೧೭೧೦ ಮತ್ತು ೧೭೧೭ರಲ್ಲಿ ಬಿದ್ದ ಬರದಿಂದ ವಿಜಾಪುರ ಜನಸಂಖ್ಯೆ ಮತ್ತೆ ಇಳಿಮುಖವಾಯಿತು. ಇದರಿಂದ ವಿಜಾಪುರ ನಗರ ಪೂರ್ತಿಯಾಗಿ ವಿನಾಶವಾದಂತಾಯಿತು.[೨೭೦]

ಶಿವಾಜಿಯ ಮರಣದ ನಂತರ ರಾಜರಾಮನ ನಾಯಕತ್ವದಲ್ಲಿ ಮತ್ತೆ ಬಲಿಷ್ಠರಾದ ಮರಾಠರು ಶಾಂತಾಜಿ ಘೋರ್ಪಡೆಯ ದಂಡನಾಯಕತ್ವದಲ್ಲಿ ವಿಜಾಪುರ ಪ್ರದೇಶದ ಮೇಲೆ ದಾಳಿ ಮಾಡಿದರು. ಮರಾಠರ ಮುನ್ನಡೆಯನ್ನು ನಿಯಂತ್ರಿಸಲು ವಿಜಾಪುರದಿಂದ ಬೃಹತ್ ಸೈನ್ಯವನ್ನು ರವಾನಿಸಲಾಯಿತಾದರೂ ಮರಾಠರು ಗೆರಿಲ್ಲಾ ಯುದ್ಧತಂತ್ರದ ಮೂಲಕ ಮೊಗಲರಿಗೆ ಆಘಾತವನ್ನು ಉಂಟುಮಾಡಿದರು. ಇಂತಹ ಸಂದರ್ಭದಲ್ಲಿ ಚಿನ್ ಕಿಲಿಚ್‌ಖಾನ್‌ನನ್ನು ಕ್ರಿ.ಶ. ೧೭೦೩ರಲ್ಲಿ ವಿಜಾಪುರ ಸುಭಾದ ರಾಜ್ಯಪಾಲನನ್ನಾಗಿ ನಿಯೋಜಿಸಲಾಯಿತು. ಔರಂಗಜೇಬನು ತಾನು

ಸಾಯುವುದಕ್ಕಿಂತ ಸ್ವಲ್ಪ ಮುಂಚಿತವಾಗಿ ತನ್ನ ಮೂರನೆಯ ಮಗ ಕಾಮಭಕ್ಷನನ್ನು ವಿಜಾಪುರ ಗೌರ್ನರ್‌ನನ್ನಾಗಿ ನೇಮಿಸಿದನು. ಕ್ರಿ.ಶ. ೧೭೦೭ರಲ್ಲಿ ಔರಂಗಜೇಬನು ಅಹಮದ್‌ನಗರದಲ್ಲಿ ನಿಧನ ಹೊಂದಿದ ನಂತರ ಅವನ ಮಕ್ಕಳಾದ ಮುಜೀಮ್, ಆಜಾಮ್ ಮತ್ತು ಕಾಮಭಕ್ಷರ ನಡುವೆ ಉತ್ತರಾಧಿಕಾರಕ್ಕಾಗಿ ಪೈಪೋಟಿ ನಡೆಯಿತು. ಉತ್ತರದಲ್ಲಿ ಪ್ರಬಲನಾಗಿದ್ದ ಆಜಾಮ್ ಸೆರೆಯಲ್ಲಿದ್ದ ಮರಾಠದೊರೆ ಶಾಹುನನ್ನು ಬಂಧಮುಕ್ತಗೊಳಿಸಿ ದಖನ್ ಪ್ರಾಂತಗಳಲ್ಲಿ ಚೌತ್ ಮತ್ತು ಸರ್ದೇಶಮುಖ್ ತೆರಿಗೆಗಳನ್ನು ಸಂಗ್ರಹಿಸಲು ಅನುಮತಿ ನೀಡಿದನು. ಸಾತಾರ ಶಾಹುವಿನ ಆಡಳಿತ ಕೇಂದ್ರವಾಯಿತು.[೨೭೧] ಉತ್ತರದಲ್ಲಿ ದಂಗೆಯೆದ್ದ ಆಜಮ್‌ನನ್ನು ಸದೆಬಡಿದು ಮುಜೀಮ್ ಬಹದ್ದೂರಷಾ ಎಂಬ ಬಿರುದಿನೊಂದಿಗೆ ಅಧಿಕಾರಕ್ಕೆ ಬಂದು ಕೇವಲ ಐದು ವರ್ಷ ಮಾತ್ರ ಆಡಳಿತ ನಡೆಸಿದನು. ದಕ್ಷಿಣದಲ್ಲಿ ಮರಾಠರನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಇವನು ವಿಫಲನಾದನು. ಕ್ರಿ.ಶ. ೧೭೧೨ರಲ್ಲಿ ಬಹದ್ದೂರ್‌ಷಾನ ಮರಣಾನಂತರ ಅವನ ಮಕ್ಕಳು ಸಿಂಹಾಸನಕ್ಕಾಗಿ ಹೋರಾಟ ಮುಂದುವರಿಸಿದರು. ಈ ಅಂತಃ ಕಲಹಗಳ ಲಾಭ ಪಡೆದುಕೊಂಡ ಹಲವಾರು ಪ್ರಾಂತಗಳು ಮೊಗಲರೊಂದಿಗೆ ತಮ್ಮ ಸಂಬಂಧವನ್ನು ಕಳೆದುಕೊಂಡರು. ದಖನ್‌ನಲ್ಲಿ ಮರಾಠರು ಪ್ರಬಲರಾಗಿ ಮೊಗಲ ಅಧಿಪತ್ಯೆಯನ್ನು ಕೊನೆಗೊಳಿಸಲು ಪ್ರಯತ್ನಿಸಿದರು. ಕ್ರಿ.ಶ. ೧೭೨೪ರಲ್ಲಿ ಸ್ಥಾಪನೆಯಾದ ಹೈದರಬಾದ್ ನಿಜಾಮ್ ಮನೆತನವೂ ಕೂಡಾ ಮರಾಠರೊಂದಿಗೆ ಪೈಪೋಟಿಗಿಳಿದು ಈ ಪ್ರದೇಶದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಯಿತು.

ಹೈದರಾಬಾದ್ ನಿಜಾಮರು

ಔರಂಗಜೇಬನು ತನ್ನ ಆಳ್ವಿಕೆಯ ಕೊನೆಯ ಅವಧಿಯಲ್ಲಿ ಚಿನ್ ಕಿಲಿಚ್ ಖಾನ್(ನಿಜಾಮ್-ಉಲ್-ಮುಲ್ಕ್)ನನ್ನು ವಿಜಾಪುರ ಸುಭಾದ ರಾಜ್ಯಪಾಲನನ್ನಾಗಿ ನೇಮಿಸಿದ್ದ. ಬಹಾದ್ದೂರ್ ಷಾ ಅವನನ್ನು ಕ್ರಿ.ಶ. ೧೭೦೭ರ ಅವಧಿಯಲ್ಲಿ ಅವಧದ ಪ್ರಾಂತಪಾಲ ಹಾಗೂ ಗೋರಖಪುರದ ಫೌಜುಧಾರನನ್ನಾಗಿ, ನಂತರ ಫರುಖ್ ಸಿಯರ್‌ನನ್ನು ಕ್ರಿ.ಶ. ೧೭೧೩ರಲ್ಲಿ ದಖ್ಖನಿನ ಆರು ಸುಭಾಹಗಳ ಪ್ರಾಂತಪಾಲನನ್ನಾಗಿ ನೇಮಿಸಿದ್ದನು.[೨೭೨] ತುಂಬಾ ಮಹತ್ವಾಕಾಂಕ್ಷಿಯಾಗಿದ್ದ ಇವನು ಮೊಗಲ ಸಿಂಹಾಸನಕ್ಕಾಗಿ ಮತ್ತು ರಾಜಕೀಯ ವೈಫಲ್ಯಕ್ಕಾಗಿ ರಾಜಧಾನಿ ದೆಹಲಿಯಲ್ಲಿ ನಡೆದ ಅಂತಃಕಲಹಗಳ ಲಾಭ ಪಡೆದುಕೊಂಡು ಮೊಗಲರಿಂದ ಸ್ವತಂತ್ರನಾಗಿ ಕ್ರಿ.ಶ. ೧೭೨೪ರಲ್ಲಿ ಹೈದರಾಬಾದ್‌ನಲ್ಲಿ ನಿಜಾಮ್ ಮನೆತನವನ್ನು ಸ್ಥಾಪಿಸಿದನು. ಇದರೊಂದಿಗೆ ವಿಜಾಪುರ ಪ್ರಾಂತವು ಹೈದರಾಬಾದ್ ನಿಜಾಮನ ಅಧೀನಕ್ಕೊಳಪಟ್ಟಿತು.

ದಖ್ಖನ್ನಿನಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸುವ ಇವನ ಧೋರಣೆಗೆ ಮರಾಠರು ಪ್ರತಿರೋಧವಾಗಿದ್ದರು. ಹೈದರಾಬಾದಿನ ನಿಜಾಮನು ಕ್ರಿ.ಶ. ೧೭೪೪ರವರೆಗೆ ಕೃಷ್ಣೆಯ ಉತ್ತರ ಭಾಗದ ಆಡಳಿತದ ಹೊಣೆಯನ್ನು ನಾಸಿರಜಂಗನಿಗೂ ದಕ್ಷಿಣ ಭಾಗದ ಆಡಳಿತವನ್ನು ಸವಣೂರ ನವಾಬನಿಗೂ

ವಹಿಸಿದ್ದನು. ಸುಮಾರು ಕ್ರಿ.ಶ. ೧೭೫೬ರ ಒಪ್ಪಂದದಂತೆ ಸವಣೂರಿನ ನವಾಬನು ಬಾಗಲಕೋಟೆ ಹಾಗೂ ಬಾದಾಮಿ ಪ್ರದೇಶಗಳನ್ನು ಮರಾಠ ಪೇಶ್ವೆಗಳಿಗೆ ಒಪ್ಪಿಸಬೇಕಾಯಿತು.[೨೭೩] ನಿಜಾಮ್-ಉಲ್-ಮುಲ್ಕ್‌ನು ಕ್ರಿ.ಶ. ೧೭೫೮ರಲ್ಲಿ ನಿಧನ ಹೊಂದಿದ್ದರಿಂದ ಹೈದರಾಬಾದಿನ ಗಾದಿಗಾಗಿ ಅಂತಃಕಲಹ ಉದ್ಭವಿಸಿತು. ನಿಜಾಮ್ ಸಲಬತ್ ಜಂಗನು ಕ್ರಿ.ಶ. ೧೭೫೯ರಲ್ಲಿ ವಿಜಾಪುರದ ಜಮೀನ್ದಾರರನ್ನು ಅಧಿಕ ಹಣಕ್ಕಾಗಿ ಒತ್ತಾಯಿಸಿದಾಗ ಬಾಲಾಜಿ ಪೇಶ್ವೆ ಹಾಗೂ ಸದಾಶಿವ ಬಾವುಗಳ ಮುಂದಾಳತ್ವದಲ್ಲಿ ಮುನ್ನುಗ್ಗಿದ ಮರಾಠ ಸೈನ್ಯ, ನಿಜಾಮ್ ಸಲಾಬತ್ ಜಂಗ್ ಹಾಗೂ ಅವನ ಸಹೋದರ ಅಲಿಯನ್ನು ಉದಯಗಿರಿ ಬಳಿಯಲ್ಲಿ ಸೋಲಿಸಿತು. ತತ್ಪರಿಣಾಮವಾಗಿ ಏರ್ಪಟ್ಟ ಒಪ್ಪಂದದಂತೆ ನಿಜಾಮರ ಅಧೀನದಲ್ಲಿದ್ದ ವಿಜಾಪುರ ಪ್ರಾಂತದ ಹೆಚ್ಚಿನ ಪ್ರದೇಶಗಳು ಮರಾಠರಿಗೆ ವರ್ಗಾಯಿಸಲ್ಪಟ್ಟವು.[೨೭೪]

ಮರಾಠರು

ಬಾಳಾಜಿ ಬಾಜಿರಾಯನು ಪೇಶ್ವೆಯಾಗಿದ್ದಾಗ ಕ್ರಿ.ಶ. ೧೭೬೦ರಲ್ಲಿ ಸದಾಶಿವರಾವ್ ಭಾವು, ರಘುನಾಥರಾವ್ ಮುಂತಾದವರು ಕೂಡಿ ನಿಜಾಮ್ ಅಲಿಖಾನನ್ನು ಉದಗೀರ ಯುದ್ಧದಲ್ಲಿ ಸಂಪೂರ್ಣವಾಗಿ ಪರಾಭವಗೊಳಿಸಿ ಅವನ ಮೇಲೆ ೬೦ ಲಕ್ಷ ಉತ್ಪನ್ನದ ಪ್ರಾಂತವನ್ನು ಪೇಶ್ವೆಯರಿಗೆ ಬಿಟ್ಟುಕೊಡಬೇಕೆಂದು ಒಪ್ಪಂದವನ್ನು ಹೇರಿದರು.[೨೭೫] ಆದರೆ ಕ್ರಿ.ಶ. ೧೭೬೧ರಲ್ಲಿ ಅಹಮ್ಮದ್ ಷಾ ಅಬ್ದಾಲಿಯಿಂದ ಪಾಣಿಪತ್ ಕದನದಲ್ಲಿ ಸೋತ ಮರಾಠರು ಸಾಕಷ್ಟು ಹಾನಿಗೊಳಗಾದರು. ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡ ನಿಜಾಮ್ ಅಲಿಖಾನನು ಹಿಂದೆ ಆದ ಒಪ್ಪಂದವನ್ನು ಮುರಿದನು. ಪಾಣಿಪತ್ ಕಾಳಗದಿಂದ ಉತ್ತರ ಭಾರತದಲ್ಲಿ ಮರಾಠ ಪ್ರಭಾವಕ್ಕೆ ಭಾರಿ ಪೆಟ್ಟು ಕೊಟ್ಟಿತು. ಆದರೂ ಅವರು ಉತ್ತರದಲ್ಲಿ ಕಳೆದುಕೊಂಡಿದ್ದನ್ನು ದಕ್ಷಿಣದಲ್ಲಿ ಗಳಿಸಲು ಪ್ರಯತ್ನಿಸಿದರು. ಅವರ ಅದೃಷ್ಟವೆಂಬಂತೆ ಈ ವೇಳೆಗೆ ಪೇಶ್ವೆ ಮಾಧವರಾಯನ ನೇತೃತ್ವದಲ್ಲಿ ಮತ್ತೆ ತಲೆಯೆತ್ತಿದ ಮರಾಠರು ಈ ಬಾರಿ 'ರಾಕ್ಷಸ್ ಭುವನ' ಎಂಬ ಸ್ಥಳದಲ್ಲಿ ನಿಜಾಮ್ ಅಲಿಖಾನನ್ನು ಪುನಃ ಸೋಲಿಸಿದ್ದಲ್ಲದೆ, ಹಿಂದಿನ ಒಪ್ಪಂದದಂತೆ ೬೦ ಲಕ್ಷ ಉತ್ಪನ್ನದ ಪ್ರದೇಶದ ಜೊತೆ ಇನ್ನೂ ೨೨ ಲಕ್ಷದ ಪ್ರಾಂತವನ್ನು ಮತ್ತು ಶತ್ರುಗಳು ದಾಳಿ ಮಾಡಿದಾಗ ಪರಸ್ಪರ ಸಹಾಯ ಮಾಡಬೇಕೆಂದು ಒಪ್ಪಂದದಲ್ಲಿ ತಿಳಿಸಲಾಯಿತು. ಸುರಪುರದ ಪಶ್ಚಿಮ ಭಾಗವು ಪೇಶ್ವೆಯರ ವಶಕ್ಕೆ ಬಂದಿತು. ಕ್ರಿ.ಶ. ೧೭೬೩ರಲ್ಲಿ ಪೇಶ್ವೆ ಸರಕಾರವು ತಮ್ಮ ಕಡೆಯಿಂದ 'ಸರಂಜಾಮಿ'ಯ ಸಲುವಾಗಿ ರಾಸ್ತೆ ಎಂಬ ಅಡ್ಡ ಹೆಸರಿನ ಸರದಾರರನ್ನು ನೇಮಿಸಿಕೊಂಡಿತು. ಆನಂದರಾವ ಭಿಕಾಜಿ ರಾಸ್ತೆ ಎಂಬುವನಿಗೆ ತಾಳಿಕೋಟೆ, ನಾಲ್ವತ್ವಾಡ ಮುಂತಾದ ಪರಗಣಗಳು ಕೊಡಲ್ಪಟ್ಟವು.[೨೭೬] ಕ್ರಿ.ಶ. ೧೭೯೦-೯೧ರಲ್ಲಿ ಮತ್ತೊಮ್ಮೆ ಉಂಟಾದ ಬರಗಾಲ ಮತ್ತು ಮರಾಠರು ವಿಧಿಸುತ್ತಿದ್ದ ಭಾರವಾದ ತೆರಿಗೆಯಿಂದ ಈ ಪ್ರದೇಶ ಅಶಾಂತಿಯ ಆಗರವಾಯಿತು. ತೆರಿಗೆಯ ಹೊಡೆತಕ್ಕೆ ಹೆದರಿ ರೈತರು ಗುಳೇಹೋದರು. ಇದೇ ಪರಿಸ್ಥಿತಿ ಕ್ರಿ.ಶ. ೧೮೧೮ರ ವರೆಗೂ ಮುಂದುವರಿಯಿತು.

ಮರಾಠರ ಕೊನೆಯ ಪೇಶ್ವೆ ಬಾಜಿರಾಯನ(ಕ್ರಿ.ಶ. ೧೭೯೬ ರಿಂದ ೧೮೧೬) ಅಧಿಕಾರವಧಿಯಲ್ಲಿ ಸುಲಿಗೆ ಲೂಟಗಳು ದೈನಂದಿನ ಚಟುವಟಿಕೆಗಳಾಗಿದ್ದು ಅಶಾಂತಿ ತಾಂಡವವಾಡುತ್ತಿತ್ತು. ಅದೂ ಸಾಲದೆಂಬಂತೆ ಪೇಶ್ವೆಗಳ ಅಧೀನರಾದ ಜಾಗೀರದಾರರು ತಮ್ಮ ತಮ್ಮಲ್ಲೇ ಕಚ್ಚಾಡುತ್ತಿದ್ದರು. ಬಾದಾಮಿಯ ಮಾಧವರಾಯ ರಾಸ್ತಿಯ, ಆಲಮೇಲ, ಇಂಡಿ, ತಂಬಗಳ ಮೂಲಾಜಿ ಘೋರ್ಪಡೆ, ಬಾಗೇವಾಡಿ ವಿಜಾಪುರಗಳ ಪರಶುರಾಮ ಪಂಡಿತ ಪ್ರತಿನಿಧಿ, ಮದಕವಿ, ಹುನಗುಂದಗಳ ಗಣಪತಿರಾವ್ ಪೆನ್ಸೆ ಹಾಗೂ ಗಜೇಂದ್ರಗಡದ ದೌಲತ್‌ರಾವ್ ಘೋರ್ಪಡೆಗಳೇ ಕಚ್ಚಾಟದಲ್ಲಿ ತೊಡಗಿದ್ದ ಪ್ರಮುಖ ಮರಾಠ ಅಧಿಕಾರಿಗಳಾಗಿದ್ದರು. ಸುರಪುರದ ನಾಯಕರು ೧೮೦೨ರಲ್ಲಿ ನಾಲತವಾಡಕ್ಕೆ ನುಗ್ಗಿ ಲೂಟಿ ಮಾಡಿದರು. ನಾನಾ ಫಡ್ನವಿಸ್‌ಗೆ ಸೇರಿದ್ದ ಬಾಗೇವಾಡಿ, ವಿಜಾಪುರ ಮುಂತಾದ ಜಹಗೀರುಗಳ ವಾರಸುದಾರಿಕೆ ತನ್ನದೆಂದು ಪರಶುರಾಮ ಶ್ರೀನಿವಾಸ ಪ್ರತಿನಿಧಿ ಕ್ರಿ.ಶ. ೧೮೦೬ರಲ್ಲಿ ಘೋಷಿಸಿದನು. ಇವನ ಹಕ್ಕನ್ನು ಅವನ ತಾಯಿ ಪ್ರಶ್ನಿಸಿ, ಪೇಶ್ವೆ ಬಾಜಿರಾಯನ ನೆರವಿನೊಂದಿಗೆ ನಿಯಂತ್ರಿಸಲು ಯತ್ನಿಸಿದಳು. ಆದರೆ ಪರಶುರಾಮನು ಬಾಜಿರಾಯನ ಗೌರ್ನರನಾದ ಬಾಬು ಗೋಖಲೆಗೆ ಸೋತು ಕೈಸೆರೆಯಾದನು. ಬಾಜಿರಾಯನಿಗೆ ನಿಷ್ಠೆ ತೋರಲು ಒಪ್ಪಿದ ಇವನು ತನ್ನ ಜಹಗೀರಿನ ಸ್ವಲ್ಪ ಭಾಗವನ್ನು ಪಡೆದನು. ಬಾಬು ಗೋಖಲೆಗೆ ಬಾಗೇವಾಡಿ ಜಹಗೀರು ಲಭಿಸಿತು. ಅವನು ತನ್ನ ಜಹಗೀರಿನಲ್ಲಿ ದುರಾಡಳಿತದಲ್ಲಿ ತೊಡಗಿದ್ದರ ಪರಿಣಾಮವಾಗಿ ಗ್ರಾಮಗಳು ಪಾಳುಬಿದ್ದವು. ಸುಮಾರು ಕ್ರಿ.ಶ. ೧೮೦೮ರಲ್ಲಿ ವಿಜಾಪುರಕ್ಕೆ ಭೇಟಿ ನೀಡಿದ್ದ ಸರ್ ಜೇಮ್ಸ್ ಮ್ಯಾಕಿನ್‌ತೋಷನು ಉತ್ತರ ವಿಜಾಪುರ ಪ್ರದೇಶ ಬರಡು ಬಿದ್ದಿದ್ದ ಅಂಶವನ್ನು ದಾಖಲಿಸಿದ್ದಾನೆ. ಮತ್ತೆ ಬ್ರಿಟಿಷ್ ಸರಕಾರದ ಸಲಹೆಯಂತೆ ಬಾಗೇವಾಡಿ, ಮಸಕನಾಳ ಹಾಗೂ ಗಿರಿನಾಳಗಳನ್ನು ಹೊರತುಪಡಿಸಿ ಬಾಗೇವಾಡಿ ಪ್ರದೇಶವನ್ನು ಪರಶುರಾಮನಿಗೆ ಪುನಃ ಜಹಗೀರಾಗಿ ಮರಾಠರು ನೀಡಬೇಕಾಯಿತು. ೧೮೧೬ರ ಪೂನಾ ಒಪ್ಪಂದದ ನಂತರ ಮಾಧವರಾವ ರಾಸ್ತಿಯನಿಗೆ ಮುದ್ದೇಬಿಹಾಳ ಹಾಗೂ ಉತ್ತರ ವಿಜಾಪುರಗಳಲ್ಲಿದ್ದ ಅವನ ಜಹಗೀರುಗಳನ್ನು ಮತ್ತೆ ನೀಡಲಾಯಿತು. ಒಂದು ಸ್ಥಿರವಾದ ಕೇಂದ್ರಪ್ರಭುತ್ವ ಇಲ್ಲದ ಈ ಪ್ರದೇಶದಲ್ಲಿ ಮರಾಠರ ಹಾಗೂ ನಿಜಾಮರ ಆಡಳಿತದಲ್ಲಿ ಅವರ ಸೈನ್ಯದ ದಾಳಿ, ಜಹಗೀರುದಾರರ ಸುಲಿಗೆ, ಕಂದಾಯ ಗುತ್ತಿಗೆದಾರರ ಕಾಟ ಮತ್ತು ಬಲಾತ್ಕಾರದ ಅಹಿತಕರ ಚಟುವಟಿಕೆಗಳಿಂದ ವಿಜಾಪುರ ಪ್ರದೇಶದಲ್ಲಿ ಅಶಾಂತಿಯು ತಲೆದೋರಿತ್ತು.[೨೬೬] ಬುಸಾತಿನೆ ಸಲಾತೀನ ಗ್ರಂಥದಲ್ಲಿ 'ಬುದ್ಧಿವಂತರು, ತಿಳವಳಿಕೆ ಉಳ್ಳವರು ಮತ್ತು ನ್ಯಾಯದಿಂದ ನಡೆಯುವವರೂ ಆದ ಇಂಗ್ರೇಜಿ ಸರಕಾರದ ಕೈಗೆ ವಿಜಾಪುರ ಪ್ರದೇಶವು ಒಳಪಟ್ಟಿದ್ದು ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ' ಎಂದು ಒಂದು ಕಡೆ ಗ್ರಂಥಕಾರನು ಉಲ್ಲೇಖಿಸುತ್ತಾನೆ. ಇದರಿಂದ ಮರಾಠರ ಆಡಳಿತಾವಧಿಯಲ್ಲಿ ರಾಜಕೀಯ ಅವ್ಯವಸ್ಥೆ ಎಷ್ಟು ಕ್ರೂರವಾಗಿತ್ತು ಎಂದು ತಿಳಿಯಬಹುದು.

ಪ್ರಾದೇಶಿಕ ಸಂಸ್ಥಾನಗಳು

ಮರಾಠ ಮತ್ತು ನಿಜಾಮರ ಅವಧಿಯಲ್ಲಿ ಅಸ್ತಿತ್ವದಲ್ಲಿ ಬಂದ ಕೆಲವು ಸಂಸ್ಥಾನಗಳು ಸ್ವಾತಂತ್ರ್ಯ ಪೂರ್ವದಲ್ಲಿ ವಿಜಾಪುರದ ವಿವಿಧ ಭಾಗಗಳಲ್ಲಿ ರಾಜಕೀಯ ಪ್ರಾಬಲ್ಯತೆಯನ್ನು

ಹೊಂದಿದ್ದವು. ಅವುಗಳಲ್ಲಿ ಜಮಖಂಡಿ, ಮುಧೋಳ ಮತ್ತು ಸವಣೂರು ಮುಖ್ಯವಾಗಿದ್ದವು. ಇವುಗಳಲ್ಲದೆ ಅವಿಭಜಿತ ಜಿಲ್ಲೆಯ ತೇರದಾಳ, ರಬಕವಿ ಸೇರಿದಂತೆ ೧೩ ಗ್ರಾಮಗಳು ಸಾಂಗಲಿ ಸಂಸ್ಥಾನಕ್ಕೆ, ೧೭ ಹಳ್ಳಿಗಳು ಜಾಂದ್ ಸಂಸ್ಥಾನಕ್ಕೆ, ೯ ಗ್ರಾಮಗಳು ಹಿರಿಯ ಕುರಂದವಾಡ ಸಂಸ್ಥಾನಕ್ಕೆ ಮತ್ತು ಕೆಲವು ಭಾಗ ರಾಮದುರ್ಗ ಸಂಸ್ಥಾನಕ್ಕೂ ಸೇರಿದ್ದವು. ಇವೆಲ್ಲವೂ ಮರಾಠ ಮೂಲದ ಸಂಸ್ಥಾನಗಳಾಗಿದ್ದವು. ಸಹಜವಾಗಿ ಅಲ್ಲಿ ಮರಾಠಿ ಭಾಷೆಯು ಆಳುವ ವರ್ಗದ ಭಾಷೆಯಾಗಿತ್ತು. ರಾಜಕೀಯ ಅಸ್ಥಿರತೆ, ಆರ್ಥಿಕ ಅಭದ್ರತೆಗಳ ಜೊತೆ ವಿಜಾಪುರ ಪ್ರದೇಶವು ಭಾಷಾ ದಬ್ಬಾಳಿಕೆಗೂ ಒಳಗಾಯಿತು.[೨೭೮]

ಬ್ರಿಟಿಷರು

ಕ್ರಿ.ಶ. ೧೮ ಮತ್ತು ೧೯ನೇ ಶತಮಾನದ ಕೊನೆಯ ಮತ್ತು ಆರಂಭದ ವೇಳೆಗೆ ಮೈಸೂರಿನ ಹೈದರಾಲಿ ಮತ್ತು ಟಿಪ್ಪು ಸುಲ್ತಾನ ಹಾಗೂ ಮರಾಠರು ಬ್ರಿಟಿಷರಿಂದ ಸೋಲುವುದರ ಮೂಲಕ ಇಡೀ ಕರ್ನಾಟಕವು ಬ್ರಿಟಿಷರ ಕೈವಶವಾಯಿತು. ಮೈಸೂರು, ಜಮಖಂಡಿ, ನರಗುಂದ, ಮುಧೋಳ, ರಾಮದುರ್ಗ, ಹೈದರಾಬಾದ್‌ನ ನಿಜಾಮ ಅನೇಕ ಸ್ವತಂತ್ರ ಸಂಸ್ಥಾನಗಳು ಇದ್ದರೂ ಇವು ಕ್ರಿ.ಶ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಬ್ರಿಟಿಷರ ಪ್ರಭುತ್ವದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು.

ಕ್ರಿ.ಶ. ೧೭೯೯ರ ಶ್ರೀರಂಗಪಟ್ಟಣದ ಕೊನೆಯ ಕಾಳಗದಲ್ಲಿ ಟಿಪ್ಪುವು ಯುದ್ಧದಲ್ಲಿ ಮಡಿದಾಗ ಮೈಸೂರು ಪ್ರದೇಶಗಳು ಬ್ರಿಟಿಷರ ಕೈವಶವಾದವಲ್ಲದೆ ಮೈಸೂರು ಸಂಸ್ಥಾನದ ಆಡಳಿತ ಅವರ ಕೈಗೆ ಬಂದಿತು. ಕರ್ನಾಟಕದಲ್ಲಿ ಬ್ರಿಟಿಷರ ನೇರವಾದ ಆಡಳಿತಕ್ಕೆ ಒಳಗಾದ ಮೊಟ್ಟಮೊದಲಿನ ಪ್ರದೇಶವೆಂದರೆ ಕೆನರಾ(೧೭೯೯) ಅದು ಟಿಪ್ಪುವಿನಿಂದ ದೊರೆತದ್ದು. ಮರುವರ್ಷ ನಿಜಾಮನು ಬಳ್ಳಾರಿ ವಿಭಾಗವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು ಇತ್ತ ಪಶ್ಚಿಮದಲ್ಲಿ ಮರಾಠರು ಬ್ರಿಟಿಷರೊಡನೆ ಸ್ನೇಹ ಬೆಳೆಸುವ ಸಲುವಾಗಿ ಕ್ರಿ.ಶ. ೧೮೦೧ರಲ್ಲಿ ಪೇಶ್ವೆ ಬಾಜಿರಾಯ ಅವರಿಗೆ ಧಾರವಾಡ ಸುಭಾವನ್ನು ಬಿಟ್ಟುಕೊಟ್ಟನು.[೨೭೯] ಮರಾಠರಿಂದ ಸ್ನೇಹಪೂರ್ವಕವಾಗಿ ಪಡೆದು ಅದನ್ನು ಬಳ್ಳಾರಿ ಕಲೆಕ್ಟರೇಟ್‌ಗೆ ವಹಿಸಲಾಯಿತು.

ಆದರೆ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ದಕ್ಷಿಣ ಭಾರತದಲ್ಲಿ ವಿಸ್ತರಿಸುವ ಉದ್ದೇಶದಿಂದ ಮುಂದಿನ ೧೬ ವರ್ಷಗಳವರೆಗೆ ಮರಾಠರ ಜೊತೆ ಹಲವು ಹೋರಾಟಗಳನ್ನು ಮಾಡಿದರು. ಕ್ರಿ.ಶ. ೧೮೧೮ರ ಖಡಕಿ ಯುದ್ಧದ ಪರಿಣಾಮವಾಗಿ ಪೇಶ್ವೆ ಎರಡನೆಯ ಬಾಜೀರಾವ್, ಅಪ್ಪಾಸಾಹೇಬ್, ನಾಗಪುರದ ಬೋಂಸ್ಲೆ ಮುಖ್ಯಸ್ಥ ಮತ್ತು ಮಲ್ಹಾರಿರಾವ ಹೋಳ್ಕರ್ ಇವರೆಲ್ಲರೂ ಬ್ರಿಟಿಷರಿಂದ ಪರಾಜಿತರಾದರು. ಸೋತ ಬಾಜಿರಾಯನಿಗೆ ವಿಶ್ರಾಂತಿವೇತನದೊಂದಿಗೆ ಕಾನ್ಪುರದ ಬಳಿ ಬಿಥೊರಿಗೆ ಗಡಿಪಾರು ಮಾಡಲಾಯಿತು. ಮರಾಠರನ್ನು ಸೋಲಿಸಿದ ಬ್ರಿಟಿಷರು ಮುಂಬೈ ಪ್ರಾಂತವನ್ನು ಒಳಗೊಂಡಂತೆ ಇಡೀ ಕರ್ನಾಟಕವನ್ನು ತಮ್ಮ ಕೈವಶಮಾಡಿಕೊಂಡರು.[೨೮೦] ಮರಾಠರಿಂದ

ಮುಂಬೈ ಕರ್ನಾಟಕ ಪ್ರದೇಶಗಳನ್ನು ವಶಪಡಿಸಿಕೊಂಡ ಸರ್ ಥಾಮಸ್ ಮನ್ರೊನನ್ನೆ "ದಕ್ಷಿಣ ಮಹಾರಾಷ್ಟ್ರದ ದುವಾಬ" ಪ್ರಿನ್ಸಿಪಲ್ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜಂಟನನ್ನಾಗಿ ನೇಮಕ ಮಾಡಿದರು. ಧಾರವಾಡ ಇವರ ಮುಖ್ಯ ಕೇಂದ್ರವಾಗಿದ್ದು ಜಿಲ್ಲಾ ಕೇಂದ್ರವಾಯಿತು. ಈ ಜಿಲ್ಲಾ ಕೇಂದ್ರದಲ್ಲಿ ೨೧ ತಾಲೂಕುಗಳನ್ನು ಮಾಡಿ ಒಂದೊಂದು ತಾಲೂಕಿಗೆ ಒಬ್ಬೊಬ್ಬ ಮಾಮಲೇದಾರರನ್ನು ನೇಮಿಸಿದರು.[೨೮೧] ಅದೇ ವರ್ಷ ಕ್ರಿ.ಶ. ೧೮೧೮ರಲ್ಲಿ ಮನ್ರೊ ಬಾದಾಮಿಗೆ ಮುತ್ತಿಗೆ ಹಾಕಿ ಬಾದಾಮಿ ಮತ್ತು ಬಾಗಲಕೋಟೆಗಳನ್ನು ವಶಪಡಿಸಿಕೊಂಡನು. ಮುಂದೆ ಕೃಷ್ಣೆಯ ಉತ್ತರ ಭಾಗವನ್ನು ಕ್ರಿ.ಶ. ೧೮೧೮ ಮೇ ೧೭ರ ವೇಳೆಗೆ ವಶಪಡಿಸಿಕೊಂಡನು. ಹೀಗಾಗಿ ವಿಜಾಪುರ ಪ್ರದೇಶ ಬ್ರಿಟಿಷರಿಗೆ ಸ್ವಾಧೀನವಾಯಿತು. ಇದರೊಂದಿಗೆ ಮರಾಠರ ೫೮ ವರ್ಷದ ಆಳ್ವಿಕೆ(ಕ್ರಿ.ಶ.೧೭೬೦–೧೮೧೮) ಕೊನೆಗೊಂಡಿತು. ಅಲ್ಲದೆ ವಿಜಾಪುರ ತಾಲೂಕನ್ನು ಬ್ರಿಟಿಷರು ಸತಾರ ರಾಜನಿಗೆ ನೀಡಿದರು[೨೮೨] ೩೪೫ ಗ್ರಾಮಗಳನ್ನು ಹೊಂದಿದ್ದ ಇಂಡಿ ಹಾಗೂ ಮುದ್ದೇಬಿಹಾಳ ತಾಲೂಕುಗಳನ್ನು ಬಾಗಲಕೋಟೆ ಉಪಕಲೆಕ್ಟರೇಟನ್ನು ಮಾಡಿ ಅದಕ್ಕೆ ವಹಿಸಲಾಯಿತು. ಈ ಬಾಗಲಕೋಟೆ ಉಪಕಲೆಕ್ಟರೇಟನ್ನು ಧಾರವಾಡ ಕಲೆಕ್ಟರೇಟ್‌ಗೆ ವಹಿಸಿಕೊಡಲಾಯಿತು. ಮುಂದೆ ಅವೆರಡು ಕ್ರಿ.ಶ. ೧೮೨೫ರಲ್ಲಿ ಪುಣಾ ಕಲೆಕ್ಟರೇಟಿಗೆ ವರ್ಗಾಯಿಸಲ್ಪಟ್ಟವು. ಆದರೆ ಮತ್ತೆ ಕ್ರಿ.ಶ. ೧೮೩೦ರಲ್ಲಿ ಧಾರವಾಡ ಜಿಲ್ಲೆಯನ್ನಾಗಿ ಮಾಡಿ ಅದರ ಕಲೆಕ್ಟರೇಟ್‌ಗೆ ವಹಿಸಿಕೊಡಲಾಯಿತು.[೨೮೩]

ಸತಾರ ಮತ್ತು ಕೊಲ್ಲಾಪುರದ ಪ್ರಾಂತಗಳನ್ನು ಬಿಟ್ಟು ಮರಾಠರ ವಿಶಾಲ ಪ್ರದೇಶಗಳನ್ನು ಬ್ರಿಟಿಷ್ ಆಧಿಪತ್ಯಕ್ಕೆ ಸೇರಿಸಿಕೊಳ್ಳಲಾಯಿತು. ಇದರೊಂದಿಗೆ ಬ್ರಿಟಿಷರು ಕರ್ನಾಟಕದ ಈಗಿನ ಧಾರವಾಡ, ಬೆಳಗಾವಿ, ಬಾಗಲಕೋಟೆ, ಹಾವೇರಿ, ಉತ್ತರಕನ್ನಡ(೧೮೬೨ರಲ್ಲಿ ಕೆನರಾವನ್ನು ವಿಭಜಿಸಿ ಉತ್ತರಕನ್ನಡ ಜಿಲ್ಲೆಯನ್ನು ಸೃಷ್ಟಿಸಿ ಮುಂಬಯಿ ಪ್ರಾಂತಕ್ಕೆ ಸೇರಿಸಲಾಯಿತು), ವಿಜಾಪುರ ಭಾಗಗಳನ್ನು ಮುಂಬೈ ಕರ್ನಾಟಕ ಪ್ರಾಂತಕ್ಕೆ. ಬಳ್ಳಾರಿ, ದಕ್ಷಿಣಕನ್ನಡ, ಕೊಳ್ಳೇಗಾಲ ಭಾಗಗಳನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಿದರು. ಉಳಿದ ಪ್ರದೇಶಗಳು ಮೈಸೂರು ಮತ್ತು ಹೈದರಾಬಾದ್ ನಿಜಾಮ ಸಂಸ್ಥಾನದಲ್ಲಿ ಹಂಚಿಹೋದವು.

ಮುಂಬೈ ಕರ್ನಾಟಕ ಪ್ರಾಂತಕ್ಕೆ ಸೇರಿದ ವಿಜಾಪುರ ಜಿಲ್ಲೆಯ ಆಡಳಿತ ವಿಭಾಗಗಳನ್ನು ಕುರಿತು ನೋಡುವುದಾದರೆ ಕ್ರಿ.ಶ. ೧೮೧೮ರಲ್ಲಿ ಮರಾಠರು ಬ್ರಿಟಿಷರಿಗೆ ಸೋಲುವುದರ ಮೂಲಕ ಈ ಮೇಲೆ ಹೇಳಿದ ಕರ್ನಾಟಕದ ಪ್ರದೇಶಗಳನ್ನು ಬ್ರಿಟಿಷರು ಮುಂಬೈ ಪ್ರಾಂತಕ್ಕೆ ಸೇರಿಸಿದರು. ಹೀಗಾಗಿ ಈ ಪ್ರದೇಶವನ್ನು ಮುಂಬಯಿ ಕರ್ನಾಟಕ ಪ್ರದೇಶವೆಂದು ಕರೆಯುತ್ತಾರೆ. ೧೯ನೆಯ ಶತಮಾನದ ವೇಳೆಗೆ ಕನ್ನಡ ಪ್ರದೇಶ ಅರ್ಧ ಬ್ರಿಟಿಷರ(ಮದ್ರಾಸ್ ಮತ್ತು ಮುಂಬಯಿ) ಆಧಿಪತ್ಯದಲ್ಲೂ, ಇನ್ನರ್ಧ ಬೇರೆ ಬೇರೆ ಸಂಸ್ಥಾನಿಕರ ವಶದಲ್ಲಿಯೂ ಉಳಿಯಿತು. ೧೯ನೆಯ ಶತಮಾನದ ಆರಂಭಿಕ ಕಾಲಘಟ್ಟದಲ್ಲಿ ಮುಂಬಯಿ ಕರ್ನಾಟಕದ ಬದಲಿಗೆ ಈ ಪ್ರದೇಶವನ್ನು 'ಸದರ್ನ್ ಮರಾಠಾ ಕಂಟ್ರಿ'(ದಕ್ಷಿಣ ಮರಾಠಾ ದೇಶ) ಎಂದು ಕರೆಯುತ್ತಿದ್ದರು. ಕ್ರಿ.ಶ. ೧೮೮೦ರ ವೇಳೆಗೆ

'ಸದರ್ನ್ ಮರಾಠ' ಎಂಬುದರ ಬದಲಿಗೆ ಅದನ್ನು ಮುಂಬಯಿ ಕರ್ನಾಟಕ ಎಂದು ಕರೆಯಲಾಯಿತು. ಈ ಮುಂಬೈ ಕರ್ನಾಟಕಕ್ಕೆ ಹೊಂದಿಕೊಂಡು ಉತ್ತರಕ್ಕೆ ಸಾತಾರ, ದಕ್ಷಿಣಕ್ಕೆ ಮದ್ರಾಸ್‌ನ ಗಡಿ, ಪೂರ್ವಕ್ಕೆ ನಿಜಾಮಸೀಮೆ ಪಶ್ಚಿಮಕ್ಕೆ ಸಹ್ಯಾದ್ರಿ ಪರ್ವತಪ್ರದೇಶವಿತ್ತು. ೧೯೫೦ರ ವರೆಗೆ ಭಾಷಾವಾರು ಪ್ರಾಂತಗಳ ಮೇಲೆ ಕರ್ನಾಟಕವು ಏಕೀಕರಣವಾಗುವವರೆಗೆ ಈ ಹೆಸರು ಅಧಿಕೃತವಾಗಿ ಪರಿಗಣಿಸಲಾಗಿತ್ತು. ಭಾಷಾವಾರು ಪ್ರಾಂತಗಳ ಮೇಲೆ ರಾಜ್ಯಗಳು ವಿಂಗಡನೆಯಾದಾಗ ಇದು ಕರ್ನಾಟಕ ರಾಜ್ಯ ಎಂದು ಹೆಸರು ಪಡೆಯಿತಾದರೂ ಇನ್ನೂ ಜನ ಬಳಕೆಯಲ್ಲಿ ಮುಂಬೈ ಕರ್ನಾಟಕ ಎಂದು ಇಂದಿಗೂ ಕರೆಯುತ್ತಾರೆ.

ಬ್ರಿಟಿಷರ ಆಡಳಿತ ವಿಸ್ತಾರವಾದಂತೆ ತಮ್ಮ ಅನುಕೂಲಕ್ಕೋಸ್ಕರ ಏಕರೀತಿಯ ಆಡಳಿತ ನೀತಿ ಮತ್ತು ಕಾನೂನುಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡಿತು. ಹೀಗಾಗಿ ಹೆಚ್ಚು ವಿಸ್ತೀರ್ಣವುಳ್ಳ ಆಡಳಿತ ವಿಭಾಗಗಳನ್ನು ಒಡೆದು ಅನೇಕ ಸಣ್ಣ ಪುಟ್ಟ ಆಡಳಿತ ವಿಭಾಗಗಳನ್ನಾಗಿ ಮಾಡಲಾಯಿತು. ಕ್ರಿ.ಶ. ೧೮೩೬ ಏಪ್ರಿಲ್ ೨೬ರಂದು ಧಾರವಾಡದಿಂದ ಬೆಳಗಾವಿಯನ್ನು ಪ್ರತ್ಯೇಕಗೊಳಿಸಿ ಹೊಸ ಕಲೆಕ್ಟರೇಟಾಗಿ ಮಾಡಲಾಯಿತು. ಇದಕ್ಕೆ ಮಿ. ರವೆನ್‌ಸ್ಕ್ರಾಫ್ಟ್(Mr. Ravenscroft) ಮೊದಲ ಅಸಿಸ್ಟೆಂಟ್ ಕಲೆಕ್ಟರೇಟಾಗಿ ಅಧಿಕಾರ ವಹಿಸಿಕೊಂಡನು. ಈ ಅವಧಿಯಲ್ಲಿ ಬೆಳಗಾವಿ ಕಲೆಕ್ಟರೇಟ್‌ದಲ್ಲಿ ೧೦ ಉಪವಿಭಾಗಗಳಿದ್ದವು. ಅವು ಪರಸಗಡ, ಸಂಪಗಾಂವ, ಪಾದಶಾಪುರ(ಪಾಛಾಪುರ), ಚಿಕ್ಕೋಡಿ, ಬಾಗಲಕೋಟೆ, ಇಂಡಿ, ಮುದ್ದೇಬಿಹಾಳ, ಹುನಗುಂದ, ಬದಾಮಿ ಮತ್ತು ಬಿಡಿಗಳಾಗಿವೆ. ಕ್ರಿ.ಶ. ೧೮೩೮ ಮಾರ್ಚ್ ೯ರಂದು ಬೆಳಗಾವಿಯು ಮುಖ್ಯಕೇಂದ್ರವಾಗಿ ರೂಪಿತವಾಯಿತು. ಇದೇ ಅವಧಿಯಲ್ಲಿ ಕಲಾದಗಿಯನ್ನು ಅದರ ಉಪ ವಿಭಾಗವನ್ನಾಗಿ ಮಾಡಿ ಅಧಿಕಾರವನ್ನು ವಿಸ್ತರಿಸಲಾಯಿತು. ಕ್ರಿ.ಶ. ೧೮೪೮ರಲ್ಲಿ ಸತಾರ ರಾಜ ಶಾಹಾಜಿ ಸಂತತಿಯಿಲ್ಲದೆ ಮರಣ ಹೊಂದಿದ ನಂತರ ಸತಾರವನ್ನು ಜಿಲ್ಲೆಯನ್ನಾಗಿ ಪರಿವರ್ತಿಸಿ ವಿಜಾಪುರ ತಾಲೂಕನ್ನು ಸತಾರ ಕಲೆಕ್ಟರೇಟ್‌ಗೆ ವಹಿಸಿಕೊಡಲಾಯಿತು. ಇದೇ ರೀತಿ ಕ್ರಿ.ಶ. ೧೮೬೨ರಲ್ಲಿ ಬೆಳಗಾವಿಯ ಕಲೆಕ್ಟರೇಟ್‌ನಲ್ಲಿದ್ದ ಇಂಡಿ ಮತ್ತು ಮುದ್ದೇಬಿಹಾಳಗಳನ್ನು ಸೊಲ್ಲಾಪುರ ಕಲೆಕ್ಟರೇಟ್‌ಗೆ ವರ್ಗಾಯಿಸಲಾಯಿತು. ಅವುಗಳಿಗೆ ಬದಲಾಗಿ ಗೋಕಾವಿ, ಅಥಣಿ ಈ ಎರಡು ಹೊಸ ತಾಲೂಕುಗಳು ಬೆಳಗಾವಿ ಜಿಲ್ಲೆಯಲ್ಲಿ ಬಂದವು. ಅಲ್ಲದೆ ಈಗಿನ ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯ ಕೆಲವು ಪ್ರದೇಶಗಳು ಈ ಮೊದಲು ವಿವಿಧ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದವು. ಅವುಗಳನ್ನು ಡಾಲ್‌ಹೌಸಿಯ ದತ್ತುಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ, ದುರಾಡಳಿತದ ನೆಪದ ಮೇಲೆ ಮತ್ತು ಕ್ರಿ.ಶ. ೧೮೫೭ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯಲ್ಲಿ ತೊಡಗಿದ ಸಂಸ್ಥಾನಗಳನ್ನು ವಶಪಡಿಸಿಕೊಳ್ಳಲಾಯಿತು. ಈ ರೀತಿ ವಶಪಡಿಸಿಕೊಂಡ ವಿಜಾಪುರ ಜಿಲ್ಲೆಯ ಪ್ರದೇಶಗಳೆಂದರೆ ಕ್ರಿ.ಶ. ೧೮೪೯ರಲ್ಲಿ ನಿಪ್ಪಾಣಿಯ ಸಂಸ್ಥಾನದ ಸಿದ್ಧೋಜಿರಾವ್ ನಿಂಬಾಲ್ಕರನು ಸಂತತಿಯಿಲ್ಲದೆ ಸತ್ತಿದ್ದರಿಂದ ಗಲಗಲೆಯ ೧೫ ಹಳ್ಳಿಗಳು, ನಿಡಗುಂದಿಯ ಪರಗಣೆಯಲ್ಲಿ ೧೨, ಹೊನವಾಡದ ಪರಗಣದಲ್ಲಿ ೪ನ್ನು[೨೮]

ಸ್ವಾಧೀನಪಡಿಸಿಕೊಂಡು ಸೊಲ್ಲಾಪುರ ಕಲೆಕ್ಟರೇಟ್‌ಗೆ ವಹಿಸಿಕೊಡಲಾಯಿತು. ಇದಕ್ಕೆ ಇಂಡಿ, ಮುದ್ದೇಬಿಹಾಳ ತಾಲೂಕುಗಳ ಕೆಲವು ಗ್ರಾಮಗಳನ್ನು ಸೇರಿಸಿ ಅದೇ ವರ್ಷ ಹಿಪ್ಪರಗಿ ತಾಲೂಕನ್ನು ರೂಪಿಸಲಾಯಿತು.[೨೮೫] ಕ್ರಿ.ಶ. ೧೮೪೨ರಲ್ಲಿ ಸತಾರೆಯ ಅರಸನು ಬೇರೆ ಹಳ್ಳಿಗಳನ್ನು ತೆಗೆದುಕೊಂಡು ಹೊರ್ತಿಯ ಪರಗಣದಲ್ಲಿ ೨೦, ಉಕ್ಕಲಿಯ ಪರಗಣದಲ್ಲಿ ೧೧, ಹಲಸಂಗಿ ಪರಗಣದಲ್ಲಿ ೨೮, ಬಾಗೇವಾಡಿಯ ಪರಗಣದಲ್ಲಿ ೨೪ ಹಳ್ಳಿಗಳನ್ನು ಸರಕಾರಕ್ಕೆ ಕೊಟ್ಟನು.[೨೮೬] ಈ ನೂತನ ಪ್ರದೇಶಗಳನ್ನು ಒಗ್ಗೂಡಿಸಿ[೨೮೭] ಕ್ರಿ.ಶ. ೧೮೪೨ರಲ್ಲಿ ಮನಗೂಳಿ ತಾಲೂಕು ರಚಿಸಲ್ಪಟ್ಟಿತು. ಕ್ರಿ.ಶ. ೧೮೪೨ರಲ್ಲಿ ಸತಾರೆಯ ರಾಜ ಶಾಹಾಜಿಯು ಸಂತತಿಯಿಲ್ಲದೆ ಮರಣ ಹೊಂದಿದ್ದರಿಂದ ಹವೇಲಿಯ ಪರಗಣದಲ್ಲಿ ೩೦, ಗೋಠೆಯ ಪರಗಣದಲ್ಲಿ ೭, ಮುಳವಾಡದ ಪರಗಣದಲ್ಲಿ ೧೧, ಮಮದಾಪುರದಲ್ಲಿ ೨೧, ಹೊನವಾಡದಲ್ಲಿ ೨, ಬಾರ್ಡೋಲದಲ್ಲಿ ೧, ಬಳ್ಳೊಳ್ಳಿಯಲ್ಲಿ ೭, ಸಿದ್ಧನಾಥದಲ್ಲಿ ೬, ಚಿಮ್ಮಲಗಿಯಲ್ಲಿ ೧, ಕೊಲ್ಹಾರದಲ್ಲಿ ೬ ಬ್ರಿಟಿಷ್ ಸರಕಾರಕ್ಕೆ ಸೇರಿದವು. ಇದೇ ವೇಳೆಯಲ್ಲಿ ಸತಾರವನ್ನು ಕಲೆಕ್ಟರೇಟನ್ನಾಗಿ ಮಾಡಿ ಮತ್ತೆ ವಿಜಾಪುರ ತಾಲೂಕನ್ನು ಇದರ ಅಧೀನಕ್ಕೆ ವಹಿಸಿಕೊಡಲಾಯಿತು. ಕ್ರಿ.ಶ. ೧೮೫೭ರಲ್ಲಿ ಕಾಗವಾಡದ ಪಟವರ್ಧನನು ಸಂತತಿಯಿಲ್ಲದೆ ತೀರಿದ್ದರಿಂದ ಚಿಮ್ಮಲಿಗೆಯ ಪರಗಣದಲ್ಲಿ ೧೪ ಗ್ರಾಮಗಳು ಸರಕಾರಕ್ಕೆ ಸೇರಿದವು. ಇವುಗಳನ್ನು ಮನಗೂಳಿ ತಾಲೂಕಿಗೆ ಸೇರಿಸಲಾಯಿತು. ಕ್ರಿ.ಶ. ೧೮೩೭ರಲ್ಲಿ ಚಿಂಚಲಿಯ ಸಂಸ್ಥಾನಿಕ ಗೋವಿಂದರಾವ್ ಪಟವರ್ಧನ ಸಂತತಿಯಿಲ್ಲದೆ ತೀರಿದ್ದರಿಂದ ಅನವಾಲದ ಪರಗಣವನ್ನು ಮತ್ತು ಕ್ರಿ.ಶ. ೧೮೫೮ರಲ್ಲಿ ನರಗುಂದದ ಬಾಸ್ಕರರಾಯನ ಮರಣದ ನಂತರ ಈ ಸಂಸ್ಥಾನವನ್ನು ವಶಪಡಿಸಿಕೊಂಡು ಇದರಲ್ಲಿನ ಹೊಸಕೇರಿಯ ಪರಗಣದಲ್ಲಿ ೧, ಕೊಣ್ಣೂರು ಪರಗಣದಲ್ಲಿ ೧೦ ಹಳ್ಳಿಗಳನ್ನು ತೆಗೆದುಕೊಂಡು ಬಾಗಲಕೋಟೆ, ಬಾದಾಮಿ ಹಾಗೂ ಹುನಗುಂದ ತಾಲೂಕುಗಳಿಗೆ ವಹಿಸಿಕೊಡಲಾಯಿತು. ಹೀಗೆ ವಿಜಾಪುರ ಜಿಲ್ಲೆಯ ಬಹುತೇಕ ಭಾಗಗಳನ್ನು ಒಟ್ಟುಗೂಡಿಸಲಾಯಿತು.[೨೮೮]

ಕ್ರಿ.ಶ. ೧೮೪೩ ರಿಂದ ೧೮೪೭ರ ಅವಧಿಯಲ್ಲಿ ಪುಣೆಯ ಸರ್ವೆ ಖಾತೆಯವರು ಈಗಿನ ವಿಜಾಪುರ ಮತ್ತು ಬಾಗಲಕೋಟೆಗೆ ಸೇರಿದ ಎಂಟು ತಾಲೂಕುಗಳಲ್ಲಿ ಸರ್ವೆ ಮಾಡಿದಾಗ ಇಂಡಿ ತಾಲೂಕಿನಲ್ಲಿ ೧೩೨, ಮುದ್ದೇಬಿಹಾಳ ತಾಲೂಕಿನಲ್ಲಿ ೧೫೨, ಹಿಪ್ಪರಗಿ ತಾಲೂಕಿನಲ್ಲಿ ೫೭, ಮನಗೂಳಿಯಲ್ಲಿ ೧೮, ಬಾದಾಮಿಯಲ್ಲಿ ೧೩೬, ಬಾಗಲಕೋಟೆಯಲ್ಲಿ ೧೨೪, ಹುನಗುಂದದಲ್ಲಿ ೧೩೬, ವಿಜಾಪುರದಲ್ಲಿ ೭೯ ಸರಕಾರಿ ಹಳ್ಳಿಗಳು ಇದ್ದವು ಎಂದು ದಾಖಲಿಸಿದ್ದಾರೆ.[೨೮೯] ಹೀಗೆ ಒಟ್ಟುಗೂಡಿದ ಪ್ರದೇಶದಲ್ಲಿನ ಕೆಲವು ಭಾಗಗಳನ್ನು ಕ್ರಿ.ಶ. ೧೮೬೨ ರಿಂದ ೧೮೬೪ರ ಅವಧಿಯಲ್ಲಿ ಸೊಲ್ಲಾಪುರ ಕಲೆಕ್ಟರೇಟ್‌ಗೆ ವಹಿಸಿಕೊಡಲಾಯಿತು. ಅವು ಭೀಮಾ ಮತ್ತು ಕೃಷ್ಣಾ ನದಿಯ ಮಧ್ಯದ ಪ್ರದೇಶಗಳಾದ ಇಂಡಿ, ಮುದ್ದೇಬಿಹಾಳ, ಹಿಪ್ಪರಗಿ, ಮನಗೂಳಿ, ವಿಜಾಪುರ ತಾಲೂಕುಗಳಾಗಿವೆ. ಬಾಗಲಕೋಟೆ, ಬದಾಮಿ, ಹುನಗುಂದ ತಾಲೂಕುಗಳು ಬೆಳಗಾವಿ ಕಲೆಕ್ಟರೇಟ್‌ನಲ್ಲಿಯೇ ಉಳಿದವು.[೨೯೦]

ಬೆಳಗಾವಿ ಕಲೆಕ್ಟರೇಟ್‌ನಲ್ಲಿ ಕಲಾದಗಿ ಒಂದು ಪ್ರಮುಖ ಆಡಳಿತದ ವಿಭಾಗವಾಗಿತ್ತು. ಬ್ರಿಟಿಷ್ ಸರಕಾರದ ಆರಂಭದಲ್ಲಿ ದಕ್ಷಿಣ ಮಹಾರಾಷ್ಟ್ರದ ಜಹಗೀರದಾರರು, ಸರಕಾರದ ನೌಕರಿಗೆ

ಇಟ್ಟ ರಾಹುತರು ಕಲಾದಗಿಯಲ್ಲಿ ಇರುತ್ತಿದ್ದರು. ಕ್ರಿ.ಶ. ೧೮೫೭ರ ದಂಗೆಯಲ್ಲಿ ಸುರಪುರದ ನಾಲ್ವಡಿ ವೆಂಕಟಪ್ಪ ನಾಯಕನನ್ನು ಬ್ರಿಟಿಷರ ವಿರುದ್ಧ ದಂಗೆಯಲ್ಲಿ ತೊಡಗಿದ್ದಾನೆಂದು ಸುದ್ದಿ ತಿಳಿದು ಬ್ರಿಟಿಷ್ ಗವರ್ನರ್ ಜನರಲ್‌ನು ಆರು ತೋಪುಗಳನ್ನು, ಹದಿನೈದು ನೂರು ಸೈನಿಕರನ್ನು ಕಲಾದಗಿಯಿಂದ ತರಿಸುವ ವ್ಯವಸ್ಥೆ ಮಾಡಿಸಿದ್ದನು.[೯೧] ಬ್ರಿಟಿಷರ ಅವಧಿಯಲ್ಲಿ ಪ್ರಮುಖ ಕಂಟೋನ್ಮೆಂಟ್ ಆಗಿದ್ದ ಕಲಾದಗಿಯನ್ನು ಬಾಂಬೆ ಪ್ರಾಂತದ ಕಮಿಷನರ್ ಆದ ಮಿ. ಎ. ಹರ್ಟ್ ಅವರು ಕ್ರಿ.ಶ. ೧೮೬೪ ಡಿಸೆಂಬರ್ ೧ರಂದು ಜಿಲ್ಲೆಯನ್ನಾಗಿ ಪರಿವರ್ತಿಸಿ ಸೊಲ್ಲಾಪುರ ಜಿಲ್ಲೆಗೆ ಸೇರಿದ ಭೀಮಾ ಮತ್ತು ಕೃಷ್ಣಾ ನದಿಗಳ ನಡುವೆ ಇರುವ ಇಂಡಿ, ಹಿಪ್ಪರಗಿ, ವಿಜಾಪುರ, ಮನಗೂಳಿ, ಮುದ್ದೇಬಿಹಾಳ ತಾಲೂಕುಗಳು, ಬೆಳಗಾವಿ ಜಿಲ್ಲೆಗೆ ಸೇರಿದ ಬಾಗಲಕೋಟೆ, ಬದಾಮಿ, ಹುನಗುಂದ ಈ ಮೂರು ತಾಲೂಕುಗಳನ್ನು ಸೇರಿಸಲಾಯಿತು. ಉಪತಾಲೂಕಾಗಿ ಬೀಳಗಿ ಮುಂದುವರಿದರೆ ಕೆರೂರು, ಬಾದಾಮಿ ತಾಲೂಕಿನಲ್ಲಿ ವಿಲೀನಗೊಂಡಿತು.[೯೨] ಕ್ರಿ.ಶ. ೧೮೬೮ರಲ್ಲಿ ಹಿಪ್ಪರಗಿಯಿಂದ ಸಿಂದಗಿಗೆ, ಮನಗೂಳಿಯಿಂದ ಬಾಗೇವಾಡಿಗೆ ತಾಲೂಕುಕೇಂದ್ರಗಳನ್ನು ವರ್ಗಾಯಿಸಲಾಯಿತು. ಕ್ರಿ.ಶ. ೧೮೭೨ರ ಸರ್ವೇಕ್ಷಣೆಯ ಪ್ರಕಾರ ಕಲಾದಗಿ ಜಿಲ್ಲೆಯು ೫೪೯೫ ಚ.ಕಿ.ಮೀ. ಇದ್ದು ಇದರಲ್ಲಿ ೮ ತಾಲೂಕುಗಳು ಮತ್ತು ಗುಳೇದಗುಡ್ಡ, ಇಲಕಲ್, ಗಜೇಂದ್ರಗಡ, ತಾಳಿಕೋಟೆ, ಕೆರೂರು, ಮನಗೂಳಿ, ಅಮೀನಗರ ಮುಂತಾದ ಪ್ರಮುಖ ಪಟ್ಟಣಗಳು ಇದ್ದವು. ಕ್ರಿ.ಶ. ೧೮೭೦–೭೧ರ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು ೨೧ ಮುನ್ಸಿಪಾಲಿಟಿಗಳಿದ್ದವು. ಅವು ಬಾಗಲಕೋಟೆ, ಕೊಲ್ಹಾರ, ಮುಳವಾಡ, ಉಕ್ಕಲಿ, ನಿಡಗುಂದಿ, ಮನಗೂಳಿ, ಹಲಸಂಗಿ, ಜುಡಿ, ವಿಜಾಪುರ, ಟುಲ, ಮುದ್ದೇಬಿಹಾಳ, ನಾಲತವಾಡ, ಕಲಾದಗಿ, ಬಬಲೇಶ್ವರ, ಕಾಖಂಡಗಿ, ಮಮದಾಪುರ, ಸಾರವಾಡ, ತೊಂಡಿ, ಬಬಲಾದ, ಕೆರೂರ, ಗುಳೆದಗುಡ್ಡ. ಅದೇ ರೀತಿ ಕ್ರಿಶ, ೧೮೮೧ರ ದಾಖಲೆಯಂತೆ ಕಲಾದಗಿ ಜಿಲ್ಲೆಯು ೮ ತಾಲೂಕುಗಳು, ೧೩೩೪ ಗ್ರಾಮಗಳು ೫೭೫೭ ಚ.ಕಿ.ಮೀ. ವಿಸ್ತೀರ್ಣ ಹೊಂದಿತ್ತು.[೯೩]

ವಿಜಾಪುರದಲ್ಲಿನ ವಿಶಾಲ ಕಟ್ಟಡಗಳನ್ನು ಅಂದಿನ ದಕ್ಷಿಣ ವಿಭಾಗದ ಸೂಪರಿಟೆಂಡೆಂಟ್ ಇಂಜಿನಿಯರ್ ಕರ್ನಲ್ ಸೇಂಟ್‌ಕ್ಲೇರ್ ವಿಲ್ಕೀನ್ಸ್ ಎಂಬುವನು ಕ್ರಿ.ಶ. ೧೮೭೬ರಲ್ಲಿ ವಿಜಾಪುರ ನಗರವನ್ನು ಜಿಲ್ಲಾ ಸ್ಥಳಕ್ಕಾಗಿ ಶಿಫಾರಸ್ಸು ಮಾಡಿದ. ಅಲ್ಲಿಯ ಕಟ್ಟಡಗಳನ್ನು ದುರಸ್ತಿ ಮಾಡಿಸಿ ಕೊನೆಗೆ ಕ್ರಿ.ಶ. ೧೮೮೫ರಲ್ಲಿ ಕಲಾದಗಿಯಿಂದ ಜಿಲ್ಲಾ ಕೇಂದ್ರವನ್ನು ವಿಜಾಪುರಕ್ಕೆ ವರ್ಗಾಯಿಸಲಾಯಿತು. ಇದರ ಗಡಿಗೆ ಹೊಂದಿಕೊಂಡು ಉತ್ತರಕ್ಕೆ ಭೀಮಾನದಿಯಿಂದ ಅಕ್ಕಲಕೋಟ ರಾಜ್ಯದ ಸೊಲ್ಲಾಪುರ ಭಾಗವು, ಪೂರ್ವಕ್ಕೆ ಹೈದರಾಬಾದ್ ನಿಜಾಮ ಸಂಸ್ಥಾನದ ಸಗರ ಜಿಲ್ಲೆಯ ಶರಾಪುರ, ಮತ್ತು ರಾಯಚೂರು, ದಕ್ಷಿಣಕ್ಕೆ ಧಾರವಾಡ ಜಿಲ್ಲೆಯ ಕುಷ್ಟಗಿ, ಬಿಂದಗಲ್, ರೋನ್ ಉಪವಿಭಾಗಗಳು, ಆಗ್ನೇಯ ಭಾಗಕ್ಕೆ ರಾಮದುರ್ಗ ಸಂಸ್ಥಾನ, ಪಶ್ಚಿಮಕ್ಕೆ ಮುಧೋಳ, ಜಮಖಂಡಿ ಸಂಸ್ಥಾನಗಳು ಹಾಗೂ ಬೆಳಗಾವಿ ಜಿಲ್ಲೆಯ ಉಪವಿಭಾಗ ಅಥಣಿ ಮತ್ತು ಸಾಂಗಲಿ ಸಂಸ್ಥಾನ(ಜತ್, ಕರ್ಜಗಿ, ಮಂಗಳವೇಡ)ಗಳಿದ್ದವು.[೯೪]

ಮುಂಬೈ ವಿಧಾನಸಭೆಯಲ್ಲಿ ಭಾಷಾವಾರು ಪ್ರಾಂತರಚನೆಯನ್ನು ಒತ್ತಾಯಿಸುವ ಠರಾವನ್ನು ೧೯೪೬ರಲ್ಲಿ ಮಂಡಿಸಲಾಯಿತು. ೧೯೪೭ರ ವೇಳೆಗೆ ಆಯಾ ಸಂಸ್ಥಾನಗಳಲ್ಲಿದ್ದ ಪ್ರಜಾಪರಿಷತ್‌ಗಳು ಸಂಸ್ಥಾನಗಳ ವಿಲೀನೀಕರಣಕ್ಕಾಗಿ ನಡೆಸಿದ ಚಳುವಳಿಗಳ ಪರಿಣಾಮವಾಗಿ, ಭಾರತ ಗಣರಾಜ್ಯದಲ್ಲಿ ಸಂಸ್ಥಾನಗಳು ವಿಲೀನಗೊಂಡು ಜಮಖಂಡಿ ತಾಲೂಕು, ಮುಧೋಳ ತಾಲೂಕು, ಸಾಂಗಲಿ ಸಂಸ್ಥಾನದ ತೇರದಾಳ, ರಬಕವಿ ಸೇರಿದಂತೆ ೧೩ ಗ್ರಾಮಗಳು, ಜಾಂದ್ ಸಂಸ್ಥಾನದ ೧೭ ಗ್ರಾಮಗಳು, ಹಿರಿಯ ಕುರಂದವಾಡ ಸಂಸ್ಥಾನದ ೬ ಹಳ್ಳಿಗಳು, ರಾಮದುರ್ಗ ಸಂಸ್ಥಾನದ ಕೆಲವು ಭಾಗಗಳು ವಿಜಾಪುರ ಜಿಲ್ಲೆಗೆ ಸೇರಿದವು. ಹೀಗೆ ಒಟ್ಟುಗೂಡಿದ ವಿಜಾಪುರ ಜಿಲ್ಲೆಯು ರಾಜ್ಯದಲ್ಲೇ ಅತ್ಯಂತ ದೊಡ್ಡ ಜಿಲ್ಲೆಯಾಯಿತು. ಆದರೆ ಆಡಳಿತ ದೃಷ್ಟಿಕೋನದಿಂದ ೧೯೯೭ರಲ್ಲಿ ವಿಜಾಪುರ ಜಿಲ್ಲೆಯನ್ನು ವಿಭಜಿಸಿ ಬಾಗಲಕೋಟೆ ಜಿಲ್ಲೆಯನ್ನಾಗಿ ಮಾಡಲಾಯಿತು. ಇವುಗಳ ಮಧ್ಯ ಕೃಷ್ಣಾ ನದಿ ಗಡಿರೇಖೆಯಾಗಿದೆ. ವಿಜಾಪುರ, ಸಿಂದಗಿ, ಇಂಡಿ, ಬಸವನ ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಒಳಗೊಂಡ ವಿಜಾಪುರ ಜಿಲ್ಲೆ, ಬಾಗಲಕೋಟೆ, ಬದಾಮಿ, ಬೀಳಗಿ, ಮುಧೋಳ, ಜಮಖಂಡಿ ಹಾಗೂ ಹುನಗುಂದ ತಾಲೂಕುಗಳನ್ನು ಒಳಗೊಂಡ ಬಾಗಲಕೋಟೆ ಜಿಲ್ಲೆಗಳು ಅಸ್ತಿತ್ವದಲ್ಲಿ ಬಂದವು.

ಕೊನೆ ಟಿಪ್ಪಣಿಗಳು

೧. https;//en.wikipedia.org/wiki/Bijapur

೨. James M. Campbell (Edit.), 1884, Gazetteer of the Bombay Presidency Vol-XXIII, p.೩೭೮

೩. ನಾಗೇಗೌಡ ಎಚ್.ಎಲ್., ೨೦೦೬, ಪ್ರವಾಸಿ ಕಂಡ ಇಂಡಿಯಾ, ಸಂ.೧, ಪು.೧೦೭

೪. ಕೊಪ್ಪಾ ಎಸ್.ಕೆ., ೧೯೯೦, ತರ್ದವಾಡಿ ನಾಡು, ಪು.೩೨

೫. SII., Vol.XX, No.೨೩

೬ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೧೦, ಸಂ.೪೦, ಪು.೬೮

೭ SII., Vol.XVIII, No.೧೬೫,೧೫೬,೧೫೭

೮. ಕ.ವಿ.ಶಾ.ಸಂ.೧೦, ಸಂ.೩೮, ಪು.೭೮., ಸಂ.೭೪, ಪು.೩೩೫., ಸಂ.೩೮, ಪು.೬೬

೯. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪು.೧

೧೦. ಕ.ವಿ.ಶಾ.ಸಂ.೧೦, ಸಂ.೭, ಪು.೧೫

೧೧. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮೌಲಾನಾ ಮಹಬೂಬರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಪ್ತಕುರ್ಸಿ, ಪು.೨೦೨

೧೨. ಅಬ್ದುಲ್ ಮಜೀದ್‌ಖಾನ್(ಅನು.), ೧೯೯೭, ಕಿತಾಬ್ ಎ ನೌರಸ್, ಪು.೨೦೮

೧೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೧೫

೧೪. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಬಸಾತೀನೆ ಸಲಾತೀನ, ಪು.೫೮೩

೧೫. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪು.

೧೬. SII., Vol.X, No.74, Vol.XVIII, No.94, Vol.XV, No.೧೫೫

೧೭. ಮಹದೇವ ಸಿ., ೨೦೦೧, ಕರ್ನಾಟಕ ಪುರಾತತ್ವ ಶೋಧ, ಪು.೨೯

೧೮. ಕರ್ನಾಟಕ ಕೈಪಿಡಿ, ೧೯೯೬, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಪು.೧೦೭

೧೯. ನಾಗೇಗೌಡ ಎಚ್.ಎಲ್., ೨೦೦೬, ಪ್ರವಾಸಿ ಕಂಡ ಇಂಡಿಯಾ, ಸಂ.೧, ಪು.೧೦೭

೨೦. ರಮೇಶ ನಾಯಕ, ೨೦೧೫, ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ, ಪು.೨೪

೨೧. ನಂಜಣ್ಣನವರ ಎಸ್.ಎನ್., ೧೯೯೯, ಕರ್ನಾಟಕದ ಭೂಗೋಳಶಾಸ್ತ್ರ, ಪು.೨೨

೨೨. ಗಿರಿಜ ಟಿ., ೨೦೦೭, ಭಾರತದ ನದಿಗಳು, ಪು.೩೨೬

೨೩. ಕ.ವಿ.ಶಾ.ಸಂ.೧೦., ಸಂ.೧೨, ಪು.೪೦೧

೨೪. ವಾಸುದೇವ ಬಡಿಗೇರ, ೨೦೧೨, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪು.೫

೨೫. ಷೇಕ್ ಅಲಿ ಬಿ.(ಸಂ.), ೧೯೯೭, ಕರ್ನಾಟಕ ಚರಿತ್ರೆ, ಸಂ.೧, ಪು.೯೭

೨೬. ಅದೇ, ಸಂ.೧, ಪು.೯೬

೨೭. ವಾಸುದೇವ ಬಡಿಗೇರ(ಸಂ.), ೨೦೧೦, ಬಸವನ ಬಾಗೇವಾಡಿ, ಪು.೪

೨೮. ಅದೇ, ಸಂ.೧, ಪು.೫

೨೯. ಕಡಕೋಳ ಎಚ್.ಎಂ.(ಸಂ.), ೨೦೧೦, ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಪು.೩೦

೩೦. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೪

೩೧. ಶಿವತಾರಕ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೪೫೩-೪೫೪

೩೨. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೫

೩೩. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೧೮-೪೫೦

೩೪. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೮

೩೫. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೫೩-೪೫೯

೩೬. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೭-೮

೩೭. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೫೩-೪೫೯

೩೮. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೯

೩೯. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೫೬-೪೫೯

೪೦. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೧೨

೪೧. ನರಸಿಂಹಮೂರ್ತಿ ಎ.ವಿ.(ಅನು.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೩, ಪು.೪೭

೪೨. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೪೭

೪೩. ಲಕ್ಷ್ಮಣ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪು.೬೬-೬೯

೪೪. ಪಂಚಮುಖಿ ರಾ.ಸ್ವಾ., ೨೦೦೮, ಕರ್ನಾಟಕ ಇತಿಹಾಸ, ಸಂ.೧, ಪು.೩೦೧

೪೫. ಷೇಕ್ ಅಲಿ ಬಿ.(ಸಂ.), ೧೯೯೭, ಪೂರ್ವೋಕ್ತ, ಸಂ.೧, ಪು.೩೦೧

೪೬. ಲಕ್ಷ್ಮಣ ತೆಲಗಾವಿ, ೨೦೦೪, ಪೂರ್ವೋಕ್ತ, ಪು.೬೬-೯೧

೪೭. ಅದೇ, ಪು.೪೭

೪೮. ನಾಗೇಗೌಡ ಎಚ್.ಎಲ್., ೨೦೦೬, ಪೂರ್ವೋಕ್ತ, ಪು.೧೦೭

೪೯. ಪಂಚಮುಖಿ ರಾ.ಸ್ವಾ., ೨೦೦೮, ಪೂರ್ವೋಕ್ತ, ಪು.೧೨೭

೫೦. ಶಿವಶಂಕರ ಎಂ.ಎಲ್. ಮತ್ತು ಚನ್ನಬಸಪ್ಪ ಎಸ್. ಪಾಟೀಲ (ಸಂ.), ೧೯೯೭, ಕದಂಬ ಅಧ್ಯಯನ, ಪು.೩೫

೫೧. ಪಂಚಮುಖಿ ರಾ.ಸ್ವಾ., ೨೦೦೮, ಪೂರ್ವೋಕ್ತ, ಪು.೧೩೦

೫೨. ಅದೇ, ಪು.೧೩೫

೫೩. ಕ.ವಿ.ಶಾ.ಸಂ.೧೦., ಸಂ.೬೩, ಪು.೪೯೨

೫೪. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೩೮

೫೫. ಕ.ವಿ.ಶಾ.ಸಂ.೧೦., ಸಂ.೬೨, ಪು.೨೦೭

೫೬. ಅದೇ, ಸಂ.೧೮, ಪು.೩೧

೫೭. ಅದೇ, ಸಂ.೮೪, ಪು.೧೨೯

೫೮. SII., Vol.XI, No.೪೦

೫೯. ಅದೇ, Vol.XI, No.೮೩

೬೦. ಅದೇ, Vol.XX, No.೨೭೭

೬೧. ಕ.ವಿ.ಶಾ.ಸಂ.೧೦., ಸಂ.೭೨, ಪು.೫೦೧

೬೨. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೩೯

೬೩. SII., Vol.XVIII, No.೪೦

೬೪. ಕ.ವಿ.ಶಾ.ಸಂ.೧೦., ಸಂ.೮೫, ಪು.೧೩೦

೬೫. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೫೬

೬೬. ಕ.ವಿ.ಶಾ.ಸಂ.೧೦., ಸಂ.೪೩, ಪು.೫೫೬

೬೭. ಅದೇ, ಸಂ.೬೧, ಪು.೨೦೪

೬೮. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೫೬

೬೯. ಕ.ವಿ.ಶಾ.ಸಂ.೧೦., ಸಂ.೬೦, ಪು.೨೦೨

೭೦. ಅದೇ, ಸಂ.೩೬, ಪು.೫೪೪

೭೧. ಅದೇ, ಸಂ.೪೦, ಪು.೬೮

೭೨. ಅದೇ, ಸಂ.೨೯, ಪು.೫೫

೭೩. ಅದೇ, ಸಂ.೧೭, ಪು.೨೫೭

೭೪. ಅದೇ, ಸಂ.೧೧, ಪು.೨೫೧., ಸಂ.೮೦, ಪು.೩೪೩., ಸಂ.೧, ಪು.೫೦೭., ಸಂ.೩೯ ಮತ್ತು ೪೦, ಪು.೬೮., ಸಂ.೩೯, ಪು.೫೫೧., ಸಂ.೨೭, ಪು.೧೬೬., ಸಂ.೫, ಪು.೫೧೩

೭೫. ಅದೇ, ಸಂ.೧೦, ಪು.೨೬೭

೭೬. ಅದೇ, ಸಂ.೨೩, ಪು.೪೧೨

೭೭. ಅದೇ, ಸಂ.೮೨, ಪು.೧೨೬

೭೮. ಅದೇ, ಸಂ.೭೯, ಪು.೩೪೦

೭೯. ಅದೇ, ಸಂ.೫೪, ಪು.೧೯೪

೮೦. ಅದೇ, ಸಂ.೬೯, ಪು.೪೯೯., ಸಂ.೭೬, ಪು.೩೩೭., ಸಂ.೧೩, ಪು.೫೨೦., ಸಂ.೧೭, ಪು.೧೫೫., ಸಂ.೮೨, ಪು.೩೪೫., ಸಂ.೬೦, ಪು.೫೭೬., ಸಂ.೧೮, ಪು.೨೫೮

೮೧. SII., Vol.XV, No.೧೦೭

೮೨. ಕ.ವಿ.ಶಾ.ಸಂ.೧೦., ಸಂ.೭೫, ಪು.೧೧೩

೮೩. ಅದೇ, ಸಂ.೫೯, ಪು.೨೦೦

೮೪. ಅದೇ, ಸಂ.೭, ಪು.೧೫

೮೫. ಅದೇ, ಸಂ.೮, ಪು.೨೪೭

೮೬. ಅದೇ, ಸಂ.೮೩, ಪು.೧೨೮

೮೭. ಅದೇ, ಸಂ.೬೫, ಪು.೩೨೩

೮೮. ಅದೇ, ಸಂ.೫೪, ಪು.೩೦೮

೮೯. ಅದೇ, ಸಂ.೧೩, ಪು.೨೫

೯೦. ಅದೇ, ಸಂ.೫೩, ಪು.೪೭೬

೯೧. ಅದೇ, ಸಂ.೧೩, ಪು.೪೦೩

೯೨. ಅದೇ, ಸಂ.೭೯, ಪು.೧೨೧

೯೩. ಅದೇ, ಸಂ.೭೭, ಪು.೩೩೮

೯೪. ಅದೇ, ಸಂ.೭೭, ಪು.೧೧೬

೯೫. ಅದೇ, ಸಂ.೪೧, ಪು.೪೪೧

೯೬. ಅದೇ, ಸಂ.೬೧, ಪು.೩೧೭

೯೭ ಅದೇ, ಸಂ.೩೦, ಪು.೫೬

೯೮. ಅದೇ, ಸಂ.೩೧, ಪು.೫೭

೯೯. ಅದೇ, ಸಂ.೪೪, ಪು.೨೮೮

೧೦೦. ಅದೇ, ಸಂ.೨೦, ಪು.೨೬೦

೧೦೧. ಅದೇ, ಸಂ.೫೪, ಪು.೩೦೮

೧೦೨. ಅದೇ, ಸಂ.೧೫, ಪು.೨೫೪

೧೦೩. ಅದೇ, ಸಂ.೧೫, ಪು.೧೫೪

೧೦೪. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೦

೧೦೫. ಕ.ವಿ.ಶಾ.ಸಂ.೧೦., ಸಂ.೪೮, ಪು.೪೬೦

೧೦೬. ಅದೇ, ಸಂ.೭೯, ಪು.೧೦೩., ಸಂ.೫೩, ಪು.೫೬೮., ಸಂ.೫೩, ಪು.೩೦೭., ಸಂ.೧೦೫, ಪು.೩೮೦., ಸಂ.೫೮, ಪು.೩೧೩., ಸಂ.೬, ಪು.೨೪೫., ಸಂ.೩೭, ಪು.೬೫., ಸಂ.೪೨, ಪು.೭೧., ಸಂ.೭೪, ಪು.೧೧೨., ಸಂ.೬೨, ಪು.೩೧೮., ಸಂ.೯೯, ಪು.೩೭೩., ಸಂ.೧೦೦, ಪು.೩೭೪., ಸಂ.೧೦೧, ಪು.೩೭೬., ಸಂ.೬೭, ಪು.೨೧೧., ಸಂ.೯, ಪು.೫೧೭., ಸಂ.೨೩, ಪು.೨೬೪., ಸಂ.೩೧, ಪು.೨೭೦

೧೦೭. ಅದೇ, ಸಂ.೩೪, ಪು.೧೭೩, ಸಂ.೨, ಪು.೩೮೭., ಸಂ.೫೨ ಪು.೩೦೬

೧೦೮. ಅದೇ, ಸಂ.೪೪, ಪು.೨೮೮

೧೦೯. ಅದೇ, ಸಂ.೫೩, ಪು.೧೯೨

೧೧೦. ಅದೇ, ಸಂ.೩೨, ಪು.೬೦

೧೧೧. ಅದೇ, ಸಂ.೫೭, ಪು.೩೧೨., ಸಂ.೫೬, ಪು.೩೧೧

೧೧೨.ಅದೇ, ಸಂ.೬೦, ಪು.೩೧೫

೧೧೩.ಅದೇ, ಸಂ.೩೪, ಪು.೧೭೩

೧೧೪.ಅದೇ, ಸಂ.೨೦, ಪು.೨೬೦

೧೧೫.ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೨೬೦

೧೧೬.ಕ.ವಿ.ಶಾ.ಸಂ.೧೦., ಸಂ.೫೧, ಪು.೩೦೦., ಸಂ.೪೯, ಪು.೪೬೪

೧೧೭.ಅದೇ, ಸಂ.೫೧, ಪು.೪೬೯

೧೧೮.ಅದೇ, ಸಂ.೩೭, ಪು.೪೩೪

೧೧೯.ಅದೇ, ಸಂ.೫೦, ಪು.೫೬೩

೧೨೦.ಅದೇ, ಸಂ.೧, ಪು.೨೩೫., ಸಂ.೫, ಪು.೨೪೨

೧೨೧.ಅದೇ, ಸಂ.೫೬, ಪು.೩೧೧

೧೨೨.ಅದೇ, ಸಂ.೧, ಪು.೧., ಸಂ.೨, ಪು.೨., ಸಂ.೩೨, ಪು.೪೨೦., ಸಂ.೪೨, ಪು.೪೪೨.,

ಸಂ.೬೫, ಪು.೫೮೧., ಸಂ.೬೪, ಪು.೩೨೦

೧೨೩.ಅದೇ, ಸಂ.೬೯, ಪು.೨೧೩., ಸಂ.೭೧, ಪು.೧೦೭

೧೨೪.ಅದೇ, ಸಂ.೪೩, ಪು.೭೨

೧೨೫.ಅದೇ, ಸಂ.೪೫, ಪು.೭೬

೧೨೬.ಅದೇ, ಸಂ.೨೪, ಪು.೪೧೪, ಸಂ.೯, ಪು.೨೪೯., ಸಂ.೬೮, ಪು.೪೯೫

೧೨೭. SII., Vol.XX, No.೧೩೬

೧೨೮.ಕ.ವಿ.ಶಾ.ಸಂ.೧೦., ಸಂ.೬೧, ಪು.೪೯೦

೧೨೯.ಅದೇ, ಸಂ.೬೪, ಪು.೯೬

೧೩೦.ಅದೇ, ಸಂ.೩೭, ಪು.೫೪೫

೧೩೧.ಅದೇ, ಸಂ.೪೨, ಪು.೨೮೪

೧೩೨.ಅದೇ, ಸಂ.೫೪, ಪು.೫೭೦, ಸಂ.೬೩, ಪು.೯೫., ಸಂ.೬೪, ಪು.೯೬., ಸಂ.೪೮, ಪು.೨೯೪

೧೩೩.ಅದೇ, ಸಂ.೯೪, ಪು.೩೬೭

೧೩೪.ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೪

೧೩೫. ಕ.ವಿ.ಶಾ.ಸಂ.೧೦., ಸಂ.೧೭, ಪು.೧೫೫

೧೩೬. ಅದೇ, ಸಂ.೧೮, ಪು.೧೫೭

೧೩೭. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೬೧

೧೩೮. ಕ.ವಿ.ಶಾ.ಸಂ.೧೦., ಸಂ.೧, ಪು.೩೮೫ ಮತ್ತು SII., Vol.XX, No.೧೦೦

೧೩೯. ಕ.ವಿ.ಶಾ.ಸಂ.೧೦., ಸಂ.೧೧, ಪು.೫೧೯

೧೪೦. SII., Vol.XX, No.೧೩೪

೧೪೧. ಕ.ವಿ.ಶಾ.ಸಂ.೧೦., ಸಂ.೬೯, ಪು.೨೧೩

೧೪೨. ಅದೇ, ಸಂ.೭೧, ಪು.೧೦೭

೧೪೩. SII., Vol.XVIII, No.೧೫೬

೧೪೪. ಕ.ವಿ.ಶಾ.ಸಂ.೧೦., ಸಂ.೪೪, ಪು.೪೫೦

೧೪೫. ಅದೇ, ಸಂ.೫೮, ಪು.೪೮೩., ಸಂ.೩೭, ಪು.೨೭೭

೧೪೬. ಅದೇ, ಸಂ.೩೨, ಪು.೪೨೦

೧೪೭. SII., Vol.XX, No.೧೩೮

೧೪೮. ಕ.ವಿ.ಶಾ.ಸಂ.೧೦., ಸಂ.೪೩, ಪು.೨೮೬., ಸಂ.೧೬, ಪು.೨೫೫., ಸಂ.೩೩, ಪು.೪೨೬., ಸಂ.೫೦, ಪು.೪೬೭

೧೪೯. ಅದೇ, ಸಂ.೪೧, ಪು.೨೮೨

೧೫೦. SII., Vol.XV, No.೧೧೫

೧೫೧. ಅದೇ, Vol.XV, No.೧೧೧

೧೫೨. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೭

೧೫೩. ಕ.ವಿ.ಶಾ.ಸಂ.೧೦., ಸಂ.೪೬, ಪು.೪೫೭., ಸಂ.೭೮, ಪು.೧೧೯

೧೫೪. ಅದೇ, ಸಂ.೨೨, ಪು.೪೨., ಸಂ.೪೫, ಪು.೨೮೯.,

೧೫೫. ಅದೇ, ಸಂ.೪೯, ಪು.೨೯೬

೧೫೬. ಅದೇ, ಸಂ.೨೧, ಪು.೪೦೯

೧೫೭. ಅದೇ, ಸಂ.೩, ಪು.೩೮೮

೧೫೮. ಅದೇ, ಸಂ.೦೩, ಪು.೧೪೧

೧೫೯. ಅದೇ, ಸಂ.೨೨, ಪು.೪೨

೧೬೦. ಅದೇ, ಸಂ.೪೯, ಪು.೨೯೬

೧೬೧. ಅದೇ, ಸಂ.೪೫, ಪು.೨೮೯

೧೬೨. ಅದೇ, ಸಂ.೨೨, ಪು.೪೧೦, ಸಂ.೨೧, ಪು.೪೧., ಸಂ.೪೭, ಪು.೪೫೯., ಸಂ.೫೭, ಪು.೧೯೧., ಸಂ.೨೬, ಪು.೫೨., ಸಂ.೬೪, ಪು.೫೮೦., ಸಂ.೩೮, ಪು.೨೭೮., ಸಂ.೪೭, ಪು.೫೫೯., ಸಂ.೭, ಪು.೫೧೬., ಸಂ.೩೭, ಪು೧೭೫., ಸಂ.೧೪., ಪು.೨೫೩., ಸಂ.೩೦, ಪು.೨೬೯

೧೬೩. ಅದೇ, ಸಂ.೩೪, ಪು.೬೨

೧೬೪. ಅದೇ, ಸಂ.೩೨, ಪು.೧೭೧, ಸಂ.೫೭, ಪು.೧೯೭

೧೬೫. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೮

೧೬೬. ಕ.ವಿ.ಶಾ.ಸಂ.೧೦., ಸಂ.೨೫, ಪು.೪೧೫., ಸಂ.೩೪, ಪು.೪೨೮

೧೬೭. ಅದೇ, ಸಂ.೫೧, ಪು.೫೬೫

೧೬೮. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೯

೧೬೯. SII., Vol.XX, No.೧೭೩

೧೭೦. ಕ.ವಿ.ಶಾ.ಸಂ.೧೦., ಸಂ.೨೮, ಪು.೫೩೬

೧೭೧. ಅದೇ, ಸಂ.೪೮, ಪು.೫೬೦, ಸಂ.೫೧, ಪು೫೬೨., ಸಂ.೭೧, ಪು.೫೮೫

೧೭೨. ಅದೇ, ಸಂ.೪೫, ಪು.೪೫೪

೧೭೩. ಅದೇ, ಸಂ.೨೫, ಪು.೪೯

೧೭೪. ಅದೇ, ಸಂ.೨೩, ಪು.೧೬೨

೧೭೫. ಅದೇ, ಸಂ.೭೭, ಪು.೨೨೪

೧೭೬. SII., Vol.XX, No.೧೭೯

೧೭೭. ಕ.ವಿ.ಶಾ.ಸಂ.೧೦., ಸಂ.೭೧, ಪು.೩೩೧

೧೭೮. ಅದೇ, ಸಂ.೫೯, ಪು.೯೧., ಸಂ.೫೨, ಪು.೪೭೪

೧೭೯. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೭೦

೧೮೦. ಕರ್ನಾಟಕ ಪರಂಪರೆ ಸಂ.೧, ೨೦೧೪, ಪು.೪೮೦

೧೮೧. ಕ.ವಿ.ಶಾ.ಸಂ.೧೦., ಸಂ.೪೬, ಪು.೨೯೧

೧೮೨. ಅದೇ, ಸಂ.೨೩, ಪು.೪೫

೧೮೩. ಅದೇ, ಸಂ.೪೬, ಪು.೭೭

೧೮೪. ಅದೇ, ಸಂ.೩೫, ಪು.೨೭೪

೧೮೫. ಅದೇ, ಸಂ.೩೫, ಪು.೪೩೧

೧೮೬. ಅದೇ, ಸಂ.೨೬, ಪು.೪೧೬

೧೮೭. ಅದೇ, ಸಂ.೪೬, ಪು.೭೭, ಸಂ.೭೮, ಪು.೩೩೯., ಸಂ.೬೮, ಪು.೨೧೧., ಸಂ.೩೫, ಪು.೧೭೪

೧೮೮. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೧೮೮

೧೮೯. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕದ ಸೇವುಣರ ಇತಿಹಾಸ, ಪು.೭೭

೧೯೦. ಕ.ವಿ.ಶಾ.ಸಂ.೧೦., ಸಂ.೫೪, ಪು.೮೫

೧೯೧. ಅದೇ, ಸಂ.೫೫, ಪು.೮೭

೧೯೨. ಅದೇ, ಸಂ.೩೯, ಪು.೨೭೯

೧೯೩. ಅದೇ, ಸಂ.೫೩, ಪು.೮೪., ಸಂ.೧೯, ಪು.೨೫೯., ಸಂ.೭೪, ಪು.೩೩೫., ಸಂ.೨, ಪು.೨೩೯., ಸಂ.೫೬, ಪು.೪೮೦., ಸಂ.೭೪, ಪು.೫೦೩., ಸಂ.೬೭, ಪು.೫೮೨

೧೯೪. ಅದೇ, ಸಂ.೫೨, ಪು.೫೬೭

೧೯೫. ಅದೇ, ಸಂ.೧೯, ಪು.೧೫೮

೧೯೬. ಅದೇ, ಸಂ.೩೮, ಪು.೬೬., ಸಂ.೯, ಪು.೧೯

೧೯೭. ಅದೇ, ಸಂ.೮೫, ಪು.೩೪೯

೧೯೮. ಅದೇ, ಸಂ.೩೦, ಪು.೧೬೯, ಸಂ.೪೯, ಪು.೧೮೮., ಸಂ.೧೩, ಪು.೧೫೦., ಸಂ.೮೧, ಪು.೧೨೫., ಸಂ.೫೮, ಪು.೫೭೪., ಸಂ.೫೯, ಪು.೫೭೫., ಸಂ.೮೩, ಪು.೩೪೬, ಸಂ.೨೮, ಪು.೫೪., ಸಂ.೬೨, ಪು.೯೪., ಸಂ.೫೭, ಪು.೫೭೩., ಸಂ.೩೨, ಪು.೨೭೦., ಸಂ.೭, ಪು.೨೪೭

೧೯೯. ಅದೇ, ಸಂ.೪, ಪು.೧೪೩

೨೦೦. ಅದೇ, ಸಂ.೨೫, ಪು.೧೬೪

೨೦೧. ಅದೇ, ಸಂ.೬೦, ಪು.೪೮೭

೨೦೨. ಅದೇ, ಸಂ.೩೩, ಪು.೫೪೦

೨೦೩. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೭೨

೨೦೪. ಕ.ವಿ.ಶಾ.ಸಂ.೧೦., ಸಂ.೮೦, ಪು.೧೨೩

೨೦೫. ಅದೇ, ಸಂ.೩೩, ಪು.೫೪೦

೨೦೬. ಅದೇ, ಸಂ.೨೧, ಪು.೫೨೮, ಸಂ.೧೦೮, ಪು.೩೮೨., ಸಂ.೮೬, ಪು.೩೫೬., ಸಂ.೫೧, ಪು.೮೨.,

೨೦೭. ಅದೇ, ಸಂ.೧೨, ಪು.೪೦೧

೨೦೮. ಅದೇ, ಸಂ.೦೨, ಪು.೫೦೮

೨೦೯. ಅದೇ, ಸಂ.೪೭, ಪು.೧೮೬

೨೧೦. ಅದೇ, ಸಂ.೪೧, ಪು.೭೦., ಸಂ.೪೮, ಪು.೮೦

೨೧೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೨

೨೧೨. Henry Cousens, ೧೯೭೬, Bijapur and its Architectural Remains, p.

೨೧೩. Epigraphia Indica, 1987, (Arabic and Persian supplement 1921-30), p.೧೬

೨೧೪. ನರಸಿಂಹಮೂರ್ತಿ ಎ.ವಿ.(ಅನು.), ೨೦೦೦, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೯, ಪು.

೨೧೫. ಷೇಕ್ ಅಲಿ ಬಿ., ಚರಿತ್ರೆ ಸಂ.೪, ಪು.೨೫

೨೧೬. ಅದೇ, ಪು.೨೬

೨೧೭. ಅದೇ, ಪು.೨೮

೨೧೮. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೨೧

೨೧೯. ಷೇಕ್ ಅಲಿ ಬಿ., ಪೂರ್ವೋಕ್ತ, ಸಂ.೪, ಪು.೩೦

೨೨೦. ಅದೇ, ಪು.೩೬

೨೨೧. ಅದೇ, ಪು.೨೨೧

೨೨೨. ರಾಬರ್ಟ್ ಸಿವೆಲ್(ಮೂಲ.), ಸದಾನಂದ ಕನವಳ್ಳಿ(ಅನು.), ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು.೭೪

೨೨೩. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೨೨

೨೨೪. ರಾಬರ್ಟ್ ಸಿವೆಲ್(ಮೂಲ), ಸದಾನಂದ ಕನವಳ್ಳಿ(ಅನು.), ಪೂರ್ವೋಕ್ತ, ಪು.೭೮

೨೨೫. ಷೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪, ಪು.೩೦

೨೨೬. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೨೨

೨೨೭. ಅದೇ, ಪು.೧೨೨

೨೨೮. ಅದೇ, ಪು.೧೨೩

೨೨೯. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು.೬೫೧

೨೩೦. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ್ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೦೭

೨೩೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೨

೨೩೨. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೧೫

೨೩೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಪ್ತಕುರ್ಸಿ, ಪು.೨೦೨

೨೩೪. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೧೫

೨೩೫. ಷೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪, ಪು.೭೦

೨೩೬. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೩

೨೩೭. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, ತಾರೀಖ ಎ ಫರಿಶ್ತಾ, ಭಾಗ.೩, ಪು.೫೦

೨೩೮. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೫–೨೮

೨೩೯. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೧೭

೨೪೦. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೭೪

೨೪೧. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ.(ಅನು.), ೨೦೧೪, ತಾರೀಖೆ ಹಪ್ತಕುರ್ಸಿ, ಪು.೨೦೪

೨೪೨. Henry Cousens, 1976, Bijapur and its Architectural Remains, p.೫

೨೪೩. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೮೦

೨೪೪. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೫-೬೦

೨೪೫. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, ಪೂರ್ವೋಕ್ತ, ಪು.೧೨೨-೧೩೬

೨೪೬. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೮೧

೨೪೭. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, ಪೂರ್ವೋಕ್ತ, ಪು.೧೩೮-೧೪೦

೨೪೮. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೯೧

೨೪೯. ಕೃಷ್ಣ ಕೊಲ್ಹಾರಕುಲಕರ್ಣಿ, ೨೦೦೨, ಬಿಜಾಪುರ ಆದಿಲಶಾಹಿ, ಪು.೮೫

೨೫೦. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, ಪೂರ್ವೋಕ್ತ, ಪು.೧೬೨

೨೫೧. ಕೃಷ್ಣ ಕೊಲ್ಹಾರಕುಲಕರ್ಣಿ, ೨೦೦೨, ಪೂರ್ವೋಕ್ತ, ಪು.೯೪-೯೫

೨೫೨. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೨

೨೫೩. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೯೯

೨೫೪. ಅದೇ, ಪು.೧೦೨-೧೦೭

೨೫೫. ಕೃಷ್ಣ ಕೊಲ್ಹಾರಕುಲಕರ್ಣಿ, ೨೦೦೨, ಪೂರ್ವೋಕ್ತ, ಪು.೧೧೨-೧೧೩

೨೫೬. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಪ್ತಕುರ್ಸಿ, ಪು.೨೧೯

೨೫೭. ಶೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಸಂ.೪ ಪು.೧೧೩-೧೧೬

೨೫೮. ಕೃಷ್ಣ ಕೊಲ್ಹಾರಕುಲಕರ್ಣಿ, ೨೦೦೨, ಪೂರ್ವೋಕ್ತ, ಪು.೧೪೨

೨೫೯. ಷೇಕ್ ಅಲಿ ಬಿ., ೧೯೯೭, ಪೂರ್ವೋಕ್ತ ಸಂ. ಪು.೧೨೨-೧೫೯

೨೬೦. ಅದೇ, ಪು.೧೨೫

೨೬೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೨೯-೪೫೩

೨೬೨. ನರಸಿಂಹಮೂರ್ತಿ ಎ.ವಿ.(ಅನು.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೧೪, ಪು.೨೫೦

೨೬೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೭೦-೧೭೬

೨೬೪. ಅದೇ, ಪು.೧೮೧

೨೬೫. ಕುಲಕರ್ಣಿ ಆರ್.ಕೆ.(ಅನು.), ೨೦೧೪, ಫುತೂಹತೆ ಅಲಂಗೀರ್, ಪು.೨೪೮

೨೬೬. ಅದೇ, ಪು.೨೪೭

೨೬೭. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೬೦

೨೬೮. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೮೨

೨೬೯. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೯೬

೨೭೦. ಕೃಷ್ಣ ಕೊಲ್ಹಾರಕುಲಕರ್ಣಿ, ೧೯೮೩, ವಿಸ್ಮಯ ಇದು ವಿಜಾಪುರ, ಪು.೦೫

೨೭೧. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೬೧

೨೭೨. ನರಸಿಂಹಮೂರ್ತಿ ಎ.ವಿ.(ಅನು.), ಪೂರ್ವೋಕ್ತ, ಸಂ.೧೪, ಪು.೧೭೨

೨೭೩. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೬೧

೨೭೪. Abdul Gani Imaratwale, 2007, History of Bijapur Subah, p.೨೬೨-೨೬೫

೨೭೫. ನರಸಿಂಹಮೂರ್ತಿ ಎ.ವಿ.(ಅನು.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೧೬, ಪು.೨೬೯

೨೭೬. ಧ್ರುವನಾರಾಯಣ ಎಂ.(ಸಂ.), ಸುರಪುರ ಸಂಸ್ಥಾನದ ಇತಿಹಾಸ-ಕಪಟರಾಳ ಕೃಷ್ಣರಾಯರು, ಪು.೧೦೦

೨೭೭. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.

೨೭೮. James M. Campbell(Edit.), 1884, Gazetteer of the Bombay presidency Vol-XXIII, p.೪೪೮-೪೪೯

೨೭೯. ಶ್ರೀನಿವಾಸ ಹಾವನೂರು, ೨೦೦೦, ಹೊಸಗನ್ನಡ ಅರುಣೋದಯ, ಪು.೦೭

೨೮೦. ನರಸಿಂಹಮೂರ್ತಿ ಎ.ವಿ.(ಅನು.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೧೮, ಪು.೩೦

೨೮೧. ವೆಂಕಟರಂಗೊಕಟ್ಟಿ(ಅನು.), ಗ್ಯಾಝೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಪು.೫೦

೨೮೨. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೭೦

೨೮೩. ಅದೇ, ಪು.೧೭೦

೨೮೪. ವೆಂಕಟರಂಗೊಕಟ್ಟಿ(ಅನು.), ಪೂರ್ವೋಕ್ತ, ಪು.೩೬೩

೨೮೫. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೭೧

೨೮೬. ವೆಂಕಟರಂಗೊಕಟ್ಟಿ(ಅನು.), ಪೂರ್ವೋಕ್ತ, ಪು.೩೬೩

೨೮೭. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೭೧

೨೮೮. James M. Campbell(Edit.), ೧೮೮೪, ಪೂರ್ವೋಕ್ತ, ಪು.೪೫೨-೪೫೪

೨೮೯. ವೆಂಕಟರಂಗೊಕಟ್ಟಿ(ಅನು.), ಪೂರ್ವೋಕ್ತ, ಪು.೩೬೩

೨೯೦. Gazetear Belagavi p.೪೦೬

೨೯೧. ೨೦೧೨, ಚರಿತ್ರೆ ಅಧ್ಯಯನ ಸಂ.೦೮, ಸಂಚಿಕೆ.೦೧, ಪು.೫೮

೨೯೨. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೭೧

೨೯೩. Abdul Gani Imaratwale, 2007, History of Bijapur Subah, p.೩೩೦

೨೯೪. ಸೂರ್ಯನಾಥ ಕಾಮತ್, ಕರ್ನಾಟಕ ಏಕೀಕರಣ ಇತಿಹಾಸ, ಪು.೪೩

ಅಧ್ಯಾಯ ಮೂರು

ರಕ್ಷಣಾ ವಾಸ್ತುಶಿಲ್ಪದ ಉಗಮ ಮತ್ತು ಬೆಳವಣಿಗೆ

೩.೧. ಕೋಟೆಯ ಅರ್ಥ

೩.೨. ಕೋಟೆಯ ಪ್ರಕಾರಗಳು

೩.೩. ಕೋಟೆಯ ಮಹತ್ವ

೩.೪. ಸ್ಥಳದ ಆಯ್ಕೆ

೩.೫. ಕೋಟೆಯ ಲಕ್ಷಣಗಳು

೩.೬. ಕೋಟೆಯ ಪ್ರಾಚೀನತೆ

ಅಧ್ಯಾಯ ಮೂರು

ರಕ್ಷಣಾ ವಾಸ್ತುಶಿಲ್ಪ ಉಗಮ ಮತ್ತು ಬೆಳವಣಿಗೆ

ಮಾನವನ ಬದುಕಿನ ಮೂಲಭೂತ ಅವಶ್ಯಕತೆಗಳು ಆಹಾರ, ಬಟ್ಟೆ ಹಾಗೂ ವಸತಿ. ಮಾನವನ ಉಗಮದೊಡನೆ ವಸತಿ ನಿರ್ಮಾಣದ ಆಲೋಚನೆಗಳು ಪ್ರಾರಂಭವಾದವು. ಮೊದಮೊದಲು ಮಳೆ, ಗಾಳಿ ಬಿಸಿಲುಗಳಿಂದ ರಕ್ಷಣೆ ಪಡೆಯುವುದು ಅವನ ಉದ್ದೇಶವಾಗಿತ್ತು. ನಾಗರಿಕತೆ ಬೆಳೆದಂತೆ ತನ್ನ ವಾಸಕ್ಕಾಗಿ ಹಾಗೂ ಅವಶ್ಯಕತೆಗಳಿಗನುಗುಣವಾಗಿ ಮನೆಗಳನ್ನು ನಿರ್ಮಿಸಿಕೊಂಡ. ತದನಂತರ ಗ್ರಾಮ ನಗರಗಳು ಹುಟ್ಟಿಕೊಂಡವು ಹಾಗೂ ಇವುಗಳ ರಕ್ಷಣೆಗಾಗಿ ಕೋಟೆಗಳಂತಹ ರಕ್ಷಣಾತ್ಮಕ ಕಟ್ಟಡಗಳು ನಿರ್ಮಾಣಗೊಂಡವು. ಮಾನವನು ನಿರ್ಮಿಸಿಕೊಂಡ ಇಂತಹ ಕಟ್ಟಡಗಳೇ ವಾಸ್ತುಕೃತಿಗಳಾದವು. 'ಅಮರ್ತ್ಯಾಶ್ಚೈವ ಮರ್ತ್ಯಾಶ್ಚ ಯತ್ರ ಯತ್ರ ವಸಂತಿ ಹಿ ತದ್ವಸ್ತು ಇತಿ ಮತಂ' ಎಂದರೆ ಮರ್ತ್ಯರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ 'ವಸ್ತು' ಎಂದು ಹೆಸರು. ವಸ್ತುವನ್ನು ಆಶ್ರಯಿಸಿದ್ದು ವಾಸ್ತು. ಆದ್ದರಿಂದ 'ವಾಸ್ತು' ಎಂದಲ್ಲಿ ವಸತಿಯೋಗ್ಯ ಭೂಮಿ ಹಾಗೂ ಆ ಭೂಮಿಯ ಮೇಲೆ ನಿಂತ ಕಟ್ಟಡ ಎರಡನ್ನು ಒಳಗೊಳ್ಳುತ್ತದೆ.[೧] ಅಂದರೆ ಭೂಮಿಯನ್ನು ಆಶ್ರಯಿಸಿ ಅದರ ಮೇಲೆ ನಿರ್ಮಿತವಾಗಿರುವ ಸೌಧ, ಗೃಹ, ದುರೋಹಣ, ಧಾಮ, ಹರ್ಮ್ಯ, ಅಸ್ಪ, ಆಲಯ ಮುಂತಾದ ವಿಶೇಷಗಳಿಗೆ 'ವಾಸ್ತು' ಎಂಬ ಹೆಸರುಂಟಾಗಿದೆ. ಈ ವಾಸ್ತುವಿಗೆ ಸಂಬಂಧಿಸಿರುವ ವಿಧಗಳನ್ನು ಅಧ್ಯಯನ ಮಾಡುವ ಶಾಸ್ತ್ರಕ್ಕೆ 'ವಾಸ್ತುಶಾಸ್ತ್ರ'ವೆಂದು ಪ್ರಾಚೀನ ಕಾಲದಿಂದಲೂ ಹೇಳಲಾಗುತ್ತದೆ. ವಾಸ್ತುಶಾಸ್ತ್ರವೆನ್ನಿಸಿದ ಇದನ್ನು ವಾಸ್ತುವಿದ್ಯೆಯೆಂದೂ, ವಾಸ್ತುಶಿಲ್ಪವೆಂದು ಗುರುತಿಸುವುದುಂಟು.

ಕಟ್ಟಡದ ಮೂಲಕ ರಸಭಾವಾದಿಗಳನ್ನು ವ್ಯಕ್ತಪಡಿಸುವುದೇ ವಾಸ್ತುಶಿಲ್ಪದ ವೈಶಿಷ್ಟ್ಯ. ಇದು ನಾಗರಿಕತೆಯ ಏರಿಳಿತಗಳನ್ನು ಪ್ರತಿಬಿಂಬಿಸುತ್ತದೆ. ಕಟ್ಟಡ ವಾಸಿಸಲು ಯೋಗ್ಯವಾಗಿರಬೇಕಷ್ಟೇ ಅಲ್ಲದೆ ಅವು ಬಹುದಿನಗಳವರೆಗೆ ಉಳಿದುಕೊಳ್ಳುವಂತಹುದಾಗಿದ್ದು ನೋಡಲು ಸುಂದರವಾಗಿ ಇರಬೇಕು. ಇಂತಹ ಕಷ್ಟಸಾಧ್ಯವಾದ ಕಲೆ ವಾಸ್ತುಶಿಲ್ಪ. ಇತರ ಕಲೆಗಳಂತೆಯೇ ವಾಸ್ತುಶಿಲ್ಪವೂ ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು

ಹಿಡಿಯಬಲ್ಲುದೆಂಬುದು "Architecture is the Matrix of Civilization' ಎಂಬ ಫರ್ಸಿಬ್ರೌನ್‌ರ ಹೇಳಿಕೆಯಲ್ಲಿ ಈ ಅಭಿಪ್ರಾಯ ಸೂಚಿತವಾಗಿದೆ. ವಾಸ್ತುಶಿಲ್ಪವು ನಾಗರಿಕತೆಯನ್ನು ರೂಪಿಸುವ ಮಾತೃಕೆ. ತನ್ನ ಗರ್ಭದಲ್ಲಿಟ್ಟು ನಾಗರಿಕತೆ ಶಿಶುವನ್ನು ಇದು ಬೆಳೆಸುತ್ತದೆ. ಮಾನವ ಜನಾಂಗದ ವಿಕಾಸವನ್ನು ಗುರುತಿಸುವ ವಿವಿಧ ಹಂತಗಳನ್ನು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದು.[೨]

ಭಾರತೀಯ ಸಂಪ್ರದಾಯದ ಪ್ರಕಾರ ಶಿಲ್ಪವು ವಿಶಾಲವಾದ ಅರ್ಥದಿಂದ ಕೂಡಿದೆ. ಶಿಲ್ಪವೆಂದರೆ ಕಟ್ಟಡಗಳನ್ನು ಕಟ್ಟುವಿಕೆ. ಅವು ದೇವಾಲಯಗಳಾಗಿರಬಹುದು, ಗೃಹಗಳಾಗಿರಬಹುದು. ಕೆರೆ, ಬಾವಿಗಳ ನಿರ್ಮಾಣ ಜೊತೆಗೆ ಮೊದಲಾದ ಮರಗೆಲಸಗಳನ್ನು ಮಾಡುವುದು ಕೂಡ ಆಗಿದೆ. ಮೂರ್ತಿಶಿಲ್ಪವೂ ಶಿಲ್ಪದಲ್ಲಿಯೇ ಅಡಕವಾಗಿದೆ. ಪಾಶ್ಚಾತ್ಯ ಸಂಪ್ರದಾಯದಲ್ಲಿ ವಾಸ್ತು ಬೇರೆ ಮೂರ್ತಿಶಿಲ್ಪ ಬೇರೆ. ಆದರೆ ಭಾರತೀಯ ಶಿಲ್ಪದಲ್ಲಿ ಈ ಭೇದವಿಲ್ಲ.[೩] ತಾಂತ್ರಿಕ ಪರಿಣಿತಿಯನ್ನು ಹೊಂದಿದ, ಭಾವಸಂಬಂಧವೂ ಬೆಸೆಯಲ್ಪಟ್ಟ ಸಾಂಸ್ಕೃತಿಕ ವಾಸ್ತುರಚನೆಗಳಿಗೆ ಸಂಬಂಧಿಸಿದ ಮೂಲ ಸ್ವರೂಪಗಳನ್ನು ಗುರುತಿಸುವುದೇ ವಾಸ್ತುಶಾಸ್ತ್ರ ಅಥವಾ ವಾಸ್ತುಶಿಲ್ಪ.[೪] ಆದ್ದರಿಂದಲೇ 'ರೂಪಮೇವ ತಚ್ಛಿಲ್ಪಮ್'(ರೂಪವೇ ಶಿಲ್ಪ) ಎಂದೂ ತ್ವಾಷ್ಟಾರೂಪಾಣಾ ಮಧಿಪತಿಃ(ತೃಷ್ಟ ವಿಶ್ವಕರ್ಮನು ಎಲ್ಲಾ ರೂಪಗಳಿಗೂ ಒಡೆಯ) ಎಂದು ನಿರ್ಣಯಿಸಿದ್ದಾರೆ.[೫]

ವಾಸ್ತುಶಿಲ್ಪವೆಂದರೇನು ಎಂಬುದನ್ನು ಕುರಿತು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಸೂತ್ರರೂಪದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. "The art of organizing space" ಎಂದು ಅದನ್ನು ಹೇಳಿರುವ ಸೂತ್ರ ಒಂದಿದೆ. ಚಿತ್ರ, ಶಿಲ್ಪ, ಕಾವ್ಯ, ನಾಟಕ ಮೊದಲಾದ ಕಲೆಗಳು ಜೀವನದ ವಿವಿಧ ಅನುಭವಗಳಿಗೆ ರೂಪಧಾರಣೆ ಮಾಡಲು ಪ್ರಯತ್ನಿಸಿದರೆ, ವಾಸ್ತುಶಿಲ್ಪ ನಿರಾಕಾರವಾದ ಆಕಾಶವನ್ನೇ ವ್ಯವಸ್ಥೆಗೊಳಿಸಿ ಅದಕ್ಕೊಂದು ರೂಪುಕೊಡುವ ಕಲೆ. ಗೋಡೆಗಳನ್ನು ಹಾಕಿ, ಮೇಲೆ ಛಾವಣಿಗಳನ್ನು ನಿರ್ಮಿಸಿ, ಅನಂತವಾದ ಆಕಾಶವನ್ನು ಸಾಂತಗೊಳಿಸಿ ಅದನ್ನು ಉಪಯೋಗಕ್ಕಾಗಿ ಹಿಡಿದಿಡುತ್ತದೆ; ಮತ್ತು ಆ ಮೂಲಕ ಸಂಪೂರ್ಣವಾಗಿ ಹೊಸರೂಪಗಳನ್ನು ಸೃಷ್ಟಿಸುತ್ತದೆ. ವಾಸ್ತುಶಿಲ್ಪಿ ತನ್ನ ಕಲಾರೂಪಗಳ ನಿರ್ಮಾಣಕ್ಕೆ ತಾನೇ ಕಾರಣನಾದ ಸಾಮ್ರಾಟ. ಗೋಡೆಗಳು, ಛಾವಣಿಗಳು ಮತ್ತು ಗೋಪುರಗಳ ವ್ಯತ್ಯಾಸದಿಂದ ಆಕಾಶಕ್ಕೆ ಆತ ಅನಂತರೂಪಗಳನ್ನು ಕೊಡಬಲ್ಲನು.[೬]

ಭಾರತೀಯ ವಾಸ್ತುಶಿಲ್ಪವು ಮೂಲತಃ ದೇವಾಲಯಗಳಲ್ಲಿ ಅಭಿವ್ಯಕ್ತಗೊಂಡಿದೆ. ಎಂದು ಹೇಳಲಾಗುತ್ತದೆ. ಆದರೆ ಶತ-ಶತಮಾನಗಳಿಂದ ಕೋಟೆ-ಕೊತ್ತಲುಗಳು ಸಹ ನಮ್ಮ ಭವ್ಯ ಸುಸಂಸ್ಕೃತ ಸಮಾಜದ ಪ್ರತೀಕಗಳಾಗಿವೆ. ಇವು ಸಹ ಮೊದಮೊದಲು ವಾಸ್ತುಶಾಸ್ತ್ರವನ್ನು ಸಂಪೂರ್ಣವಾಗಿ ಆಧರಿಸಿ ನಿರ್ಮಿಸಿದವುಗಳಾಗಿವೆ. ಆದರೆ ತದನಂತರ ಕಾಲಘಟ್ಟದಲ್ಲಿ ಅಥವಾ ಯುದ್ಧತಾಂತ್ರಿಕತೆಯಲ್ಲಿ ಆದ ಬದಲಾವಣೆಯಂತೆ ಇವುಗಳ ನಿರ್ಮಾಣ ಅಥವಾ ರಚನೆಯಲ್ಲಿಯೂ ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ. ಕೋಟೆಗಳ ಉದ್ದೇಶ ರಕ್ಷಣೆಯಾಗಿರಬಹುದು. ಅದರ ನಿರ್ಮಾಣ ತಾಂತ್ರಿಕತೆಯಿಂದ ಕೂಡಿದ್ದು ಒಂದು ಜನಾಂಗದ ಸಾಂಸ್ಕೃತಿಕ ಭಾವಸಂಬಂಧವನ್ನು

ಬೆಸೆಯಲ್ಪಟ್ಟಿದೆ. ಹೀಗಾಗಿ ಇದೊಂದು ಕಲೆಯಾಗಿದೆ ಎಂದು ಹೇಳಬಹುದು. ಆದಕಾರಣ ರಕ್ಷಣಾ ವಾಸ್ತುಶಿಲ್ಪ ಎಂಬ ಅಧ್ಯಯನದ ಶೀರ್ಷಿಕೆಯ ಅಡಿಯಲ್ಲಿ ವಿಜಾಪುರ ಜಿಲ್ಲೆಯ ಕೋಟೆ–ಕೊತ್ತಲುಗಳ ಅಧ್ಯಯನವನ್ನು ಇಲ್ಲಿ ಕೈಗೊಂಡಿದ್ದೇನೆ.

೩.೧. ಕೋಟೆಯ ಅರ್ಥ

ತಮಿಳು ಕೃತಿ ತಿರುಕ್ಕುಱಳ್‌ದಲ್ಲಿ ಕೋಟೆಯನ್ನು ಕುರಿತು ಶತ್ರುಗಳು ಆಕ್ರಮಣ ಮಾಡಿದಾಗ ರಾಜ್ಯ ನಾಶವಾಗದಂತೆ ಎತ್ತರ, ಅಗಲ, ದೃಢತೆ, ದುರ್ಗಮತೆಗಳೆಂಬ ನಾಲ್ಕೂ ಕೂಡಿರುವುದೇ ಕೋಟೆ ಎಂದು ಹೇಳಲಾಗುತ್ತದೆ.[೭] ಸಂಸ್ಕೃತದಲ್ಲಿ ಕೋಟೆಯನ್ನು 'ದುರ್ಗ'(ಪ್ರವೇಶಿಸಲು ಅಶಕ್ಯವಾದುದು), ಹಳಗನ್ನಡ ಸಾಹಿತ್ಯ ಕೃತಿಗಳಲ್ಲಿ 'ಕೋಂಟೆ', ಶಾಸನಗಳಲ್ಲಿ ದುರ್ಗ, ಕೋಟೆ ಎಂದು ಕರೆಯಲಾಗುತ್ತದೆ. ಋಗ್ವೇದದಲ್ಲಿ ಬರುವ 'ಪುರ' ಹಾಗೂ 'ದುರ್ಗ'ಗಳು ಗೋಡೆಯಿಂದ ಆವೃತವಾದ ಪ್ರದೇಶಗಳಾಗಿವೆ. ಅದೇ ರಿತಿ ಅಥರ್ವವೇದದಲ್ಲಿ ಕಲ್ಲಿನ ಗೋಡೆಗೆ ಸಂವಾದಿಯಾಗಿ 'ವಪ್ರ' ಪದವನ್ನು ಬಳಸಿದೆ. ಋಗ್ವೇದದಲ್ಲಿ ಬರುವ 'ಮಹಾಪುರ' ಪದವು ಕೋಟೆಗೆ ಸಂವಾದಿಯಾಗಿದ್ದು ಯಜುರ್ವೇದ ಹಾಗೂ ಬ್ರಾಹ್ಮಣಗಳಲ್ಲಿಯೂ ಈ ಪದ ಬಳಕೆಯಾಗಿದೆ.[೮] ಹೀಗೆ ಕೋಟೆಗೆ ದುರ್ಗ, ಪುರ, ಕಿಲ್ಲೆ, ವಾಡೆ, ಗಡ, ಪ್ರಾಕಾರ ಎಂಬ ಪದಗಳನ್ನು ಸಾಹಿತ್ಯಕವಾಗಿ, ಕ್ವಾಟಿ, ಕ್ವಾಟೆ ಎಂದು ಸ್ಥಳೀಯವಾಗಿ ಕರೆಯುತ್ತಾರೆ.

ಕೋಟೆ ಕೊತ್ತಲ ಎಂಬ ಜೋಡಿ ಪದಗಳು ಒಂದೇ ಎಂದು ಕಂಡುಬಂದರೂ ಶಬ್ದಕೋಶದಲ್ಲಿ ಬೇರೆ ಬೇರೆ ಅರ್ಥಗಳನ್ನು ಹೊಂದಿದೆ. ಕೊತ್ತಳ(ಲ)ದ ಉರ್ದುವಿನ ಅರ್ಥ 'ಬುರುಜು' ಇವು ಕೋಟೆಯ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಹೀಗಾಗಿ ಈ ಜೋಡಿಪದ ಒಂದೇ ಪದದ ಹಾಗೆ ಬಳಕೆಯಾಗುತ್ತದೆ.[೯]

ಆಂಗ್ಲ ಭಾಷೆಯ 'FORT' ಪದವನ್ನು ವಿಸ್ತರಿಸಿ ಅದಕ್ಕೆ ವಿಶಿಷ್ಟ ಅರ್ಥವನ್ನು ಕಲ್ಪಿಸಬಹುದು.[೧೦]

F – Formidable – ದುಸ್ಸಾಧ್ಯವಾದ

O – Obstruct – ತಡೆಯೊಡ್ಡುವ

R – Rampart – ರಕ್ಷಣಾಗೋಡೆ

T – Tactics – ವ್ಯೂಹರಚನೆ

ಎಂಬುದಾಗಿ ಹೇಳಬಹುದು ಅಂದರೆ ಕೋಟೆಯು ಯುದ್ಧ ತಂತ್ರದ ಒಂದು ರಚನೆಯಾಗಿದ್ದು ಶತ್ರುಗಳಿಗೆ ದಿಗಿಲು ಹುಟ್ಟಿಸುವಂತಹ ತಡೆಗೋಡೆಯಾಗಿದೆ.

೩.೨. ಕೋಟೆಯ ಪ್ರಕಾರಗಳು

ಯುದ್ಧದ ವರ್ಣನೆಗೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಗಳು ವಿವಿಧ ಶಾಸ್ತ್ರಗ್ರಂಥಗಳಲ್ಲಿ, ಕಾವ್ಯಗಳಲ್ಲಿ ಉಲ್ಲೇಖವಾಗಿದೆ. ಅದರಲ್ಲಿ ಕೋಟೆಗಳ ವರ್ಣನೆಯೂ ಬರುವುದು. ಈ ಶಾಸ್ತ್ರಗ್ರಂಥಗಳಲ್ಲಿ ಕೋಟೆಯ ಕುರಿತು ಅವುಗಳಲ್ಲಿನ ಪ್ರಕಾರಗಳು, ಅರ್ಥವಿವರಣೆ, ಪ್ರಮುಖ ಕೋಟೆ, ಕೋಟೆಯಲ್ಲಿ ಬಳಸುವ ಆಯುಧಗಳು, ಅದರ ನಿರ್ಮಾಣದ ಹಿನ್ನೆಲೆ ಇತ್ಯಾದಿ ವಿಷಯಗಳನ್ನು ಚರ್ಚಿಸುತ್ತವೆ. ಅವು ಹೇಳುವ ವಿಚಾರದಲ್ಲಿ ನನ್ನ ಸಂಶೋಧನಾ ಕ್ಷೇತ್ರಕ್ಕೆ ಸಂಬಂಧಪಟ್ಟ ಕೋಟೆಗಳು ಎಷ್ಟರಮಟ್ಟಿಗೆ ಹೋಲಿಕೆಯಾಗುತ್ತವೆ ಎಂಬುದನ್ನು ತಿಳಿದುಕೊಳ್ಳಲು ಸಹಕಾರಿಯಾಗಿವೆ.

ಕೌಟಿಲ್ಯನು ತನ್ನ ರಾಜನೀತಿಯಲ್ಲಿ ಸಪ್ತಾಂಗಗಳಾದ ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ದಂಡ, ಮಿತ್ರ ಇವುಗಳಲ್ಲಿ ದುರ್ಗವು ಪ್ರಮುಖವಾದುದು. ದುರ್ಗದ ರಕ್ಷಣೆ ಇಲ್ಲದಿದ್ದರೆ ಕೋಶವು ಶತ್ರುವಿನ, ಇಲ್ಲವೆ ದರೋಡೆಕಾರರ ವಶವಾಗುವುದು ಎಂದು ಹೇಳುತ್ತಾನೆ. ಕೌಟಿಲ್ಯನು ಐದು ವಿಧದ ದುರ್ಗಗಳನ್ನು ಕುರಿತು ಹೇಳುತ್ತಾನೆ.[೧೧]

ಔದಕ: ಆಳವಾದ ನದಿ ಮತ್ತು ಸಮುದ್ರಾದಿಗಳಿಂದ ಸುತ್ತಲೂ ಆವೃತವಾದ ದ್ವೀಪದಂತಿರುವ ಅಥವಾ ಕೃತ್ರಿಮವೂ, ಆಳವು ಆದ ಜಲಾಶಯದಿಂದ ಸುತ್ತುವರೆದ ಭೂಪ್ರದೇಶ

ಪಾರ್ವತ: ಕಲ್ಲುಬಂಡೆಗಳಿಂದ ಸುತ್ತುವರೆದುದು, ಇಲ್ಲವೆ ದೊಡ್ಡ ಗುಹೆಯಾಗಿರುವುದು.

ಧಾನ್ವನ: ಹುಲ್ಲು ನೀರುಗಳಿಲ್ಲದ, ಅಥವಾ ಮರಭೂಮಿಯಾದ ಪ್ರದೇಶ

ವನದುರ್ಗ: ಅತಿ ಕೆಸರಿನಿಂದಾಗಲಿ, ಕುರುಚಲು ಗಿಡಗಳಿಂದ ತುಂಬಿರುವುದರಿಂದಾಗಲಿ, ಪ್ರವೇಶಿಸಲಸಾಧ್ಯವಾದ ಪ್ರದೇಶ ಎಂದು ಉಲ್ಲೇಖಿಸಲಾಗಿದೆ.

ಇವುಗಳಲ್ಲಿ ಔದಕ ಮತ್ತು ಪಾರ್ವತ ದುರ್ಗಗಳು ಆಪತ್ಕಾಲದಲ್ಲಿ ರಾಜ್ಯವನ್ನು ರಕ್ಷಿಸಲು ಸಮರ್ಥವಾಗಿವೆ. ಧಾನ್ವನದುರ್ಗ ಮತ್ತು ವನದುರ್ಗಗಳು ಆಪತ್ಕಾಲದಲ್ಲಿ ಅಟವಿಕ ಸೇನೆಯನ್ನು ಯುದ್ಧದಿಂದ ಹಿಮ್ಮೆಟ್ಟುವುದಕ್ಕೆ ರಾಜನಿಗೆ ಉಪಯುಕ್ತವಾಗಿವೆಯೆಂದು ಹೇಳುತ್ತಾನೆ. ಅಲ್ಲದೆ ರಾಜ್ಯದ ಮಧ್ಯದಲ್ಲಿ ಎರಡು ನದಿಗಳು ಬಂದು ಸೇರುವ ಸ್ಥಳದಲ್ಲಿ ಧನೋತ್ಪತ್ತಿಗೆ ಸ್ಥಾನವಾಗಿರುವ ಸ್ಥಾನೀಯ ದುರ್ಗವನ್ನು ರಚಿಸಬೇಕೆಂದು ಕೂಡ ಹೇಳಿದ್ದಾನೆ. ಅದನ್ನು ವಾಸ್ತುಶಾಸ್ತ್ರಕ್ಕನುಗುಣವಾಗಿ ವರ್ತುಲ, ದೀರ್ಘ, ಚತುರಸ್ರವಾಗಿಯೇ ನಿರ್ಮಿಸಬೇಕೆಂದಿದ್ದಾನೆ.

ಕಾಮಂದಕನು ತನ್ನ ನೀತಿಸಾರದಲ್ಲಿ ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ಐದು ರೀತಿಯಾಗಿ ವಿಂಗಡಿಸಿದ್ದಾನೆ.[೧೨] ಈ ಗ್ರಂಥದಲ್ಲಿ ಕೌಟಿಲ್ಯನು ಹೇಳಿದ ಮೊದಲ ನಾಲ್ಕು ಕೋಟೆಗಳನ್ನು ಕುರಿತು ಇಲ್ಲಿಯೂ ಹೇಳಲಾಗಿದೆ. ಆದರೆ ಕಾಮಂದಕನು ಸ್ಥಾನೀಯ ದುರ್ಗದ ಬದಲಿಗೆ ಹಳ್ಳ, ಮುಳ್ಳುಗಳು ಹಾಗೂ ಕಲ್ಲುಗಳಿಂದ ಸುತ್ತುವರಿಯಲ್ಪಟ್ಟ 'ಐರಿಣಿ' ಎಂಬ ಮತ್ತೊಂದು ಕೋಟೆಯ ಕುರಿತಾಗಿ ತಿಳಿಸುತ್ತಾನೆ. ಅದೇ ರೀತಿ ಮನುಸ್ಮೃತಿಯಲ್ಲಿ ಆರು ಪ್ರಕಾರದ ಕೋಟೆಗಳ ಬಗ್ಗೆ ತಿಳಿದುಬರುತ್ತದೆ.[೧೩]

"ಧನ್ವದುರ್ಗಂ ಮಹೀದುರ್ಗಮಬ್ದುರ್ಗಂ ವಾರ್ಕ್ಷಮೇವ ವಾ
ನೃದುರ್ಗಂ ಗಿರಿದುರ್ಗಂ ವಾ ಸಮಾಶ್ರೀತ್ಯವಸೇತ್ಪುರಮ್"

ಈ ರೀತಿಯಾಗಿ ಧನ್ವದುರ್ಗ, ಜಲದುರ್ಗ, ವೃಕ್ಷದುರ್ಗ ಮತ್ತು ಗಿರಿದುರ್ಗ ಎಂಬ ನಾಲ್ಕು ಪ್ರಕಾರದ ಕೋಟೆಗಳ ಜೊತೆಗೆ ಇಲ್ಲಿ ಕಲ್ಲು, ಇಟ್ಟಿಗೆಯಿಂದ ನಿರ್ಮಿಸಿರುವ 'ಮಹಿದುರ್ಗ' ಹಾಗೂ ಸುತ್ತಲೂ ಜನರ ಕಾವಲು ನಿಯಮಿಸಲ್ಪಟ್ಟಿರುವ 'ನೃದುರ್ಗ' ಎಂಬ ಮತ್ತೆರಡು ಬಗೆಯ ಕೋಟೆಗಳ ಬಗ್ಗೆ ಇಲ್ಲಿ ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಮನುಸ್ಮೃತಿಯಲ್ಲಿ ಕೋಟೆಯ ಪ್ರಕಾರಗಳನ್ನು ವಿಂಗಡಿಸಲಾಗಿದೆ. ಈ ಎಲ್ಲದವುಗಳಲ್ಲಿ ಗಿರಿದುರ್ಗವೇ ರಕ್ಷಣೆಗೆ ಉತ್ತಮವಾದದ್ದು ಎಂದು ತಿಳಿಸುತ್ತದೆ.

"ಸರ್ವೇಣ ತು ಪ್ರಯತ್ನೇನ ಗಿರಿದುರ್ಗಂ ಸಮಾಶ್ರಯೇತ
ಏಷ್ಯಾಂ ಹಿ ಬಾಹುಗುಣ್ಯೇನ ಗಿರಿದುರ್ಗಂ ವಿಶಿಷ್ಯತೇ".

ಎಂದು ಹೇಳಿದೆ. ಪರ್ವತವನ್ನು ಹತ್ತಿ ಯುದ್ಧ ಮಾಡುವುದು ಕಠಿಣ. ಅಲ್ಲದೆ ಗಿರಿಯ ಮೇಲೆ ನಿಂತು ಕೆಳಗಿನ ಶತ್ರುಗಳನ್ನು ಕೊಲ್ಲುವುದು ಸುಲಭ. ಹೀಗಾಗಿ ಈ ಎಲ್ಲ ದುರ್ಗಗಳಲ್ಲಿ ಗಿರಿದುರ್ಗವು ಉತ್ತಮವಾದದ್ದು ಎಂದು ಹೇಳಲಾಗಿದೆ.

ಶುಕ್ರನೀತಿ ಸಾರದಲ್ಲಿ ಈ ಮೊದಲು ಕಾಮಂದಕನ ನೀತಿಸಾರ ಮತ್ತು ಮನುಸ್ಮೃತಿಯಲ್ಲಿ ಉಲ್ಲೇಖಿಸಿದ ಕೋಟೆಯ ಜೊತೆಗೆ ಮತ್ತೆ ಆಳವಾದ ಕಂದಕಗಳಿಂದ ಸುತ್ತುವರಿಯಲ್ಪಟ್ಟ 'ಪರಿಖ' ಹಾಗೂ ಬಂಧುಗಳು ಮತ್ತು ಸ್ನೇಹಿತರ ಮನೆಗಳಿಂದ ಆವೃತವಾಗಿರುವ 'ಸಹಾಯ' ಎಂಬ ಎರಡು ಪ್ರಕಾರದ ಕೋಟೆಗಳನ್ನು ಸೇರಿಸಿ ಒಟ್ಟು ಒಂಬತ್ತು ಪ್ರಕಾರದ ಕೋಟೆಗಳ ಬಗ್ಗೆ ಹೇಳುತ್ತಾನೆ.

ಮೇಲೆ ಹೇಳಿದ ಪ್ರಕಾರಗಳಲ್ಲಿ ಶುಕ್ರನು ತನ್ನ ಅಭಿಪ್ರಾಯವನ್ನು ಹೀಗೆ ಹೇಳುತ್ತಾನೆ. 'ಪರಿಖ'ಗಿಂತ 'ಐರಿಣ' ಉತ್ತಮವಾಗಿದೆ. ಇದಕ್ಕಿಂತ 'ಪರಿಘಾ' ಉತ್ತಮವಾದ ಕೋಟೆ. 'ವನ', ಪರಿಘಾಗಿಂತ ಹೆಚ್ಚು ರಕ್ಷಣೆಯನ್ನು ಕೊಡುತ್ತದೆ. 'ಸೈನಿಕ ಕೋಟೆ' ಮತ್ತು 'ಸಹಾಯಕ ಕೋಟೆ' ಬೇರೆ ಎಲ್ಲಾ ಕೋಟೆಗಳಿಗಿಂತಲೂ ಉತ್ತಮವಾದುದು.[೧೪]

ಸೋಮದೇವ ಸೂರಿಯ ವಿರಚಿತ ನೀತಿವಾಕ್ಯಾಮೃತಂ ರಾಜನೀತಿಶಾಸ್ತ್ರ ಗ್ರಂಥದಲ್ಲಿ "ತದ್ವಿವಿಧಂ ಸ್ವಾಭಾವಿಕ ಮಹಾರ್ಯಂಚ" ದುರ್ಗವು ಎರಡು ವಿಧ ಸ್ವಾಭಾವಿಕ ಮತ್ತು ಮಾನವ ನಿರ್ಮಿತ ಎಂದು ಹೇಳಲಾಗಿದೆ. ಅಲ್ಲದೆ,

"ವೈಷಮ್ಯಂ ಪರ್ಯಾಪ್ತಾವಕಾಶೋ ಯುವಸೋಂಧನೋದಕಭೂಯಸ್ತ್ವಂ ಸ್ವಸ್ಯ
ಪರೇಷಾಂ ಚ ತದಭಾವೋ ಬಹುಧಾನ್ಯರಸ ಸಂಗ್ರಹಃ ಪ್ರವೇಶಾಪಸಾರೌವೀರಾಶ್ಚ
ಪುರುಷಾ ಇತಿ ದುರ್ಗಸಂಪತ್"

'ವಿಷಮತೆ' ಏರು ತಗ್ಗುಗಳಿಂದ ಕೂಡಿರುವುದು, ಅವಶ್ಯಕವಾದಷ್ಟು ವಿಶಾಲವಾಗಿರುವುದು. 'ಪಶುಗ್ರಾಸ' ಇಂಧನ(ಉರುವಲು ಅಥವಾ ಕಟ್ಟಿಗೆ), ನೀರು ಇವುಗಳು ತನಗೆ ಬೇಕಾದಷ್ಟಿದ್ದು ಶತ್ರುಗಳಿಗೆ ಅವು ಸಿಗದಂತಿರುವುದು. ಧಾನ್ಯಗಳ ಮತ್ತು ತೈಲಾದಿ ರಸಗಳ ಸಂಗ್ರಹವಿರುವುದು. ಒಳಗೆ ಬರುವುದಕ್ಕೂ ಹೊರಗೆ ಹೋಗುವುದಕ್ಕೂ ಬೇಕಾದ ಕಳ್ಳದಾರಿಗಳು, ವೀರಪುರುಷರು ಇವೆಲ್ಲವುಗಳು ದುರ್ಗ ಸಂಪತ್ತುಗಳು. ಇವು ಇಲ್ಲದವುಗಳು ಸೆರೆಮನೆಯೇ ಸರಿ ಎಂದು ಹೇಳಲಾಗಿದೆ.[೧೫]

ಕಲ್ಯಾಣ ಚಾಳುಕ್ಯರ ಕಾಲಘಟ್ಟದಲ್ಲಿದ್ದ ದುರ್ಗಸಿಂಹನು ರಚಿಸಿದ ಪಂಚತಂತ್ರದಲ್ಲಿ ಕೋಟೆಯ ಪ್ರಕಾರಗಳನ್ನು ಈ ರೀತಿ ಉಲ್ಲೇಖಿಸಲಾಗಿದೆ.

"ದುರ್ಗಂ ಚತುರ್ವಿಧಂ ಪ್ರೋಕ್ತಮಾಪತ್ಸ್ವಾಶ್ರಯ ಕಾರಣಂ
ಜಾಲಕಂ ಪಾರ್ವತಂ ಚೈವ ಧಾನ್ವನಂ ವನಜಂ ತಥಾ"

ಜಲದುರ್ಗ, ಗಿರಿದುರ್ಗ, ಸ್ಥಳದುರ್ಗ, ವನದುರ್ಗವೆಂದು ನಾಲ್ಕು ರೀತಿಯ ದುರ್ಗಗಳಿವೆ. ಅವು ನಾಲ್ಕು ರೀತಿಯವಾಗಿದ್ದರು ಸೂಕ್ಷ್ಮವಾಗಿ ಎಂಟು ರೀತಿಯವಾಗಿರುವುವು. ಅವು,

ಜಲದುರ್ಗ: ಎರಡು ನದಿಗಳ ಸಂಗಮವಾದ ಮಧ್ಯಪ್ರದೇಶವು ಅಂತರ್ದ್ವೀಪವೆನಿಸುವುದು. ಅಗಾಧವಾದ ಬೃಹತ್ ತಟಾಕಗಳಿಂದಲೂ ಕರ್ಕಶ ಸರೋವರಗಳಿಂದಲೂ ಪರಿವೃತವಾದ ಭೂಪ್ರದೇಶವು ಮಹಾಸ್ಥಳವೆನಿಸುವುದು. ಈ ಎರಡು ಜಲದುರ್ಗ ಭೇದಗಳೆನಿಸುವುವು.

ಗಿರಿದುರ್ಗ: ಗರುಡನಿಗೂ ಏರಲಾಗದ ಉತ್ತುಂಗ ಶಿಖರಗಳು ನಾಲ್ಕು ದಿಕ್ಕುಗಳಲ್ಲಿದ್ದು ಒಂದೇ ಬಾಗಿಲು ಇದ್ದಲ್ಲಿ ಅದು ಗುಹ್ಯಾಖ್ಯವೆನಿಸುವುದು. ಯಾವ ದಿಕ್ಕಿನಲ್ಲಿಯೂ ದಾರಿಯಿಲ್ಲದೆ. ಕಡಿದಾಗಿದ್ದು ಎತ್ತರವಾದ ಬೆಟ್ಟಗಳ ನಡುವೆ ಕಿರಿದಾದ ದಾರಿಯಲ್ಲಿ ಏರುವುದು ಪ್ರಸ್ತರವೆನಿಸುವುದು. ಈ ಎರಡೂ ಗಿರಿದುರ್ಗದ ಭೇದಗಳಾಗಿವೆ.

ಸ್ಥಳದುರ್ಗ: ಹೊರಗೆ ನೀರು ದೊಡ್ಡ ದೊಡ್ಡ ಮರಗಲ ಗುಂಪುಗಳೂ ತೃಣಗುಲ್ಮಲತಾಸ್ತೋಮವೂ ಇಲ್ಲದೆ ಒಳಗೆ ತೃಣಕಾಷ್ಠ ಜಲಸಂಪೂರ್ಣವಾಗಿರುವುದು. ಉದಕಸ್ತಂಭವೆನಿಸುವುದು. ಹೊರಗೆ ಉಪ್ಪಾಗಿಯೂ ಅಪೇಯವೂ ಅಲ್ಪಜಲವುಳ್ಳುದೂ ವೈರಿಣಿ ಎನಿಸುವುದು. ಈ ಎರಡೂ ಸ್ಥಲದುರ್ಗ ಭೇದಗಳಾಗಿರುವವು.

ವನದುರ್ಗ: ಜಲಪರಿಪೂರ್ಣ ಜಲಾಶಯವು ಕೆಸರಿನಿಂದ ಕೂಡಿ ಅತಿ ಶೀತವಾಗಿ ಇರುವಂಥದು ಕರ್ದಮೋದಕವೆನಿಸುವುದು. ಅನೇಕ ತರುನಿಕರ ಪರಿವೃತವೂ ತೃಣಪಟಲ ಪ್ರಾವೃತವೂ ಆಗಿರುವುದು ಸ್ತಂಭನಗಹನವೆನಿಸುವುದು. ಈ ಎರಡು ವನದುರ್ಗದ ಭೇದಗಳಾಗಿರುವವು.

ಈ ರೀತಿಯಲ್ಲಿ ಎಂಟು ವಿಧವಾದ ದುರ್ಗಗಳಲ್ಲಿ ನಾವು ಆಶ್ರಯಿಸಿದ ದುರ್ಗಕ್ಕೆ ದುರ್ಗಗುಣವಿಲ್ಲ ಎಂದು ಹೇಳಲಾಗಿದೆ.[೧೬]

ಕಲ್ಯಾಣ ಚಾಳುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸದಲ್ಲಿ ಜಲದುರ್ಗ, ಗಿರಿದುರ್ಗ, ಮರುದುರ್ಗ, ವನದುರ್ಗ, ಅಶ್ಮ(ಐರಿಣಿ)ದುರ್ಗ, ನರದುರ್ಗ ಜೊತೆಗೆ ಇಟ್ಟಿಗೆಗಳಿಂದ ಕಟ್ಟ ಬೆಳ್ಳಗಿನ ಸುಣ್ಣವನ್ನು ಚೆನ್ನಾಗಿ ಬಳಿದ ಹಾಗೂ ಆಳವಾದ ಕಂದಕದಿಂದ ಸುತ್ತುವರಿಯಲ್ಪಟ್ಟ 'ಇಷ್ಟಿಕಾದುರ್ಗ', ಮಣ್ಣಿನಿಂದ ನಿರ್ಮಿಸಿದ 'ಮೃತ್ತಿಕಾಮಯದುರ್ಗ' ಮತ್ತು ಬಿದಿರು ಕಟ್ಟಿಗೆಗಳಿಂದ ರಚಿತವಾದ 'ದಾರುಮಯದುರ್ಗ' ಎಂದು ಒಟ್ಟು ಒಂಬತ್ತು ಬಗೆಯ ಕೋಟೆಗಳನ್ನು ಕುರಿತು ಹೇಳಿ, ಇದರಲ್ಲಿ ಜಲದುರ್ಗ, ಗಿರಿದುರ್ಗಗಳು ಉತ್ತಮವಾದವುಗಳು, ಉಳಿದವು ಮಧ್ಯಮ ದುರ್ಗಗಳು, ದಾರುದುರ್ಗವು ಕನಿಷ್ಠವಾದುದು ಎಂದು ಉಲ್ಲೇಖಿಸುತ್ತದೆ.[೧೭]

ಪುರಾಣಗಳಲ್ಲಿ ಸಹ ಅನೇಕ ಪ್ರಕಾರದ ಕೋಟೆಗಳ ಪ್ರಸ್ತಾಪ ಮಾಡಿದ್ದಾರೆ. ವಾಯುಪುರಾಣದಲ್ಲಿ ನಾಲ್ಕು ಪ್ರಕಾರದ, ಅಗ್ನಿ ಮತ್ತು ಮತ್ಸ್ಯ ಪುರಾಣಗಳಲ್ಲಿ ಆರು ಪ್ರಕಾರದ ಕೋಟೆಗಳ ಪ್ರಸ್ತಾಪವಿದೆ. ಮಹಾಭಾರತದ ಶಾಂತಿಪರ್ವ, ವಿಷ್ಣುಧರ್ಮೋತ್ತರ ಪುರಾಣ, ವಿಷ್ಣುಧರ್ಮಸೂತ್ರ ಮುಂತಾದವುಗಳಲ್ಲಿ ಆರು ಬಗೆಯ ಕೋಟೆಗಳ ಪ್ರಸ್ತಾಪವಿದೆ. ಭಾಗವತ ಪುರಾಣ ಶಸ್ತ್ರದುರ್ಗ(ಸೈನಿಕರಿಂದ ರಕ್ಷಿತವಾದ ದುರ್ಗ)ದ ಬಗ್ಗೆ ತಿಳಿಸುತ್ತದೆ. ಇದರೊಂದಿಗೆ ಜಲ, ಅಗ್ನಿ ಮತ್ತು ಅನಿಲ ದುರ್ಗ(ನೀರು, ಅಗ್ನಿ ಮತ್ತು ಬಲವಾದ ಗಾಳಿಯಿಂದ ಆವೃತ್ತವಾದ ಕೋಟೆಗಳು)ಗಳನ್ನು ತಿಳಿಸುತ್ತದೆ. ನರದುರ್ಗವೇ ಅತ್ಯುತ್ತಮವೆಂದು ಮಹಾಭಾರತ ತಿಳಿಸುತ್ತದೆ.[೧೮]

ವಿಶ್ವಕರ್ಮ ವಾಸ್ತುಶಿಲ್ಪವು ಕೋಟೆಯ ಪ್ರಾದೇಶಿಕತೆ ಸ್ವರೂಪ, ಅದರ ದ್ವಾರಗಳು ಹಾಗೂ ಅದರ ತಾಂತ್ರಿಕತೆಯ ಆಧಾರದ ಮೇಲೆ ಕೋಟೆಯನ್ನು ೧೨ ವಿಧಗಳಲ್ಲಿ ವಿಂಗಡಿಸುತ್ತದೆ. ಅವುಗಳೆಂದರೆ

೧. **ಪ್ರಾದೇಶಿಕತೆ:** ೧.ಗಿರಿದುರ್ಗ ೨.ವನದುರ್ಗ ೩.ಜಲದುರ್ಗ ೪.ಐರಿಣದುರ್ಗ ೫.ದೈವದುರ್ಗ ೬.ಪರ್ವತದುರ್ಗ ೭.ಕೊರ್ಮದುರ್ಗ

೨. **ದ್ವಾರಗಳು:** ೧.ಏಕಮುಖದುರ್ಗ ೨.ದ್ವಿಮುಖದುರ್ಗ ೩.ಚತುರ್ಮುಖದುರ್ಗ

೩. **ತಾಂತ್ರಿಕತೆ:** ೧.ಪ್ರಭುದುರ್ಗ ೨.ಯುದ್ಧದುರ್ಗ ಎಂದು ವಿಂಗಡಿಸುತ್ತದೆ.[೧೯]

ಮಾನಸಾರವು ಸೈನಿಕ ವಾಸ್ತು ದೃಷ್ಟಿಯಿಂದ ಕೋಟೆಗಳನ್ನು ಏಳು ವಿಧಗಳಲ್ಲಿ ವಿಂಗಡಿಸಿದೆ. ಅದರಲ್ಲಿ ಗಿರಿದುರ್ಗ, ವನದುರ್ಗ, ಜಲದುರ್ಗ, ಪಂಕ(ಮೃತ್ತಿಕಾ)ದುರ್ಗಗಳ ಜೊತೆಗೆ ಯುದ್ಧಭೂಮಿಯಲ್ಲಿ ರಥಗಳಿಂದಾವೃತ್ತವಾದ 'ರಥದುರ್ಗ', ಮಂತ್ರಗಳ ಮೂಲಕ ದೇವರು ಸಂರಕ್ಷಿಸುವ 'ದೇವದುರ್ಗ', ಮೇಲಿನ ಒಂದಕ್ಕಿಂತ ಹೆಚ್ಚು ಅಂಶಗಳನ್ನು ಒಳಗೊಂಡ 'ಮಿಶ್ರದುರ್ಗ' ಎಂದು ಏಳು ಪ್ರಕಾರದ ಕೋಟೆಗಳನ್ನು ಕುರಿತು ವಿಂಗಡಿಸಲಾಗಿದೆ. ಅಲ್ಲದೆ ಮಾನಸಾರವು ದುರ್ಗಗಳಿರುವ ಊರುಗಳನ್ನಾಧರಿಸಿ ಅವುಗಳನ್ನು ಎಂಟು ವಿಧಗಳಲ್ಲಿ ವಿಂಗಡಿಸಿದೆ.

ಶಿಬಿರ: ರಾಜನ ಬೀಡು

ವಾಹಿನೀ ಮುಖ: ಯುದ್ಧಭೂಮಿಯಿಂದ ದೂರವಿರುವ ಸೈನ್ಯದ ನೆಲೆ

ಸ್ಥಾನೀಯ: ರಾಜಧಾನಿ ಅಥವಾ ಸ್ಥಳೀಯ ದುರ್ಗ

ದ್ರೋಣಕ: ನೀರಿನ ಸಮೀಪವಿರುವುದು.

ಸಂವಿದ್ಧ: ಬಹುಶಃ ಜಯವನ್ನು ಕೊಡುವುದು.

ಕೋಲಕ: ಪರ್ವತಮಯ ಪ್ರದೇಶ ಅಥವಾ ಕಾಡಿನಲ್ಲಿರುವುದು.

ನಿಗಮ: ಕಾವಲಿಗಾಗಿ ನಿರ್ಮಿಸಿರುವುದು.

ಸ್ಕಂಧಾವಾರ: ಸೈನ್ಯದ ಬಿಡು.[೨೦]

ಮಯಮತ ಗ್ರಂಥದಲ್ಲಿ ಪಟ್ಟಣದಲ್ಲಿರುವ ಕೋಟೆಗಳನ್ನು ಹದಿನಾಲ್ಕು ವಿಧವಾಗಿ ವಿಂಗಡಿಸಲಾಗಿದೆ.

೧. ಗ್ರಾಮ ೨. ಖೇಟಕ ೩. ಕರ್ವಕ ೪. ದುರ್ಗ ೫. ನಗರ

೬. ರಾಜಧಾನಿ ೭. ಪಟ್ಟಣ ೮. ದ್ರೋಣಕ ೯. ಶಿಬಿರ ೧೦. ಸ್ಕಂಧಾವರ

೧೧. ಸ್ಥಾನೀಯ ೧೨. ವಿಹಂಬಿಕಾ ೧೩. ನಿಗಮ ೧೪. ಸಕಾನಗರ

ಮಾಯಮತ ಗ್ರಂಥವು ಮತ್ತೆ ಕೋಟೆಯನ್ನು ಆಕಾರದ ಆಧಾರದ ಮೇಲೆ ಐದು ವಿಧದಲ್ಲಿ ವಿಂಗಡಿಸಿದೆ.

೧. ಚತುರಸ್ರ ೨. ದೀರ್ಘಚತುರಸ್ರ ೩. ವೃತ್ತ

೪. ವೃತ್ತಾಯತ ೫. ಗೋಲವೃತ್ತಾ

ಪುನಃ ಈ ಗ್ರಂಥವು ಅಳತೆಯ ಆಧಾರದ ಮೇಲೆ ಮೂರು ವಿಧದಲ್ಲಿ ಕೋಟೆಗಳನ್ನು ವರ್ಗೀಕರಿಸಿದೆ.

೧. ಚಿಕ್ಕದು : ೬೦೪ (ದಂಡ ಅಳತೆಯಲ್ಲಿ)

೨. ಮಧ್ಯಮ : ೭೦೪ (ದಂಡ ಅಳತೆಯಲ್ಲಿ)

೩. ದೊಡ್ಡದು : ೭೬೮ (ದಂಡ ಅಳತೆಯಲ್ಲಿ)[೨೧] (೧ ದಂಡ = ೬ ಅಡಿ)

ಕ್ರಿ.ಶ. ೧೭ನೇ ಶತಮಾನದಲ್ಲಿ ಕೆಳದಿ ಬಸವರಾಜ ರಚಿಸಿದ ಶಿವತತ್ವರತ್ನಾಕರದಲ್ಲಿ ಒಂಬತ್ತು ಪ್ರಕಾರದ ದುರ್ಗಗಳ ಬಗ್ಗೆ ಉಲ್ಲೇಖಿಸಲಾಗಿದೆ. ಇಲ್ಲಿ ಬಹುತೇಕ ಸೋಮೇಶ್ವರನ ಮಾನಸೋಲ್ಲಾಸ ಕೃತಿಯನ್ನು ಅನುಸರಿಸಿ ಒಂಬತ್ತು ಪ್ರಕಾರದ ಕೋಟೆಗಳನ್ನು ಇಲ್ಲಿಯೂ ಹೇಳಲಾಗಿದೆ.

“ಜಲದುರ್ಗಂ ಗಿರಿದುರ್ಗಂ ಗಿರಿಪಾಷಾಣನಿರ್ಮಿತಮ್। ಇಷ್ಟಕಾಭಿಃ ಕೃತಂ

ಮಗಂ ದುಗಂ ಸ್ಯಾನ್ಮೃತ್ತಿಕಾಮಯಮ್

ವನದುರ್ಗಂ ಮರುದುರ್ಗಂ ದುರ್ಗಂ ಸ್ಯಾದ್ದಾರುನಿರ್ಮಿತಮ್। ನರದುರ್ಗಂ ಚ

ನವಮಂ ತೇಷಾಂ ವಕ್ಷ್ಯಾಮಿ ಲಕ್ಷಣಮ್”

ಇವುಗಳಲ್ಲಿ ಗಿರಿದುರ್ಗ ಹಾಗೂ ಜಲದುರ್ಗಗಳು ಉತ್ತಮ. . ಉಳಿದ ಕೆಲವನ್ನು ಮಧ್ಯಮವೆನ್ನುತ್ತಾರೆ. ನರದುರ್ಗ ಹಾಗೂ ದಾರುದುರ್ಗಗಳು ಅಧಮ ಎಂದು ಹೇಳಲಾಗಿದೆ.[೨೨]

ಶಾಸನಗಳಿಂದಲೂ ಸಹ ಕೆಲವು ಬಗೆಯ ಕೋಟೆ ಪ್ರಕಾರಗಳು ತಿಳಿದುಬರುತ್ತವೆ. ಕ್ರಿ.ಶ. ೬೪೩ರ ಐಹೊಳೆ ಶಾಸನವು ಸ್ಥಳದುರ್ಗವನ್ನು ಉಲ್ಲೇಖಿಸುತ್ತದೆ. ಪುಲಕೇಶಿಯ ಸೇನಾಸಮುದ್ರವು ಸುತ್ತುವರಿದುದರಿಂದ ಸ್ಥಳದುರ್ಗವಾದ ಬನವಾಸಿಯು ಜಲದುರ್ಗವಾಯಿತೆಂದು ವರ್ಣಿಸುತ್ತದೆ. ಶ್ರವಣಬೆಳಗೊಳದ ಗಂಧವಾರಣ ಬಸದಿಯ ಕ್ರಿ.ಶ. ೧೧೩೧ರ ಶಾಸನವು ಹೊಯ್ಸಳ ವಿಷ್ಣುವರ್ಧನನು ಗಿರಿದುರ್ಗ, ವನದುರ್ಗ, ಜಲದುರ್ಗಾದಿ ಅನೇಕ ದುರ್ಗಗಳನ್ನು ಗೆದ್ದನೆಂದು ತಿಳಿಸುತ್ತದೆ.[೨೩] ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಫಡೆಕನೂರು[೨೪] ಮತ್ತು ಜಟ್ಟಗಿಯ[೨೫] ಕ್ರಿ.ಶ. ೧೨೫೬ ಮತ್ತು ೧೨೫೭ರ ಈ ಶಾಸನಗಳು ಭೂದುರ್ಗ, ಜಲದುರ್ಗ, ವನದುರ್ಗ ಪ್ರಮುಖ ನಾನಾದುರ್ಗಗಳನ್ನು ಯಾದವ ಚಕ್ರವರ್ತಿ ಕನ್ನರದೇವನು ಜಯಿಸಿದನು ಎಂದು ಉಲ್ಲೇಖಿಸುತ್ತದೆ. ಕಾಲದ ಉಲ್ಲೇಖವಿಲ್ಲದ ಗುಂಡಕರ್ಜಗಿ[೨೬] ಶಾಸನವು ಯಾದವ ಸಿಂಘಣನ ಕಾಲಾವಧಿಯದ್ದಾಗಿದ್ದು ಈತನು ಗಿರಿದುರ್ಗ, ವನದುರ್ಗ, ಜಲದುರ್ಗ ಮತ್ತು ನೆಲದುರ್ಗಗಳನ್ನು ನಾಶಪಡಿಸಿದನೆಂದು ನಾಲ್ಕು ಪ್ರಕಾರದ ಕೋಟೆಗಳನ್ನು ಉಲ್ಲೇಖಿಸುತ್ತದೆ. ಸಿರಸಂಗಿಯ ಕ್ರಿ.ಶ. ೧೧೮೬ರ ಶಾಸನವು ದೇವದುರ್ಗದ ವಿವರಣೆಯನ್ನು ನೀಡುತ್ತದೆ. ಮೂರು ಕಡೆ ಪರ್ವತಗಳಿದ್ದು ಒಂದು ಕಡೆ ಮಾತ್ರ ಬಯಲಿದ್ದರೆ ಅಂತಹ ಊರನ್ನು ಖರ್ವಡವೆಂದು ಕರೆಯುತ್ತಾರೆಂದೂ, ಅದರಲ್ಲಿ ನೀರಿನ ಬುಗ್ಗೆಯಿದ್ದರೆ ಅದನ್ನು ದೇವದುರ್ಗವೆನ್ನುತ್ತಾರೆಂದೂ ಅದು ತಿಳಿಸುತ್ತದೆ.[೨೭] ಅಲ್ಲದೆ ವಿಜಾಪುರದ ಆದಿಲ್‌ಶಾಹಿಗಳು ಹೊರಡಿಸಿದ ಪರ್ಶಿಯನ್ ಮತ್ತು ಉರ್ದು ಶಾಸನಗಳು ಕೋಟೆಯ ಬುರುಜು, ದ್ವಾರಗಳನ್ನು ಕುರಿತು ಉಲ್ಲೇಖಿಸುತ್ತವೆ.

ಈ ಮೇಲೆ ಉಲ್ಲೇಖಿಸಿದ ಎಲ್ಲ ಶಾಸ್ತ್ರಗ್ರಂಥಗಳು ಒಟ್ಟು ೪ ರಿಂದ ೯ ರೀತಿಯ ಕೋಟೆಗಳ ಕುರಿತಾಗಿ ಉಲ್ಲೇಖಿಸುತ್ತವೆ. ಮೇಲೆ ಹೇಳಿದ ಕೋಟೆಗಳಲ್ಲಿ ಗಿರಿದುರ್ಗವೇ ಅತ್ಯುತ್ತಮವಾದದ್ದೆಂಬ ಅಭಿಪ್ರಾಯವಿದೆ. ಸಮತಟ್ಟಾದ ಬಯಲು ಪ್ರದೇಶವನ್ನು ಹೊಂದಿದ ವಿಜಾಪುರ ಜಿಲ್ಲೆಯಲ್ಲಿ ಸ್ಥಳದುರ್ಗಗಳೇ ಕಂಡುಬರುತ್ತವೆ. ಜಿಲ್ಲೆಯ ಕೆಲವು ಕೋಟೆಗಳು ನದಿಯ ದಂಡೆಯ ಮೇಲೆ ಕಂಡುಬರುತ್ತವೆಯಾದರೂ ಜಲದುರ್ಗಗಳು ಎಂದು ಹೇಳುವಂತಿಲ್ಲ. ಈ ಕೋಟೆಗಳ ಒಂದು ಭಾಗ ಮಾತ್ರ ನದಿ ಅಥವಾ ಹಳ್ಳಗಳ ಹರಿವಿಗೆ ಹೊಂದಿಕೊಂಡಂತಿದ್ದು ಒಂದು ಭಾಗ

ಮಾತ್ರ ನೈಸರ್ಗಿಕವಾಗಿ ರಕ್ಷಣೆ ಪಡೆಯುತ್ತವೆ. ಅಲ್ಲದೆ ಜಿಲ್ಲೆಯಲ್ಲಿ ನನ್ನ ಅಧ್ಯಯನಕ್ಕೊಳಪಡಿಸಿದ ಕೋಟೆಗಳು ಶಾಸ್ತ್ರಗ್ರಂಥಗಳ ಹಿನ್ನೆಲೆಯಲ್ಲಿ ನಿರ್ಮಿಸಲಾಗಿದೆಯೇ ಎಂಬುದರ ಕುರಿತಾಗಿ ಖಚಿತವಾಗಿ ಹೇಳುವಂತಿಲ್ಲ. ಆದರೂ ರಾಜಧಾನಿ ಕೇಂದ್ರಿತವಾದ ವಿಜಾಪುರ ಕೋಟೆ, ಗಡಿ ಬಂಧಕ ಕೋಟೆಗಳಾದ ಹಲಸಂಗಿ, ತಾಳಿಕೋಟೆ ಹಾಗೂ ಕೋಟ್ನಾಳ್, ಮುದ್ದೇಬಿಹಾಳ, ನಾಗಬೇನಾಳಗಳಲ್ಲಿ ಶಾಸ್ತ್ರಗ್ರಂಥಗಳು ಹೇಳುವ ಸ್ಥಳದುರ್ಗದ ಲಕ್ಷಣಗಳಿಗೆ ಬಹುತೇಕ ಹೊಂದಿಕೊಳ್ಳುತ್ತವೆ.

೩.೩. ಕೋಟೆಯ ಮಹತ್ವ

ಭದ್ರವಾದ ಕೋಟೆಯು ಪ್ರಾಚೀನ ಕಾಲದಿಂದಲೂ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಕೋಟೆಯು ಒಂದು ಜನ ಸಮುದಾಯಕ್ಕಷ್ಟೇ ಅಲ್ಲದೆ ರಾಜಕೀಯವಾಗಿ, ಆರ್ಥಿಕವಾಗಿ ರಾಜನಿಗೆ ರಕ್ಷಣೆ ನೀಡುತ್ತಿತ್ತು. ಒಂದು ಸಾಮ್ರಾಜ್ಯದ ಅಳಿವು-ಉಳಿವು ಒಂದಲ್ಲಾ ಒಂದು ರೀತಿಯಲ್ಲಿ ಬಲವಾದ ಕೋಟೆಯನ್ನು ಆಶ್ರಯಿಸಿತ್ತು. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ ಕೃತಿಗಳು, ಶಾಸನಗಳು ಕೋಟೆಯ ಮಹತ್ವವನ್ನು ತಿಳಿಸಿಕೊಡುತ್ತವೆ. ಮನುಸ್ಮೃತಿಯಲ್ಲಿ,

"ಯಥಾ ದುರ್ಗಾಶ್ರಿ ತಾನೇತಾನ್ನೋಪಹಿಂಸಂತಿ ಶತ್ರವಃ ।

ತಥಾರಯೋ ನ ಹಿಂಸಂತಿ ನೃಪಂ ದುರ್ಗಸಮಾಶ್ರಿತಂಃ

ಯಾವ ರೀತಿ ದುರ್ಗಗಳಲ್ಲಿ ಆಶ್ರಯ ಪಡೆದ ಪ್ರಾಣಿಗಳನ್ನು ಶತ್ರುಗಳು ಹಿಂಸಿಸಲಾರರೋ ಅದೇ ರೀತಿ ಉತ್ತಮವಾದ ದುರ್ಗವನ್ನು ನಿರ್ಮಿಸಿಕೊಂಡು ಅದರಲ್ಲಿ ಆಶ್ರಯ ಪಡೆದ ರಾಜನನ್ನು ವೈರಿಗಳು ಹಿಂಸಿಸಿ ಕೊಲ್ಲಲು ಸಾಧ್ಯವಿಲ್ಲ.

"ಏಕಃ ಶತಂ ಯೋಧಮತಿ ಪ್ರಾಕಾರಸ್ಥೋ ಧನುರ್ಧರಃ ।

ಶತಂ ದಶಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇ"

ಕೋಟೆಯ ಗೋಡೆಯ ಮೇಲೆ ನಿಂತು ಯುದ್ಧ ಮಾಡುವ ಒಬ್ಬ ಧನುರ್ಧರನು(ಬಿಲ್ಲಾಳು) ನೂರುಜನ ಕೆಳಗಿರುವ ವೈರಿ ಸೈನಿಕರನ್ನು ಸಂಹರಿಸಬಲ್ಲನು. ಅದೇ ರೀತಿ ನೂರು ಜನ ಧನುರ್ಧಾರಿಗಳು ಕೆಳಗಿರುವ ಹತ್ತು ಸಾವಿರ ಸೈನಿಕರನ್ನು ಸೋಲಿಸಬಲ್ಲರು. ಆದ್ದರಿಂದ ರಾಜನು ಭದ್ರವಾದ ಕೋಟೆಯನ್ನು (ದುರ್ಗವನ್ನು) ನಿರ್ಮಿಸತಕ್ಕದ್ದು.[೨೮]

ಸೋಮದೇವಸೂರಿ ವಿರಚಿತಂ ನೀತಿವಾಕ್ಯಾಮೃತದಲ್ಲಿ "ಅದುರ್ಗಸ್ಯ ರಾಜ್ಞಃ ಪಯೋಧಿಮಧ್ಯೇ ಪೋತಚ್ಯುತ ಪಕ್ಷಿವದಾಪದಿ ನಾಸ್ತ್ಯಾಶ್ರಯಃ" ದುರ್ಗವಿಲ್ಲದ ರಾಜನಿಗೆ ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿಗೆ ಹೇಗೋ ಹಾಗೆ ಆಪತ್ತಿನಲ್ಲಿ ಆಶ್ರಯವಿರುವುದಿಲ್ಲ.[೨೯]

ದುರ್ಗಸಿಂಹನ ಪಂಚತಂತ್ರದಲ್ಲಿ 'ದುರ್ಗ ಹೀನೋನರಪತಿಃ ವಾತಾಭ್ರಾವಯವೈಸ್ಸಮಃ', ದುರ್ಗಗಳಿಲ್ಲದ ಅರಸನು ಗಾಳಿಯೊಡಗೂಡಿದ ಮೋಡಗಳಿಗೆ ಸಮ ಎಂಬ ನೀತಿಯುಂಟು.[೩೦]

ಕೆಳದಿ ಬಸವರಾಜ ರಚಿಸಿದ ಶಿವತತ್ವರತ್ನಾಕರದಲ್ಲಿ ಕೋಟೆಯ ಮಹತ್ವವನ್ನು ಕುರಿತು

"ವಿಷಹೀನೋ ಯಥಾ ನಾಗೋ ಮದಹೀನೋ ಯಥಾಗಜಃ ।
ಸರ್ವೇಷಾಂ ವಶ್ಯತಾಂ ಯಾತಿ ದುರ್ಗಹೀನಸ್ತಥಾ ನೃಪಃ" ।

ಕೋಟೆಯಿಲ್ಲದ ರಾಜನು ವಿಷವಿಲ್ಲದ ಹಾವಿನಂತೆ, ಮದವಿಲ್ಲದ ಆನೆಯಂತೆ ಎಲ್ಲರಿಗೂ ಸುಲಭವಾಗಿ ವಶವಾಗಿಬಿಡುವನು.[೩೧] ಕೋಟೆಯು ಶತ್ರುಗಳ ಎದುರಿಗೆ ಹೋರಾಡುವವರಿಗೆ ಆಧಾರವಾಗಿರುತ್ತದೆ. ಅಂತೆಯೇ ಶತ್ರುಗಳಿಗೆ ಅಂಜಿ ಆತ್ಮರಕ್ಷಣೆ ಮಾಡಿಕೊಳ್ಳಬಯಸುವಂತವರಿಗೂ ಕೋಟೆಯು ರಕ್ಷಣೆಯನ್ನು ನೀಡುತ್ತದೆ. ಎತ್ತರ, ಅಗಲ, ದೃಢತೆ, ದುರ್ಗಮತೆ ಈ ನಾಲ್ಕೂ ಸೇರಿರುವ ಕಿರಿದಾದ ದ್ವಾರ, ವಿಶಾಲವಾದ ಒಳ ಆವರಣವನ್ನು ಹೊಂದಿದ್ದು ಆಹಾರ ಸಾಮಗ್ರಿಗಳನ್ನು ಹೇರಳವಾದ ಪ್ರಮಾಣದಲ್ಲಿ ಸಂಗ್ರಹಿಸಿಕೊಂಡಿರಬಲ್ಲುದೋ ಹಾಗೂ ತನ್ನೊಳಗೆ ನೆಲೆಸಿರುವಂಥವರನ್ನು ಶತ್ರುಗಳಿಂದ ರಕ್ಷಿಸಬಲ್ಲುದೋ ಅದು ಕೋಟೆ ಎನಿಸಿಕೊಳ್ಳುತ್ತದೆ. ಎಂದು ಕುಂದಕುಂದಾಚಾರ್ಯ ವಿರಚಿತ ತಿರುಕ್ಕುಱಳ್‌ನಲ್ಲಿ ತಿಳಿಸಲಾಗಿದೆ.[೩೨] ಕೋಟೆಯ ಒಳಗಿರುವ ಜನರು ಕಾರ್ಯ ಸಾಮರ್ಥ್ಯದ ಹಿರಿಮೆಯನ್ನು ಮೆರೆಯದಿದ್ದರೆ, ಏನೆಲ್ಲಾ ವೈಶಿಷ್ಟ್ಯಗಳನ್ನು ಹೊಂದಿದ್ದರೂ ಕೋಟೆ ವ್ಯರ್ಥವಾಗುತ್ತದೆ.

ಕನಕದಾಸರ 'ಮೋಹನ ತರಂಗಿಣಿ'ಯಲ್ಲಿನ ಕೋಟೆಯ ಮಹತ್ವವನ್ನು ಹೇಳುವ ಒಂದು ಪದ್ಯ ಹೀಗಿದೆ.

"ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆರ್ಗದ ವಜ್ರಲಾಳವಿಂಡಿಗೆಯ
ಅದಟನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿಗಳಿ ಗೋಚರವು"

ಮದ್ದಾನೆಯ ಸೊಂಡಿಲ ಸಹಾಯದಿಂದ ನೂಕಿ ಬಂಧಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತ ಕವಿಗಳಿಗೂ ಅಸಾಧ್ಯವಾದುದು ಎಂದು ವರ್ಣಿಸುತ್ತದೆ.[೩೩]

ಕ್ರಿ.ಶ. ೧೧೭೬ರ ಒಂದು ಶಾಸನದಲ್ಲಿ ತುಂಗಭದ್ರಾ ನದಿಯ ದಕ್ಷಿಣದಲ್ಲಿದ್ದ ಬಲ್ಲಕುಂದೆ ನಾಡಿನ ಕುರಗೋಡು ಎಂಬ ಊರಿನ ಕೋಟೆಯ ವರ್ಣನೆ ಬರುತ್ತದೆ. ಈ ಶಾಸನವು ಕೋಟೆಗಳು ಯುದ್ಧದಲ್ಲಿ ಯಾವ ರೀತಿಯಲ್ಲಿ ರಕ್ಷಣೆ ನೀಡುತ್ತಿದ್ದವು ಎಂಬ ಅಂಶವನ್ನು ಬಹಳ ಸೊಗಸಾದ ರೀತಿಯಲ್ಲಿ ವರ್ಣಿಸುತ್ತದೆ.

ಚೋಳನನಾಳುಮಾಡುವುದು ಗೂರ್ಜ್ಜರರಂಸಲೆ ತರ್ದ್ದಿಕುಂ ಕರ
ಲಾಳನ ಸಾಳಿಮಾಡುವುದು ಪಾಂಡ್ಯನನಂಡಲೆಗುಂ ತೆಲುಂಗಭೂ
ಪಾಲನನೊಳಿದಿಕ್ಕೆಯನೆ ಮಾಡುವುದೀ ಕುಱುಗೋಡೆ ಕೋಟೆ ತಾಂ
ಕಾಳಗಮೆಂದಡೇಳುಮಡಿ ಪೆರ್ಚ್ಚುವುದಚ್ಚರಿ ಯಾರೋ ಕಾದುವರ್.

ಕಾಳಗವೆಂದರೆ ತಾನು ಇದ್ದುದಕ್ಕಿಂತ ಏಳುಪಟ್ಟು ಹೆಚ್ಚುತ್ತಿತ್ತಂತೆ ಈ ಕೋಟೆ. ಇದು ಕವಿಯ ಉತ್ಪ್ರೇಕ್ಷೆಯಾದರೂ ಕೋಟೆ ಹೇಗೆ ಸಂರಕ್ಷಣೆಯ ಸಾಧನವಾಗಿತ್ತು ಎಂಬ ಅಂಶ ಸುಸ್ಪಷ್ಟವಾಗುತ್ತದೆ.[೩೪]

೩.೪. ಸ್ಥಳದ ಆಯ್ಕೆ

ವಾಸ್ತು ಎಂದರೆ ದೇವಮನುಷ್ಯರು ವಾಸಿಸುವ ಸ್ಥಳ. ಆದುದರಿಂದ ವಾಸ್ತುವು ಧರೆ, ಹರ್ಮ್ಯ, ಯಾನ, ಪರ್ಯಂಕಗಳೆಂದು ನಾಲ್ಕು ವಿಧ. ಭೂಮಿಯ ಸನ್ನಿವೇಶ, ಗುಣಗಳ ಪರೀಕ್ಷೆಯನ್ನು ಮೊದಲು ಮಾಡಬೇಕು, ಗುಂಡಿಯನ್ನಗೆದು ಮಣ್ಣನ್ನು ಚೆನ್ನಾಗಿ ಶೋಧಿಸಬೇಕು. ಅನಂತರ ನಿವೇಶನದ ವಿನ್ಯಾಸ ಮುಂತಾದವನ್ನು ಸೂತ್ರಧಾರನು ನಿರ್ಧರಿಸಬೇಕು. ದೇವಾಲಯ, ಅರಮನೆ, ಗ್ರಾಮ, ಪಟ್ಟಣಗಳನ್ನು ಕಟ್ಟಲು ಆರಂಭಿಸುವುದಕ್ಕೆ ಮೊದಲೇ ರಸ್ತೆ, ಚರಂಡಿ ಸರಹದ್ದು, ಕೋಟೆಯ ಗೋಡೆ, ಕಂದಕ ಮುಂತಾದವುಗಳಿಗೆಲ್ಲ ಅವಕಾಶವಾಗುವಂತೆ ತಲವಿನ್ಯಾಸ ಮಾಡಬೇಕು. ಗ್ರಾಮಗಳ ಆಕಾರವು ದಂಡಕ, ಸರ್ವತೋಭದ್ರ, ನಂದ್ಯಾವರ್ತ, ಪದ್ಮಕ, ಸ್ವಸ್ತಿಕ, ಪ್ರಸ್ತರ, ಕಾರ್ಮುಕ, ಚತುರ್ಮುಖವಾಗಿರಬಹುದು. ಎಂದು ಶಾಸ್ತ್ರಗ್ರಂಥಗಳು ಹೇಳುತ್ತವೆ.[೩೫]

ತಮಿಳಿನ ಪ್ರಾಚೀನ ಕೃತಿಯಾದ ತಿರುಕ್ಕುಱಳ್‌ನಲ್ಲಿ ಸ್ಥಳದ ಆಯ್ಕೆ ಕುರಿತು ಹೇಳಲಾಗಿದೆ. ಶತ್ರುವನ್ನು ಮುತ್ತುವುದಕ್ಕೆ ತಕ್ಕ ಸ್ಥಳವನ್ನು ಕಂಡುಕೊಳ್ಳದೆ ಅರಸನಾದವನು ಅವನಿಗೆ ಎದುರಾಗಿ ಯುದ್ಧವನ್ನು ಮಾಡಬಾರದು ಎಂದು ಹೇಳಲಾಗಿದೆ. ತಕ್ಕ ಸ್ಥಳವನ್ನು ನೋಡಿ, ಶತ್ರುಗಳನ್ನು ಕಾದುಕೊಂಡು ಹಗೆಗಳನ್ನು ಎದುರಿಸಿ ಹೋರಾಡಿದರೆ, ಶಕ್ತಿ ಇಲ್ಲದವರೂ ಶಕ್ತವಂತರಾಗಿ ಗೆಲ್ಲುವರು. ಅಲ್ಲದೆ ಶತ್ರುಗಳಿಗೆ ಕೋಟೆ ಮೊದಲಾದ ರಕ್ಷಣೆ ಸೇನಾಬಲಗಳು ಇಲ್ಲದಿದ್ದರು ಅವರ ಸ್ವಂತ ನೆಲದಲ್ಲಿ ಹೊಕ್ಕು ಅವರೊಂದಿಗೆ ಹೋರಾಡುವುದು ಅಸಾಧ್ಯ. ವೀರಯೋಧನಂತಿರುವ ಧೈರ್ಯಶಾಲಿಯಾದ ಆನೆ ಕೂಡ ಕಾಲು ಹುಗಿಯುವ ಕೆಸರು ಮಣ್ಣಿನಲ್ಲಿ ಸಿಕ್ಕಿಬಿದ್ದಾಗ ನರಿಗಳು ಅದನ್ನು ಕೊಂದುಬಿಡುತ್ತವೆ.[೩೬] ಹೀಗಾಗಿ ಕೋಟೆ ಕಟ್ಟುವ ಸ್ಥಳವನ್ನು ಆಯ್ಕೆ ಮಾಡುವಾಗ ಆಲೋಚಿಸಿ ಸುಲಭವಾಗಿ ಆ ಸ್ಥಳವು ಶತ್ರುಗಳಿಗೆ ಆಕ್ರಮಣವಾಗದಂತೆ ನೋಡಿಕೊಳ್ಳಬೇಕು. ಆಗ ಧೈರ್ಯವೊಂದಲ್ಲದೆ ಬೇರೆ ಸಾಧನದ ಅಗತ್ಯವಿಲ್ಲ ಎಂದು ಹೇಳಲಾಗಿದೆ.

ಹೇರಳವಾದ ಕೃಷಿಸಂಪತ್ತು ವಾಸಿಸಲು ಯೋಗ್ಯವಾದ ಭೂಮಿ, ಸ್ವಾಭಾವಿಕವಾಗಿ ರಕ್ಷಣೆಯನ್ನುಂಟುಮಾಡುವ ನದಿ, ಹಳ್ಳ, ಕೊಳ್ಳಗಳು ಇರುವ ಸ್ಥಳವು ಕೋಟೆ ಕಟ್ಟಲು ಆಯ್ಕೆಗೆ ಯೋಗ್ಯವಾದುದು. ಮನುಸ್ಮೃತಿಯಲ್ಲಿ

ಜಾಂಗಲಂ ಸಸ್ಯಸಂಪನ್ನ ಮಾರ್ಯಪ್ರಾಯಮನಾವಿಲಂ ।
ರಮ್ಯಮಾನತಸಾಮಂತಂ ಸ್ವಾಜೀವ್ಯಂ ದೇಶಮಾವಸೇತ್

ಫಲವತ್ತಾದ, ಸಸ್ಯಸಂಪನ್ನವಾದ, ಸಜ್ಜನರು ವಾಸಿಸುವ, ರೋಗೋಪದ್ರವಗಳಿಲ್ಲದಿರುವ, ರಮ್ಯವಾದ, ಸಾಮಂತ ಮಾಂಡಲಿಕರಿರುವ ಹಾಗೂ ಜೀವನ ವೃತ್ತಿಗಳಿಗನುಕೂಲವಾದ ಪ್ರದೇಶವನ್ನು ರಾಜನು ವಾಸಿಸಲು ಆರಿಸಿಕೊಳ್ಳಬೇಕು.[೩೭] ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ್ಯದ ಮಧ್ಯದಲ್ಲಿ ಕೋಶವನ್ನು ರಕ್ಷಿಸಲು ವಾಸ್ತುವಿದ್ಯಾನಿಪುಣರ ಮೆಚ್ಚುಗೆಗೆ ಪಾತ್ರವಾದ, ನದಿಸಂಗಮ, ಎಂದಿಗೂ ಬತ್ತಿಹೋಗದ ಮಡುವು, ಸರೋವರ ಅಥವಾ ಕೆರೆಗಳ ಸಮೀಪದಲ್ಲಿ ವೃತ್ತಾಕಾರ, ಆಯತಾಕಾರ, ಚಚ್ಚೌಕವಾಗಿ ಸ್ಥಾನೀಯವೆಂಬ ಮಹಾಗ್ರಾಮವನ್ನು ಕಟ್ಟಿಸಬೇಕು. ಅಲ್ಲಿ ನೀರು ಪ್ರದಕ್ಷಿಣೆಯಾಗಿ ಹರಿಯುತ್ತಿರಬೇಕು. ಅದು ಭೂ–ಜಲಮಾರ್ಗಗಳಿಂದ ಕೂಡಿರಬೇಕು.[೩೮] ಅಂತಹ ಸ್ಥಳವು ಕೋಟೆ ಕಟ್ಟಲು ಉಪಯುಕ್ತವಾದ ಸ್ಥಳ ಎಂದು ಹೇಳಲಾಗಿದೆ.

ಕೃಷ್ಣಾ, ಭೀಮಾ ಮತ್ತು ಡೋಣಿ ನದಿಗಳು ಹರಿಯುವ ಈ ಜಿಲ್ಲೆಯು ಸಮತಟ್ಟಾದ ಭೂ ಪ್ರದೇಶದಿಂದ ಕೂಡಿದ್ದು, ಫಲವತ್ತಾದ ಕಪ್ಪುಮಣ್ಣಿನ ಭೂಮಿಯನ್ನು ಹೊಂದಿದೆ. ಇದು ಕೃಷಿಗೆ ಅತ್ಯುಪಯುಕ್ತವಾಗಿದ್ದು ಜನವಸತಿಯು ನೆಲೆ ನಿಲ್ಲುವುದಕ್ಕೂ ಯೋಗ್ಯಸ್ಥಳವಾಗಿದೆ. ಜಿಲ್ಲೆಯ ಪ್ರತಿಯೊಂದು ಗ್ರಾಮಗಳು ಮತ್ತು ಕೋಟೆಗಳನ್ನು ಸ್ಥಾಪಿಸಲು ಕಪ್ಪುಮಣ್ಣಿನ ಪ್ರದೇಶವನ್ನು ಬಿಟ್ಟು ಗರಸುಮಣ್ಣಿನಿಂದ ಕೂಡಿದ ಗಟ್ಟಿಯಾದ ಭೂಮಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕಾರಣ, ಮಳೆ ಬಂದಾಗ ಕಪ್ಪುಮಣ್ಣು ಕೇಸರಿನಿಂದ ಆವೃತವಾಗುತ್ತದೆ ಹಾಗೂ ಕಟ್ಟಡಗಳನ್ನು ನಿರ್ಮಿಸುವ ತಳಪಾಯ ಗಟ್ಟಿಯಾಗಿದ್ದು ಇಲ್ಲಿ ನಿರ್ಮಿಸಿದ ಮನೆ, ಕೋಟೆ ಇತರ ಕಟ್ಟಡಗಳು ಬಹುದಿನ ಬಾಳಿಕೆ ಬರುತ್ತವೆ. ಹೀಗಾಗಿ ಗ್ರಾಮಗಳನ್ನು ನಿರ್ಮಿಸುವಾಗ ಗರಸು ಮಣ್ಣಿನ ಭೂಮಿಯನ್ನು ಆಯ್ದುಕೊಂಡಿದ್ದು ಕಂಡುಬರುತ್ತದೆ. ಅಲ್ಲದೆ ಪ್ರಾಗಿತಿಹಾಸ ಕಾಲದಿಂದಲೂ ಅತಿ ಹೆಚ್ಚು ನೆಲೆಗಳನ್ನು ಹೊಂದಿರುವ ಜಿಲ್ಲೆಯಲ್ಲಿ ಗ್ರಾಮಗಳು ಬೇರೆ ಕಡೆ ಸ್ಥಳಾಂತರ ಗೊಂಡಿರದೆ ಪ್ರಾಚೀನ ಕಾಲದಿಂದಲೂ ಈ ಮೂಲ ನೆಲೆಗಳಲ್ಲಿಯೇ ವಾಸಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಇಂತಹ ನೆಲೆಗಳು ಗರಸುಮಣ್ಣಿನಿಂದ ಕೂಡಿದ್ದು ಸುತ್ತಲೂ ಕಪ್ಪುಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಹೀಗಾಗಿ ಆಹಾರ ಸಂಗ್ರಹಣೆಗೆ, ಮನೆಗಳ ನಿರ್ಮಾಣಕ್ಕೆ ಉಪಯುಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಬೆಟ್ಟ ಗುಡ್ಡಗಳನ್ನು ಹೊಂದಿರದ ಈ ಪ್ರದೇಶದಲ್ಲಿ ಅನೇಕ ಸ್ಥಳದುರ್ಗಗಳೇ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ.

೩.೫. ಕೋಟೆಯ ಲಕ್ಷಣಗಳು

ರಕ್ಷಣಾ ವಾಸ್ತುಶಿಲ್ಪ ಎಂದರೆ ಕೇವಲ ಕೋಟೆಗೋಡೆ ಮಾತ್ರವಲ್ಲ. ಕೋಟೆಯೊಂದಿಗೆ ಹತ್ತು ಹಲವು ಸ್ಮಾರಕಗಳಿವೆ. ಅವುಗಳಲ್ಲಿ ಮುಖ್ಯವಾಗಿ ಕಂದಕ, ವಪ್ರ, ಕೋಟೆಗೋಡೆ, ತೆನೆ, ಅಟ್ಟಾಲಕ, ಬುರುಜು, ದ್ವಾರಗಳು, ಬಂದೂಕು ಕಿಂಡಿಗಳು ಪ್ರಮುಖವಾಗಿವೆ. ಪ್ರಾಚೀನ ಶಾಸ್ತ್ರಗ್ರಂಥಗಳು, ಜನಪದ ಸಾಹಿತ್ಯ ಕೃತಿಗಳಲ್ಲಿ ಮತ್ತು ಮೌಖಿಕ ಉಲ್ಲೇಖಗಳಲ್ಲಿ ಕೋಟೆಯ ಲಕ್ಷಣಗಳು ಮತ್ತು ಅವುಗಳ ಪ್ರಾಮುಖ್ಯತೆ ಕುರಿತು ಹೇಳಲಾಗಿದೆ. ಹರಿಹರನ 'ಗಿರಿಜಾಕಲ್ಯಾಣ'ದಲ್ಲಿ ಕೋಟೆ ಮತ್ತು

ಕೋಟೆಯೊಳಗೆ ಇರುವ ಅಂಗಾಂಗಳ ವರ್ಣನೆ, ಇವು ರಕ್ಷಕರಿಂದ ಯಾವ ರೀತಿಯಾಗಿ ಬಳಕೆಯಾಗುತ್ತಿದ್ದವು. ಎಂಬುದನ್ನು ಇಲ್ಲಿ ಉಲ್ಲೇಖಿಸಿದೆ.

ಪಳಕಿ(ಸ್ಪಟಿಕ)ನ ಕೋಂಟೆ ಬಟ್ಟದೆನೆ ಬೇವಿನದಂಡೆ ನಭಕ್ಕೆ ಮೀರುವ
ಟ್ಟಳೆ ನಿಮಿರ್ದೇರು ಪಾರುವ ಪತಾಕೆ ವಿರಾಜಿತಗೊಂಟು ಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿಪಾಳ್ವೆರಿ ಡೆಂಕಣಿ ಸಾರಾಮಾರಿಯ
ಗ್ಗಳಲಿಸುವ ಗೋಪುರಂ ಪುಲಿಮೊಗಂ ಮೆರುಗುಂ ಪುರದೊಳ್ ನಿರಂತರ॥[೬೯]

ಪ್ರಸ್ತುತ ಈ ಕೋಟೆಯ ಲಕ್ಷಣಗಳನ್ನು ಮತ್ತು ಅವುಗಳ ತಂತ್ರಗಾರಿಕೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

ಕಂದಕ

ಕಂದಕಕ್ಕೆ ಅಗಳು, ಪರಿಖೆ ಎಂದು ಕರೆಯಲಾಗುತ್ತದೆ. ಕೋಟೆಯ ಸುತ್ತಲೂ ಮೂರು ಸುತ್ತಿನ ಕಂದಕವು ಒಂದಾದ ಮೇಲೊಂದರಂತೆ ಒಂದೊಂದು ದಂಡದ(೧೬೮ ಅಂಗುಲ= ೧೪ ಅಡಿ) ಅಂತರದಲ್ಲಿರಬೇಕು. ೧೪, ೧೨ ಇಲ್ಲವೇ ೧೦ ದಂಡಗಳಷ್ಟು ಅಗಲವಾಗಿ ಕಂದಕಗಳಿರಬೇಕು. ಈ ಕಂದಕದ ಅಗಲದ ಪರಿಮಾಣಕ್ಕಿಂತ ಕಾಲು ಅಥವಾ ಅರ್ಧದಷ್ಟು ಕಡಿಮೆ ಇದರ ಆಳವಿರಬೇಕು. ಕನಿಷ್ಠ ಮೂರನೇ ಒಂದು ಭಾಗದಷ್ಟು ಆಳವಿರಬೇಕು. ತಳಪಾಯದಿಂದ ಮೇಲೆ ಕಲ್ಲು ಅಥವಾ ಇಟ್ಟಿಗೆಗಳಿಂದ ಕಟ್ಟಿರಬೇಕು. ಈ ಕಂದಕಗಳನ್ನು ನೀರು ಬರುವವರೆಗೂ ತೋಡಬೇಕು. ಹಾಗೆ ಮಾಡಿದರೆ ಸಹಜವಾದ ನೀರಿನ ಚಿಲುಮೆ ಇದಕ್ಕೆ ಲಭ್ಯವಾಗುತ್ತದೆ. ಇಲ್ಲವಾದರೆ ಈ ಕಂದಕಕ್ಕೆ ಹೊರಗಿನಿಂದ ನೀರಿನ ವ್ಯವಸ್ಥೆ ಮಾಡಬೇಕು.[೭೦] ಕೆಲ ಸಂದರ್ಭಗಳಲ್ಲಿ ನದಿ ಆಣೆಕಟ್ಟು, ಕೆರೆ, ಹಳ್ಳ ಮತ್ತು ಆಳವಾದ ಬಾವಿಗಳಿಂದ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿತ್ತು. ಮೋಹನ ತರಂಗಿಣಿಯಲ್ಲಿ ಕಂದಕದ ವರ್ಣನೆಯನ್ನು ಕುರಿತು

ನೆಗರು ನೀರಾನೆ ಪಾಠೀನ ಕಚ್ಛಪಕರ
ಯುಗಳ ಕರ್ಕಾಟಕ ನಿಚಯ
ಜಗಳಕ್ಕೆ ಬಪ್ಪ ಶತ್ರುಗಳ ಖಂಡಿಪೆ ವೆಂ
ದಗಳೊಳು ಫಳಿ ಫಳಿಸಿದವು.

ಕೋಟೆಯ ಕಂದಕದಲ್ಲಿ ಮೊಸಳೆ, ನೀರಾನೆ, ಮೀನು, ಆಮೆ, ಏಡಿಗಳನ್ನು ಬಿಡಬೇಕು. ಇವು ಕದನಕ್ಕೆ ಬರುವ ಶತ್ರುಗಳು ಕಂದಕದಲ್ಲಿಳಿದು ದಾಟುವಾಗ ಕೊಲ್ಲುತ್ತವೆ. ಹೀಗೆ ಕಂದಕಗಳು ಶತ್ರುಗಳಿಗೆ ಯಮಪಾಶವಾಗಿದ್ದವು.[೭೧] ಶತ್ರುಗಳು ಕೋಟೆ ಗೋಡೆಯ ಹತ್ತಿರ ಸುಳಿಯದಂತೆ ಕಂದಕಗಳು ಕೋಟೆಯ ರಕ್ಷಣೆಯಲ್ಲಿ ಪರಿಣಾಮಕಾರಿಯಾಗಿದ್ದವು. ಬಯಲುಸೀಮೆಯ ಪ್ರದೇಶವಾದ

ವಿಜಾಪುರ ಪ್ರದೇಶದಲ್ಲಿ ನಿರ್ಮಾಣವಾದ ಬಹುತೇಕ ಕೋಟೆಗಳು ಸ್ಥಳದುರ್ಗಗಳಾಗಿದ್ದು ಕಂದಕವನ್ನು ಹೊಂದಿವೆ. ಕಂದಕವನ್ನು ತೋಡುವಾಗ ಅದರಿಂದ ತೆಗೆದ ಕಲ್ಲು ಮತ್ತು ಮಣ್ಣನ್ನು ಬಳಸಿ ವಿಜಾಪುರ ಕೋಟೆಯನ್ನು ನಿರ್ಮಿಸಿದ್ದನ್ನು ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ರಚಿತವಾದ ಸಾಹಿತ್ಯಕೃತಿಗಳು ಸ್ಪಷ್ಟಪಡಿಸುತ್ತವೆ. ಔರಂಗಜೇಬನು ಕ್ರಿ.ಶ. ೧೬೮೬ರಲ್ಲಿ ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಿದಾಗ ದೀರ್ಘಾವಧಿವರೆಗೆ ಕೋಟೆ ಕೈವಶವಾಗಲಿಲ್ಲ. ಆಗ ಕಂದಕವನ್ನು ಕಲ್ಲು ಮಣ್ಣಿನಿಂದ ಮುಚ್ಚಿ, ಕೋಟೆಯನ್ನು ವಶಪಡಿಸಿಕೊಳ್ಳಬೇಕು ಎಂದು ಹೇಳುತ್ತಾನೆ. ಹೀಗೆ ಕೋಟೆಯ ಸುತ್ತಲೂ ಕಂದಕವನ್ನು ನಿರ್ಮಿಸಿ ಶತ್ರುಗಳ ದಾಳಿಯನ್ನು ತಡೆಯುವ ತಂತ್ರ ಇದಾಗಿತ್ತು. ವಿಜಾಪುರ ಜಿಲ್ಲೆಯ ತಾಳಿಕೋಟೆ, ಬಲದಿನ್ನಿಯಂತಹ ಕೆಲವು ಕೋಟೆಗಳು ಮಾತ್ರ ನದಿಗಳು ಮತ್ತು ಹಳ್ಳಗಳ ದಂಡೆಗಳ ಮೇಲೆ ಇರುವುದರಿಂದ ನಿಸರ್ಗದತ್ತ ಕಂದಕವಾಗಿ ಒಂದು ಪಾರ್ಶ್ವಕ್ಕೆ ಮಾತ್ರ ರಕ್ಷಣೆಯನ್ನು ಪಡೆಯುತ್ತಿದ್ದವು.

ವಪ್ರ

ಕೋಟೆಯಿಂದ ಇಳಿಜಾರಾಗಿರುವ ಇಳಕಲ್ಲು ಮತ್ತು ಮಣ್ಣಿನ ಇಳಿವೋರೆಗೆ ವಪ್ರ ಎಂದು ಕರೆಯಲಾಗಿದೆ. ಈ ಇಳಿವೋರೆ ವ್ಯವಸ್ಥೆಯ ವಿಧಾನವು ಹೆಚ್ಚಾಗಿ ಸ್ಥಳದುರ್ಗಗಳಲ್ಲಿ ಕಂಡುಬರುತ್ತವೆ.[೪೨] ಕಂದಕದಲ್ಲಿ ತೆಗೆದ ಮಣ್ಣಿನಿಂದ ಕಂದಕದಿಂದ ನಾಲ್ಕು ದಂಡ ದೂರದಲ್ಲಿ ಆರು ದಂಡ ಎತ್ತರ ಇರುವಂತೆ ಕೋಟೆಗೆ ಆಧಾರವಾದ ವಪ್ರವನ್ನು ನಿರ್ಮಿಸಬೇಕು. ಈ ಸಂದರ್ಭದಲ್ಲಿ ಮಣ್ಣು ಜಾರದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು. ಇದು ಕೆಳಗೆ ವಿಸ್ತಾರವಿದ್ದು ಮೇಲೆ ಬಂದಂತೆ ಕೃಶವಾಗಿ ಊರ್ಧ್ವಾಚಯದಂತೆ ಅಥವಾ ಎಲ್ಲೆಡೆ ಒಂದೇ ವಿಧವಾಗಿರುವ ಮಂಚಪೃಷ್ಠ ಅಥವಾ ಕೆಳಗೆ ಮೇಲೆ ಕೃಶವಾಗಿ ಮಧ್ಯೆ ವಿಸ್ತಾರವಾಗಿರುವ ಕುಂಭಕುಕ್ಷಿಯಂತೆ ಇರಬಹುದು. ಆನೆ, ದನಗಳಿಂದ ಮಣ್ಣನ್ನು ತುಳಿಸಿ ಹದ ಮಾಡಿದ ಮಣ್ಣನ್ನು ಇದಕ್ಕೆ ಉಪಯೋಗಿಸಿ ಅಲ್ಲಿ, ಮುಳ್ಳು, ಹುಲ್ಲು ವಿಷಬಳ್ಳಿಗಳನ್ನು ಹಬ್ಬಿಸಬೇಕು.[೪೩] ಇದರಿಂದ ಕೋಟೆ ಇರುವುದನ್ನು ಗುರುತಿಸಲು ಕಷ್ಟವಾಗುತ್ತದೆ. ಅಲ್ಲದೆ ಕೋಟೆ ಗೋಡೆಯು ಎತ್ತರವಾಗಿದ್ದು ಅದು ಬೀಳದಂತೆ ಆಧಾರವನ್ನೊಡ್ಡುತಿತ್ತು ಮತ್ತು ಶತ್ರುಗಳು ಸುಲಭವಾಗಿ ಕೋಟೆ ಗೋಡೆಯ ಹತ್ತಿರ ಬಂದು ಕೋಟೆಯ ಕಲ್ಲುಗಳನ್ನು ಕಿತ್ತು ಕೋಟೆಗೋಡೆಯನ್ನು ಹಾಳುಗೆಡುವದಂತೆ ತಡೆಯುವ ಉದ್ದೇಶವನ್ನು ಇದು ಹೊಂದಿತು. ಫಿರಂಗಿಗಳು ಬಳಕೆಗೆ ಬಂದ ಮೇಲೆ ಫಿರಂಗಿಯಿಂದ ಸಿಡಿದ ಮದ್ದು ಕೋಟೆಗೋಡೆಗೆ ತಾಗದಂತೆ ಸುರಕ್ಷತೆಯನ್ನು ವಹಿಸುವ ನಿಟ್ಟಿನಲ್ಲಿ ಇದು ಪ್ರಯೋಜನಕಾರಿಯಾಗಿತ್ತು. ಈ ವಪ್ರವನ್ನು ನಿರ್ಮಿಸಿದ್ದು ಮುದ್ದೇಬಿಹಾಳ ತಾಲೂಕಿನ ಹಿರೇಮುರಾಳ, ನಾಗಬೇನಾಳ ಇತರ ಕೋಟೆಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ.

ಕೋಟೆಗೋಡೆ

ಕೋಟೆಗೋಡೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ "ಕೋಟೆಯ ಸುತ್ತಣ ಗೋಡೆ" ಎಂಬ ಅರ್ಥವಿದೆ. ಕೋಟೆಯ ಗೋಡೆಗೆ 'ಪ್ರಾಕಾರ', 'ಶಾಲ', 'ಆಳ್ವೇರಿ', ಎಂಬ ಹೆಸರುಗಳಿವೆ.

ಕೋಟೆಯ ಗೋಡೆಯನ್ನು ರಚಿಸುವ ಕೌಶಲ್ಯಕ್ಕೆ 'ಸಾಲವಿದ್ಯೆ' ಎಂದು ಕರೆಯಲಾಗಿದೆ.[೪೪] ಋಗ್ವೇದದಲ್ಲಿ ಬರುವ ಪುರ ಅಥವಾ ದುರ್ಗ ಕಲ್ಲಿನಿಂದ ನಿರ್ಮಿಸಿದ ಗೋಡೆಯಿಂದ ಆವೃತ್ತವಾಗಿತ್ತು ಎಂಬುದು ತಿಳಿದುಬರುತ್ತದೆ. ಪಾಟಲಿಪುತ್ರದ ಸುತ್ತ ಮರದ ಕೋಟೆಗೋಡೆ ಇತ್ತು ಎಂದು ಮೆಗಸ್ತನೀಸನು ಹೇಳುತ್ತಾನೆ.[೪೫]

ವಪ್ರದ ಮೇಲೆ ಕೋಟೆಯನ್ನು ನಿರ್ಮಿಸಬೇಕು. ಅದು ತನ್ನ ವಿಸ್ತಾರಕ್ಕಿಂತ ಎರಡು ಪಟ್ಟು ಎತ್ತರವಿದ್ದು ಇಟ್ಟಿಗೆಯಿಂದ ಕಟ್ಟಿರಬೇಕು. ಹನ್ನೆರಡು ಹಸ್ತದಿಂದ ಸಮ ಅಥವಾ ವಿಷಮ ಸಂಖ್ಯೆಯಾಗಿ ೨೪ ಹಸ್ತದವರೆಗೆ ಎತ್ತರವಿರಬಹುದು. ಕೋಟೆಯ ಮೇಲೆ ರಥ ಹೋಗಿ ಬರುವಷ್ಟು ವಿಸ್ತಾರವಾದ ಸ್ಥಳಾವಕಾಶ ಇರಬೇಕು. ಅದರ ತುದಿಯಲ್ಲಿ ತಾಳೆಮರದ ಬುಡದಂತೆ, ಮೃದಂಗದಂತೆ, ಮಂಗನ ತಲೆಯ ಆಕಾರದಂತೆ, ಕಲ್ಲು, ಇಟ್ಟಿಗೆಯಿಂದ ಪರ್ವತದ ಅಕೃತಿಯನ್ನು ನಿರ್ಮಿಸಬೇಕು. ಅಗ್ನಿ ಭಯವಿರುವುದರಿಂದ ಮರದಿಂದ ಕೋಟೆಯನ್ನು ನಿರ್ಮಿಸುವುದು ಒಳ್ಳೆಯದಲ್ಲ ಎಂದು ಕೌಟಿಲ್ಯನು ಹೇಳುತ್ತಾನೆ.[೪೬] ವಿಜಾಪುರ ಜಿಲ್ಲೆಯ ಕೋಟೆಗಳು ಸ್ಥಳದುರ್ಗಗಳಾಗಿರುವುದರಿಂದ ಕೋಟೆಗೋಡೆ ನಿರ್ಮಾಣದಲ್ಲಿ ಒಂದು ನಿರ್ದಿಷ್ಟ ಕ್ರಮವಿದ್ದದ್ದು ಕಂಡುಬರುತ್ತದೆ. ಇಲ್ಲಿಯ ಕೋಟೆಗಳು ಚೌಕಾಕಾರ, ಆಯತ, ವೃತ್ತಾಕಾರವಾಗಿರುವುದನ್ನು ಕಾಣಬಹುದು.

ಕೋಟೆಗೋಡೆಯ ರಚನೆಗೆ ಹೋಲುವಂತೆ ದ್ವಾರಗಳು, ಕಾವಲುಗೋಪುರ, ವೀಕ್ಷಣಾರಂಧ್ರಗಳು, ತೆನೆಗಳು, ಗುಪ್ತದ್ವಾರಗಳು, ನೀರಿನ ಆಶ್ರಯ ಸ್ಥಳಗಳು ಮತ್ತು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸುತ್ತಿನ ಗೋಡೆಗಳು ಮತ್ತು ರಕ್ಷಣಾಸಂಬಂಧಿ ಇತರ ಕಟ್ಟಡಗಳನ್ನು ಕೋಟೆಯ ಗೋಡೆ ಹೊಂದಿರುತ್ತದೆ. ರಕ್ಷಣೆಯ ಗೋಡೆಯನ್ನು 'ಮಹಾಶಾಲ', 'ಪ್ರತಿಶಾಲ' ಮತ್ತು 'ರಕ್ಷಣಾಶಾಲಾ' ಗಳೆಂದು ಕರೆಯಲಾಗಿದೆ.[೪೭] ಭದ್ರತೆಯ ದೃಷ್ಟಿಯಿಂದ ಕೋಟೆಗೋಡೆಯು ಕೆಳಭಾಗದಲ್ಲಿ ದಪ್ಪವಾಗಿದ್ದು ಮೇಲ್ಭಾಗದಲ್ಲಿ ಇಳಿಜಾರಾಗಿ ಹೋಗಿ ಕಿರಿದಾಗಿವೆ. ಸಿಡಿಮದ್ದಿನ ಬಳಕೆಯಿಂದಾಗಿ, ಕಾಲದಿಂದ ಕಾಲಕ್ಕೆ ಕೋಟೆಗೋಡೆ ದಪ್ಪ ಹಾಗೂ ಎತ್ತರಗಳಲ್ಲಿ ಹೆಚ್ಚಾಗತೊಡಗಿದವು. ವಿಜಾಪುರದ ಹೊರಕೋಟೆಯನ್ನು ಎರಡು ಸುತ್ತಿನಿಂದ ನಿರ್ಮಿಸಿ ಅದರ ಮಧ್ಯೆ ಕಲ್ಲು ಮತ್ತು ಮಣ್ಣನ್ನು ಹಾಕಿದ್ದಾರೆ. ಹೀಗಾಗಿ ಗೋಡೆಯು ಸುಮಾರು ೧೮ ರಿಂದ ೩೦ ಅಡಿ ದಪ್ಪ ಕಂಡುಬರುತ್ತದೆ. ಈ ಕೋಟೆಗೋಡೆಯನ್ನು ದೆಹಲಿ ಸುಲ್ತಾನ ಔರಂಗಜೇಬನಿಂದಲೂ ಭೇದಿಸುವುದು ಕಷ್ಟವಾಯಿತು. ಉಳಿದಂತೆ ಸುಮಾರು ೫ ರಿಂದ ೧೫ ಅಡಿಯವರೆಗೂ ಜಿಲ್ಲೆಯ ಇತರ ಕೋಟೆ ಗೋಡೆಗಳು ದಪ್ಪವನ್ನು ಹೊಂದಿದ್ದು ಕಂಡುಬರುತ್ತದೆ.

ಕೋಟೆಯ ತೆನೆ

ಕೋಟೆಯ ತೆನೆಗೆ 'ಬಟ್ಟದೆನೆ' ಎಂದು ಕರೆಯುತ್ತಾರೆ. ಬಟ್ಟ ಅಥವಾ ವೃತ್ತಾಕಾರವಾಗಿರುವ ತೆನೆ ಕೋಟೆ ಗೋಡೆಯ ಮೇಲೆ ಗೋಡೆಯುದ್ದಕ್ಕೂ ಕಂಡುಬರುವ ಜೋಳದ ತೆನೆಯಾಕಾರದ ರಚನೆಗಳನ್ನು ಸೂಚಿಸುತ್ತದೆ. ತೆನೆ ಎಂಬುದು ಕೋಟೆಯ ಲಕ್ಷಣಗಳಲ್ಲಿ ಒಂದಾಗಿದೆ. 'ಪೊಂದೆನೆ'(ಚಂದ್ರಪ್ರಭ ಪುರಾಣ), ರಥಾಂಗಮಗೆತ್ತರುಣಂ ತೆನೆಯನೆತ್ತಿ ನಗಿಸುವನಿನನಂ'(ಅನಂತನಾಥ

ಪುರಾಣ), 'ತೆನೆಗಳ ಪುದಿವು ತರಂಗಂಗಳಾಗೆ'(ಸೂಕ್ತಿ ಸುಧಾರ್ಣವ) 'ಬಟ್ಟದೆನೆ'(ಗಿರಿಜಾ ಕಲ್ಯಾಣ), 'ಕೋಟೆಯ ಕೊನೆದೆನೆ ನೆಗೆದಿಜೆದಾಟದೆ ಕುದುರೆಗಳ್'(ಲೀಲಾವತಿ ಪುರಾಣ) ಎಂಬ ಪ್ರಯೋಗಗಳು ಕೋಟೆಯ ಕುರಿತಾಗಿ ಕಾವ್ಯದಲ್ಲಿ ಬಳಕೆಯಾಗಿವೆ.[೪೮] ತೆನೆಗಳು ಕೋಟೆಗೆ ಅಂದವನ್ನು ತಂದುಕೊಡುವುದಲ್ಲದೆ ಎರಡು ತೆನೆಗಳ ಮಧ್ಯ ತಲೆ ಹಾಕಿ ಕೆಳಕ್ಕೆ ಇಣುಕಿನೋಡಿ ಅಥವಾ ತೆನೆಯಲ್ಲಿರುವ ಅಂಬುಗಿಂಡಿಯ ಹಿಂದೆ ಕುಳಿತು ಬಾಣಗಳನ್ನು ಶತ್ರುಗಳ ಮೇಲೆ ಬಿಡಬಹುದಾಗಿತ್ತು.[೪೯] ವೈರಿಗಳ ದೃಷ್ಟಿಯಿಂದ ತೆನೆಗಳು ಅಪಾಯಕಾರಿಯಾಗಿದ್ದವು. ತೆನೆಗಳನ್ನು ಕೆಡವಿ ತೆನೆಯ ಹಿಂದೆ ರಕ್ಷಣೆ ಪಡೆದವರನ್ನು ನಾಶ ಮಾಡಿದರೆ ಮಾತ್ರ ಕೋಟೆ ಗೋಡೆಯ ಹತ್ತಿರ ಬರಲು ಶತ್ರುಗಳಿಗೆ ಸಾಧ್ಯವಾಗುತಿತ್ತು. ಕೋಟೆಯ ಸುತ್ತಲೂ ಸೈನಿಕರು ಪಹರೆ ಕೈಗೊಳ್ಳಲು ಕೋಟೆ ಕೈಪಿಡಿಗೋಡೆಯಲ್ಲಿ ಅಗಲವಾದ ಪಹರೆಗೋಡೆ ಮತ್ತು ಸೈನಿಕರು ಮರೆಯಲ್ಲಿ ನಿಂತು ಶತ್ರುಗಳ ಮೇಲೆ ಪ್ರತಿದಾಳಿ ಮಾಡಲು ಕೈಪಿಡಿಗೋಡೆಯಲ್ಲಿ ನಿಟುಗಳನ್ನು(ತೆನೆ) ಹಾಗೂ ಶತ್ರುಪಡೆಗಳನ್ನು ವೀಕ್ಷಿಸಲು ಗೋಡೆಗಳಲ್ಲಿ ವೀಕ್ಷಣಾಕಿಂಡಿಗಳನ್ನು ಅಳವಡಿಸುವುದು ಸಾಮಾನ್ಯವಾಯಿತು. ಶತ್ರುಗಳು ಹೊರಗಿನಿಂದ ಬಾಣ ಬಿಡುವಾಗ ಅವರಿಗೆ ಕಾಣದಂತೆ ಸೈನಿಕರು ಅಡಗಿ ಕುಳಿತುಕೊಳ್ಳುವ ಸ್ಥಳಕ್ಕೆ 'ಪ್ರಧಾವಿಶಿಕಾ' ಎಂದು ಹೆಸರು.[೫೦]

ವಿಜಾಪುರ, ಹಲಸಂಗಿ ಕೋಟೆಯಲ್ಲಿಯ ತೆನೆಗಳು ಸುಮಾರು ೮ ಅಡಿ ಎತ್ತರ ೪ ಅಡಿ ಅಗಲವಾಗಿವೆ. ತಾಳಿಕೋಟೆ ಕೋಟೆಯನ್ನು ಸುಣ್ಣಶಿಲೆಯನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಇಲ್ಲಿ ತೆನೆಯನ್ನು ಒಂದೇ ಶಿಲೆಯಲ್ಲಿ ಕಟೆದು ಅದನ್ನು ಕೈಪಿಡಿಗೊಡೆಯಲ್ಲಿಯೇ ಸೇರಿಸಿದ್ದಾರೆ. ಈ ತೆನೆಗಳಲ್ಲಿ ಯಾವುದೇ ರೀತಿಯ ಕಿಂಡಿಗಳು ಕಂಡುಬರುವುದಿಲ್ಲ. ಹೀಗಾಗಿ ಇಲ್ಲಿ ತೆನೆಗಳು ರಕ್ಷಣೆಗಿಂತ ಅಲಂಕಾರಕ್ಕಾಗಿಯೇ ಇರುವುದು ಕಂಡುಬರುತ್ತದೆ. ಬಹುತೇಕ ಈ ರೀತಿಯ ರಚನೆಗಳು ಮುದ್ದೇಬಿಹಾಳ ತಾಲೂಕಿನ ಕೋಟೆಗಳಲ್ಲಿ ಕಂಡುಬರುತ್ತವೆ.

ಅಟ್ಟಾಲಕ

ಅಟ್ಟಾಲಕ ಎಂದರೆ ಕೋಟೆಗೋಡೆಯ ಮೇಲೆ ಎತ್ತರಕ್ಕೆ ಕಟ್ಟಿರುವ ವೇದಿಕೆ. ಇದಕ್ಕೆ 'ಅಟ್ಟಳ', 'ಮುಗಿಲಟ್ಟಣೆ' ಎಂದೂ ಕರೆಯುತ್ತಾರೆ. ಒಂದು ರೀತಿಯಲ್ಲಿ ಇವು ವೀಕ್ಷಣಾಕೇಂದ್ರಗಳಿದ್ದಂತೆ. ಅಟ್ಟಳೆಗಳ ಮೇಲೆ ಧ್ವಜಗಳು ಹಾರುತ್ತಿದ್ದವು.[೫೧] ಪಂಪನಲ್ಲಿ 'ವಿಕಟಾಟ್ಟಾಲಂಗಳ್'(ಆದಿಪುರಾಣ) ಎಂದು ಬರೆದಿದ್ದಾನೆ. 'ನಭಕ್ಕೆ ಮೀಱುವಟ್ಟಳೆ'(ಗಿರಿಜಾಕಲ್ಯಾಣ), 'ಮುಗಿಲಟ್ಟಳೆ'(ಮಲ್ಲಿನಾಥಪುರಾಣ), 'ಸ್ಫಟಿಕದ ಮುಗಿಲಟ್ಟಳೆ'(ಚಂದ್ರಪ್ರಭ ಪುರಾಣ), 'ಬೆಟ್ಟವ ಕಿತ್ತು ತಂದಿರಿಸಿದಂದದಿ ಮುಗಿಲಟ್ಟಳೆ'(ಮೋಹನ ತರಂಗಿಣಿ) ಎಂಬ ಮಾತುಗಳಲ್ಲಿ ಅಟ್ಟಳೆ ಸಾಕಷ್ಟು ಎತ್ತರವಾಗಿ ನಿರ್ಮಿಸಲಾಗುತ್ತಿತ್ತು ಎಂಬ ಅಂಶವಿದೆ.[೫೨] ಇಂತಹ ಎತ್ತರವಾದ ಅಟ್ಟಳೆಗಳ ನಿರ್ಮಾಣಕ್ಕೆ ನಿರ್ದಿಷ್ಟ ಕಾರಣವಿತ್ತು. ವೈರಿಗಳು ಬರುವ ಸುಳಿವನ್ನು ಅಟ್ಟಣೆಯ ಮೆಲೆ ನಿಂತು ದೂರದಿಂದಲೇ ಕಂಡು ಹಿಡಿಯಬಹುದಾಗಿತ್ತು.

ಅಲ್ಲದೆ ಯುದ್ಧ ಸಂದರ್ಭದಲ್ಲಿ ಅಟ್ಟಾಲಕಗಳ ಮೇಲೆ ಯುದ್ಧಸಾಮಗ್ರಿಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಮತ್ತು ಸೈನಿಕರು ಇವುಗಳ ಮೇಲೆ ನಿಂತು ಶತ್ರುಗಳ ಮೇಲೆ ಪ್ರತಿದಾಳಿ ಮಾಡಲು ನಿರ್ಮಿಸುತ್ತಿದ್ದರು.

ವಿಜಾಪುರ ಕೋಟೆಯು ಎರಡು ಗೋಡೆಗಳಿಂದ ನಿರ್ಮಿತವಾಗಿದ್ದು ಸಹಜವಾಗಿ ಇಲ್ಲಿ ಅಟ್ಟಾಲಕವು ಅಗಲವಾಗಿಯೇ ಕಂಡುಬರುತ್ತದೆ. ಅಲ್ಲದೆ ಅಟ್ಟಾಲಕದಲ್ಲಿಯೇ ಸೈನಿಕರು ವಿಶ್ರಾಂತಿಯನ್ನು ಮಳೆಯಿಂದ ರಕ್ಷಣೆಯನ್ನು ಪಡೆಯಲು ಹಾಗೂ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡಲು ಕಮಾನಾಕೃತಿಯ ಕೋಣೆಗಳಿರುವುದನ್ನು ಕಾಣಬಹುದು. ಉಳಿದಂತೆ ಜಿಲ್ಲೆಯಲ್ಲಿ ಬಹುತೇಕ ಕೋಟೆಗೋಡೆಯ ಮೇಲ್ಭಾಗ ನಾಶ ಹೊಂದಿರುವುದರಿಂದ ಅಟ್ಟಾಲಕ ರಚನೆಯು ಕಂಡುಬರುವುದಿಲ್ಲ.

ಬುರುಜು

ಬುರುಜುಗಳಿಗೆ ಕೊತ್ತಲ, ಹುಡೆ, ಕಾವಲುಗೋಪುರ ಎಂದೂ ಕರೆಯುತ್ತಾರೆ. ಬುರುಜುಗಳಿಲ್ಲದ ಕೋಟೆಗೋಡೆ ನಮಗೆ ಕಾಣಸಿಗುವುದಿಲ್ಲ. ಎರಡು ಕೋಟೆಯ ಗೋಡೆಗಳು ಸಂಧಿಸುವ ಸ್ಥಳವನ್ನು 'ಗೊಂಟು' ಎಂದು ಕರೆಯುತ್ತಾರೆ. ಅಂತಹ ಸಂಧಿಸ್ಥಾನಗಳಲ್ಲಿ ಅಟ್ಟಾಲಕಗಳಿಗಿಂತ ಎತ್ತರವಾಗಿ ಕಟ್ಟಿದ ವೀಕ್ಷಣಾಕೇಂದ್ರಗಳೇ ಬುರುಜುಗಳು.[೫೩] ಬುರುಜುಗಳು ಕೋಟೆಗೋಡೆಯನ್ನು ನೋಡಲು ಸುಂದರಗೊಳಿಸುವಂತೆ ನೇರವಾಗಿ ಮತ್ತು ವರ್ತುಲದಲ್ಲಿ ನಿರ್ಮಾಣ ಮಾಡುತ್ತಿದ್ದರು. ಇದನ್ನು ಯಾವ ದಿಕ್ಕಿನಲ್ಲಿ ಮುಂದುವರಿಸಬೇಕು ಹಾಗೂ ಕೋಟೆಗೋಡೆ ಬೀಳದಂತೆ ತಡೆಯುವ ಉದ್ದೇಶ ಒಂದು ಕಡೆಯಾದರೆ, ಶತ್ರುಗಳನ್ನು ದೂರದಿಂದ ವೀಕ್ಷಿಸಲು ಮತ್ತು ಅವರನ್ನು ನಿಗ್ರಹಿಸುವ ಮುಖ್ಯ ಉದ್ದೇಶವನ್ನು ಇದು ಹೊಂದಿತ್ತು. ಸಿಡಿಮದ್ದು ಬಳಕೆಗೆ ಬಂದ ಮೇಲೆ ಸಿಡಿಮದ್ದಿನ ಬಳಕೆಯ ಪ್ರಮುಖ ಸ್ಥಳವಾಗಿ ಉಪಯೋಗವಾಗಲಾರಂಭಿಸಿತು. ಇವುಗಳನ್ನು ಅರ್ಧವೃತ್ತಾಕಾರ, ವೃತ್ತಾಕಾರ, ಚೌಕಾಕಾರದಲ್ಲಿ ಹಾಗೂ ಬಹುಕೋನಾಕೃತಿಗಳಲ್ಲಿ ನಿರ್ಮಿಸಲಾಗುತ್ತಿತ್ತು. ಈ ರೀತಿಯ ರಚನೆಗಳು ವಿಜಾಪುರ ಜಿಲ್ಲೆಯ ಅನೇಕ ಕೋಟೆಗಳಲ್ಲಿ ಕಂಡುಬರುತ್ತವೆ. ಇವು ಕೋಟೆಯೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿರುವುದರಿಂದ 'ಕೋಟೆ-ಕೊತ್ತಲ' ಎನ್ನುವ ಜೋಡುಪದಗಳು ಹುಟ್ಟಿಕೊಂಡಿವೆ.[೫೪] ಕೌಟಿಲ್ಯನು ಕೋಟೆ ಗೋಡೆಗೆ ಹೊಂದಿಕೊಂಡು ಕೊತ್ತಲಗಳನ್ನು ಕಟ್ಟಿಸಬೇಕೆಂದು ಹೇಳುತ್ತಾನೆ. ಅದಕ್ಕೆ ಮೇಲೆ ಹತ್ತಲು ಮೆಟ್ಟಿಲುಗಳಿರಬೇಕು ಮತ್ತು ಎರಡು ಕೊತ್ತಲಗಳ ನಡುವಿನ ಅಂತರ ಮೂವತ್ತು ದಂಡಗಳಿರಬೇಕು, ಕೊತ್ತಲದ ಮೇಲ್ಭಾಗದಲ್ಲಿ ಗಾಳಿ ಬೆಳಕು ಹಾಯುವಂತೆ ಛಾವಣಿ ಹಾಕಿರಬೇಕೆಂದು ಹೇಳಿದ್ದಾನೆ.[೫೫] "ಅವನಿಯ ಹೊತ್ತ ದಿಗ್ಗಜದಂತೆ ನಿಂತ ಕೊತ್ತಳಗಳೊಪ್ಪಿದವು" ಎಂಬ ಮಾತು ದಿಕ್ಕಿಗೆ ಒಂದು ಕೊತ್ತಲವಿದ್ದ ಬಗೆಗೆ ಮಾಹಿತಿ ನೀಡುತ್ತದೆ. "ಪಿರಿದು ವಜ್ರದ ಕರಂಡಗಳೆನೆ ಕೊತ್ತಲ ಮೆಱೆದವು ಚೌದೆಸೆಯೊಳಗೆ"(ಕಂಠಿರವ ನರಸರಾಜ ವಿಜಯಂ) ಎಂಬಲ್ಲಿ ನಾಲ್ಕೂ ದಿಕ್ಕಿನಲ್ಲಿ ಒಂದೊಂದು ಕೊತ್ತಲವಿದ್ದ ಬಗೆಗೆ ಸ್ಪಷ್ಟವಾದ ಮಾಹಿತಿಯಿದೆ. "ಉಭಯ ವ್ಯಾಘ್ರಗಳು ಪ್ರಕಟಿಸಿ ನಿಂದಂತೆ ಎರಡು ಕೊತ್ತಳವಿದ್ದವು"(ಮೋಹನ ತರಂಗಿಣಿ) ಎಂಬಲ್ಲಿ ಮಹತ್ವದ ಮಾಹಿತಿಯಿದೆ.[೫೬]

ಜಿಲ್ಲೆಯಲ್ಲಿ ವಿವಿಧ ಪ್ರಕಾರದ ಬುರುಜು ಅಥವಾ ಕೊತ್ತಲಗಳಿದ್ದು ವಿಜಾಪುರದ ಹೊರಕೋಟೆಗೆ ಸುಮಾರು ೧೨೦ ಬುರುಜುಗಳು ಇದ್ದವು ಎಂದು ಆದಿಲ್‌ಶಾಹಿ ಆಸ್ಥಾನ ಕೃತಿಗಳು ತಿಳಿಸುತ್ತವೆ. ಇನ್ನುಳಿದಂತೆ ಜಿಲ್ಲೆಯ ಬಹುತೇಕ ಕೋಟೆಗಳಲ್ಲಿ ನಾಲ್ಕು ಮೂಲೆಗೆ ಒಂದರಂತೆ ಬುರುಜುಗಳಿದ್ದದ್ದು ಕಂಡುಬರುತ್ತವೆ. ಜಿಲ್ಲೆಯಲ್ಲಿ ನಿರ್ಮಾಣವಾದ ಬುರುಜುಗಳ ರಚನೆಯಲ್ಲಿ ಭಿನ್ನತೆಯಿದ್ದು ಅವುಗಳನ್ನು ಆಯಾ ಕೋಟೆಗಳನ್ನು ವಿವರಿಸುವಾಗ ಅವುಗಳ ರಚನಾವಿನ್ಯಾಸವನ್ನು ಸಹ ವಿವರಿಸಲಾಗಿದೆ.

ದ್ವಾರಗಳು

'ಪುಲಿಮೊಗ' ಎಂಬುದು ಕೋಟೆಯ ಹೆಬ್ಬಾಗಿಲಿಗೆ ಇರುವ ಹೆಸರು.[೫೭] ಅಂದರೆ ಕೋಟೆಯ ದ್ವಾರದ ಮೂಲಕ ಶತ್ರುಗಳು ಒಳಪ್ರವೇಶಿಸಿದರೆ ಹುಲಿಯ ಬಾಯಿಗೆ ಬಿದ್ದಂತೆ ಎಂದು ಅರ್ಥ ಕೊಡುತ್ತದೆ. ಕೋಟೆಗನುಗುಣವಾಗಿ ಐದು ದಂಡದಿಂದ ಎಂಟು ದಂಡದವರೆಗೆ ವಿಸ್ತಾರವಾದ ಬಾಗಿಲು ನಿರ್ಮಿಸಬಹುದು. ಬಾಗಿಲ ಶೀರ್ಷವು ಎರಡು ಹಸ್ತ ಪ್ರಮಾಣವಿದ್ದು ಎರಡು ಅಗಳಿಯಿರಬೇಕು. ಇಂದ್ರಕೀಲವೆಂಬ ಪ್ರಧಾನ ಕೀಲು ಒಂದು ಅರತ್ನಿ ಉದ್ದವಿರಬೇಕು. ಮಹಾದ್ವಾರದ ಮಧ್ಯ ಐದು ಹಸ್ತ ವಿಸ್ತಾರವುಳ್ಳ ಕ್ಷುದ್ರದ್ವಾರವನ್ನು ನಿರ್ಮಿಸಬೇಕು. ಇಡೀ ಮಂಟಪದ ವಿಸ್ತಾರವು ನಾಲ್ಕು ಆನೆಗಳು ಪ್ರವೇಶಿಸುವಂತಿರಬೇಕು.[೫೮]

ಹೆಬ್ಬಾಗಿಲನ್ನು ಐದು ಕೈಗಳ ಅಗಲ ಮಾಡಬೇಕು. ಕುದುರೆ ಹತ್ತಿ ಬರುವವನ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆ ದ್ವಾರವನ್ನು ನಿರ್ಮಿಸಬೇಕೆಂದು ಈ ಕೆಳಗಿನ ಶ್ಲೋಕ ಹೇಳುತ್ತದೆ.

ಅಶ್ವಾರೂಢೆ ಸಮಾಯಾತೇತಸೊ ಪರಿತಥೋಭಯಂ ।

ಹಸ್ತ ಮಾತ್ರ ಪ್ರಮಾಣೇನದ್ವಾರಂ ಕುರ್ಯಾದ್ವಿ ಚಕ್ಷಣಃ ॥

ಕೋಟೆಗೆ ಚೋರಕಿಂಡಿಗಳನ್ನು ಜೋಡಿಸುತ್ತಿದ್ದರು. ಪೂರ್ವಾದಿ, ಆಗ್ನೇಯಾದಿ ದಿಕ್ಕುಗಳಾಗಲಿ, ಕೆಳಗಾಗಲಿ, ಲಕ್ಷಣವಿಲ್ಲದೆ ಇರಲಿ, ಹೇಗಾದರೂ ರಹಸ್ಯವಾಗಿರುವ ಹಾಗೆ ಆಪತ್ತು ಸಂಭವಿಸಿದಾಗ ಪಲಾಯನವಾಗುವುದಕ್ಕೆ ಯೋಗ್ಯವಾಗಿ ಚೋರಕಿಂಡಿ ದ್ವಾರವನ್ನು ಮಾಡಬೇಕೆಂದು ಈ ಕೆಳಗಿನ ಶ್ಲೋಕದಲ್ಲಿ ಹೇಳಿದೆ.

ಡಿಕ್ಷು ವಾಕೋಣ ದೇಶ ಶ್ಯಾಹ್ಯು ಪರಿಷೈಥವಾದ್ಯಧಃ ।

ಅಲಕ್ಷಣಂವಾಗುಟಪ್ತಂಚ ದ್ವಾರಂಸ್ಯಾಚ್ಚೋರ ಖಂಡಿತ[೫೯]

ಕೋಟೆಯ ಭದ್ರತೆಗಾಗಿ ನಾಲ್ಕು ಬಾಗಿಲುಗಳು ಇರಬೇಕು ಎಂದು ಕೌಟಿಲ್ಯನು ಹೇಳುತ್ತಾನೆ. ಹೀಗಾಗಿ ಕೋಟೆಗಳಲ್ಲಿ ದ್ವಾರಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಕೋಟೆಯನ್ನು ಶತ್ರುಗಳು ನೇರವಾಗಿ ದ್ವಾರದ ಮೂಲಕ ಪ್ರವೇಶಿಸಿದಂತೆ ಇಂಗ್ಲೀಷಿನ 'C', 'L', 'S' ಆಕಾರಗಳಲ್ಲಿ

ಪ್ರವೇಶವನ್ನು ಕಲ್ಪಿಸುತ್ತಿದ್ದರು. ಇದರ ಉದ್ದೇಶ ಕೋಟೆಯ ದ್ವಾರವು ಶತ್ರುಗಳಿಗೆ ನೇರವಾಗಿ ಗೋಚರಿಸದಂತೆ ತಂತ್ರವನ್ನು ಉಪಯೋಗಿಸಿದ್ದರು. ದ್ವಾರವು ಭದ್ರವಾಗಿರುವಂತೆ ಇಕ್ಕೆಲಗಳಲ್ಲಿ ಬುರುಜುಗಳನ್ನು ನಿರ್ಮಿಸುತ್ತಿದ್ದರು. ಕೋಟೆಯೊಳಗೆ ನಿಂತು ಹೋರಾಡುವ ಕ್ರಮ ಸಾಕೆನಿಸಿದಾಗ ಅಥವಾ ವೈರಿ ಬಲ ಕ್ಷೀಣಿಸಿದೆ ಎನಿಸಿದಾಗ, ಮಿತ್ರಸೈನ್ಯದ ಬೆಂಬಲ ದೊರೆತಾಗ ಬಹುಶಃ ಕೋಟೆಯ ಬಾಗಿಲು ತೆಗೆದು ಶತ್ರುಗಳ ಮೇಲೆ ಬೀಳುತ್ತಿದ್ದರೆಂದು ಕಾಣುತ್ತದೆ. ಕೆಲವು ಸಾರಿ ಆನೆಗಳನ್ನು ನುಗ್ಗಿಸಿ ಕೋಟೆಯ ಬಾಗಿಲುಗಳನ್ನು ಶತ್ರುಗಳು ಭೇದಿಸುತ್ತಿದ್ದರು. ಆಗ ಕೋಟೆಯಿಂದ ಹೊರಬಂದು ಶತ್ರುವನ್ನು ಎದುರಿಸುವುದು ಅನಿವಾರ್ಯವಾಗಿತ್ತು.

ವಿಜಾಪುರ ಕೋಟೆಗೆ ಆರು ಪ್ರಮುಖ ದ್ವಾರಗಳಿದ್ದರೆ ತಾಳಿಕೋಟೆ, ಆಲಮೇಲ ಕೋಟೆಗೆ ನಾಲ್ಕು ದ್ವಾರಗಳು, ಕೋಟ್ನಾಳ ಕೋಟೆಗೆ ಮೂರು ದ್ವಾರಗಳು, ಇನ್ನುಳಿದಂತೆ ಜಿಲ್ಲೆಯಲ್ಲಿ ಒಂದರಿಂದ ಎರಡು ದ್ವಾರಗಳು ಹೊಂದಿರುವ ಕೋಟೆಗಳನ್ನು ಕಾಣಬಹುದು. ಈ ಎಲ್ಲ ದ್ವಾರಗಳು ಕಮಾನಾಕೃತಿಯಲ್ಲಿವೆ. ಅಷ್ಟೇ ಅಲ್ಲದೆ ಪ್ರತಿಯೊಂದು ಕೋಟೆಗೆ ತುರ್ತುಸಂದರ್ಭದಲ್ಲಿ ಉಪಯೋಗಿಸಲು ದಿಡ್ಡಿ ಬಾಗಿಲುಗಳು ಇದ್ದದ್ದು ಕಂಡುಬರುತ್ತದೆ. ರಹಸ್ಯಮಾರ್ಗವು ಅಟ್ಟಾಲಕ, ಪ್ರತೋಲಿ, ಇಂದ್ರಕೋಶದ ನಡುವೆ ಕೋಟೆಯ ಬದಿಯಲ್ಲಿ ಎರಡು ಹಸ್ತ ಅಗಲವಾಗಿ, ಎಂಟು ಹಸ್ತ ಉದ್ದವಾಗಿ ಇರಬೇಕು. ಒಂದು ಪಕ್ಕದ ಕಾಡಿಗೆ, ಉಳಿದವು ದೇಶದ ಇನ್ನಿತರ ಭಾಗಕ್ಕೆ ಸಂಪರ್ಕ ಕಲ್ಪಿಸುವಂತಿರಬೇಕು.[೬೦] ವಿಜಾಪುರ ಕೋಟೆಯ ದ್ವಾರಗಳು ಶತ್ರುಗಳಿಗೆ ನೇರವಾಗಿ ಕಾಣದಂತೆ ವಿವಿಧ ಆಕಾರದಲ್ಲಿ ಪ್ರವೇಶವನ್ನು ಕಲ್ಪಿಸಿ ಅದಕ್ಕೆ ಅಡ್ಡಲಾಗಿ ತಡೆಗೋಡೆಗಳನ್ನು ನಿರ್ಮಿಸಿದ್ದಾರೆ. ಪ್ರತಿ ದ್ವಾರದ ಒಳಬದಿಯಲ್ಲಿ ಸೈನಿಕರ ಕೊಠಡಿಗಳು ಕಂಡುಬರುತ್ತವೆ. ಈ ಕೊಠಡಿಗಳನ್ನು ಶಸ್ತ್ರಸಜ್ಜಿತವಾದ ಸೈನಿಕರು ಉಳಿದುಕೊಳ್ಳಲು, ಶಸ್ತ್ರಾಸ್ತ್ರಗಳ ಸಂಗ್ರಹಕ್ಕಾಗಿ, ಇಲ್ಲವೇ ಕೆಲವು ಸಂದರ್ಭದಲ್ಲಿ ಸೈನಿಕರ ವಿಶ್ರಾಂತಿಗಾಗಿಯೂ ಬಳಸುತ್ತಿದ್ದರೆಂದು ಹೇಳಬಹುದು.

ಅಂಬುಗಿಂಡಿಗಳು(ಬಂದೂಕುಕಿಂಡಿಗಳು)

ಕೋಟೆಯ ಮೇಲೆ ಕುಳಿತು ಕೋಟೆಯ ಹೊರಗಿನ ಶತ್ರುಗಳ ಚಲನವಲನಗಳನ್ನು ಗಮನಿಸಲು ನಿಷ್ಕುಹದ್ವಾರವೆಂಬ ತೂತುಗಳನ್ನು ಅಥವಾ ರಂಧ್ರಗಳನ್ನು ನಿರ್ಮಿಸುವುದು ಅಗತ್ಯ ಎಂದು ಕೌಟಿಲ್ಯನು ಹೇಳುತ್ತಾನೆ. ಶತ್ರುಗಳು ದಂಡೆತ್ತಿ ಬಂದಾಗ ಕೋಟೆಯನ್ನು ಎಚ್ಚರಿಕೆಯಿಂದ ಭದ್ರಪಡಿಸುತ್ತಿದ್ದರು. ಆ ಸಂದರ್ಭದಲ್ಲಿ 'ಅಂಬುಗಿಂಡಿಯನ್ನು' ಸರಿಪಡಿಸುತ್ತಿದ್ದರೆಂದು ರಾಮನಾಥ ಚರಿತೆಯಲ್ಲಿದೆ.[೬೧] ಅಂಬುಗಿಂಡಿಗಳು ಕೋಟೆಯ ತೆನೆ, ಬುರುಜು, ಕೈಪಿಡಿಗೋಡೆಯ ಮಧ್ಯದಲ್ಲಿರುತ್ತಿದ್ದವು. ಇವು ಯುದ್ಧ ಕಾಲದಲ್ಲಿ ತೆನೆಗಳ ಹಿಂದೆ ಸೈನಿಕರು ರಕ್ಷಣೆ ಪಡೆದು ಇದರ ಮಧ್ಯ ಇರುವ ಕಿಂಡಿಗಳ ಹಿಂದೆ ನಿಂತು ಬಾಣಗಳನ್ನು(ಅಂಬುಗಳನ್ನು) ಪ್ರಯೋಗಿಸುತ್ತಿದ್ದರು. ಅಲ್ಲದೆ ಕುದಿಯುವ ನೀರು, ಕಾದ ಎಣ್ಣೆ ಮುಂತಾದ ಹಾನಿಕಾರಕ ದ್ರವ್ಯಗಳನ್ನು ಎರಚಲು ಇವುಗಳನ್ನು ಬಳಸಿಕೊಳ್ಳುತ್ತಿದ್ದರು. ಅನಂತರ ಕಾಲದಲ್ಲಿ ಶಸ್ತ್ರಾಸ್ತ್ರಗಳು ಬಳಕೆಗೆ ಬಂದ ಮೇಲೆ ಕೋವಿ ಅಥವಾ ಬಂದೂಕುಗಳನ್ನು

ಈ ಕಿಂಡಿಗಳಿಂದ ಗುರಿಯಿಟ್ಟು ಹೊಡೆಯಲು ಪ್ರಾರಂಭಿಸಿದರು. ಹೀಗಾಗಿ ಇವುಗಳನ್ನು ಬಂದೂಕು ಕಿಂಡಿಗಳು ಎಂದು ಕರೆಯುತ್ತಾರೆ. ಇವುಗಳ ಮೂಲಕ ಗುರಿಯಿಟ್ಟು ಹೊಡೆದರೆ ಶತ್ರುಸೈನ್ಯದ ಮೇಲೆ ನೇರವಾಗಿ ಅಸ್ತ್ರಗಳು ಬೀಳುತ್ತಿದ್ದವು.

ಕರ್ನಾಟಕದಲ್ಲಿರುವ ಬಹುತೇಕ ಕೋಟೆಗಳಲ್ಲಿ ರಂಧ್ರಗಳು ೪೫೦, ೯೦೦ ಕೋನಾಕಾರದಲ್ಲಿರುವುದನ್ನು ಕಾಣಬಹುದು. ಇವು ನೇರ, ಕೆಳಗೆ, ಎಡ ಮತ್ತು ಬಲಭಾಗಕ್ಕೆ ಇರುವಂತೆ ರಂಧ್ರಗಳನ್ನು ಬಿಟ್ಟಿದ್ದು ಶತ್ರುಗಳು ಯಾವ ದಿಕ್ಕಿನಿಂದ ಬಂದರೂ ಅವರ ಮೇಲೆ ದಾಳಿ ಮಾಡುವಂತೆ ರಚನೆಗಳನ್ನು ಹೊಂದಿವೆ. ಕೋಟೆಯ ಒಳಗಡೆ ತೆನೆಯಿಂದ ಕೊರೆದ ರಂಧ್ರವು ಹೊರಭಾಗದ ಕೋಟೆಗೋಡೆಯಲ್ಲಿ ತೆರೆದುಕೊಳ್ಳುತ್ತದೆ. ವಿಜಾಪುರ ಜಿಲ್ಲೆಯ ಮಮದಾಪುರ ಮತ್ತು ನಿಂಬಾಳ ಕೋಟೆಗಳ ನಿರ್ಮಾಣದಲ್ಲಿ ಮಣ್ಣನ್ನು ಹೆಚ್ಚಾಗಿ ಬಳಸಿದ್ದು ಮಣ್ಣು ಬಿದ್ದು ಕಿಂಡಿಗಳು ಮುಚ್ಚದಂತೆ ಮಣ್ಣಿನ ಕೊಳವೆಯನ್ನು ಕಿಂಡಿಗಳಿಗೆ ಉಪಯೋಗಿಸಿದ್ದು ಕಂಡುಬರುತ್ತದೆ.

ಈ ಮೇಲಿನ ಎಲ್ಲ ಲಕ್ಷಣಗಳನ್ನು ಗಮನಿಸಿದಾಗ ಇವು ಒಂದು ಇನ್ನೊಂದರಿಂದ ರಕ್ಷಣೆ ಪಡೆಯುವ ಮೂಲಕ ಕೋಟೆಯ ಭಾಗಗಳೆಂದೆನಿಸಿಕೊಂಡಿವೆ. ಇವುಗಳಿಂದ ನಿರ್ವಹಿಸುವ ಕಾರ್ಯತಂತ್ರ ಬೇರೆ ಬೇರೆ ರೀತಿಯಾಗಿದ್ದರೂ ಅವುಗಳ ಮುಖ್ಯ ಉದ್ದೇಶ ರಕ್ಷಣೆ ಮಾಡುವುದಾಗಿತ್ತು. ಮನುಸ್ಮೃತಿಯ ಪ್ರಕಾರ "ಕೋಟೆಯೊಳಗಿನ ಒಬ್ಬ ಬಿಲ್ಲುಗಾರ ಹೊರಗಿನ ನೂರು ಜನರೊಂದಿಗೆ, ನೂರು ಮಂದಿ ಧನುರ್ಧಾರಿಗಳು ಹತ್ತುಸಾವಿರ ಯೋಧರೊಂದಿಗೆ ಯುದ್ಧ ಮಾಡಬಲ್ಲರು" ಎಂಬ ಹೇಳಿಕೆ ಇಲ್ಲಿ ಪ್ರಸ್ತುತವೆನಿಸುತ್ತದೆ.

೩.೬. ಕೋಟೆಯ ಪ್ರಾಚೀನತೆ

ಕೋಟೆಗಳು ಯಾವ ಕಾಲಘಟ್ಟದಲ್ಲಿ ಮತ್ತು ಹೇಗೆ ಉಗಮಿಸಿದವು, ಅದಕ್ಕೆ ಭೌಗೋಳಿಕ ಮತ್ತು ರಾಜಕೀಯ ಅಂಶಗಳು ಎಷ್ಟರಮಟ್ಟಿಗೆ ಪುಷ್ಟಿನೀಡಿದವು ಎಂಬ ವಿಚಾರಗಳು ಗಮನಾರ್ಹವಾದವು. ಅಲ್ಲದೆ ಸ್ಥಾಪಿತವಾದ ಕೋಟೆಗಳ ಕುರಿತು ನಿರೂಪಿಸುವ ನಿಟ್ಟಿನಲ್ಲಿ ಲಭ್ಯವಾಗಿರುವ ಪುರಾತತ್ವೀಯ ಅಂಶಗಳಿಂದ ಸ್ಪಷ್ಟಚಿತ್ರಣ ದೊರೆಯುತ್ತದೆ. ಮನುಷ್ಯ ಪ್ರಕೃತಿವಿಕೋಪಗಳಾದ ಮಳೆ, ಬಿಸಿಲು, ಚಳಿ, ಗಾಳಿಗಳಿಂದ ರಕ್ಷಣೆ ಪಡೆಯಲು ಮೊದಲು ಬಂಡೆಗಲ್ಲುಗಳಿಂದ ಕೂಡಿದ ಗುಹೆಗಳನ್ನು ಆಶ್ರಯಿಸಿದ್ದ. ನಂತರ ಮನೆಗಳನ್ನು ನಿರ್ಮಿಸಿಕೊಂಡ. ಅದೇ ರೀತಿ ಒಂದು ಜನಸಮುದಾಯ ತನ್ನನ್ನು ಪ್ರಕೃತಿ ಹಾಗೂ ಶತ್ರುಗಳಿಂದ ರಕ್ಷಣೆ ಪಡೆಯಲು ಸುತ್ತಲೂ ಆವರಣದಿಂದ ಕೂಡಿದ ಕೋಟೆಯಂತಹ ರಚನೆಗಳನ್ನು ನಿರ್ಮಿಸಿಕೊಂಡ. ಈ ರೀತಿಯಾಗಿ ಕೋಟೆಗಳ ನಿರ್ಮಾಣ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಕೋಟೆಯ ಉಗಮ ಮತ್ತು ಬೆಳವಣಿಗೆಗೆ ಆರ್ಥಿಕತೆಯು ಕೂಡ ಮೂಲ ಕಾರಣವಾಗಿತ್ತು ಎಂದು ನಿಸ್ಸಂಶಯವಾಗಿ ಹೇಳಬಹುದು. ಪ್ರಾಚೀನ ಕಾಲಘಟ್ಟದಿಂದಲೂ ಬಹುತೇಕ ನಗರರಾಜ್ಯಗಳು ಉಗಮವಾಗಿದ್ದು ನದಿ ತೀರದಲ್ಲೇ. ಕೃಷಿ ಅಭಿವೃದ್ಧಿಗೆ ಪೂರಕವಾದ ಈ

ಪ್ರದೇಶಗಳಲ್ಲಿ ಸಾಮಾನ್ಯವಾಗಿ ಆರ್ಥಿಕತೆಯ ಪ್ರಮಾಣ ಹೆಚ್ಚಳವಾಗತೊಡಗಿತು. ತತ್ಪರಿಣಾಮವಾಗಿ ಈ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವಲ್ಲಿ ಎರಡು ರಾಜ್ಯಗಳ ಮಧ್ಯೆ ಸಂಘರ್ಷಗಳು ಏರ್ಪಡುತ್ತಿದ್ದುದು ಸಾಮಾನ್ಯವಾಗಿತ್ತು. ಬಹಮನಿ, ವಿಜಾಪುರದ ಆದಿಲ್‌ಶಾಹಿಗಳು ಮತ್ತು ವಿಜಯನಗರದ ಮಧ್ಯೆ ಸಂಘರ್ಷಕ್ಕೆ ಕಾರಣವಾಗಿದ್ದು ಕೃಷ್ಣಾ ಮತ್ತು ತುಂಗಭದ್ರಾ ದೋಅಬ್ ಪ್ರದೇಶ. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಅನೇಕ ಕೋಟೆಗಳು ನಿರ್ಮಾಣವಾಗಿದ್ದನ್ನು ಕಾಣಬಹುದು.

ಇತಿಹಾಸ ಆರಂಭಕಾಲದಲ್ಲಿ ನಮ್ಮಲ್ಲಿದ್ದ ಜನಸಂಖ್ಯೆಯೂ ಕಡಿಮೆ, ತಾಂತ್ರಿಕತೆಯೂ ಕಡಿಮೆ ಇಂತಹ ಸಂದರ್ಭದಲ್ಲಿ ಸರಳವಾದ ಮಣ್ಣಿನ ಕೋಟೆಗಳಿದ್ದರೆ ಸಾಕಾಗುತ್ತಿತ್ತು. ಮೆಗಸ್ತನಿಸನು ಮೌರ್ಯರ ರಾಜಧಾನಿ ಪಾಟಲಿಪುತ್ರದ ಸುತ್ತಲೂ ಮರದ ಕೋಟೆ ಇದ್ದುದರ ಬಗ್ಗೆ ತಿಳಿಸುತ್ತಾನೆ. ಆದರೆ ತಾಂತ್ರಿಕತೆ ಬೆಳೆದಂತೆಲ್ಲಾ ಈ ಮಣ್ಣಿನ ಕೋಟೆಗಳ ಬದಲಾಗಿ ಇಟ್ಟಿಗೆಗಳಿಂದ ನಿರ್ಮಿತವಾಗುವ ಕೋಟೆಗಳು ಆರಂಭವಾದವು. ಮದ್ದುಗುಂಡುಗಳ ಆವಿಷ್ಕಾರದಿಂದ ಭದ್ರವಾದ ಕಲ್ಲಿನ ಕೋಟೆಯ ಅವಶ್ಯಕತೆಯೂ ವಿಪರೀತವಾಯಿತು. ಹೀಗಾಗಿ ನಂತರ ಕಾಲಘಟ್ಟದಲ್ಲಿ ಬಲವಾದ ಕಲ್ಲಿನ ಕೋಟೆಗಳ ನಿರ್ಮಾಣ ಪ್ರಾರಂಭವಾಯಿತು. ಹೀಗೆ ಕೋಟೆಯ ಬೆಳವಣಿಗೆ ಕಾಲದಿಂದ ಕಾಲಕ್ಕೆ ಆದ ಬದಲಾವಣೆಗಳಿಗೆ ತಕ್ಕಂತೆ ಮಾರ್ಪಾಟಾಗಿ ನಿರ್ಮಾಣಗೊಳ್ಳುತ್ತಾ ಬಂದವು. ಪ್ರದೇಶದಿಂದ ಪ್ರದೇಶಕ್ಕೆ ನೈಸರ್ಗಿಕವಾಗಿ ಭಿನ್ನತೆ ಇರುವುದರಿಂದ ಕೋಟೆಯ ರಚನೆ ಮತ್ತು ಸ್ವರೂಪದಲ್ಲಿಯೂ ವೈವಿಧ್ಯತೆಯನ್ನು ಕಾಣುತ್ತೇವೆ.

ಭಾರತದಲ್ಲಿ ಪ್ರಾಗಿತಿಹಾಸ ಕಾಲದಿಂದಲೂ ಮಾನವನು ತಾನು ವಾಸಿಸುವ ನೆಲೆಯ ಸುತ್ತಲೂ ರಕ್ಷಣೆಗಾಗಿ ಬೇಲಿ ಅಥವಾ ಕಿರುಗಾತ್ರದ ಗೋಡೆಯನ್ನು ನಿರ್ಮಿಸಿರುವ ಉದಾಹರಣೆಗಳಿವೆ. ಹರಪ್ಪಾ ಪೂರ್ವಕಾಲೀನ ನಿವೇಶನವೆನಿಸಿರುವ ಕೋಟ್-ದಿಜಿಯಲ್ಲಿ ಹರಪ್ಪಾ ಜನರು ನೆಲೆಸುವ ಮುನ್ನ ಕಲ್ಲಿನ ಅಡಿಪಾಯದ ಮೇಲೆ ಹಸಿ ಇಟ್ಟಿಗೆಯಿಂದ ಕಟ್ಟಿದ ಕೋಟೆಯಿಂದ ಕೂಡಿದ ಗ್ರಾಮವೊಂದು ಇಲ್ಲಿತ್ತೆಂಬುದನ್ನು ೧೯೫೭ರಲ್ಲಿ ನಡೆದ ಉತ್ಖನನ ಸ್ಪಷ್ಟಪಡಿಸಿದೆ.[೬೨] ಗುಲಬರ್ಗಾ ಜಿಲ್ಲೆಯ ಬೂದಿಹಾಳದಲ್ಲಿ ನವಶಿಲಾಯುಗ ಕಾಲಕ್ಕೆ ಸೇರಿದ ಕಲ್ಲು ಹಾಗೂ ಮಣ್ಣಿನಿಂದ ರಚಿಸಿದ ಒಂದು ರಕ್ಷಣಾಗೋಡೆಯನ್ನು ಉತ್ಖನನಗಳಲ್ಲಿ ಶೋಧಿಸಲಾಗಿದೆ. ಕರ್ನಾಟಕದಲ್ಲಿ ಈವರೆಗೂ ದೊರೆತ ಅತ್ಯಂತ ಪ್ರಾಚೀನ ರಕ್ಷಣಾಗೋಡೆ ಇದಾಗಿದೆ.[೬೩] ನಾಗರಿಕತೆ ಬೆಳೆದಂತೆ ಸಮಾಜರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಹೀಗಾಗಿ ಹರಪ್ಪಾ ಸಂಸ್ಕೃತಿಯ ಪ್ರಮುಖ ನಗರಗಳು ರಕ್ಷಣಾತ್ಮಕ ಕಟ್ಟಡಗಳನ್ನು ಹೊಂದಿದ್ದವು. ಯೋಜನಾಬದ್ಧವಾಗಿ ನಿರ್ಮಾಣವಾದ ನಗರದ ಸುತ್ತಲೂ ಕೋಟೆಗಳನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಹಸಿ ಮತ್ತು ಸುಟ್ಟ ಇಟ್ಟಿಗೆ ಹಾಗೂ ಮಣ್ಣನ್ನು ಉಪಯೋಗಿಸಿ ಹೆಚ್ಚಿನ ಪ್ರಮಾಣದಲ್ಲಿ ಕೋಟೆ ಕಟ್ಟಲಾಗಿತ್ತು ಎಂಬುದು ಉತ್ಖನನಗಳಲ್ಲಿ ದೊರೆತ ಅವಶೇಷಗಳಿಂದ ತಿಳಿದುಬರುತ್ತದೆ. ಹರಪ್ಪಾ, ಮಹೆಂಜೊದಾರೊ, ಲೋಥಾಲ್, ಕಾಲಿಬಂಗನ್, ಕೋಟ್-ದಿಜಿ

ಮುಂತಾದ ನಗರಗಳು ಕೋಟೆಗಳಿಂದ ಆವೃತ್ತವಾಗಿದ್ದವು. ಹರಪ್ಪಾದಲ್ಲಿ ೧೪ಮೀ. ದಪ್ಪವಾದ ಗೋಡೆಗಳನ್ನು ಹಸಿ ಇಟ್ಟಿಗೆಗಳಿಂದ ಕಟ್ಟಿದ್ದಾರೆ. ಲೋಥಾಲ್‌ದಲ್ಲಿಯೂ ಇದೇ ರೀತಿಯ ನಿರ್ಮಾಣ ಕಂಡುಬಂದಿದೆ. ಹರಪ್ಪಾದಲ್ಲಿಯ ಹೊರ ಎಲ್ಲೆಯ ಗೋಡೆಯು ಎರಡೂ ಕಡೆಯಿಂದಲೂ ಮೇಲಕ್ಕೆ ಹೋದಂತೆ ಕ್ರಮೇಣ ಕಿರಿದಾಗುತ್ತಾ ಹೋಗಿದೆ. ಲೋಥಾಲ್‌ನಲ್ಲಿ ನಗರದಸುತ್ತಲೂ ಕೋಟೆಗೋಡೆ ಇದ್ದರೆ ಹರಪ್ಪಾದಲ್ಲಿ ಈ ರಚನೆ ಕಂಡುಬಂದಿಲ್ಲ. ಹರಪ್ಪಾದಲ್ಲಿ ಗಮನಾರ್ಹವಾದ ಅಂಶವೆಂದರೆ ಅಲ್ಲಲ್ಲಿ ಆಯತಾಕಾರವಾಗಿ ನಿರ್ಮಿಸಿರುವ ಹೊರಚಾಚಿರುವ(ಗೋಪುರಗಳು) ಭಾಗಗಳು. ಈ ತಾಂತ್ರಿಕತೆಯ ರಚನೆ ಮಹೆಂಜೊದಾರೋದಲ್ಲಿಯು ಕಂಡುಬರುತ್ತದೆ.[೬೪]

ನಂತರ ಋಗ್ವೇದ ಹಾಗೂ ಅನಂತರದ ಪ್ರಾಚೀನ ಗ್ರಂಥಗಳಲ್ಲಿ ಕೋಟೆಯ ಬಗೆಗೆ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ. ಋಗ್ವೇದದಲ್ಲಿ ಬರುವ 'ಪುರ' ಹಾಗೂ 'ದುರ್ಗ'ಗಳು ಗೋಡೆಯಿಂದ ಆವೃತ್ತವಾದ ಪ್ರದೇಶಗಳಾಗಿರಬೇಕು. ಆರ್ಯರ ಯುದ್ಧನಾಯಕ ಇಂದ್ರನು ದಸ್ಯು ಮತ್ತು ದಾಸರೊಂದಿಗೆ ನಡೆದ ನಿರಂತರ ಯುದ್ಧದಲ್ಲಿ ಹಲವು ಕೋಟೆಗಳನ್ನು ನಾಶ ಮಾಡಿದನು. ಅವನು ಆರ್ಯರಲ್ಲದ ಚಕ್ರವರ್ತಿಗಳನ್ನು ಅಧಿಕಾರ ಚ್ಯುತರನ್ನಾಗಿಸಿದನು. ಇಂದ್ರನಂತೆಯೇ ಕೋಟೆಗಳನ್ನು ಧ್ವಂಸ ಮಾಡುವಲ್ಲಿ ಅಗ್ನಿಯದು ಮಹತ್ತ್ವದ ಪಾತ್ರ. ಅಸಂಖ್ಯಾತವಾಗಿದ್ದ ದಾಸರ ಕೋಟೆಗಳನ್ನು ಕೇವಲ ತೊಂಬತ್ತಕ್ಕೆ ಇಳಿಸಲು ಅಗ್ನಿಯು ಇಂದ್ರನಿಗೆ ನೆರವಾದನು. ಅಥರ್ವವೇದದಲ್ಲಿ ಕಲ್ಲಿನ ಗೋಡೆಗೆ ಸಂವಾದಿಯಾಗಿ 'ವಪ್ರ' ಪದವನ್ನು ಬಳಸಿದೆ. ಋಗ್ವೇದದಲ್ಲಿ ಬರುವ 'ಮಹಾಪುರ' ಪದವು ಕೋಟೆಗೆ ಸಂವಾದಿಯಾಗಿದ್ದು ಯಜುರ್ವೇದ ಹಾಗೂ ಬ್ರಾಹ್ಮಣಗಳಲ್ಲಿ ಈ ಪದ ಬಳಕೆಯಾಗಿದೆ. ಐತರೇಯ ಬ್ರಾಹ್ಮಣದ ಪ್ರಕಾರ ಮೂವರು ಅಗ್ನಿಗಳು ಅಸುರರಿಂದ ಯಜ್ಞವನ್ನು ಸಂರಕ್ಷಿಸಿಕೊಳ್ಳಲು ಮೂರು ಕೋಟೆಗಳನ್ನು ನಿರ್ಮಿಸಿದರು.[೬೫]

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ ಋಗ್ವೇದದಲ್ಲಿ ಆರ್ಯರು ಮೊದಮೊದಲು ಕೋಟೆಯ ವಿಧ್ವಂಸಕರಾಗಿ ಕಾಣುತ್ತಾರೆಯೇ ಹೊರತು ಅವುಗಳ ನಿರ್ಮಾಪಕರಾಗಿ ಕಾಣುವುದಿಲ್ಲ. ಅಲ್ಲದೆ ವೇದಗಳಲ್ಲಿ ಅನೇಕ ನಗರಗಳ ಬಗ್ಗೆ ಉಲ್ಲೇಖವಿದೆ. ಹಾಗಾಗಿ ಅವು ವೇದಗಳ ಕಾಲಘಟ್ಟಕ್ಕಿಂತಲೂ ಮೊದಲೇ ಅವು ಇಲ್ಲಿಯ ಮೂಲನಿವಾಸಿಗಳ ನಗರಗಳಾಗಿದ್ದು ತಮ್ಮ ಹಾಗೂ ಸಮುದಾಯದವರ ರಕ್ಷಣೆಗೆ ಕೋಟೆಗಳನ್ನು ಕಟ್ಟಿಕೊಂಡಿರುವ ಸಾಧ್ಯತೆಗಳಿವೆ.

ಪುರಾಣಗಳಲ್ಲಿಯೂ ಕೋಟೆಯ ಕುರಿತಾಗಿ ಉಲ್ಲೇಖಗಳು ಕಂಡುಬರುತ್ತವೆ. ಇಂದ್ರಪ್ರಸ್ಥ ನಗರದ ಪಾಂಡವರ ಕೋಟೆಯ ಒಂದು ಭಾಗವನ್ನು ಹುಮಾಯೂನನು ಸರಿಪಡಿಸಿದ ಪ್ರತೀತಿ ಇದೆ. ವಾಲ್ಮೀಕಿ ರಾಮಾಯಣದಲ್ಲಿ ಮತ್ತು ಮಹಾಭಾರತದಲ್ಲಿ ಕೋಟೆಗಳ ಉಲ್ಲೇಖ ಕಂಡುಬರುತ್ತದೆ.[೬೬]

ಇತಿಹಾಸ ಆರಂಭಿಕ ಕಾಲದ ಪ್ರಮುಖ ನಗರಗಳು ಕೋಟೆಗಳಿಂದ ಆವೃತ್ತವಾಗಿದ್ದವು ಎಂಬುದು ತಿಳಿದುಬರುತ್ತದೆ. ಉತ್ತರಪ್ರದೇಶದ ಗಂಗಾನದಿ ಬಯಲಿನ ಅಹಿಚ್ಛತ್ರ ರಾಜಧಾನಿ ರಕ್ಷಣೆಗಾಗಿ ಕೋಟೆಯಂತಹ ಗೋಡೆಯಿಂದ ಆವರಿಸಲ್ಪಟ್ಟಿತ್ತು.[೬೭] ಅದೇ ರೀತಿ ಗಂಗಾ-ಯಮುನಾ

ನದಿಗಳ ಸಂಗಮದ ಬಳಿ ಇರುವ ಕೌಶಾಂಬಿಯಲ್ಲಿ ಕ್ರಿ.ಪೂ. ೬ನೇ ಶತಮಾನದಲ್ಲಿ ಅಲ್ಲಿ ಬಲವಾದ ಕೋಟೆಯನ್ನು ನಿರ್ಮಿಸಲಾಗಿತ್ತು ಎಂಬುದನ್ನು ಅಲ್ಲಿ ನಡೆದ ಉತ್ಖನನದಿಂದ ತಿಳಿದುಬರುತ್ತದೆ.[೧೮] ನಾಲ್ಕು ಮೈಲಿ ವಿಸ್ತಾರವಿರುವ ಈ ಕೋಟೆಗೆ ಹನ್ನೊಂದು ದ್ವಾರಗಳಿದ್ದಂತೆ ತಿಳಿದುಬಂದಿದೆ.[೧೯] ಉಜ್ಜಯಿನಿಯು ದೊಡ್ಡ ಪ್ರಮಾಣದಲ್ಲಿ ಕಬ್ಬಿಣದ ಲೋಹಗಾರಿಕೆಯನ್ನು ಕೈಗೊಂಡು ಬಲವಾದ ಕೋಟೆ ಕೊತ್ತಲಗಳನ್ನು ನಿರ್ಮಿಸಿತ್ತು. ಮಗಧ ರಾಜ್ಯದ ಅಜಾತಶತ್ರು(ಕ್ರಿ.ಪೂ. ೪೯೨ ರಿಂದ ೪೬೦) ರಾಜಗೃಹಕ್ಕೆ ಕೋಟೆ ನಿರ್ಮಿಸಿದ್ದನು. ಅದರ ಅವಶೇಷಗಳನ್ನು ಈಗಲೂ ಕಾಣಬಹುದು. ಮಗಧ ರಾಜ್ಯದ ಉದಯಿನ(ಕ್ರಿ.ಪೂ. ೪೬೦ ರಿಂದ ೪೪೪) ಇವನ ಆಳ್ವಿಕೆಯ ಮಹತ್ವಪೂರ್ಣ ಘಟನೆ ಗಂಗಾ ಮತ್ತು ಶೋಣ ನದಿಗಳ ಸಂಗಮದಲ್ಲಿ ನಿರ್ಮಾಣವಾದ ಪಾಟಲಿಪುತ್ರದ ಕೋಟೆಯ ನಿರ್ಮಾಣ.[೨೦] ಈ ಎಲ್ಲ ಅಂಶಗಳನ್ನು ಇಲ್ಲಿ ನಡೆದ ಉತ್ಖನನಗಳು ಸ್ಪಷ್ಟಪಡಿಸಿವೆ.

ಮಗಧ ರಾಜ್ಯವನ್ನು ಕೊನೆಗೊಳಿಸಿ ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಬಹುತೇಕ ಭಾರತದ ಒಟ್ಟು ಪ್ರದೇಶ ಒಂದು ಪ್ರಭುತ್ವದ ಆಡಳಿತಕ್ಕೆ ಒಳಪಟ್ಟಿತ್ತು. ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೌರ್ಯರು ಇಲ್ಲಿ ಕೋಟೆಯನ್ನು ನಿರ್ಮಿಸಿದ್ದು ಉತ್ಖನನಗಳಿಂದ ನಮಗೆ ಸ್ಪಷ್ಟವಾಗುತ್ತದೆ. ಗ್ರೀಕ್ ರಾಯಭಾರಿ ಮೆಗಸ್ತನೀಸನು ವಿವರಿಸುವಂತೆ ಪಾಲಿಬೋತ್ರ(ಪಾಟಲಿಪುತ್ರ) ನಗರದ ಉದ್ದ ಎಂಬತ್ತು ಮಜಲು, ಇದರ ಸುತ್ತ ಮೂವತ್ತು ಮೊಳ ಆಳವಾದ ಆರುನೂರು ಅಡಿ ಅಗಲವಾದ ಕಂದಕವಿದೆ. ಈ ಕಂದಕದಲ್ಲಿ ನಗರದಿಂದ ಬಂದ ಕೊಚ್ಚೆಯ ನೀರು ನಿಲ್ಲುತ್ತದೆ. ಈ ಕಂದಕವನ್ನು ಅನುಸರಿಸಿ ಸುತ್ತಲೂ ಕಟ್ಟಿದ ಮರದ ಕೋಟೆಯಿದೆ. ಈ ಕೋಟೆಗೆ ಅರವತ್ತುನಾಲ್ಕು ಹೆಬ್ಬಾಗಿಲುಗಳಿವೆ. ಸುತ್ತಲೂ ಐನೂರೆಪ್ಪತ್ತು ಗೋಪುರಗಳಿವೆ. ಗೋಡೆಯಲ್ಲಿ ಬಾಣಗಳನ್ನು ಹೊಡೆಯಲನುಕೂಲವಾದಂತಹ ತೂತುಗಳಿವೆ.[೨೧] ಕಳಿಂಗ ರಾಜ್ಯದ ರಾಜಧಾನಿಯೆಂದು ಗುರುತಿಸುವ ಒರಿಸ್ಸಾದ ಭುವನೇಶ್ವರ ಹತ್ತಿರದ ಶಿಶುಪಾಲಗಡದಲ್ಲಿ ಆಯತಾಕಾರದ ಕೋಟೆ ಇದೆ. ವಿಶಾಲವಾದ ಈ ಕೋಟೆ ಸುರಕ್ಷಿವಾಗಿ ಉಳಿದುಕೊಂಡು ಬಂದ ಅತ್ಯಂತ ಪ್ರಾಚೀನ ಕೋಟೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಾಚೀನ ಕೋಟೆಗಳ ಚಿತ್ರಣ ಬೌದ್ಧಜಾತಕ ಶಿಲ್ಪಗಳಲ್ಲಿ ಕಾಣಬರುತ್ತದೆ. ಸಾಂಚಿ, ಬಾರ್ಹುತ್, ಅಮರಾವತಿ, ನಾಸಿಕ್, ಬೌದ್ಧ ಶಿಲ್ಪಗಳಲ್ಲಿ ಹಾಗೂ ಅಜಂತದ ವರ್ಣ ಚಿತ್ರಕಲೆಗಳಲ್ಲಿ ಕೋಟೆಗಳ ಚಿತ್ರಣವನ್ನು ಕಾಣಬಹುದು.[೨೨]

ಕರ್ನಾಟಕದ ರಾಜಕೀಯ ಇತಿಹಾಸ ಅಧಿಕೃತವಾಗಿ ಆರಂಭವಾಗುವುದೇ ಅಶೋಕನ ಶಾಸನಗಳಿಂದ. ಇವು ಸನ್ನತಿ, ಮಸ್ಕಿ, ನಿಟ್ಟೂರು, ಉದಯಂಗೊಳ, ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ, ಸಿದ್ಧಾಪುರದಲ್ಲಿ ದೊರೆತಿವೆ. ಕನ್ನಡ ನಾಡಿನಲ್ಲಿ ದೊರೆತ ಆತನ ಶಾಸನಗಳಲ್ಲಿ ಬ್ರಹ್ಮಗಿರಿ ಶಾಸನವು ಮುಖ್ಯವಾದುದು. ಕರ್ನಾಟಕದ ಕೋಟೆಗಳ ಉಲ್ಲೇಖ ಈ ಶಾಸನದಿಂದಲೇ ಪ್ರಾರಂಭವಾಗುತ್ತದೆ. ಇದರಲ್ಲಿ 'ಇಸಿಲ' ಎಂಬ ಪದವಿದೆ. ಇದು ಮೌರ್ಯರ ದಕ್ಷಿಣದ ಭಾಗಗಳ ಆಡಳಿತದ ಕೇಂದ್ರವಾಗಿತ್ತೆಂಬ ಸೂಚನೆ ಇದರಲ್ಲಿದೆ. ಈ ಭಾಗದಲ್ಲಿ ನಡೆದ ಉತ್ಖನನದಲ್ಲಿ ಪ್ರಾಚೀನ ಕಾಲದಲ್ಲಿ

ಬಳಸುತ್ತಿದ್ದ ವಸ್ತುಗಳು ದೊರೆತಿವೆ. ಮೌರ್ಯರ ಅವಧಿಯಲ್ಲಿ ಇಸಿಲ ಪಟ್ಟಣ ಪ್ರಸಿದ್ಧಿಗೆ ಬಂದಿರಬಹುದು. ಇದು ಆಡಳಿತದ ಕೇಂದ್ರವಾಗಿದ್ದರಿಂದ ಇದರ ಸುತ್ತ ರಕ್ಷಣಾಗೋಡೆ ಇದ್ದಿರಬೇಕು. "It can be shown that the place name Isila occurring in the first line of the Brahmagiri edict of Ashoka where in his mahamatas resided is a prakritization of the kannada word 'esil' whose Tamil cognate is eyil meaning fort or fortified town: the name Eyilnadu(the land of forts and fortified towns) occurs in two tamil inscription of Kolar district of the Karnataka state" ಎಂದು ಡಿ. ಎಲ್. ನರಸಿಂಹಾಚಾರ್ ಈ ಬಗ್ಗೆ ಖಚಿತವಾದ ಮಾತುಗಳಲ್ಲಿ ಹೇಳಿದ್ದಾರೆ. ಆದ್ದರಿಂದ ಈ ಪದ ಕನ್ನಡದ ಹಳಮೆಯನ್ನು ಗುರುತಿಸಲು ನೆರವು ನೀಡುವಂತೆ ಕೋಟೆಯ ಪ್ರಾಚೀನತೆಯನ್ನು ಕಣ್ಣೆದುರು ತೆರೆಯುತ್ತದೆ. ಸುತ್ತಲೂ ಬೆಟ್ಟವಿದ್ದು ಇಸಿಲ ಕಣಿವೆಯ ನಡುವಿದ್ದು ಇದೇ ಮೊದಲ ರಕ್ಷಣಾಗೋಡೆಯಂತಿದೆ. ಪ್ರಾಚೀನವಾದ ಖಾರವೇಲನ ಹಾಥಿಗುಂಪಾ ಶಾಸನವು ಸಹ ಕೋಟೆಯ ರಚನೆಯ ಬಗ್ಗೆ ಮಾಹಿತಿ ನೀಡುತ್ತದೆ. ಇದರಲ್ಲಿ ರಾಜನು ನಗರದ ಕೋಟೆಯ ದುರಸ್ತಿಗೆಂದು ವಸ್ತುಗಳನ್ನು ಒಯ್ಯುತ್ತಿರುವ ಉಲ್ಲೇಖವಿದೆ.[೭೩] ಅಲ್ಲದೆ ಕೌಟಿಲ್ಯನ ಅರ್ಥಶಾಸ್ತ್ರವು ಕೋಟೆ ಕುರಿತಾಗಿ ಸಮಗ್ರವಾದ ವಿವರವನ್ನು ನೀಡುತ್ತದೆ. ಹಾಗಾಗಿ ಮೌರ್ಯರ ಕಾಲಕ್ಕಾಗಲೇ ಕೋಟೆಯ ರಚನೆ ಕುರಿತಾಗಿ ಸಾಕಷ್ಟು ಅಂಶಗಳು ತಿಳಿದುಬರುತ್ತವೆ.

ಮೌರ್ಯರ ನಂತರ ಶಾತವಾಹನರು ಪ್ರತಿಷ್ಠಾನ(ಈಗಿನ ಪೈಠಾಣ, ಮಹಾರಾಷ್ಟ್ರ ರಾಜ್ಯ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದರು. ಇವರ ಸಾಮಂತರಾದ ಚುಟು ಅರಸರು ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಶಾತವಾಹನರ ಕಾಲದ ಶಾಸನ ಶಿಲ್ಪ ಮತ್ತಿತರ ಅವಶೇಷಗಳು ಸನ್ನತಿ, ಬನವಾಸಿ, ಚಂದ್ರವಳ್ಳಿ, ಬ್ರಹ್ಮಗಿರಿ ಮತ್ತು ವಡಗಾಂವ-ಮಾಧವಪುರ ಅಲ್ಲದೆ ಕರ್ನಾಟಕದ ಇತರ ಭಾಗಗಳಲ್ಲಿ ಕಂಡುಬಂದಿವೆ. ಶಾತವಾಹನರ ಕಾಲದ ಸನ್ನತಿ ಕೋಟೆಯು ಕರ್ನಾಟಕದ ಅತ್ಯಂತ ಪ್ರಾಚೀನ ಕೋಟೆಯಾಗಿದೆ. ಇಲ್ಲಿ ಭೀಮಾ ನದಿಯು 'U' ಆಕಾರದಲ್ಲಿ ಸುತ್ತುವರಿದಿದ್ದು ಸ್ವಾಭಾವಿಕ ರಕ್ಷಣೆಯನ್ನು ನೀಡುತ್ತದೆ. ಒಟ್ಟು ೫೦೦ ಎಕರೆ ಪ್ರದೇಶದಲ್ಲಿ ಸುತ್ತ ಎರಡು ಸುತ್ತಿನ ಕೋಟೆ ಇಲ್ಲಿ ಕಂಡುಬರುತ್ತದೆ. ಕೋಟೆಯನ್ನು ದೊಡ್ಡ ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ. ಹೊರಕೋಟೆಯ ಎತ್ತರ ೫ ರಿಂದ ೬ ಮೀ ಮತ್ತು ಅಗಲ ೨ ರಿಂದ ೩ ಮೀ. ಇಟ್ಟಿಗೆಯ ಗಾತ್ರ ೫೫x೨೮x೦೯ ಸೆಂ.ಮೀ. ಇದು ಕ್ರಿ.ಶ. ೧ ಮತ್ತು ೩ನೇ ಶತಮಾನದ್ದು.[೭೪] ವಡಗಾಂವ-ಮಾಧವಪುರದಲ್ಲಿ ಅ. ಸುಂದರ ಅವರು ಉತ್ಖನನ ಕೈಗೊಂಡು ಇಲ್ಲಿ ಶಾತವಾಹನರ ಕಾಲದ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ. ಇಲ್ಲಿ ಎಂಟು ಬಗೆಯ ವಿವಿಧ ಇಟ್ಟಿಗೆ ಕಟ್ಟಡಗಳ ಅವಶೇಷಗಳನ್ನು ಶೋಧಿಸಿದ್ದಾರೆ. ಇಲ್ಲಿ ಶಾತವಾಹನರ ಕಾಲದ ರಕ್ಷಣಾಗೋಡೆ ಇತ್ತೆಂದು ತಿಳಿಸುತ್ತದೆ.[೭೫]

ಕರ್ನಾಟಕವನ್ನು ಆಳಿದ ಪ್ರಥಮ ರಾಜವಂಶವೆಂಬ ಬಿರುದು ಕದಂಬರಿಗಿದೆ. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೪ ರಿಂದ ೬ನೇ ಶತಮಾನದವರೆಗೆ ರಾಜ್ಯವಾಳಿದರು. ತಾಳಗುಂದ, ಹಲಸಿ, ಹರೇಶಪುರ, ಉಚ್ಚಂಗಿ, ಚಂದ್ರವಳ್ಳಿ, ಹಾನಗಲ್ಲು, ಬನವಾಸಿ ಮುಂತಾದ ಕಡೆಗಳಲ್ಲಿ ಕದಂಬರ ಕಾಲದ ನಗರಗಳು ಅಸ್ತಿತ್ವದಲ್ಲಿದ್ದವು. ಬನವಾಸಿಯಲ್ಲಿ ಇರುವ ಕೋಟೆಯು ಮೂರು ಹಂತಗಳಲ್ಲಿ ಕಟ್ಟಲಾಗಿದ್ದು ಕದಂಬರಿಗಿಂತ ಮುಂಚೆ ಬನವಾಸಿಯಲ್ಲಿ ರಾಜ್ಯಭಾರ ಮಾಡಿದ ಶಾತವಾಹನರ ಸಾಮಂತರಾದ ಚುಟು ಅರಸರ ಕಾಲದ್ದು. ಈ ಕಾಲದ ಕೋಟೆಯ ಗೋಡೆಯು ೪೫x೨೨x೭೧/೨ ಸೆಂ.ಮೀ. ಅಳತೆಯ ಇಟ್ಟಿಗೆಗಳಿಂದ ನಿರ್ಮಾಣವಾಗಿದೆ. ಇನ್ನು ಮೊದಲ ಮತ್ತು ಕೊನೆಯ ಕದಂಬ ಅರಸರ ಕಾಲದಲ್ಲಿ ಮಣ್ಣು, ಇಟ್ಟಿಗೆ ಹಾಗೂ ಈ ಭಾಗದ ವಿಶೇಷ ಕಲ್ಲುಗಳಾದ ಲ್ಯಾಟರೈಟ್ ಕಲ್ಲುಗಳಿಂದ ಕೋಟೆಯ ಗೋಡೆಗಳನ್ನು ನಿರ್ಮಿಸಲಾಗಿದೆ. ೮೫೦ ಮೀ. ಉತ್ತರ ದಕ್ಷಿಣಕ್ಕೂ ೬೦೦ ಮೀ. ಪೂರ್ವ ಪಶ್ಚಿಮಕ್ಕೂ ಇರುವ ಈ ಕೋಟೆಯ ಸುತ್ತಳತೆ ೨೧೪೦ ಮೀ. ಇದೆ ಕೋಟೆಯು ವರದಾನದಿಯ ಸಹಜರಕ್ಷಣೆ ಪಡೆದದ್ದು ಕಂಡುಬರುತ್ತದೆ.[೭೬] ಚಾಲುಕ್ಯ ವಂಶದ ಎರಡನೇ ಪುಲಕೇಶಿಯ ಐಹೊಳೆ ಶಾಸನ ಬನವಾಸಿಯನ್ನು ಸ್ಥಲದುರ್ಗವೆಂದು ಬಣ್ಣಿಸಿ, ಐಶ್ವರ್ಯದಲ್ಲಿ ಅದು ಇಂದ್ರನ ರಾಜಧಾನಿಗೆ ಸವಾಲಾಗಿತ್ತು ಎಂದು ತಿಳಿಸುತ್ತದೆ.[೭೭] ಈ ಕದಂಬರ ಕೋಟೆಗಳು ಅತ್ಯಂತ ಪ್ರಾಚೀನ ಕೋಟೆಗಳಾಗಿದ್ದು, ಮೃದ್ ಕೋಟೆಗಳಾಗಿವೆ. ಯುದ್ಧಕಲೆಯಲ್ಲಿ ಬಿಲ್ಲು ಬಾಣಗಳು ಮಾತ್ರ ಉಪಯೋಗದಲ್ಲಿ ಇದ್ದುದರಿಂದ ರಕ್ಷಣಾ ದೃಷ್ಟಿಯಿಂದ ಸರಳ ಹಾಗೂ ಸಾದಾ ಆಗಿವೆ. ಮಲೆನಾಡಿನಲ್ಲಿರುವ ಇವರ ಕಾಲದ ಕೋಟೆಗಳು ಸುತ್ತಲಿನ ಪರಿಸರ ಹಾಗೂ ಅರಣ್ಯ ಕೂಡ ಇವರಿಗೆ ರಕ್ಷಣೆಯನ್ನು ಒದಗಿಸಿದ್ದವು.[೭೮]

ಕದಂಬರ ನಂತರ ಅಧಿಕಾರಕ್ಕೆ ಬಂದ ಚಾಳುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೬ನೇ ಶತಮಾನದಿಂದ ಕ್ರಿ.ಶ. ೮ ನೇ ಶತಮಾನದವರೆಗೆ ಆಳ್ವಿಕೆಯನ್ನು ಮಾಡಿದ್ದಾರೆ. ಬಾದಾಮಿಯಲ್ಲಿ ಕ್ರಿ.ಶ. ೫೪೩ರಲ್ಲಿ ಒಂದನೆಯ ಪುಲಕೇಶಿ ನಿರ್ಮಿಸಿದ ಕೋಟೆಯು ಪ್ರಥಮ ಶಾಸನೋಕ್ತ ಕೋಟೆಯಾಗಿದೆ. ನೈಸರ್ಗಿಕ ನಿರ್ಮಿತ ಬೆಟ್ಟ ಕಣಿವೆ ಪ್ರದೇಶವು ಕೋಟೆಯ ನಿರ್ಮಾಣಕ್ಕೆ ಹಾಗೂ ವೀಕ್ಷಣಾ ಕಾರ್ಯಕ್ಕೆ ಅನುಕೂಲಕರವಾಗಿತ್ತು. ಹೀಗಾಗಿ ಈ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಒಂದನೆಯ ಪುಲಕೇಶಿ ಇಲ್ಲಿ ಕೋಟೆಯನ್ನು ಕಟ್ಟಿಸಿದನೆಂದು ಹೇಳಬಹುದು.

ಸ್ವಸ್ತಿ ಶಕವರ್ಷೇಷು ಚತುಶ್ಶತೇಷು ಪಞ್ಚಷಷ್ಟಿಯುತೇಷು
ಅಶ್ವಮೇಧಾದಿಯಜ್ಞಾನಾಂ ಯಜ್ವಾ ಶ್ರೌತವಿಧಾನತಃ
ಹಿರಣ್ಯಗರ್ಭಸಮ್ಭೂತಶ್ಚಲಿಕ್ಯೋ ವಲ್ಲಭೇಶ್ವರಃ
ಧರಾಧರೇನ್ದ್ರ ವಾತಾಪಿಮಜೇಯಮ್ಭೂತಯೇ ಭುವಃ
ಅಧಸ್ತಾದುಪರಿಷ್ಟಾಚ್ಚ ದುರ್ಗ್ಗಮೇತದಚೀಕರತ್[೭೯]

ಐಹೊಳೆಯ ಮೇಗುತಿ ದೇವಾಲಯದ ಗುಡ್ಡದ ತಪ್ಪಲಿನಲ್ಲಿ ಐದು ಎಕರೆ ವಿಸ್ತಾರವಾದ ಪ್ರದೇಶವನ್ನು ಒಳಗೊಂಡಂತೆ ಇವರ ಕಾಲಾವಧಿಯ ಕೋಟೆ ಕಂಡುಬರುತ್ತದೆ.[೮೦] ಕ್ರಿ.ಶ. ೪ ರಿಂದ ೬ನೇ ಶತಮಾನದ ವೇಳೆಗೆ ಕೋಟೆಗಳ ನಿರ್ಮಾಣ ಒಂದು ಹೊಸ ಆಯಾಮ ಪಡೆಯಿತು. ತೀಕ್ಷ್ಣವಾದ ಬಿಲ್ಲು ಬಾಣಗಳು ಹಾಗೂ ವಿನಾಶಕಾರಿ ಆಯುಧಗಳು ಯುದ್ಧಗಳಲ್ಲಿ ಬಳಕೆಗೆ ಬಂದಿದ್ದರಿಂದ ಕೋಟೆಗಳನ್ನು ದಪ್ಪವಾದ ಕಲ್ಲುಗಳಿಂದ ನಿರ್ಮಿಸುವ ರಚನಾಕ್ರಮ ಬಳಕೆಗೆ ಬಂದಿತ್ತು. ಪ್ರತಿ ತಂತ್ರಗಾರಿಕೆಗೆ ಅನುಕೂಲವಾಗುವಂತೆ ಹೆಚ್ಚು ಹೆಚ್ಚು ಕೊತ್ತಲಗಳ ಅಳವಡಿಕೆ ಪ್ರಾರಂಭವಾಯಿತು. ಕ್ರಿ.ಶ. ೬ನೆಯ ಶತಮಾನದಿಂದ ರಚಿತವಾದ ಕೋಟೆಗಳಲ್ಲಿ ಚೌಕಾಕಾರದ ಕೊತ್ತಲ ಹಾಗೂ ಭದ್ರವಾದ ದ್ವಾರಗಳ ನಿರ್ಮಾಣ ಸಾಮಾನ್ಯ. ಅಲ್ಲದೆ ಕೋಟೆಗಳ ನಿರ್ಮಾಣವು ಶತ್ರುಗಳ ದಾಳಿಗೆ ತುತ್ತಾಗದಂತೆ ಹೆಚ್ಚಾಗಿ ಎತ್ತರವಾದ ಬೆಟ್ಟ, ಗುಡ್ಡಗಳ ಮೇಲೆ ನಿರ್ಮಿಸಲು ಪ್ರಾರಂಭಿಸಿದರು.[೮೧] ಇವರು ಬೃಹತ್ ಬಂಡೆಗಲ್ಲುಗಳನ್ನು ಉಪಯೋಗಿಸಿ ಕೋಟೆಯನ್ನು ನಿರ್ಮಿಸಿದ್ದು ಕಂಡುಬರುತ್ತದೆ.

ಬಾದಾಮಿ ಚಾಳುಕ್ಯರ ನಂತರ ರಾಷ್ಟ್ರಕೂಟರು ಸ್ವತಂತ್ರರಾಗಿ ಆಡಳಿತ ನಿರ್ವಹಿಸತೊಡಗಿದರು. ಇವರು ತಮ್ಮ ಅರಸೊತ್ತಿಗೆಯನ್ನು ಭದ್ರಪಡಿಸಿಕೊಂಡು ತಮ್ಮ ರಾಜ್ಯವನ್ನು ಉತ್ತರ ಮತ್ತು ದಕ್ಷಿಣ ದೇಶಗಳವರೆಗೆ ವಿಸ್ತರಿಸಿದರು. ರಾಷ್ಟ್ರಕೂಟ ಮೂರನೆಯ ಗೋವಿಂದನ ಕಾಲದಲ್ಲಿ ಮಾನ್ಯಖೇಟವು(ಈಗಿನ ಮಳಖೇಡ) ರಾಷ್ಟ್ರಕೂಟರ ರಾಜಧಾನಿಯಾಯಿತು. ಇಲ್ಲಿ ಕೋಟೆ-ಕೊತ್ತಲಗಳನ್ನು ಕಟ್ಟಲು ಮೇಲ್ವಿಚಾರಣೆಗಾಗಿ ಪೂರ್ವ ಚಾಳುಕ್ಯ ಮನೆತನದ ವಿಷ್ಣುವರ್ಧನನ್ನು ನೇಮಿಸಿದ್ದನು.[೮೨] ಆದರೆ ಈ ಕೋಟೆಯು ಚೋಳರ ಮತ್ತು ಮುಸ್ಲಿಮರ ದಾಳಿಯಿಂದ ನಾಶ ಹೊಂದಿದ್ದು ಅದರ ಮೇಲೆ ಕ್ರಿ.ಶ. ೧೭ನೇ ಶತಮಾನದಲ್ಲಿ ಮತ್ತೊಮ್ಮೆ ಕೋಟೆಯನ್ನು ಪುನರ್ ನಿರ್ಮಿಸಿದ್ದಾರೆ. ರಾಷ್ಟ್ರಕೂಟರ ಕಾಲದ ಶಿಲ್ಪಕಲೆಗಳ ಅವಶೇಷಗಳು ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿಲ್ಲ. ಹೀಗಾಗಿ ಅವರ ಅವಶೇಷಗಳು ವಿರಳವಾಗಿ ಕಂಡುಬರುತ್ತವೆ.

ರಾಷ್ಟ್ರಕೂಟರನ್ನು ಬದಿಗೊತ್ತಿ ಅಧಿಕಾರಕ್ಕೆ ಬಂದ ಕಲ್ಯಾಣ ಚಾಳುಕ್ಯರು ಬಲವಾದ ರಾಜಕೀಯ ಆಡಳಿತಕ್ಕೆ ಒಂದು ಸುಭದ್ರವಾದ ತಳಹದಿಯನ್ನು ಹಾಕಿದರು. ಇವರ ಕಾಲಾವಧಿಯಲ್ಲಿ ವಾಸ್ತುಶಿಲ್ಪ ನಿರ್ಮಾಣದಲ್ಲಿ ಹೊಸಬಗೆಯ ಅಲಂಕಾರಗಳನ್ನು ಇವರು ನಿರ್ಮಿಸಿದ ದೇವಾಲಯಗಳಲ್ಲಿ ಕಾಣುತ್ತೇವೆ. ಸುಧಾರಿತ ಗೋಡೆ ಮಾದರಿಗಳನ್ನು ಬದಲಾದ ತಾಂತ್ರಿಕತೆಗೆ ಮತ್ತು ಉದ್ದೇಶಗಳಿಗೆ ತಕ್ಕಂತೆ ಕೋಟೆಯಲ್ಲಿ ಬದಲಾವಣೆಗಳನ್ನು ಮಾಡಿಕೊಂಡರು. ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಕೋಟೆಯು ಕಲ್ಯಾಣ ಚಾಳುಕ್ಯರ ಕಾಲದ್ದಾಗಿದ್ದು ಸ್ಥಳೀಯವಾಗಿ ಸಿಗುವ ದಪ್ಪವಾದ ಗುಂಡುಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಿದ್ದಾರೆ. ಅಲ್ಲದೆ ಈ ಕಲ್ಲಿನ ಕೋಟೆಯ ತಳಭಾಗದಲ್ಲಿ ಮಣ್ಣಿನ ಗೋಡೆಯಿದ್ದದ್ದು ಕಂಡುಬರುತ್ತದೆ. ಬಹುಶ ಇದು ಚಾಳುಕ್ಯರ ಪೂರ್ವಾವಧಿಯಿಂದಲೇ ಇಲ್ಲಿ ಮೊದಲು ಮಣ್ಣಿನ ಕೋಟೆಯಿದ್ದು, ಅದರ ಮೇಲೆ ಮತ್ತೆ ಕಲ್ಲು

ಮಣ್ಣನ್ನು ಬಳಸಿ ಕೋಟೆಯನ್ನು ನಿರ್ಮಿಸಿದ್ದಾರೆ ಎಂದು ಹೇಳಬಹುದು.[೮೩] ಅಲ್ಲದೆ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಪ್ರಮುಖ ಆಡಳಿತ ಕೇಂದ್ರಗಳಾಗಿದ್ದ ತರ್ದವಾಡಿ ಸಾವಿರ, ಮುತ್ತಗಿ ಮೂವತ್ತು, ಹೆಬ್ಬಾಳ ಪನ್ನೆರಡು, ಸಿಂದಗಿ ಪನ್ನೆರಡು, ಕುಮಸಗಿ ಮೂವತ್ತು, ಯಳಮೇಲ ಮೂವತ್ತು, ಕಡ್ಲೇವಾಡ ಮುಂತಾದ ಕಡೆಗಳಲ್ಲಿ ಚಾಳುಕ್ಯರ ಕಾಲದ ಕೋಟೆಗಳು ಇದ್ದುದರ ಬಗ್ಗೆ ಅಭಿಪ್ರಾಯಿಸಬಹುದು. ಆದರೆ ಇಂದು ಅವುಗಳ ಯಾವುದೇ ಕುರುಹುಗಳು ಉಳಿದುಕೊಂಡು ಬಂದಿಲ್ಲ. ವಿಜಾಪುರದ ಅರಕಿಲ್ಲೆ ಇರುವ ಸ್ಥಳದಲ್ಲಿ ಈ ಮೊದಲು ಕಲ್ಯಾಣ ಚಾಳುಕ್ಯರ ಕೋಟೆಯಿತ್ತು ಎಂದು ಹೇಳಲಾಗುತ್ತದೆ. ಹೀಗಾಗಿ ಕಲ್ಯಾಣ ಚಾಳುಕ್ಯರ ಅವಧಿಯಿಂದಲೇ ವಿಜಾಪುರ ಜಿಲ್ಲೆಯಲ್ಲಿ ಕೋಟೆ ನಿರ್ಮಾಣದ ಇತಿಹಾಸ ಪ್ರಾರಂಭವಾಗುತ್ತದೆ.

ಕಲ್ಯಾಣ ಚಾಳುಕ್ಯರ ನಂತರ ಕರ್ನಾಟಕದ ಉತ್ತರ ಭಾಗವನ್ನು ಒಳಗೊಂಡಂತೆ ದೇವಗಿರಿಯನ್ನು (ಈಗಿನ ಮಹಾರಾಷ್ಟ್ರ ರಾಜ್ಯದ ದೌಲತಾಬಾದ್) ರಾಜಧಾನಿಯನ್ನಾಗಿ ಮಾಡಿಕೊಂಡು ಯಾದವರು, ಹಳೇಬೀಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳರು ಆಡಳಿತಕ್ಕೆ ಬಂದರು. ಇವರ ಕಾಲಾವಧಿಯ ಶಾಸನಗಳನ್ನು ಗಮನಿಸಿದರೆ ಇವರ ಪ್ರಮುಖವಾದ ಬಿರುದುಗಳೆಲ್ಲಾ ಅವರು ವಶಪಡಿಸಿಕೊಂಡ ಕೋಟೆಗಳನ್ನೇ ಕುರಿತು ಹೇಳುತ್ತವೆ. ಪ್ರಮುಖವಾಗಿ ಹೊಯ್ಸಳ ಅರಸ ವಿಷ್ಣುವರ್ಧನ ವಿರಾಟನಗರ, ಬಳ್ಳಾರಿ, ವಲ್ಲೂರ, ಇರುಂಗೋಳನ, ಕುಮ್ಮಟ, ಮುದಗನೂರು ಮುಂತಾದ ಕೋಟೆಗಳನ್ನು ಜಯಿಸಿದನೆಂದೂ ಎರಡನೆಯ ಬಲ್ಲಾಳನು ತಲಕಾಡು, ಕೊಂಗು, ನಂಗಲಿ, ಬನವಾಸಿ, ಹಾನಗಲ್ಲು, ಲೊಕ್ಕಿಗೊಂಡಿ, ಎರಂಬರಗೆಯೊಳಗಾದ ಸಮಸ್ತ ದೇಶದ ನಾನಾ ದುರ್ಗಗಳನ್ನು ಲೀಲಾಜಾಲವಾಗಿ ಜಯಸಿದನೆಂದೂ ಶಾಸನಗಳು ತಿಳಿಸುತ್ತವೆ. ೧೩ನೇ ಶತಮಾನದ ಅಂತ್ಯದಲ್ಲಿ ರಾಯಚೂರು ಪ್ರದೇಶವನ್ನು ವಶಪಡಿಸಿಕೊಂಡ ವಾರಂಗಲ್ಲಿನ ಕಾಕತೀಯರು ಕ್ರಿ.ಶ. ೧೨೯೪ರಲ್ಲಿ ರಾಯಚೂರನಲ್ಲಿ ಬಲಿಷ್ಠವಾದ ಕೋಟೆಯನ್ನು ಕಟ್ಟಿಸಿದರು.[೮೪] ಅದೇ ರೀತಿ ವಿಜಾಪುರ ಜಿಲ್ಲೆಯಲ್ಲಿ ದೊರೆತ ಘಡೇಕನೂರ, ಜಟ್ಟಗಿ, ಗುಂಡಕರ್ಜಗಿ ಶಾಸನಗಳು ಯಾದವ ಅರಸ ಕನ್ನರದೇವ, ಸಿಂಘಣರು ಭೂದುರ್ಗ, ಗಿರಿದುರ್ಗ, ಜಲದುರ್ಗ, ವನದುರ್ಗ ಪ್ರಮುಖ ನಾನಾ ದುರ್ಗಗಳನ್ನು ನಾಶಪಡಿಸಿದರೆಂದು ಉಲ್ಲೇಖಿಸುತ್ತವೆ.

ಕ್ರಿ.ಶ. ೧೩ ಮತ್ತು ೧೪ನೇ ಶತಮಾನದ ಕಾಲಘಟ್ಟದಲ್ಲಿ ಕರ್ನಾಟಕವಷ್ಟೇ ಅಲ್ಲದೆ, ಭಾರತದ ರಾಜಕಾರಣದ ಮೇಲೆಯೇ ಪರಿಣಾಮ ಬೀರಲಿದ್ದ ಕ್ರಾಂತಿಕಾರಕ ಬದಲಾವಣೆ ಯುದ್ಧದಲ್ಲಿ ಸಿಡಿಮದ್ದುಗಳನ್ನು ಬಳಸಿದ್ದು. ಸಿಡಿಮದ್ದಿನ ಸಂಶೋಧನೆಯಿಂದ ರಕ್ಷಣೆಯ ಪರಿಕಲ್ಪನೆಯೇ ಕ್ರಾಂತಿಕಾರಕವಾಗಿ ಬದಲಾಗಿ ಹೋಯಿತು. ಬಹಮನಿ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಟರ್ಕರು ಮತ್ತು ಪ್ರಾಂಕರು ಮೊದಲ ಬಾರಿಗೆ ಅದನ್ನು ದಖ್ಖನಿನಲ್ಲಿ ಉಪಯೋಗಿಸಿದರು. ಬಾಬರ್ ಉತ್ತರ ಭಾರತದಲ್ಲಿ ತನ್ನ ವೈರಿಗಳ ಮೇಲೆ ಸಿಡಿಮದ್ದನ್ನು ಪ್ರಯೋಗಿಸಿದ್ದು ಬಹಳ ಕಾಲವಾದ ಮೇಲೆ. ಕ್ರಿ.ಶ. ೧೩೬೫ರಲ್ಲಿ ಬಹುಮನಿ ಸುಲ್ತಾನ ಒಂದನೆಯ ಮುಹಮ್ಮದ ಶಾಹನು(ಕ್ರಿ.ಶ. ೧೩೫೮–

೧೩೭೫) ಅದೋನಿಯ ಮುತ್ತಿಗೆಯಲ್ಲಿ ಅದನ್ನು ಧಾರಾಳವಾಗಿ ಬಳಸಿದನು.[೮೫] ಸಿಡಿಮದ್ದಿನ ಪ್ರಯೋಗವು ಕೋಟೆಗಳ ವಾಸ್ತುಶಿಲ್ಪವನ್ನೇ ಬದಲಾಯಿಸಿತು. ದಪ್ಪವಾದ ಗೋಡೆಗಳಿದ್ದ ಎತ್ತರವಾದ ಕೋಟೆಗಳು ಕಾಣಿಸಿಕೊಂಡವು. ಬಾಗಿಲುಗಳೆದುರಿಗೆ ತೆರೆಗೋಡೆಗಳು, ಬಂದೂಕು, ತೋಪುಗಳ ನಳಿಕೆಗಳನ್ನು ಜೋಡಿಸಲು ಅಗಲವಾದ ಕಿಂಡಿಗಳು, ಒಂದನ್ನು ಮುಚ್ಚುವಂತೆ ಇನ್ನೊಂದಿರುವ ಜೋಡಿಗೋಡೆಗಳು, ಕೋಟೆಯ ಸುತ್ತಲೂ ಸೈನಿಕರು ಪಹರೆ ಕೈಗೊಳ್ಳಲು ಕೋಟೆ ಕೈಪಿಡಿಗೋಡೆಯಲ್ಲಿ ಅಗಲವಾದ ಪಹರೆಗೋಡೆ ಮತ್ತು ಕೈಪಿಡಿಗೋಡೆಯಲ್ಲಿ ತೆನೆಗಳು, ವೀಕ್ಷಣಾ ಕಿಂಡಿಗಳು, ಮತ್ತಷ್ಟು ಎತ್ತರವಾದ ಬುರುಜುಗಳ ನಿರ್ಮಾಣ ಸಾಮಾನ್ಯವಾಯಿತು. ಇಡೀ ಕೋಟೆಯ ವಿನ್ಯಾಸದಲ್ಲಿ ಕ್ರಾಂತಿಕಾರಕ ಬದಲಾವಣೆಯಾಯಿತು.[೮೬] ಈ ರೀತಿಯ ರಚನೆಯ ವಿನ್ಯಾಸಗಳು ಬಹಮನಿ, ವಿಜಯನಗರ, ಆದಿಲ್‌ಶಾಹಿ, ಮೊಗಲರ ಕೋಟೆಯಲ್ಲಿಯೂ ಮುಂದುವರಿದುಕೊಂಡು ಬಂದವು. ಈ ಕಾಲಘಟ್ಟದಲ್ಲಿ ನಿರ್ಮಾಣವಾದ ಹಂಪಿ, ರಾಯಚೂರು, ಮುದಗಲ್, ಗುಲಬರ್ಗಾ, ವಿಜಾಪುರ, ಬೀದರ ಮುಂತಾದ ಕೋಟೆಗಳು ಇದುವರೆಗೂ ಉಳಿದುಕೊಂಡುಬಂದಿದ್ದು, ಅವುಗಳ ನಿರ್ಮಾಣದಲ್ಲಿನ ತಾಂತ್ರಿಕತೆ ಮತ್ತು ಬಲಿಷ್ಠತೆಗೆ ಸಾಕ್ಷಿಯಾಗಿವೆ.

ಮರಾಠರ ಆಡಳಿತಾವಧಿಯಲ್ಲಿ ಅತಿ ಹೆಚ್ಚು ಗಿರಿದುರ್ಗಗಳ ನಿರ್ಮಾಣವನ್ನು ಕಾಣುತ್ತೇವೆ. ಮಹಾರಾಷ್ಟ್ರದಲ್ಲಿ ಸಹ್ಯಾದ್ರಿ ಪರ್ವತಶ್ರೇಣಿಗಳು ಇರುವುದರಿಂದ ಮರಾಠರ ಆಡಳಿತಾವಧಿಯಲ್ಲಿ ಇಲ್ಲಿ ಅತಿ ಹೆಚ್ಚು ಗಿರಿದುರ್ಗಗಳೇ ನಿರ್ಮಾಣವಾದವು. ಹೈದರಾಬಾದ್ ನಿಜಾಮ್, ಹೈದರಾಲಿ ಟಿಪ್ಪುಸುಲ್ತಾನನೊಂದಿಗೆ ಹಾಗೂ ವಿದೇಶಿಯರ ಆಕ್ರಮಣಗಳಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ, ಮರಾಠರು ತಮ್ಮ ಸಾಮ್ರಾಜ್ಯವನ್ನು ರಕ್ಷಿಸಲು ಮತ್ತು ವೈರಿಗಳ ದಾಳಿಯನ್ನು ಸಮರ್ಥವಾಗಿ ಎದುರಿಸಲು ಒಂದಕ್ಕೊಂದು ಹತ್ತಿರದಲ್ಲಿಯೇ ಕೋಟೆಗಳನ್ನು ನಿರ್ಮಿಸಿದರು. ಇದು ಅವರ ಗೆರಿಲ್ಲಾ ಯುದ್ಧನೀತಿಯುನ್ನು ಅನುಕರಿಸಲು ಈ ರೀತಿಯು ಕೋಟೆಗಳ ನಿರ್ಮಾಣ ಹೆಚ್ಚು ಪ್ರಯೋಜನಕಾರಿಯಾದವು. ಹೀಗಾಗಿ ಕರ್ನಾಟಕದ ಬೆಳಗಾವಿ, ಧಾರವಾಡ, ವಿಜಾಪುರಗಳಲ್ಲಿ ಮರಾಠರ ಅವಧಿಯಲ್ಲಿ ಅತಿ ಹೆಚ್ಚು ಕೋಟೆಗಳು ನಿರ್ಮಾಣವಾದವು.[೮೭] ವಿಜಾಪುರ ಜಿಲ್ಲೆಯ ಕೊಟ್ನಾಳ ಕೋಟೆಯು ಸಹ ಮರಾಠರ ಗಡಿಬಂಧ ಕೋಟೆಯಾಗಿತ್ತು ಎಂದು ಹೇಳಲಾಗುತ್ತದೆ.

ರಾಜ್ಯದ ರಾಜಧಾನಿಗೆ ಕೋಟೆ ಎಷ್ಟು ಮುಖ್ಯವೂ ಆ ಸಾಮ್ರಾಜ್ಯದ ಪ್ರತಿಯೊಬ್ಬನ ರಕ್ಷಣೆಯೂ ಅಷ್ಟೇ ಮುಖ್ಯವಾಗಿತ್ತು. ಸ್ಥಳೀಯ ಆಡಳಿತವನ್ನು ನೋಡಿಕೊಳ್ಳಲು ವಿಜಯನಗರ ಸಾಮ್ರಾಜ್ಯದಲ್ಲಿ ಪಾಳೆಯಗಾರರು ಅಥವಾ ನಾಯಕಪದ್ಧತಿ ಜಾರಿಯಲ್ಲಿತ್ತು. ಅದೇ ರೀತಿ ದಕ್ಷಿಣದ ಶಾಹಿ ಸುಲ್ತಾನರ ರಾಜ್ಯಗಳಲ್ಲಿ ಅನೇಕ ದೇಸಗತಿ ಮನೆತನಗಳು ಅಸ್ತಿತ್ವಕ್ಕೆ ಬಂದವು. ವಿಜಯನಗರದ ಪತನದ ನಂತರ ಅವರ ಸಾಮಂತರಾಗಿದ್ದ ಅನೇಕ ಪಾಳೆಯಗಾರರು ಸ್ವತಂತ್ರರಾಗಿ ತಮ್ಮ ರಕ್ಷಣೆಗೋಸ್ಕರ ಅನೇಕ ಕೋಟೆಗಳನ್ನು ನಿರ್ಮಿಸಿಕೊಂಡರು. ಅದೇ ರೀತಿ ಬಹಮನಿ, ಆದಿಲ್‌ಶಾಹಿಗಳು ಮತ್ತು ಅವರ ಕಾಲಾನಂತರ ವಿಜಾಪುರವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಳ್ವಿಕೆ ಮಾಡಿದ

ಮೊಗಲರು, ಮರಾಠರು, ಹೈದರಾಬಾದ್ ನಿಜಾಮರ ಆಡಳಿತಾವಧಿಯಲ್ಲಿ ಜಿಲ್ಲೆಯಲ್ಲಿ ಅನೇಕ ದೇಸಗತಿ ಮನೆತನಗಳು ಅಸ್ತಿತ್ವಕ್ಕೆ ಬಂದವು. ಪ್ರತಿಯೊಂದು ದೇಸಗತಿ ಮನೆತನಗಳು ತಮ್ಮ ಹಾಗೂ ತಮ್ಮ ಪ್ರಜೆಗಳ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಅಲ್ಲದೆ ಶಾಹಿ ಸುಲ್ತಾನರು ಮತ್ತು ವಿಜಯನಗರ ಅರಸರ ಮಧ್ಯೆ ನಡೆದ ಕಾಳಗಗಳು, ಇವರ ನಂತರ ಮರಾಠರು, ಹೈದ್ರಾಬಾದ್ ನಿಜಾಮ, ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷರ ಮಧ್ಯೆ ನಡೆದ ಸಂಘರ್ಷಗಳಿಂದಾಗಿ ವಿಜಾಪುರ ಜಿಲ್ಲೆಯು ಯುದ್ಧದ ರಣರಂಗವಾಗಿಯೇ ಮಾರ್ಪಟ್ಟಿತ್ತು. ಹೀಗಾಗಿ ಈ ಪ್ರದೇಶದಲ್ಲಿ ಪ್ರತಿ ಗ್ರಾಮದಲ್ಲಿ ಕೋಟೆ ಅಥವಾ ರಕ್ಷಣಾಸಂಬಂಧಿ ಸ್ಮಾರಕಗಳನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಕ್ರಿ.ಶ. ೧೮೦೦ರಲ್ಲಿ ಕರ್ನಲ್ ಮೆಕೆಂಜಿ ಅವರು ರಚಿಸಿದ ನಕ್ಷೆಯಲ್ಲಿ ಈ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಕೋಟೆಗಳನ್ನು ದಾಖಲಿಸಲಾಗಿದೆ. ಆ ನಕ್ಷೆಯ ಪ್ರಕಾರ ಸಾಮಾನ್ಯವಾಗಿ ಪ್ರತಿ ಹೋಬಳಿಯೂ ಕೋಟೆಗಳಿಂದ ಕೂಡಿದ್ದವು. ಈ ಕೋಟೆಗಳು ನಿರ್ದಿಷ್ಟ ಅಂತರದಲ್ಲಿದ್ದು, ಕೇವಲ ಒಂದು ದಿನದ ಅವಧಿಯಲ್ಲಿ ಒಂದು ಕೋಟೆಯಿಂದ ಇನ್ನೊಂದು ಕೋಟೆಗೆ ಎತ್ತಿನಗಾಡಿಯ ಮೂಲಕ ತಲುಪುವ ಸಮಯದ ಅಂತರದಲ್ಲಿದ್ದವು[೮೮] ಎಂದು ಹೇಳುವ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ.

ಭಾರತಕ್ಕೆ ಬಂದ ಪ್ರಮುಖ ವಿದೇಶಿಗರಲ್ಲಿ ಪೋರ್ಚುಗೀಸರು, ಡಚ್ಚರು, ಫ್ರೇಂಚರು ಮತ್ತು ಇಂಗ್ಲಿಷರು ಪ್ರಮುಖರಾಗಿದ್ದಾರೆ. ಇವರು ಕ್ರಿ.ಶ. ೧೭ನೆಯ ಶತಮಾನದಲ್ಲಿ ತಮ್ಮ ವ್ಯಾಪಾರ ವಹಿವಾಟನ್ನು ವಿಸ್ತರಿಸಲು, ತಮ್ಮ ಸರಕುಗಳನ್ನು ರಕ್ಷಿಸಿಟ್ಟುಕೊಳ್ಳುವ, ಮುಖ್ಯವಾಗಿ ಈ ಪ್ರದೇಶದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶದಿಂದ ಭಾರತದ ಕರಾವಳಿ ತೀರದುದ್ದಕ್ಕೂ ಅಲ್ಲಲ್ಲಿ ಕೋಟೆಗಳನ್ನು ನಿರ್ಮಿಸಿದ್ದನ್ನು ಕಾಣಬಹುದು. ಇವು ಪ್ರಮಾಣದಲ್ಲಿ ಬಹಳ ಚಿಕ್ಕವಾದರೂ ವ್ಯಾಪಾರ ವಹಿವಾಟನ್ನು ವಿಸ್ತರಿಸುವಲ್ಲಿ ಬಹುಮುಖ್ಯವಾಗಿದ್ದವು. ಆದರೆ ಕ್ರಿ.ಶ. ೧೯ನೆಯ ಶತಮಾನದ ವೇಳೆಗೆ ಇಡೀ ಭಾರತವು ಬ್ರಿಟಿಷರ ಪ್ರಭುತ್ವಕ್ಕೆ ಒಳಪಟ್ಟ ಮೇಲೆ ಕೋಟೆಗಳನ್ನು ನಿರ್ಮಿಸುವ ಸಂಪ್ರದಾಯ ಕುಂಠಿತವಾಗುತ್ತಾ ಬಂದಿತು. ಬ್ರಿಟಿಷರು ಜಾರಿಗೆ ತಂದ ಸಹಾಯಕ ಸೈನ್ಯಪದ್ಧತಿ, ಕಂಟೋನ್ಮೆಂಟ್‌ಗಳ ವಿಸ್ತರಣೆಯಿಂದಾಗಿ ಕೋಟೆಗಳು ತಮ್ಮ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುತ್ತಾ ಬಂದವು ಎಂದು ಹೇಳಬಹುದು.

ಕೊನೆ ಟಿಪ್ಪಣಿಗಳು

೧. ಪ್ರಭಾಕರ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪು.೦೩

೨. ತಿಪ್ಪೇರುದ್ರಸ್ವಾಮಿ ಎಚ್., ೨೦೧೧, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೫೨೪

೩. ಜ್ಞಾನಾನಂದ ಜಿ., ೨೦೦೧, ಶಿಲ್ಪಾದರ್ಶ ಸಂ-೧, ಪು.೦೭

೪. ಪ್ರಭಾಕರ ಎಂ.ಎನ್., ೨೦೧೧, ಪೂರ್ವೋಕ್ತ, ಪು.೦೪

೫. ಜ್ಞಾನಾನಂದ ಜಿ., ೨೦೦೧, ಪೂರ್ವೋಕ್ತ, ಪು.೦೭

೬. ತಿಪ್ಪೇರುದ್ರಸ್ವಾಮಿ ಎಚ್., ೨೦೧೧, ಪೂರ್ವೋಕ್ತ, ಪು.೫೨೫

೭. ಶ್ರೀನಿವಾಸ ಪಾ.ಶ., ೧೯೮೨, ತಿರುಕ್ಕುಱಳ್, ಪು.೩೦೦

೮. ಶ್ರೀಧರ್ ಎಚ್.ಜಿ., ೨೦೦೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಪು.೩೧

೯. ಮುದ್ದವೀರಪ್ಪ ಕೆ.ವಿ., ೨೦೧೧, ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು, ಪು.೧೦-೧೧

೧೦.ತಿಪ್ಪೇಸ್ವಾಮಿ ಎಸ್., ೨೦೦೫, ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ, ಪು.೯೯-೧೦೦

೧೧.ಮಹಾದೇವ ನಾ. ಜೋಶಿ, ೨೦೧೧, ಪ್ರಾಚೀನ ಭಾರತೀಯ ರಾಜನೀತಿ, ಪು.೯೬

೧೨.ಕೋಟ್ರೇಶ ಎಂ., ೨೦೧೧, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪು.೨೨

೧೩.ಶ್ರೀಧರ್ ಎಚ್. ಜಿ., ೨೦೦೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಪು.೩೨

೧೪.ರಾಧಾಕೃಷ್ಣಮೂರ್ತಿ, ೧೯೯೧, ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಇತಿಹಾಸ ದರ್ಶನ ಸಂ.೦೬, ಪು.೧೫೯

೧೫.ದೀಕ್ಷಿತ್ ಜಿ. ಎಸ್. ಮತ್ತು ಇತರರು(ಸಂ.), ೨೦೦೦, ಆಚಾರ್ಯ ಶ್ರೀ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ, ಪು.೨೧೮-೨೧೯

೧೬.ಗುಂಡ್ಮಿ ಚಂದ್ರಶೇಖರ ಐತಾಳ(ಅನು.), ೧೯೭೬, ದುರ್ಗಸಿಂಹ ಕವಿಯ ಕರ್ನಾಟಕ ಪಂಚತಂತ್ರ, ಪು.೨೬೯-೨೭೦

೧೭.ಕಲಬುರ್ಗಿ ಎಂ.ಎಂ.(ಪ್ರಸಂ.), ೧೯೯೮, ಮಾನಸೋಲ್ಲಾಸ, ಪು.೯೨

೧೮.ರಾಧಾಕೃಷ್ಣಮೂರ್ತಿ, ೧೯೯೧, ಪೂರ್ವೋಕ್ತ, ಪು.೧೫೯-೧೬೦

೧೯.ತಿಪ್ಪೇಸ್ವಾಮಿ ಎಸ್., ೨೦೦೫, ಪೂರ್ವೋಕ್ತ, ಪು.೧೪೧

೨೦.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಕರ್ನಾಟಕ ಕೋಟೆಗಳು, ಸಂ.೦೧, ಪು.೦೩

೨೧.ಸುಜಾತಾ ಮಲ್ಲನಗೌಡ, ೨೦೦೦, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು: ಒಂದು ಅಧ್ಯಯನ, ಪು.೩೮-೩೯

೨೨.ಮಲ್ಲೇಪುರಂ ಜಿ. ವೆಂಕಟೇಶ (ಸಂ.), ೧೯೯೯, ಶಿವತತ್ವ ರತ್ನಾಕರ, ಪು.೨೬೯

೨೩.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೦೪

೨೪.ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೧೦, ಸಂ.೩೩, ಪು.೫೪೦

೨೫.ಅದೇ, ಸಂ.೨೨, ಪು.೫೨೮

೨೬.ಅದೇ, ಸಂ.೨೫, ಪು.೫೩೩

೨೭.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೦೪

೨೮.ಶೇಷನವರತ್ನ(ಅನು.), ೨೦೦೫, ಮನುಸ್ಮೃತಿ, ಪು.೨೬೫

೨೯.ದೀಕ್ಷಿತ ಜಿ.ಎಸ್. ಮತ್ತು ಇತರರು(ಸಂ.), ೨೦೦೦, ಪೂರ್ವೋಕ್ತ, ಪು.೨೧೯

೩೦.ಗುಂಡ್ಮಿ ಚಂದ್ರಶೇಖರ ಐತಾಳ(ಅನು.), ೧೯೭೬, ಪೂರ್ವೋಕ್ತ, ೧೯೭೬

೩೧.ಮಲ್ಲೇಪುರಂ ಜಿ. ವೆಂಕಟೇಶ, ೧೯೯೯, ಪೂರ್ವೋಕ್ತ, ಪು.೨೬೮-೨೬೯

೩೨.ಪ್ರಧಾನ ಗುರುದತ್ತ(ಅನು.), ೧೯೮೯, ತಿರುಕ್ಕುಱಳ, ಪು.೧೫೧

೩೩.ಮುದ್ದುವೀರಪ್ಪ, ೨೦೧೧, ಪೂರ್ವೋಕ್ತ, ಪು.೧೭

೩೪.ಶೇಷಶಾಸ್ತ್ರಿ ಆರ್., ೧೯೮೨, ಕರ್ನಾಟಕದ ವೀರಗಲ್ಲುಗಳು, ಪು.೧೮೮

೩೫.ಶ್ರೀಕಂಠಶಾಸ್ತ್ರೀ ಎಸ್., ೨೦೧೫, ಭಾರತೀಯ ಸಂಸ್ಕೃತಿ, ಪು.೨೫೧

೩೬.ಶ್ರೀನಿವಾಸ ಪಾ.ಶ.(ಅನು.), ೧೯೮೨, ಪೂರ್ವೋಕ್ತ, ಪು.೨೦೦-೨೦೩

೩೭.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೫೦

೩೮.ಕೂಡಲೀ ಶೃಂಗೇರಿ ಜಗದ್ಗುರು ಮತ್ತು ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು(ಅನು.), ೨೦೧೧ ಕೌಟಲೀಯ ಅರ್ಥಶಾಸ್ತ್ರ, ಪು.೯೧

೩೯.ಮುದ್ದುವೀರಪ್ಪ, ೨೦೧೧, ಪೂರ್ವೋಕ್ತ, ಪು.೧೬

೪೦.ಸುಂಕಂ ಗೋವರ್ಧನ, ೨೦೧೨, ಕನ್ನಡ ನಾಡಿನ ಪ್ರಮುಖ ಕೋಟೆಗಳು, ಪು.೧೩

೪೧.ಕೊಟ್ರೇಶ್ ಎಂ., ೨೦೧೧, ಪೂರ್ವೋಕ್ತ, ಪು.೨೦-೨೧

೪೨.ತಿಪ್ಪೇಸ್ವಾಮಿ ಎಸ್., ೨೦೦೫, ಪೂರ್ವೋಕ್ತ, ಪು.೧೧೪

೪೩.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೩

೪೪.ಕನ್ನಡ ಸಾಹಿತ್ಯ ಪರಿಷತ್ ನಿಘಂಟು, ಪು.

೪೫.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೩೯

೪೬.ಅದೇ, ಪು.೩೪

೪೭.ಶಂಭುಲಿಂಗ ಎಸ್. ವಾಣಿ, ೨೦೧೦, ರಕ್ಷಣಾ ವಾಸ್ತುಶಿಲ್ಪ: ಗುಲಬರ್ಗಾ ಜಿಲ್ಲೆ, ಪು.೧೧೨

೪೮.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೫೦

೪೯.ಚಿದಾನಂದಮೂರ್ತಿ ಎಂ., ೨೦೧೪, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೩೧೮

೫೦.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೪

೫೧.ಚಿದಾನಂದಮೂರ್ತಿ ಎಂ., ೨೦೧೪, ಪೂರ್ವೋಕ್ತ, ಪು.೩೧೮

೫೨.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೪೮

೫೩.ಚಿದಾನಂದಮೂರ್ತಿ ಎಂ., ೨೦೧೪, ಪೂರ್ವೋಕ್ತ, ಪು.೩೧೮

೫೪.ಶಂಭುಲಿಂಗ ಎಸ್. ವಾಣಿ, ೨೦೧೦, ಪೂರ್ವೋಕ್ತ, ಪು.೧೨೪

೫೫.ಅರುಣ ಕಲ್ಲೋಳಿಕರ, ೨೦೦೫, ಬೆಳಗಾಂವ ಪ್ರದೇಶದ ಕೋಟೆ ಕೊತ್ತಲಗಳು: ಒಂದು ಅಧ್ಯಯನ, ಪು.೬೬

೫೬.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೫೨

೫೭.ಚಿದಾನಂದಮೂರ್ತಿ ಎಂ., ೨೦೧೪, ಪೂರ್ವೋಕ್ತ, ಪು.೩೧೮

೫೮.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೪

೫೯.ಕೊಟ್ರೇಶ್ ಎಂ., ೨೦೧೧, ಪೂರ್ವೋಕ್ತ, ಪು.೨೦

೬೦.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೪

೬೧.ಅದೇ, ಪು.೧೫೧

೬೨.ಗುರುರಾಜಚಾರ ಎಸ್.(ಅನು.), ೧೯೯೪, ಲೋಥಾಲ್ ಮತ್ತು ಸಿಂಧೂ ನಾಗರಿಕತೆ, ಪು.೨೬

೬೩.ಕನ್ನಡ ವಿಷಯ ವಿಶ್ವಕೋಶ(೨೦೦೯), ಇತಿಹಾಸ ಮತ್ತು ಪುರಾತತ್ವ, ಪು.೨೮೫

೬೪.ಗುರುರಾಜಚಾರ ಎಸ್.(ಅನು.), ೧೯೯೪, ಪೂರ್ವೋಕ್ತ, ಪು.೧೨-೧೯

೬೫.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೧-೩೨

೬೬.ಕೊಟ್ರೇಶ್ ಎಂ., ೨೦೧೧, ಪೂರ್ವೋಕ್ತ, ಪು.೧೫

೬೭.ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು.೨೮೧

೬೮.ಶರ್ಮಾ ಆರ್.ಎಸ್., ೧೯೯೭, ಪ್ರಾಚೀನ ಭಾರತ, ಪು.೧೦೬

೬೯.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೩೫

೭೦.ಶರ್ಮಾ ಆರ್.ಎಸ್., ೧೯೯೭, ಪೂರ್ವೋಕ್ತ, ಪು.೧೦೬-೧೦೮

೭೧.ನಾಗೇಗೌಡ ಎಚ್.ಎಲ್., ೨೦೦೬, ಪ್ರವಾಸಿ ಕಂಡ ಇಂಡಿಯಾ, ಸಂ.?, ಪು.೩೦

೭೨.ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು.೨೮೧

೭೩.ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪು.೧೪೧

೭೪.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೧೨

೭೫.ಅರುಣ ಕಲ್ಲೋಳಿಕರ, ೨೦೦೫, ಪೂರ್ವೋಕ್ತ, ಪು.೫೧

೭೬.ಸುಂಕಂ ಗೋವರ್ಧನ, ೨೦೧೨, ಪೂರ್ವೋಕ್ತ, ಪು.೧೭-೧೯

೭೭.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೧೮

೭೮.ಜೋಶಿ ಎಸ್.ಕೆ., ೨೦೦೮, ಕರ್ನಾಟಕದ ಕೋಟೆ-ಕೊತ್ತಲಗಳು, ಭಾಗ.೦೧, ಪು.೪೨

೭೯.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೨೫

೮೦.ಸುಂಕಂ ಗೋವರ್ಧನ, ೨೦೧೨, ಪೂರ್ವೋಕ್ತ, ಪು.೨೫

೮೧.ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು.೨೮೫

೮೨.ಪಂಚಮುಖಿ ಆರ್.ಎಸ್., ೨೦೦೮, ಕರ್ನಾಟಕ ಇತಿಹಾಸ, ಸಂ.೦೧, ಪು.೪೧೦

೮೩.ಮಂಜುನಾಥ ಎಸ್. ಪಾಟೀಲ(ಲೇ.), ೨೦೧೫, ಇಂಗಳೇಶ್ವರದಲ್ಲಿನ ಕಲ್ಯಾಣ ಚಾಳುಕ್ಯರ ಕೋಟೆ, ಇತಿಹಾಸ ದರ್ಶನ ಸಂ.೩೦, ಪು.೩೨೯

೮೪.ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಪೂರ್ವೋಕ್ತ, ಪು.೦೭

೮೫.ಷೇಕ್ ಅಲಿ ಬಿ.(ಪ್ರ.ಸಂ.), ೧೯೯೭, ಕರ್ನಾಟಕ ಚರಿತ್ರೆ, ಸಂ.೦೪, ಪು.೩೦

೮೬.ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು.೨೮೧

೮೭.ಅದೇ, ಪು.೨೮೨

೮೮.ಅದೇ, ಪು.೨೮೫

ಅಧ್ಯಾಯ ನಾಲ್ಕು

ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ

೪.೧. ವಿಜಾಪುರ ತಾಲೂಕಿನ ಕೋಟೆಗಳು

೪.೨. ಇಂಡಿ ತಾಲೂಕಿನ ಕೋಟೆಗಳು

೪.೩. ಬಸವನ ಬಾಗೇವಾಡಿ ತಾಲೂಕಿನ ಕೋಟೆಗಳು

೪.೪. ಮುದ್ದೇಬಿಹಾಳ ತಾಲೂಕಿನ ಕೋಟೆಗಳು

೪.೫. ಸಿಂದಗಿ ತಾಲೂಕಿನ ಕೋಟೆಗಳು

ಅಧ್ಯಾಯ ನಾಲ್ಕು

ರಕ್ಷಣಾ ವಾಸ್ತುಶಿಲ್ಪ

ರಾಜ್ಯದ ರಾಜಧಾನಿಯ ರಕ್ಷಣೆಯಲ್ಲಿ ಕೋಟೆಗಳು ಎಷ್ಟು ಪ್ರಮುಖವಾಗಿದ್ದವೋ ಅದೇ ರೀತಿ ಪ್ರಾಚೀನ ಕಾಲದಿಂದಲೂ ಆಳರಸರು ಹಾಗೂ ಸ್ಥಳೀಯ ಆಡಳಿತಗಾರರು ತಮ್ಮ ಹಾಗೂ ಗ್ರಾಮದ ಜನರ ರಕ್ಷಣೆಗಾಗಿ ಗ್ರಾಮಗಳಲ್ಲಿ ಕೋಟೆಗಳನ್ನು ಕಟ್ಟಿಸಿದ್ದು ತಿಳಿದುಬರುತ್ತದೆ. ಇವು ರಾಜಧಾನಿಯನ್ನು ಕೇಂದ್ರವಾಗಿರಿಸಿಕೊಂಡು ಅವುಗಳ ಸುತ್ತಲೂ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಹೀಗಾಗಿ ರಾಜಧಾನಿಯ ಸುತ್ತಲೂ ರಕ್ಷಣಾಕವಚಗಳಾಗಿದ್ದವು. ವಿಜಾಪುರ ಜಿಲ್ಲೆಯಲ್ಲಿ ನಿರ್ಮಾಣವಾದ ಕೋಟೆಗಳು ಸಹ ಇದೇ ರೀತಿಯ ರಚನೆಯನ್ನು ಹೊಂದಿದ್ದು ಕಂಡುಬರುತ್ತದೆ. ಜಿಲ್ಲೆಯ ಐದು ತಾಲೂಕುಗಳಲ್ಲಿ ಕೋಟೆಗಳು ಕಂಡುಬರುತ್ತಿದ್ದು ಇವುಗಳಲ್ಲಿ ರಾಜಧಾನಿಕೇಂದ್ರಿತ ವಿಜಾಪುರ ಕೋಟೆಯನ್ನು ಪ್ರಧಾನವಾಗಿಟ್ಟುಕೊಂಡು ಜಿಲ್ಲೆಯಲ್ಲಿ ಕಂಡುಬರುವ ಇನ್ನುಳಿದ ಕೋಟೆಗಳನ್ನು ತಾಲೂಕುವಾರು ವಿಂಗಡಿಸಿ ಶಾಸನ, ಸಾಹಿತ್ಯ, ಕೃತಿ, ಕಥೆ, ಕಾವ್ಯ, ಸ್ಥಳಪುರಾಣ, ಐತಿಹ್ಯ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ.

೪.೧. ವಿಜಾಪುರ ತಾಲೂಕಿನ ಕೋಟೆಗಳು

ವಿಜಾಪುರ ಕೋಟೆ

ಬಯಲುಸೀಮೆಯಲ್ಲಿ ಸಮತಟ್ಟಾದ ಭೂಪ್ರದೇಶವನ್ನು ಹೊಂದಿದ ಈ ಪರಿಸರದಲ್ಲಿ ನಿರ್ಮಿಸಿದ ವಿಜಾಪುರದ ಮೂರು ಸುತ್ತಿನ ಕೋಟೆಯು ಕರ್ನಾಟಕದ ಸ್ಥಳದುರ್ಗ ಕೋಟೆಗಳಿಗೆ ಉತ್ತಮ ಉದಾಹರಣೆಯಾಗಿದೆ. ಶಾಸ್ತ್ರಗ್ರಂಥಗಳು, ಪ್ರಾಚೀನ ಸಾಹಿತ್ಯಕೃತಿಗಳು ತಿಳಿಸುವ ಪ್ರತಿಯೊಂದು ಲಕ್ಷಣಗಳನ್ನು ವಿಜಾಪುರ ಕೋಟೆಯಲ್ಲಿ ಕಾಣಬಹುದು. ಸ್ವಾಭಾವಿಕವಾಗಿ ಬೆಟ್ಟ, ಗುಡ್ಡ, ನದಿ, ಅರಣ್ಯ ಮೊದಲಾದವುಗಳ ಯಾವುದೇ ರಕ್ಷಣಾವ್ಯವಸ್ಥೆಯಿಲ್ಲದೆ ಬಟ್ಟಬಯಲಿನಲ್ಲಿ ಕೋಟೆಯನ್ನು ನಿರ್ಮಿಸಿ ಸುಮಾರು ಎರಡನೂರು ವರ್ಷಗಳ ಕಾಲ ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳು

ಭಾರತೀಯ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇವರು ದಕ್ಷಿಣ ಭಾರತದಲ್ಲಿ ಇಂಡೋ–ಇಸ್ಲಾಮಿಕ್ ವಾಸ್ತು ಶೈಲಿಗೆ ಕೊಟ್ಟ ಕೊಡುಗೆ ಅಪಾರವಾದದು. ಇವರ ಆಡಳಿತಾವಧಿಯಲ್ಲಿ ನಿರ್ಮಾಣವಾದ ಕೋಟೆ ಕೊತ್ತಲಗಳು, ಗುಮ್ಮಟಗಳು, ಅರಮನೆಗಳು, ಮಸೀದಿಗಳು, ದರ್ಗಾಗಳು, ಬಾವಡಿಗಳು, ವಿಜಾಪುರ, ರಾಯಚೂರ, ಗುಲಬರ್ಗಾ, ಬೆಳಗಾವಿಗಳಲ್ಲಿ ಮುಖ್ಯವಾಗಿ ಕಾಣಬಹುದು. ಆದಿಲ್‌ಶಾಹಿಗಳು ಸುಮಾರು ಒಂದು ಮೈಲು ಐದು ಫರ್ಲಾಂಗ್ ಸುತ್ತಳತೆಯ ಒಳಕೋಟೆ ಮತ್ತು ೧೦.೫ ಕಿ.ಮೀ. ಸುತ್ತಳತೆಯ ಹೊರಕೋಟೆಯನ್ನು ರಾಜಧಾನಿ ವಿಜಾಪುರದಲ್ಲಿ ನಿರ್ಮಿಸಿದ್ದಾರೆ. ಜಿಲ್ಲೆಯ ರಾಜಧಾನಿ ಕೋಟೆ ಅಷ್ಟೇ ಅಲ್ಲದೆ, ಬಹುತೇಕ ಗ್ರಾಮಗಳಲ್ಲಿ ಅತ್ಯಂತ ರಕ್ಷಣಾತ್ಮಕ ದೃಷ್ಟಿಕೋನವನ್ನಿಟ್ಟುಕೊಂಡು ಕೋಟೆಗಳನ್ನು ನಿರ್ಮಿಸಿದ್ದಾರೆ, ಇಂದಿಗೂ ಅವು ಉಳಿದುಕೊಂಡು ಬಂದಿರುವುದು ಕೋಟೆಯ ಬಲಿಷ್ಠತೆ ಹಾಗೂ ತಾಂತ್ರಿಕತೆಗೆ ಸಾಕ್ಷಿಯಾಗಿವೆ.

ಬಯಲುಸೀಮೆ ನಾಡು ಎಂದು ಪ್ರಸಿದ್ಧಿ ಪಡೆದ ವಿಜಾಪುರ ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರವಾಗಿದೆ. ಕ್ರಿ.ಶ. ೧೦೭೯ರ ದೇವೂರ ಶಾಸನದಲ್ಲಿಯೇ ವಿಜಯಪುರದ[೧] ಮೊಟ್ಟ ಮೊದಲ ಉಲ್ಲೇಖ ಕಂಡುಬರುತ್ತದೆ. ಕಲ್ಯಾಣದ ಚಾಳುಕ್ಯ, ಕಳಚುರಿಯರು, ಯಾದವರ ಅಧಿಕಾರಾಧಿಯಲ್ಲಿ ತರ್ದವಾಡಿನಾಡಿನ ಆಡಳಿತದ ಒಂದು ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಇವರ ಶಾಸನಗಳಲ್ಲಿ ವಿಜಯಾಪುರವನ್ನು ರಾಯರಾಜಧಾನಿ,[೨] ರಾಜಧಾನಿ ವಿಜಯಪುರ[೩] ಎಂದು ಉಲ್ಲೇಖಿಸಲಾಗಿದೆ. ರಾಜಧಾನಿ ವಿಜಯಪುರ ಎಂದು ಕರೆಯಿಸಿಕೊಳ್ಳುವ ವಿಜಾಪುರವು ಆ ಕಾಲಘಟ್ಟದ ಒಂದು ಪ್ರಮುಖ ಆಡಳಿತ ಕೇಂದ್ರವಾಗಿರಬೇಕು. ಯಾದವರ ಆಳ್ವಿಕೆಯನ್ನು ಕೊನೆಗೊಳಿಸಿ ದೆಹಲಿ ಸುಲ್ತಾನರು ದಖನ್‌ದಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಿಸುವ ಪ್ರಯತ್ನ ಮಾಡಿದರು. ಈ ಕಾಲಘಟ್ಟದಲ್ಲಿ ವಿಜಾಪುರ ಪ್ರದೇಶವು ಕೂಡ ದೆಹಲಿ ಸುಲ್ತಾನರ ಅಧೀನಕ್ಕೊಳಪಟ್ಟಿತು. ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್‌ನು ವಿಜಾಪುರದ ಗವರ್ನರನನ್ನಾಗಿ ಮಲ್ಲಿಕ್ ಇಜ್ಜುದ್ದೀನ್ ಎಂಬ ಖಿಲ್ಜಿ ನೊಬಲ್‌ನನ್ನು ನೇಮಕ ಮಾಡಿದನು. ಇವನು ವಿಜಾಪುರದ ಪ್ರಥಮ ಮುಸ್ಲಿಂ ಗವರ್ನರನಾಗಿದ್ದಾನೆ. ಇವನ ನಂತರ ಇವನ ಮಗ ಕರೀಮುದ್ದೀನ್ ಆಬುರಜಾ ಗವರ್ನರನಾದನು.[೪] ಇವನು ಕ್ರಿ.ಶ. ೧೩೧೬ರಲ್ಲಿ ಕಲ್ಯಾಣ ಚಾಳುಕ್ಯರ ಕಾಲಾವಧಿಯ ದೇವಾಲಯವನ್ನು ಕೆಡವಿ ಅದರ ಅವಶೇಷಗಳನ್ನು ಬಳಸಿಕೊಂಡು ಈಗಿನ ಅರ್ಕ್‌ಕಿಲ್ಲೆಯಲ್ಲಿ ಕರೀಮುದ್ದೀನ್ ಮಸೀದಿಯನ್ನು ಕಟ್ಟಿಸಿದನು.[೫] ದೆಹಲಿ ಸುಲ್ತಾನರ ದಾಸ್ಯತ್ವವನ್ನು ಕಳಚಿ ದಖನ್ ಅಥವಾ ವಿಜಾಪುರವು ಬಹಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿತು. ಇವರ ಪ್ರಥಮ ಕಾಲಘಟ್ಟದಲ್ಲಿ ಜಿಲ್ಲೆಯು ಗುಲಬರ್ಗಾ ಪ್ರಾಂತದ ಒಂದು ಭಾಗವಾಗಿದ್ದು ಮುಂದೆ ಬಹಮನಿ ಸುಲ್ತಾನ ಶಂಸುದ್ಧೀನ್ ಮಹಮ್ಮದ ಶಾಹ(ಕ್ರಿ.ಶ. ೧೪೬೩ ರಿಂದ ೧೪೮೨)ನ ಪ್ರಧಾನಿಯಾದ ಮಹಮ್ಮದ್ ಗವಾನನು ಗುಲಬರ್ಗಾದಿಂದ ವಿಜಾಪುರವನ್ನು ಪ್ರತ್ಯೇಕಿಸಿ ಅದಕ್ಕೆ ಪ್ರತ್ಯೇಕ ಪ್ರಾಂತೀಯ ಸ್ಥಾನಮಾನ ನೀಡಿದನು.[೬] ಕ್ರಿ.ಶ. ೧೪೮೯ರ ನಂತರ ಬಹಮನಿ ಸಾಮ್ರಾಜ್ಯ ಒಡೆದು ಐದು ಶಾಹಿ ರಾಜ್ಯಗಳು ಉಗಮವಾದವು. ವಿಜಾಪುರವನ್ನು ರಾಜಧಾನಿಯನ್ನಾಗಿ

ಮಾಡಿಕೊಂಡು ಯೂಸೂಫ್ ಆದಿಲ್‌ಖಾನ್‌ನು ಆದಿಲ್‌ಶಾಹಿ ಮನೆತನವನ್ನು ಸ್ಥಾಪಿಸಿದನು. ಸುಮಾರು ೨೦೦ ವರ್ಷಗಳ ಕಾಲ ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳು ಆಡಳಿತಾತ್ಮಕವಾಗಿ ಅಷ್ಟೇ ಅಲ್ಲದೆ ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯು ಇವರ ಕಾಲದಲ್ಲಿ ಮತ್ತಷ್ಟು ಉಚ್ಛ್ರಾಯ ಹಂತವನ್ನು ತಲುಪಿತು. ಇವರ ನಂತರ ಆಳ್ವಿಕೆ ಮಾಡಿದ ಮೊಗಲರು, ಹೈದರಾಬಾದ್‌ನ ನಿಜಾಮರು, ಮರಾಠರ ಆಡಳಿತಾವಧಿಯಲ್ಲಿ ವಿಜಾಪುರವು ಒಂದು ಪ್ರಮುಖ ಸುಭಾವಾಗಿತ್ತು. ಕ್ರಿ.ಶ. ೧೮೧೮ರಲ್ಲಿ ಮರಾಠರನ್ನು ಖಡಕಿ ಯುದ್ಧದಲ್ಲಿ ಬ್ರಿಟಿಷರು ಸೋಲಿಸಿದ ನಂತರ ಇಡೀ ಜಿಲ್ಲೆಯು ಇವರ ಅಧೀನಕ್ಕೆ ಒಳಪಟ್ಟು ವಿಜಾಪುರವು ಜಿಲ್ಲೆಯಾಗಿ ಮುಂದುವರಿದುಕೊಂಡು ಬಂದಿದೆ.

ವಿಜಾಪುರವು ಎರಡು ಸುತ್ತಿನ ಕೋಟೆಯಿಂದ ಸುತ್ತುವರಿದಿದ್ದು, ನಗರದ ಮಧ್ಯದಲ್ಲಿರುವ ಕೋಟೆಯನ್ನು ಅರಕಿಲ್ಲೆ ಅಥವಾ ಒಳಕೋಟೆ ಎಂದು, ನಗರದ ಸುತ್ತಲೂ ಇರುವ ಕೋಟೆಯನ್ನು ಹೊರಕೋಟೆ ಎಂದು ವಿಭಾಗಿಸಿ ಪ್ರಸ್ತುತ ಅಧ್ಯಯನದಲ್ಲಿ ವಿಂಗಡಿಸಿ ವಿವರಿಸಲಾಗಿದೆ. ಹೊರಕೋಟೆ ಒಂದನೇ ಅಲಿ ಆದಿಲ್‌ಶಾಹನ ಕಾಲದಲ್ಲಿ ನಿರ್ಮಾಣವಾಗಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ನಗರದ ಮಧ್ಯ ಇರುವ ಅರಕಿಲ್ಲೆ ಎಂದು ಕರೆಯಲ್ಪಡುವ ಕೋಟೆಯು ಎರಡು ಸುತ್ತಿನಿಂದ ಕೂಡಿದ್ದು ಇದರ ನಿರ್ಮಾಣದ ಕಾಲಘಟ್ಟವನ್ನು ಕುರಿತು ವಿದ್ವಾಂಸರಲ್ಲಿ ಇನ್ನೂ ಜಿಜ್ಞಾಸೆಗಳಿವೆ.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಒಂದು ಪ್ರಮುಖ ಆಡಳಿತ ಕೇಂದ್ರವಾಗಿ ಬೆಳೆದುಬಂದಿರುವ ವಿಜಾಪುರದಲ್ಲಿ ಇವರ ಕಾಲಾವಧಿಯಲ್ಲಿ ಕೋಟೆ ಇದ್ದಿರಬಹುದಾದ ಸಾಧ್ಯತೆಗಳನ್ನು ಗುರುತಿಸುತ್ತಾರೆ. ಕಲ್ಯಾಣದ ಚಾಳುಕ್ಯರು, ಕಳಚುರಿಯರು ಮತ್ತು ಯಾದವರ ಕಾಲದಲ್ಲಿ ಪ್ರಮುಖ ರಾಜಧಾನಿ ಪಟ್ಟಣ ಆಗಿತ್ತು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಹೀಗಾಗಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡುತ್ತಿದ್ದ ಇವರ ಮಾಂಡಳಿಕ ಅರಸರು ಅಥವಾ ಮಹಾಮಂಡಳೇಶ್ವರರು ಇಲ್ಲಿ ಕೋಟೆಯನ್ನು ನಿರ್ಮಿಸಿ ಆಡಳಿತ ಮಾಡಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇಂದು ಅರ್ಕ್‌ಕಿಲ್ಲೆ ಎಂದು ಕರೆಯಿಸಿಕೊಳ್ಳುವ ಕೋಟೆಯ ಒಳಗೆ ಕಲ್ಯಾಣ ಚಾಳುಕ್ಯರ ಶೈಲಿಯ ದೇವಾಲಯಗಳ ಅವಶೇಷಗಳು ಮತ್ತು ದೇವಾಲಯ ತಳಪಾಯಗಳನ್ನು ಗುರುತಿಸಬಹುದು. ಅರ್ಕ್‌ಕಿಲ್ಲೆಯ ಕೋಟೆ ಗೋಡೆಗೆ ಮತ್ತು ಒಳಗೆ ಅಲಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಅವಶೇಷಗಳನ್ನು ಬಳಸಿಕೊಂಡು ಮಸೀದಿ, ಮಂಟಪಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಕೋಟೆಯ ನಿರ್ಮಾಣದಲ್ಲೂ ಉಪಯೋಗಿಸಿದ್ದು ಕಂಡುಬರುತ್ತದೆ. ಇದೊಂದು ಆ ಕಾಲಘಟ್ಟದ ದೇವಾಲಯದ ಸಂಕೀರ್ಣವಾಗಿರಲೂಬಹುದು ಎಂದು ಅಭಿಪ್ರಾಯಿಸಬಹುದಾಗಿದೆ. ಇದರಲ್ಲಿ ಉಳಿದುಕೊಂಡು ಬಂದಿರುವುದು ನರಸಿಂಹದೇವಾಲಯ ಮಾತ್ರ. ಆದರೆ ಅದು ಸಂಪೂರ್ಣವಾಗಿ ನಂತರ ಕಾಲಘಟ್ಟದಲ್ಲಿ ಪುನರ್ ನಿರ್ಮಾಣಗೊಂಡಿದೆ.

ದೆಹಲಿ ಸುಲ್ತಾನರ ಅಧೀನನ್ನಾಗಿ ಕರೀಮುದ್ಧೀನ್ ಇಲ್ಲಿ ಗವರ್ನರನಾಗಿ ನೇಮಕವಾದ ಮೇಲೆ ಇವನು ಕಲ್ಯಾಣ ಚಾಳುಕ್ಯರ ಅವಧಿಯ ದೇವಾಲಯವನ್ನು ನಾಶ ಮಾಡಿ ಅದರ

ಅವಶೇಷಗಳಿಂದಲೇ ಕರೀಮುದ್ದೀನ್ ಮಸೀದಿಯನ್ನು ನಿರ್ಮಿಸುತ್ತಾನೆ. ಇದನ್ನು ಈಗಲೂ ಅರಕಿಲ್ಲೆಯ ಒಳಗೆ ನೋಡಬಹುದು. ಹೀಗಾಗಿ ಚಾಳುಕ್ಯರ ಅವಧಿಯಲ್ಲಿಯೇ ಇಲ್ಲಿ ಕೋಟೆಯನ್ನು ನಿರ್ಮಿಸಿರಬಹುದಾದ ಸಾಧ್ಯತೆಗಳಿವೆ. ಆದರೆ ಅದಕ್ಕೆ ಸಂಬಂಧಿಸಿದಂತೆ ನಮಗೆ ಯಾವುದೇ ಪುರಾತತ್ತ್ವೀಯ ಮತ್ತು ಸಾಹಿತ್ಯಕ ಆಕರಗಳು ಲಭ್ಯವಾಗಿಲ್ಲ.

ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ ಕೃತಿಗಳು ಮತ್ತು ಬೇರೆ ಬೇರೆ ವಿದ್ವಾಂಸರು ಯುಸೂಫ್ ಆದಿಲ್‌ಶಾಹನು ಮಣ್ಣಿನ ಕೋಟೆಯನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ನೋಡುವುದಾದರೆ, ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದ ಮಹಮ್ಮದ್ ಕಾಸೀಮ್ ಫರಿಶ್ತಾ ವಿರಚಿತ 'ತಾರೀಖ-ಎ-ಫರಿಶ್ತಾ' ಎಂಬ ಸಾಹಿತ್ಯ ಗ್ರಂಥದಲ್ಲಿ ಯುಸೂಫ್ ಆದಿಲ್‌ಶಾಹನು ಅರ್ಕ್‌ಕಿಲ್ಲೆಯನ್ನು ಆರಂಭದಿಂದಲೇ ಸುಣ್ಣ ಮತ್ತು ಇಟ್ಟಿಗೆಯಿಂದ ಕಟ್ಟಿಸಿದನು ಎಂದು ತಿಳಿಸುತ್ತದೆ.[೭] ಮಹಮ್ಮದ್ ಇಬ್ರಾಹಿಮ್ ಜುಬೇರಿ ವಿರಚಿತ 'ಬಸಾತೀನೆ ಸಲಾತೀನ' ಕೃತಿಯು ಸಹ ಈ ಕೋಟೆಯನ್ನು ಯೂಸೂಫ್ ಆದಿಲ್‌ಶಾಹನು ಹಿ.ಶ. ೯೧೯(ಕ್ರಿ.ಶ. ೧೫೧೩ ರಿಂದ ೧೪)ರಲ್ಲಿ ಕಟ್ಟಿಸಿದನೆಂದು ಉಲ್ಲೇಖಿಸಿದೆ.[೮]

ಯುಸೂಫ್‌ನಿಗೆ ಬಹಮನಿ ಸುಲ್ತಾನನು ಕಾನಕರ್ತಿ ಕಲ್ಯಾಣದಿಂದ ಮಂಜಾನ, ಗೋವೆ, ಕಂಚಿ, ಕಾಳಹಸ್ತಿ ಮತ್ತು ಪ್ರಾಚೀನ ಕಾಲದಲ್ಲಿ ರಾಜಧಾನಿಯಾಗಿದ್ದ ಮಂಗಳವೇಡೆಯವರೆಗಿನ ಪ್ರದೇಶಗಳನ್ನು ಜಹಗೀರು ಹಾಕಿ ಕೊಟ್ಟನೆಂದು ಮೀರ್‌ಅಹ್ಮದ್ ಅಲಿಖಾನ್ ವಿರಚಿತ ಗುಲದಸ್ತಾಯೆ ವಿಜಾಪುರ ಕೃತಿಯಿಂದ ತಿಳಿದು ಬರುತ್ತದೆ. ಯುಸೂಫ್‌ನು ಇಲ್ಲಿ ಬಂದು ತನ್ನ ಪ್ರದೇಶಗಳ ಅಭಿವೃದ್ಧಿಯನ್ನು ಮಾಡಿದನು. ಈ ಪ್ರದೇಶಗಳಲ್ಲಿಯೇ ಬೆಂಜನಹಳ್ಳಿ ಎಂಬ ಒಂದು ಗ್ರಾಮವಿತ್ತು. ಅದು ರಾಜಧಾನಿಯನ್ನಾಗಿ ಮಾಡಲು ಯೋಗ್ಯವಾಗಿತ್ತು. ಆದ್ದರಿಂದ ಯುಸೂಫ್‌ನು ಅಲ್ಲಿಯೇ ಇದ್ದು ಸುತ್ತಮುತ್ತ ಕೋಟೆಯನ್ನು ಕಟ್ಟಿಸಿ ಅದರ ಹೆಸರನ್ನು ಬಿಜಾಪುರ ಎಂದು ಇಟ್ಟನು.[೯] ಈ ಕೋಟೆಯನ್ನು ಇಂದು ಅರ್ಕ್‌ಕಿಲ್ಲೆ ಎಂದು ಕರೆಯುತ್ತಾರೆ. ಈ ಅರ್ಕ್‌ಕಿಲ್ಲೆಯನ್ನು(ಹಿಜರಿ ಶಕ ೯೧೭) ಕ್ರಿ.ಶ. ೧೫೧೧ರಲ್ಲಿ ಕಟ್ಟಿಸಿದನು ಎಂದು ಉಲ್ಲೇಖಿಸುತ್ತದೆ. ಹೆನ್ರಿ ಕಝಿನ್ಸ್ ಅವರು ಯುಸೂಫ್‌ನು ಮಣ್ಣಿನ ಗೋಡೆಯಿಂದ ಅರ್ಕ್‌ಕಿಲ್ಲಾವನ್ನು ನಿರ್ಮಿಸಿದ ಎಂದು ಹೇಳುತ್ತಾರೆ.[೧೦] ಆದರೆ ತಾರೀಖ್-ಎ-ಫರಿಶ್ತಾ ಗ್ರಂಥದಲ್ಲಿ ಭಿನ್ನವಾದ ವಿಷಯ ವ್ಯಕ್ತವಾಗಿದೆ. ಬಹಮನಿ ಸುಲ್ತಾನ ಹುಮಾಯೂನ್ ಶಾಹ ಬಹಮನಿ ಅವಧಿಯಲ್ಲಿ ಸುಲ್ತಾನನ ಸೋದರನಾದ ಹಸನ್‌ಖಾನ್‌ನು ದಂಗೆಯೆದ್ದು ಕದನದಲ್ಲಿ ತೊಡಗಿದಾಗ ತೀವ್ರಗತಿಯಲ್ಲಿ ನಡೆದ ಯುದ್ಧದಲ್ಲಿ ಬಲಾಢ್ಯವಾದ ಸೈನ್ಯವನ್ನು ಎದುರಿಸದೇ ಹಸನ್‌ಖಾನನು ಯುದ್ಧಭೂಮಿಯಿಂದ ಪಲಾಯನಗೈದು ಬಿಜಾಪುರದ ಕಚ್ಚಾಕೋಟೆಯಲ್ಲಿ ನೆಲೆ ನಿಂತ. ಆಗ ಆ ಪ್ರಾಂತದ ಠಾಣೇದಾರ ಸಿರಾಜಖಾನ ಜುನೇದಿ ಎನ್ನುವವನಿದ್ದ ಎಂದು ಉಲ್ಲೇಖಿಸುತ್ತದೆ.[೧೧] ಹೀಗಾಗಿ ವಿಜಾಪುರವು ಯುಸೂಫ್ ಆದಿಲ್‌ಖಾನ್‌ನ ಕೈಗೆ ಬರುವುದಕ್ಕಿಂತಲೂ ಮೊದಲೇ ಇಲ್ಲಿ ಕೋಟೆ ಇದ್ದುದರ ಬಗ್ಗೆ ತಿಳಿಸುತ್ತದೆ. ಇದರಿಂದ

ಯುಸೂಫ್‌ನು ಈ ಕೋಟೆಯಲ್ಲಿಯೇ ಬಂದು ನೆಲೆ ನಿಂತು ಕೋಟೆಯನ್ನು ದುರಸ್ತಿಪಡಿಸಿರಬಹುದು. ಇಲ್ಲವೇ ಮೊದಲಿನ ಕೋಟೆಯ ಕಿತ್ತು ಹೊಸದಾಗಿ ಮಣ್ಣಿನ ಕೋಟೆಯನ್ನು ನಿರ್ಮಿಸಿದ್ದಾನೆ ಎಂದು ಹೇಳಬಹುದು.

ಕ್ರಿ.ಶ. ೧೫೧೪ರ ಶಾಸನ ಇವನ ಆಳ್ವಿಕೆಯ ಆಡಳಿತಾವಧಿಯಲ್ಲಿಯೂ ಈ ಕೋಟೆಯ ಕಟ್ಟುವಿಕೆ ಮುಂದುವರಿದು ಕೋಟೆಯ ಕೆಲವು ಭಾಗಗಳನ್ನು ನಿರ್ಮಿಸಲಾಯಿತು. ಈ ಕೋಟೆಯ ನಿರ್ಮಾಣವು ಯುಸೂಫ್ ಆದಿಲ್‌ಶಾಹ ಮರಣ ಹೊಂದಿದ ನಾಲ್ಕು ವರ್ಷಗಳವರೆಗೂ ನಡೆಯಿತು[೧೨] ಎಂಬುದು ತಿಳಿದುಬರುತ್ತದೆ. ಕ್ರಿ.ಶ. ೧೫೨೨ರ ಅರಕಿಲ್ಲೆಯ ಹೊರಗಡೆ ಬಾಗಿಲಿನ ಮೇಲೆ ಬರೆಯಲ್ಪಟ್ಟ ಪರ್ಶಿಯನ್ ಶಾಸನವು ಇಸ್ಮಾಯಿಲ್‌ನು ತನ್ನ ಸಹಾಯಕ ಅಧಿಕಾರಿಗಳ ಸೂಚನೆಯ ಮೇರೆಗೆ ನಗರದ ರಕ್ಷಣೆಗೆ ನಾಲ್ಕೂ ದಿಕ್ಕಿನಲ್ಲಿ ಕೋಟೆ ಗೋಡೆಯನ್ನು, ಬುರ್ಜುಗಳನ್ನು ನಿರ್ಮಾಣ ಮಾಡಿಸಿದನು.[೧೩] ಈ ಶಾಸನಗಳನ್ನು ಗಮನಿಸಿದಾಗ ಯುಸೂಫ್ ಆದಿಲ್‌ಶಾಹನ ಅವಧಿಯಲ್ಲಿ ಕೋಟೆಯ ನಿರ್ಮಾಣಕಾರ್ಯ ಪ್ರಾರಂಭವಾಗಿ ಅದು ಇಸ್ಮಾಯಿಲ್ ಆದಿಲ್‌ಶಾಹನ ಕಾಲದಲ್ಲಿಯೂ ಮುಂದುವರಿಯಿತು ಎಂದು ಹೇಳಬಹುದು.

ಆದರೆ ಯುಸೂಫ್‌ನು ನಿರ್ಮಿಸಿದ ಕೋಟೆಯು ಭದ್ರವಾಗಿಲ್ಲವೆಂದು ಅದರ ಮೇಲೆ ಒಂದನೇ ಇಬ್ರಾಹಿಮ್ ಆದಿಲ್‌ಶಾಹನು ಕಲ್ಲು, ಗಾರೆ, ಗಚ್ಚನ್ನು ಉಪಯೋಗಿಸಿ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ಎಂದು ಹೇಳಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಶಾಸನಗಳು ಮತ್ತು ಸಾಹಿತ್ಯ ಗ್ರಂಥಗಳು ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. 'ಇಬ್ರಾಹಿಮ್ ನಾಮಾ'ದಲ್ಲಿ ಉಲ್ಲೇಖಿಸಿದಂತೆ ಪಟ್ಟಣದ ಕೇಂದ್ರ, ಅದರ ಕೋಟೆ ಮತ್ತು ಅರಮನೆಗಳಾಗಿದ್ದವು ಅವು 'ಅರಕ್‌ಖಿಲಾ' ಹೆಸರಿಂದ ಪ್ರಖ್ಯಾತವಾಗಿವೆ. ವಿವಿಧ ಬಾದಶಹರ ಕಾಲದಲ್ಲಿ ಅರಮನೆಗಳ ಸಂಖ್ಯೆ ಹೆಚ್ಚಾಗುತ್ತ ಹೋಯಿತು. ಈ ಕೋಟೆಯ ವ್ಯಾಸ ಸುಮಾರು ಒಂದು ಮೈಲು ಇದೆ. ಅಲ್ಲಲ್ಲಿ ಬುರುಜುಗಳು ಮತ್ತು ಆಳವಾದ ಕಂದಕದಿಂದ ನಿರ್ಮಾಣವಾಗಿದೆ. ಅರ್ಕ್‌ಕಿಲ್ಲಾ ಮೊದಲನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಪೂರ್ಣಗೊಂಡಿದೆ ಎಂದು ಉಲ್ಲೇಖಿಸಲಾಗಿದೆ.[೧೪]

ಮಹಮ್ಮದ್ ಇಬ್ರಾಹಿಮ್ ಜುಬೇರಿ ವಿರಚಿತ 'ಬಸಾತೀನೆ ಸಲಾತೀನ' ಕೃತಿಯು ತಿಳಿಸುವಂತೆ ವಿಜಯನಗರ ಸಾಮ್ರಾಜ್ಯದಲ್ಲಿ ಸಿಂಹಾಸನಕ್ಕಾಗಿ ಅಳಿಯ ರಾಮರಾಯ ಮತ್ತು ತಿರುಮಲನ ಮಧ್ಯೆ ಪೈಪೋಟಿ ನಡೆಯಿತು. ತಿರುಮಲನು ಮೊದಲನೇ ಇಬ್ರಾಹಿಮ್ ಆದಿಲ್‌ಶಾಹನ ಸಹಾಯ ಕೋರಿದಾಗ ಇಬ್ರಾಹಿಮ್‌ನು ಇವನ ಪರವಾಗಿ ವಿಜಯನಗರದ ಮೇಲೆ ದಂಡೆತ್ತಿ ಹೋದನು. ರಾಮರಾಯನು ತಿರುಮಲನ ಒಡೆತನವನ್ನು ಒಪ್ಪಿ ಆದಿಲ್‌ಶಾಹಿ ಸೈನ್ಯವನ್ನು ಹಿಂದಕ್ಕೆ ಕಳುಸಹಿಸಬೇಕೆಂದು ವಿನಂತಿಸಿದನು. ಇದನ್ನು ನಂಬಿದ ತಿರುಮಲನು ಇಬ್ರಾಹಿಮನಿಗೆ ೪೪ ಲಕ್ಷ ಹೊನ್ನು ಹಾಗೂ ೮೦ ಲಕ್ಷ ಬೆಲೆಯ ಪದಾರ್ಥಗಳನ್ನು ಕಾಣಿಕೆಯಾಗಿ ನೀಡಿ ತಿರುಗಿ ಹೋಗಲು ವಿನಂತಿ ಪತ್ರವನ್ನು ಬರೆದು ಕಳುಹಿಸಿದನು. ಅಧಿಕ ಧನ ಪ್ರಾಪ್ತಿಯೊಂದಿಗೆ ಇಬ್ರಾಹಿಮ್‌ನು

ರಾಜಧಾನಿಗೆ ಹಿಂದುರುಗಿದನು. ವಿಜಯನಗರದಿಂದ ಹಿಂದುರುಗಿದ ಮೇಲೆ ಇಬ್ರಾಹಿಮನು ವಿಜಾಪುರದ ಕೋಟೆ(ಅರ್ಕ್‌ಕಿಲ್ಲಾ)ಯನ್ನು ಯುಸೂಫ್ ಆದಿಲ್‌ಶಾಹನು ಕಟ್ಟಿದ್ದು ಅದು ಗಟ್ಟಿಯಾಗಿಲ್ಲವೆಂದು ಬಹಳ ಕಾಲದವರೆಗೆ ಉಳಿಯುವಂತೆ ಬಂಡೆಗಲ್ಲು ಹಾಗೂ ಗಾರೆ ಗಚ್ಚುಗಳಿಂದ ಮತ್ತೆ ಮಜಬೂತಾಗಿ ಕೋಟೆಯನ್ನು ಕಟ್ಟಿಸಿದನು ಎಂದು ಉಲ್ಲೇಖಿಸುತ್ತದೆ.[೧೫] ಇದನ್ನು ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ರಫೀಯುದ್ದೀನ್ ಇಬ್ರಾಹೀಂ ಶಿರಾಜ ವಿರಚಿತ 'ತಝ್ಕಿರತುಲ್ ಮಲೂಕ್' ಗ್ರಂಥವು ಕೂಡ ಸಮರ್ಥಿಸುತ್ತದೆ.

ಈ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿರುವ ಹೇಳಿಕೆಗಳನ್ನು ಮತ್ತಷ್ಟು ದೃಢಪಡಿಸಲು ಶಾಸನಗಳು ಕೂಡ ಆಧಾರವಾಗಿ ನಿಲ್ಲುತ್ತವೆ. ಅರಬ್ಬಿ ಹಾಗೂ ಪರ್ಶಿಯನ್ ಭಾಷೆಯ ಕ್ರಿ.ಶ. ೧೫೩೮ರ ಶಾಸನ ಅರಕಿಲ್ಲೆಯ ದಕ್ಷಿಣ ಬಾಗಿಲಿನ ಮೇಲೆ ಇದ್ದು ಈ ಬಾಗಿಲನ್ನು ಒಂದನೆಯ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ಕಟ್ಟಿ ಪೂರ್ಣಗೊಳಿಸಿದುದನ್ನು ತಿಳಿಸುತ್ತದೆ.[೧೬] ಎರಡನೆಯ ಶಾಸನ ಕ್ರಿ.ಶ. ೧೫೪೨-೧೫೪೩ರ ಕಾಲಾವಧಿಯದ್ದಾಗಿದ್ದು ಅರಕಿಲ್ಲೆಯ ಬಾಗಿಲ್ವಾಡದ ಮೇಲೆ ಇದೆ. ಬಖ್ತ್ಯಾರಖಾನನು ಈ ಕಟ್ಟಡವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೧೭] ಮೂರನೇ ಶಾಸನ ಕ್ರಿ.ಶ. ೧೫೪೪-೧೫೪೫ರ ಶಾಸನ ಅರಕಿಲ್ಲೆಯ ಹೊರಗಿನ ಪ್ರವೇಶದ್ವಾರದ ಬಳಿ ಇದ್ದು ಇಖ್ತ್ಯಾರ್‌ಖಾನನು ಈ ಕಟ್ಟಡವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೧೮] ನಾಲ್ಕನೆಯ ಶಾಸನ ಕ್ರಿ.ಶ. ೧೫೫೦ರ ಶಾಸನ ಚೀನೀ ಮಹಲಿಗೆ ದಕ್ಷಿಣದಲ್ಲಿರುವ ಕಡಕ ಬಿಜಲಿ ಬುರ್ಜುವಿನಲ್ಲಿರುವ ಶಾಸನ ನಗರಕ್ಕೆ ಕೋಟೆಯನ್ನು ರಾಜನ ಅಧಿಕಾರಿ ಖಾನ್-ಇ-ಆಜಂ ಇಖ್ತ್ಯಾರ್‌ಖಾನ್ ಗುಜರಾತಿ ಎಂಬುವನು ಕಟ್ಟಿಸಿದನೆಂದು ತಿಳಿಸುತ್ತದೆ.[೧೯]

ಶಾಸನಗಳು ಮತ್ತು ಸಾಹಿತ್ಯ ಕೃತಿಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ 'ಬಸಾತಿನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಇಬ್ರಾಹಿಂನು ವಿಜಯನಗರದ ಮೇಲೆ ತಿರುಮಲನ ಪರವಾಗಿ ದಂಡೆತ್ತಿ ಹೋಗಿದ್ದು ಕಪ್ಪ ಕಾಣಿಕೆಗಳನ್ನು ಪಡೆದುಕೊಂಡ ಘಟನೆ ನಡೆದದ್ದು ಕ್ರಿ.ಶ. ೧೫೩೫ರ ಸಂದರ್ಭದಲ್ಲಿ. ಅಲ್ಲದೆ ಅರಕಿಲ್ಲೆಯ ದಕ್ಷಿಣ ದ್ವಾರವನ್ನು ಕ್ರಿ.ಶ. ೧೫೩೮ರಲ್ಲಿ ಕಟ್ಟಿ ಪೂರ್ಣಗೊಳಿಸಲಾಯಿತು ಎಂದು ತಿಳಿದುಬರುತ್ತದೆ. ಹೀಗಾಗಿ ವಿಜಯನಗರದಿಂದ ಹಿಂತಿರುಗಿ ಬಂದ ಮೇಲೆ ಕ್ರಿ.ಶ. ೧೫೩೬-೩೭ರ ಕಾಲಾವಧಿಯಲ್ಲಿ ಅರ್ಕ್‌ಕಿಲ್ಲೆಯನ್ನು ಕಟ್ಟಲು ಪ್ರಾರಂಭಿಸಿ ಅದು ಕ್ರಿ.ಶ. ೧೫೫೦ರ ಅವಧಿಯಲ್ಲಿ ನಿರ್ಮಾಣದ ಕಾರ್ಯ ಮುಕ್ತಾಯಗೊಂಡಿರಬಹುದು. ಸದ್ಯ ನಮಗೆ ಕಾಣಸಿಗುವ ಅರ್ಕ್‌ಕಿಲ್ಲಾವನ್ನು ಒಂದನೇ ಇಬ್ರಾಹಿಮ್ ಆದಿಲ್‌ಶಾಹನು ನಿರ್ಮಿಸಿದ ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ.

ಅರ್ಕ್‌ಕಿಲ್ಲಾವನ್ನು ಅರ್ಗ್‌ಕಿಲ್ಲಾ ಮತ್ತು ಕಿಲ್ಲಾಅರ್ಕ್ ಎಂತಲೂ ಬರೆಯಲಾಗಿದೆ. 'ಅರ್ಕ್' ಎಂಬ ಪದವು ವಿಜಾಪುರಕ್ಕೆ ತೀರಾ ಹೊಸತೇನಲ್ಲ. ಈ ಮುಂಚೆ ಭಾರತದ ಇತರ ಭಾಗಗಳಲ್ಲಿ ಬಳಕೆಯಲ್ಲಿರುವುದು ತಿಳಿದುಬಂದಿದೆ. ಇದರ ಸಂಕ್ಷಿಪ್ತ ಅರ್ಥ 'ಅನಿಶ್ಚಿತವಾಗಿದೆ'.[೨೦]

ವೃತ್ತಾಕಾರದಲ್ಲಿ ನಿರ್ಮಿತವಾಗಿರುವ ಈ ಕೋಟೆಯು ಪ್ರಮುಖವಾಗಿ ನಗರದ ಕೇಂದ್ರಬಿಂದುವಿನಲ್ಲಿದೆ. ಇದರಲ್ಲಿ ಬಾದಶಹ ಮತ್ತು ದರ್ಬಾರಿಗಳು, ವಿಶೇಷ ಗಣ್ಯರು, ಅತಿಥಿಗಳು, ಈ ಕಟ್ಟಡದಲ್ಲಿ ಆರಾಮವಾಗಿರುವಂತೆ ವ್ಯವಸ್ಥೆ ಮಾಡಲಾಗಿತ್ತು ಎಂದು ರಫೀಯುದ್ಧೀನ್ ಇಬ್ರಾಹಿಂ ಶಿರಾಜ ವಿರಚಿತ ತಝ್ಕೀರತುಲ್ ಮುಲೂಕ್‌ದಲ್ಲಿ ಉಲ್ಲೇಖಿಸಲಾಗಿದೆ(ಪು-೫೯). ಇದನ್ನು ಸುಲ್ತಾನರ ಭದ್ರತೆ ರಕ್ಷಣೆಗೋಸ್ಕರ ನಿರ್ಮಿಸಲಾದದ್ದು ಎಂದು ಹೇಳಬಹುದು.

ಈ ಅರ್ಕ್‌ಕಿಲ್ಲಾದಲ್ಲಿ ಅರಮನೆಗಳು ಗುಪ್ತಸಮಾಲೋಚನೆಯ ಕಟ್ಟಡಗಳು ಸಾರ್ವಜನಿಕ ನ್ಯಾಯ ತೀರ್ಮಾನ ಮಾಡುವ ನ್ಯಾಯದ ಕಟ್ಟೆಗಳು, ಕಂದಾಯ ಮತ್ತು ಸೈನಿಕ ಕಚೇರಿಗಳು ಹಾಗೂ ಪ್ರಮುಖ ಅಡಳಿತ ವರ್ಗದವರ ಕಟ್ಟಡಗಳನ್ನು ಹೊಂದಿತ್ತು. ಇಂದು ಅರಕಿಲ್ಲಾದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ನಿವಾಸಗಳನ್ನು ಒಳಗೊಂಡಂತೆ ಇನ್ನಿತರ ಜಿಲ್ಲಾ ಪ್ರಮುಖ ಕಛೇರಿಗಳು ಇರುವುದನ್ನು ಕಾಣಬಹುದು.

ಇಬ್ರಾಹಿಮ್ ಆದಿಲ್‌ಶಾಹನು ಬಹಳ ಕಾಲದವರೆಗೆ ಉಳಿಯುವಂತೆ ಮತ್ತು ಮಜಬೂತಾಗಿ ಕೋಟೆಯನ್ನು ಕಟ್ಟಬೇಕೆಂದನು. ಅದಕ್ಕಾಗಿ ಕೆಲಸ ಚೆನ್ನಾಗಿ ಗೊತ್ತಿರುವ ಗೌಂಡಿಗಳನ್ನು ಕುಶಲ ಕಲ್ಲು ಕುಟಿಗರನ್ನು ಕರೆಸಿ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದನು. ಕೋಟೆಗೆ ಎರಡು ಗೋಡೆಗಳು ಎರಡು ಕಂದಕಗಳು ಇರಬೇಕು. ಅದಕ್ಕಾಗಿ ತ್ವರಿತವಾಗಿ ಮಾಡುವ ಕೆಲಸಗಾರರನ್ನು ಕರೆಸಿದನು. ಅಖಂಡ ಕಪ್ಪುಶಿಲೆಯನ್ನು ಕಟೆಯುವ ಕಲ್ಲುಕುಟಿಗರು ದೊಡ್ಡ ದೊಡ್ಡ ಬಂಡೆಗಳಲ್ಲಿ ಕಟೆದರು. ಕುಶಲರಾದ ಗೌಂಡಿಗಳು ನೀರು ಹತ್ತುವವರೆಗೂ ನೆಲವನ್ನು ಅಗೆದು ತರದಲ್ಲಿ ಸುಣ್ಣದ ಗಚ್ಚನ್ನು ಹಾಕಿ ಅದರ ಮೇಲೆ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಹಾಕಿ ತರವನ್ನು ಗಟ್ಟಿಯಾಗಿ ಹಾಕಿ ತೆಗೆದರು. ಕೆಲವೇ ದಿನಗಳಲ್ಲಿ ಸಂಪೂರ್ಣ ಸುರಕ್ಷತೆಯ ಮಜಬೂತಾದ ಕೋಟೆಯನ್ನು ಕಟ್ಟಿದರು. ಈ ರೀತಿಯಾಗಿ ಅರಕಿಲ್ಲೆಯಲ್ಲಿ ಎರಡು ಸುತ್ತಿನ ಕೋಟೆಯ ಗೋಡೆಯನ್ನು ಗಟ್ಟಿಯಾಗಿ ಬಹುದಿನ ಬಾಳಿಕೆ ಬರುವಂತೆ ಕಟ್ಟಲಾಗಿದೆ. ಕೋಟೆಗೋಡೆಯ ಸುತ್ತಲೂ ಎರಡು ಕಂದಕಗಳಿರುವ ಹಾಗೆ ನಿರ್ಮಿಸಲಾಗಿದೆ. ಎರಡೂ ದಂಡೆಗಳ ಅಂತರ ಮೂವತ್ತು ಗಜ ಹಾಗೂ ಎರಡು ದಂಡೆಗಳ ಮತ್ತು ಕಂದಕಗಳ ಮಧ್ಯಭಾಗದಲ್ಲಿ ಉದ್ಯಾನವನವನ್ನು ಮಾಡಲಾಗಿದೆ.[೨೧] ಈ ಉದ್ಯಾನವನದ ಒಂದರ ಹೆಸರು 'ಬಾರಹ ದಿನ್ ಕಾ ಬಾಗ್', ಎರಡನೆಯದು 'ಬಾಗೇ ಅಲವೀ', ಮೂರನೆಯದು 'ಬಾಗೇ ಅಲಿ' ಎಂಬ ಹೆಸರುಗಳಿಂದ ಪ್ರಖ್ಯಾತವಾಗಿದ್ದವು.[೨೨] ಆ ತೋಟದ ಅಗಲ ಅರವತ್ತು ಗಜ ಹಾಗೂ ಉದ್ದ ಕಿಲ್ಲೆಯ ಸುತ್ತಳತೆಯ ಎಂಟು ಮೈಲಿನದಾಗಿತ್ತು. ಕಂದಕದ ಹಾಗೂ ಕಾಲುವೆಗಳ ನೀರು ಬಹಳ ಸ್ವಚ್ಛ ಹಾಗೂ ನಿರ್ಮಲವಾಗಿದ್ದವು.

ಸದ್ಯ ಉಳಿದುಕೊಂಡಿರುವ ಅರ್ಕ್‌ಕಿಲ್ಲೆಯ ಗೋಡೆಯು ಸುಮಾರು ೩೩ ರಿಂದ ೪೦ ಅಡಿ ಎತ್ತರ ಮತ್ತು ಅಷ್ಟೇ ಅಗಲವಾಗಿದ್ದು ಸುಮಾರು ೪೨ ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. ಕೋಟೆಯ ಗೋಡೆಯು ಇಂದು ಹಾಳಾಗಿದ್ದು ಉತ್ತರ ದಿಕ್ಕಿನಲ್ಲಿ ಸಂಪೂರ್ಣವಾಗಿ ನಾಶ

ಹೊಂದಿದೆ. ಉಳಿದ ಕಡೆ ಅಲ್ಲಲ್ಲಿ ಅಳಿದುಳಿದ ಕೋಟೆಯ ಗೋಡೆ ಕಂಡುಬರುತ್ತದೆ. ಕೋಟೆಯ ಗೋಡೆಯು ೧ ಮೈಲು ೫ ಫರ್ಲಾಂಗು ಉದ್ದ ಇರುವುದು. ಅರ್ಕ್‌ಕಿಲ್ಲೆಯು ಪೂರ್ವದಿಂದ ಪಶ್ಚಿಮಕ್ಕೆ ೩೮೦ ಮೀ. ಉತ್ತರದಿಂದ ದಕ್ಷಿಣಕ್ಕೆ ೩೮೨ ಮೀ ಅಗಲವಾಗಿದ್ದು ಇದು ಒಂದು ಕಂದಕದ ಕೊನೆಯ ತುದಿಯಿಂದ ಮತ್ತೊಂದು ಕಂದಕದ ಕೊನೆಯ ತುದಿಯವರೆಗೆ ಇರುವ ಅಳತೆಯಾಗಿದೆ.[೨೩]

ಅರ್ಕ್‌ಕಿಲ್ಲೆಯ ಕೋಟೆಯ ಮೇಲಿನ ತೆನೆಗಳು ೩ ರಿಂದ ೫ ಅಡಿ ಎತ್ತರದವರೆಗೆ ಇವೆ. ಒಂದು ಅಡಿ ಎತ್ತರದ ಕೈಪಿಡಿಗೋಡೆಯ ಮೇಲೆ ತೆನೆಗಳು ನಿರ್ಮಾಣವಾಗಿದ್ದು ಅದರಲ್ಲಿ ವೀಕ್ಷಣಾ ಮತ್ತು ಬಂದೂಕು ಕಿಂಡಿಗಳನ್ನು ಕಾಣಬಹುದು. ಹೊರಸುತ್ತಿನ ಗೋಡೆಯ ತೆನೆಗಳಲ್ಲಿ ಇರುವ ವೀಕ್ಷಣಾ ಮತ್ತು ಬಂದೂಕು ಕಿಂಡಿಗಳು ದೂರದೃಷ್ಟಿಕೋನವನ್ನು ಇಟ್ಟುಕೊಂಡು ನಿರ್ಮಿಸಿದ್ದರೆ, ಒಳಸುತ್ತಿನ ಗೋಡೆಯ ಮೇಲಿನ ತೆನೆಗಳಲ್ಲಿ ಸಮೀಪದೃಷ್ಟಿಕೋನವನ್ನು ಇಟ್ಟುಕೊಂಡು ರಚಿಸಲಾಗಿದೆ. ಈ ಎರಡು ಸುತ್ತಿನ ಗೋಡೆಗಳ ಮಧ್ಯದ ಅಂತರ ೫೦ ರಿಂದ ೭೦ ಅಡಿ ಅಗಲವಾಗಿರುವುದರಿಂದ ಹೊರಸುತ್ತಿನ ಕೋಟೆಯನ್ನು ಭೇದಿಸಿಕೊಂಡು ಒಳಬಂದ ಶತ್ರುಗಳು ಈ ಎರಡು ಸುತ್ತಿನ ಮಧ್ಯೆ ಸಿಕ್ಕಿಹಾಕಿಕೊಳ್ಳುತ್ತಿದ್ದರು. ಇವರ ಮೇಲೆ ಆಕ್ರಮಣ ಮಾಡುವ ಗುರಿಯನ್ನು ಇಟ್ಟುಕೊಂಡು ಈ ರೀತಿಯ ರಚನೆಗಳು ಕಂಡುಬರುತ್ತವೆ.

ಕೋಟೆಯೊಳಗೆ ಇಂದು ಕರೀಮುದ್ದಿನ್ ಮಸೀದಿ, ಹಾಥಿಕಾನಾ, ಮಕ್ಕಾ ಮಸೀದಿ, ಚಿಂಚಿದಿಡ್ಡಿ ಮಸೀದಿ ಅಲ್ಲದೆ ಅಸಾರ ಮಹಲ್, ಅರ್ಶ್‌ಮಹಲ್, ಪಾಣಿಮಹಲ್, ಗಗನಮಹಲ್, ಆನಂದಮಹಲ್, ಚೀನಿಮಹಲ್, ಜಲಮಂಜಿಲ್ ಮುಂತಾದ ಅರಮನೆ ಕಟ್ಟಡಗಳಿವೆ. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಅವಧಿಯಲ್ಲಿ ಕ್ರಿ.ಶ. ೧೫೬೧ರಲ್ಲಿ ನಿರ್ಮಿಸಿದ ಗಗನಮಹಲ್ ರಾಜರ ನಿವಾಸ ಮತ್ತು ದರ್ಬಾರ್ ಹಾಲ್ (ಸಭಾಭವನ) ಆಗಿದೆ. ಔರಂಗಜೇಬನು ವಿಜಾಪುರ ಕೋಟೆಯನ್ನು ಜಯಿಸಿದ ನಂತರ ತನ್ನ ವಿಜಯೋತ್ಸವವನ್ನು ಇಲ್ಲಿಯೇ ಆಚರಿಸಿದನು. ಏಳು ಅಂತಸ್ತುಗಳ ಕಟ್ಟಡ ಸಾತ್‌ಮಂಜಿಲ್ಲನ್ನು ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ಕ್ರಿ.ಶ. ೧೫೮೩ರಲ್ಲಿ ನಿರ್ಮಿಸಿದನು. ಈಗ ಇದರ ನಾಲ್ಕು ಅಂತಸ್ತುಗಳು ಮಾತ್ರ ಉಳಿದುಕೊಂಡಿವೆ. ಇದರ ಎದುರಿಗೆ ಜಲಮಂಜಿಲ್ ಕಂಡುಬರುತ್ತದೆ. ಈ ಎಲ್ಲ ಕಟ್ಟಡಗಳ ಇಂದಿನ ಸ್ಥಿತಿಯು ಚಿಂತಾಜನಕವಾಗಿದೆ.

ಕಂದಕ

ಅರಕಿಲ್ಲೆಯ ಸುತ್ತ ಇರುವ ಎರಡು ಸುತ್ತಿನ ಕಂದಕವು ಸುಮಾರು ೩೦ ರಿಂದ ೪೦ ಅಡಿ ಅಗಲವಾಗಿರಬಹುದು. ಏಕೆಂದರೆ ಇಂದು ಕಂದಕವು ಬಹುತೇಕ ಹಾಳಾಗಿದ್ದು ದಕ್ಷಿಣ ಮತ್ತು ಉತ್ತರ ದಿಕ್ಕಿನಲ್ಲಿ ಉಳಿದುಕೊಂಡು ಬಂದಿದೆ. ದಕ್ಷಿಣದಿಕ್ಕಿನ ಕಂದಕಕ್ಕೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಉತ್ತರದಿಕ್ಕಿನ ಕಂದಕವು ನಗರದ ಕೊಳಚೆನೀರು ಹರಿದುಹೋಗುವ

ಕಾಲುವೆಯಂತೆ ಪರಿವರ್ತನೆಗೊಂಡಿದೆ. ಯುಸೂಫ್‌ನು ಅರಕಿಲ್ಲೆಯನ್ನು ಕಟ್ಟಿದ ವರ್ಷವೇ ತೊರವಿಯಿಂದ ಕಾಲುವೆ ಮೂಲಕ ಅರಕಿಲ್ಲೆಗೆ ನೀರನ್ನು ತಂದನು ಎಂದು 'ಗುಲದಸ್ತಾಯೆ ಬಿಜಾಪುರ' ಕೃತಿಯಿಂದ ತಿಳಿದುಬರುತ್ತದೆ.

ಕಂದಕಗಳ ಮಧ್ಯಭಾಗದಲ್ಲಿ ಹೂದೋಟವನ್ನು ಮಾಡಲಾಗಿದೆ. ಆ ತೋಟದ ಅಗಲ ಅರವತ್ತು ಗಜ ಹಾಗೂ ಉದ್ದ ಕಿಲ್ಲೆಯ ಸುತ್ತಳತೆಯ ಎಂಟು ಮೈಲಿನದಾಗಿತ್ತು. ಕಂದಕದ ಹಾಗೂ ಕಾಲುವೆಗಳ ನೀರು ಬಹಳ ಸ್ವಚ್ಛ ಹಾಗೂ ನಿರ್ಮಲವಾಗಿದ್ದವು ಎಂದು 'ಬಸಾತಿನೆ ಸಲಾತೀನ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಈಗಲೂ ಕೂಡ ಅರಕಿಲ್ಲೆಯಲ್ಲಿರುವ ನರಸಿಂಹ ದೇವಾಲಯದ ಹತ್ತಿರ ಉಳಿದುಕೊಂಡು ಬಂದಿರುವ ಒಳ ಕಂದಕದ ನೀರು ಅಷ್ಟೇ ನಿರ್ಮಲವಾಗಿರುವುದು ಕಂಡುಬರುತ್ತದೆ.

ಮುಖ್ಯದ್ವಾರಗಳು

ಅರಕಿಲ್ಲೆ ನಿರ್ಮಾಣವಾದ ಅವಧಿಯಲ್ಲಿ ಐದು ಬಾಗಿಲುಗಳಿದ್ದವು ಎಂದು ಹೇಳಲಾಗುತ್ತದೆ. ಇಂದು ಎರಡು ದ್ವಾರಗಳು ಮಾತ್ರ ಉಳಿದುಕೊಂಡಿವೆ. ಮುಖ್ಯದ್ವಾರವು ಪೂರ್ವಾಭಿಮುಖವಾಗಿದ್ದು ಅರಕಿಲ್ಲೆಯ ಆಗ್ನೇಯ ಭಾಗದಲ್ಲಿದೆ. ೧೨ ಅಡಿ ಅಗಲವಾಗಿದ್ದು ಕಮಾನಾಕೃತಿಯಲ್ಲಿದೆ. ವರ್ತುಲಾಕಾರದಲ್ಲಿ ಪ್ರವೇಶವನ್ನು ಕಲ್ಪಿಸುತ್ತದೆ. ಅಂದರೆ ಮುಖ್ಯದ್ವಾರಕ್ಕೆ ಎದುರಾಗಿ ವರ್ತುಲವಾಗಿ ತಡೆಗೋಡೆ ನಿರ್ಮಿಸಿ ಎರಡು ಬುರುಜುಗಳ ಮಧ್ಯದಿಂದ ಪ್ರವೇಶವನ್ನು ಕಲ್ಪಿಸಲಾಗಿದೆ. ದ್ವಾರದ ಎಡಭಾಗದಲ್ಲಿ ದಿಡ್ಡಿಬಾಗಿಲಿದ್ದು ೩ ಅಡಿ ಅಗಲ, ೪ ಅಡಿ ೫ ಅಂಗುಲ ಎತ್ತರವಾಗಿದೆ. ಅರಕಿಲ್ಲೆಯ ಬಾಗಿಲ್ವಾಡದ ಮೇಲಿರುವ ಕ್ರಿ.ಶ. ೧೫೪೨–೪೩ರ ಪರ್ಶಿಯನ್ ಶಾಸನವು ಬಖ್ತ್ಯಾರ್‌ಖಾನ್ ಈ ದ್ವಾರವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೨೪] ಈ ಕಾರ್ಯ ಒಂದನೇ ಇಬ್ರಾಹಿಮ್ ದೊರೆಯ ಆಳ್ವಿಕೆಯಲ್ಲಿ ನಡೆಯಿತೆಂದೂ ಇದು ವಿವರಿಸಿದೆ. ಅರಕಿಲ್ಲೆಯ ಹೊರಗಿನ ಪ್ರವೇಶದ್ವಾರದ ಬಳಿಯಿರುವ ಕ್ರಿ.ಶ. ೧೫೪೪–೧೫೪೫ರ ಅರಬ್ಬಿ ಹಾಗೂ ಪರ್ಶಿಯನ್ ಶಾಸನವು ಇಖ್ತ್ಯಾರ್‌ಖಾನ್ ನೇತೃತ್ವದಲ್ಲಿ ಇದರ ನಿರ್ಮಾಣ ಕಾರ್ಯವು ಸಂಪೂರ್ಣಗೊಂಡಿತೆಂದು ವಿವರಿಸುತ್ತದೆ.[೨೫] ಈ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಬಖ್ತ್ಯಾರ್‌ಖಾನ ಮತ್ತು ಇಖ್ತ್ಯಾರ್‌ಖಾನ ಹೆಸರುಗಳು ಒಬ್ಬನೇ ವ್ಯಕ್ತಿಯದಾದಲ್ಲಿ ಈ ದ್ವಾರವನ್ನು ಒಬ್ಬನೇ ವ್ಯಕ್ತಿಯು ಕಟ್ಟಿಸಿದನು ಎಂದು ಹೇಳಬಹುದು.

ದರ್ಬಾರಿನ ದ್ವಾರಬಾಗಿಲದಲ್ಲಿ ಸ್ವಾಗತ ಬಯಸುವಂತೆ ಕಾವಲುಗಾರರು ನಿಂತಿದ್ದರು. ಅಪರಂಜಿ ಮತ್ತು ರತ್ನಖಚಿತ ಕೋಲುಗಳನ್ನು ಶೃಂಗರಿಸಿ ಅನೇಕ ಕುದುರೆ ಸವಾರರು, ಆನೆ ಸವಾರರು ನಿಂತಿದ್ದರು ಎಂದು 'ಇಬ್ರಾಹಿಮ್ ನಾಮಾ'ದಲ್ಲಿ ಉಲ್ಲೇಖಿಸಲಾಗಿದೆ. ಐದು ದ್ವಾರಗಳು ಇಂದು ಹಾಳಾಗಿರುವುದಲ್ಲದೇ ಅಲ್ಲಲ್ಲಿ ವಸತಿಗಳು ನಿರ್ಮಿಸಿಕೊಂಡಿರುವುದರಿಂದ ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟದ ಕೆಲಸವಾಗಿದೆ.

ಬುರುಜುಗಳು

ಅರಕಿಲ್ಲೆಯ ಬುರುಜುಗಳು ವೃತ್ತಾಕಾರ, ಅಷ್ಟಕೋನಾಕೃತಿಗಳಲ್ಲಿದ್ದು ಸುಮಾರು ೮ ರಿಂದ ೫೦ ಅಡಿ ಎತ್ತರದವರೆಗೆ ಇದ್ದು ಇಂದು ದಕ್ಷಿಣಭಾಗದಲ್ಲಿ ಮಾತ್ರ ಪೂರ್ಣಪ್ರಮಾಣದಲ್ಲಿ ಉಳಿದುಕೊಂಡು ಬಂದಿವೆ. ಉತ್ತರಭಾಗದಲ್ಲಿ ಕೋಟೆಯು ಪೂರ್ಣ ನಾಶವಾಗಿರುವುದರಿಂದ ಬುರುಜುವಿನ ಅವಶೇಷಗಳು ಕೂಡ ನಮಗೆ ಸಿಗುವುದಿಲ್ಲ. ಅರ್ಕ್‌ಕಿಲ್ಲೆಯ ದಕ್ಷಿಣಬಾಗಿಲಿನ ಮೇಲಿನ ಕ್ರಿ.ಶ. ೧೫೩೮–೩೯ರ ಅರಬ್ಬಿ ಹಾಗೂ ಪರ್ಶಿಯನ್ ಶಾಸನವು ಒಂದನೆಯ ಇಬ್ರಾಹಿಮ್ ಆದಿಲ್‌ಶಾಹನ ಆಳ್ವಿಕೆಯ ಕಾಲದಲ್ಲಿ ಬುರುಜನ್ನು ನಿರ್ಮಿಸಿದ್ದರ ಕುರಿತು ತಿಳಿಸುತ್ತದೆ.[೨೬]

ಚೀನೀ ಮಹಲಿಗೆ ದಕ್ಷಿಣದಲ್ಲಿರುವ ಕಡಕ್ ಬಿಜಲಿ ಬುರುಜುವಿನಲ್ಲಿರುವ ಕ್ರಿ.ಶ. ೧೫೫೦ರ ಪರ್ಶಿಯನ್ ಶಾಸನವು ಮಾಮ್ಲಾ ಬಿಜಾಪೂರ ಕನ್ನಡಾ(ಕನ್ನಡದ್ದಾದ ಬಿಜಾಪುರ ವಿಭಾಗ) ನಗರಕ್ಕೆ ಕೋಟೆಯನ್ನು ಅಲೀಜಾಃ(ಎಂದರೆ ಇಬ್ರಾಹಿಮ್ ಆದಿಲ್‌ಶಾಹ ದೊರೆ) ರಾಜನ ಅಧಿಕಾರಿ ಖಾನ್–ಇ–ಆಜಂ ಇಖ್ತ್ಯಾರ್‌ಖಾನ್ ಗುಜರಾತಿ ಎಂಬುವವನು ಕಟ್ಟಿಸಿದನೆಂದು ತಿಳಿಸುತ್ತದೆ.[೨೭] ಅರಮನೆ ಮುಂದಿರುವ ಬುರುಜುವಿನಲ್ಲಿ ಗಂಟೆ ಬಾರಿಸುವ ಶಬ್ದ ಕೇಳಿಸುತ್ತದೆ. ಪ್ರತಿಯೊಂದು ಗಂಟೆಗೆ ಈ ಗಂಟೆ ಬಾರಿಸುತ್ತದೆ. ರಾಜ ಪ್ರತಿ ಗಂಟೆ, ಪ್ರತಿ ಮಾಸ ರಾಜ್ಯ ಆಳುತ್ತಾನೆ ಎಂದು ತಿಳಿಸುತ್ತದೆ. ಅರಕಿಲ್ಲೆಯ ಕೋಟೆಗೋಡೆ ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡು ಬಂದಿಲ್ಲ. ಹೀಗಾಗಿ ಇಳಿವೊರೆಯಂತಹ ಉಳಿದ ಲಕ್ಷಣಗಳು ಕಂಡುಬರುವುದಿಲ್ಲ.

ಮುಖ್ಯವಾಗಿ ಅರಮನೆಗಳ ರಕ್ಷಣಾಕೇಂದ್ರವಾದ ಅರ್ಕ್‌ಕಿಲ್ಲೆಯ ಪ್ರದೇಶದಲ್ಲಿ ಕಲ್ಯಾಣ ಚಾಳುಕ್ಯರ ಅವಧಿಯಿಂದ ಕೋಟೆಯನ್ನು ನಿರ್ಮಿಸಲಾಗಿದ್ದು ಅದು ಕಾಲಘಟ್ಟದಲ್ಲಿ ಜೀರ್ಣೋದ್ಧಾರಗೊಳ್ಳುತ್ತಾ ಕೊನೆಗೆ ಎರಡನೇ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ಪೂರ್ಣ ಹಂತವನ್ನು ತಲುಪಿತು. ಇವನ ಆಡಳಿತದಲ್ಲಿ ನಿರ್ಮಿತವಾದ ಅರಕಿಲ್ಲೆಯು ಇದುವರೆಗೂ ಉಳಿದುಕೊಂಡು ಬಂದರೂ ಶಿಥಿಲಾವಸ್ಥೆಯಲ್ಲಿದೆ.

ಹೊರಕೋಟೆ

ವಿಜಾಪುರ ನಗರವನ್ನು ಸುತ್ತುವರಿದಿರುವ ಹೊರಕೋಟೆ ಗೋಡೆಯನ್ನು ಒಂದನೇ ಅಲಿ ಆದಿಲ್‌ಶಾಹನ ಕಾಲದಲ್ಲಿ ಬಲಿಷ್ಠವಾದ ಕಲ್ಲು, ಗಾರೆ, ಗಚ್ಚನ್ನು ಉಪಯೋಗಿಸಿ ನಿರ್ಮಿಸಲಾಗಿದೆ ಎಂಬುದು ವಿವಿಧ ಆಕರಗಳಿಂದ ಸ್ಪಷ್ಟವಾಗುತ್ತದೆ. ಆದರೆ ಇದು ಕೂಡ ಮುಂದಿನ ಆದಿಲ್‌ಶಾಹಿ ಸುಲ್ತಾನರ ಕಾಲಘಟ್ಟದಲ್ಲಿ ಹಂತಹಂತವಾಗಿ ಜೀರ್ಣೋದ್ಧಾರಗೊಳ್ಳುತ್ತಾ ಬಂದಿದೆ. ನಂತರದ ಕಾಲಘಟ್ಟದಲ್ಲಿ ಅದಕ್ಕೆ ಅವಶ್ಯಕವಾದ ಕಟ್ಟಡಗಳ ಸೇರ್ಪಡೆಯಾಗಿರುವುದು ಕಂಡುಬರುತ್ತದೆ. ವಿಜಾಪುರದ ಹೊರಕೋಟೆಯು ಒಂದನೇ ಅಲಿ ಆದಿಲ್‌ಶಾಹನ ಕಾಲದಲ್ಲಿ ನಿರ್ಮಾಣವಾದರೂ ಇದರ ನಿರ್ಮಾಣದ ಕಾಲವನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳನ್ನು ಕಾಣಬಹುದು.

ಕೋಟೆಯ ನಿರ್ಮಾಣವನ್ನು ಕುರಿತಂತೆ ಅಲಿ ಆದಿಲ್‌ಶಾಹನ ಕಾಲಾವಧಿಯ ಐದು ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲಾಪುರ ದ್ವಾರದ ಹತ್ತಿರವಿರುವ ತಬೂತ್ ಬುರುಜಿನಲ್ಲಿರುವ ಪರ್ಶಿಯನ್ ಶಾಸನ ಈ ಕೋಟೆ ಗೋಡೆಯ(ಈ ಭಾಗದ) ನಿರ್ಮಾಣವನ್ನು ಕುರಿತಿದೆ. ಷಾಃ ಅಲೀ ಆದಿಲ್ ಷಾಃ ದೊರೆಯ ಆಳ್ವಿಕೆಯಲ್ಲಿ ಜಗದಿರಾವ(?) ಪುತ್ರ ಜಗತ್‌ರಾವ ಎಂಬುವವನು ಆ.ಹಿ. ೯೬೯ ಮುಹರ್ರಂ ಒಂದು ಅಂದರೆ ಕ್ರಿ.ಶ. ೧೫೬೧ ಸೆಪ್ಟೆಂಬರ್ ೧೧ರಂದು ಈ ನಿರ್ಮಾಣ ಕಾರ್ಯವನ್ನು ಸಂಪೂರ್ಣಗೊಳಿಸಿದನೆಂದು ಹೇಳಿದೆ.[೨೮] ಲಂಡಾಕಸ್ಸಾಬ್ ಬುರುಜಿನ ಹಿತ್ತಿಲ ಬಾಗಿಲಲ್ಲಿ ದೊರೆತಿರುವ ಪರ್ಶಿಯನ್ ಶಾಸನ ಷುಹೂರ್ ವರ್ಷ ೯೬೬(ಮತ್ತು ಆ.ಹಿ. ೯೭೬) ಎಂದರೆ ಕ್ರಿ.ಶ. ೧೫೬೮-೬೯ಎಂಬ ತೇದಿಗಳನ್ನು ಹೊಂದಿದ್ದು ಹಿತ್ತಿಲ ಬಾಗಿಲನ್ನು ಅಲೀ ಆದಿಲ್‌ಶಾಹಿ ರಾಜನ ಆಳ್ವಿಕೆಯಲ್ಲಿ ಪಂಡಿತ ನಂದಜಿ ಮಾಡಿಸಿದನೆಂದು ದಾಖಲಿಸಿದೆ.[೨೯] ಶಹಾಪುರ ದ್ವಾರದ ಒಳಬಾಗಿಲಿನಲ್ಲಿರುವ ಪರ್ಶಿಯನ್ ಶಾಸನವು ಇದು ಆ.ಹಿ. ೯೭೮ ಎಂದರೆ ಕ್ರಿ.ಶ. ೧೫೭೦-೭೧ ಎಂಬ ತೇದಿಯನ್ನು ಹೊಂದಿದ್ದು ಬಾಗಿಲನ್ನು ಕಟ್ಟುವುದರಲ್ಲಿ ಖಾನ್-ಇ-ಆಜಂ ಮುರಾದ್ ಖಾನ್ ಅಮೀರ್ ಜುಮ್ಲಾ ಇವನು ಅಲೀ ಆದಿಲ್‌ಶಾಹ ದೊರೆಯ ಆಳ್ವಿಕೆಯ ಕಾಲದಲ್ಲಿ ವಿಶೇಷ ಪ್ರಯತ್ನ ಪಟ್ಟು ಸಂಪೂರ್ಣಗೈದನೆಂದು ವಿವರಿಸಿದೆ.[೩೦] ಫತೇ ದ್ವಾರದ ಮೇಲಿರುವ ಫಿರಂಗಿ ಬುರುಜುವಿನಲ್ಲಿರುವ ಪರ್ಶಿಯನ್ ಭಾಷೆಯ ಶಾಸನ ಆ.ಹಿ. ೯೮೪ ಎಂದರೆ ಕ್ರಿ.ಶ. ೧೫೭೬-೭೭ ಎಂಬ ತೇದಿಯನ್ನು ಹೊಂದಿದ್ದು ಅಲೀ ಆದಿಲ್‌ಶಾಹನ ದೊರೆಯ ಗುಲಾಮನಾಗಿರುವ ಯಫ್ರಷ್‌ಖಾನನು ಈ ಬುರುಜನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೩೧] ಮಕ್ಕಾಗೇಟ್‌ನ ದಕ್ಷಿಣದ ಬುರುಜುವಿನಲ್ಲಿ ದೊರೆತ ಪರ್ಶಿಯನ್ ಶಾಸನ ಇದು ಫಿರಂಗಿ ಷಾಹಿ ಬುರುಜಿನ ನಿರ್ಮಾಣವನ್ನು ಕುರಿತಿದೆ. ಈ ಕಾರ್ಯ ಆ.ಹಿ. ೯೮೫ ಎಂದರೆ ಕ್ರಿ.ಶ. ೧೫೭೭-೭೮ರಲ್ಲಿ ಯಫ್ರಷ್‌ಖಾನ್‌ನಿಂದ ಆಯಿತೆಂದು ಅವನು ಆದಿಲ್‌ಶಾಹ ದೊರೆಯ ಸೇವಕನೆಂದೂ ಇದರಲ್ಲಿ ವಿವರಿಸಿದೆ. ಈ ಶಾಸನವನ್ನು ಖಾಜಿ ಇಸ್ಮಾಯಿಲ್ ರಚಿಸಿದ್ದಾನೆ.[೩೨] ಈ ಎಲ್ಲ ಶಾಸನಗಳನ್ನು ಗಮನಿಸಿದಾಗ ನಮಗೆ ಕೋಟೆಯ ನಿರ್ಮಾಣದ ಕಾರ್ಯವು ಕ್ರಿ.ಶ. ೧೫೬೧ರಲ್ಲಿಯೇ ಪ್ರಾರಂಭವಾದಂತೆ ತೋರುತ್ತದೆ. ಅಲ್ಲದೆ ಈ ಕಾರ್ಯ ಸುಮಾರು ೧೬-೧೭ ವರ್ಷಗಳವರೆಗೆ ಮುಂದುವರಿದದ್ದು ಪ್ರತಿಯೊಂದು ಭಾಗಗಳನ್ನು ಬೇರೆ ಬೇರೆಯವರು ನಿರ್ಮಿಸಿದಂತೆ ಇದರಿಂದ ತಿಳಿದುಬರುತ್ತದೆ. ಅಲ್ಲದೆ ತಾಳಿಕೋಟೆ ಯುದ್ಧಕ್ಕಿಂತ ಪೂರ್ವದಲ್ಲಿ ಪ್ರಾರಂಭವಾದರೂ ಯುದ್ಧಾನಂತರ ಹತ್ತು ವರ್ಷಗಳ ಕಾಲ ಇದರ ಕಟ್ಟಡವು ಮುಂದುವರಿದಂತೆ ತೋರುತ್ತದೆ.

ಕೋಟೆಯ ನಿರ್ಮಾಣದ ಕಾಲವನ್ನು ಕುರಿತಂತೆ 'ಬಸಾತಿನೆ ಸಲಾತೀನ' ಗ್ರಂಥವು ತಿಳಿಸುವಂತೆ ಆದಿಲ್‌ಶಾಹಿ ಸಾಮ್ರಾಜ್ಯ ಸಂಪತ್ತು ಮತ್ತು ಕೀರ್ತಿ ಮತ್ತಷ್ಟು ಹೆಚ್ಚತೊಡಗಿತು. ವಿಶ್ವದ ನಾನಾ ಭಾಗಗಳಿಂದ ಜನರು ಬಂದು ಬಾದಶಹನ ಆಸ್ಥಾನದಲ್ಲಿ ಸೇರಿದರು. ಯಾವ ಸಮಯದಲ್ಲಿ ಏನಾಗುತ್ತದೆ ಎಂಬ ಕಾಲಚಕ್ರದ ಭಯದಿಂದ ವಿಜಾಪುರದ ಆಶ್ರಯದಲ್ಲಿ ಬಂದು ಸ್ವಸ್ಥವಾಗಿ

ಸುಖದಿಂದ ಸಂಸಾರ ಮಾಡುತ್ತಿದ್ದರು. ಆದರೆ ಶತ್ರುವಿನ ಭಯದ ದಕ್ಕೆ ನಿರಂತರವಾಗಿತ್ತು. ಯಾಕೆಂದರೆ ಉಳಿದ ಶಾಹಿ ಸುಲ್ತಾನರು ಕೂಡ ತಾಳಿಕೋಟೆ ಯುದ್ಧದ ನಂತರ ಪ್ರಬಲರಾಗಿದ್ದರು. ಇಷ್ಟೇ ಅಲ್ಲದೇ ಪೂರ್ವದಲ್ಲಿ ಆದಿಲ್‌ಶಾಹಿಗಳ ರಾಜ್ಯದ ಮೇಲೆ ಅಹಮದ್‌ನಗರದ ನಿಜಾಂಶಾಹಿಗಳು, ಬೀದರ ಬರೀದಶಾಹಿಗಳು ಪದೇ ಪದೇ ದಾಳಿ ಮಾಡಿದ್ದರು. ಈ ವೈರತ್ವವು ಮತ್ತೊಮ್ಮೆ ಮರುಕಳಿಸದಂತೆ ನಗರದ ಸುತ್ತಲೂ ಸುಣ್ಣ ಗಚ್ಚು ಮತ್ತು ದೊಡ್ಡ ಕಲ್ಲುಗಳನ್ನು ಉಪಯೋಗಿಸಿ ಕೋಟೆಯನ್ನು ಕಟ್ಟಿಸಿದನು. ಎರಡುವರೆ ವರ್ಷಗಳಲ್ಲಿ ಕೋಟೆಯನ್ನು ಕಟ್ಟಿ ಸಿದ್ಧಪಡಿಸಲಾಯಿತು. ಈ ಕೋಟೆಯನ್ನು ಕಟ್ಟುವ ಕೆಲಸವು ಹಿಜರಿಸನ್ ೯೭೩(ಕ್ರಿ.ಶ. ೧೫೬೫-೬೬)ರಲ್ಲಿ ಪೂರ್ತಿಯಾಯಿತು ಎಂದು ಉಲ್ಲೇಖಿಸುತ್ತದೆ.೩೩ ಆದರೆ ಶಾಸನಗಳು ಕ್ರಿ.ಶ. ೧೫೬೫-೬೬ರಿಂದಲೂ ಈ ಕಟ್ಟಡದ ಕೆಲಸವು ಮುಂದುವರಿದಿರುವುದನ್ನು ಹೇಳಿದೆ.

'ಗುಲದಸ್ತಾಯೆ ಬಿಜಾಪುರ' ಗ್ರಂಥವು ತಿಳಿಸುವಂತೆ ಹಿರಿಯ ಅಲಿ ಆದಿಲ್‌ಶಾಹನ ರಾಜ್ಯವು ಬಹಳ ವಿಸ್ತಾರವಾಗಿತ್ತು ಮತ್ತು ಸೈನ್ಯವು ದೊಡ್ಡದಾಗಿತ್ತು. ಅದರಿಂದ ಅವನು ನಗರದ ಸುತ್ತ ಮುತ್ತ ಗಚ್ಚು ಮತ್ತು ಕಲ್ಲುಗಳಿಂದ ಗಟ್ಟಿಯಾದ ಕೋಟೆ ಗೋಡೆಯನ್ನು ಕಟ್ಟಿಸಲು ಇಚ್ಛಿಸಿದನು ಮತ್ತು ಅದರ ಅಡಿಗಲ್ಲನ್ನಿಟ್ಟು ಅದನ್ನು ಕ್ರಿ.ಶ. ೧೫೫೮(ಹಿಜರಿಶಕ ೯೬೬)ರಲ್ಲಿ ಪ್ರಸಿದ್ಧ ನಗರಕ್ಕೆ ಕೋಟೆಗೋಡೆಯನ್ನು ಕಟ್ಟಿಸಲು ಪ್ರಾರಂಭಿಸಿ ಹಿಜರಿಶಕ ೯೭೩(ಕ್ರಿ.ಶ.೧೫೬೫)ರಲ್ಲಿ ವಿಜಾಪುರ ಕೋಟೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿದನು ಎಂದು ಉಲ್ಲೇಖಿಸಲಾಗಿದೆ.[೩೪]

ಈ ಮೇಲಿನ ಸಾಹಿತ್ಯಕ ಆಕರಗಳನ್ನು ಗಮನಿಸಿದಾಗ ಕ್ರಿ.ಶ. ೧೫೬೫ ಮತ್ತು ೧೫೬೬ರಲ್ಲಿ ಕೋಟೆಯನ್ನು ಪೂರ್ಣಗೊಳಿಸಿದ್ದರ ಬಗ್ಗೆ ಸ್ಪಷ್ಟಪಡಿಸುತ್ತವೆ. ಅಲ್ಲದೆ ಕೋಟೆಯ ನಿರ್ಮಾಣದ ಕಾರ್ಯ ಆರಂಭವಾಗಿ ೨೧/೨ ವರ್ಷಗಳ ನಂತರ ಪೂರ್ಣಗೊಂಡಿತು ಎಂದು ತಿಳಿಸುತ್ತವೆ. ಜೊತೆಗೆ ಅಲ್ಲಾಪುರ ದ್ವಾರದ ಬಳಿಯಲ್ಲಿರುವ ತಬೂತ್ ಬುರುಜುವಿನಲ್ಲಿ ಇರುವ ಶಾಸನವು ಕೋಟೆಯ ನಿರ್ಮಾಣದ ಕುರಿತು ಕ್ರಿ.ಶ. ೧೫೬೧ರ ಕಾಲಾವಧಿಯನ್ನು ನೀಡುತ್ತದೆ. ಹೀಗಾಗಿ ಕೋಟೆಯ ನಿರ್ಮಾಣಕಾರ್ಯವು ಕ್ರಿ.ಶ. ೧೫೬೦ರ ನಂತರವೇ ಪ್ರಾರಂಭವಾಗಿ ಅದು ಕ್ರಿ.ಶ. ೧೫೬೫-೬೬ರಲ್ಲಿ ಪೂರ್ಣಗೊಂಡಿತು. ಆದರೂ ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ಶಾಹಿಸುಲ್ತಾನರು ವಿಜಯನಗರದ ಮೇಲೆ ವಿಜಯ ಸಾಧಿಸಿ ಬಂದ ಮೇಲೆಯೂ ಸುಲ್ತಾನನು ಕೋಟೆಯ ಕೆಲವು ಭಾಗಗಳನ್ನು ಮತ್ತೆ ಸೇರ್ಪಡೆಗೊಳಿಸಲಾಗಿದೆ. ಇದನ್ನು ಕ್ರಿ.ಶ. ೧೫೬೮-೬೯, ಕ್ರಿ.ಶ. ೧೫೭೦-೭೧, ಕ್ರಿ.ಶ. ೧೫೭೬-೭೭, ಕ್ರಿ.ಶ. ೧೫೭೭-೭೮ರ ಶಾಸನಗಳು ಸ್ಪಷ್ಟಪಡಿಸುತ್ತವೆ. ಬಹುತೇಕ ವಿದ್ವಾಂಸರು ಅಲಿ ಆದಿಲ್‌ಶಾಹ ಮತ್ತು ಶಾಹಿ ಸುಲ್ತಾನರು ಕ್ರಿ.ಶ. ೧೫೬೫ರ ಜನವರಿ ತಿಂಗಳಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ವಿರುದ್ಧ ಜಯ ಸಾಧಿಸಿ ಬಂದ ಮೇಲೆ ವಿಜಾಪುರದ ಹೊರಗಿನ ಕೋಟೆಯನ್ನು ನಿರ್ಮಿಸಿದ ಎಂದು ಅದೇ ರೀತಿ ಕ್ಯಾಂಪ್‌ಬೆಲ್ ರಚಿಸಿದ ಗ್ಯಾಸೆಟಿಯರ್‌ನಲ್ಲಿಯೂ ಉಲ್ಲೇಖಿಸಲಾಗಿದೆ. ಅಲ್ಲದೆ ವಿಜಯನಗರದಿಂದ ಕೊಳ್ಳೆ ಹೊಡೆದು ತಂದ

ಸಂಪತ್ತಿನಿಂದ ಕೋಟೆಯನ್ನು ನಿರ್ಮಿಸಲಾಯಿತು. ಈ ವಾದವನ್ನು ಬಹುತೇಕ ವಿದ್ವಾಂಸರು ಬೆಂಬಲಿಸುತ್ತಾರೆ. ಹೆನ್ರಿ ಕಝಿನ್ಸ್ ಅವರು ವಿಜಯನಗರದ ಮೇಲೆ ವಿಜಯ ಸಾಧಿಸಿದ ನಂತರ ಅಲ್ಲಿ ಕೊಳ್ಳೆ ಹೊಡೆದು ಬಂದ ಸಂಪತ್ತಿನಿಂದ ಕೋಟೆಯನ್ನು ಕಟ್ಟಿಸಲಾಯಿತು ಎಂದು ಹೇಳುತ್ತಾರೆ.[೩೫] ಈ ವಾದವನ್ನು ಒಪ್ಪುವುದು ಕಷ್ಟ. ಕಾರಣ ಕೋಟೆಯಲ್ಲಿ ಅವಶ್ಯಕತೆಗಳಿಗೆ ಅನುಗುಣವಾಗಿ ಅನೇಕ ಸೇರ್ಪಡೆಗಳನ್ನು ಮಾಡಿರುವುದು ಅಲ್ಲಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಒಟ್ಟಾರೆಯಾಗಿ ಶಾಸನಗಳು ಮತ್ತು ಸಾಹಿತ್ಯಕ ಆಕರಗಳನ್ನು ಇಟ್ಟುಕೊಂಡು ನೋಡಿದಾಗ ಅಲಿ ಆದಿಲ್‌ಶಾಹನು ಕ್ರಿ.ಶ. ೧೫೬೫ರಕ್ಕಿಂತಲೂ ಮೊದಲೇ ಕೋಟೆಯನ್ನು ಕಟ್ಟಿಸಲು ಪ್ರಾರಂಭಿಸಿ ಅದನ್ನು ಕ್ರಿ.ಶ. ೧೫೬೫-೬೬ರಲ್ಲಿ ಪೂರ್ಣಗೊಳಿಸಿದನು. ಹೆನ್ರಿ ಕಝಿನ್ಸ್ ಮತ್ತು ಎಂ.ಎ. ನಯೀಮ್ ಕೂಡ ಇದೇ ಅವಧಿಯಲ್ಲಿ ಕೋಟೆಯ ನಿರ್ಮಾಣಕಾರ್ಯ ಪೂರ್ಣಗೊಂಡಿತು ಎಂದು ಹೇಳುತ್ತಾರೆ.[೩೬] ಕ್ರಿ.ಶ. ೧೫೬೫ರ ತಾಳಿಕೋಟೆ ಕದನದಲ್ಲಿ ವಿಜಯ ಸಾಧಿಸಿ ಬಂದ ನಂತರ ಕೋಟೆ ಕಟ್ಟಲು ಪ್ರಾರಂಭಿಸಿದರೆ ಅದು ಕ್ರಿ.ಶ. ೧೬೬೮ರಲ್ಲಿ ಪೂರ್ಣಗೋಳ್ಳುತ್ತದೆ. ಅಂದರೆ ಕ್ರಿ.ಶ. ೧೫೬೫ ಜನವರಿಯಲ್ಲಿ ನಡೆದ ತಾಳಿಕೋಟೆ ಯುದ್ಧದ ನಂತರ ಶಾಹಿಸುಲ್ತಾನರ ಸೈನ್ಯ ಆರು ತಿಂಗಳಗಳ ಕಾಲ ವಿಜಯನಗರದಲ್ಲಿತ್ತು ಎಂದು 'ಬಸಾತಿನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಅಲ್ಲಿಂದ ತಿರುಗಿಬಂದ ಮೇಲೆ ಕೋಟೆ ಕಟ್ಟಲು ಪ್ರಾರಂಭಿಸಿದರೆ ಅದು ಎರಡುವರೆ ವರುಷಗಳ ನಂತರ ಅಂದರೆ ಕ್ರಿ.ಶ. ೧೬೬೯ ಪೂರ್ವಾವಧಿಯಲ್ಲಿ ಪೂರ್ಣಗೊಳ್ಳುತ್ತದೆ. ಆದರೆ ವಿಜಯನಗರದ ಮೇಲಿನ ವಿಜಯದ ನಂತರ ಕ್ರಿ.ಶ. ೧೫೬೭(ಹಿ.ಶ. ೯೭೫)ರಲ್ಲಿ[೩೭] ಅಹಮದ್‌ನಗರದ ನಿಜಾಮ್‌ಶಾಹ, ಗೋಲ್ಕಂಡದ ಕುತುಬ್‌ಶಾಹ, ಮದಾರುಲ್ ಮಹಾಮ, ಇಮಾದುಲ್ಮುಲ್ಕ ಬಾದಶಾಹನ ಮಗ ತಫಾವಲಖಾನ್ ಹೀಗೆ ಮೂವರು ವಿಜಾಪುರದ ಮೇಲೆ ದಾಳಿ ಮಾಡಿದಾಗ ಕೋಟೆಯನ್ನು ಅವರಿಂದ ವಶಪಡಿಸಿಕೊಳ್ಳಲಾಗದೇ ಸೋತು ಹಿಂದಿರುಗುತ್ತಾರೆ.[೩೮] ಈ ಎಲ್ಲ ಅಂಶಗಳನ್ನು ಹಾಗೂ ಕ್ರಿ.ಶ. ೧೫೬೧ರ ಶಾಸನವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಕ್ರಿ.ಶ. ೧೫೬೦ರಲ್ಲಿ ಕೋಟೆಯ ನಿರ್ಮಾಣಕಾರ್ಯ ಪ್ರಾರಂಭವಾಗಿ ಅದು ಕ್ರಿ.ಶ. ೧೫೬೫-೬೬ರ ವೇಳೆಗೆ ಪೂರ್ಣಗೊಂಡಿತು ಎಂದು ಸ್ಪಷ್ಟಪಡಿಸಬಹುದು. ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ವಿರುದ್ಧ ಜಯಸಿಬಂದ ನಂತರ ಕೋಟೆಯನ್ನು ಅಲಿ ಆದಿಲ್‌ಶಾಹನು ಮತ್ತಷ್ಟು ಭದ್ರಪಡಿಸಲು ಪ್ರಾರಂಭಿಸಿದ. ಅದನ್ನು ನಂತರದಲ್ಲಿ ದೊರೆತ ಶಾಸನಗಳಿಂದ ಸ್ಪಷ್ಟಪಡಿಸಬಹುದು. ಅಲಿ ಆದಿಲ್‌ಶಾಹನು ಕ್ರಿ.ಶ. ೧೫೮೦ರಲ್ಲಿ ಮರಣ ಹೊಂದಿದ ನಂತರವು ಮುಂದಿನ ಸುಲ್ತಾನರು ಕೋಟೆಯ ಕೆಲವು ಭಾಗಗಳನ್ನು ಹೊಸದಾಗಿ ನಿರ್ಮಿಸಿದರಲ್ಲದೆ ಜೀರ್ಣೋದ್ಧಾರ ಗೊಳಿಸಿರುವುದನ್ನು ಶಾಸನ ಮತ್ತು ಸಾಹಿತ್ಯಕ ಅಕರಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೬೪೧ರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ಷರಾಫ ಬುರುಜಿನ ನಿರ್ಮಾಣಕಾರ್ಯವು ಎರಡನೇ ಇಬ್ರಾಹಿಮ್ ಆದಿಲ್‌ಶಾಹನ ಅವಧಿಯಲ್ಲಿ ಪ್ರಾರಂಭವಾಗಿ ಮಹಮ್ಮದ್

ಆದಿಲ್‌ಶಾಹನ ಅವಧಿಯಲ್ಲಿ ಮುಕ್ತಾಯವಾಯಿತೆಂದು ಹೇಳಲಾಗಿದೆ.[೩೯] ಶಹಾಪುರ ದ್ವಾರದಲ್ಲಿರುವ ಕ್ರಿ.ಶ. ೧೬೪೩–೪೪ರ ಶಾಸನವು ಇಲ್ಲಿಯ ಬುರುಜನ್ನು ನಿರ್ಮಾಣ ಮಾಡಿದ ವಿಷಯವನ್ನು ತಿಳಿಸುತ್ತದೆ.[೪೦] ಕ್ರಿ.ಶ. ೧೬೪೩–೪೪ರ ಶೆರ್ಜಾ ಬುರುಜುವಿನಲ್ಲಿರುವ ಶಾಸನವು ಇಲ್ಲಿಯ ಮಹಮ್ಮದ್ ಬುರುಜನ್ನು ಅಫ್ಜಲ್‌ಖಾನನು ಕಟ್ಟಿಸಿದನೆಂದು ಉಲ್ಲೇಖಿಸಿದೆ.[೪೧] ಕ್ರಿ.ಶ. ೧೬೪೩–೪೪ರ ಶಾಸನವು ಲಂಡಾಕಸ್ಸಾಬ್ ಬುರುಜುವಿನ ಪಶ್ಚಿಮಕ್ಕಿರುವ ನಾಲ್ಕನೇ ಬುರುಜುವಿನಲ್ಲಿದೆ. ಇದು ಬುರ್ಜೆ–ಇ–ನಿಯಾಮತ್ ಎಂಬ ಬುರುಜನ್ನು ಕಟ್ಟಿದ ವಿಷಯವನ್ನು ದಾಖಲಿಸಿದೆ.[೪೨] ಕ್ರಿ.ಶ. ೧೬೫೫ರ ಮಕ್ಕಾ ದ್ವಾರದ ದಕ್ಷಿಣದಲ್ಲಿರುವ ಎರಡನೆಯ ಬುರುಜುವಿನಲ್ಲಿರುವ ಶಾಸನ ಬಹುಶ ಕೋಟೆ ಗೋಡೆಗಳನ್ನು ದುರಸ್ತಿಗೊಳಿಸಿದುದರ ಬಗ್ಗೆ ಉಲ್ಲೇಖಿಸುತ್ತದೆ.[೪೩] ಕ್ರಿ.ಶ. ೧೬೫೮ರ ಷಾರ್ಜಾ ಬುರುಜುನಿನಲ್ಲಿರುವ ಶಾಸನವು ಈ ಬುರ್ಜನ್ನು ಕಟ್ಟಿಸಿದರ ಬಗ್ಗೆ ಉಲ್ಲೇಖಿಸುತ್ತದೆ.[೪೪] ಕ್ರಿ.ಶ. ೧೬೬೧ರ ಹಿಲಾಲಿಬಾಗ್ ಬುರುಜುವಿನಲ್ಲಿರುವ ಶಾಸನ ಕೋಟೆಯ ಗೋಡೆಗಳನ್ನು ಆಳುವೇರಿಗಳನ್ನು ಕಟ್ಟಿಸಿದ್ದು ಉಲ್ಲೇಖಿಸುತ್ತದೆ.[೪೫] ಕ್ರಿ.ಶ. ೧೬೬೬–೬೭ರ ಲಂಡಾಕಸ್ಸಾಬ್ ಬುರುಜಿನ ಮೇಲೆ ಇರುವ ಶಾಸನವು ಈ ಬುರುಜುವಿನ ನಿರ್ಮಾಣದ ಕುರಿತು ತಿಳಿಸುತ್ತದೆ.[೪೬] ಕಾಲದ ಉಲ್ಲೇಖವಿಲ್ಲದ ಎರಡು ಶಾಸನಗಳು ಒಂದು ಶಹಾಪುರ ಗೇಟಿಗೆ ಉತ್ತರದ ಅಹಮ್ಮದ್ ಬುರುಜನ್ನು ನಿರ್ಮಾಣ ಮಾಡಿದ್ದನ್ನು ಹೇಳಿದರೆ,[೪೭] ಇನ್ನೊಂದು ಶಾಸನ ಫತೇ ದರವಾಜದಲ್ಲಿ ಹುಲ್ಮುಕ್(ಹುಲಿಮುಖ) ಕಟ್ಟಿಸಿದನೆಂದು[೪೮] ತಿಳಿಸುತ್ತದೆ. ಈ ಎಲ್ಲ ಶಾಸನಗಳನ್ನು ಗಮನಿಸಿದಾಗ ಕೋಟೆಯ ಜೀರ್ಣೋದ್ಧಾರವು ಕ್ರಿ.ಶ. ೧೬೬೭ರವರೆಗೂ ಮುಂದುವರಿದಿರುವುದನ್ನು ಗುರುತಿಸಬಹುದು. ಅಲ್ಲದೆ ಕೆಲವು ಸಾಹಿತ್ಯಕ ಆಕರಗಳಲ್ಲಿಯೂ ಕೋಟೆಯ ಜೀರ್ಣೋದ್ಧಾರ ಕುರಿತು ಉಲ್ಲೇಖಿಸಲಾಗಿದೆ. ಈ ವಿಷಯವನ್ನು ಮುಂದೆ ಸಂದರ್ಭೋಚಿತವಾಗಿ ಪ್ರಸ್ತಾಪಿಸಲಾಗಿದೆ.

ಕೋಟೆಯ ನಿರ್ಮಾಣವನ್ನು ಕುರಿತು ಕೆಲವು ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿದೆ. ಇಬ್ರಾಹಿಮ್ ನಾಮಾದಲ್ಲಿ ಉಲ್ಲೇಖಿಸಿರುವಂತೆ ಕಲ್ಲಿನ ಕೋಟೆಯ ವ್ಯಾಸ ಆರೂ ಕಾಲು ಮೈಲಿಗಳಿವೆ. ಅದರಲ್ಲಿ ೨೬ ಬುರುಜು, ಐದು ಭವ್ಯವಾದ ದ್ವಾರಗಳಿದ್ದವು. ನಗರ ಸುತ್ತಿದ ಗೋಡೆ(ಕೋಟೆಯ)ಯ ಮೇಲೆ, ಅಗಲವಾದ ಕಟ್ಟೆಗಳ ಮೇಲೆ ತೋಪುಗಳು ಇಡಲಾಗುತ್ತಿದ್ದವು. ಕೋಟೆಯ ಸುತ್ತಮುತ್ತ ಆಳ ಹಾಗೂ ಅಗಲವಾದ ಕಂದಕವಿತ್ತು. ಪಟ್ಟಣದ ಕೇಂದ್ರ ಅದರ ಕೋಟೆ ಮತ್ತು ಅರಮನೆಗಳಾಗಿದ್ದವು. ಅವು 'ಅರಕ್‌ಖಿಲ' ಹೆಸರಿನಿಂದ ಪ್ರಖ್ಯಾತವಾಗಿವೆ.[೪೯] ಪ್ರತಿಯೊಂದು ದಾರಿ ಬದಿ ಬಜಾರುಗಳು ಎಲ್ಲ ಜಾಗಗಳಲ್ಲಿವೆ. ಎಲ್ಲ ರೀತಿಯ ಜನ ಎಲ್ಲ ಜಾಗಗಳಲ್ಲಿ ಸುತ್ತಾಡುವರು. ಮಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ವಿಜಾಪುರದ ಒಳ ಹೊರಗೆ ಜನವಸತಿ ಬೆಳೆದಿತ್ತು. ಒಂದು ಗಜ ಭೂಮಿ ಒಂದು ತೊಲೆ ಚಿನ್ನಕ್ಕೆ ಬಹಳ ಕಷ್ಟದಿಂದ ದೊರೆಯುತಿತ್ತು ಎಂದು ತಿಳಿದುಬರುತ್ತದೆ.[೫೦]

ಇದೇ ರೀತಿ ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ನಿರ್ಮಾಣವಾದ ತಝ್ಕಿರತುಲ್ ಮುಲೂಕ್‌ದಲ್ಲಿ ಕೋಟೆಯ ಆವರಣದ ಗೋಡೆಯ ಎತ್ತರವನ್ನು ೨೦ ಝರಾ(ಗಜ)

ಹಾಗೂ ೩೦ ಫರಸಖ್ ಉದ್ದ, ೧೫ ಫರಸಖ್ ವ್ಯಾಜ್ಯದಲ್ಲಿ ವ್ಯಾಪಿಸಿತ್ತು. ಎರಡು ವರ್ಷಗಳ ಕಾಲ ಆವರಣ ಕಟ್ಟುವ ಕೆಲಸ ನಡೆದು ಸಂಪೂರ್ಣಗೊಂಡಿತು. ೧೨೦ ಬುರುಜುಗಳು, ೭೦ ಕಿಂಡಿಗಳು, ೬೦೦೦ ಕಮಾನುಗಳು, ಆರು ಹೆಬ್ಬಾಗಿಲುಗಳು, ನಗರದ ಮುಖ್ಯದ್ವಾರವನ್ನು ಪವಿತ್ರ ಮಕ್ಕಾದ ಕಾಬಾ ಇರುವ ದಿಕ್ಕಿಗೆ ಸರಿಯಾಗಿ ಸ್ಥಾಪಿಸಲಾಯಿತು. ಆವರಣದ ನಾಲ್ಕೂ ದಿಕ್ಕಿನಲ್ಲಿ ಆಳವಾದ ಮತ್ತು ಅಗಲವಾದ ದೊಡ್ಡ ಕಂದಕವನ್ನು ತೋಡಿ ಕೋಟೆಯನ್ನು ಸಿದ್ಧಪಡಿಸಲಾಯಿತು ಎಂದು ತಿಳಿಸುತ್ತದೆ.[೫೧]

'ಬಸಾತಿನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸುವಂತೆ ಕೋಟೆಯ ನಿರ್ಮಾಣದ ಕಾರ್ಯದ ಉಸ್ತುವಾರಿಯನ್ನು ಕಿಶ್ವರಖಾನ್‌ನಿಗೆ ವಹಿಸಲಾಯಿತು. ಇವನು ಎಲ್ಲ ಗ್ರಾಮಗಳ ಗೌಂಡಿಗಳನ್ನು, ಚತುರ ಕಲ್ಲುಕುಟಿಗರನ್ನು ಕರೆಯಿಸಿದನು. ಅವರ ಮೇಲೆ ಕೆಲಸಗಾರರ ಗುಮಾಸ್ತನೊಬ್ಬನನ್ನು ನಿಯಮಿಸಿದನು. ಕೋಟೆಯ ಒಂದೊಂದು ಭಾಗಕ್ಕೆ ಒಬ್ಬೊಬ್ಬ ಸರದಾರರನ್ನು ಅಮೀರ ಜನರಲ್ಲಿ ಆರಿಸಿ ನಿಯಮಿಸಿದನು. ಈ ಕೆಲಸವನ್ನು ಕಿಶ್ವರಖಾನನು ತುಂಬ ಪ್ರಯತ್ನ ಮಾಡಿ, ಬಹಳ ಶ್ರಮ ವಹಿಸಿ ಎರಡೂವರೆ ವರುಷಗಳಲ್ಲಿ ಕೋಟೆಯನ್ನು ಕಟ್ಟಿಸಿ ಸಿದ್ಧಪಡಿಸಿದನು. ಕೋಟೆಯ ಸುತ್ತಳತೆ 'ಆರುಫರಸಖ್' ಆಯಿತು. ಫರಸಖ ಈ ಶಬ್ದದ ಅರ್ಥವು 'ಕುತುಬುಲ್ಲಾಗಾತ', 'ಕಂಜುಲ್‌ಲುಗಾತ್', 'ಮುಂತಖಬುಲ್ ಲುಗಾತ್', 'ಬುರಾಹನೆ ಖತ್' ಮತ್ತು 'ಜಹಾಂಗೀರಿ' ಎಂಬೆಲ್ಲ ನಿಘಂಟ್ಟುಗಳಲ್ಲಿ ನೋಡಲಾಗಿ ಒಂದು 'ಫರಸಖವು' ಮೂರು ಮೈಲುಗಳೆಂದು ಮತ್ತು ಒಂದು ಮೈಲು ವೇಗದಲ್ಲಿ ನಡೆಯುವ ಒಂಟೆಯ ನಾಲ್ಕು ಸಾವಿರ ಎರಡುನೂರದ ಇಪ್ಪತ್ತು ಹೆಜ್ಜೆಗಳು ಎಂದು ಹೇಳಲಾಗಿದೆ. ಒಂಟೆಯ ಒಂದು ಹೆಜ್ಜೆ ಒಂದು ಗಜಕ್ಕೂ ಮತ್ತು ಒಂದು ಗಜಕ್ಕೆ ೨೪ ಬೆರಳುಗಳು ಸಮನಾಗಿವೆ. ಆದರೆ ತಳದಿಂದ ಹಿಡಿದು, ಎಲ್ಲಿಂದ ಬೆರಳುಗಳು ಪ್ರಾರಂಭವಾಗುತ್ತವೆಯೋ ಅಲ್ಲಿಂದಲೇ ೨೪ ಬೆರಳುಗಳ ಅಗಲದ ಸ್ಥಳವಾಗುತ್ತದೆ ಮತ್ತು ನಾಲ್ಕು ಬೆರಳುಗಳ ಒಂದು ಮುಷ್ಟಿ ಮತ್ತು ಆರು ಮುಷ್ಟಿಗಳ ಒಂದು ಕೈ ಎಂದೆಲ್ಲಾ ಈ ಗ್ರಂಥದಲ್ಲಿ ವರ್ಣಿಸಲಾಗಿದೆ.[೫೨]

ಹಿರಿಯ ಅಲಿ ಆದಿಲ್‌ಶಾಹನ ರಾಜ್ಯವು ಬಹಳ ವಿಸ್ತಾರವಾಗಿತ್ತು ಮತ್ತು ಸೈನ್ಯವು ದೊಡ್ಡದಾಗಿತ್ತು ಅದರಿಂದಾಗಿ ಅವನು ನಗರದ ಸುತ್ತಮುತ್ತ ಗಚ್ಚು ಮತ್ತು ಕಲ್ಲುಗಳಿಂದ ಗಟ್ಟಿಯಾದ ಕೋಟೆ ಗೋಡೆಯನ್ನು ಕಟ್ಟಿಸಲು ಇಚ್ಛಿಸಿದನು ಮತ್ತು ಅದರ ಅಡಿಗಲ್ಲನ್ನಿಟ್ಟು ಈ ಕೆಲಸವನ್ನು ಕಿಶ್ವರಖಾನ್‌ನಿಗೆ ವಹಿಸಿದನು(ಖ್ವಾಜಾ ಕಮಾಲ್‌ಖಾನ್ ಮೊದಲು ಒಂದನೆಯ ಇಬ್ರಾಹಿಮ್ ಆದಿಲ್‌ಶಾಹನ ಅವಧಿಯಲ್ಲಿ ಜಮಖಂಡಿ ದೇಸಾಯಿಯನ್ನು ಸೋಲಿಸುವುದರ ಮುಖಾಂತರ ಸುಲ್ತಾನನಿಂದ ರಾಜ್ಯದ ಮುಖ್ಯ ಆಡಳಿತಗಾರನನ್ನಾಗಿ ನಿಯಮಿಸಿ ಅವನಿಗೆ ಕಿಶ್ವರ್‌ಖಾನ್ ಎಂಬ ಬಿರುದು ಕೊಟ್ಟನು). ಈ ಕಾರ್ಯಕ್ಕಾಗಿ ಹೊರದೇಶದಿಂದ ಕಲ್ಲುಕುಟಿಗರನ್ನು ಮತ್ತು ಗೌಂಡಿಗಳನ್ನು ಕರೆಯಿಸಿದನು. ಇಡೀ ಕೆಲಸವನ್ನು ಎರಡುವರೆ ವರುಷಗಳಲ್ಲಿ ಮುಕ್ತಾಯಗೊಳಿಸಿದನು. ಈ ಕೋಟೆ ಗೋಡೆಯು ೬ ಫರ್ಸ್‌ಕ್(ಮೂರು ಮೈಲಿಗಳಿಗೆ ಒಂದು ಫರ್ಸ್‌ಕ್) ಉದ್ದವಿದೆ. ಗೋಡೆಯ ಅಗಲವು ೧೮

ಮೊಳವಿದೆ. ಮೇಲೆ ೧೨೬ ಬುರುಜುಗಳು ಮತ್ತು ೨೬,೧೦೦ ತೂಬುಗಳಿವೆ. ಅಗತ್ಯಕ್ಕಾಗಿ ಕೋಟೆ ಗೋಡೆಯಲ್ಲಿ ೭೦ ಕಳ್ಳಗಿಂಡಿಗಳನ್ನು ಬಿಡಲಾಗಿದೆ. ನಗರದ ಪಶ್ಚಿಮಕ್ಕೆ ಮಕ್ಕಾಬಾಗಿಲು ಇದೆ. ಉಳಿದ ಬಾಗಿಲುಗಳಿಗೆ ಅವುಗಳ ದಿಕ್ಕಿನ ಊರುಗಳ ಹೆಸರಿನಿಂದ ಇಡಲಾಗಿದೆ. ಈ ಕೋಟೆ ಗೋಡೆಯ ಸುತ್ತಮುತ್ತ ಆಳವಾದ ಮತ್ತು ಅಗಲವಾದ ಕಂದಕವಿದೆ. ಅದರಲ್ಲಿಯ ನೀರು ಯಾವಾಗಲೂ ಕಡಿಮೆಯಾಗುವುದಿಲ್ಲ ಎಂದು 'ಗುಲದಸ್ತಾಯೆ ಬಿಜಾಪುರ' ಕೃತಿಯು ತಿಳಿಸುತ್ತದೆ.[೫೩]

ಕ್ಯಾಂಪ್‌ಬೆಲ್ ವಿರಚಿತ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಿದಂತೆ ಕೋಟೆಯು ಸುಮಾರು ೧೬೦೦ ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ ಮತ್ತು ಸುಮಾರು ೧೦೬ ಬೇರೆ ಬೇರೆ ಪ್ರಕಾರದ ಬುರುಜುಗಳಿವೆ. ೨೦ ರಿಂದ ೩೦ ಅಡಿ ಎತ್ತರದ ಗೋಡೆಗಳು ಸುಮಾರು ೨೦ ಅಡಿ ಅಗಲವಾಗಿವೆ. ಕಂದಕಗಳು ೪೦ ರಿಂದ ೫೦ ಅಡಿ ಅಗಲವಾಗಿವೆ.[೫೪] ಈ ರೀತಿಯಾಗಿ ಕೋಟೆಯ ನಿರ್ಮಾಣದ ಕುರಿತು ಕಂಡುಬರುತ್ತದೆ. ಕೋಟೆಯ ನಿರ್ಮಾಣದ ಪ್ರಮುಖ ರೂವಾರಿ ಕಿಶ್ವರಖಾನ್‌ನಾಗಿದ್ದರೂ ಅದರಲ್ಲಿ ವಿವಿಧ ಸರದಾರರ ಪಾತ್ರ ಕೂಡಾ ಪ್ರಮುಖವಾಗಿ ಕಂಡುಬರುತ್ತದೆ.

ಇದೇ 'ಬಸಾತೀನೆ ಸಲಾತೀನ' ಕೃತಿಯಲ್ಲಿ ಕೋಟೆಯ ಜೀರ್ಣೋದ್ಧಾರವನ್ನು ಕುರಿತು ವಿವರಿಸುತ್ತದೆ. ಮೊಗಲ ಸೈನ್ಯಾಧಿಕಾರಿ ರಾಜಾಜಯಸಿಂಗ ಮತ್ತು ಶಿವಾಜಿಯು ಇಬ್ಬರೂ ಕೂಡಿ ವಿಜಾಪುರದ ಎರಡನೇ ಅಲಿ ಆದಿಲ್‌ಶಾಹನ ಮೇಲೆ ದಾಳಿ ಮಾಡಲು ಬಂದಾಗ ಅಲಿ ಆದಿಲ್‌ಶಾಹನು ಖವಾಸ್‌ಖಾನ್‌ನನ್ನು ಕರೆದು ಕೋಟೆಯ ಬುರುಜುಗಳನ್ನು, ಗೋಡೆಗಳನ್ನು ಗಟ್ಟಿಯಾಗಿ ಕಟ್ಟಲು ಆಜ್ಞಾಪಿಸಿದನು ಮತ್ತು ಅವುಗಳ ಮೇಲೆ ಯುದ್ಧ ಸಾಮಗ್ರಿಗಳನ್ನು, ಹತ್ಯಾರ ಬಂದೂಕು ತೋಪುಗಳನ್ನು ಸಂಗ್ರಹಿಸಲು ಶಾಹ ಹಜರತನನ್ನು ನೇಮಿಸಿದನು. ತುಸುವೆ ಅವಕಾಶದಲ್ಲಿ ಖವಾಸಖಾನನು ಕೋಟೆಯು ಪೂರ್ತಿ ಗಟ್ಟಿಯಾಗಿರುವಂತೆ ನೋಡಿಕೊಂಡನು. ಅವನ ಆ ಯತ್ನದಿಂದ ಕೋಟೆಯು ಆಕಾಶದೆತ್ತರಕ್ಕೆ ಬೆಳೆದು ಶೋಭಿಸಿತು ಎಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಕೋಟೆಯು ಜೀರ್ಣೋದ್ಧಾರಗೊಂಡಿರುವುದನ್ನು ಗಮನಿಸಬಹುದು.[೫೫] ಎರಡನೇ ಅಲಿ ಆದಿಲ್‌ಶಾಹನ ಕಾಲದಲ್ಲಿ ಕೋಟೆ ಗೋಡೆಯ ಮೇಲೆ ಬುರುಜುಗಳನ್ನು ಕಟ್ಟುವ ಜವಾಬ್ದಾರಿಯನ್ನು ಮಿರ್ಜಾ ಯುಸೂಫನಿಗೆ ಕೊಡಲಾಯಿತು ಎಂದು 'ತಾರೀಖೆ-ಎ-ಹಪ್ತಕುರ್ಸಿ'ಯಲ್ಲಿ ಉಲ್ಲೇಖಿಸಲಾಗಿದೆ.[೫೬]

ಎರಡನೆಯ ಇಬ್ರಾಹಿಮ್ ಆದಿಲ್‌ಶಾಹಿ ಆಸ್ಥಾನ ಕವಿ ಅಬ್ದುಲ್ ದೆಹಲ್ವಿಯು ಬರೆದ 'ಇಬ್ರಾಹಿಮ್ ನಾಮಾ' ಕೃತಿಯಲ್ಲಿ ಕೋಟೆಯನ್ನು ವರ್ಣಿಸಲಾಗಿದೆ. ಈ ವಿಸ್ಮಯ ಪಟ್ಟಣ ಸುತ್ತಿದ ಗೋಡೆ, ಅದರ ಮೇಲೆ ಅಗಲವಾದ ಕಟ್ಟೆಗಳು, ಪೃಥ್ವಿ ತನ್ನ ಕೊರಳಲ್ಲಿ ಪದಕ ಹಾಕಿಕೊಂಡು ಶೃಂಗರಿಸಿದ ಹಾಗೆ ಕಾಣುತ್ತದೆ. ಅರಾಬ ಮಧ್ಯ ಗರಗಸದಾಕಾರದಲ್ಲಿ ಮಾಡಿದ ಕೆಲಸ ಸೇರಿ ಮಾಣಿಕ್ಯ ಜೋಡಿಸಿದ ಎರಡು ಲಡಿಗಳ ಹಾಗೆ ಕಾಣಿಸುತ್ತದೆ. ನಡುನಡುವೆ ಗೋಪುರಗಳು ವಿಸ್ಮಯವಾಗಿ ಕಾಣಿಸುತ್ತವೆ. ಪಚ್ಚೆ ಮತ್ತು ದೊಡ್ಡ ವಜ್ರ ಮುತ್ತುಗಳಿಂದ ಜೋಡಿಸಿದ ಹಾಗೆ ಅಲ್ಲೇ

ನಗರದ ಮಧ್ಯದಲ್ಲಿರುವ ಕೋಟೆಯಲ್ಲಿ ಎರಡನೆಯ ಸುತ್ತಿನ ಗೋಡೆ ಮುತ್ತುಗಳ ಹಾಗೆ ಕಾಣಿಸುತ್ತದೆ. ಬಾದಶಹನ ಅರಮನೆ ಸುಂದರ ರತ್ನ-ಮುತ್ತಿನ ಗೋಡೆ ಮುತ್ತಿನ ಹಾಗಿದೆ. ಅದು ನಕ್ಷತ್ರಗಳು ವರ್ತುಲ ಆಕಾರದಲ್ಲಿ ಚಂದ್ರನ ಮನೆ ಸುತ್ತಿಕೊಂಡಿವೆ. ನಗರದ ಕೋಟೆ ಮದ್ಯದಲ್ಲಿ ಬಾದಶಹನ ಮನೆ ಹೇಗೆ ಕಾಣಿಸುತ್ತದೆಂದರೆ ಅರಮನೆಯ ಮೇಲೆ ಚಂದ್ರ ಐಶ್ವರ್ಯದ ಕೋಟೆಯನ್ನೇ ತೆರೆದ ಹಾಗೆ ಕಾಣಿಸುತ್ತದೆ. ಕೋಟೆಯೊಳಗಿಂದ ಅರಾಬ ಸೇರಿಸಿ ನೋಡಿದರೆ ಚಂದ್ರನ ಮೇಲೆ ಮತ್ತೊಂದು ಸೂರ್ಯ ಅರಳಿದ ಹಾಗೆ ಕಾಣಿಸುತ್ತದೆ ಅಥವಾ ಐಶ್ವರ್ಯ ಉಡುಪನ್ನು ಧರಿಸಿ ನಿಂತಿದೆ. ಜೋಡಿ ಕೋಟೆಯ ಕೊರಳಲ್ಲಿ ಸುಂದರವಾದ ಆಭರಣವನ್ನು ಧರಿಸಿದೆ. ಅದೇ ಕೊರಳಿನ ಆಭರಣದ ನೆರಳೆಂದು ಮತ್ತೊಂದು ಸಹ ತಿಳಿ. ಸುತ್ತಲೂ ಅದರ ಗುರುತಾಗಿವೆ. ಈ ನಗರದಲ್ಲಿ ಎಲ್ಲಾ ದೇಶದವರು ವಾಸಿಸಿದ್ದಾರೆ. ಐವತ್ತಾರು ದೇಶದ ಜನ ಸುಖ ಸಂತೋಷದಿಂದ ಇದ್ದಾರೆ. ತಲೆಯಲ್ಲಿ ಹೂವ ಮುಡಿದ ಹಾಗೆ ರಾಜನ ಅರಮನೆ, ಅರಮನೆ ಮುಂದಿರುವ ಬುರ್ಜುವಿನಲ್ಲಿ ಘಂಟೆ ಬಾರಿಸುವ ಶಬ್ದ ಕೇಳಿಸುತ್ತದೆ. ಆದರೆ ಪ್ರತಿಯೊಂದು ಗಂಟೆಗೆ ಈ ಘಂಟೆ ಬಾರಿಸುತ್ತದೆ. ರಾಜ ಪ್ರತಿ ಗಂಟೆ, ಪ್ರತಿ ಮಾಸ ರಾಜ್ಯ ಆಳುತ್ತಾನೆ.[೫೭]

ಕ್ರಿ.ಶ. ೧೬೦೪ರಲ್ಲಿ ಇಮ್ಮಡಿ ಇಬ್ರಾಹಿಮ್‌ನ ಆಸ್ಥಾನದಲ್ಲಿದ್ದ ಮೊಗಲ್ ರಾಯಭಾರಿ ಅಸದ್‌ಬೇಗ್ ವಿಜಾಪುರ ಕೋಟೆಯನ್ನು ಕುರಿತು ವರ್ಣಿಸುತ್ತಾ ಈ ವಿಸ್ಮಯ ಪಟ್ಟಣವನ್ನು ಸುತ್ತಿದ ಗೋಡೆ, ಅದರ ಮೇಲೆ ಅಗಲವಾದ ಕಟ್ಟೆಗಳು ಭೂಮಿ ಕೊರಳಲ್ಲಿ ಪದಕ ಹಾಕಿಕೊಂಡು ಸಿಂಗರಿಸಿದಂತೆ ಕಾಣಿಸುತ್ತದೆ. ಮಧ್ಯ ಮಧ್ಯ ಬುರುಜುಗಳು ಹೇಗೆ ಕಾಣಿಸುತ್ತವೆಂದರೆ ಪಚ್ಚೆ ಮತ್ತು ದೊಡ್ಡ ವಜ್ರಗಳನ್ನು ಹಚ್ಚಿದಂತಿವೆ. ಅಲ್ಲೆ ನಗರದ ಮಧ್ಯದ ಕೋಟೆಯ ಎರಡನೆಯ ಆವರಣ(ಅರಕಿಲ್ಲೆ) ಇನ್ನೊಂದು ಮುತ್ತಿನ ಹಾರವನ್ನು ಹಾಕಿದಂತೆ ಕಾಣಿಸುತ್ತದೆ. ಬಾದಶಹನ ಅರಮನೆ ಸುಂದರ ರತ್ನ ಅಥವಾ ಮುತ್ತಿನ ಹಾಗಿದೆ. ಅದು ಆಕಾಶದಲ್ಲಿ ಚಂದ್ರನ ಮನೆ ಸುತ್ತಿಕೊಂಡಿರುವ ನಕ್ಷತ್ರಗಳ ವರ್ತುಲದಂತೆ ಕಾಣಿಸುತ್ತದೆ. ನಗರದ ಮಧ್ಯದಲ್ಲಿ ಬಾದಶಹನ ಮನೆ ಹೇಗೆ ಕಾಣಿಸುತ್ತದೆಂದರೆ ಅರಮನೆಗಳ ಮೇಲೆ ಚಂದ್ರನು ಐಶ್ವರ್ಯದ ಕೋಟೆಯನ್ನು ತೆರೆದ ಹಾಗೆ ಕಾಣಿಸುತ್ತದೆ. ಅರಮನೆಗಳ ಮೇಲೆ ವಾಯುವಿಹಾರಕ್ಕಾಗಿ ತೆರೆದ ಛಾವಣಿಗಳಿವೆ. ಈ ರೀತಿಯ ಬಾದಶಹರ ಮನೆಗಳು ಅನ್ಯ ನಗರದಲ್ಲಿ ಸಿಗಲಾರವು. ಸಂತೆಯ ಕೊರಳಲ್ಲಿ ಹಾರ ತೊಟ್ಟಿರುವ ಹಾಗೆ ಕಾಣುತ್ತದೆ. ಅದರ ಮಧ್ಯದಲ್ಲಿ ಜುಮ್ಮಾ ಮಸೀದ್ ಹಾರದಲ್ಲಿ ಪದಕ ಜೋಡಿಸಿದಂತೆ ಕಾಣುತ್ತದೆ. ಕಾಲ ಕಳೆದಂತೆ ಬಿದ್ಯಾಪುರ ನಗರವು ಸುಂದರ ಯುವ ಹುಡುಗನ ಹಾಗೆ ಬೆಳೆದು ನಿಂತಿತು.

ಎರಡನೆಯ ಅಲಿ ಮತ್ತು ಸಿಕಂದರ್ ಆದಿಲ್‌ಶಾಹನ ಸಮಕಾಲೀನ ಕವಿ ಮುಲ್ಲಾ ನುಸ್ರುತಿ ಬರೆದ 'ಅಲಿನಾಮಾ'ದಲ್ಲಿ ಕೋಟೆಯನ್ನು ಈ ರೀತಿ ವರ್ಣಿಸಲಾಗಿದೆ. ಸುಮಾರು ಕಣ್ಣುಳ್ಳ ಆಕಾಶ ಇಂತಹ ವಿಶಾಲವಾದ ಕೋಟೆ ನೋಡಿರಲಾರೆ. ಶಹಾಬಾಷ! ಬಿಜಾಪುರದ ಭವ್ಯವಾದ ಕೋಟೆ, ಅದರ ಪ್ರತಿಯೊಂದು ಬುರುಜು ಸೂರ್ಯನ ಮಹನೀಯತೆ ಮನೆ, ಎತ್ತರದಲ್ಲಿ ಅದು ಶನಿಗ್ರಹವನ್ನು

ಮುಟ್ಟುತ್ತಿತ್ತು. ಗಾಳಿ ಎಂದೂ ಸಹ ಆ ಎತ್ತರದ ಕೋಟೆ ಬದಿ ಹತ್ತಲಾರದು, ಚಂದ್ರ ಬದಿಯ ಆಶ್ರಯ ಪಡೆದು ಮೂಡಿದರೂ ಸಹ ಬೆಳಗಾಗುವವರೆಗೂ ಆ ಕೋಟೆಯ ಗೋಡೆಯನ್ನು ಹತ್ತಲಾರದು. ಅದರ ಎತ್ತರವಾದ ಬುರುಜುಗಳು ಖಾಫ್ ಬೆಟ್ಟಕ್ಕೂ ಸುಳಿ ಇಲ್ಲದಂತೆ ಮಾಡುವವು. ಪ್ರತಿಯೊಂದು ತೋಪು ಹೆಬ್ಬಾವು, ಜ್ವಾಲಾಮುಖಿ, ಮೋಡದ ತುಂಡು ಶಿಖೆಯಂತೆ ಕಾಣುವುದು. ಗುಡುಗುವ ಮಿಂಚು, ಸಣ್ಣ ತೋಪುಗಳು ಯಾವುದೇ ಶಿಖೆ ಬೆಟ್ಟದಿಂದ ಕಡಿಮೆ ಇಲ್ಲ. ಸಣ್ಣ ತೋಪು ವಿಷಭರಿತ ಹಾವುಗಳು. ಶನಿಗ್ರಹ ತೋಪಿನ ಚಕ್ರವನ್ನು ನೋಡಿ, ಹಳೆ ಕುಂಟ ನಡೆಯುವುದರಿಂದ ದಣಿದು ಸಾಕಾಗಿರುವ ಹಾಗೆ ಕಾಣುತ್ತಾನೆ. ಮಹನೀಯತೆಯಲ್ಲಿ ಆಕಾಶದ ಚಕ್ರ ವರ್ತುಲದ ಕೇಂದ್ರಬಿಂದುವಿನ ಹಾಗೆ ಕಾಣುವುದು. ಇದರ ಬಾಗಿಲುಗಳನ್ನು ನೋಡಿ ಆಶ್ಚರ್ಯ ಪಡುವನು. ಅವುಗಳು ಅವನಿಗೆ ಮೃತ್ಯು ಮೊಸಳೆಯಂತೆ ಕಾಣುತ್ತದೆ. ನಗರ ಒಂದು ಅಮೂಲ್ಯವಾದ ಪದಕ ಇಡೀ ಕೋಟೆಯ ಗೋಡೆಯ ಕೊರಳಲ್ಲಿ ರತ್ನಗಳು ತೊಡಿಸಿದಂತಾಗಿದೆ. ಈ ಮಧ್ಯದಲ್ಲಿ ಈ ನಗರ ಪದಕದಂತೆ ಕಾಣುತ್ತದೆ. ಈ ಯುಗದ ಶಹಿನ್ಷಾರ ರಾಜಧಾನಿ ಇದು ಎಂದು ವರ್ಣಿಸುತ್ತದೆ.[೫೮]

ಕೋಟೆಯ ನಿವೇಶನದ ಆಯ್ಕೆ

ವಿಜಾಪುರ ಪ್ರದೇಶವು ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯ ಒಣ ಮತ್ತು ಶುಷ್ಕ ವಾತಾವರಣದಿಂದ ಕೂಡಿದ ಸಮತಟ್ಟಾದ ಬಯಲು ಪ್ರದೇಶದಲ್ಲಿದೆ. ಅತಿ ಕಡಿಮೆ ಮಳೆ ಪಡೆಯುವ ಈ ಪ್ರದೇಶದಲ್ಲಿ ಕಡಿಮೆ ಪ್ರಮಾಣದ ಅರಣ್ಯ ಪ್ರದೇಶವಿದೆ. ಹೀಗಾಗಿ ಎಲ್ಲಿ ನೊಡಿದರೂ ಬಯಲು ಪ್ರದೇಶವೇ ಕಾಣುತ್ತದೆ. ಸ್ವಾಭಾವಿಕವಾಗಿ ಯಾವುದೇ ರಕ್ಷಣೆಯಿಲ್ಲದೆ ಈ ಪ್ರದೇಶದಲ್ಲಿ ಶತ್ರುಗಳ ಆಕ್ರಮಣವನ್ನು ತಡೆಯಲು ಬಲಿಷ್ಠವಾದ ಕೋಟೆಯ ಅವಶ್ಯಕತೆ ಎದ್ದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಆದಿಲ್‌ಶಾಹಿಗಳು ದಕ್ಷಿಣ ಭಾರತದಲ್ಲಿಯೇ ಅತ್ಯಂತ ಬಲಿಷ್ಠವಾದ ಸ್ಥಳದುರ್ಗವನ್ನು ಕಟ್ಟಿಸಿದರು. ಸ್ಥಳದುರ್ಗವನ್ನು ಕುರಿತು ಕೌಟಿಲ್ಯ, ಮನು, ಕಾಮಾಂದಕ, ಶುಕ್ರ ಮೊದಲಾದ ರಾಜನೀತಿಜ್ಞರು ಹೇಳಿದ ಎಲ್ಲ ಲಕ್ಷಣಗಳು ಈ ಕೋಟೆಯಲ್ಲಿ ಕಂಡುಬರುತ್ತವೆ.

ವಿಜಾಪುರ ನಗರವು ಕೃಷ್ಣಾ ಮತ್ತು ಭೀಮಾ ನದಿಗಳ ಜಲಾನಯನ ಪ್ರದೇಶವನ್ನುಂಟು ಮಾಡುವ ದಿಣ್ಣೆಯ ಉತ್ತರದ ಇಳಿಜಾರಿನಲ್ಲಿದೆ ಇದರ ಸುತ್ತ ಎಲ್ಲಿ ನೋಡಿದರೂ ಬಯಲುಪ್ರದೇಶ ಹರಡಿಕೊಂಡಿದೆ. ಇಲ್ಲಿ ಫಲವತ್ತಾದ ಭೂಮಿಯಿಂದ ಪ್ರತ್ಯೇಕಿಸಲ್ಪಟ್ಟು ಗರಸು(ಮಡ್ಡಿ) ಮಣ್ಣಿನಿಂದ ಕೂಡಿದೆ. ಆದರೆ ದಕ್ಷಿಣಭಾಗದಲ್ಲಿ ಡೋಣಿ ನದಿಯ ಜಲಾನಯನ ಕಣಿವೆಯಿಂದಾಗಿ ಫಲವತ್ತಾದ ಎರೆಭೂಮಿ ಕಂಡುಬರುತ್ತದೆ. ಕೃಷ್ಣಾ ನದಿಯ ಉತ್ತರಕ್ಕಿರುವ ಈ ಪ್ರದೇಶವು ದಖನ್ ಪದರುಕಲ್ಲುಗಳಿಂದ ಕೂಡಿದೆ. ಭೂಚಲನೆ ಮತ್ತು ಜ್ವಾಲಾಮುಖಿಯ ಪರಿಣಾಮದಿಂದಾಗಿ ಭೂಮಿಯ ಮೇಲ್ಭಾಗವನ್ನು ಭೇದಿಸಿಕೊಂಡು ಶಿಲಾರಸವು ಹೊರಹೊಮ್ಮಿತು. ಈ ರೀತಿ ಘನೀಕರಿಸಿದ ಶಿಲಾರಸವನ್ನು ದಖನ್ ಪದರುಗಲ್ಲು ಎಂದು ಕರೆಯುತ್ತಾರೆ. ದಖನ್ಸ್ನ ಮತ್ತು ಗಟ್ಟಿಯಾಗಿರುವ ಬೆಸಾಲ್ಟ್ ಶಿಲೆಯಾಗಿದೆ.

ಈ ದಖನ್ ಪದರುಗಲ್ಲುಗಳಿಗೆ ಗಟ್ಟಿತನ, ಭಾರ ಮತ್ತು ಧೀರ್ಘಕಾಲ ಬಾಳಿಕೆ ಬರುವ ಲಕ್ಷಣವಿರುವುದರಿಂದ ಕೋಟೆ ಹಾಗೂ ಇತರ ವಾಸ್ತು ರಚನೆಗಳನ್ನು ಕಟ್ಟಲು ಹೆಚ್ಚಾಗಿ ಇದನ್ನು ಬಳಸಿದ್ದಾರೆ. ಸಮತಟ್ಟಾಗಿ ಹರಡಿರುವ ಈ ಪದರುಕಲ್ಲಿನ ಸ್ತರಗಳು ೩೦ ರಿಂದ ೪೦ ಅಡಿಗಳಷ್ಟು ಆಳವಾಗಿ ಕಂಡುಬರುತ್ತವೆ. ಎರಡು ಸ್ತರಗಳ ನಡುವೆ ಮಣ್ಣುಮಿಶ್ರಿತ ಕೆಂಪನೆಯ ಪದರುಗಳುಂಟು. ಈ ಬೆಸಾಲ್ಟ್ ಶಿಲೆಯಲ್ಲಿ ತೋಡಿದ ಬಾವಿಗಳು ಪ್ರತಿ ಸೆಕೆಂಡಿಗೆ ಒಂದು ಲೀಟರಿನಷ್ಟು ನೀರನ್ನು ಬಿಟ್ಟುಕೊಡಬಲ್ಲವು. ಬೆಸಾಲ್ಟ್ ಪದರಗಳನ್ನು ವಿಂಗಡಿಸುವ ಕೆಂಪು ಬಣ್ಣ ಪದರುಗಳು ನೆಲದ ನೀರಿಗೆ ಉತ್ತಮ ನೆಲೆ. ಈ ಬಗೆಯ ಪದರುಗಳು ಬಾವಿಯಲ್ಲಿ ಕಂಡಾಗ ನೀರು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಅವಕಾಶವಿರುತ್ತದೆ. ಹೀಗಾಗಿ ಕೋಟೆಯ ಸುತ್ತಲೂ ಕಂದಕವು ಸುಮಾರು ೨೦ಕ್ಕಿಂತಲೂ ಹೆಚ್ಚು ಅಡಿ ಆಳವಿರುವುದನ್ನು ಕಾಣಬಹುದು ಇದರಿಂದ ಸಹಜವಾಗಿಯೇ ಕಂದಕದಲ್ಲಿ ನೀರನ್ನು ಸಂಗ್ರಹವಾಗುತ್ತಿತ್ತು ಎನ್ನಬಹುದು. ಅಲ್ಲದೆ ಕೋಟೆಯ ಗೋಡೆಯನ್ನು ಗಟ್ಟಿಯಾದ ತಳದ ಮೇಲೆ ನಿರ್ಮಿಸಲಾಗಿದೆ. ಹೀಗಾಗಿ ಕೋಟೆ ದೀರ್ಘಾವಧಿಯವರೆಗೆ ಉಳಿದುಕೊಂಡುಬರುವ ಲಕ್ಷಣವನ್ನು ಹೊಂದಿದೆ. ಕ್ರಿ.ಶ. ೧೬೮೬ರಲ್ಲಿ ಔರಂಗಜೇಬನು ವಿಜಾಪುರ ಕೋಟೆಯನ್ನು ವಶಪಡಿಸಿಕೊಳ್ಳಲು ಬಂದಾಗ ಕೋಟೆಯ ಬಲಿಷ್ಠತೆಯನ್ನು ಕಂಡು ಕೋಟೆಗೆ ಸುರಂಗವನ್ನು ತೆಗೆದು ಮುತ್ತಿಗೆ ಹಾಕಲು ಆದೇಶಿಸಿದನು.[೫೯] ಆದರೆ ವಿಜಾಪುರ ಕೋಟೆಯನ್ನು ಕಟ್ಟಿದ ಭೂಮಿಯಲ್ಲಿ ಅರ್ಧಗಜ ಅಗೆದರೂ ಸಾಕು ಕರಿಕಲ್ಲು ದೊರೆಯುತ್ತದೆ.[೬೦] ಹೀಗಾಗಿ ಸುರಂಗ ಮಾರ್ಗ ತೆಗೆಯುವುದನ್ನು ಕೈಬಿಟ್ಟು ಕಂದಕವನ್ನು ಮುಚ್ಚಿ ಕೋಟೆ ಕೈವಶ ಮಾಡಿಕೊಳ್ಳುವ ಪ್ರಯತ್ನ ಮಾಡತೊಡಗಿದರು. ಇದರಿಂದ ಕೋಟೆ ನಿರ್ಮಾಣ ಮಾಡುವ ಪೂರ್ವದಲ್ಲಿ ಸ್ಥಳದ ಆಯ್ಕೆಯ ಪ್ರಾಮುಖ್ಯತೆಯನ್ನು ಗುರುತಿಸಬಹುದು.

ರಾಜಧಾನಿಯ ಸುತ್ತ ಕೃಷ್ಣಾ, ಭೀಮಾ, ಡೋಣಿ ನದಿಯ ಕಪ್ಪುಮಣ್ಣಿನ ಫಲವತ್ತಾದ ಭೂಮಿಯಿತ್ತು. ಇಲ್ಲಿನ ಆಹಾರ ಧಾನ್ಯ ಮತ್ತು ಸಂಪತ್ತಿನ ಸಂಗ್ರಹಕ್ಕಾಗಿ ಆಯಕಟ್ಟಿನ ಸ್ಥಳವಾಗಿತ್ತು. ಅಲ್ಲದೆ ವಿಜಯನಗರ, ಅಹಮದ್‌ನಗರ, ಬೀದರ, ಗೋಲ್ಕೊಂಡ, ಬೀರಾರ್‌ಗಳು ವಿಜಾಪುರದಿಂದ ಹೆಚ್ಚು ಕಡಿಮೆ ಒಂದೇ ಅಂತರದ ದೂರದಲ್ಲಿ ನೆಲೆಗೊಂಡ ಸಾಮ್ರಾಜ್ಯಗಳಾಗಿದ್ದವು. ಇವರ ಆಕ್ರಮಣವನ್ನು ತಡೆಯುವುದಕ್ಕೋಸ್ಕರ ಆದಿಲ್‌ಶಾಹಿಗಳು ಈ ಸ್ಥಳವನ್ನೇ ಮುಂದುವರಿಸಿಕೊಂಡು ಬಂದರು. ಅತಿ ಮುಖ್ಯವಾಗಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಬಾದಾಮಿ ಚಾಲುಕ್ಯರ ಮಾಂಡಲಿಕನೊಬ್ಬ ವಿಜಾಪುರ ಪಟ್ಟಣವನ್ನು ಕಟ್ಟಿಸಿದನೆಂದು ವಿಜಾಪುರ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾಗಿದೆ.[೬೧] ಹೀಗಾಗಿ ಇವರ ಕಾಲಘಟ್ಟದಿಂದಲೇ ಜನವಸತಿ ಕಂಡುಬರುವ ಈ ಪ್ರದೇಶದಲ್ಲಿ ಕಲ್ಯಾಣ ಚಾಳುಕ್ಯರು, ಕಳಚೂರಿಗಳು, ಯಾದವರು ದೇವಾಲಯಗಳನ್ನು ಕಟ್ಟಿಸಿ ಅದೊಂದು ಅಗ್ರಹಾರವನ್ನಾಗಿ, ರಾಜಧಾನಿ ಪಟ್ಟಣವನ್ನಾಗಿ ಪರಿವರ್ತಿಸಿದ್ದರು. ಇಷ್ಟು ಸುದೀರ್ಘವಾಗಿ ಇಲ್ಲಿ ಜನವಸತಿ ಕಂಡುಬರುವುದರಿಂದ ಆದಿಲ್‌ಶಾಹಿ ಸಾಮ್ರಾಜ್ಯ ಸ್ಥಾಪಕ ಯುಸೂಫ್‌ನು ಕೂಡ

ವಿಜಾಪುರವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಅರಕಿಲ್ಲೆಯನ್ನು ನಿರ್ಮಿಸಿದನು. ಒಟ್ಟು ಒಂಬತ್ತು ಜನ ಆದಿಲ್‌ಶಾಹಿ ಸುಲ್ತಾನರು ಆಳ್ವಿಕೆ ಮಾಡಿದರು. ಇವರು ಕೂಡ ಇದನ್ನೇ ರಾಜಧಾನಿಯನ್ನಾಗಿ ಮುಂದುವರಿಸಿಕೊಂಡು ಹೋದರು. ಇವರಲ್ಲಿ ಒಂದನೆಯ ಇಬ್ರಾಹಿಂ ಆದಿಲ್‌ಶಾಹನು ಯುಸೂಫ್ ಕಟ್ಟಿಸಿದ ಕೋಟೆಯನ್ನು ಕೆಡವಿ ಅರಮನೆಗಳ ಸುತ್ತಲೂ ಅರಕಿಲ್ಲಾವನ್ನು, ಒಂದನೇ ಅಲಿ ಆದಿಲ್‌ಶಾಹನು ನಗರದ ಸುತ್ತಲೂ ಬಲಿಷ್ಠವಾದ ಕೋಟೆಯನ್ನು ನಿರ್ಮಿಸಿದರು.

ಕೋಟೆಗೋಡೆ

ವಿಜಾಪುರ ನಗರದ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಲಾಗಿದೆ. ಕೋಟೆಗೋಡೆಯನ್ನು ನಯವಾಗಿ ಕಟೆದ ಕಲ್ಲು, ಮಣ್ಣು ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆಯ ಸುತ್ತಲೂ ಕಂದಕವನ್ನು ತೆಗೆದು ಆ ಕಂದಕದಿಂದ ಬಂದಿರುವ ಕಲ್ಲು ಮತ್ತು ಮಣ್ಣನ್ನು ಬಳಸಿ ಕೋಟೆಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಗೋಡೆಯ ಅಗಲವು ಸುಮಾರು ಎಂಟು ಗಜ, ಎತ್ತರ ಇಪ್ಪತ್ತು ಗಜ ಮತ್ತು ಆರುಸಾವಿರ ತೂಬುಗಳನ್ನು(ಬಂದೂಕಿನ ನಳಿಗಳನ್ನಿಡಲು) ಕೋಟೆಯ ಸುತ್ತಲೂ ಕೊರೆಯಲಾಗಿದೆ. ಕೋಟೆಗೆ ಹೊಂದಿಕೊಂಡು ೧೨೦ ಬುರುಜುಗಳಿವೆ.[೨] ಈ ಕೋಟೆ ಗೋಡೆಯು ೬ ಫರ್ಸ್‌ಖ್(ಮೂರು ಮೈಲುಗಳಿಗೆ ಒಂದು ಫರ್ಸ್‌ಖ್) ಉದ್ದವಿದೆ. ಗೋಡೆಯ ಅಗಲವು ೧೮ ಮೊಳವಿದೆ. ಗೋಡೆಗೆ ಹೊಂದಿಕೊಂಡು ೧೨೬ ಬುರುಜುಗಳು ಮತ್ತು ೨೬,೧೦೦ ತೂಬುಗಳಿವೆ. ಅಗತ್ಯಕ್ಕಾಗಿ ಕೋಟೆ ಗೋಡೆಯಲ್ಲಿ ೭೦ ಕಳ್ಳಗಿಂಡಿಗಳನ್ನು ಬಿಡಲಾಗಿದೆ.[೬೩] ಒಟ್ಟು ಕೋಟೆಯು ೧೦.೫ ಕಿ.ಮೀ. ಉದ್ದವಿದೆ. ಪೂರ್ವ ಪಶ್ಚಿಮವಾಗಿ ೪ ಕಿ.ಮೀ., ಉತ್ತರ ದಕ್ಷಿಣವಾಗಿ ೩.೨೫ ಕಿ.ಮೀ. ಅಗಲವಾಗಿದ್ದು ಒಟ್ಟು ೧೬೦೦ ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ.[೬೪] ವೃತ್ತಾಕಾರದಲ್ಲಿ ಕಂಡುಬರುವ ಕೋಟೆಗೋಡೆಯು ಕೆಲವೊಂದು ಕಡೆ ಹಿಂಜರಿತ ಮುಂಜರಿತಗಳಿಂದ ಕೂಡಿದ್ದು ಸುಮಾರು ೨೫ ರಿಂದ ೪೨ ಅಡಿಯವರೆಗೆ ಎತ್ತರವಾಗಿದೆ. ಸಮನಾಂತರವಾಗಿ ಸುಮಾರು ೩ ಅಡಿ ದಪ್ಪವಾಗಿರುವ ಎರಡು ಗೋಡೆಗಳನ್ನು ೫ ರಿಂದ ೨೪ ಅಡಿ ಮಧ್ಯದಲ್ಲಿ ಅಂತರವಿಟ್ಟು ನಿರ್ಮಿಸಲಾಗಿದೆ. ಈ ಎರಡು ಗೋಡೆಗಳ ಮಧ್ಯೆ ಕಲ್ಲು ಮತ್ತು ಮಣ್ಣನ್ನು ಹಾಕಿ ಮುಚ್ಚಿ ಅದು ೧೮ ರಿಂದ ೩೦ ಅಡಿ ದಪ್ಪವಾಗಿರುವಂತೆ ಹಾಗೂ ಗಟ್ಟಿಯಾದ ತರ ಹತ್ತುವವರೆಗೆ ಆಳ ಅಗೆದು ಅದರ ಮೇಲೆ ಗೋಡೆಯನ್ನು ನಿರ್ಮಿಸಲಾಗಿದೆ. ಕಂದಕದಿಂದ ತೆಗೆದ ಕಲ್ಲು ಮತ್ತು ಮಣ್ಣನ್ನು ಗೋಡೆ ಕಟ್ಟಲು ಉಪಯೋಗಿಸಲಾಗಿದೆ.

ಕೋಟೆಗೋಡೆಯ ಮೇಲೆ ೧.೧೨ ಮೀ. ಕೈಪಿಡಿಗೋಡೆಯನ್ನು ನಿರ್ಮಿಸಲಾಗಿದ್ದು ಅದರ ಮೇಲೆ ತೆನೆಗಳನ್ನು ನಿರ್ಮಿಸಲಾಗಿದೆ. ತೆನೆಯ ಕೆಳಗೆ ಕೆಲವು ಕಡೆ ಕೈಪಿಡಿಗೋಡೆ ಸುಮಾರು ೧.೫೦ ಅಡಿಯಿಂದ ೩ ಅಡಿಯವರೆಗೆ ಇದ್ದರೆ ಕೆಲ ಕಡೆ ಅಟ್ಟಾಲಕ್ಕೆ ಸಮಾನಾಂತರವಾಗಿರುವ ಗೋಡೆಯ ಮೇಲೆ ತೆನೆಗಳನ್ನು ನಿರ್ಮಿಸಲಾಗಿದೆ. ಕೋಟೆಗೋಡೆಯ ಮೇಲಿನ ತೆನೆಗಳು ಸುಮಾರು ೫ ರಿಂದ ೭ ಅಡಿ ಎತ್ತರವಾಗಿವೆ. ನಾಗತಾಣ ದ್ವಾರದ ಹತ್ತಿರ ೮ ಅಡಿ ಎತ್ತರದ ತೆನೆಗಳಿದ್ದರೆ,

ದಕ್ಷಿಣಭಾಗದ ಕೋಟೆಯ ಗೋಡೆಯಲ್ಲಿ ಸುಮಾರು ೫ ಅಡಿ ಎತ್ತರವಾಗಿವೆ. ಒಂದು ತೆನೆಯಿಂದ ಮತ್ತೊಂದು ತೆನೆಯ ಮಧ್ಯೆ ೧.೫೦ ರಿಂದ ೨ ಅಡಿ ಅಂತರದಿಂದ ಕೂಡಿವೆ.

ಕೋಟೆಯ ಅಟ್ಟಾಲಕವು ಒಂದು ಕೋಟೆ ಭಾಗದಿಂದ ಮತ್ತೊಂದೆಡೆ ಅಗಲದಲ್ಲಿ ಹೆಚ್ಚು ಕಡಿಮೆ ಇದ್ದು. ೧೫ ರಿಂದ ೨೭ ಅಡಿಯವರೆಗೆ ಕಾಣಬಹುದು. ಕೋಟೆಯ ಮೇಲೆ ಸೈನಿಕರು ನಿಂತುಕೊಳ್ಳಲು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಕೈಪಿಡಿಗೋಡೆಯ ಹಿಂದೆ ಅಥವಾ ಕೋಟೆ ಗೋಡೆಯ ಮೇಲಿನ ಅಗಲವಾದ ಸ್ಥಳವನ್ನು ಅಟ್ಟಾಲಕವೆನ್ನುವರು. ಅಟ್ಟಾಲಕವನ್ನು ಪ್ರಮುಖವಾಗಿ ಇಂದಿನ ಆರ್.ಟಿ.ಓ. ಕಛೇರಿ ಹತ್ತಿರ ದಕ್ಷಿಣಭಾಗದಲ್ಲಿ ಎರಡು ಹಂತದಲ್ಲಿ ನಿರ್ಮಿಸಿದ್ದಾರೆ. ಅಲ್ಲಿ ಕೋಟೆ ಗೋಡೆಯ ಒಟ್ಟು ದಪ್ಪ ೩೧ ಅಡಿ ಯಾಗಿದ್ದು ಕೋಟೆ ಒಳಗಡೆಯಿಂದ ೧೫ ಅಡಿ ಎತ್ತರದ ಮೇಲೆ ಒಂದು ಅಟ್ಟಾಲಕವು ೨೦ ಅಡಿ ಅಗಲವಾಗಿದ್ದು ಅದರ ಮೇಲೆ ೩ ಅಡಿ ಎತ್ತರ, ೮ ಅಡಿ ಅಗಲವಾಗಿದ್ದು ಜಗತಿ(ಕಟ್ಟೆಯ)ಯ ಹಾಗೆ ಕಾಣುತ್ತದೆ. ಇದರಲ್ಲಿ ಕಮಾನು ಆಕೃತಿಯ ಕೋಣೆಗಳಿದ್ದು ಅದರಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿಡಲು ಅಥವಾ ಸೈನಿಕರು ಮಳೆಯಿಂದ ಆಶ್ರಯ ಪಡೆಯಲು ಕೋಣೆಗಳನ್ನು ನಿರ್ಮಿಸಲಾಗಿದೆ. ಈ ರೀತಿಯಾಗಿ ಇಲ್ಲಿ ರಕ್ಷಣಾ ತಾಂತ್ರಿಕತೆಯನ್ನು ಹೊಂದಿದ್ದುದು ವಿಶೇಷವಾಗಿದೆ. ದಕ್ಷಿಣಭಾಗದಲ್ಲಿ ಅಟ್ಟಾಲಕದ ಮೇಲೆ ೨x೨ ಅಡಿ ಚೌಕಾಕಾರದ ಕಟ್ಟೆ ಇದ್ದು ಚಿಕ್ಕ ಚಿಕ್ಕ ತೋಪುಗಳನ್ನು ಉಪಯೋಗಿಸಲು ನಿರ್ಮಿಸಿದ್ದಾರೆ. ತೋಪು ಇಡುವ ಕಟ್ಟೆಗಳನ್ನು ಎರಡು ತೆನೆಗಳ ಮಧ್ಯದ ಅಂತರವಿರುವ ಸ್ಥಳದಲ್ಲಿ ಇವುಗಳನ್ನು ನಿರ್ಮಿಸಲಾಗಿದ್ದು ಎರಡು ತೆನೆಗಳ ಮಧ್ಯದಿಂದ ಚಿಕ್ಕ ತೋಪುಗಳನ್ನು ಶತ್ರುಗಳ ಮೇಲೆ ಸಿಡಿಸುವಂತೆ ತಂತ್ರವನ್ನು ರೂಪಿಸಿದ್ದಾರೆ. ಅಟ್ಟಾಲಕದ ಮೇಲೆ ನಿಂತು ಸೈನಿಕರು ಮದ್ದು ಗುಂಡು ಹಾಗೂ ಬಾಣಗಳಿಂದ ಶತ್ರುಗಳ ಮೇಲೆ ದಾಳಿ ಮಾಡುತ್ತಿದ್ದರು.

ಸುಲ್ತಾನ್ ಮಹಮ್ಮದ್ ಆದಿಲಶಾಹನು ತನ್ನ ರಾಜ್ಯದ ಆಡಳಿತಕ್ಕೆ 'ದಸ್ತುರುಲ ಅಮಲ' ಎಂಬ ಅನೇಕ ಶಾಸನಗಳನ್ನು ಮಾಡಿದ್ದನು. ಅದರಲ್ಲಿ ಅಟ್ಟಾಲಕದ ಮೇಲಿಂದಲೇ ನಿಂತು ದಾಳಿ ಮಾಡುವ ಮತ್ತೊಂದು ತಂತ್ರವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕೋಟೆಯ ಕಡೆಯ ಅಧಿಕಾರಿಗಳಿಗೆ ಅದರ ರಕ್ಷಣಾವ್ಯವಸ್ಥೆಯನ್ನು ಮಾಡುವ ಕಾರ್ಯ ವಿಧಾನವನ್ನು ಹೇಳಿದೆ. ಕೋಟೆಯ ರಕ್ಷಣೆಗೆ ಬರ್ಕಂಧಾಜರು(ಬಂದೂಕುಧಾರಿಗಳು) ಉಳಿದ ಅರ್ಧ ಇಟ್ಟಂಗಿ ಮತ್ತು ಕಲ್ಲಿನಿಂದ ಯುದ್ಧ ಮಾಡುವವರು('ವಿಟಾ' ಹೊಡೆಯುವವರು ಅಂದರೆ ಚೌಕೋನಿ ಇಟ್ಟಿಗೆಗೆ ಒಂದು ಬದಿಗೆ ಹಿಡಿಯಲು ಹಿಡಿಕೆ ಇರುತ್ತದೆ. ಉಳಿದ ಮೂರು ಬದಿಗಳು ಚೂಪಾಗಿರುತ್ತವೆ. ಆ ಇಟ್ಟಿಗೆಯನ್ನು ಬೀಸಿ ಹೊಡೆದರೆ ಎಲ್ಲಿ ತಾಗುತ್ತದೆಯೋ ಅಲ್ಲಿ ದೇಹ ತುಂಡು ತುಂಡಾಗಿ ಬಿಡುತ್ತದೆ. ಅದು ಶಿರದ ಗುರಿಯಾಗಿದ್ದರೆ ತಲೆ ಕತ್ತರಿಸಿ ಬೀಳುತ್ತದೆ. ಅವರಿಗೆ 'ಇಟ್ಟಿಗೆ ಹೊಡೆಯುವವರು' ಎಂದು ಹೆಸರು. ಇನ್ನೂ ಒಂದು ಅರ್ಥದಲ್ಲಿ 'ವಿಟಾ' ಎಂಬ ಹೆಸರಿನ ಭಲ್ಲೆಯಂಥ ಶಸ್ತ್ರವೂ ಇರುತ್ತದೆ. ಉದ್ದವಾದ ಕೋಲಿಗೆ ತಲವಾರಿನಂಥ ಹಲಗೆ ಇರುತ್ತದೆ. ಅದಕ್ಕೂ 'ವಿಟಾ' ಎಂದು ಹೆಸರು.

ಇದಕ್ಕೆ ಬಹುಶಃ ಮಜನೀಮ್ ಎಂದೂ ಕರೆಯುತ್ತಾರೆ. ಈ ಯಂತ್ರವನ್ನು ಇನ್ನೊಂದು ಕಡೆ ಇದೇ ಗ್ರಂಥದಲ್ಲಿ ಉಲ್ಲೇಖಿಸಿದೆ. ಮಜನಿಮ್ ಎಂದರೆ ಕಟ್ಟಿಗೆಯ ಒಂದು ದೊಡ್ಡ ಯಂತ್ರ. ಆ ಯಂತ್ರದಲ್ಲಿ ಕಲ್ಲು ಮಣ್ಣುಗಳನ್ನು ಇಟ್ಟು ಅಗ್ನಿಕವಣೆಯಲ್ಲಿ ಶತ್ರುಗಳ ಮೇಲೆ ಕೋಟೆಯ ಮೇಲಿನಿಂದ ಹಾರಿಸುತ್ತಾರೆ. ಅದಕ್ಕೆ ಮಜನೀಮ್ ಎಂದೂ ಹೆಸರು. ಅಂಥ ಶಸ್ತ್ರದಿಂದ ಹೊಡೆಯುವರು) ಇರಬೇಕು. ಅಲ್ಲದೆ ಈ ಯಂತ್ರವನ್ನು ಉಪಯೋಗಿಸುವವರನ್ನು ಹಾಗೂ ಬಾಣ ಹೊಡೆಯುವವರನ್ನು ನೌಕರಿಗೆ ನೇಮಕ ಮಾಡಿಕೊಳ್ಳಬೇಕು ಎಂದು ಹೇಳಲಾಗಿದೆ.[೮೫] ಹೀಗಾಗಿ ಅಟ್ಟಾಲಕ ಭಾಗವು ಹೆಚ್ಚು ಅಗಲವಾಗಿರುವಂತೆಯೇ ಕೋಟೆಯ ಗೋಡೆಯನ್ನು ನಿರ್ಮಿಸುತ್ತಿದ್ದರು. ಈ ರೀತಿಯ ರಚನೆ ನಮಗೆ ಸದ್ಯ ದಕ್ಷಿಣದ ಕೋಟೆ ಗೋಡೆಯಲ್ಲಿ ಆರ್.ಟಿ.ಓ. ಕಚೇರಿ ಹತ್ತಿರ ಮಾತ್ರ ಉಳಿದುಕೊಂಡು ಬಂದಿದೆ.

ಕೋಟೆ ಗೋಡೆಯಲ್ಲಿ ಬಂದೂಕು ಮತ್ತು ವೀಕ್ಷಣಾರಂಧ್ರಗಳಿದ್ದು ಅವು ತೆನೆಗಳು ಹಾಗೂ ತೆನೆಗಳ ಕೆಳಗಿನ ಕೈಪಿಡಿಗೋಡೆಯಲ್ಲಿ ೪೫೦, ೬೦೦, ೯೦೦ ಕೋನದಲ್ಲಿವೆ. ಅಂದರೆ ನೇರ, ಮಧ್ಯ ಕೆಳಹಂತದ ದೃಷ್ಟಿಕೋನವನ್ನು ಹೊಂದಿವೆ. ಕೈಪಿಡಿಗೋಡೆಯಲ್ಲಿರುವ ರಂಧ್ರವು ೪೫೦ ಕೋನಾಕಾರದಲ್ಲಿದ್ದು ಕಂದಕದ ಹತ್ತಿರ ಬರುವ ಶತ್ರುಗಳನ್ನು ದೃಷ್ಟಿಕೋನದಲ್ಲಿ ಇಟ್ಟುಕೊಂಡು, ೯೦೦ ರಂದ್ರಗಳು ದೂರ ದೃಷ್ಟಿಕೋನವನ್ನಿಟ್ಟುಕೊಂಡು ನಿರ್ಮಿಸಿದ್ದಾರೆ. ದೂರದಿಂದ ನೋಡಿದಾಗ ತೆನೆಯಲ್ಲಿ ಬಂದೂಕು ರಂಧ್ರವು ಒಂದೇ ಆಗಿ ಕಂಡರೂ ಅದರಲ್ಲಿ ಎರಡರಿಂದ ಐದು ಪ್ರತಿ ಕಿಂಡಿಗಳಿವೆ. ಅಂದರೆ ಒಂದೇ ರಂಧ್ರದಿಂದ ನೇರ, ಎಡ, ಬಲ, ಹಾಗೂ ಕೆಳಭಾಗದಲ್ಲಿ ನೋಡಿ ಶತ್ರುಗಳ ಮೇಲೆ ಆಕ್ರಮಣ ಮಾಡುವಂತೆ ನಿರ್ಮಿಸಿದ್ದಾರೆ. ಮಕ್ಕಾ ದ್ವಾರದ ಮೇಲೆ ಕಮಾನಾಕೃತಿಯಲ್ಲಿರುವ ಒಂದು ರಂಧ್ರದಲ್ಲಿ ಏಳು ಪ್ರತಿರಂಧ್ರಗಳಿವೆ. ಕೋಟೆಯ ಹೊರಭಾಗದಿಂದ ನೋಡಿದಾಗ ಈ ಬಂದೂಕು ರಂಧ್ರಗಳು ಕೋಟೆಗೋಡೆಯ ಮೇಲೆ ೨ ರಿಂದ ೩ ಅಡಿ ಉದ್ದ ೬ ಅಂಗುಲ ಅಗಲವಾಗಿರುವಂತೆ ಕಾಣುತ್ತವೆ ಮತ್ತು ತೆನೆಯಲ್ಲಿ ೪x೪ ಅಂಗುಲ ಚಿಕ್ಕ ಚಿಕ್ಕ ರಂಧ್ರಗಳ ಹಾಗೆ ಕಂಡುಬರುತ್ತವೆ.

ಕೋಟೆ ಗೋಡೆಯ ಭದ್ರತೆಗಾಗಿ ಇಳಿವೊರೆ ಇದ್ದಿರಬಹುದಾದ ಸಾಧ್ಯತೆಗಳಿವೆ. ಆದರೆ ಇಂದು ಆ ರೀತಿಯ ಲಕ್ಷಣಗಳು ಕಂಡುಬರುತಿಲ್ಲ. ಕೋಟೆಗೋಡೆಯ ಮೇಲೆ ಹತ್ತಲು ೧೦೦ ಮೀ. ಅಂತರದಲ್ಲಿರುವಂತೆ ಎದುರುಬದುರಾಗಿ ಗೋಡೆಗೆ ಹೊಂದಿಕೊಂಡು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಪ್ರತಿ ದ್ವಾರದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಕೋಟೆ ಗೋಡೆಯು ಇಂದು ಪೂರ್ವಭಾಗದಲ್ಲಿ ಗೋಳಗುಮ್ಮಜ, ಉತ್ತರ ಭಾಗದಲ್ಲಿ ಮತ್ತು ದಕ್ಷಿಣಭಾಗದಲ್ಲಿ ಅಲ್ಲಲ್ಲಿ ಪೂರ್ಣಪ್ರಮಾಣದ ಕೋಟೆಗೋಡೆ ಇದ್ದದ್ದು ಕಂಡುಬರುತ್ತದೆ. ಉಳಿದಂತೆ ಕೋಟೆಗೋಡೆಯು ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದುತ್ತಿದೆ.

ಕೋಟೆಗೋಡೆಯಲ್ಲಿ ಅಲ್ಲಲ್ಲಿ ಉಬ್ಬುಶಿಲ್ಪಗಳ ಫಲಕಗಳು ಕಂಡುಬರುತ್ತವೆ. ಅವು ಕೋಟೆಯ ಬಲಿಷ್ಠತೆಯನ್ನು ಸೂಚಿಸುವಂತೆ ತೋರುತ್ತದೆ. ಪೂರ್ವಭಾಗದ ಮಹಮ್ಮದ್ ದ್ವಾರದ ಹತ್ತಿರ ಇರುವ ಗೋಡೆಯ ಮೇಲೆ ಶಿಲ್ಪಫಲಕಗಳಲ್ಲಿ ಒಂದು ಕುದುರೆಯ ಮೇಲೆ ಕುಳಿತು ಕೈಯಲ್ಲಿ ಭರ್ಚಿಯನ್ನು ಹಿಡಿದುಕೊಂಡು ಹೋರಾಡುತ್ತಿರುವ ವೀರರ ಶಿಲ್ಪಫಲಕವಿದ್ದರೆ ಅದಕ್ಕೆ ಹೊಂದಿಕೊಂಡು ಮತ್ತೊಂದು ಶಿಲ್ಪಫಲಕದಲ್ಲಿ ನೃತ್ಯ ಮಾಡುತ್ತಿರುವ, ಅಲ್ಲಿಯೇ ಇರುವ ಇನ್ನೊಂದು ಶಿಲ್ಪಫಲಕವು ವೀರರು ಆನೆಯ ಮೇಲೆ ಕುಳಿತು ಹೋರಾಡುತ್ತಿರುವಂತೆ ಕೆತ್ತಲಾಗಿದೆ. ವೀರರು ಒಂದು ಕೈಯಲ್ಲಿ ಭರ್ಚಿಯನ್ನು ಹಿಡಿದು ಹೋರಾಡುವಂತೆ ಇನ್ನೊಂದು ಕೈಯಲ್ಲಿ ಅಂಕುಶದಿಂದ ಅನೆಯನ್ನು ನಿಯಂತ್ರಿಸುವಂತೆ ತೋರಿಸಲಾಗಿದೆ. ಈಶಾನ್ಯಕ್ಕಿರುವ ಕೋಟೆಗೋಡೆಯಲ್ಲಿ ಎರಡು ಆನೆಗಳು ಪರಸ್ಪರ ಕಾದಾಡುತ್ತಿರುವಂತೆ ತೋರಿಸಲಾಗಿದೆ. ದಕ್ಷಿಣದ ಕೋಟೆಗೋಡೆಯಲ್ಲಿ ಶಿಲ್ಪಫಲಕವು ಬಲಿಷ್ಠವಾದ ಸಿಂಹವು ಆನೆಯ ಮೇಲೆ ದಾಳಿ ಮಾಡಿ ಅದನ್ನು ಕೆಳಗೆ ಕೆಡವಿರುವಂತೆ ಚಿತ್ರಿಸಲಾಗಿದೆ. ಮನಗೂಳಿ ದ್ವಾರದಲ್ಲಿರುವ ಶಿಲ್ಪಫಲಕವು ಸಿಂಹದ ಕಾಲ್ಪನಿಕ ಚಿತ್ರದಂತೆ ಕಂಡುಬರುತ್ತದೆ. ಈಗಿನ ಮಕ್ಕಾದ್ವಾರದಲ್ಲಿರುವ ಶಿಲ್ಪಫಲಕವು ಎರಡು ಸಿಂಹಗಳು ಆನೆಯನ್ನು ತುಳಿಯುತ್ತಿರುವಂತೆ ಕೆತ್ತಲಾಗಿದೆ. ಈ ರೀತಿಯ ಶಿಲ್ಪಗಳ ಫಲಕಗಳು ಕೋಟೆಯ ಧೃಡತೆಯನ್ನು ಮತ್ತು ಬಲಿಷ್ಠತೆಯನ್ನು ತೋರಿಸಿಕೊಡುವ ಸಂಕೇತಗಳಾಗಿ ಕಂಡುಬರುತ್ತವೆ.

ಕಂದಕ

ಕೋಟೆ ಗೋಡೆಯನ್ನು ಸುತ್ತುವರಿದಂತೆ ಕಂದಕವು ಸುಮಾರು ೪೦ ರಿಂದ ೫೦ ಅಡಿ ಅಗಲ ೨೦ ಅಡಿ ಆಳವಾಗಿತ್ತು. ಕಂದಕವನ್ನು ಅಲ್ಲಲ್ಲಿ ಕಡಿದಾದ ಇಳಕಲ್ಲನ್ನು ನಿರ್ಮಿಸಿ ಅಲ್ಲಿ ಗುಪ್ತವಾದ ದಾರಿಯನ್ನು ಮಾಡಲಾಗಿದೆ.[೬೬] ಕೋಟೆಗೋಡೆಯ ಸುತ್ತಲೂ ಇರುವ ಕಂದಕವು ಗಟ್ಟಿಯಾದ ಸ್ತರವನ್ನು ಹೊಂದಿರುವುದರಿಂದ ಕಂದಕವು ಮಣ್ಣು ಬಿದ್ದು ಮುಚ್ಚುವ ಪ್ರಮೇಯವೆ ಬರುತ್ತಿರಲಿಲ್ಲ. ಆಳವಾದ ಮಣ್ಣು ಇದ್ದ ಕಡೆ ಕಂದಕದ ಸ್ತರವು ಗಟ್ಟಿಯಾಗಿರುವುದಿಲ್ಲ. ಅದು ಬೇಗನೆ ಹಾಳಾಗುತ್ತದೆ ಎಂದು ಕಂದಕದ ಎರಡೂ ಬದಿಯಲ್ಲಿ ಕಲ್ಲಿನಿಂದ ಗೋಡೆಯನ್ನು ಕಟ್ಟಿ ಮಣ್ಣಿನಲ್ಲಿ ನೀರು ಇಂಗದಂತೆ ತಡೆಗೋಡೆಗಳನ್ನು ನಿರ್ಮಿಸಿದ್ದಾರೆ. ಇದು ಕೋಟೆಯ ನಾಗಠಾಣ ದ್ವಾರದ ಹತ್ತಿರ ಕಾಣಬಹುದು. ಆದರೆ ಇಂದು ಕಂದಕವು ಸಂಪೂರ್ಣವಾಗಿ ಹಾಳಾಗಿದ್ದು ನಗರದ ಕೊಚ್ಚೆ ನೀರು ಹರಿಯುವ ಚರಂಡಿಗಳಾಗಿ ಮಾರ್ಪಾಡುಗೊಂಡಿವೆ. ಕಂದಕಗಳು ಕೋಟೆಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಕಾಣಬಹುದು. ಶತ್ರುಗಳು ಕೋಟೆಯನ್ನು ಸುಲಭವಾಗಿ ವಶಪಡಿಸಿಕೊಳ್ಳದಂತೆ ತಡೆಯಲು ಕೋಟೆಗೋಡೆಯ ಹತ್ತಿರ ನುಗ್ಗದಂತೆ ಕೋಟೆಗೋಡೆಗೆ ಹೊಂದಿಕೊಂಡು ಕಂದಕವನ್ನು ನಿರ್ಮಿಸಲಾಗುತಿತ್ತು. ಕಂದಕದಲ್ಲಿ ಮೊಸಳೆ ಹಾವುಗಳಂತಹ ಸರಿಸೃಪಗಳನ್ನು ಬಿಟ್ಟು ಕಂದಕವನ್ನು ದಾಟಿ ಬರದಂತೆ ಮಾಡಲಾಗುತಿತ್ತು. ಎರಡನೇ ಅಲಿ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ದೆಹಲಿಯ ಬಾದಶಹನ ಸೈನ್ಯಾಧಿಕಾರಿ ಜಯಸಿಂಗ ಮತ್ತು

ಮರಾಠ ದೊರೆ ಶಿವಾಜಿಯು ವಿಜಾಪುರದ ಮೇಲೆ ದಾಳಿ ಮಾಡಿದಾಗ ಅವರಿಗೆ ಆಹಾರ, ನೀರು ಸಿಗದಂತೆ ಮಾಡಲು ಕೆರೆ, ಬಾವಿ ಕಂದಕಗಳ ನೀರಿನಲ್ಲಿ ವಿವಿಧ ಪ್ರಕಾರದ ವಿಷವನ್ನು ಬೆರೆಸಲಾಯಿತು ಎಂದು 'ಬಸಾತಿನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.[೬೭] ವಿಜಾಪುರ ಕೋಟೆಯ ಸುತ್ತಲೂ ಇರುವ ಕಂದಕವು ಶತ್ರುಗಳು ಕೋಟೆಯನ್ನು ಆಕ್ರಮಿಸಲು ತಡೆಯೊಡ್ಡುತ್ತಿತ್ತು.

ಕ್ರಿ.ಶ. ೧೬೮೬ರಲ್ಲಿ ಮೊಗಲ ದೊರೆ ಔರಂಗಜೇಬನು ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಿದಾಗ ಕೋಟೆಯ ಕಂದಕವನ್ನು ಭೇದಿಸಿದ್ದರ ಬಗ್ಗೆ ವಿಸ್ತೃತವಾಗಿ 'ಫುತೂಹತೆ ಅಲಂಗೀರ್' ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಔರಂಗಜೇಬನ ದಾಳಿಯ ವೇಳೆಗೆ ಕ್ರಿ.ಶ. ೧೬೮೬ರಲ್ಲಿ ಸಿಕಂದರ್ ಆದಿಲ್‌ಶಾಹನು ಕಂದಕವನ್ನು ದುರಸ್ತಿಗೊಳಿಸಿ ಅದರಲ್ಲಿ ಪೂರ್ತಿ ನೀರು ನಿಲ್ಲುವಂತೆ ಮಾಡಿದನು. ಔರಂಗಜೇಬನೇ ನೇರವಾಗಿ ಯುದ್ಧದಲ್ಲಿ ತೊಡಗಿ ಕಂದಕಗಳನ್ನು ಮುಚ್ಚುವಂತೆ ಆದೇಶಿಸಿದನು. ಸೈಫ್ ಮತ್ತು ಇನ್ನಿತರ ಸರ್ದಾರರು ತಮ್ಮ ತಮ್ಮ ರಕ್ಷಣಾಕಂದಕಗಳಿಗೆ ಹೊರಗಿನಿಂದ ಬಂದು ಕೈಗೆ ಸಿಕ್ಕ ಮಣ್ಣಿನಿಂದ ಕೋಟೆಯ ಸುತ್ತಲಿನ ನೀರಿನ ಕಂದಕವನ್ನು ತುಂಬಲು ಪ್ರಯತ್ನಿಸಿದರು. ಕಂದಕದ ಸಮೀಪ ಹೋದವರೆಲ್ಲ ಕೋಟೆಯಿಂದ ಹಾರಿ ಬರುವ ಗುಂಡಿಗೆ ಆಹುತಿಯಾದರು. ಕಂದಕದೆಡೆಗೆ ಧೈರ್ಯದಿಂದ ಹೋದವರೆಲ್ಲ ಕೃಷ್ಣವರ್ಣದ ಬಂದೂಕುಧಾರಿಗಳ ಹೊಡೆತಕ್ಕೆ ನೆಲಕ್ಕುರುಳಿದರು. ಯಾರಿಗೂ ತಲೆಯೆತ್ತುವ ಧೈರ್ಯವಾಗಲಿ ಮೂರು ತಿಂಗಳವರೆಗೆ ಒಬ್ಬ ಮನುಷ್ಯನಿಗೂ ಕೋಟೆಯ ಹತ್ತಿರ ಹೋಗುವುದಾಗಲಿಲ್ಲ. ಏಕೆಂದರೆ ಬಹಳ ಆಳ ಮತ್ತು ಅಗಲವಾಗಿದ್ದ ಆ ಕಂದಕವನ್ನು ತುಂಬುವುದು ಸುಲಭವಾಗಿರಲಿಲ್ಲ. ಆನಂತರ ಚಪ್ಪರ ಕಟ್ಟುವವರಿಗೆ ಮತ್ತು ಕೆಲಸಗಾರರಿಗೆ "ಕಂದಕದಲ್ಲಿ ಮಣ್ಣು ಸುರಿಯುವ ಪ್ರತಿಯೊಬ್ಬರಿಗೂ ತುಂಬಿದ ಬುಟ್ಟಿ ಒಂದಕ್ಕೆ ನಾಲ್ಕಾಣೆಯಂತೆ ಕೊಡಲಾಗುವುದು" ಎಂದು ತಿಳಿಸಲಾಯಿತು. ಆಗ ಅಸಂಖ್ಯ ಕೆಲಸಗಾರರು ನೆರೆದು ಕಂದಕ ತುಂಬಲು ತೊಡಗಿದರು. ಅವರಲ್ಲಿ ಬಹುಸಂಖ್ಯೆಯಲ್ಲಿ ಶತ್ರುಗಳ ಬಾಣಕ್ಕೆ ಇಲ್ಲವೇ ಗುಂಡಿಗೆ ಬಲಿಯಾಗುವ ಅಂಜಿಕೆಯಿಂದ ಕೆಲಸಗಾರರು ಕೆಲಸ ಬಿಟ್ಟೇ ಹೋದರು. ಪ್ರತಿ ಬುಟ್ಟಿಗೆ ಒಂದು ರೂಪಾಯಿಯಂತೆ ಕೂಲಿ ಹೆಚ್ಚಿಸಲಾಯಿತು. ಆಮೇಲೆ ಅದನ್ನು ಒಂದು ಬಂಗಾರ ನಾಣ್ಯಕ್ಕೇರಿಸಲಾಯಿತು. ಹೀಗಾಗಿ ಮಣ್ಣು ತುಂಬುವ ಕೆಲಸ ನಿಲ್ಲಲಿಲ್ಲ. ಮನುಷ್ಯನಾಗಲಿ, ಪ್ರಾಣಿಯಾಗಲಿ ಸತ್ತರೆ ಆ ಹೆಣವನ್ನು ಎಳೆದೊಯ್ದು ಕಂದಕಕ್ಕೆ ಎಸೆಯಲಾಯಿತು. ಇದು ಎಷ್ಟು ವಿಪರೀತ ಹಂತಕ್ಕೆ ಮುಟ್ಟಿತೆಂದರೆ ಕೆಲವು ಕ್ರೂರ ಸೈನಿಕರು ಜೀವಂತ ಗಂಡು ಹೆಣ್ಣುಗಳನ್ನು ಅಲ್ಲೆಸೆದು ದುಡ್ಡು ಗಳಿಸಿದರು. ನಿಜಕ್ಕೂ ಭಯಂಕರ ಕಾಲ ಅದಾಗಿತ್ತು. ಹೀಗೆ ಬಿಡುವಿಲ್ಲದ ಪ್ರಯತ್ನದಿಂದ ರಕ್ಷಣಾತಗ್ಗುಗಳನ್ನು ನಿರ್ಮಿಸುತ್ತಾ ಕೋಟೆಯ ಸುತ್ತಲಿನ ಕಂದಕದ ಅಂಚಿಗೆ ಮುಟ್ಟಿದರು. ಕಂದಕ ಹತ್ತಿರ ಹತ್ತಿರ ತುಂಬುವ ಮಟ್ಟಕ್ಕೆ ಬಂದಿತು. ಘಾಜಿ ಉದ್‌ದೀನ್ ಖಾನನ ಉತ್ಕೃಷ್ಟ ಕೆಲಸಕ್ಕಾಗಿ ಅವನಿಗೆ ಒಂದು ಆನೆ ಮತ್ತು ಎರಡು ಕುದುರೆಗಳನ್ನು ನೀಡಿ ಸನ್ಮಾನಿಸಿದರು. ಉಳಿದ ಸರ್ದಾರರು ಖಡ್ಗ ಹಾಗೂ ಇತ್ಯಾದಿ ಕಾಣಿಕೆಗಳನ್ನು ಪಡೆದರು. ಸಾಮ್ರಾಟನೇ ಸ್ವತಃ ಸೈನ್ಯ ಕಾರ್ಯಾಚರಣೆ ಕೈಗೊಳ್ಳಲು ಸಾಧ್ಯವಾಗಲೆಂದು ರಕ್ಷಣಾಕಂದಕಗಳ ಸನಿಹದಲ್ಲಿಯೇ

ತನ್ನ ಡೇರೆ ಹೊಡೆಯಲು ಆಜ್ಞಾಪಿಸಿದನು. ಜೊತೆಗೆ ಇದೇ ವೇಳೆಗೆ ವಿಜಾಪುರದ ಸೈನ್ಯಕ್ಕೆ ಧನವಿನಿಯೋಗದ ತಗ್ಗುವಿಕೆಯಿಂದ, ವಸ್ತುಗಳ ಪೂರೈಕೆ ಎಲ್ಲ ಕಡೆಯಿಂದಲೂ ಸ್ಥಗಿತಗೊಂಡಿದ್ದರಿಂದ ವಿಜಾಪುರದ ಸೈನ್ಯ ಧೈರ್ಯಗುಂದಿ ಅವರ ಸೋಲಿಗೆ ಕಾರಣವಾಯಿತು.[೧೮]

ಬುರುಜುಗಳು

ವಿಜಾಪುರದ ಹೊರಕೋಟೆಗೆ ಸಂಬಂಧಿಸಿದಂತೆ ಬುರುಜುಗಳು ಕೂಡ ತುಂಬಾ ಪ್ರಾಮುಖ್ಯತೆಯನ್ನು ಪಡೆದಿವೆ. ಯುದ್ಧತಂತ್ರಕ್ಕೆ ಅನುಗುಣವಾಗಿ ಬುರುಜುಗಳನ್ನು ನಿರ್ಮಿಸಲಾಗಿದೆ. ಈ ಬುರುಜುಗಳ ರಚನೆ ಮತ್ತು ವಿನ್ಯಾಸದಲ್ಲಿ ಬಹಳಷ್ಟು ಮಾರ್ಪಾಟುಗಳಿದ್ದು ಇವು ವೃತ್ತಾಕಾರ, ಚೌಕಾಕಾರ, ಅರ್ಧವೃತ್ತಾಕಾರ, ಅಷ್ಟಕೋನಾಕೃತಿಯ ವಿವಿಧ ಪ್ರಕಾರದ ಬುರುಜುಗಳು ಕಂಡುಬರುತ್ತವೆ. ಕೋಟೆಗೋಡೆಗೆ ಹೊಂದಿಕೊಂಡಿರುವ ಈ ಬುರುಜುಗಳನ್ನು ಗೋಡೆ ಬೀಳದಂತೆ ಬಲಪಡಿಸಲು, ಯುದ್ಧಸಾಮಗ್ರಿಗಳ ಸಂಗ್ರಹ, ಸೈನಿಕರ ಚಲನವಲನಗಳನ್ನು ಕೋಟೆಯ ಸುತ್ತಲೂ ಗಮನವಿರಿಸಲು ಗೋಡೆಗೆ ಹೊಂದಿಕೊಂಡು ಎತ್ತರವಾಗಿ ಇಲ್ಲವೆ, ಅದಕ್ಕೆ ಸಮಾನಾಂತರವಾಗಿ ನಿರ್ಮಿಸಿದ್ದಾರೆ.

ಆದಿಲ್‌ಶಾಹಿಗಳ ಯುದ್ಧತಂತ್ರದಲ್ಲಿ ತೋಪುಗಳ ಬಳಕೆ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಹೀಗಾಗಿ ಇಂತಹ ಉದ್ದವಾದ ಮತ್ತು ಭಾರವಾದ ತೋಪುಗಳನ್ನು ಇಡಲು ಇವರ ಕಾಲದಲ್ಲಿ ಕೋಟೆಗೋಡೆಗೆ ಹೊಂದಿಕೊಂಡು ಮತ್ತು ಗೋಡೆಯ ಒಳಗೆ ಪ್ರತ್ಯೇಕವಾಗಿಯೇ ಒಂದೊಂದು ತೋಪುಗಳನ್ನು ಇಡಲು ಬುರುಜುಗಳನ್ನು ನಿರ್ಮಿಸಿದ್ದಾರೆ. ಕೆಲವು ಬುರುಜುಗಳ ಮೇಲೆ ಎರಡು ತೋಪುಗಳು ಇರುವುದನ್ನು ಕಾಣಬಹುದು. ಎರಡು ತೋಪುಗಳು ಇರುವ ಬುರುಜುಗಳನ್ನು ಮತ್ತಷ್ಟು ವಿಶಾಲವಾಗಿ ನಿರ್ಮಿಸಲಾಗಿದೆ.

ಕೋಟೆಗೋಡೆಯ ತಿರುವಿನಲ್ಲಿ ಬುರುಜುಗಳನ್ನು ಹೆಚ್ಚಾಗಿ ನಿರ್ಮಿಸಿದ್ದಾರೆ ಇದಕ್ಕೆ ಕಾರಣ ಕೋಟೆಗೋಡೆ ತಿರುವು ಪದೇ ಪದೇ ಬೀಳುವ ಸಂಭವನೀಯತೆ ಹೆಚ್ಚಾಗಿ ಇರುವುದರಿಂದ ಇಂತಹ ಕಡೆಗಳಲ್ಲಿ ಮತ್ತು ಎರಡು ಗೋಡೆಗಳು ಸಂಧಿಸುವ ಸ್ಥಳದಲ್ಲಿ ನಿರ್ಮಿಸಲಾಗಿದೆ. ವಿಜಾಪುರ ಕೋಟೆಯು ಸುಮಾರು ೧೦.೫ ಕಿ.ಮೀ. ವೃತ್ತಾಕಾರವಾಗಿ ಕಂಡುಬಂದರೂ ಅದು ಅಲ್ಲಲ್ಲಿ ಹಿಂಚಾಚು ಮುಂಚಾಚುಗಳನ್ನು ಪಡೆದುಕೊಂಡಿದೆ. ಹೀಗಾಗಿ ವಿಜಾಪುರ ಕೋಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬುರುಜುಗಳನ್ನು ನಿರ್ಮಿಸಲಾಗಿದೆ. ಕೆಲವು ಸಾಹಿತ್ಯಕೃತಿಗಳಲ್ಲಿ ವಿಜಾಪುರ ಕೋಟೆ ಬುರುಜುಗಳ ಕುರಿತಂತೆ ಉಲ್ಲೇಖವಿದೆ. 'ತಝ್ಕಿರತುಲ್ ಮುಲೂಕ್,(ಪು-೧೫೨) ಗ್ರಂಥದಲ್ಲಿ ಕೋಟೆಯ ಬುರುಜುಗಳ ಸಂಖ್ಯೆ ೧೨೦. ಪ್ರತಿಯೊಂದು ಬುರುಜುಗಳು ಮಜಬೂತಾಗಿದ್ದು ಕೋಟೆಯಂತೆಯೇ ಇವೆ.[೧೯] 'ಗುಲದಸ್ತಾಯೆ ಬಿಜಾಪುರ' ಗ್ರಂಥದಲ್ಲಿ ೧೨೬ ಬುರುಜುಗಳ ಉಲ್ಲೇಖವಿದೆ.[೨೦] ಕ್ಯಾಂಪ್‌ಬೆಲ್ ರಚಿತ ಗ್ಯಾಸೆಟಿಯರ್‌ನಲ್ಲಿ ದ್ವಾರಬಾಗಿಲುಗಳಿಗೆ ಹೊಂದಿಕೊಂಡಿರುವ ೧೦ ಬುರುಜುಗಳನ್ನು ಹೊರತುಪಡಿಸಿ ಬೇರೆ ಬೇರೆ ಪ್ರಕಾರದ ೯೬ ಬುರುಜುಗಳಿವೆ ಎಂದು ತಿಳಿಸುತ್ತದೆ.[೨೧] ಹೆನ್ರಿಕಝೀನ್ಸ್ ಅವರು ಕೂಡ ಇದೇ ಸಂಖ್ಯೆಯನ್ನೇ ಹೇಳಿದ್ದಾರೆ.

ಎಸ್.ಕೆ. ಜೋಶಿ ಅವರು ಈ ಕೋಟೆಯು ಅರ್ಧವೃತ್ತಾಕಾರದ ೬೦ಕ್ಕೂ ಹೆಚ್ಚು ಬುರುಜುಗಳನ್ನು ಹೊಂದಿದ್ದು ಹೊರಾಂಗಣದಲ್ಲಿ ೧೧೫ ರಿಂದ ೧೫೦ ಅಡಿಗೆ ಒಂದರಂತೆ ಬುರುಜುಗಳಿದ್ದವು ಹಾಗೂ ೫೦ ರಿಂದ ೬೦ ಅಡಿ ಸುತ್ತಳತೆಯನ್ನು ಹೊಂದಿವೆ ಎಂದಿದ್ದಾರೆ.[೭೨] ಇದೇ ರೀತಿ ಇನ್ನೂ ಕೆಲವು ವಿದ್ವಾಂಸರು ಬೇರೆ ಬೇರೆ ಅಂಕಿ ಅಂಶಗಳನ್ನು ಕೊಡುತ್ತಾರೆ. ಒಟ್ಟಾರೆಯಾಗಿ ಸುಮಾರು ೧೦೦ರಷ್ಟು ಬುರುಜುಗಳನ್ನು ಹೊಂದಿರುವ ವಿಜಾಪುರ ಕೋಟೆಯು ಇಂದು ಸಂಪೂರ್ಣವಾಗಿ ಅವನತಿಯ ಸ್ಥಿತಿಯಲ್ಲಿದೆ ಕೆಲವು ಬುರುಜುಗಳ ಅವಶೇಷಗಳು ಉಳಿದುಕೊಳ್ಳದಂತೆ ನಾಮಾವಶೇಷವಾಗುತ್ತಿರುವುದು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿದೆ.

ಶಾಸನಗಳು ಮತ್ತು ಸಾಹಿತ್ಯಕೃತಿಗಳು ಕೆಲವು ಬುರುಜುಗಳ ಹೆಸರು ಮತ್ತು ಅವುಗಳ ನಿರ್ಮಾಪಕರ ಹೆಸರುಗಳನ್ನು ಉಲ್ಲೇಖಿಸುತ್ತವೆ. ಈ ವಿಷಯವನ್ನು ಪ್ರತ್ಯೇಕ ಬುರುಜುಗಳನ್ನು ವಿವರಿಸುವಾಗ ಹೇಳಲಾಗಿದೆ. ಅವುಗಳಲ್ಲಿ ಹೈದರಬುರುಜು, ಶಾಹಾಬುರುಜು ಮತ್ತು ಮಹಾಬುರುಜು, ಶರ್ಜ್‌ಬುರುಜು, ಫಿರಂಗಿಶಾಹಿ ಬುರುಜುಗಳು ಪ್ರಮುಖವಾಗಿವೆ. ಇನ್ನು ಕೆಲ ಬುರುಜುಗಳು ಸಾಹಿತ್ಯಕೃತಿಯಲ್ಲಿ ಉಲ್ಲೇಖವಾದರೂ ಅವು ಇದ್ದ ಸ್ಥಳ ಯಾವುದು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತಿಲ್ಲ. ಕೆಲವು ಬುರುಜುಗಳ ಮೇಲೆ ತೋಫುಗಳಿದ್ದು ಪ್ರಮುಖವಾಗಿ ಮಲಿಕ್ ಮೈದಾನ್ ತೋಫು, ಅಲಿಬುರುಜುವಿನ ಮೇಲಿನ ತೋಫು, ಲಂಡಾಕಸ್ಸಾಬ್ ತೋಫು, ಮುಸ್ತಾಫಾಬಾದ ತೋಫು, ಸುಂದಾ ಬುರುಜುವಿನ ಮೇಲಿನ ತೋಫು, ಲಾಮಾಚಾರಿ ತೋಫು ಕಂಡುಬರುತ್ತವೆ. ಒಂದು ಬುರುಜುವಿನಿಂದ ಮತ್ತೊಂದು ಬುರುಜುವಿನ ನಡುವಿನ ಅಂತರ ೫೦ ರಿಂದ ೧೩೦ ಯಾರ್ಡ್‌ಗಳಾಗಿವೆ(೧ ಯಾರ್ಡ್-೩ ಅಡಿ).[೭೩]

ಈ ಬುರುಜುಗಳ ನಿರ್ಮಾಣ ಮತ್ತು ಅವುಗಳ ಮೇಲೆ ಸುಮಾರು ಟನ್‌ಗಟ್ಟಲೆ ಭಾರವಿರುವ ತೋಫುಗಳನ್ನು ಬುರುಜುವಿನ ಮೇಲೆ ಇಟ್ಟಿರುವುದು ಕೋಟೆ ನಿರ್ಮಾಣಕಾರನ ತಂತ್ರಗಾರಿಕೆ ಕುರಿತು ತಿಳಿದುಬರುತ್ತದೆ. ಕೋಟೆ ಗೋಡೆಗೆ ಹೊಂದಿಕೊಂಡಿರುವಂತೆ ಬುರುಜುಗಳನ್ನು ಮೊದಲು ಅರ್ಧವೃತ್ತಾಕಾರ, ವೃತ್ತಾಕಾರ, ಚೌಕಾಕಾರವಾಗಿ ಗೋಡೆಯನ್ನು ನಿರ್ಮಿಸಿ ಅದರ ಮಧ್ಯೆ ಕಲ್ಲು ಮತ್ತು ಮಣ್ಣನ್ನು ಹಾಕಿ ತುಂಬಲಾಗಿದೆ. ಬುರುಜುವಿನ ಕೈಪಿಡಿಗೋಡೆಯ ಮೇಲೆ ಸುತ್ತಲೂ ತೆನೆಗಳ ರಚನೆ ಕಂಡುಬರುತ್ತವೆ. ಅಲ್ಲದೆ ವಿಶ್ರಾಂತಿ ಕೋಣೆಗಳನ್ನು ನಿರ್ಮಿಸಲಾಗಿದೆ. ತೋಫುಗಳನ್ನು ಹಾರಿಸುವಾಗ ಅದರ ಗಡಚುಶಬ್ದದಿಂದ ತಪ್ಪಿಸಿಕೊಳ್ಳಲು ತೋಫಿನ ಪಕ್ಕದಲ್ಲಿಯೇ ಚೌಕಾಕಾರದ ಆಳವಾಗಿ ಹೌಜನ್ನು ನಿರ್ಮಿಸಿ ಅದರಲ್ಲಿ ನೀರು ಹಾಕುತ್ತಿದ್ದರು. ತೋಫಿನ ಮದ್ದಿಗೆ ಬೆಂಕಿ ಹಾಕಿ ಆ ನೀರಿನಲ್ಲಿ ಮುಳುಗುತ್ತಿದ್ದರು. ಹೀಗೆ ತೋಫಿನ ಗಡಚಿಕ್ಕುವ ಶಬ್ದದಿಂದ ತಪ್ಪಿಸಿಕೊಳ್ಳಲು ಈ ರೀತಿ ತಂತ್ರವನ್ನು ಉಪಯೋಗಿಸುತ್ತಿದ್ದರು. ಈ ರೀತಿಯ ರಚನೆ ಶಾರ್ಜಾಬುರುಜುವಿನಲ್ಲಿ ಈಗಲೂ ಕಾಣಬಹುದು.

ಭಾರವಾದ ತೋಫುಗಳನ್ನು ಬುರುಜುಗಳ ಮೇಲೆ ಇಟ್ಟಿರುವುದು ವಿಜಾಪುರದಲ್ಲಿ ಈಗಲೂ ಕಂಡುಬರುತ್ತವೆ. ಇಷ್ಟು ಭಾರವಾದ ತೋಫುಗಳನ್ನು ಅಷ್ಟು ಎತ್ತರದ ಮೇಲೆ ಇಟ್ಟಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಬಹುಶಃ ಬುರುಜುವಿನ ಒಂದು ಕಡೆ ಮಣ್ಣಿನ ಇಳಿವೋರೆಯನ್ನು ಮಾಡಿ ತೋಫುಗಳನ್ನು ಮೇಲಕ್ಕೆ ಉರುಳಿಸುತ್ತಾ ಹೋಗಿರಬಹುದು ಅಥವಾ ಬುರುಜುಗಳನ್ನು ಕಟ್ಟುವಾಗ ತೋಫುಗಳನ್ನು ಇಟ್ಟು ಬುರುಜು ಎತ್ತರವಾಗಿ ನಿರ್ಮಿಸಿದಂತೆ ತೋಫುಗಳನ್ನು ಹಂತ ಹಂತವಾಗಿ ಮೇಲ್ಭಾಗಕ್ಕೆ ಇಡುತ್ತಾ ಹೋಗಿರಬಹುದು. ಇಲ್ಲಿ ಇನ್ನೊಂದು ಗಮನಾರ್ಹವಾದ ವಿಷಯವೆಂದರೆ ಇಲ್ಲಿ ದೊರೆಯುವ ಬಹುತೇಕ ತೋಫುಗಳು ಕಬ್ಬಿಣದ ರಿಂಗುಗಳನ್ನು ಎರಕ ಹೊಯ್ದು ಮಾಡಲಾಗಿದೆ. ಅಂದರೆ ಮೊದಲು ಉದ್ದವಾದ ಪಟ್ಟಿಗಳನ್ನು ವೃತ್ತಾಕಾರವಾಗಿ ಜೋಡಿಸಿ ಕೊಳವೆ ಹಾಗೆ ಮಾಡಿದ್ದಾರೆ. ಆ ಕೊಳವೆಯ ಮೇಲೆ ಕಬ್ಬಿಣದ ರಿಂಗುಗಳನ್ನು ಜೋಡಿಸಿ ಎರಕ ಹೊಯ್ದದ್ದು ಕಂಡುಬರುತ್ತದೆ. ಈ ಕೆಲಸವನ್ನು ಬುರುಜುವಿನ ಮೇಲೆಯೇ ಮಾಡಬಹುದು. ಅಲ್ಲದೆ ಎತ್ತರವಾದ ದಪ್ಪಕಟ್ಟಿಗೆಯ ಕಂಬಗಳಿಂದ ತಯಾರಿಸಿದ ಯಂತ್ರಕ್ಕೆ ಆನೆಗಳನ್ನು ಬಳಸಿ ಇಟ್ಟಿರಬಹುದು. ಈ ರೀತಿಯಾಗಿ ತೋಫುಗಳನ್ನು ಬುರುಜುವಿನ ಮೇಲೆ ಇಡಲು ತಂತ್ರಗಾರಿಕೆಯನ್ನು ಬಳಸಿರಬಹುದು.

ಬುರುಜುಗಳು ಕೋಟೆಗೋಡೆಯ ರಕ್ಷಣೆ ಮತ್ತು ಶತ್ರುಗಳಿಂದ ಕೋಟೆಯನ್ನು ರಕ್ಷಣೆ ಮಾಡುವುದಕ್ಕಷ್ಟೇ ಉಪಯೋಗಿಸುತ್ತಿದ್ದರು. ಆದರೆ ಆದಿಲ್‌ಶಾಹಿ ಸುಲ್ತಾನರು ಬುರುಜುಗಳನ್ನು ಯಾರಾದರೂ ಬೇರೆ ರಾಜ್ಯದ ಸುಲ್ತಾನರನ್ನು ಅಥವಾ ಅಮೀರರ ಜೋತೆ ಭೇಟಿಗಾಗಿ, ಗುಪ್ತ ಮಾತುಕತೆಗಾಗಿ ಅಥವಾ ಸ್ವತಃ ಸುಲ್ತಾನರ, ಅಮೀರರ ಜೊತೆ ಗುಪ್ತಸಮಾಲೋಚನೆ ಮಾಡಲು ಕೂಡ ಉಪಯೋಗಿಸುತ್ತಿದ್ದದು ಕಂಡುಬರುತ್ತದೆ. ಎರಡನೇ ಅಲಿ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ರಾಜಜಯಸಿಂಗ ಮತ್ತು ಶಿವಾಜಿ ಜೊತೆಗೂಡಿ ವಿಜಾಪುರದ ಮೇಲೆ ದಾಳಿ ಮಾಡಲು ಬಂದಾಗ ಅಲಿಯು ಗೋಲ್ಕೊಂಡದ ಸುಲ್ತಾನ ಅಬ್ದುಲ್ಲಾ ಕುತುಬಶಾಹನಿಗೆ ಸಹಾಯಹಸ್ತ ಕೇಳುತ್ತಾನೆ. ಇದಕ್ಕೆ ಒಪ್ಪಿ ಕುತುಬಶಾಹನು ಸರದಾರ ನೇಕಮಖಾನ್‌ನನ್ನು ಭಾರಿ ಸೈನ್ಯದೊಂದಿಗೆ ವಿಜಾಪುರಕ್ಕೆ ಕಳುಹಿಸಿಕೊಟ್ಟನು. ಆಗ ಸ್ವತಃ ಸುಲ್ತಾನನೇ ಬಹು ದೊಡ್ಡದಾದ ಅಲೀ ಬುರುಜದ ಮೇಲೆ ತಮ್ಮಿಬ್ಬರ ಭೇಟಿಗಾಗಿ ಯೋಜನೆಯನ್ನು ರೂಪಿಸಿದ್ದು ತಿಳಿದುಬರುತ್ತದೆ.[೭೪] ಇಂತಹುದೇ ಇನ್ನೊಂದು ಉದಾಹರಣೆ ಕೊಡುವುದಾದರೆ ಮೊಗಲರು ವಿಜಾಪುರದ ಮೇಲೆ ದಾಳಿ ಮಾಡುವ ಮುಂಚಿತವಾಗಿ ಮರಾಠ ಸಂಭಾಜಿಯ ಜೊತೆಗೆ ಸ್ನೇಹ ಬೆಳೆಸಿದ್ದರು. ಸಂಬಾಜಿಯು ದಿವಾನನಾದ ಮೇಲಗಿರಿ ಪಂಡಿತ ಮತ್ತು ಸರದಾರರನ್ನು ಸಿಕಂದರನ ಸಹಾಯಕ್ಕೆ ಕಳುಹಿಸಿದನು. ಸಿಕಂದರ್ ಅದಿಲ್‌ಶಾಹನು ಜೋಹಾರಾಪುರದ ಬುರುಜುವಿನ ಮೇಲೆ ಬಂದು ಸಂಭಾಜಿಯ ಸರದಾರರಿಂದ ಸಲಾಮುಗಳನ್ನು ಹಾಗೂ ಮುಜುರೆಗಳನ್ನು ಸ್ವೀಕರಿಸಿದನು. ಇದೇ ಸಂದರ್ಭದಲ್ಲಿ ಸಿಕಂದರನು ಮೇಲಗಿರಿ ರಾಯನಿಗೆ ಮೋತಮದ್‌ರಾವ ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದ್ದು ತಿಳಿದುಬರುತ್ತದೆ.[೭೫] ಈ ರೀತಿ

ಬುರುಜುಗಳನ್ನು ಬೇರೆ ಬೇರೆ ಉದ್ದೇಶಗಳಿಗೆ ಬಳಸಿರುವುದು ಕಂಡುಬರುತ್ತವೆ. ಪ್ರಮುಖ ಬುರುಜುಗಳು ಈ ಕೆಳಗಿನಂತಿವೆ.

ಹೈದರ ಬುರುಜು

ಪಶ್ಚಿಮಭಾಗದಲ್ಲಿ ಕಂಡುಬರುವ ಹೈದರಬುರುಜು ಕೋಟೆಗೋಡೆಗೆ ಹೊಂದಿಕೊಂಡಿರದೆ ಕೋಟೆ ಗೋಡೆಯಿಂದ ಸುಮಾರು ಅಂತರದಲ್ಲಿದೆ. ಈ ಬುರುಜು ನಿರ್ಮಿಸಿದ ನೆಲಹಾಸು ಕೋಟೆಯ ಉಳಿದ ಭಾಗಕ್ಕಿಂತ ಸ್ವಲ್ಪ ಸ್ವಾಭಾವಿಕವಾಗಿ ಎತ್ತರವಾಗಿದೆ. ಹೀಗಾಗಿ ಬುರುಜು ಮತ್ತಷ್ಟು ಎತ್ತರವಾಗಿ ಕಂಡುಬರುತ್ತದೆ. ಮೊದಲನೇ ಅಲಿ ಆದಿಲ್‌ಶಾಹ ಮತ್ತು ಎರಡನೇ ಇಬ್ರಾಹಿಮ್‌ನ ಸರದಾರನಾಗಿದ್ದ ಹೈದರ್‌ಖಾನನು ಈ ಬುರುಜನ್ನು ಕಟ್ಟಿಸಿರುವುದರಿಂದ ಇದಕ್ಕೆ ಹೈದರಬುರುಜು ಎಂದು ಕರೆಯುತ್ತಾರೆ. ಈ ಬುರುಜು ಎತ್ತರವಿರುವುದರಿಂದ ಇದಕ್ಕೆ 'ಉಪರಿಬುರುಜು' ಎಂದು ಹಾಗೂ ಕಾಲಾಂತರದಲ್ಲಿ ಕುಳ್ಳು(ಉಪಲಿ) ಹಚ್ಚಲು ಉಪಯೋಗಿಸುತ್ತಿದ್ದರಿಂದ ' ಉಪಲೀಬುರುಜು' ಎಂಬ ಹೆಸರು ಬಂದಿವೆ.[೭೬]

ಕ್ರಿ.ಶ. ೧೫೮೩–೮೪ರ ಶಾಸನವೊಂದರ ಪ್ರಕಾರ ಎರಡನೇ ಇಬ್ರಾಹಿಮ್ ಆದಿಲ್‌ಶಾಹನ ಸಹಾಯಕ ಅಧಿಕಾರಿ ಹೈದರಖಾನನು ಹೈದರಬುರುಜನ್ನು ನಿರ್ಮಿಸಿದನೆಂದು ಉಲ್ಲೇಖಿಸುತ್ತದೆ.[೭೭] ಇದು ಉಪರಿಬುರುಜು ಎಂದೇ ಪ್ರಸಿದ್ಧವಾಗಿದೆ. 'ಕಿತಾಬ್–ಎ–ನೌರಸ'ದಲ್ಲಿ ಹೈದರಖಾನ್ ಬಿನ್ ಜಾಮಿಲ್ ಎಂಬುವವನಿಂದ ಕ್ರಿ.ಶ. ೧೫೮೩ರಲ್ಲಿ ಎರಡನೇ ಇಬ್ರಾಹಿಮ್ ಆದಿಲ್‌ಶಾಹನ ಸೇನಾನಿಗಳಲ್ಲಿ ಒಬ್ಬನಾದ ಇವನಿಗೆ ಹೈದರ ಅಥವಾ ಉಪ್ಲಿ ಅಥವಾ ಉಪ್ರಿಬುರ್ಜ್ ಎಂಬ ಬೃಹತ್ ಫಿರಂಗಿ ಗೋಪುರವನ್ನು ಕಟ್ಟುವ ಕಾರ್ಯವನ್ನು ವಹಿಸಲಾಗಿತ್ತು[೭೮] ಎಂದು ತಿಳಿಸುತ್ತದೆ. ಹಿಜರಿ ಶಕ ೯೯೩(ಕ್ರಿ.ಶ. ೧೫೮೫)ರಲ್ಲಿ ಹೈದರೀ ಬುರುಜನ್ನು ಎರಡನೇ ಇಬ್ರಾಹಿಮ್ ಆದಿಲ್‌ಶಾಹನು ನಿರ್ಮಿಸಿದನು.[೭೯] ಈ ಬುರುಜನ್ನು ಕಟ್ಟಿಸಿದ್ದರ ಬಗೆಗೆ ಒಂದು ಆಖ್ಯಾಯಿಕೆಯಿದೆ. ಒಂದನೆಯ ಅಲಿಯು ತನ್ನ ಎಲ್ಲ ಸರದಾರರಿಗೆ ಕೋಟೆಯ ಗೋಡೆಯನ್ನು ಕಟ್ಟಲು ಸಹಾಯ ಮಾಡಬೇಕೆಂದು ಆಜ್ಞಾಪಿಸಿದನಂತೆ. ಹೈದರಖಾನ್‌ನು ಕೋಟೆಯ ನಿರ್ಮಾಣದ ವೇಳೆಯಲ್ಲಿ ಬೆಳಗಾವಿ, ಧಾರವಾಡ ಕಡೆ ಸೈನಿಕ ಕಾರ್ಯಾಚರಣೆಯಲ್ಲಿ ತೆರಳಿದ್ದನು. ಹೀಗಾಗಿ ಅವನು ಕೋಟೆಯ ನಿರ್ಮಾಣದ ಕೆಲಸದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ತನ್ನ ಕರ್ತವ್ಯವನ್ನು ಮಾಡದೆ ಹೋದುದಕ್ಕೆ ಅವನು ಪರಿತಪಿಸಿದನು. ಇದನ್ನು ಕಂಡು ಒಂದನೆಯ ಅಲಿಯು ಹೈದರ ಮತ್ತು ಆತನ ಸಂಗಡಿಗರಿಗೆ ಒಂದು ಪ್ರತ್ಯೇಕವಾದ ಬುರುಜನ್ನು ಕಟ್ಟಲು ಆಜ್ಞಾಪಿಸಿದನಂತೆ.[೮೦] ಹೀಗಾಗಿ ಹೈದರನು ಈ ಬುರುಜನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಬಹುಶಃ ಹೈದರಖಾನ್‌ನು ಅಲಿ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ಈ ಬುರುಜುವಿನ ಬುನಾದಿಯನ್ನು ಹಾಕಿ ಅದನ್ನು ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ಪೂರ್ಣಗೊಳಿಸಿರಬಹುದು.

ವೃತ್ತಾಕಾರ ಅಥವಾ ಅಂಡಾಕೃತಿಯಲ್ಲಿರುವ ಈ ಬುರುಜು ಸುಮಾರು ೮೦ ಅಡಿ ಎತ್ತರವಿದೆ. ಇದರ ಮೇಲ್ಭಾಗಕ್ಕೆ ಹೋಗಲು ಬುರುಜುವಿಗೆ ವೃತ್ತಾಕಾರದ ರಚನೆಯಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಮೆಟ್ಟಿಲುಗಳಿವೆ ಅದರ ಮೇಲ್ಭಾಗದಲ್ಲಿ ಯುದ್ಧದಂತಹ ಸನ್ನಿವೇಶದಲ್ಲಿ ಉಪಯೋಗಿಸಲು ನೀರಿನ ಹೌಜು ಮತ್ತು ಮದ್ದಿನ ಕೋಣೆಗಳು ಕಂಡುಬರುತ್ತವೆ. ಮೇಲೆ ಯುದ್ಧಸಾಮಗ್ರಿಗಳನ್ನಿಡಲು ಸಾಕಷ್ಟು ಸ್ಥಳಾವಕಾಶವಿದೆ. ಈಗಲೂ ಬುರುಜುವಿನ ಮೇಲೆ ಎರಡು ತೋಫುಗಳಿದ್ದು ಒಂದು ಉದ್ದವಾದ ತೋಫನ್ನು ಲಂಬಚರ್ರಿ ಎಂದು ಕರೆಯುತ್ತಾರೆ. ಇನ್ನೊಂದರ ಹೆಸರು ತಿಳಿದುಬರುವುದಿಲ್ಲ. ಆದರೆ 'ಫುತೂಹತೆ ಅಲಂಗೀರ್' ಕೃತಿಯಿಂದ ತಿಳಿದುಬರುವಂತೆ ಮುಲ್ಕ–ಇ–ಮೈದಾನ ತೋಪು ಇರುವ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ 'ರಣಮಹಲ' ಮತ್ತು 'ಹಜಾರ ಬಾಂಗಡಿ' ಎಂಬ ಅದೇ ತರದೆ ತೋಫುಗಳೆರಡನ್ನೂ ಭದ್ರ ಗೋಪುರದ ಮೇಲೆ ಇಡಲಾಗಿತ್ತು ಎಂದು ತಿಳಿಸುತ್ತದೆ.[೮೧] ಹೀಗಾಗಿ ಇಲ್ಲಿ ಉಲ್ಲೇಖಿಸುವ ಈ ಎರಡೂ ತೋಫುಗಳು ಹೈದರಬುರುಜುವಿನ ಮೇಲೆ ಇರುವ ತೋಫುಗಳೆಂದೇ ಅಭಿಪ್ರಾಯಿಸಬಹುದು.

ಅಲಿಬುರುಜು

ಗೋಳಗುಮ್ಮಜದ ಉತ್ತರಕ್ಕೆ ಇರುವ ಅಲಿಬುರುಜು ವಿಜಾಪುರದ ಎತ್ತರವಾದ ಹಾಗೂ ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡು ಬಂದಿರುವ ಬುರುಜುಗಳಲ್ಲಿ ಒಂದಾಗಿದೆ. ಇದು ಸುಮಾರು ೭೦ ಅಡಿಗಳಷ್ಟು ಎತ್ತರವಾಗಿದ್ದು ವೃತ್ತಾಕಾರವಾಗಿದೆ. ಇದಕ್ಕೆ ಮೇಲೆ ಹತ್ತಲು ಉತ್ತರಭಾಗದಲ್ಲಿ ಮೆಟ್ಟಿಲುಗಳಿವೆ. ಬುರುಜುವಿನ ಮೇಲೆ ಎರಡು ಅಡಿ ಎತ್ತರವಾದ ವೃತ್ತಾಕಾರ ಕಟ್ಟೆಯ ಮೇಲೆ ತೋಫನ್ನು ಇಡಲಾಗಿದೆ. ಈ ತೋಫನ್ನು ಅಲಿಬುರುಜು ತೋಫು ಎಂದೇ ಕರೆಯುತ್ತಾರೆ.

ಶರ್ಫ್‌ಬುರುಜು

ಈಗ ಪುರಾತತ್ವ ಇಲಾಖೆಯಲ್ಲಿರುವ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಹೊರಡಿಸಿದ ಪರ್ಶಿಯನ್ ಶಾಸನವು ಕ್ರಿ.ಶ. ೧೬೪೧–೧೬೪೨ರ ಕಾಲದ್ದಾಗಿದ್ದು ಇದು ಮೂಲತಹಃ ಪಾನೀಮಹಲ್‌ಗೆ ಸಂಬಂಧಿಸಿದ್ದಾಗಿದೆ. ಷಾ ಇಬ್ರಾಹಿಮ್ ಆರಂಭಿಸಿದ ಬುರುಜಿನ ಕಟ್ಟಡವು ಕ್ರಿ.ಶ. ೧೬೪೧–೪೨ರಲ್ಲಿ ಸಂಪೂರ್ಣವಾಯಿತೆಂದು ಇದರಲ್ಲಿ ವಿವರಿಸಿದೆ. ಬುರುಜಿನ ಹೆಸರನ್ನು ಷರಾಪಬುರುಜು ಎಂದು ಇದರಲ್ಲಿ ತಿಳಿಸಿದೆ.[೮೨] ಆದರೆ ಈ ಬುರುಜು ಯಾವ ದಿಕ್ಕಿಗೆ ಇದೆ ಎಂಬುದು ತಿಳಿದುಬರುತ್ತಿಲ್ಲ. ಆದರೂ 'ಬಸಾತೀನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ಮಹಮ್ಮದ್ ಆದಿಲ್‌ಶಾಹನಿಗಿಂತಲೂ ಪೂರ್ವದ ಆದಿಲ್‌ಶಾಹಿ ಸುಲ್ತಾನರು ಚಿತ್ತಸಮಾಧಾನಕ್ಕಾಗಿ ಮತ್ತು ಮನೋರಂಜನೆಗಾಗಿ ಒಂದು ವೇಳೆ ಆನೆಗಳ ಯುದ್ಧವನ್ನು ಏರ್ಪಡಿಸಿ ಅದರ ಚಮತ್ಕಾರವನ್ನು ನೋಡಿ ಸಂತೋಷಪಡಬೇಕೆಂದು ಬಾದಶಹನ ಮನಸ್ಸಿನಲ್ಲಿ ಬಂದರೆ ಆಗ ಅದನ್ನು ಕೋಟೆಯ ಒಳಗೆಯೇ ಏರ್ಪಡಿಸಿ ಆ ತಮಾಷೆಯನ್ನು ನೋಡುತ್ತಿದ್ದರು. ಸುಲ್ತಾನ ಮಹಮ್ಮದ ಬಾದಶಹನು

ತನ್ನ ಕಾಲಕಿರ್ದಿಯಲ್ಲಿ ಕೋಟೆಯ ಹೊರಗೆ ಆನೆಗಳ ಸಮರಸ್ಪರ್ಧೆಗಾಗಿ ಒಂದು ವಿಸ್ತೀರ್ಣವಾದ ಮೈದಾನವನ್ನೇ ಸಿದ್ಧಪಡಿಸಿದ್ದನು. ಆ ಬಯಲು ಶರ್ಫ್‌ಬುರುಜಿನ ಮುಂದೆ ಇದೆ. ಆ ಸ್ಥಳವನ್ನು ಆನೆಗಳ ಸಮರಕ್ಕಾಗಿ ನಿರ್ಧರಿಸಿದ್ದನು. ಆ ಬಯಲು ಇಂದು ಬಾಕೆಟ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ[೮೩] ಎಂದು ಹೇಳಲಾಗುತ್ತದೆ. ಆದರೆ ಇಂದು ಈ ಬುರುಜು ಯಾವ ದಿಕ್ಕಿನಲ್ಲಿ ಬರುತ್ತದೆ ಎಂಬುದು ತಿಳಿದುಬಂದಿಲ್ಲ. ಜೊತೆಗೆ ಇಲ್ಲಿ ಉಲ್ಲೇಖಿಸುವ ಬಾಕೆಟ ಹಾಲ ಎಂಬ ಮೈದಾನವು ಯಾವುದು ಎಂಬುದರ ಬಗ್ಗೆ ಚರ್ಚಾಸ್ಪದವಾಗಿದೆ.

ಲಂಡಾಕಸ್ಸಾಬ್ ಬುರುಜು

ಕೋಟೆಯ ದಕ್ಷಿಣಕ್ಕೆ ಫತೇ ದ್ವಾರದ ಹತ್ತಿರ ಇರುವ ಈ ಬುರುಜನ್ನು ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಅವಧಿಯಲ್ಲಿ ಕ್ರಿ.ಶ. ೧೬೦೯ರಲ್ಲಿ ಹಜರತ್ ಶಾ ಎಂಬುವವನು ಕಟ್ಟಲು ಪ್ರಾರಂಭಿಸಿದನು. ಇನ್ನೊಂದು ಶಾಸನವು ಲಂಡಾಕಸ್ಸಾಬ್ ಬುರುಜುವಿನ ಮೇಲೆ ಇರುವ ಎರಡನೇ ಅಲಿ ಆದಿಲ್‌ಶಾಹ ಘಾಜಿ (ಎರಡನೆಯ ಅಲಿ ಆದಿಲ್‌ಶಾಹ)ಯ ಎಂಬ ದಖ್ಖನಿನ ದೊರೆಯಾಗಿರಲು ಕ್ರಿ.ಶ. ೧೬೬೬–೬೭ರ ಅವಧಿಯಲ್ಲಿ ಕಟ್ಟಲಾಯಿತೆಂದು, ಅಲ್ಲಿ ಮಲಿಕ್‌ಜಾಬತ್ತ ಎಂಬ ತೋಫನ್ನು ಸ್ಥಾಪಿಸಲಾಯಿತೆಂದೂ ಇದು ತಿಳಿಸುತ್ತದೆ.[೮೪] ಈ ಶಾಸನಗಳನ್ನು ಗಮನಿಸಿದಾಗ ಇದು ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಅವಧಿಯಲ್ಲಿ ನಿರ್ಮಾಣವಾಗಿದ್ದು ಮುಂದೆ ಅದನ್ನು ಮತ್ತೆ ಜೀರ್ಣೋದ್ಧಾರಗೊಳಿಸಿ ಎರಡನೆಯ ಶಾಸನವನ್ನು ಹಾಕಿಸಿರುವ ಸಾಧ್ಯತೆಗಳಿವೆ ಎಂದು ಹೇಳಬಹುದು.

ನ್ಯಾಮತ್‌ಬುರುಜು

ಇದು ಲಂಡಾಕಸ್ಸಾಬ್ ಬುರುಜಿಗೆ ಪಶ್ಚಿಮದಲ್ಲಿರುವ ನಾಲ್ಕನೇ ಬುರುಜುವಿನಲ್ಲಿರುವ ಶಾಸನವು ಬುರ್ಜೆ–ಇ–ನಿಯಾಮತ್ ಎಂಬ ಈ ಬುರುಜನ್ನು ನಿಯಾಮತ ಖಾನನೆಂಬುವವನು ಕಟ್ಟಿದ ಸಂಗತಿಯನ್ನು ಇದರಲ್ಲಿ ದಾಖಲಿಸಿದೆ.[೮೫] ಆದರೆ ಔರಂಗಜೇಬನು ವಿಜಾಪುರದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಈ ನ್ಯಾಮತ್‌ಬುರುಜನ್ನು ಬೀಳಿಸಿ ನೆಲಸಮ ಮಾಡಿದ್ದಾನೆ[೮೬] ಎಂದು 'ಬಸಾತಿನೆ ಸಲಾತಿನ' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ ಇದು ಯಾವ ಭಾಗದಲ್ಲಿತ್ತು ಎಂಬುದು ತಿಳಿದುಬರುವುದಿಲ್ಲ.

ಶಾಹಬುರುಜು ಮತ್ತು ಮಹಾಬುರುಜು

ಅಲಿ ಆದಿಲ್‌ಶಾಹನು ಹಿಜರಿಶಕೆ ೯೬೭(ಕ್ರಿ.ಶ. ೧೫೫೯–೧೫೬೦)ರಲ್ಲಿ ಶಾಹಾಬುರುಜು ಮತ್ತು ಮಹಾಬುರುಜುಗಳ ಬುನಾದಿಯನ್ನು ಹಾಕಿದನು.[೮೭] ಆದರೆ ಇಂದು ಈ ಬುರುಜುಗಳು ಯಾವುವು ಎಂಬುದು ತಿಳಿದುಬರುವುದಿಲ್ಲ.

ಸುಂದಾಬುರುಜು

ಇದು ಶಾಹಪುರ ದ್ವಾರದ ಉತ್ತರಕ್ಕಿದೆ. ಕೋಟೆಯ ನಗರದ ವಾಯವ್ಯ ದಿಕ್ಕಿನಗೋಡೆ ತಿರುವಿನಲ್ಲಿ ಈ ಸುಂದಾಬುರುಜನ್ನು ನಿರ್ಮಿಸಲಾಗಿದೆ. ಈ ಬುರುಜುವಿನ ಬದಿಯಲ್ಲಿ ಉದ್ದವಾದ ಕಬ್ಬಿಣದ ತೋಪಿದೆ.[೮೮] ಇದು ೩೦ ಅಡಿ ಎತ್ತರ ಉಳಿದುಕೊಂಡಿದ್ದು ಇಂದು ಬಹುತೇಕ ಶಿಥಿಲಾವಸ್ಥೆಯಲ್ಲಿದೆ. ಉಳಿದಂತೆ ಬರುಜುವಿನ ಮೇಲ್ಭಾಗ ಹಾಳಾಗಿರುವುದರಿಂದ ಇದರ ಎಲ್ಲ ಲಕ್ಷಣಗಳು ಕಂಡುಬರುವುದಿಲ್ಲ.

ಶಾರ್ಜಾಬುರುಜು

ಕೋಟೆಗೋಡೆಯಿಂದ ಮುಂಚಾಚಿರುವ ಈ ಬುರುಜು ಮಹಮ್ಮದ ಆದಿಲ್‌ಶಾಹನ ಸೇನಾನಿ ಮುರಾರಿರಾವ ಪಂಡಿತನು ಕ್ರಿ.ಶ. ೧೬೩೨ರಲ್ಲಿ ಪರಾಂಡ ಕೋಟೆಯಿಂದ ತಂದ ಮಲಿಕ್-ಇ-ಮೈದಾನ ತೋಫನ್ನು ಇಡಲು ಕೋಟೆಯ ಪಶ್ಚಿಮದಿಕ್ಕಿಗೆ ಈ ಬುರುಜನ್ನು ನಿರ್ಮಿಸಲಾಯಿತು ಎಂದು ಹೇಳಲಾಗುತ್ತದೆ. ಆದರೆ ಎರಡನೆ ಅಲಿ ಆದಿಲ್‌ಶಾಹನ ಕಾಲದ ಶಾರ್ಜಾ ಬುರುಜುವಿನಲ್ಲಿರುವ ಶಾಸನ ಈ ಬುರುಜನ್ನು ಐದು ತಿಂಗಳ ಮುದ್ದತ್ತಿನಲ್ಲಿ ನಿಗದಿತ ವೇಳೆಯಲ್ಲಿ ಮಂಜಲೇಷಾಃನು ಕ್ರಿ.ಶ. ೧೬೫೮-೫೯ರಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ.[೮೯] ಈ ಬುರುಜುವಿಗೆ 'ಸಿಂಹದ ಬುರುಜು' ಎಂಬ ಹೆಸರಿದೆ. ಈ ಬುರುಜು ಎತ್ತರದಲ್ಲಿ ಕಡಿಮೆಯಿದ್ದರೂ ಮೇಲ್ಭಾಗವು ವಿಶಾಲವಾದ ಪ್ರಾಂಗಣವನ್ನು ಹೊಂದಿದೆ ಇಲ್ಲಿ ಮತ್ತೆ ನಾಲ್ಕು ತೋಫುಗಳನ್ನಿಡಲು ಉಪಬುರುಜುಗಳು ಕಂಡುಬರುತ್ತವೆ. ಇಲ್ಲಿಯ ಮಲಿಕ್-ಇ-ಮೈದಾನ ತೋಫಿನ ಹತ್ತಿರ ನೋಡಲು ಹೋಗುವಾಗ ಬಲಭಾಗದ ಉಪಬುರುಜುವಿನ ಗೋಡೆಯ ಮೇಲೆ ಎರಡು ಸಿಂಹದ ಶಿಲ್ಪಫಲಕಗಳು ಇರುವುದರಿಂದ ಇದಕ್ಕೆ 'ಸಿಂಹದ ಬುರುಜು' ಎಂಬ ಹೆಸರು ಬಂದಿದೆ.[೯೦]

ತೋಫು ಇಟ್ಟಿರುವ ಸ್ಥಳದಲ್ಲಿ ೧.೫೦ಮೀ. ಆಳವಾದ ೦.೫೩ಮೀ. ಅಗಲವಾದ ಅರ್ಧವೃತ್ತಾಕಾರ ಕಾಣುವಂತೆ ಹೌಜನ್ನು ನಿರ್ಮಿಸಲಾಗಿದೆ. ೦.೮೩x೦.೭೪ ಉದ್ದಗಲ ಬಾಯಿಯಿರುವ ಮದ್ದಿನ ಕೋಣೆ ಕಂಡುಬರುತ್ತದೆ.

ಅಹಮ್ಮದ್ ಬುರುಜು

ಶಹಾಪುರ ದ್ವಾರದ ಉತ್ತರಕ್ಕೆ ಈ ಬುರುಜು ಕಂಡುಬರುತ್ತದೆ. ಶಹಾಪುರ ದ್ವಾರದಲ್ಲಿರುವ ಮಹಮ್ಮದ್ ಆದಿಲ್‌ಶಾಹನ ಕಾಲದ ಶಾಸನ ಕ್ರಿ.ಶ. ೧೬೪೩-೪೪ರಲ್ಲಿ ಶಹಾಪುರ ಗೇಟ್‌ನಲ್ಲಿ ಬುರುಜನ್ನು ನಿರ್ಮಾಣ ಮಾಡಿದ ವಿಷಯವನ್ನು ದಾಖಲಿಸಿದೆ. ಈ ಬುರುಜುವಿಗೆ 'ಅಹಮ್ಮದ ಬುರುಜು' ಎಂದು ಹೆಸರಿದೆ. ಇದನ್ನು ಮಹಮ್ಮದ್ ಆದಿಲ್‌ಶಾಹನ ಆಳ್ವಿಕೆಯ ಕಾಲದಲ್ಲಿ ರಾಜಾಜ್ಞೆಯ ಮೇರೆಗೆ ಸೇನಾಧಿಪತಿಗಳ ಮುಖ್ಯಸ್ಥ ಅಹಮ್ಮದ್‌ಖಾನ್‌ನು ನಿರ್ಮಿಸಿದನು.[೯೧] ಆದರೆ ಅಹಮ್ಮದ್ ಬುರುಜುವಿನಲ್ಲಿರುವ ಮತ್ತೊಂದು ಶಾಸನವು ಕಾಲದ ಉಲ್ಲೇಖವಿಲ್ಲದ ಈ ಶಾಸನ

ಖಾನ್–ಇ–ಖಾನನ್ ಅವರ ಆಜ್ಞೆಯ ಮೇರೆಗೆ ನಾಯಿಬ ದಿವಾನ ಅಲಿ ಸಂದರ್ ನುಸರತ್ ಶಾಹ ಈ ಬುರುಜನ್ನು ನಿರ್ಮಾಣ ಮಾಡಿಸಿದನು. 'ಅಲುಂದ್' (ಇರಾನ್‌ನಲ್ಲಿರುವ 'ಹಮ್‌ದಾನ್') ಬೆಟ್ಟದಂಥ ಬುರುಜಿರುವ ಭಾಗವನ್ನು 'ಮೊಹಮ್ಮದ್‌ಪುರ್' ಎಂದು ಉಲ್ಲೇಖಿಸಿದೆ.[೯೨]

ಮಹಮದ್ ಬುರುಜು

ಮಲಿಕ್–ಇ–ಮೈದಾನ/ಶಾರ್ಜಾಬುರುಜುವಿನಲ್ಲಿ ಉಪಲಬ್ಧವಾದ ಮಹಮ್ಮದ ಆದಿಲ್‌ಶಾಹನ ಕಾಲಾವಧಿಯ ಶಾಸನವು ಕ್ರಿ.ಶ. ೧೬೪೯–೧೬೪೪ರಲ್ಲಿ ಮಹಮದ್ ಬುರುಜು ಹೆಸರಿನ ಬುರುಜನ್ನು ಸುಲ್ತಾನ ಮಹಮ್ಮದ ದೊರೆಯ ಹೆಸರಿನಲ್ಲಿ ರಾಜನ ಆಪ್ತನೂ ಘನತೆವೆತ್ತವನೂ ಆದ ಅಫ್ಜಲ್‌ಖಾನ್‌ನು ಕಟ್ಟಿಸಿದನೆಂದು ಉಲ್ಲೇಖಿಸಿದೆ.[೯೩] ಆದರೆ ಈ ಬುರುಜು ಯಾವುದೆಂಬುದು ತಿಳಿದುಬಂದಿಲ್ಲ.

ಗನ್‌ಫಿರಂಗಿ ಶಾಹಿ ಬುರುಜು

ಫಿರಂಗಿ ಅಥವಾ ಫರಂಗಿ(ಪೋರ್ತುಗೀಸ) ಎಂದು ಕರೆಯಲಾಗುವ ಈ ಬುರುಜು ಫತೇದ್ವಾರದ ಪೂರ್ವಕ್ಕೆ ಕಂಡುಬರುತ್ತದೆ. ಈ ಬುರುಜನ್ನು ಟೊಳ್ಳಾಗಿ ನಿರ್ಮಿಸಿದ್ದು ಉಳಿದ ಬುರುಜುಗಳಿಗಿಂತ ಭಿನ್ನವಾಗಿದೆ. ಒಂದನೇ ಅಲಿ ಆದಿಲ್‌ಶಾಹನ ಗುಲಾಮನಾಗಿದ್ದ ಯಫ್ರಷ್‌ಖಾನನು ಈ ಬುರುಜನ್ನು ಕ್ರಿ.ಶ. ೧೫೭೬–೭೭ರಲ್ಲಿ ಕಟ್ಟಿಸಿದನೆಂದು ಈ ಬುರುಜುವಿನಲ್ಲಿರುವ ಶಾಸನ ತಿಳಿಸುತ್ತದೆ.[೯೪] ಈಗ ಪುರಾತತ್ವ ಇಲಾಖೆಯಲ್ಲಿರುವ ಇದೇ ಕಾಲಾವಧಿಯ ಮತ್ತೊಂದು ಶಾಸನ ಮೂಲತಃ ಫತೇ ದರವಾಜಕ್ಕೆ (ವಿಜಯದ್ವಾರ) ಸಂಬಂಧಿಸಿದ್ದು ಶರೀಫ್–ಉಲ್–ಮುಲ್ಕನ ಪುತ್ರ ಯಫ್ರಷ್‌ಖಾನನು ಹುಲ್ಮುಕ್ (ಹುಲಿಮುಖ, ದ್ವಾರಬಾಗಿಲು) ಕಟ್ಟಿಸಿದನೆಂದು ತಿಳಿಸುತ್ತದೆ.[೯೫] ಇದಕ್ಕೆ ಪೋರ್ತುಗೀಸ್ ಬುರುಜು ಎಂದು ಕೂಡ ಕರೆಯುತ್ತಾರೆ. ಒಂದನೇ ಅಲಿ ಆದಿಲ್‌ಶಾಹನ ಆಸ್ಥಾನದಲ್ಲಿದ್ದ ಪೋರ್ತುಗೀಸ ಜನರಲ್ ಒಬ್ಬನು ಈ ಬುರುಜನ್ನು ಕಟ್ಟಿಸಿದನೆಂದು ಹೀಗಾಗಿ ಇದಕ್ಕೆ ಈ ಹೆಸರು ಬಂದಿತೆಂದು ಹೇಳಲಾಗುತ್ತದೆ.[೯೬]

ಆದಿಲ್‌ಶಾಹಿ ಆಸ್ಥಾನ ಸಾಹಿತ್ಯಕೃತಿಗಳು ಉಲ್ಲೇಖಿಸಿರುವಂತೆ ಕೋಟೆಯ ಸುತ್ತಲೂ ಸಮಾರು ೧೨೦ ಬುರುಜುಗಳು ಇದ್ದವು ಎಂದು ಹೇಳಲಾಗುತ್ತದೆ. ಆದರೆ ಕೆಲವು ಬುರುಜುಗಳ ನಿರ್ಮಾಣದ ಕುರಿತು ಶಾಸನಗಳು ಮತ್ತು ಸಾಹಿತ್ಯಕೃತಿಗಳಿಂದ ತಿಳಿದುಬರುತ್ತದೆ. ಆದರೆ ಉಳಿದ ಬುರುಜುಗಳ ನಿರ್ಮಾಣ ಕುರಿತು ತಿಳಿಸಿಕೊಡುವಲ್ಲಿ ಈ ಆಕರಗಳು ಗೌಣವಾಗಿವೆ. 'ತಾರೀಖೆ–ಎ–ಹಪ್ತಕುರ್ಸಿ'ಯಲ್ಲಿ ಉಲ್ಲೇಖಿಸಿರುವಂತೆ ಎರಡನೆಯ ಅಲಿ ಆದಿಲ್‌ಶಾಹನ ಅವಧಿಯಲ್ಲಿ ಹಿಜರಿ ಶಕೆ ೧೦೬೯ರಲ್ಲಿ ಗೋಡೆಯ ಮೇಲೆ ಬುರುಜುಗಳನ್ನು ಕಟ್ಟುವ ಜವಾಬ್ದಾರಿಯನ್ನು ಮಿರ್ಜಾ ಯುಸೂಫ್‌ನಿಗೆ ಕೊಡಲಾಯಿತು ಎಂದು ತಿಳಿದುಬರುತ್ತದೆ. ಈ ರೀತಿಯಾಗಿ ಬುರುಜುವಿನ ನಿರ್ಮಾಣದಲ್ಲಿ ಹೊರಡಿಸಿದ ಶಾಸನಗಳನ್ನು ಮತ್ತು ಸಮಕಾಲೀನ ಸಾಹಿತ್ಯಕ ಆಕರಗಳನ್ನು ಇಟ್ಟುಕೊಂಡು ಕೋಟೆಯ ನಿರ್ಮಾಣದ ಕಾಲಘಟ್ಟ ಮತ್ತು ಕೋಟೆಯ ನವೀಕರಣ ಮುಂತಾದ ವಿಷಯಗಳ ಬಗ್ಗೆ

ತಿಳಿಸಿಕೊಡಬಹುದು. ಒಟ್ಟಾರೆಯಾಗಿ ಶಾರ್ಜಾ ಬುರುಜು ಯುದ್ಧಸನ್ನದ್ಧ ವ್ಯೂಹರಚನೆಗೆ, ಲಂಡಾಕಸಾಬ್ ಬುರುಜು ಐತಿಹಾಸಿಕ ಮಹತ್ವಕ್ಕೆ, ಫಿರಂಗಿಬುರುಜು ಅದರ ನಿರ್ಮಾಣ ಮತ್ತು ವಾಸ್ತುಲಕ್ಷಣಗಳಿಗೆ ಹೆಸರಾಗಿವೆ. ಈ ರೀತಿಯಾಗಿ ಅನೇಕ ಬುರುಜುಗಳಿದ್ದರೂ ಅವುಗಳಲ್ಲಿ ಕೆಲವೊಂದನ್ನು ಮಾತ್ರ ಅವುಗಳನ್ನು ಕಟ್ಟಿಸಿದ ಮಾಹಿತಿ ದೊರಕುತ್ತದೆ.

ದ್ವಾರಗಳು

ಕೋಟೆಯೊಳಗೆ ವಿವಿಧ ದಿಕ್ಕುಗಳಿಂದ ಒಳಗೆ ಪ್ರವೇಶಿಸಲು ಕೋಟೆಯ ದ್ವಾರಗಳನ್ನು ಅತ್ಯಂತ ರಕ್ಷಣಾತ್ಮಕ ದೃಷ್ಟಿಕೋನವನ್ನಿಟ್ಟುಕೊಂಡು ನಿರ್ಮಿಸಿದ್ದಾರೆ. ಕೋಟೆಗೋಡೆಯ ಗಾತ್ರ ಮತ್ತು ವಿಸ್ತಾರಕ್ಕನುಗುಣವಾಗಿ ದ್ವಾರಗಳು ಕಂಡುಬರುತ್ತವೆ. ದ್ವಾರದ ರಕ್ಷಣೆಗೆಂದು ದ್ವಾರಪಾಲಕರು ಹಗಲು ರಾತ್ರಿಗಳೆನ್ನದೆ ಸರದಿಯ ಮೇಲೆ ಕೋಟೆಯ ದ್ವಾರವನ್ನು ಕಾಯಬೇಕಾಗುತಿತ್ತು. ವಿಜಾಪುರ ಕೋಟೆಗೆ ಪ್ರಮುಖವಾಗಿ ಆರು ದ್ವಾರಗಳು ಮತ್ತು ೨೦ಕ್ಕಿಂತ ಹೆಚ್ಚು ದಿಡ್ಡಿಬಾಗಿಲು(ಕಳ್ಳಗಿಂಡಿಗಳು) ಇದ್ದವು ಎಂದು ಹೇಳಲಾಗುತ್ತದೆ. ಯಾವ ಯಾವ ದ್ವಾರಗಳ ಹತ್ತಿರ ಅಥವಾ ಮುಖ ಮಾಡಿರುವ ಆ ದಿಕ್ಕಿನಲ್ಲಿ ಗ್ರಾಮಗಳಿವೆಯೋ ಆ ಗ್ರಾಮಗಳ ಹೆಸರಿನಿಂದಲೇ ಪ್ರಸಿದ್ಧವಾಗಿವೆ.[೬೭] 'ಗುಲದಸ್ತಾಯೆ ವಿಜಾಪುರ' ಕೃತಿಯಲ್ಲಿಯೂ ಇದೇ ಉಲ್ಲೇಖವನ್ನು ಕೊಡಲಾಗಿದೆ. ಕ್ಯಾಂಪ್‌ಬೆಲ್ ರಚಿಸಿದ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಿದಂತೆ ಕೋಟೆಗೆ ಪ್ರಮುಖವಾಗಿ ಐದು ದ್ವಾರಗಳು ಹಾಗೂ ಗೋಳಗುಮ್ಮಜ ಹತ್ತಿರ ಮತ್ತೊಂದು ದ್ವಾರವಿದ್ದು ಅದಕ್ಕೆ 'ಪಾದಶಾಹಾಪುರ ದ್ವಾರ' ಎಂದು ಕರೆಯಲಾಗುತ್ತದೆ. ಸದ್ಯ ಇದರಲ್ಲಿ ನಾಲ್ಕು ದ್ವಾರಗಳನ್ನು ಉಪಯೋಗಿಸುತ್ತಿದ್ದು, ಉಳಿದ ಮಕ್ಕಾ ದ್ವಾರವನ್ನು ಮುಚ್ಚಲಾಗಿದೆ[೬೮] ಎಂದು ಉಲ್ಲೇಖಿಸಲಾಗಿದೆ. ವಿಶ್ವಕರ್ಮ ವಾಸ್ತುಶಿಲ್ಪ ಗ್ರಂಥವು ಕೋಟೆಯ ಪ್ರಾದೇಶಿಕ ಸ್ವರೂಪ, ಅದರ ದ್ವಾರಗಳು ಹಾಗೂ ಅದರ ತಾಂತ್ರಿಕತೆಯ ಆಧಾರದ ಮೇಲೆ ಕೋಟೆಯ ಪ್ರಕಾರಗಳನ್ನು ಹೇಳಿದೆ. ಅದರಲ್ಲಿ ದ್ವಾರಗಳನ್ನಾಧರಿಸಿ ಏಕಮುಖ ದುರ್ಗ, ದ್ವಿಮುಖ ದುರ್ಗ, ಚತುರ್ಮುಖ ದುರ್ಗ ಎಂದು ಹೇಳಲಾಗಿದ್ದು ಮೂರನೆಯ ಪ್ರಕಾರದ ದುರ್ಗಕ್ಕೆ ಈ ಕೋಟೆ ಬಹುತೇಕ ಸರಿಹೊಂದುತ್ತದೆ ಎಂದು ಹೇಳಬಹುದು.

ಪ್ರತಿಯೊಂದು ದ್ವಾರವು ರಕ್ಷಣಾತ್ಮಕ ರಚನೆಯಲ್ಲಿ ಒಂದೇ ರೀತಿ ಕಂಡರೂ ಅವುಗಳಲ್ಲಿ ಭಿನ್ನತೆಯನ್ನು ಹೊಂದಿವೆ. ಬಾಗಿಲ ಉದ್ದ, ಅಗಲ, ಎತ್ತರಗಳಲ್ಲಿ ವಿಶೇಷ ವಾಸ್ತುರಚನೆ ಮತ್ತು ತಂತ್ರಗಾರಿಕೆ ಕಂಡುಬರುತ್ತವೆ. ದ್ವಾರದ ಇಕ್ಕೆಲಗಳಲ್ಲಿ ಅರ್ಧವೃತ್ತಾಕಾರದ ಬುರುಜುಗಳಿದ್ದು ಶತ್ರುಗಳು ದ್ವಾರದ ಸಮೀಪ ಆಕ್ರಮಣವನ್ನು ತಡೆಗಟ್ಟುವ ಉದ್ದೇಶವನ್ನು ಹೊಂದಿವೆ. ದ್ವಾರಗಳ ಪ್ರವೇಶವು ಇಂಗ್ಲೀಷಿನ C, L, S ಆಕಾರದಲ್ಲಿ ಪ್ರವೇಶವನ್ನು ಕಲ್ಪಿಸುತ್ತಿದ್ದು ನೇರವಾಗಿ ಪ್ರವೇಶವನ್ನು ತಡೆಗಟ್ಟಲು ಈ ರೀತಿ ರಚನಾಕ್ರಮವನ್ನು ಅನುಸರಿಸಲಾಗಿದೆ. ಪ್ರತಿಯೊಂದು ದ್ವಾರಗಳು ಶತ್ರುಗಳಿಗೆ ನೇರವಾಗಿ ಗೋಚರವಾಗದಂತೆ ದ್ವಾರಗಳ ಮುಂದೆ ತಡೆಗೋಡೆಗಳನ್ನು ಇಂಗ್ಲೀಷಿನ 'C' ಆಕಾರದಲ್ಲಿ ನಿರ್ಮಿಸಿ ಮತ್ತೊಂದು ದ್ವಾರವನ್ನು ಬಿಡಲಾಗಿದೆ. ಇದು ಶತ್ರುಗಳಿಗೆ ದಿಕ್ಕು ತಪ್ಪಿಸುವ ಪ್ರಯತ್ನವಾಗಿತ್ತು. ಈ

ಎರಡು ದ್ವಾರಗಳ ಮಧ್ಯೆ ವಿಶಾಲವಾದ ಪ್ರಾಂಗಣಗಳಿದ್ದು ದ್ವಾರದ ಒಳಗೆ ಮತ್ತು ಮಧ್ಯದ ಪ್ರಾಂಗಣದಲ್ಲಿ ಸೈನಿಕರು ವಿಶ್ರಾಂತಿ ತೆಗೆದುಕೊಳ್ಳುವ ಕೋಣೆಗಳು ಕಂಡುಬರುತ್ತವೆ. ಕಾವಲುಗಾರರು ಕೋಟೆಯ ರಕ್ಷಣೆಗೆಂದು ಹಗಲು ರಾತ್ರಿಯನ್ನದೆ ಸರದಿಯ ಮೇಲೆ ಕೋಟೆಯ ದ್ವಾರವನ್ನು ಕಾಯುತ್ತಿದ್ದರು.

ಈ ಎಲ್ಲ ದ್ವಾರಗಳಿಗೆ ಕಟ್ಟಿಗೆಯ ಬಾಗಿಲುಗಳಿದ್ದದ್ದು ಕಂಡುಬರುತ್ತವೆ. ಬಾಗಿಲುಗಳನ್ನು ದಪ್ಪವಾದ ಮರದ ತೊಲೆಗಳಿಂದ ಮಾಡಿದ್ದು, ೧೨ಅಂಗುಲದ ಕಬ್ಬಿಣದ ಹಿಡಿಕಟ್ಟಿನಿಂದ ಬಿಗಿಪಡಿಸಲಾಗಿದೆ. ದ್ವಾರಗಳನ್ನು ಶತ್ರುಗಳು ಹಾಗೂ ಆನೆಯ ಸಹಾಯದಿಂದ ಗುದ್ದಿ ಮುರಿಯದಂತೆ ಕಬ್ಬಿಣದ ಮೊಳೆಗಳನ್ನು ಬಾಗಿಲ ತೊಲೆಯ ಮುಂಭಾಗದಲ್ಲಿ ಬಡಿಸಿದ್ದು ಪ್ರತಿತಂತ್ರದಂತೆ ಕಂಡುಬರುತ್ತದೆ. ಪ್ರತಿಯೊಂದು ದ್ವಾರ ಹಾಗೂ ಇವುಗಳಿಗೆ ಹೊಂದಿಕೊಂಡಿರುವ ಬುರುಜುಗಳಲ್ಲಿ ಕೈಪಿಡಿಗೋಡೆ, ತೆನೆಗಳಿದ್ದು ಇದರಲ್ಲಿ ಬಂದೂಕು ಮತ್ತು ವೀಕ್ಷಣಾರಂಧ್ರಗಳನ್ನು ಕಾಣಬಹುದು. ಶತ್ರುಗಳು ನೇರವಾಗಿ ದ್ವಾರದ ಹತ್ತಿರ ತಲುಪುವ ಮೊದಲೇ ಅವರ ಮೇಲೆ ಆಕ್ರಮಣ ಮಾಡುವ ತಂತ್ರಗಾರಿಕೆಯನ್ನು ಹೊಂದಿದ್ದು ಕಂಡುಬರುತ್ತದೆ. ಹೀಗೆ ಪ್ರತಿಯೊಂದು ಮುಖ್ಯದ್ವಾರಗಳು ಚೌಕಾಕಾರದ ಬಾಗಿಲು ಚೌಕಟ್ಟನ್ನು ಹೊಂದಿದ್ದು ಅದಕ್ಕೆ ಕಮಾನಿನಾಕೃತಿಯಂತೆ ಕಲ್ಲಿನ ಪಟ್ಟಿಯನ್ನು ಮುಂದಕ್ಕೆ ಚಾಚುವಂತೆ ಮಾಡಿ ಅಲಂಕಾರಿಕವಾಗಿ ಮಾಡಿದ್ದಾರೆ. ಹೀಗಾಗಿ ಇದು ಕಮಾನಿನಾಕೃತಿಯಂತೆ ಕಂಡುಬರುತ್ತವೆ. ಉಳಿದಂತೆ ಕೆಲವು ದಿಡ್ಡಿಬಾಗಿಲುಗಳು ಹೆಚ್ಚಾಗಿ ಚೌಕಾಕಾರದ ಚೌಕಟ್ಟು ಇರದೆ ಕಮಾನು ಮಾದರಿಯಲ್ಲಿಯೇ ಇವೆ.

ಬುರುಜುಗಳ ಮೇಲಿರುವ ಕಾವಲುಗಾರರನ್ನು ತಪ್ಪಿಸಿಕೊಂಡು ಶತ್ರುಗಳು ನುಗ್ಗಲಾರರು. ಅಲ್ಲದೆ ಮುಖ್ಯದ್ವಾರಗಳನ್ನು ಮುಚ್ಚಿದಾಗ ಅಥವಾ ಕೋಟೆಯು ಶತ್ರುಗಳ ವಶವಾದಾಗ ತಪ್ಪಿಸಿಕೊಂಡು ಹೋಗಲು ಅನೇಕ ದಿಡ್ಡಿಬಾಗಿಲುಗಳು ವಿಜಾಪುರ ಕೋಟೆಯಲ್ಲಿ ಕಾಣಬಹುದು. ವಿಜಾಪುರ ಕೋಟೆಯ ದ್ವಾರಬಾಗಿಲುಗಳ ಭದ್ರತೆಯನ್ನು ಕುರಿತು ಉದಾಹರಣೆ ಕೊಡುವುದಾದರೆ ಕ್ರಿ.ಶ. ೧೬೮೬ರಲ್ಲಿ ಔರಂಗಜೇಬನು ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಿದಾಗ ಕೋಟೆಯ ಸುತ್ತಲೂ ಬಲಿಷ್ಠವಾದ ದ್ವಾರಗಳಿದ್ದವು. ಔರಂಗಜೇಬನು ವಿಜಾಪುರದ ಮೇಲೆ ದಾಳಿ ಮಾಡಿದಾಗ ಯಾವುದೇ ದ್ವಾರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೊನೆಗೆ ಅವನು ಕೋಟೆಗೋಡೆಯನ್ನು ಒಡೆದ ಮೇಲೆ ಕೋಟೆಯ ಒಳಗೆ ನುಗ್ಗಿ ಅನಂತರ ಬಾಗಿಲುಗಳನ್ನು ತೆರೆಯಿಸಿದನು. ಈ ಹಿನ್ನೆಲೆಯಲ್ಲಿ ವಿಜಾಪುರ ಕೋಟೆಯ ಭದ್ರತಾ ವ್ಯವಸ್ಥೆ ಮತ್ತು ಕೋಟೆಯ ಬಲಿಷ್ಠತೆಯನ್ನು ಅರಿಯಬಹುದು. ಪ್ರಮುಖ ದ್ವಾರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೧. ಫತೇದ್ವಾರ

ಇದು ವಿಜಾಪುರ ಬಸ್‌ನಿಲ್ದಾಣದಿಂದ ಬಸವನ ಬಾಗೇವಾಡಿಗೆ ಹೋಗುವ ರಸ್ತೆಯಲ್ಲಿ ದಕ್ಷಿಣಕ್ಕೆ ಇದೆ. ಇದು ಮನಗೂಳಿ ಗ್ರಾಮದ ಕಡೆ ಮುಖ ಮಾಡಿರುವುದರಿಂದ ಇದಕ್ಕೆ ಮನಗೂಳಿ

ದ್ವಾರವೆಂದು ಕರೆಯುತ್ತಾರೆ. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿ ರಚಿತವಾದ 'ತಝ್ಕಿರತುಲ್ ಮುಲೂಕ್' ಎಂಬ ಗ್ರಂಥದಲ್ಲಿ ನಗರದ ದಕ್ಷಿಣದಿಕ್ಕಿನ ದ್ವಾರವನ್ನು 'ಮಂಗಲಿ'ದ್ವಾರ ಎಂದು ಉಲ್ಲೇಖಿಸುತ್ತದೆ. ಈ ಮಂಗಲಿ ಎಂಬುದು ಮನಗೂಳಿಯೇ ಆಗಿದೆ.[೯೯]

ಒಂದನೆಯ ಅಲಿ ಅದಿಲ್‌ಶಾಹನ ಕಾಲದ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ಮೂಲತಃ ಫತೇದ್ವಾರಕ್ಕೆ(ವಿಜಯದ್ವಾರ) ಸಂಬಂಧಿಸಿದ್ದು ಕಾಲದ ಉಲ್ಲೇಖವಿಲ್ಲದ ಇದರಲ್ಲಿ ಶರೀಫ್-ಉಲ್-ಮುಲ್ಕ್‌ನ ಪುತ್ರ ಯುಫ್ರಷ್‌ಖಾನನು ಹುಲ್ಮುಕ್(ಹುಲಿಮುಖ) ಕಟ್ಟಿಸಿದನೆಂದು[೧೦೦](ಕೋಟೆಯ ಹೆಬ್ಬಾಗಿಲಿಗೆ 'ಹುಲಿಮೊಗ' ಎಂಬ ಹೆಸರಿದೆ. ಕೋಟೆಯ ಭವ್ಯತೆ ಭೀಕರತೆಗಳ ಮೂಲಕ ಅದನ್ನು ದೊಡ್ಡದಾದ ಹುಲಿಯೆಂದು ಕಲ್ಪಿಸಿ ಅದರ ಹೆಬ್ಬಾಗಿಲನ್ನು ಹುಲಿಮೊಗ ಎಂದು ಕರೆದಿದ್ದಾರೆ. ಈ ಹೆಬ್ಬಾಗಿಲನ್ನು ಪ್ರವೇಶಿಸುವ ಶತ್ರುಸೈನಿಕರು ಹುಲಿಯ ಬಾಯಿಗೆ ಬಿದ್ದಂತೆಯೇ ಎಂದು ತಿಳಿಯುತ್ತಿದ್ದರು[೧೦೧]) ಹೇಳಿದೆ. ಈ ಯುಫ್ರಷ್‌ಖಾನನು ಅಲಿ ಆದಿಲ್‌ಶಾಹಿ ದೊರೆಯ ಗುಲಾಮನಾಗಿದ್ದನೆಂದು ಫತೇದ್ವಾರದ ಫಿರಂಗಿಬುರುಜುವಿನಲ್ಲಿ ಇರುವ ಕ್ರಿ.ಶ. ೧೫೭೬ರ ಶಾಸನ ತಿಳಿಸುತ್ತದೆ.[೧೦೨] ಹೀಗಾಗಿ ಈ ಬುರುಜು ಒಂದನೆಯ ಅಲಿ ಆದಿಲ್‌ಶಾಹನ ಅವಧಿಯಲ್ಲಿ ನಿರ್ಮಾಣವಾಯಿತು ಎಂದು ಹೇಳಬಹುದು.

ಕ್ರಿ.ಶ. ೧೬೮೬ರಲ್ಲಿ ಈ ದ್ವಾರಕ್ಕೆ ಔರಂಗಜೇಬನು ಫತೇದ್ವಾರ(Gate of Victory) ಎಂದು ಕರೆದನು. ಇವನು ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಿದಾಗ ಯಾವುದೇ ದ್ವಾರವನ್ನು ಇವನಿಂದ ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹೀಗಾಗಿ ಕೋಟೆಗೋಡೆಯನ್ನು ಒಡೆದು ಒಳನುಗ್ಗಲಾಯಿತು. ಹೀಗೆ ಒಳನುಗ್ಗಿದ ಸೈನ್ಯವು ಫತೇದ್ವಾರವನ್ನು ತೆರೆದು ಔರಂಗಜೇಬನನ್ನು ಕೋಟೆಯೊಳಗೆ ಬರಮಾಡಿಕೊಳ್ಳಲಾಯಿತು. ಔರಂಗಜೇಬನು ಈ ದ್ವಾರದ ಮೂಲಕ ಕೋಟೆಯೊಳಗೆ ಪ್ರವೇಶಿಸಿದ್ದರಿಂದ ಫತೇದರವಾಜ ಎಂದು ಹೆಸರಿಟ್ಟನು.[೧೦೩] ಆದರೆ 'ಫುತೂಹತೆ ಅಲಂಗೀರ್' ಕೃತಿಯು ತಿಳಿಸುವಂತೆ ಔರಂಗಜೇಬನು ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಿ ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ರಾಜಾಜ್ಞೆಯ ಮೇರೆಗೆ ಶಮ್ಸ್‌ಉದ್‌ದಿನ ಖಾನ್‌ನು ಫಿರಂಗಿಗಳನ್ನು ಹಾರಿಸಿದನು. ಯಾವ ರಕ್ಷಾಣಾ ಕಂದಕದಿಂದ ಕೋಟೆಯ ರಕ್ಷಣಾಗೋಡೆಯ ಮೇಲೆ ತೋಫಿನಿಂದ ಸಿಡಿಮದ್ದನ್ನು ಸಿಡಿಸಲಾಗಿತ್ತೋ ಅದರ ಎದುರುಗಡೆಗೆ 'ಫತೇಹ ಮುಬಾರಕ' ಹೆಸರಾಂಕಿತ ಘನಗಾತ್ರದ ದ್ವಾರ ಸ್ಥಾಪಿಸಲು ಆಜ್ಞೆಯಾಯಿತು[೧೦೪] ಎಂದು ಉಲ್ಲೇಖಿಸುತ್ತದೆ. ಆದರೆ ಈ ವಾದವನ್ನು ತಳ್ಳಿಹಾಕಬಹುದು. ಏಕೆಂದರೆ ಫತೇದ್ವಾರದ ನಿರ್ಮಾಣದ ಕುರಿತು ಶಾಸನಾಕರಗಳು, ಸಾಹಿತ್ಯಕ ಆಕರಗಳು ಕೋಟೆಗೆ ಐದು ಪ್ರಮುಖ ದ್ವಾರಗಳಿದ್ದು ಅದರಲ್ಲಿ ಮನಗೂಳಿ ದ್ವಾರವು ಒಂದು ಎಂದು ಸ್ಪಷ್ಟಪಡಿಸುತ್ತವೆ. ಹೀಗಾಗಿ ಔರಂಗಜೇಬನು ಈ ದ್ವಾರವನ್ನು ನಿರ್ಮಿಸಿದ ಎಂಬ ವಾದವು ದುರ್ಬಲಗೊಳ್ಳುತ್ತದೆ. ಆದರೆ ಔರಂಗಜೇಬನು ಈ ದ್ವಾರಕ್ಕೆ ಫತೇದರವಾಜ ಎಂಬ ಹೆಸರಿಟ್ಟಿದ್ದನ್ನು ಆಕರಗಳು ಸ್ಪಷ್ಟಪಡಿಸುತ್ತವೆ.

ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿರುವ ಈ ದ್ವಾರದ ಇಕ್ಕೆಲಗಳಲ್ಲಿ ಎರಡು ಅರ್ಧವೃತ್ತಾಕಾರದ ಬುರುಜುಗಳಿವೆ. ಒಟ್ಟು ಎರಡು ದ್ವಾರಗಳನ್ನು ಹೊಂದಿರುವ ಇದು ಮೊದಲು ಅರ್ಧವೃತ್ತಾಕಾರದ ಬುರುಜುವಿಗೆ ಹೊಂದಿಕೊಂಡಂತಿರುವ ಈ ದ್ವಾರವು ಶತ್ರುಗಳ ಕಣ್ಣಿಗೆ ನೇರವಾಗಿ ಕಾಣಿಸದಂತೆ ಅದಕ್ಕೆ ಅರ್ಧವೃತ್ತಾಕಾರವಾಗಿ ತಡೆಗೋಡೆಯನ್ನು ನಿರ್ಮಿಸಿ, ಪಶ್ಚಿಮಕ್ಕೆ ಮುಖ ಮಾಡಿರುವಂತೆ ಮತ್ತೊಂದು ಬಾಗಿಲನ್ನು ಕೂರಿಸಲಾಗಿದೆ. ಈ ದ್ವಾರಗಳಿಗೆ ಕಟ್ಟಿಗೆಯ ತೊಲೆಗಳಿದ್ದು ಅವುಗಳಿಗೆ ರಕ್ಷಣೆಗಾಗಿ ಮೊಳೆಗಳನ್ನು ಹೊಡೆಯಲಾಗಿತ್ತು ಎಂದು ಹೇಳುತ್ತಾರೆ. ಆದರೆ ಇಂದು ಕಟ್ಟಿಗೆಯ ತೊಲೆಗಳು ಅಲ್ಲಿ ಕಾಣಿಸುವುದಿಲ್ಲ. ದ್ವಾರಕ್ಕೆ ಹೊಂದಿಕೊಂಡಿರುವ ಬುರುಜುವಿಗೆ ಹೋಗಲು ದ್ವಾರದ ಒಳಭಾಗದ ಇಕ್ಕೆಲಗಳಲ್ಲಿ ಮೆಟ್ಟಿಲುಗಳಿವೆ. ಅರ್ಧವೃತ್ತಾಕಾರದ ತಡೆಗೋಡೆ ಮತ್ತು ಮುಖ್ಯದ್ವಾರದ ಪ್ರವೇಶದ ಇಕ್ಕೆಲಗಳಲ್ಲಿ ಕಮಾನಾಕೃತಿಯ ಕೋಣೆಗಳಿದ್ದು ಇವು ಸೈನಿಕರು ವಿಶ್ರಾಂತಿಯನ್ನು ಪಡೆಯಲು ನಿರ್ಮಿಸಲಾಗಿದ್ದವು ಎಂದು ಹೇಳಬಹುದು. ಈ ದ್ವಾರವು ೧೫ ಅಡಿ ಅಗಲವಾಗಿದ್ದು ಕಮಾನಾಕೃತಿಯನ್ನು ಹೊಂದಿದೆ. ಈ ದ್ವಾರದ ಮುಂದೆಯೇ ಆಂಜನೇಯ ದೇವಸ್ಥಾನವಿದೆ.

೨. ಮಕ್ಕಾದ್ವಾರ

ಕೋಟೆಯ ಪಶ್ಚಿಮಭಾಗದಲ್ಲಿ ಮಕ್ಕಾದ್ವಾರ ಕಂಡುಬರುತ್ತದೆ. ಪಶ್ಚಿಮಾಭಿಮುಖವಾಗಿರುವ ಈ ದ್ವಾರವು ಧಾರ್ಮಿಕ ಉದ್ದೇಶಗಳಿಗಾಗಿಯೇ ನಿರ್ಮಿತವಾಗಿತ್ತು. ಇದು ಇಂದು ಬಳಕೆಯಲ್ಲಿಲ್ಲ. ಇದನ್ನು ಬಬಲೇಶ್ವರ ಅಗಸಿ ಹಾಗೂ ಸಾರವಾಡ ಅಗಸಿ ಎಂದೂ ಕೂಡ ಕರೆಯುತ್ತಾರೆ. 'ತಝ್ಕೀರತುಲ್ ಮುಲೂಕ್'ನಲ್ಲಿ ಇದನ್ನು 'ಸಾರ್‌ವಾರ್' ದ್ವಾರ ಎಂದು ಉಲ್ಲೇಖಿಸುತ್ತದೆ. ಈ ಸಾರ್‌ವಾರ್ ಈಗಿನ ಸಾರವಾಡ ಗ್ರಾಮವಾಗಿದೆ.[೧೦೫] ಈ ದ್ವಾರಕ್ಕೆ ಎದುರಾಗಿ ಈ ಪ್ರಮುಖ ಗ್ರಾಮಗಳು ಕಂಡುಬರುವುದರಿಂದ ಇವುಗಳ ಹೆಸರಿನಿಂದ ಕರೆಯಲ್ಪಡುತ್ತವೆ. ಒಂದನೇ ಅಲಿ ಆದಿಲ್‌ಶಾಹನ ಕಾಲಾವಧಿಯ ಮಕ್ಕಾದ್ವಾರದ ದಕ್ಷಿಣದಲ್ಲಿರುವ ಬುರುಜುವಿನಲ್ಲಿರುವ ಶಾಸನವು ಫಿರಂಗಿಶಾಹಿ ಬುರುಜನ್ನು ಕ್ರಿ.ಶ. ೧೫೭೭–೭೮ರಲ್ಲಿ ನಿರ್ಮಾಣ ಮಾಡಿದ್ದನ್ನು ತಿಳಿಸುತ್ತದೆ. ಈ ಕಾರ್ಯ ಯುಫ್ರಷ್‌ಖಾನ್‌ನಿಂದ ಅಯಿತೆಂದು ಅವನು ಆದಿಲ್‌ಶಾಹ ದೊರೆಯ ಸೇವಕನೆಂದು ಇದರಲ್ಲಿ ವಿವರಿಸಿದೆ. ಈ ಶಾಸನವನ್ನು ಖಾಜಿ ಇಸ್ಮಾಯಿಲ್ ರಚಿಸಿದನು.[೧೦೬] ಇದೇ ದ್ವಾರದ ದಕ್ಷಿಣದಲ್ಲಿರುವ ಎರಡನೇ ಬುರುಜುವಿನಲ್ಲಿರುವ ಮತ್ತೊಂದು ಶಾಸನವು ಮಹಮ್ಮದ್ ಆದಿಲ್‌ಶಾಹನ ಕಾಲಾವಧಿಯದ್ದಾಗಿದೆ. ಇದು ರಾಜನಿಂದ ನುಸರತ್ ಷಿಯಾರ್ ಎಂಬ ಬಿರುದನ್ನು ಪಡೆದಿದ್ದ ಮಲಿಕ್ ಸಂದಲನು ಖಾನ್–ಇ–ಖಾನ್ ಮೊಹಮ್ಮದ(ಆದಿಲ್‌ಶಾಹ) ದೊರೆಯ ಆಜ್ಞೆಯ ಮೇರೆಗೆ ವೈರಿಗಳಿಂದ ರಕ್ಷಿಸಲು ಕೋಟೆಯ ಗೋಡೆಗಳನ್ನು ಕ್ರಿ.ಶ. ೧೬೫೫–೧೬೫೬ರಲ್ಲಿ ಕಟ್ಟಿಸಿದ್ದನ್ನು ವಿವರಿಸುತ್ತದೆ.[೧೦೭] ಇದು ಕೋಟೆಯ ಪುನರ್ ನವೀಕರಣ ಸಂದರ್ಭದಲ್ಲಿ ಹೊರಡಿಸಿರುವ ಶಾಸನವೆಂದು ಹೇಳಬಹುದು. ಮುಸ್ಲಿಮರ ಪವಿತ್ರ ಯಾತ್ರಸ್ಥಳ ಮಕ್ಕಾ ಮತ್ತು ಮದೀನಾಗಳು ಪಶ್ಚಿಮದಿಕ್ಕಿಗೆ ಬರುತ್ತವೆ. ಮಕ್ಕಾಕೆ ಹೋಗುವ ಪ್ರವಾದಿಗಳನ್ನು ಈ ದ್ವಾರದಿಂದ ಬೀಳ್ಕೊಡುತ್ತಿರಬಹುದು. ಅಲ್ಲದೆ

ಆದಿಲ್‌ಶಾಹಿ ಸುಲ್ತಾನರು ಮಕ್ಕಾಗೆ ಹೋಗುವವರನ್ನು ಬಂದು ಅವರಿಗೆ ಉಡುಗೊರೆಗಳನ್ನು ಕೊಟ್ಟು ಬೀಳ್ಕೊಡುತ್ತಿದ್ದರು ಎಂಬ ಅಂಶವು ತಿಳಿದುಬರುತ್ತದೆ. ಅಲ್ಲದೆ ಮುಸ್ಲಿಂ ಪ್ರವಾದಿಗಳು ಬಂದಾಗ ಈ ದ್ವಾರದ ಮೂಲಕ ಪ್ರವೇಶಿಸುತ್ತಿದ್ದರು. ಹೀಗಾಗಿ ಈ ದ್ವಾರಕ್ಕೆ ಮಕ್ಕಾಬಾಗಿಲು ಎಂದು ಕರೆದಂತೆ ತೋರುತ್ತದೆ.

ಈ ದ್ವಾರವು ರಕ್ಷಣಾತ್ಮಕ ದೃಷ್ಟಿಯಿಂದ ತಾಂತ್ರಿಕತೆಯಿಂದ ಕೂಡಿದ್ದು ವಿಸ್ತಾರವಾಗಿ ಇದೆ. ಈ ದ್ವಾರವು ಬಹುಭುಜಾಕೃತಿಯ ಎರಡು ದೊಡ್ಡ ಬುರುಜುಗಳ ಮಧ್ಯದಲ್ಲಿದೆ. ಈ ದ್ವಾರವು ಮೂರು ಪ್ರವೇಶ ದ್ವಾರಗಳನ್ನು ಹೊಂದಿದ್ದು ಮುಖ್ಯಬಾಗಿಲು ಮುಂದೆ ಅರ್ಧವೃತ್ತಾಕಾರ ತಡೆಗೋಡೆ ಇದ್ದು ಅದು ಇಂದು ಸಂಪೂರ್ಣವಾಗಿ ಹಾಳಾಗಿದೆ. ಅದರ ಬುನಾದಿ ಮಾತ್ರ ಕಾಣಸಿಗುತ್ತದೆ. ಮುಖ್ಯ ಕೋಟೆಗೋಡೆಗೆ ಹೊಂದಿಕೊಂಡು ದ್ವಾರದ ಮೇಲೆ ಕೊಠಡಿಗಳಿದ್ದು ಅವು ಸೈನಿಕರು ಅಥವಾ ಕಾವಲುಗಾರರಿಗೆ ಶತ್ರುಗಳು ದ್ವಾರದ ಹತ್ತಿರ ಬರದಂತೆ ತಡೆಯುವ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಡಲು ನಿರ್ಮಿಸಿರಬಹುದು. ಈ ಬಾಲ್ಕನಿಯ ಮೇಲೆ ತೆನೆಗಳು ಕಂಡುಬರುತ್ತವೆ. ಮೊದಲನೆಯ ದ್ವಾರದಿಂದ ಒಳಗಡೆ ಪ್ರವೇಶಿಸಿದಾಗ ಸುತ್ತಲೂ ಆಯತಾಕಾರದ ಪ್ರಾಂಗಣವಿದೆ. ಇದರ ಸುತ್ತಲೂ ಕಮಾನಾಕೃತಿಯ ಸೈನಿಕರ ಕೋಣೆಗಳಿವೆ. ಮೊದಲನೇ ದ್ವಾರವನ್ನು ಭೇದಿಸಿ ಶತ್ರುಗಳು ಪ್ರಾಂಗಣವನ್ನು ಪ್ರವೇಶಿಸಿದರೆ ಅವರ ಮೇಲೆ ದಾಳಿ ಮಾಡಲು ಪ್ರಾಂಗಣದ ಕಟ್ಟಡದ ಮೇಲೆ ಸುತ್ತಲೂ ಬಂದೂಕುರಂಧ್ರಗಳಿಂದ ಕೂಡಿದ ತೆನೆಗಳು ಕಂಡುಬರುತ್ತವೆ. ಈ ಪ್ರಾಂಗಣದ ದಕ್ಷಿಣಕ್ಕೆ ಮತ್ತೊಂದು ದ್ವಾರವಿದ್ದು ಇದರ ಮೂಲಕ ಒಳ ಪ್ರವೇಶಿಸಿದಾಗ ಮತ್ತೊಂದು ಚೌಕಾಕಾರದ ಪ್ರಾಂಗಣ ಕಂಡುಬರುತ್ತದೆ. ಇದರಲ್ಲಿಯ ಸುತ್ತಲೂ ಸೈನಿಕರ ವಿಶ್ರಾಂತಿ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಇಲ್ಲಿಂದ ಪೂರ್ವಾಭಿಮುಖವಾಗಿರುವ ದ್ವಾರದ ಮೂಲಕ ಕೋಟೆಯ ಒಳಗೆ ಪ್ರವೇಶಿಸಬಹುದು. ಈ ಪ್ರಾಂಗಣಗಳು ೨೪X೩೦ ಮೀ. ಮತ್ತು ೧೯X೦೬ ಮೀ. ಇವೆ.[೧೦೮] ಈ ದ್ವಾರಗಳಿಗೆ ಕಟ್ಟಿಗೆಯ ತೊಲೆಗಳಿದ್ದು ಅವುಗಳಿಗೆ ಸುಮಾರು ೧೨ ಇಂಚುಗಳ ಕಬ್ಬಿಣದ ಮೊಳೆಗಳು ಇದ್ದವು ಎಂದು ಹೇಳುತ್ತಾರೆ. ಆದರೆ ಇಂದು ಅವು ಕಂಡುಬರುವುದಿಲ್ಲ.

೩. ಶಹಾಪುರ ದ್ವಾರ

ಕೋಟೆಯ ವಾಯವ್ಯಕ್ಕೆ ಬರುವ ಶಹಾಪುರ ದ್ವಾರವು ವಿಜಾಪುರದ ಪ್ರಮುಖವಾದ ಐದು ದ್ವಾರಗಳಲ್ಲಿ ಒಂದಾಗಿದೆ. ಇದು ಮಲಿಕ್ ಮೈದಾನ ತೋಫಿನ ಉತ್ತರಕ್ಕಿದೆ. ಅಲಿ ಆದಿಲ್‌ಶಾಹನು ಕ್ರಿ.ಶ. ೧೫೫೫ರಲ್ಲಿ ಕೋಟೆ ಕಟ್ಟಲು ಪ್ರಾರಂಭಿಸಿದ ಅವಧಿಯಲ್ಲಿಯೇ ವಿಜಾಪುರದ ಹೊರಭಾಗದಲ್ಲಿ ವಾಯವ್ಯಕ್ಕೆ ಶಹಾಪುರ ಎಂಬ ಉಪನಗರವನ್ನು ನಿರ್ಮಿಸಿದನು.[೧೦೯] ಈ ದ್ವಾರವು ಉಪನಗರಕ್ಕೆ ಸಂಪರ್ಕವನ್ನು ಕಲ್ಪಿಸುತ್ತದೆ. ಹೀಗಾಗಿ ಇದನ್ನು ಶಹಾಪುರ ದ್ವಾರ ಎಂದು ಕರೆಯುತ್ತಾರೆ. ಇದನ್ನು ಮುಳ್ಳ ಅಗಸಿ ಎಂಬ ಇನ್ನೊಂದು ಹೆಸರಿನಿಂದಲೂ ಸ್ಥಳೀಯವಾಗಿ ಕರೆಯಲಾಗುತ್ತದೆ. ಕಾರಣ

ಈ ದ್ವಾರಬಾಗಿಲಿನ ತೊಲೆಗಳಿಗೆ ಕಬ್ಬಿಣದ ಮೊಳೆಗಳು ಒತ್ತೊತ್ತಾಗಿ ಇದ್ದವು. ಹೀಗಾಗಿ ಇದನ್ನು ಮುಳ್ಳ ಅಗಸಿ ಎಂದು ಕರೆಯುತ್ತಾರೆ.

ಒಂದನೇ ಅಲಿ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ವಿಶೇಷ ಪ್ರಯತ್ನಪಟ್ಟು ಶಹಾಪುರ ದ್ವಾರವನ್ನು ಖಾನ್-ಇ-ಆಜಂ ಮುರಾದ್ ಖಾನ್ ಅಮೀರ್‌ಜುಮ್ಲಾ ಕ್ರಿ.ಶ. ೧೫೭೦-೧೫೭೧ರಲ್ಲಿ ಇದನ್ನು ಸಂಪೂರ್ಣಗೈದನೆಂದು ಅಲ್ಲಿಯೇ ಇರುವ ಶಾಸನ ತಿಳಿಸುತ್ತದೆ.[೧೧೦] ಅಲ್ಲದೆ ಈ ದ್ವಾರಬಾಗಿಲಿಗೆ ಸಂಬಂಧಿಸಿದಂತೆ ಇನ್ನೂ ಎರಡು ಶಾಸನಗಳು ಕಂಡುಬರುತ್ತವೆ. ಮಹಮ್ಮದ ಆದಿಲ್‌ಶಾಹನ ಆಡಳಿತಾವಧಿಯ ಶಾಸನ ಶಹಾಪುರ ದ್ವಾರದಲ್ಲಿ ಬುರುಜನ್ನು ನಿರ್ಮಾಣ ಮಾಡಿದ ಸಂಗತಿಯನ್ನು ದಾಖಲಿಸಿದೆ. ಬುರುಜುವಿಗೆ ಅಹಮ್ಮದಬುರುಜು ಎಂದು ಹೆಸರಿಸಿದೆ. ಇದನ್ನು ಮಹಮ್ಮದ ಆದಿಲ್‌ಶಾಹ ದೊರೆಯ ಆಳ್ವಿಕೆಯ ಕಾಲದಲ್ಲಿ ರಾಜಾಜ್ಞೆಯ ಮೇರೆಗೆ ಸೇನಾಧಿಪತಿಗಳ ಮುಖ್ಯಸ್ಥ ಅಹಮ್ಮದ್‌ಖಾನನು ಕ್ರಿ.ಶ. ೧೬೪೩-೪೪ರಲ್ಲಿ ನಿರ್ಮಿಸಿದನು[೧೧೧] ಎಂದು ತಿಳಿಸುತ್ತದೆ. ಕಾಲದ ಉಲ್ಲೇಖವಿಲ್ಲದ ಇನ್ನೊಂದು ಶಾಸನ ಖಾನ್-ಇ-ಖಾನ್‌ನ ಅವರ ಆಜ್ಞೆಯ ಮೇರೆಗೆ ನಾಯಿಬ ದಿವಾನ್ ಅಲಿ ಸಂದರ್ ನುಸರತ್‌ಶಾಹ ಈ ಬುರುಜನ್ನು ನಿರ್ಮಾಣ ಮಾಡಿಸಿದನು. 'ಅಲುಂದ್'(ಇರಾನ್‌ನಲ್ಲಿರುವ 'ಹಮ್‌ದಾನ್') ಬೆಟ್ಟದಂಥ ಬುರುಜಿರುವ ಭಾಗವನ್ನು 'ಮಹಮ್ಮದ್‌ಪುರ' ಎಂದು ಉಲ್ಲೇಖಿಸಿದೆ.[೧೧೨] ಈ ಶಾಸನಗಳನ್ನು ಗಮನಿಸಿದಾಗ ಕ್ರಿ.ಶ. ೧೫೭೦ರಲ್ಲಿಯೇ ಈ ದ್ವಾರಬಾಗಿಲ ನಿರ್ಮಾಣ ಪೂರ್ಣಗೊಂಡಿದ್ದು ಸ್ಪಷ್ಟವಾಗುತ್ತದೆ. ಉಳಿದ ಶಾಸನಗಳು ದ್ವಾರದ ಹತ್ತಿರ ಇರುವ ಬುರುಜುಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಬಗ್ಗೆ ತಿಳಿಸಿಕೊಡುತ್ತವೆ.

ಈ ದ್ವಾರಕ್ಕೆ ಹೊಂದಿಕೊಂಡಂತೆ ಎರಡು ದೊಡ್ಡ ಬುರುಜುಗಳಿದ್ದು ಅವು ೨೫ ಮೀ. ಮತ್ತು ೨೦ ಮೀ. ವ್ಯಾಸವನ್ನು ಹೊಂದಿವೆ. ದ್ವಾರಕ್ಕೆ ಪ್ರಮುಖವಾಗಿ ಎರಡು ದ್ವಾರಗಳಿದ್ದು ಮೊದಲನೇ ದ್ವಾರವು ೩.೫೦ ಮೀ. ಅಗಲವಾಗಿದೆ. ಇಲ್ಲಿಂದ 'C' ಆಕಾರವಾಗಿ ಮುಂದುವರಿದ ಮೇಲೆ ದಕ್ಷಿಣಾಭಿಮುಖವಾಗಿರುವ ಮತ್ತೊಂದು ಬಾಗಿಲು ಬರುತ್ತದೆ. ಇದು ೧೬.೫ ಅಡಿ ಅಗಲ, ೨೪.೭೫ ಮೀ. ಎತ್ತರವಿದೆ. ಎರಡು ದ್ವಾರಗಳ ಮಧ್ಯದ ಪ್ರಾಂಗಣವು ಅನಿಯಮಿತ ಆಕಾರದಲ್ಲಿದೆ ಎರಡನೆಯ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಸೈನಿಕರ ವಿಶ್ರಾಂತಿ ಕೋಣೆಗಳಿವೆ. ಈ ದ್ವಾರಗಳಿಗೆ ಕಟ್ಟಿಗೆಯ ತೊಲೆಗಳಿದ್ದು ಅವುಗಳಿಗೆ ಕಬ್ಬಿಣದ ಮೊಳೆಗಳನ್ನು ಜಡಿಯಲಾಗಿತ್ತು ಎಂದು ಹೇಳಲಾಗುತ್ತದೆ. ಇಂದು ಆ ಕಟ್ಟಿಗೆಯ ತೊಲೆಗಳು ಕಂಡುಬರುವುದಿಲ್ಲ.

೪. ಬಹಮನಿ ದ್ವಾರ

ಕೋಟೆಯ ಉತ್ತರಭಾಗಕ್ಕೆ ಇಂಡಿ ರಸ್ತೆ ಹತ್ತಿರ ಕಂಡುಬರುವ ದ್ವಾರವು ಬಹಮನಿ ಸಾಮ್ರಾಜ್ಯದ ಕಡೆ ಮುಖ ಮಾಡಿರುವುದರಿಂದ ಇದನ್ನು ಬಹಮನಿ ದ್ವಾರ ಎಂದು, ಸ್ಥಳೀಯವಾಗಿ ಬಂಬಳ ಅಗಸಿ ಎಂದೂ ಕರೆಯಲಾಗುತ್ತದೆ. ವಿಜಾಪುರ ಕೋಟೆಯ ಉಳಿದ ದ್ವಾರಗಳಿಗಿಂತ

ಇದನ್ನು ಅತ್ಯಂತ ರಕ್ಷಣಾತ್ಮಕ ತಂತ್ರಗಳನ್ನು ಉಪಯೋಗಿಸಿ ನಿರ್ಮಿಸಿದ್ದಾರೆ. ಅರ್ಧವೃತ್ತಾಕಾರದ ವಿಶಾಲವಾದ ಬುರುಜುಗಳ ಮಧ್ಯೆ ಕಂಡುಬರುವ ಈ ದ್ವಾರ ಎರಡು ಪ್ರವೇಶ ಬಾಗಿಲುಗಳನ್ನು ಹೊಂದಿದೆ. ಇದರ ಎರಡು ದ್ವಾರಗಳು ಪೂರ್ವಾಭಿಮುಖವಾಗಿದ್ದರೂ ನೇರವಾಗಿರದೆ ಮೊದಲನೇ ದ್ವಾರದಿಂದ ಎರಡನೇ ದ್ವಾರಕ್ಕೆ ಇಂಗ್ಲಿಷಿನ 'S' ಆಕಾರದಲ್ಲಿ ಪ್ರವೇಶವನ್ನು ಕಲ್ಪಿಸುತ್ತದೆ. ಎರಡು ವೃತ್ತಾಕಾರದ ಬರುಜುಗಳಲ್ಲಿ ಬಲಗಡೆ ಬುರುಜುವಿಗೆ ಹೊಂದಿಕೊಂಡು ಕೋಟೆಗೋಡೆಗೆ ಮುಖ್ಯದ್ವಾರ ೪.೪೦ ಮೀ. ಅಗಲವಾಗಿದೆ. ಶತ್ರುಗಳ ದೃಷ್ಟಿಗೆ ನೇರವಾಗಿ ಕಾಣದಂತೆ ಇಂಗ್ಲೀಷಿನ 'L' ಆಕಾರದಲ್ಲಿ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಮುಖ್ಯದ್ವಾರ ಮತ್ತು ಈ ತಡೆಗೋಡೆಯ ಮಧ್ಯೆ ವಿಶಾಲವಾದ ಪ್ರಾಂಗಣ ಕಂಡುಬರುತ್ತದೆ. ತಡೆಗೋಡೆಯಲ್ಲಿ ಸೈನಿಕರ ವಿಶ್ರಾಂತಿ ಕೋಣೆಗಳಿವೆ. ಅಲ್ಲದೆ ಇನ್ನೊಂದು ಎಡಗಡೆಯ ಬುರುಜುವಿನಿಂದ ಉದ್ದವಾಗಿ ಮತ್ತೊಂದು ತಡೆಗೋಡೆಯನ್ನು ನಿರ್ಮಿಸಲಾಗಿದೆ. ಹೀಗೆ ಎರಡು ತಡೆಗೋಡೆಗಳ ಮಧ್ಯೆ ಕೋಟೆಯ ಪ್ರವೇಶದ ಮೊದಲ ದ್ವಾರವನ್ನು ನಿರ್ಮಿಸಿದ್ದು ಎರಡು ಬದಿಯಲ್ಲಿ ಸೈನಿಕರ ವಿಶ್ರಾಂತಿ ಕೊಠಡಿಗಳಿವೆ. ಅಲ್ಲದೆ ತಡೆಗೋಡೆಗಳಲ್ಲಿಯೂ ಸೈನಿಕರು ಅಡಗಿ ಕುಳಿತುಕೊಳ್ಳಲು ಕಮಾನಾಕೃತಿಯ ಕೋಣೆಗಳನ್ನು ಇಲ್ಲಿಯೂ ಕಾಣಬಹುದು. ತಡೆಗೋಡೆಯ ಮೇಲೆ ಹತ್ತಲು ಒಳಭಾಗದಲ್ಲಿ ಮೆಟ್ಟಿಲುಗಳಿವೆ. ಕೋಟೆಗೋಡೆಗೆ ಹೊಂದಿಕೊಂಡಿರುವ ಮುಖ್ಯದ್ವಾರದ ಬಲಭಾಗದಲ್ಲಿ ದಿಡ್ಡಿಬಾಗಿಲು ಇದೆ ಮತ್ತು ಈ ದ್ವಾರದ ಒಳ ಪ್ರವೇಶದಲ್ಲಿ ಎರಡು ಬದಿಗಳಲ್ಲಿ ಅಂಕಣಗಳು ಕಂಡುಬರುತ್ತವೆ.

ಈ ದ್ವಾರಕ್ಕೆ ಹೊಂದಿಕೊಂಡಿರುವ ಬುರುಜುಗಳು ಉಳಿದ ನಾಲ್ಕು ದ್ವಾರಗಳಿಗಿಂತ ವಿಶಾಲವಾಗಿವೆ. ಇವು ಸುಮಾರು ೨೭ ಮೀ. ವ್ಯಾಸವನ್ನು ಹೊಂದಿವೆ. ಎಡಭಾಗದಲ್ಲಿ ಇರುವ ಬುರುಜು ಎರಡು ಹಂತದಿಂದ ಕೂಡಿದ್ದು ಮೊದಲನೆಯ ಹಂತದಲ್ಲಿ ಸುಮಾರು ೨೭ ಮೀ. ವ್ಯಾಸವಿದೆ. ಇದರ ಮೇಲೆ ಸುತ್ತಲೂ ಕೈಪಿಡಿಗೋಡೆ ಮತ್ತು ತೆನೆಗಳ ರಚನೆಗಳಿವೆ. ಇದರ ಮಧ್ಯೆ ಮತ್ತೊಂದು ವೃತ್ತಾಕಾರದ ಬುರುಜನ್ನು ಮೇಲ್ಭಾಗದಲ್ಲಿ ನಿರ್ಮಿಸಿದ್ದು ಸುಮಾರು ೨೦ ಅಡಿ ಎತ್ತರವಿದೆ. ಇದರ ಮೇಲೆ ಹತ್ತಲು ಪೂರ್ವಭಾಗದಲ್ಲಿ ಮೆಟ್ಟಿಲುಗಳಿವೆ. ಈ ಬುರುಜನ್ನು ಕಾವಲುಗೋಪುರವಾಗಿ ಬಳಸುತ್ತಿರಬಹುದು. ಏಕೆಂದರೆ ಇದರ ಮೇಲೆ ತೋಫುಗಳನ್ನು ಇಡಲು ಯಾವುದೇ ರೀತಿಯ ರಚನೆಗಳು ಕಂಡುಬರುವುದಿಲ್ಲ. ಇದು ಎತ್ತರವಾಗಿರುವುದರಿಂದ ಆದಿಲ್‌ಶಾಹಿಗಳ ಸಾಮ್ರಾಜ್ಯದ ಧ್ವಜವನ್ನು ನೆಡಲು ಕೂಡ ಬಳಸಿಕೊಂಡಿರಬಹುದು.

೫. ಅಲ್ಲಾಪುರ ದ್ವಾರ

ಕೋಟೆಯ ಪೂರ್ವಭಾಗದಲ್ಲಿ ಗೋಳಗುಮ್ಮಜದ ಹತ್ತಿರ ಈ ದ್ವಾರವಿದೆ. ಈ ದ್ವಾರ ಇರುವ ದಿಕ್ಕಿಗೆ ಅಲ್ಲಾಪುರ ಎಂಬ ಗ್ರಾಮವು ಇದ್ದುದರಿಂದ ಇದಕ್ಕೆ ಅಲ್ಲಾಪುರ ದ್ವಾರ ಎಂದು ಕರೆಯುತ್ತಾರೆ. ಎರಡು ಬಾಗಿಲುಗಳನ್ನು ಹೊಂದಿರುವ ಇದರ ಮೊದಲ ದ್ವಾರವು ಉತ್ತರಾಭಿಮುಖವಾಗಿದ್ದು, ಇದು ೧೬.೫೦ ಅಡಿ ಅಗಲವನ್ನು ಹೊಂದಿದೆ. ಕೋಟೆಗೋಡೆಗೆ

ಹೊಂದಿಕೊಂಡಿರುವ ಇನ್ನೊಂದು ದ್ವಾರವು ಪೂರ್ವಾಭಿಮುಖವಾಗಿದ್ದು ೧೬ ಅಡಿ ಅಗಲವಾಗಿದೆ. ಮೊದಲ ದ್ವಾರದಿಂದ ಅರ್ಧವೃತ್ತಾಕಾರದಲ್ಲಿ ಪ್ರವೇಶವನ್ನು ಇದು ಕಲ್ಪಿಸುತ್ತದೆ. ಪೂರ್ವಾಭಿಮುಖವಾಗಿರುವ ದ್ವಾರದ ಮುಂದೆ ಅರ್ಧವೃತ್ತಾಕಾರದ ತಡೆಗೋಡೆ ಇದ್ದು ಇಂದು ಸಂಪೂರ್ಣವಾಗಿ ನಾಶ ಹೊಂದಿದೆ. ಆದರೆ ಉತ್ತರಾಭಿಮುಖವಾಗಿರುವ ದ್ವಾರ ಮಾತ್ರ ಅವಶೇಷವಾಗಿ ಉಳಿದುಕೊಂಡು ಕೋಟೆಯ ಇತಿಹಾಸವನ್ನು ಸಾರುತ್ತಿದ್ದು, ಈ ದ್ವಾರದಲ್ಲಿ ಕಟ್ಟಿಗೆ ತೊಲೆಗಳು, ಬಾಗಿಲುಗಳನ್ನು ಇಂದಿಗೂ ನೋಡಬಹುದು. ಬಾಗಿಲುಗಳಲ್ಲಿ ಮೊಳೆಗಳು ಕಂಡುಬರುತ್ತವೆ. ಉತ್ತರಾಭಿಮುಖವಾಗಿರುವ ದ್ವಾರವು ಸಿಕಂದರ್ ಆದಿಲ್‌ಶಾಹನ ಅವಧಿಯಲ್ಲಿ ಜೀರ್ಣೋದ್ಧಾರಗೊಂಡಿರುವ ಸಾಧ್ಯತೆಗಳಿವೆ. ದ್ವಾರಬಾಗಿಲಿನ ಮೇಲಿನ ಶಾಸನವು ಇದನ್ನು ಕಿ.ಶ. ೧೬೭೭(ಹಿ.ಶ. ೧೦೮೮)ರಲ್ಲಿ ಅಲ್ಲಾನ ಕೃಪೆಯಿಂದ ನಿರ್ಮಿಸಲ್ಪಟ್ಟಿದೆ ಎಂದು ಉಲ್ಲೇಖಿಸುತ್ತದೆ.[೧೧೩]

ಪೂರ್ವಾಭಿಮುಖವಾಗಿರುವ ದ್ವಾರಬಾಗಿಲಿನ ಇಕ್ಕೆಲಗಳಲ್ಲಿ ಅರ್ಧವೃತ್ತಾಕಾರದ ಬುರುಜುಗಳಿದ್ದು ಅಷ್ಟೊಂದು ಬೃಹತ್ ಪ್ರಮಾಣದಲ್ಲಿಲ್ಲ. ಆದರೆ ಎಡಭಾಗದಲ್ಲಿನ ಬುರುಜು ಟೊಳ್ಳಾಗಿದೆ. ಈ ದ್ವಾರದ ಪ್ರವೇಶದ ಇಕ್ಕೆಲಗಳಲ್ಲಿ ಮತ್ತು ಒಳಭಾಗದಲ್ಲಿ ಸೈನಿಕರ ಕೊಠಡಿಗಳನ್ನು ಕಾಣಬಹುದು. ದ್ವಾರದ ನಿರ್ಮಾಣಕ್ಕೆ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯಗಳ ಲಕ್ಷಣಗಳಿರುವ ಕಂಬಗಳನ್ನು ಬಳಸಿಕೊಂಡಿದ್ದನ್ನು ಕಾಣಬಹುದು. ಉದಾಹರಣೆಗೆ ಪೂರ್ವಾಭಿಮುಖವಾಗಿರುವ ದ್ವಾರದ ಭಾವಣಿಯ ಬಾಗಿಲುಚೌಕಟ್ಟಿನಲ್ಲಿ ಭದ್ರತಾ ಸ್ತಂಭವನ್ನು ಬಳಸಿದ್ದಾರೆ.

ಉತ್ತರಾಭಿಮುಖವಾಗಿರುವ ದ್ವಾರದ ಎಡಬದಿಯಲ್ಲಿ ದಿಡ್ಡಿಬಾಗಿಲಿದ್ದು, ಇದನ್ನು ಪ್ರವೇಶಿಸಿದ ಮೇಲೆ ಎರಡು ದ್ವಾರದ ಮಧ್ಯದ ಪ್ರಾಂಗಣದೊಳಗೆ ಬರುತ್ತವೆ. ನಂತರ ಪೂರ್ವಾಭಿಮುಖವಾಗಿರುವ ದ್ವಾರದಲ್ಲಿ ಎಡಭಾಗದಲ್ಲಿ ಕೋಟೆಯ ಒಳಗೆ ಹೋಗಲು ದಿಡ್ಡಿಬಾಗಿಲು ಕಂಡುಬರುತ್ತದೆ. ಇದು ೪ ಅಡಿ ಅಗಲ, ೪ ಅಡಿ ಎತ್ತರವಿದೆ. ಈ ದ್ವಾರದ ಭಾವಣಿಯ ಮೇಲೆ ಕಟ್ಟಿಗೆಯ ಪದ್ಮದಳಗಳ ಕೆತ್ತನೆಯಿದ್ದು ಅದರ ಮೇಲೆ ಶಾಸನವಿದೆ. ದ್ವಾರಬಾಗಿಲ ಮೇಲೆ ಶತ್ರುಗಳಿಗೆ ಕಾಣದ ಹಾಗೆ ಬಾಲ್ಕನಿಯನ್ನು ನಿರ್ಮಿಸಲಾಗಿದ್ದು ಇದರೊಳಗಿನಿಂದ ಶತ್ರುಗಳ ವೀಕ್ಷಣೆ ಮಾಡಲು ಮತ್ತು ಅವರ ಮೇಲೆ ದಾಳಿ ಮಾಡಲು ಬಂದೂಕುಕಿಂಡಿಗಳಿವೆ. ಈ ಬಾಲ್ಕನಿಯ ಮೇಲೆ ರಕ್ಷಣಾತ್ಮಕ ದೃಷ್ಟಿಕೋನವನ್ನು ಇಟ್ಟುಕೊಂಡು ತೆನೆಗಳ ಅಲಂಕಾರ ಕಂಡುಬರುತ್ತದೆ.

೬. ನಾಗಠಾಣ ದ್ವಾರ

ಐದು ಪ್ರಮುಖ ದ್ವಾರಗಳಷ್ಟೇ ಅಲ್ಲದೆ, ಈಶಾನ್ಯ ದಿಕ್ಕಿಗೆ ಮುಖ ಮಾಡಿರುವ ನಾಗಠಾಣ ದ್ವಾರವು ವಿಜಾಪುರದ ಪ್ರಮುಖದ್ವಾರಗಳಲ್ಲಿ ಒಂದೆನಿಸಿಕೊಂಡಿದೆ. ಈ ದ್ವಾರಬಾಗಿಲ ದಿಕ್ಕಿಗೆ ನಾಗಠಾಣ ಗ್ರಾಮವು ಬರುವುದರಿಂದ ಇದಕ್ಕೆ ನಾಗಠಾಣ ದ್ವಾರವೆಂದು ಕರೆಯುತ್ತಾರೆ. ಒಂದು ಬದಿಯಲ್ಲಿ ಮಾತ್ರ ಬುರುಜು ಉಳಿದುಕೊಂಡು ಬಂದಿದೆ. ಈ ದ್ವಾರವು ಸಂಪೂರ್ಣವಾಗಿ

ಅವನತಿ ಹೊಂದಿರುವುದರಿಂದ ದ್ವಾರವಿರುವ ಯಾವುದೇ ಅವಶೇಷಗಳು ಉಳಿದುಕೊಂಡಿಲ್ಲ. ಈಗ ಈ ದ್ವಾರವಿರುವ ಸ್ಥಳದಲ್ಲಿ ನಾಗಾಠಾಣೆಗೆ ಹೋಗಲು ರಸ್ತೆಯನ್ನು ಮಾಡಲಾಗಿದೆ. ಈ ಬುರುಜುವಿಗೆ ಮೇಲೆ ಹತ್ತಲು ಮೆಟ್ಟಿಲುಗಳಿವೆ.

ಕೋಟೆಯ ನಿರ್ಮಾಣದ ನಂತರದ ಕಾಲಘಟ್ಟದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕೆಲವು ಕಡೆ ಕೋಟೆ ಗೋಡೆಯನ್ನು ಕೆಡವಿ ಅಲ್ಲಿ ದ್ವಾರಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಅಲ್ಲದೆ ಕೋಟೆಗೆ ಜರೂರು ಬಿದ್ದಾಗ ಉಪಯೋಗಿಸಲೆಂದು ಕೊರೆದು ಮತ್ತೆ ಅವುಗಳನ್ನು ಕಲ್ಲು ಮತ್ತು ಸುಣ್ಣಗಳಿಂದ ಮುಚ್ಚಲಾಗಿದೆ.[೧೧೪] ಅಂತಹವುಗಳಲ್ಲಿ ಇನ್ನೂ ಕೆಲವು ಪ್ರಮುಖ ದ್ವಾರಗಳಿವೆ.

ಪಾದಶಾಹಪುರ ದ್ವಾರ

ಅಲ್ಲಾಪುರ ದ್ವಾರದ ಉತ್ತರಕ್ಕೆ ಪಾದಶಹಾಪುರ ದ್ವಾರ ಇದೆ. ಇದನ್ನು ಮಹಮ್ಮದ ಆದಿಲ್‌ಶಾಹನು ಕಟ್ಟಿಸಿದನೆಂದು 'ಬಸಾತಿನೆ ಸಲಾತೀನ' ಕೃತಿಯಿಂದ ತಿಳಿದುಬರುತ್ತದೆ. ಈ ಬಾದಶಾಹಪುರ ದ್ವಾರವೇ ಪಾದಶಾಹಪುರ ದ್ವಾರ ಆಗಿರಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಬಾದಶಾಹಪುರ ದ್ವಾರದ ನಿರ್ಮಾಣದ ಹಿನ್ನೆಲೆ ಕುರಿತಂತೆ ಒಂದು ವೃತ್ತಾಂತವಿದೆ. ಮಹಮ್ಮದ ಆದಿಲ್‌ಶಾಹನು ಪ್ರಜಾಪಾಲನೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಒಂದು ದಿನ ಬ್ರಾಹ್ಮಣನು ಅನೇಕ ರೈತರೊಂದಿಗೆ ಯಾವುದೋ ಕೆಲಸಕ್ಕಾಗಿ 'ಇಲಾಹಾಪುರ'(ಅಲ್ಲಾಪುರದ್ವಾರ ಆಗಿರಬಹುದು) ಬಾಗಿಲಿನ ಹೊರಗೆ ಹೋದರು. ಹೊರಗೆ ಹೋಗುವ ಸಮಯದಲ್ಲಿ ಬಾಗಿಲಲ್ಲಿ ನಾಯಕ ಮತ್ತು ಮೆಹತರ ನಾಯಿಕವಾಡಿ ಕುಳಿತಿದ್ದರು. ಅವರಿಗೆ ಬ್ರಾಹ್ಮಣನು ಸಲಾಮು ಮಾಡಿದ. ಬ್ರಾಹ್ಮಣನ ಸಲಾಮನ್ನು ಅವರು ಕುಳಿತಲ್ಲಿಂದಲೇ ಸ್ವೀಕರಿಸಿ ಕ್ಷುಲ್ಲಕನಂತೆ ಕಂಡರು. ಪ್ರತಿನಿತ್ಯ ಅವರು ನನ್ನನ್ನು ಕಂಡಾಗ ಎದ್ದು ನಿಲ್ಲುತ್ತಿದ್ದರು. ಅದರಂತೆ ಇಂದು ನಿಲ್ಲಲಿಲ್ಲ. ನಾವು ಕೂಡಾ ಬಾದಶಹರ ಪ್ರಜೆಗಳೇ ಆಗಿದ್ದೇವೆ. ಬಾದಶಹರು ನಮ್ಮನ್ನು ಸುಖಃ ಸಂತೋಷಕ್ಕಾಗಿ ಬಹಳ ಪ್ರಯತ್ನ ಪಡುತ್ತಾರೆ. ಹೀಗಿದ್ದರೂ ಇವರು ನಮ್ಮನ್ನು ಕ್ಷುಲಕರಂತೆ ಕಂಡರು ಇನ್ನೂ ಮುಂದೆ ನಾವು ಎಲ್ಲರ ದೃಷ್ಟಿಯಿಂದಲೂ ಅಯೋಗ್ಯರಾಗಿ ಕೊನೆಗೆ ಬಾದಶಾಹನ ದೃಷ್ಟಿಯಿಂದಲೂ ಕೆಳಗೆ ಬೀಳುತ್ತೇವೆ. ಅಂದ ಮೇಲೆ ಇನ್ನು ಈ ನಗರದಲ್ಲಿ ಇರುವುದು ಸರಿಯಲ್ಲ ಎಂದು ಬ್ರಾಹ್ಮಣ ಹಾಗೂ ಅವನ ವಶದಲ್ಲಿದ್ದ ರೈತರು ಅದೇ ರಾತ್ರಿ ನಗರದ ಹೊರಗೆ ಹೊರಟುಹೋದರು. ರಾತ್ರಿ ಗುಪ್ತಚಾರರು ಈ ಸುದ್ದಿಯನ್ನು ಬಾದಶಹನಿಗೆ ಹೇಳಿದರು ಇದು ಬಾದಶಹನಿಗೆ ತುಂಬ ಕೆಟ್ಟೆನಿಸಿತು. ಸೊಕ್ಕಿನಿಂದ ಮೆರೆದ ನಾಯಕ ಮತ್ತು ನಾಯಿಕವಾಡಿಗೆ ಯೋಗ್ಯ ಶಿಕ್ಷೆ ಕೊಟ್ಟನಲ್ಲದೆ ಮಹಾಜನ ಹಾಗೂ ರೈತ ಜನರಿಗೆ ವಾಪಸ್ಸು ಕರೆತರಲು ತನ್ನ ದರಬಾರದ ಖಾಸಾ ಜನರನ್ನು ಕಳುಹಿಸಿ ಅವರನ್ನು ಸಮಾಧಾನಪಡಿಸಿ ವಾಪಸ್ಸು ಬರಲು ಹೇಳಿದ. ಅವರು ಸುಲ್ತಾನನ ಮಾತಿಗೆ ಒಪ್ಪಿದರು. ಆದರೆ ನಾವು ಬರುವಾಗ ಯಾವ ಬಾಗಿಲಿನಿಂದ ನಮ್ಮನ್ನು ಕ್ಷುಲ್ಲಕತನದಿಂದ ಕಾಣಲಾಯಿತೋ ಆ ಬಾಗಿಲಲ್ಲಿ ನಾವು ತಿರುಗಿ

ಕಾಲಿಡುವುದಿಲ್ಲ ಎಂದರು. ಈ ವಿಷಯ ಬಾದಶಹನಿಗೆ ತಿಳಿಯುತ್ತಲೇ ಬಾದಶಹನು ನಗರದ ಗೌಂಡಿಗಳ ನಾಯಕನನ್ನು ಕರೆದು ಕೋಟೆಯನ್ನು ಒಡೆದು ಬೇರೆಡೆ ಬಾಗಿಲು ಕಟ್ಟಲು ಆಜ್ಞೆ ಮಾಡಿದನು. ಅವರು ಇಡೀ ರಾತ್ರಿ ಹಗಲು ಕೋಟೆಗೋಡೆಯನ್ನು ಒಡೆದು ಬೇರೆ ಬಾಗಿಲನ್ನು ನಿರ್ಮಿಸಿದರು. ಅದೇ ಇಂದಿನ ಬಾದಶಾಹಪುರ/ಪಾದಶಹಾಪುರ ದ್ವಾರ. ಅದರ ಮುಖಾಂತರ ಬ್ರಾಹ್ಮಣ ರೈತರನ್ನು ಬಹು ಆದರದಿಂದ ನಗರಕ್ಕೆ ಬರಮಾಡಿಕೊಂಡರು.[೧೧೫] ಇಲ್ಲಿ ಅಲ್ಲಾಪುರದ್ವಾರದಿಂದ ಬ್ರಾಹ್ಮಣರು ಹೊರಹೋಗಿದ್ದುದು ಕಂಡುಬರುತ್ತದೆ. ಪಾದಶಹಾಪುರ ದ್ವಾರವು ಅಲ್ಲಾಪುರ ದ್ವಾರದಿಂದ ಅಲ್ಪದೂರದಲ್ಲಿ ಮತ್ತು ಗೋಳಗುಮ್ಮಜದ ಸಮೀಪ ಈಶಾನ್ಯ ದಿಕ್ಕಿಗೆ ಕಂಡುಬರುತ್ತದೆ. ಹೀಗಾಗಿ ಪಾದಶಹಪುರ ದ್ವಾರ ಇದೇ ಎಂದು ಸ್ಪಷ್ಟಪಡಿಸಬಹುದು.

ಮೂರು ಮೀಟರ್ ಅಗಲವಿರುವ ಈ ದ್ವಾರವು ಕಮಾನಾಕೃತಿಯಲ್ಲಿದೆ. ಈಗಿನ ಗೋಳಗುಮ್ಮಜದ ಹಿಂದಿನ ಭಾಗದಲ್ಲಿ ಈ ದ್ವಾರ ಕಂಡುಬರುತ್ತದೆ. ಈ ದ್ವಾರದ ಮುಂಭಾಗದಲ್ಲಿ ಎರಡು ಕಡೆ ಗೋಡೆಯಲ್ಲಿ ಶಿಲ್ಪಗಳ ಫಲಕಗಳಿವೆ. ಎಡಭಾಗದ ಗೋಡೆಯಲ್ಲಿ ಕುದುರೆಯ ಮೇಲೆ ಹೋರಾಡುತ್ತಿರುವ ವೀರರ ಶಿಲ್ಪ, ಇನ್ನೊಂದು ನೃತ್ಯ ಮಾಡುತ್ತಿರುವ ಸ್ತ್ರೀಯ ಶಿಲ್ಪ, ಬಲಭಾಗದ ಗೋಡೆಯಲ್ಲಿ ಆನೆಯ ಮೇಲೆ ಕುಳಿತ ವ್ಯಕ್ತಿಗಳು ಹೋರಾಡುತ್ತಿರುವ ಶಿಲ್ಪಗಳು ಕಂಡುಬರುತ್ತವೆ. ಈ ದ್ವಾರವು ರಕ್ಷಣಾತ್ಮಕ ತಂತ್ರದಿಂದ ಕೂಡಿರುವುದಿಲ್ಲ. ಇಂದು ಈ ದ್ವಾರವನ್ನು ಕಲ್ಲಿನ ಗೋಡೆಯನ್ನು ಕಟ್ಟಿ ಮುಚ್ಚಲಾಗಿದೆ.

ಜೋರಾಪುರ ದ್ವಾರ

ನಗರದ ಪಶ್ಚಿಮಕ್ಕೆ ತೊರವಿ ರಸ್ತೆಯಲ್ಲಿ ಜೋರಾಪುರ ದ್ವಾರವಿದೆ.[೧೧೬] ಈ ದ್ವಾರವು ಇಂದು ಸಂಪೂರ್ಣವಾಗಿ ಹಾಳಾಗಿದ್ದು ದ್ವಾರದ ಯಾವುದೇ ಅವಶೇಷಗಳು ಉಳಿದುಕೊಂಡು ಬಂದಿಲ್ಲ. ಬಹುಶಃ ಈ ದ್ವಾರವನ್ನು ಕೂಡ ರಕ್ಷಣಾತ್ಮಕ ದೃಷ್ಟಿಕೋನ ಇಟ್ಟುಕೊಂಡು ನಿರ್ಮಿಸಿಲ್ಲ. ಇದರ ಒಳ ಮತ್ತು ಹೊರಭಾಗದಲ್ಲಿ ಆಧುನಿಕವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಸರ್ವಾಡ ದಿಡ್ಡಿ

ವಿಜಾಪುರ ಕೋಟೆಗೆ ಸುಮಾರು ದಿಡ್ಡಿಬಾಗಿಲುಗಳಿವೆ. ಅವುಗಳಲ್ಲಿ ಸರ್ವಾಡ ದಿಡ್ಡಿ ಪ್ರಮುಖವಾಗಿ ಕಂಡುಬರುತ್ತದೆ. ಕೋಟೆಯ ನೈರುತ್ಯಕ್ಕೆ ಇರುವ ಇದು ೫.೭೫ ಅಡಿ ಅಗಲವಾಗಿದ್ದು ಕಮಾನಾಕೃತಿಯಲ್ಲಿದೆ. ಕೋಟೆಯ ಗೋಡೆಯ ತಿರುವಿನಲ್ಲಿ ಈ ದ್ವಾರವನ್ನು ನಿರ್ಮಿಸಲಾಗಿದೆ. ಯಾವುದೇ ರಕ್ಷಣಾತ್ಮಕ ರಚನೆಗಳು ಇಲ್ಲಿ ಕಂಡುಬರುವುದಿಲ್ಲ. ಅದಕ್ಕೆ ಹೊಂದಿಕೊಂಡು ಕೋಟೆಗೋಡೆಯ ಬುರುಜಿದೆ.

ಒಟ್ಟಾರೆ ಈ ಎಲ್ಲ ದ್ವಾರಗಳ ವಾಸ್ತುಶೈಲಿ ಒಂದೇ ರೀತಿಯಾಗಿ ಕಂಡುಬಂದರೂ ಒಂದೇ ರಚನಾವಿನ್ಯಾಸವನ್ನು ಹೊಂದಿರದೆ ಶತ್ರುಗಳ ಆಕ್ರಮಣಗಳು ಯಾವ ದಿಕ್ಕಿನಲ್ಲಿ ಹೆಚ್ಚು ನಡೆಯುತ್ತವೆ

ಎಂಬ ದೃಷ್ಟಿಕೋನವನ್ನಿಟ್ಟುಕೊಂಡು ಆಯಾ ಭಾಗದಲ್ಲಿ ಹೆಚ್ಚು ರಕ್ಷಣೆಗೆ ಒತ್ತುಕೊಟ್ಟಿದ್ದನ್ನು ಕಾಣಬಹುದು. ಕೋಟೆಯ ಪ್ರಮುಖ ದ್ವಾರಬಾಗಿಲುಗಳು ಮತ್ತು ಅನೇಕ ದಿಡ್ಡಿಬಾಗಿಲುಗಳು ಕೋಟೆಯ ಸುತ್ತಲೂ ಕಂಡುಬರುತ್ತವೆ. ಆದರೆ ಆಕರಗಳ ಕೊರತೆಯಿಂದ ಆ ದ್ವಾರಗಳ ನಿರ್ಮಾಣದ ಹಿನ್ನೆಲೆ ಮತ್ತು ಯಾವ ದ್ವಾರ ಎಂದು ಹೇಳುವುದು ಕಷ್ಟಸಾಧ್ಯವಾಗಿದೆ.

ತೋಫುಗಳು

ಸಿಡಿಮದ್ದಿನ ಬಳಕೆ ಪ್ರಾರಂಭವಾದಾಗಿನಿಂದ ಕೋಟೆಯ ರಚನೆಯಲ್ಲಿಯೂ ಸಾಕಷ್ಟು ಬದಲಾವಣೆಗಳಾದವು. ಸಿಡಿಮದ್ದನ್ನು ಬಳಸಿ ಗುಂಡುಗಳನ್ನು ಸಿಡಿಸುತ್ತಿದ್ದ ತೋಫುಗಳ ಬಳಕೆ ಯಥೇಚ್ಛವಾಗಿ ಕಂಡುಬಂದ ಬಳಿಕ ಮಣ್ಣಿನ ಕೋಟೆಗಳ ಬದಲಿಗೆ ಕಲ್ಲಿನ ಕೋಟೆಗಳು ಬಳಕೆಗೆ ಬಂದವು. ಕೋಟೆಯ ಬಲಿಷ್ಠತೆಗೆ ಅನುಗುಣವಾಗಿ ಅದರ ಉದ್ದ ಅಗಲಗಳು ವಿಸ್ತಾರಗೊಂಡವು. ಬಿಲ್ಲು ಬಾಣಗಳಿಗೆ ಬದಲಾಗಿ ಬಂದೂಕು, ತೋಫುಗಳು ಬಳಕೆಗೆ ಬಂದವು. ಈ ಹಿನ್ನೆಲೆಯಲ್ಲಿಯೇ ಯುದ್ಧತಂತ್ರದಲ್ಲಾದ ಬದಲಾವಣೆಯನ್ನಿಟ್ಟುಕೊಂಡು ವಿಜಾಪುರ ಕೋಟೆಯನ್ನು ನಿರ್ಮಿಸಲಾಯಿತು.

ಸಿಡಿಮದ್ದಿನ ಬಳಕೆ ಬಂದ ಮೇಲೆ ಬಂದೂಕುಗಳ ಜೊತೆಗೆ ಸೈನ್ಯದಲ್ಲಿ ಫಿರಂಗಿಪಡೆಯೆಂಬ ಒಂದು ಪ್ರತ್ಯೇಕ ಸೈನ್ಯವ್ಯೂಹವೇ ರಚನೆಗೊಂಡಿತು. ಇಲ್ಲಿ ಭಾರವಾದ ತೋಫುಗಳಲ್ಲಿ ಮದ್ದನ್ನು ತುಂಬಿ ಬಹಳ ದೂರದವರೆಗೆ ಹಾರಿಸುವ ಕ್ರಮವು ಜಾರಿಗೆ ಬಂದಿತು. ಇದರಿಂದಾಗಿ ಇದುವರೆಗೆ ಬಳಕೆಯಲ್ಲಿದ್ದ ಮುಖಾಮುಖಿ ಕಾಳಗದ ಬದಲಾಗಿ ದೂರದಿಂದಲೇ ಆಕ್ರಮಣ ಮಾಡಿ ಕೆಲವೇ ಸೈನಿಕರಿಂದ ಶತ್ರುಸೈನ್ಯ ನಾಶ ಮಾಡುವ ಸಾಮರ್ಥ್ಯ ಹೊಂದಿದ್ದವು. ಹೀಗಾಗಿ ಕೋಟೆಯ ಮೇಲೆ ಆಕ್ರಮಣ ಮಾಡಲು ಬಂದ ಶತ್ರುಗಳನ್ನು ದೂರದಲ್ಲಿಯೇ ತಡೆಯಲು ಇಂತಹ ತೋಫುಗಳನ್ನು ಬಳಕೆಗೆ ತರಲಾಯಿತು. ಅಲ್ಲದೆ ತೋಫುಗಳನ್ನು ಆಯಕಟ್ಟಿನ ಸ್ಥಳದಲ್ಲಿಡಲು ಇವುಗಳಿಗೆ ಪ್ರತ್ಯೇಕವಾದ ಬುರುಜುಗಳನ್ನು ನಿರ್ಮಿಸಲಾಯಿತು. ಈ ಹಿನ್ನೆಲೆಯಲ್ಲಿ ವಿಜಾಪುರ ಕೋಟೆಯಲ್ಲಿಯೂ ಸಹ ಪ್ರತ್ಯೇಕವಾಗಿ ನಿರ್ಮಾಣವಾದದ್ದು ನೋಡಬಹುದು. ವಿಜಾಪುರ ಕೋಟೆಯ ಬಲಿಷ್ಠತೆಗೆ ಸಾಕ್ಷಿ ಅದು ಬಳಸುತ್ತಿದ್ದ ತೋಫುಗಳು. ಅಂತಹವುಗಳಲ್ಲಿ ಇಂದು ನಮಗೆ ೧೩ ತೋಫುಗಳು ಮಾತ್ರ ವಿಜಾಪುರದಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಪ್ರವಾಸಿಗರ ಆಕರ್ಷಣೆಗಳಲ್ಲಿ ಒಂದಾಗಿವೆ.

ತೋಫುಗಳನ್ನು ತಯಾರಿಸುವ ವಿಧಾನವನ್ನು ಪರಿಗಣಿಸಿದರೆ ಎರಡು ವಿಧವಾದ ತೋಫುಗಳಿರುವುದು ತಿಳಿಯುತ್ತದೆ. ಮೊದಲನೆಯದು ಬಹಳ ಸರಳವಾದ ವಿಧಾನ. ಕಬ್ಬಿಣದ ಉದ್ದನೆಯ ಪಟ್ಟಿಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದರಂತೆ ಕೊಳವೆಯಾಕಾರದಲ್ಲಿ ಜೋಡಿಸಿ, ಕೊಳವೆಯ ಮೇಲೆ ಅಗಲವಾದ ಬಳೆಗಳನ್ನು ಒಂದಕ್ಕೆ ಮತ್ತೊಂದು ತಾಗುವಂತೆ ಸಾಲಾಗಿ ತೊಡಿಸಿ. ಕಬ್ಬಿಣ ಮೃದುವಾಗುವಂತೆ ಕಾಯಿಸಿ, ಪಟ್ಟಿಗಳು ಮತ್ತು ಬಳೆಗಳು ಪರಸ್ಪರ ಬೆಸೆದುಕೊಳ್ಳುವಂತೆ ಮಾಡುವುದು. ಎರಡನೆಯದು ಎರಕ ಹೊಯ್ದು ಬೇಕಾದ ಆಕಾರದ ತೋಫನ್ನು ತಯಾರಿಸುವುದು. ಈ ರೀತಿಯ ಎರಡು ವಿಧದ ತೋಫುಗಳು ವಿಜಾಪುರದಲ್ಲಿ ಕಂಡುಬರುತ್ತವೆ.[೧೧೭]

ಸಾಮಾನ್ಯವಾಗಿ ಗಂಧಕ, ಇದ್ದಿಲು ಮತ್ತು ಪೆಟ್ಲುಪ್ಪುಗಳನ್ನು ಅನುಪಾತ ೧೧.೦೯:೧೩.೦೫:೭೪.೬ರ ಪ್ರಮಾಣದಲ್ಲಿ ಸಂಯೋಜಿಸಿ ಸಿಡಿಮದ್ದನ್ನು ತಯಾರಿಸಿ ತೋಫುಗಳಿಗೆ ಬಳಸಲಾಗುತ್ತಿತ್ತು.[೧೧೮] ಸಿಡಿಮದ್ದನ್ನು ತೋಫುಗಳಲ್ಲಿ ಬಾಯಿಯ ಮೂಲಕ ತುಂಬಿ ನಂತರ ಹಿಂಬಂದಿಯಲ್ಲಿರುವ ಚಿಕ್ಕ ರಂಧ್ರದಿಂದ ಹೊರಬಂದ ಬತ್ತಿಗೆ ಬೆಂಕಿಯನ್ನು ಹಚ್ಚಿ ಸಿಡಿಸುತ್ತಿದ್ದರು. ಇಂತಹ ಚಿಕ್ಕ ರಂಧ್ರಗಳು ಪ್ರತಿ ತೋಫಿನಲ್ಲಿರುವುದು ಕಂಡುಬರುತ್ತದೆ. ಅಲ್ಲದೆ ತೋಫಿನಲ್ಲಿ ಮದ್ದು ಮತ್ತು ಕಬ್ಬಿಣದ ತುಂಡುಗಳನ್ನು ಹಾಕಿ ಹೊಡೆಯುತ್ತಿದ್ದರು. ಯಾವ ಸಾಮಗ್ರಿಯೂ ಸಿಗದಿದ್ದಾಗ ಹೆಚ್ಚಾಗಿ ಕಬ್ಬಿಣದ ತುಂಡು ಮತ್ತು ತಾಮ್ರದ ನಾಣ್ಯಗಳ ಚೀಲಗಳನ್ನಿಟ್ಟು ಹಾರಿಸುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಅವು ಮಾಡುತ್ತಿದ್ದ ನಾಶಕ್ಕಿಂತ ಅವುಗಳಿಂದ ಹೊರಟ ಶಬ್ದಗಳಿಂದ ಎದೆ ನಡುಗುತಿತ್ತು. ಪ್ರಾಣಿಗಳು ಜರ್ಜರಿತವಾಗುತ್ತಿದ್ದವು.[೧೧೯] ವಿಜಾಪುರದಲ್ಲಿ ಸದ್ಯ ಉಳಿದುಕೊಂಡು ಬಂದಿರುವ ತೋಪುಗಳು ಮಳೆ ಗಾಳಿಗೆ ಸಿಕ್ಕು ತುಕ್ಕು ಹಿಡಿಯದೆ ಇರುವುದು ಅವುಗಳ ನಿರ್ಮಾಣದ ತಾಂತ್ರಿಕತೆಗೆ ಸಾಕ್ಷಿಯಾಗಿವೆ.

ಮಾಲಿಕ್-ಇ-ಮೈದಾನ ತೋಫು

ವಿಜಾಪುರದ ಶಾರ್ಜಾಬುರುಜುವಿನ ಮೇಲೆ ಈ ತೋಫಿದೆ. ಮಾಲಿಕ್-ಇ-ಮೈದಾನ ಎಂದರೆ ರಣಭೂಮಿಯ ಬಾದಶಹ ಎಂಬರ್ಥವನ್ನು ಹೊಂದಿದೆ. ಈ ತೋಫು ಮೊದಲು ಅಹಮದ್‌ನಗರದ ಒಡೆತನದಲ್ಲಿತ್ತು ಅದನ್ನು ಮಹಮ್ಮದ್ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ವಿಜಾಪುರಕ್ಕೆ ತಂದು ಈಗಿರುವ ಬುರುಜುವಿನಲ್ಲಿ ಇಡಲಾಯಿತು. ಕ್ರಿ.ಶ. ೧೬ನೇ ಶತಮಾನದಲ್ಲಿ ಹಸನ್ ರೂಮಿಯ ಪುತ್ರ ಮೊಹಮ್ಮದ್ ಈ ತೋಫನ್ನು ತಯಾರಿಸಿದ ಎಂದು ತೋಫಿನ ಬಾಯಿಯ ಮೇಲೆ ಇರುವ ಪರ್ಶಿಯನ್ ಶಾಸನ ತಿಳಿಸುತ್ತದೆ.[೧೨೦] ಈ ತೋಫಿನ ಬಾಯಿಯ ಕೆಳಗೆ ಇರುವ ಇನ್ನೊಂದು ಶಾಸನವು ಆ.ಹಿ. ೯೫೬ ಎಂದರೆ ಕ್ರಿ.ಶ. ೧೫೪೯-೫೦ ಎಂಬ ತೇದಿಯ ಉಲ್ಲೇಖವಿದೆ. ಮತ್ತೆ ಇದರಲ್ಲಿ ನಿಜಾಮ್‌ಷಾ(ಅಹಮದ್‌ನಗರದ ನಿಜಾಮ್‌ಷಾಹಿ ಮನೆತನದ ರಾಜ) ದೊರೆಯ ಉಲ್ಲೇಖವಿದೆ. ಅವನನ್ನು ರಸೂಲರ ವಂಶದ(ಎಂದರೆ ಮಹಮ್ಮದ ಪೈಗಂಬರರ ವಂಶದ ಸೇವಕ ಎಂದು ವರ್ಣಿಸಿದೆ)[೧೨೧] ಇವನ ಕಾಲಾವಧಿಯಲ್ಲಿಯೇ ಈ ತೋಫನ್ನು ತಯಾರಿಸಿರಬಹುದು. ಅಹಮದ್‌ನಗರದಲ್ಲಿರುವ ಈ ತೋಫನ್ನು ರೋಮ್ ದೇಶದ ಕಾರಾಗಿರಿಯೊಬ್ಬನು ತಯಾರಿಸಿದ[೧೨೨] ಎಂದು 'ಬಸಾತೀನೆ ಸಲಾತೀನ'ದಲ್ಲಿ ಉಲ್ಲೇಖಿಸುತ್ತದೆ.

ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ಈ ತೋಫನ್ನು ಬಳಸಲಾಗಿತ್ತು ಎಂದು ಹೇಳಲಾಗುತ್ತದೆ. ತಾಳಿಕೋಟೆ ಯುದ್ಧದಲ್ಲಿ ಅಹಮದ್‌ನಗರದ ನಿಜಾಮಶಹನು ತೋಫುಖಾನೆ ಮುಖ್ಯಸ್ಥ ರೋಮೀಖಾನ್‌ನಿಗೆ ಆದೇಶ ಮಾಡಿ ಮುಲ್ಕ್ ಮೈದಾನ ತೋಫಿನಲ್ಲಿ ಮದ್ದನ್ನು ತುಂಬಿ ಹಾರಿಸಿ ಬಿಡು ಎಂದು ಆದೇಶವಿತ್ತನು. ಆಗ ರೋಮೀಖಾನ್‌ನು ಆ ತೋಫನ್ನು ಹಾರಿಸಲು

ಪ್ರಾರಂಭಿಸಿದಾಗ ವಿಜಯನಗರ ಸೈನ್ಯ ಪಟಪಟನೆ ಉದುರಿಬಿತ್ತು.[೨೩] ವಿಜಯನಗರ ಸೋಲಿಗೆ ಇದೂ ಒಂದು ಕಾರಣ ಎಂದು ಉಲ್ಲೇಖಿಸಲಾಗಿದೆ. ಸುಮಾರು ೫೫ ಟನ್ ಭಾರವಿರುವ ಇದನ್ನು ಬಳಸಿರಬಹುದಾದ ಖಚಿತತೆ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ನಂತರ ಅದನ್ನು ಒಯ್ದು ಸೊಲ್ಲಾಪುರದ ವಾಯವ್ಯಕ್ಕೆ ೫೦ ಮೈಲು ಅಂತರದಲ್ಲಿ ನಿಜಾಮ್‌ಶಾಹನ ಅಧೀನದಲ್ಲಿದ್ದ ಪುರಂದರದ ಕೋಟೆಯ ಮೇಲೆ ಇಡಲಾಯಿತು. ಪುರಂದರವು ಆದಿಲ್‌ಶಾಹಿಗಳ ಕೈವಶವಾದ ಮೇಲೆ ಅದನ್ನು ವಿಜಾಪುರಕ್ಕೆ ತರಲಾಯಿತು.[೨೪]

ಮಹಮ್ಮದ್ ಆದಿಲ್‌ಶಾಹನ ಅವಧಿಯಲ್ಲಿ ಹಿಜರಿ ಶಕ ೧೦೩೭ರಲ್ಲಿ ಮಾಲಿಕ್ ಮೈದಾನ ತೋಫನ್ನು ಪರಾಂಡದಿಂದ ರಿಜ್ವಾನನು ವಿಜಾಪುರಕ್ಕೆ ತಂದನು.[೨೫] ಆದಿಲ್‌ಶಾಹಿ ರಾಜ್ಯದ ಮೇಲೆ ಶಹಾಜಹಾನನು ಕ್ರಿ.ಶ. ೧೬೩೧ಡಿಸೆಂಬರ್ ತಿಂಗಳಲ್ಲಿ ತನ್ನ ಮಾವ ಅಸಫ್‌ಖಾನನ ನೇತೃತ್ವದಲ್ಲಿ ವಿಜಾಪುರದ ಮೇಲೆ ದಾಳಿ ಮಾಡಲು ಆದೇಶಿಸಿದನು.[೨೬] ಆದರೆ ವಿಜಾಪುರ ಸೈನ್ಯದ ವಿರುದ್ಧ ಆತನ ಸೈನ್ಯ ಸೋತು ಹಿಂತಿರುಗಿತು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡ ಮಹಮ್ಮದ್ ಆದಿಲ್‌ಶಾಹನ ಸೈನ್ಯದ ಮುಖ್ಯಸ್ಥನಾದ ಮುರಾರಿ ಪಂಡಿತನು ಮೊಗಲರನ್ನು ಅಟ್ಟಿಸಿಕೊಂಡು ಪರಾಂಡ ಕೋಟೆಯವರೆಗೂ ಹೋದನು. ಈ ಕೋಟೆಯ ಆಕಾ ರಿಜವಾನನು ಬುರ್ಹಾಣ ನಿಜಾಮಶಾಹನ ಪರವಾಗಿ ಇಲ್ಲಿ ಕೋಟೆಯ ಮುಖ್ಯಸ್ಥನಾಗಿದ್ದನು. ನಂತರ ಮುರಾರಿ ಪಂಡಿತನು ದಂಡೆತ್ತಿ ಹೋದಾಗ ಆದಿಲ್‌ಶಾಹನ ಪಕ್ಷಕ್ಕೆ ಹೊರಳಿದ್ದನು. ಆದಿಲ್‌ಶಾಹಿ ಆಜ್ಞೆಯಂತೆ ಮುರಾರಿ ಪಂಡಿತನು ಮಲಿಕ್-ಇ-ಮೈದಾನ ತೋಫನ್ನು ದಿನಾಂಕ ೧೫ ತಿಂಗಳು ಸಫರ್ ಸನ್ ೧೦೪೨ ರಂದು ಅಂದರೆ ೧೨ ಅಗಸ್ಟ್ ೧೬೩೨ ರಂದು ವಿಜಾಪುರಕ್ಕೆ ತಂದನು.[೨೭]

ಮುರಾರಿ ಪಂಡಿತನು ಪರಾಂಡದಿಂದ ಇದನ್ನು ವಿಜಾಪುರಕ್ಕೆ ತರಲು ಮೂರು ಸಾವಿರ ಅನುಭವಿ ತಜ್ಞರನ್ನು ಕರೆಯಿಸಿದನು. ಹಸ್ತಕೌಶಲ್ಯ ಪ್ರದರ್ಶಿಸುವ ಹಾಗೂ ಸೇವೆ ಮಾಡುವ ಪ್ರಯತ್ನವನ್ನು ಆರಂಭಿಸಲಾಯಿತು. ಸದೃಢ ಬಾಹುಉಳ್ಳ ಬಡಿಗರು ತಿರುಗುವ ಚಕ್ರದ ಮೇಲೆ ಬಿದಿರನ್ನು ತಿರುಗಿಸಿ ಅದನ್ನು ಸುತ್ತಲಾರಂಭಿಸಿದರು. ಎರಡು ಸಾವಿರ ಸಹನಶೀಲ ಶಕ್ತಿಶಾಲಿ ಎತ್ತುಗಳನ್ನು ಗಾಡಿ ಎಳೆಯಲು ಕಟ್ಟಲಾಯಿತು. ಕಷ್ಟಕರವಾದ ದಾರಿಯಲ್ಲಿ ವೃಕ್ಷ ಮತ್ತು ದುರ್ಗಮವಾದ ಪರ್ವತಗಳನ್ನು ಕೊರೆದು ಭೂಮಿಯನ್ನು ಸಮತಳಗೊಳಿಸುತ್ತಿದ್ದರು. ಅಪಾರ ಕಟ್ಟಿಗೆ ಮತ್ತು ಹಲಗೆಗಳಿಂದ ತಯಾರಿಸಿದ ದೋಣಿಯಿಂದ ಬಹಳ ಕೌಶಲ್ಯದಿಂದ ನದಿಯನ್ನು ದಾಟಿಸಿ ೧೦೪೨ ಹಿಜರಿಯ ಸಫರ್ ತಿಂಗಳಿನ ೧೦ನೇ ತಾರೀಖಿನಂದು ರಾಜಧಾನಿಗೆ ತರಲಾಯಿತು ಎಂದು 'ಮಹಮ್ಮದ್ ನಾಮಾ'ದಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಬಾದಶಹನ ಆಜ್ಞೆಯಂತೆ ಮುಲ್ಕ್ ಮೈದಾನದ ಸಂರಕ್ಷಣೆಗಾಗಿ ನಗರದ ಗೋಡೆಯ ಸಮೀಪ ಮಕ್ಕಾದ್ವಾರದ ಕಡೆಗೆ ಸುದೃಢ ಮತ್ತು ಸ್ಥಿರವಾದ ಗೋಪುರದ ತಳಹದಿಯನ್ನು ನಿರ್ಮಿಸಲಾಯಿತು.[೨೮] ಅದನ್ನು ಶಹಾಪುರ ದ್ವಾರ ಮತ್ತು ಮಕ್ಕಾದ್ವಾರದ ಮಧ್ಯಭಾಗದಲ್ಲಿ, ನಗರದ ಪಶ್ಚಿಮ ಭಾಗದಲ್ಲಿ ಪ್ರಸಿದ್ಧವಾದ ಶೇರ್ಜಾಬುರುಜುವಿನ ಮೇಲೆ ಇಡಲಾಯಿತು.

ಕ್ರಿ.ಶ. ೧೬೮೬ರಲ್ಲಿ ಔರಂಗಜೇಬನು ವಿಜಾಪುರವನ್ನು ವಶಪಡಿಸಿಕೊಂಡು ಈ ತೋಫಿನ ಮೇಲೆ ಶಾಸನವನ್ನು ಬರೆಯಿಸಿದ್ದಾನೆ. ಮೈದಾನದ ಸಾಮ್ರಾಟನನ್ನು ತಾನು ಅಂಕೆಯಲ್ಲಿಟ್ಟು ಕೊಂಡಿರುವೆನೆಂದು ಹೇಳಿಕೊಂಡಿದ್ದಾನೆ. ಅಂದರೆ ಮಾಲಿಕ್-ಇ-ಮೈದಾನ್ ತೋಪಿನ ಬಲಿಷ್ಠತೆಯನ್ನು ಗುರುತಿಸಬಹುದು.[೧೨೯]

ಜಹೂರ್ ಬಿನ್ ಜುಹೂರಿ ವಿರಚಿತ 'ಮಹಮ್ಮದ ನಾಮಾ'ದಲ್ಲಿ ಈ ತೋಪನ್ನು ಕುರಿತು ಈ ರೀತಿ ವರ್ಣಿಸಲಾಗಿದೆ. ಮುಲ್ಕ್ ಮೈದಾನದ ಹೊಗಳಿಕೆಯಿಂದ ಬುದ್ಧಿವಂತ ವ್ಯಕ್ತಿಯು ಆಶ್ಚರ್ಯಚಕಿತನಾಗಿ ಆಕಾಶದಂತೆ ಪೂರ್ಣ ವೃತ್ತವಾಗುತ್ತಾನೆ. ಅವನ ತಲೆಯಿಂದ ಪ್ರಜ್ಞೆಯು ಹೊಗೆಯಂತೆ ಹೊರಹೊಮ್ಮುತ್ತದೆ. ಆಶ್ಚರ್ಯದ ಒತ್ತಡದಿಂದ ಅವನು ಅಕಾಶದಂತೆ ಬಾಗುತ್ತಾನೆ. ಇದು ಇಂತಹ ತೋಫು ಆಗಿದೆ! ಇದು ಅಗ್ನಿಯ ಕಣಗಳನ್ನು ಸುರಿಸಿದಾಗ ತನ್ನ ಹೊಗೆಯಿಂದ ಗಾಳಿಯನ್ನು ಹೆಬ್ಬಾವುಗಳನ್ನಾಗಿ ಮಾಡುತ್ತದೆ. ಪ್ರಜ್ಞಾವಂತರ ಕಣ್ಣುಗಳಿಗೆ ಅದರ ಉಕ್ಕಿನ ಮುಖವು, ಯಶಸ್ಸಿನ ಆಕಾಶವಾಗಿದೆ ಮತ್ತು ಅದರ ಸಿಡಿಮದ್ದಿನ ಗುಂಡು ಸೂರ್ಯನಾಗಿದ್ದಾನೆ. ಯುದ್ಧಪಂಕ್ತಿಯಲ್ಲಿ ಜ್ವಾಲೆಗಳೊಂದಿಗೆ ಸಂಘರ್ಷಣೆ ಮಾಡುವಾಗ, ಅದರ ಹೊಗೆಯಿಂದ ವೈರಿಯ ಪ್ರಾಣಕ್ಕೆ ಆಪತ್ತು ಉಂಟಾಗುತ್ತದೆ[೧೩೦] ಎಂದು ವರ್ಣಿಸುತ್ತದೆ.

ಅದೇ ರೀತಿ ಮುಲ್ಲಾ ನುಸ್ರುತಿ ವಿರಚಿತ 'ಅಲಿನಾಮಾ, ಈ ತೋಫನ್ನು ಕುರಿತು ಈ ರೀತಿ ಪ್ರಶಂಸೆ ಮಾಡುತ್ತದೆ. ಮುಲ್ಕೆ ಮೈದಾನಿ ಬೆಂಕಿ ಉದುರುವಿಕೆ ಎಂತಹ ಗದ್ದಲದಿಂದ ಆಗುತ್ತಿತ್ತೆಂದರೆ ಅದರ ಮುಂದೆ ಪ್ರಳಯದ ಗದ್ದಲವು ಏನೂ ಅಲ್ಲ. ಅದರ ಒಂದು ಘರ್ಜನೆಯಿಂದ ದೇಶ ಜಪ್ತಿಯಾಗುವುದು. ಅದರ ಗುಂಡುಗಳ ಶಬ್ದ ಕೇಳಿ ಆಕಾಶದ ಸಂಪರ್ಕ ನಿಯಂತ್ರಣ ಕಳೆದುಕೊಳ್ಳುತ್ತದೆ. ಅದೇನಾದರೂ ತನ್ನ ಕಸಾಯಿತನ ಪಾಲಿಸಿದರೆ ತೋಳವನ್ನೂ ಸಹ ಸಿಗಿದುಹಾಕುತ್ತದೆ. ಈ ಭೂಮಿಯನ್ನು ಶೀಘ್ರವಾಗಿ ರಕ್ತದಿಂದ ತುಂಬಿದ ಕಸಾಯಿ ಅಂಗಡಿ ಮಾಡಬಲ್ಲದು. ಈ ತೋಫಿನಿಂದ ಗುಂಡು ಹಾರಿದರೆ ಒಂಬತ್ತು ಗಜ ದೂರದಲ್ಲಿ ಹೋಗಿ ಬೀಳುವುದು. ಇದರ ಗರ್ಜನೆ ಸಿಡಿಲಿನ ಗರ್ಜನೆಯಂತೆ ಇದರಿಂದಾಗಿ ಭೂಮಿ ಸಿಡಿದು ಎಲ್ಲ ನೀರು ಚಿಲುಮೆಯಂತೆ ಹರಿಯುವುದು. ಅದು ಆವೇಶದಲ್ಲಿ ಹನುಮಂತನ ಹಾಗೆ ಗರ್ಜಿಸಿ ಗುಡುಗಿದರೆ ರಾತ್ರಿಯ ಹೊಟ್ಟೆಯಿಂದ ಸೂರ್ಯನ ಗರ್ಭಪಾತವಾಗುವುದು. ರಾಜಾ ಇಂದ್ರನು ಅಕಾಶದಿಂದ ಈ ತೋಫನ್ನು ಹೊಡೆಯುವುದನ್ನು ನೋಡಿದರೆ ಹೆದರಿ ಅಕಾಶವನ್ನು ಬಿಟ್ಟು ಅಡಗಲು ಪಾತಾಳಕ್ಕೆ ಹೋಗುವನು.[೧೩೧]

'ಫುತೂಹತೆ ಅಲಂಗೀರ್'ದಲ್ಲಿ ಈ ತೋಫು ಐದು ಅರ್ಧಮೊಳ(೫.೫) ಉದ್ದ ಇದ್ದು ನಾಲ್ಕು ಕಾಲು(೪.೨೫) ಮಣ ಭಾರವಿತ್ತು. ಎರಡು ಅರ್ಧಮಣ ಭಾರದ ಗುಂಡನ್ನು ಹಾರಿಸುವ ಶಕ್ತಿ ಅದಕ್ಕಿತ್ತು.[೧೩೨] 'ಬಸಾತೀನ ಸಲಾತೀನ'ದಲ್ಲಿ ಉಲ್ಲೇಖಿಸಿರುವಂತೆ ಅಷ್ಟಧಾತು ಮತ್ತು ಸೀಸಗಳಿಂದ ಹೊಯ್ದು ಮಾಡಿದ ಆ ತೋಫು ೬೦ ಖಂಡಿ ಭಾರವಿದೆ ಎಂದು ಹೇಳುತ್ತಾರೆ. ಆದರೆ ಇಂಗ್ರಿಜೆ ಬಹದ್ದೂರರ ಆಳ್ವಿಕೆಯಲ್ಲಿ ಒಬ್ಬ ಚತುರ ಕಾರಿಗಾರನು ತೋಫಿನ್ ಭಾರವನ್ನು ೩೨೦೦ ರತ್ತಲ

ಎಂದು ಹೇಳಿದ್ದಾನೆ(ಒಂದು ಸೇರಿಗೆ ೨ ರತ್ತಲ). ತೋಫಿನ ಉದ್ದವು ಪುರುಷನ ಒಂಬತ್ತು ಕೈಗಳಷ್ಟಿದೆ. ತೋಫಿನ ಪರಿಷವೂ ಒಂಬತ್ತು ಕೈಗಳಷ್ಟಿದೆ. ತೋಫಿನ ಮದ್ದು ತುಂಬುವ ಬಾಯಿ ತುಂಬಾ ವಿಸ್ತೀರ್ಣವಾಗಿದೆ. ಅದರಲ್ಲಿ ಒಬ್ಬ ದಪ್ಪ ಮನುಷ್ಯ ಕುಳಿತು ತನ್ನ ರುಮಾಲನ್ನು ಸುತ್ತಿಕೊಳ್ಳುವಷ್ಟು ಅಗಲವಾಗಿದೆ.[೧೩೩]

ಇದನ್ನು ೮೦.೪೨೭% ಭಾಗ ತಾಮ್ರ, ೧೯.೫೭೩% ತವರದ ಮಿಶ್ರಣದಿಂದ ಎರಕ ಹೊಯ್ದು ತಯಾರಿಸಲಾಗಿದೆ. ಇದರ ಮೇಲ್ಮೈ ಕಪ್ಪು-ಹಸಿರು ಬಣ್ಣದ ಹಾಗೆ ಕಾಂತಿಯುತವಾಗಿ ನುಣುಪಾಗಿರುವಂತೆ ಹೊಳೆಯುತ್ತದೆ. ೧೪ ಅಡಿ ೩ ಅಂಗುಲ ಉದ್ದ, ೪ ಅಡಿ ೧೦ ಅಂಗುಲ ವ್ಯಾಸ ,೨ ಅಡಿ ೪ ಅಂಗುಲ ತೋಫಿನ ಬಾಯಿಯ ಒಳವ್ಯಾಸವನ್ನು ಹೊಂದಿದ್ದು, ಸುಮಾರು ೫೫ ಟನ್ ಭಾರವಿದೆ.[೧೩೪] ಈ ತೋಫಿನ ಮುಖವು ಘರ್ಜಿಸುವ ಸಿಂಹದ ಬಾಯಿಯಂತಿದೆ. ಹರಿತವಾದ ಹಲ್ಲುಗಳ ಮಧ್ಯೆ ಎರಡು ಕಡೆ ಅನೆಯನ್ನು ಹಿಡಿದು ನುಂಗುತ್ತಿರುವಂತೆ ತೋರಿಸಲಾಗಿದೆ. ಇದು ತೋಫಿನ ಬಲಿಷ್ಠತೆಯನ್ನು ಚಿತ್ರಿಸುತ್ತದೆ. ಸಿಂಹದ ಮುಖಕ್ಕೆ ಕಿವಿಗಳಿದ್ದು ಈ ಕಿವಿಗಳಿಗೆ ತೂತು ಮಾಡಿದೆ. ಇದರಲ್ಲಿ ಬಳೆಗಳನ್ನು ಹಾಕಲು ಅನುವು ಮಾಡಲಾಗಿದೆ. ಒಂದು ಕಡೆ ಮಾತ್ರ ಹಾಗೆ ಉಳಿದಿದೆ. ಸಿಂಹದ ಮೂಗಿನ ಗುಂಟ ಮತ್ತು ಎರಡೂ ಕಿವಿಗಳ ಮಧ್ಯೆ ಗುರಿಯಿಟ್ಟು ಗುಂಡನ್ನು ಹಾರಿಸುತ್ತಿದ್ದರು. ಲಂಡಾಕಸ್ಸಾಬ್ ಬಿಟ್ಟರೆ ವಿಜಾಪುರದಲ್ಲಿ ಇದೇ ದೊಡ್ಡ ತೋಫು. ವಿಜಾಪುರದ ಎಲ್ಲ ತೋಫುಗಳಿಗಿಂತ ಭಿನ್ನವಾಗಿದ್ದು ಇದನ್ನು ಎರಕ ಹೊಯ್ದು ಮಾಡಲಾಗಿದೆ. ಕ್ರಿ.ಶ. ೧೮೨೩ರಲ್ಲಿ ಇಂಗ್ಲೆಂಡ್‌ನ ರಾಜನಿಗೆ ಇದನ್ನು ಕಳುಹಿಸಿಕೊಡಲು ಮುಂಬೈ ಸರಕಾರವು ಇಚ್ಚಿಸಿತು. ಆದರೆ ಸಮುದ್ರ ತೀರಕ್ಕೆ ತೆಗೆದುಕೊಂಡು ಹೋಗುವುದು ಕಷ್ಟವಾದುದರಿಂದ ಇಲ್ಲೇ ಉಳಿಯಿತು. ಮತ್ತೆ ಕ್ರಿ.ಶ. ೧೮೫೪ರಲ್ಲಿ ಅದನ್ನು ಆಗ ೧೫೦ ರೂಪಾಯಿಗಳಿಗೆ ಅದರಲ್ಲಿದ್ದ ಧಾತುವಿನ ಸಲುವಾಗಿ ಹರಾಜು ಹಾಕಲು ಸಿದ್ಧತೆ ನಡೆಯಿತು. ಆದರೆ ಸತಾರದ ಕಮೀಶನರ್ ಈ ಮಾರಾಟಕ್ಕೆ ಒಪ್ಪಿಗೆ ನೀಡದುದರಿಂದ ಅದನ್ನು ಅಲ್ಲಿಯೇ ಬಿಡಬೇಕಾಯಿತು.[೧೩೫] ಇವನು ಈ ತೋಫನ್ನು ಮೇಲಿದ್ದ ಸ್ಥಳದಿಂದ ಕೆಳಗಿಳಿಸಿ ಮರದ ತುಂಡುಗಳ ಮೇಲೆ ಇಡಿಸಿದನು. ಇದು ಇಂದಿಗೂ ಪ್ರವಾಸಿಗರ ಆಕರ್ಷಣೆಗಳಲ್ಲೊಂದಾಗಿದೆ.

ಅಲಿಬುರುಜಿನ ಮೇಲಿನ ತೋಫು

ಗೋಳಗುಮ್ಮಜದ ಉತ್ತರಕ್ಕೆ ಇರುವ ಎತ್ತರವಾದ ಅಲಿ ಬುರುಜುವಿನ ಮೇಲೆ ಈ ತೋಪನ್ನು ಇಡಲಾಗಿದೆ. ವಿಜಾಪುರದ ಎತ್ತರವಾದ ಬುರುಜುಗಳಲ್ಲಿ ಇದು ಒಂದು. ಇಲ್ಲಿರುವ ತೋಫನ್ನು ಉದ್ದವಾದ ಪಟ್ಟಿ ಮತ್ತು ಬಳೆಗಳನ್ನು ಬೆಸುಗೆ ಹಾಕಿ ಮಾಡಲಾಗಿದೆ. ಇದರ ನಾಲ್ಕು ಜೊತೆ ಹಿಡಿಕೆಗಳಲ್ಲಿ ಈಗ ಬಳೆಗಳಿಲ್ಲ. ಇದನ್ನು ನೆಲೆಗೊಳಿಸುವುದಕ್ಕಾಗಿ ಪಕ್ಕದಲ್ಲಿ ಎರಡು ಕೊಳವೆಯಾಕಾರದ ಮುಂಚಾಚುಗಳಿವೆ. ಹಿಡಿಕೆಗಳ ಅಂಚನ್ನು ಮಣಿಯಾಕಾರದಿಂದ ಮತ್ತು ಮೇಲ್ಭಾಗದಲ್ಲಿ ಮೇಲೆ ಚಾಚಿರುವ ಭಾಗದಲ್ಲಿ ಗುರಿ ಇಡುವುದಕ್ಕಾಗಿ ಆಯತಾಕಾರದ ಚಿಕ್ಕ ರಂಧ್ರವಿದೆ.[೧೩೬]

ಮುಸ್ತಾಫಾಬಾದ್ ತೋಫು

ಅಲ್ಲಾಪುರ ದ್ವಾರದ ದಕ್ಷಿಣಕ್ಕಿರುವ ಮೊದಲನೆಯ ಬುರುಜುವಿನ ಮೇಲೆ ಈ ತೋಫನ್ನು ಇಡಲಾಗಿದೆ. ಮುಸ್ತಾಫಾಬಾದ್ ಬುರುಜುವಿನ ಮೇಲೆ ಇರುವ 'ದಲ್‌ಖಂಡಲ್' ಎಂಬ ತೋಪಿನ ಮೇಲೆ ಇರುವ ಶಾಸನವು ಮಹಮ್ಮದ ಆದಿಲ್‌ಶಾಹನ ಕಾಲಾವಧಿಯದ್ದಾಗಿದ್ದು ರಾಜಾಜ್ಞೆಯ ಮೇರೆಗೆ ನಮ್ರ ಸೇವಕನಾದ ಸಂದಲ್‌ನು ಮುಸ್ತಾಫಾಬಾದಿನಲ್ಲಿದ್ದ ತೋಫನ್ನು ಕ್ರಿ.ಶ. ೧೬೩೨ರಲ್ಲಿ ರಾಜರ ಸನ್ನಿಧಿಗೆ ತಂದು ಒಪ್ಪಿಸಿದ. ಈ ತೋಪಿಗೆ 'ಫತೇ-ಇ-ಲಷ್ಕರ್'(ಸೇನೆಯ ವಿಜಯ) ಎಂಬ ಹೆಸರಿದೆ.[೧೩೭] ಇದನ್ನು ಸಹ ಪಟ್ಟಿ ಮತ್ತು ಬಳೆಗಳಿಂದ ತಯಾರಿಸಲಾಗಿದೆ. ಇದರ ಹಿಂದಿನ ಭಾಗವು ಹೆಚ್ಚು ದಪ್ಪವಾಗಿದೆ. ನಾಲ್ಕು ಜೊತೆ ಬಳೆಗಳ ಹಿಡಿಕೆಗಳಿದ್ದದ್ದು ಕಂಡುಬರುತ್ತದೆ ಆದರೆ ಅದರಲ್ಲಿ ಒಂದು ಕಡೆ ಮಾತ್ರ ಉಳಿದುಕೊಂಡಿದೆ. ತೋಪಿನ ಬಾಯಿಯ ಭಾಗದಲ್ಲಿ ಗುರಿ ಇಡುವುದಕ್ಕಾಗಿ ಆಯತಾಕಾರದ ರಂಧ್ರವಿದೆ.[೧೩೮]

ಲಂಡಾಕಸಾಬ್ ಬುರುಜುವಿನ ಮೇಲಿನ ತೋಪುಗಳು

ದಕ್ಷಿಣಭಾಗದ ಫತೇದ್ವಾರದ ಹತ್ತಿರದಲ್ಲಿರುವ ಬುರುಜುವಿನ ಮೇಲೆ ಎರಡು ತೋಫುಗಳಿವೆ. ಅದರಲ್ಲಿ ಒಂದು ಲಂಡಾಕಸಾಬ್ ತೋಫು ಇದು ವಿಜಾಪುರದಲ್ಲಿರುವ ತೋಫುಗಳಲ್ಲೇ ಅತಿ ದೊಡ್ಡದು. ಇದು ೨೧ ಅಡಿ ೭ ಅಂಗುಲ ಉದ್ದ, ೪ ಅಡಿ ೫ ಅಂಗುಲ ವ್ಯಾಸ, ತೋಫಿನ ಬಾಯಿಯ ಒಳ ವ್ಯಾಸ ೧ ಅಡಿ, ೭ ೧/೨ ಅಂಗುಲ ಅಗಲವಾದ ಒಳವ್ಯಾಸವನ್ನು ಹೊಂದಿದ್ದು ೪೭ ಟನ್ ಭಾರವಿದೆ.[೧೩೯] ಇದೇ ಬುರುಜುವಿನ ಮೇಲೆ ಇನ್ನೊಂದು ಚಿಕ್ಕ ತೋಫಿದೆ. ಅದು ೧.೮೬ ಮೀ. ಉದ್ದ, ೬ ಅಡಿ ೦೩ ಅಂಗುಲ ಉದ್ದ, ೧೦ ಅಡಿ ಹೊರವ್ಯಾಸವನ್ನು ಹೊಂದಿದೆ. ಈ ಎರಡು ತೋಫುಗಳು ಪಟ್ಟಿ ಮತ್ತು ಬಳೆಗಳನ್ನು ಬೆಸುಗೆ ಮಾಡಿ ತಯಾರಿಸಲಾಗಿದೆ. ಇವುಗಳನ್ನು ನೆಲೆಗೊಳಿಸಿ ಸುತ್ತಲೂ ತಿರುಗುವಂತೆ ಮಾಡಲು ಮುಂಚಾಚುಗಳಿವೆ. ದೊಡ್ಡ ತೋಫಿನ ಮುಂಭಾಗದಲ್ಲಿ ಸುರುಳಿಯಾಕಾರದಲ್ಲಿ ಸುತ್ತಲೂ ಅಲಂಕರಿಸಲಾಗಿದೆ. ಅಲ್ಲದೆ ಶತ್ರುಗಳ ಮೇಲೆ ಗುರಿಯಿಡಲು ಮುಂಭಾಗದಲ್ಲಿ ರಂಧ್ರವಿದೆ. ಈ ತೋಫಿನ ಮುಂಭಾಗಕ್ಕೆ ಔರಂಗಜೇಬನು ಈ ದಿಕ್ಕಿನಿಂದ ವಿಜಾಪುರವನ್ನು ಮುತ್ತಿದಾಗ ಅವನ ತೋಪುಗಳ ಗುಂಡಿನ ಹೊಡೆತದಿಂದ ಆದ ಗುರುತುಗಳೆಂದು ಹೇಳುವ ತಗ್ಗಿನ ಗುರುತು ಕಾಣುತ್ತದೆ.[೧೪೦] ಈ ಎರಡು ತೋಫುಗಳನ್ನು ಕ್ಯಾಪ್ಟನ್ ಲಿಟಲ್ 'ಕುಚಾ-ಬುಚಾ' ಎಂದು ಕರೆದಿದ್ದಾರೆ.[೧೪೧]

ಹೈದರಬುರುಜುವಿನ ಮೇಲೆ ಇರುವ ತೋಫುಗಳು

ಹೈದರಬುರುಜುವಿನ ಮೇಲೆ ಎರಡು ತೋಫುಗಳಿದ್ದು ಪಟ್ಟಿ ಹಾಗೂ ಬಳೆಗಳಿಂದ ಬೆಸುಗೆ ಮಾಡಿ ತಯಾರಿಸಲಾಗಿದೆ. ಅದರಲ್ಲಿ ಒಂದು ತೋಫು ಲಂಬಚರಿ ಅಥವಾ ಲಾಮಾಚಾರಿ ತೋಫು ಎಂದು ಪ್ರಸಿದ್ಧಿಯಾಗಿದೆ. ವಿಜಾಪುರದ ಅತ್ಯಂತ ಉದ್ದವಾದ ತೋಫೆಂದರೆ ಈ

ಲಂಬಚರಿ ತೋಫು. ಇದು ಬಹುದೂರದವರೆಗೆ ತೋಫಿನ ಗುಂಡನ್ನು ಹಾರಿಸಬಹುದಾಗಿದೆ. ಹೀಗಾಗಿ ಇದನ್ನು ಲಂಬಚರ್ರಿ(ದೂರ ಹಾರುವ) ತೋಫೆಂದು ಹೆಸರಿಸಲಾಗಿದೆ. ಇದರ ಉದ್ದ ೩೦ ಅಡಿ ೭ ಅಂಗುಲ, ೩ ಅಡಿ ೨ ಇಂಚು ವ್ಯಾಸ, ೧ ಅಡಿ ೧೧ ಇಂಚು ತೋಫಿನ ತೆರೆದ ಒಳಭಾಗ ಇದ್ದು ಸುಮಾರು ೨೨ ಟನ್ ಭಾರವಿದೆ. ಇದರ ಹಿಂಭಾಗವು ದಪ್ಪವಾಗಿದ್ದು ಮಧ್ಯದಲ್ಲಿ ತೋಫನ್ನು ಸುತ್ತಲೂ ತಿರುಗಿಸಲು ಬರುವಂತೆ ಮಧ್ಯದಲ್ಲಿ ಕೊಳವೆಯಾಕಾರದ ಮುಂಚಾಚು ಇದೆ. ಈ ಮುಂಚಾಚು ಹಿಂದೆ ಮತ್ತು ಮುಂದೆಯೂ ಕಾಣಬಹುದು. ತೋಫಿನ ಕುತ್ತಿಗೆಯ ಹತ್ತಿರ ದೇಹದ ಮೇಲೆ ಒಂದರ ಮೇಲೆ ಮತ್ತೊಂದರಂತೆ ಎರಡು ಹೆಚ್ಚುವರಿ ಬಳೆಗಳನ್ನು ಬೆಸೆಯಲಾಗಿದೆ. ಇದರ ಉದ್ದೇಶ ಹೆಚ್ಚು ಬಲ ನೀಡುವುದಾಗಿದೆ.[೧೪೨] ಇದೇ ಬುರುಜುವಿನ ಮೇಲೆ ಇರುವ ಮತ್ತೊಂದು ತೋಫು ೧೯ ಅಡಿ ೧೦ ಅಂಗುಲ ಉದ್ದವಿದೆ. ಇದು ಹಿಂಭಾಗದಲ್ಲಿ ದಪ್ಪವಾಗಿದ್ದು ಮಧ್ಯದಲ್ಲಿ ತೋಫನ್ನು ಸುತ್ತಲೂ ತಿರುಗಿಸಲು ಕೊಳವೆಯಾಕಾರದ ಮುಂಚಾಚು ಮತ್ತು ತಿರುಗಿಸುವಂತೆ ಹಿಡಿಯಲು ಬಳೆಗಳಿವೆ.

'ಘುತೂಹತೆ ಅಲಂಗೀರ್' ಕೃತಿಯಿಂದ ತಿಳಿದುಬರುವಂತೆ ಮುಲ್ಕ-ಇ-ಮೈದಾನ ತೋಫು ಇರುವ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ 'ರಣಮಹಲ' ಮತ್ತು 'ಹಜಾರ ಬಾಂಗಡಿ' ಎಂಬ ಅದೇ ತರದ ಎರಡು ತೋಫುಗಳನ್ನು ಅಲ್ಲಿಯ ಗೋಪುರದ ಮೇಲೆ ಇಡಲಾಗಿದೆ ಎಂದು ತಿಳಿಸುತ್ತದೆ.[೧೪೩] ಹೀಗಾಗಿ ಇಲ್ಲಿ ಉಲ್ಲೇಖಿಸುವ ಈ ಎರಡೂ ತೋಫುಗಳು ಹೈದರಬುರುಜುವಿನ ಮೇಲೆ ಇರುವ ತೋಫುಗಳೆಂದೇ ಅಭಿಪ್ರಾಯಿಸಬಹುದು.

ವಸ್ತುಸಂಗ್ರಹಾಲಯದಲ್ಲಿರುವ ತೋಫುಗಳು

ಉಳಿದ ತೋಫುಗಳನ್ನು ಅವುಗಳ ಬುರುಜುವಿನ ಮೇಲಿನಿಂದ ತಂದು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿ ಒಟ್ಟು ಆರು ತೋಫುಗಳಿದ್ದು, ಅದರಲ್ಲಿ ಐದು ಕಬ್ಬಿಣದ, ಇನ್ನೊಂದು ಎರಡು ಅಡಿ ಉದ್ದ ಮತ್ತು ಸುತ್ತಳತೆಯ ಕಲ್ಲಿನಿಂದ ಮಾಡಿದ ಉದ್ದದ ತೋಫುಗಳಿವೆ. ಅವುಗಳನ್ನು ಫತೇದ್ವಾರ, ಮೆಕ್ಕಾದ್ವಾರ, ಅಲ್ಲಾಪುರ ದ್ವಾರ ಹತ್ತಿರ ಇರುವ ಬುರುಜುಗಳಿಂದ ಹಾಗೂ ಫಿರಂಗಿಶಾಹಿ ಬುರುಜುವಿನ ಮೇಲಿನಿಂದ ತಂದು ಇಲ್ಲಿ ಇಡಲಾಗಿದೆ. ಇವುಗಳಲ್ಲಿ ಎರಡು ತೋಫುಗಳ ಮೇಲೆ ಶಾಸನಗಳಿದ್ದು ಒಂದು ಶಾಸನದಲ್ಲಿ ಪಂಜ್-ಮನಿ-ಆದಿಲ್ ಶಾಹ ಎಂದು ಬರೆದ ಚಿಕ್ಕ ಶಾಸನ, ಇನ್ನೊಂದು ತೋಫಿನ ಮೇಲೆ ೧೨ ಇಮಾಮರ ಹೆಸರುಗಳಿವೆ. ಇವುಗಳನ್ನು ಕಬ್ಬಿಣದ ಪಟ್ಟಿ ಮತ್ತು ಬಳೆಗಳನ್ನು ಉಪಯೋಗಿಸಿ ಹಾಗೂ ಎರಕ ಹೊಯ್ದು ಮಾಡಲಾಗಿದೆ. ತೋಫುಗಳ ಮೇಲೆ ಹೂ ಬಳ್ಳಿಗಳಿಂದ ಮತ್ತು ಪ್ರಾಣಿಗಳ ಶಿಲ್ಪಗಳಿಂದ, ಹೆಚ್ಚಾಗಿ ಸಿಂಹದ ಶಿಲ್ಪಗಳಿಂದ ಅಲಂಕರಿಸಿದ್ದು ಕಂಡುಬರುತ್ತದೆ. ಇನ್ನುಳಿದಂತೆ ತೋಫುಗಳನ್ನು ಸುತ್ತಲೂ ತಿರುಗಿಸುವಂತೆ ಬರಲು ಕಬ್ಬಿಣದ ಮುಂಚಾಚು, ಹಿಡಿಯಲು ಬಳೆಗಳು ಕಂಡುಬರುತ್ತವೆ.[೧೪೪]

ಚಿಕ್ಕತೋಫುಗಳು

ಇನ್ನು ಹಲವಾರು ಚಿಕ್ಕ ಚಿಕ್ಕ ತೋಫುಗಳನ್ನು ಇಂದು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಇವುಗಳನ್ನು ಒಬ್ಬ ಸೈನಿಕನು ಸರಳವಾಗಿ ಎತ್ತಿಕೊಂಡು ಬಳಸಬಹುದಾಗಿದೆ. ಇವುಗಳನ್ನು ಕೋಟೆಯ ತೆನೆಯ ಹಿಂದೆ ಅಥವಾ ಎರಡು ತೆನೆಗಳ ಮಧ್ಯೆ ಇಟ್ಟು ಬಳಸುತ್ತಿದ್ದರು. ಇದಕ್ಕೆ ಆಧಾರವಾಗಿ ಕೆಲವು ಬುರುಜು ಮತ್ತು ತೆನೆಗಳಲ್ಲಿ ಈ ತೋಫುಗಳನ್ನು ಬಳಸಲು ಉಪಯುಕ್ತವಾಗುವಂತೆ ಅಗಲವಾದ ಕಿಂಡಿಗಳನ್ನು ಕಾಣಬಹುದು. ಅಷ್ಟೇ ಅಲ್ಲದೆ ಎರಡು ತೆನೆಗಳ ಮಧ್ಯಭಾಗದಲ್ಲಿ ಅಟ್ಟಾಲಕದ ಮೇಲೆ ೨x೨ ಅಡಿಯ ಎತ್ತರವಾದ ಕಟ್ಟೆಯನ್ನು ಕಟ್ಟಿ ಅದರ ಮೇಲೆ ಚಿಕ್ಕ ತೋಫುಗಳನ್ನು ಇಡುವಂತೆ ನಿರ್ಮಿಸಿದ್ದಾರೆ. ಕೋಟೆಯ ದಕ್ಷಿಣಕ್ಕೆ ಇಂದಿನ ಆರ್.ಟಿ.ಓ. ಕಚೇರಿಯ ಹತ್ತಿರದ ಕೋಟೆಗೋಡೆಯಲ್ಲಿ ಇಂತಹ ರಚನೆಗಳನ್ನು ಕಾಣಬಹುದು.

ಸುಮಾರು ಒಂದು ನೂರರಷ್ಟು ಬುರುಜುಗಳನ್ನು ಹೊಂದಿರುವ ವಿಜಾಪುರ ಕೋಟೆಯಲ್ಲಿ ಇನ್ನೂ ಹಲವಾರು ತೋಫುಗಳಿರುವ ಸಾಧ್ಯತೆಗಳಿವೆ. ಅವುಗಳನ್ನು ಕಾಲಾಂತರದಲ್ಲಿ ಬೇರೆಡೆಗೆ ಸಾಗಿಸಿರಬಹುದು ಅಥವಾ ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿರಬಹುದು.

ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ಖಡಕ್‌ಬಿಜಲಿ ಎಂಬ ಹೆಸರಿನ ಮತ್ತೊಂದು ತೋಫನ್ನು ಬಳಸಲಾಗಿತ್ತೆಂದು ಹೇಳಲಾಗುತ್ತದೆ. ಮೊಗಲ್‌ಚಕ್ರವರ್ತಿ ಔರಂಗಜೇಬನು ಈ ತೋಫನ್ನು ದಿಲ್ಲಿಗೆ ಸಾಗಿಸಲು ಪ್ರಯತ್ನಿಸಿದಾಗ ಮಲಪ್ರಭಾ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಾನದಲ್ಲಿ ನದಿಗೆ ಬಿದ್ದು ನೀರಿನಲ್ಲಿ ಮುಳುಗಿತೆಂದು ಹೇಳಲಾಗುತ್ತದೆ.[೧೪೫]

ಎರಡನೆಯ ಅಲಿ ಆದಿಲ್‌ಶಾಹ ಆಡಳಿತಾವಧಿಯಲ್ಲಿ ಶಿವಾಜಿ ಮತ್ತು ಜೈಸಿಂಗರು ದಾಳಿ ಮಾಡಿದಾಗ ಕೋಟೆಯ ಭದ್ರತೆಯಲ್ಲಿ ತೋಫುಗಳ ಪಾತ್ರವನ್ನು ಕುರಿತು 'ಅಲಿನಾಮಾ'ದಲ್ಲಿ ಉಲ್ಲೇಖಿಸಲಾಗಿದೆ. ಕೋಟೆಗೋಡೆಯ ಮೇಲೆ ಎಷ್ಟೊಂದು ಬಂದೂಕು, ಫಿರಂಗಿ, ಬಾರೂದು ಹಾಗೂ ಫಿರಂಗಿಗುಂಡುಗಳ ಲೆಕ್ಕಾಚಾರ ಮಾಡಿಕೊಂಡು ದೊಡ್ಡ ಹಾಗೂ ಚಿಕ್ಕ ಫಿರಂಗಿಗಳನ್ನು ಸರಿಪಡಿಸಿ, ಇಲ್ಲಿಂದ ಜಾರಿ ಮಾಡುವಂತೆ ಇಟ್ಟು, ಪ್ರತಿಯೊಂದು ತೋಫ್ಗಾಡಿ ಮೇಲೆ ಲೆಕ್ಕವಿಲ್ಲದಷ್ಟು ತೋಫು ಮತ್ತು ಗುಂಡುಗಳನ್ನು ಹೆಬ್ಬಾವು ಸಹಸ್ರಾರು ಮೊಟ್ಟೆಗಳನ್ನಿಟ್ಟಿರುವ ಹಾಗೆ ಇಟ್ಟರು. ಎಷ್ಟೊಂದು ಚಿಕ್ಕ ದೊಡ್ಡ ತೋಫುಗಳಿದ್ದವೋ ಎಲ್ಲವನ್ನು ಸೇರಿಸಿ ಅಖಂಡ ಉಕ್ಕಿನ ಗೋಡೆ ಮಾಡಿದರು. ತೋಫುಗಳನ್ನು ತಿರುಗಿಸಲು ಕುದುರೆಗಳನ್ನು ಕೊಟ್ಟರು. ಉಸಿರು ತೆಗೆದುಕೊಳ್ಳಲು ಜೋಡಿ ಕೋವಿನ ನಳಿಗೆ ಕೊಟ್ಟರು. ಯಾವುದೇ ತೋಫು ಬಂಜೆ ಇಲ್ಲದಂತೆ ಎಲ್ಲವೂ ಭಾರ ಹೊತ್ತಿರುವ ಬಸರಿಯರಂತಾದವು. ಅಂದರೆ ಮದ್ದು, ಗುಂಡುಗಳನ್ನು ತುಂಬಿಕೊಂಡು ಯಾವುದೇ ಸಂದರ್ಭದಲ್ಲಿ ಜರುಗಬಹುದಾದ ಶತ್ರುಗಳ ಆಕ್ರಮಣವನ್ನು ತಡೆಗಟ್ಟಲು ತೋಫುಗಳನ್ನು ಸಜ್ಜುಗೊಳಿಸಲಾಗಿತ್ತು ಎಂದು ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಇನ್ನೂ ಹಲವಾರು ತೋಫುಗಳು ಇದ್ದಿರಬಹುದಾದ ಸಂಶಯವನ್ನು ವ್ಯಕ್ತಪಡಿಸಬಹುದಾಗಿದೆ.[೧೪೬]

ನೀರಾವರಿ ವ್ಯವಸ್ಥೆ

ವಿಜಾಪುರ ಜಿಲ್ಲೆಯು ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಇಲ್ಲಿ ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ಇಲ್ಲಿಯ ಜನರು ಕೃಷಿಗಾಗಿ ಮಳೆಯನ್ನು ಅವಲಂಬಿಸಿದ್ದಾರೆ. ಹೀಗಾಗಿ ಇದು ಬರಗಾಲದ ಜಿಲ್ಲೆಯೆಂದು ಹೆಸರು ಪಡೆದಿದೆ. ಆದರೂ ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಎರಡನೂರು ವರುಷಗಳ ಕಾಲ ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳು ಕೋಟೆಯೊಳಗೆ ಬೆಳೆದ ಜನವಸತಿಗೆ ಅತ್ಯವಶ್ಯಕವಾದ ನೀರನ್ನು ಸಂಗ್ರಹಿಸುವ ವ್ಯವಸ್ಥೆ ಎಲ್ಲರನ್ನೂ ಬೆರಗುಗೊಳಿಸುವಂತಹದ್ದು. ಒಂದು ಹನಿ ಮಳೆ ನೀರಿಗೂ ಶ್ರಮ ವಹಿಸಿ ಅದನ್ನು ಸಂಗ್ರಹಿಸಿಡುವ ಪ್ರಯತ್ನ ಮಾಡಿದ್ದಾರೆ. ಇಲ್ಲಿಯ ಕೋಟೆಯನ್ನು ನೈಸರ್ಗಿಕವಾಗಿ ಯಾವುದೇ ನದಿ ಹಳ್ಳ, ಕೊಳ್ಳಗಳ ದಂಡೆಯ ಮೇಲೆ ನಿರ್ಮಿಸದೆ ಬರಡುಭೂಮಿಯಲ್ಲಿ ನಿರ್ಮಿಸಿದ್ದಾರೆ. ಹೀಗಾಗಿ ನೀರಿನ ಸಂಗ್ರಹವ್ಯವಸ್ಥೆ ಅತ್ಯವಶ್ಯಕವಾಗಿದ್ದು ಅದಕ್ಕೆ ಹಲವಾರು ಕ್ರಮಗಳನ್ನು ಕೈಗೊಂಡಿದ್ದಾರೆ.

ನಗರದ ಹೊರಗಡೆ ದೂರದಲ್ಲಿ ಹರಿಯುವ ಹಳ್ಳ, ಕೊಳ್ಳ, ಝುರಿಗಳಿಂದ ಬರುವ ನೀರನ್ನು ಒಂದೆಡೆ ಸಂಗ್ರಹಿಸಲು ಕೆರೆಯನ್ನು ನಿರ್ಮಿಸಿದ್ದಾರೆ. ಇದಕ್ಕಾಗಿ ವಿಜಾಪುರದ ಸುತ್ತ ಸುಮಾರು ಏಳು ಕೆರೆಗಳನ್ನು ನಿರ್ಮಿಸಲಾಗಿತ್ತು ಎಂದು ಹೇಳಲಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿ ನಗರದ ದಕ್ಷಿಣಕ್ಕೆ ಬೇಗಮ್‌ತಲಾವ್, ಶಹಪುರ ಉಪನಗರದ ಹತ್ತಿರವಿರುವ ರಾಮಲಿಂಗ ಕೆರೆ, ತೊರವಿಕೆರೆ, ಅಫಜಲಪುರ ಕೆರೆ ಉಳಿದ ಕೆರೆಗಳ ಹೆಸರು ಲಭ್ಯವಾಗಿಲ್ಲ. ಈ ಕೆರೆಗಳಲ್ಲಷ್ಟೇ ಅಲ್ಲದೆ ಕೋಟೆಯೊಳಗೆ ಮತ್ತು ಹೊರಗೆ ಬಾವಿ, ಕೊಳ, ಎತ್ತರವಾದ ನೀರಿನ ಟ್ಯಾಂಕು(ಹೌಜು)ಗಳಲ್ಲಿ ನೀರನ್ನು ಸಂಗ್ರಹಿಸುತ್ತಿದ್ದರು. ಕೋಟೆಯ ಸುತ್ತಲಿನ ಕಂದಕದಲ್ಲಿಯೂ ಈ ಕೆರೆಗಳಿಂದ ತಂದ ನೀರನ್ನು ಅಲ್ಲಿ ಹಿಡಿದಿಡಲಾಗುತಿತ್ತು. ಹೀಗೆ ಕೆರೆ ಅಥವಾ ಜಲಾಶಯದಲ್ಲಿ ಸಂಗ್ರಹಿಸಿದ ನೀರನ್ನು ಕಲ್ಲುಗಾರೆ ಮತ್ತು ಗಚ್ಚನ್ನು ಉಪಯೋಗಿಸಿದ ಕಾಲುವೆಗಳು ಹಾಗೂ ಕೊಳವೆಗಳ ಮೂಲಕ ನೀರನ್ನು ಹಾಯಿಸಿ ನಗರಕ್ಕೆ ತರುವ ವ್ಯವಸ್ಥೆ ಮಾಡಿದ್ದರು. ಕೆಲವು ಕಡೆ ಎತ್ತರವಾದ ದಿಬ್ಬ ಇದ್ದ ಕಾರಣ ಭೂಗತ ಕಾಲುವೆಯ ಮೂಲಕ ಪ್ರಾರಂಭದಲ್ಲಿ ಎಂಟು ಅಡಿ ಅಗಲ, ಆರು ಅಡಿ ಆಳ, ಇರುವ ಕೆಲವೊಂದು ಕಡೆ ಭೂಮಿಯ ಆಳದಲ್ಲಿ ಅರವತ್ತು ಅಡಿಗಳಷ್ಟು ಕೆಳಗೆ ಬಂಡೆಗಲ್ಲುಗಳನ್ನು ಕೊರೆದು ಅದರ ಮೂಲಕ ನೀರನ್ನು ಕೋಟೆಯೊಳಗೆ ತರುವ ಪ್ರಯತ್ನ ಮಾಡಿದ್ದಾರೆ. ಭೂಗತ ಕಾಲುವೆಗಳು ಇಬ್ರಾಹಿಮ್ ರೋಜಾದವರೆಗೆ ಬಂದು ಅಲ್ಲಿಂದ ಮೆಕ್ಕಾಗೇಟ್ ಮುಖಾಂತರ ನಗರ ಮಧ್ಯದ ಜೋಡುಗುಮ್ಮಟದವರೆಗೂ ಬಂದಿವೆ. ಮುಂದೆ ಬಹುಶಃ ದಾರಿ ಕವಲೊಡೆದು ಎರಡು ಕಡೆಗೆ ಹೋಗಿರಬೇಕು. ಒಂದು ದಕ್ಷಿಣ ದಿಕ್ಕಿನ ಹಳೆಯ ಜಾಮೀಯಾ ಮಸೀದಿವರೆಗೆ ಇನ್ನೊಂದು ಅರಕಿಲ್ಲೆಯವರೆಗೆ ಬಂದಿರಬೇಕು. ಈ ಕಾಲುವೆಗಳಿಂದಲೆ ಕಂದಕ ಹಾಗೂ ಅರಮನೆಗಳಿಗೆ ನೀರು ಸರಬರಾಜು ಆಗುತ್ತಿರಬೇಕು.[೧೪೭] ಇಷ್ಟೇ ಅಲ್ಲದೆ ಕೋಟೆಯೊಳಗೆ ಸುಮಾರು ಬಾವಿಗಳನ್ನು ತೋಡಲಾಗಿದೆ. ಕ್ರಿ.ಶ. ೧೮೧೫ ರಲ್ಲಿ ಕ್ಯಾಪ್ಟನ್ ಸೈಕ್(Sykes) ಎಂಬುವವನು ವಿಜಾಪುರದಲ್ಲಿ

ಬಿಡಾರ ಹೂಡಿದ್ದಾಗ ಕೋಟೆಯ ಒಳಗಡೆ ಏಳುನೂರು ಮೆಟ್ಟಿಲುಗಳಿದ್ದ ಮತ್ತು ಮೂರುನೂರು ಸೇದುವ ಬಾವಿಗಳನ್ನು ಗುರುತಿಸಿ ದಾಖಲಿಸಿದ್ದಾನೆ.[೧೪೮] ಪ್ರಮುಖವಾಗಿ ಚಾಂದಬಾವಡಿ, ತಾಜ್‌ಬಾವಡಿ, ಬಿಬಿ ಬಂದಿಕಿ ಬಾವಡಿ, ಗುಮ್ಮಟ ಬಾವಡಿ, ಛೋಟಾ ಚೀನಿಮಹಲ್ ಹತ್ತಿರವಿರುವ ಬಾವಡಿ, ಮುಸ್ತಾಫ್‌ಖಾನನ ಅರಮನೆಯ ಹತ್ತಿರವಿರುವ ಬಾವಡಿ, ಪಾದಶಾಹಕಿ ಬಾವಡಿ, ರಫೀಯಕಿ ಬಾವಡಿ, ಪೇಟಿ ಬಾವಡಿ, ಹಾಲ್ ಬಾವಡಿ, ಮುಬಾರಕ್‌ಖಾನ್ ಬಾವಡಿ, ಬಶೀರ್ ಬಾವಡಿ, ನಗರ ಬಾವಡಿ, ಮಾಸ್ ಬಾವಡಿ, ಸಿಮ್‌ಬಾವಡಿ ಮುಂತಾದವುಗಳು.[೧೪೯]

ಕೋಟೆಯ ಒಳಗೆ ಜನಸಂಖ್ಯೆ ಹೆಚ್ಚಾದಂತೆ ನೀರಿನ ಕೊರತೆಯು ಉಂಟಾಯಿತು. ಅಲ್ಲದೆ ಬಾವಿ ಮತ್ತು ಕಾಲುವೆಗಳ ಮೂಲಕ ನೀರನ್ನು ತಂದು ಸಂಗ್ರಹಿಸಲು ನೀರಿನ ಸಂಗ್ರಹದ ಎತ್ತರವಾದ ತೊಟ್ಟಿಗಳನ್ನು ನಿರ್ಮಿಸಿದರು. ಎತ್ತರ ಸುಮಾರು ೨೦ ರಿಂದ ೩೦ ಅಡಿ ಯವರೆಗೆ ಇವೆ. ೧೫ ರಿಂದ ೨೦ ಅಡಿ ಎತ್ತರದವರೆಗೆ ಚೌಕಾಕಾರವಾಗಿ ಕಲ್ಲಿನ ಕಟ್ಟೆಯನ್ನು ಅಥವಾ ಕಮಾನುಗಳ ರೀತಿ ಕಾಣುವಂತೆ ಕಂಬಗಳನ್ನು ನಿರ್ಮಿಸಿದ್ದು ಅದರ ಮೇಲೆ ೧೦ ರಿಂದ ೧೫ ಅಡಿ ಎತ್ತರದ ತೊಟ್ಟಿಯನ್ನು ನಿರ್ಮಿಸಿ ನೀರು ಸಂಗ್ರಹಿಸುತ್ತಿದ್ದರು. ತೊಟ್ಟಿಯನ್ನು ನಿರ್ಮಿಸಲು ಕಲ್ಲು, ಗಾರೆ, ಗಚ್ಚನ್ನು ಮತ್ತು ನೀರು ಬೇಸಿಗೆ ಕಾಲದಲ್ಲೂ ತಂಪಾಗಿರುವಂತೆ ನೋಡಿಕೊಳ್ಳಲು ಇಟ್ಟಿಗೆಗಳನ್ನು ಬಳಸುತ್ತಿದ್ದರು. ಇದರಲ್ಲಿ ಸಂಗ್ರಹಿಸಿದ ನೀರನ್ನು ಚಿಕ್ಕ ಕೊಳವೆಗಳ ಮೂಲಕ ವಸತಿಗೃಹಗಳಿಗೆ ಸರಬರಾಜು ಮಾಡುತ್ತಿದ್ದ ವ್ಯವಸ್ಥೆ ಕಂಡುಬರುತ್ತದೆ. ಇಂತಹ ಕೆಲವು ತೊಟ್ಟಿಗಳು ಸದ್ಯ ನಗರದಲ್ಲಿ ಇದುವರೆಗೂ ಉಳಿದುಕೊಂಡು ಬಂದಿವೆ.

ಈ ರೀತಿ ಸಂಗ್ರಹಿಸಿದ ನೀರನ್ನು ಜೀವನಾವಶ್ಯಕತೆಗೆ ಅಷ್ಟೇ ಅಲ್ಲದೆ ಸುಲ್ತಾನರು, ಅಮೀರರು, ಸರದಾರರು ತಮ್ಮ ಅರಮನೆಗಳ ಸುತ್ತ ಹೂದೋಟಗಳನ್ನು ನಿರ್ಮಿಸುತ್ತಿದ್ದರು. ಅರಕಿಲ್ಲೆಯ ಎರಡೂ ಕಂದಕಗಳ ಮಧ್ಯ ಮತ್ತು ಅರಮನೆಯ ಸುತ್ತಲೂ ನಗರ ಸೌಂದರ್ಯಕ್ಕಾಗಿ ಹೂದೋಟಗಳನ್ನು ನಿರ್ಮಿಸಿದ್ದನ್ನು ವಿವಿಧ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಪ್ರಮುಖವಾಗಿ ಖಾಲಬಾಗ್, ಕಿಶ್ವರ್‌ಖಾನ್‌ಬಾಗ್, ಅಲಿಬಾಗ್, ಬಾರಾ ಇಮಾಮ ಬಾಗ್, ಅಲಾವಿ ಬಾಗ್, ಅರಕಿಲ್ಲಾ ಬಾಗ್, ನೌರೋಜ ಬಾಗ್, ನಯಾಬಾಗ್, ಇಬ್ರಾಹಿಂ ಬಾಗ್, ಮುರಾರಿ ಬಾಗ್, ನಗಿನಹ ಬಾಗ್ ಮುಂತಾದವುಗಳಾಗಿವೆ.[೧೫೦]

ಉಪನಗರಗಳು

ಕೋಮುಸೌಹಾರ್ದತೆಯಿಂದ ಕೂಡಿದ ರಾಜಧಾನಿ ವಿಜಾಪುರ ಪಟ್ಟಣದಲ್ಲಿ ದಿನಕಳೆದಂತೆ ವಿವಿಧ ಸುಲ್ತಾನರ ಕಾಲದಲ್ಲಿ ನಗರ ಹಾಗೂ ನಗರದ ಹೊರಗೆ ಜನವಸತಿ ಹೆಚ್ಚತೊಡಗಿತು. ಇವರ ವಾಸಕ್ಕಾಗಿ ಅನೇಕ ಉಪನಗರಗಳನ್ನು ನಿರ್ಮಿಸಲಾಯಿತು. ಅರಮನೆಗಳನ್ನು ಸುತ್ತುವರಿದಿರುವ ಅರಕಿಲ್ಲೆಯ ಸುತ್ತಮುತ್ತ ಅಂದರೆ ಉತ್ತರ ದಕ್ಷಿಣವಾಗಿ ೩೧/೨ ಕಿ.ಮೀ., ಪೂರ್ವ ಪಶ್ಚಿಮವಾಗಿ

೪ ಕಿ.ಮೀ. ಇರುವ ಹೊರಕೋಟೆಯ ಒಳಗೆ ಮತ್ತು ಹೊರಕೋಟೆಯ ಸುತ್ತ ಸುಮಾರು ೨೫ ಕಿ.ಮೀ. ಸುತ್ತಳತೆಯ ಪ್ರದೇಶದಲ್ಲಿ ಬಾದಶಹರು, ಸರದಾರರು, ಸೇನಾಪತಿಗಳು, ಶ್ರೇಷ್ಠಿಗಳು ತಮಗಾಗಿ ಉಪನಗರಗಳನ್ನು ಕಟ್ಟಿಸಿಕೊಂಡಿದ್ದರಲ್ಲದೆ ಮಹಲ್‌ಗಳನ್ನು ನಿರ್ಮಿಸಿಕೊಂಡು ಅಲ್ಲಿಯೇ ವಾಸಿಸುತ್ತಿದ್ದರು. ಅಲ್ಲದೆ ಅವುಗಳ ರಕ್ಷಣೆಗಾಗಿ ಸುತ್ತಲೂ ಕೋಟೆ ಕಟ್ಟಿರುವ ಸಾಧ್ಯತೆಗಳಿವೆ. ಆದರೆ ಇಂದು ಆ ರೀತಿಯ ಯಾವುದೇ ಅವಶೇಷಗಳು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿಲ್ಲ. ಬಹುಶಃ ಅವು ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿರಬಹುದಾದ ಅಂಶವನ್ನು ತಳ್ಳಿಹಾಕುವಂತಿಲ್ಲ. ಬೇರೆ ಬೇರೆ ಪ್ರದೇಶಗಳಿಂದ ಬಂದ ಜನರಿಗೆ ವ್ಯಾಪಾರ ಮಾಡಲು ಇಂತಹ ಉಪನಗರಗಳನ್ನು ನಿರ್ಮಿಸುತ್ತಿದ್ದು[೧೫೧] ಅಂತಹ ಕೆಲವು ಪ್ರಮುಖ ಉಪನಗರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಜೋಹಾರಾಪುರ, ಶಾಹಪುರ, ಅಫಜಲಪುರ, ಇಬ್ರಾಹಿಮ್‌ಪುರ, ಅಲ್ಲಾಪುರ, ಆಗಾಪುರ, ಏಕಟಾಪುರ, ಐನಾಪುರ, ಖತೀಜಾಪುರ, ಖುದಾನಪುರ, ಚಂದಾಪುರ, ತಕ್ಕಿಯಾ, ತವರಪುರ, ನವರಸಪುರ, ಪಾಚ್ಛಾಪುರ, ಫಕರಾಬಾದ, ಫತೇಪುರ, ಬಮ್ಮನಳ್ಳಿ, ರಂಭಾಪುರ[೧೫೨] ಇತ್ಯಾದಿ.

ಕೋಟೆಯ ಪ್ರಮುಖ ದ್ವಾರಗಳಿಂದ ಈ ಉಪನಗರಗಳಿಗೆ ರಸ್ತೆಸಂಪರ್ಕವನ್ನು ಕಲ್ಪಿಸಲಾಗಿತ್ತು. ಫತೇಪುರ, ಇಬ್ರಾಹಿಮ್‌ಪುರ, ಅಲಿಯಾಬಾದ, ಶಾಹಾಪುರ, ಚಂದಾಪುರ, ಇನಾಯತಪುರ, ಅಮೀನಪುರ, ನವಾಬ್‌ಪುರ, ಲತೀಫ್‌ಪುರ, ಪಕೀರಾಬಾದ, ರಸೂಲಾಪುರ, ಅಲ್ಲಾಪುರ, ಪಾದಶಾಹಾಪುರ, ರಂಭಾಪುರ, ಆಗಾಪುರ, ಜೋರಾಪುರ, ಖದೀಜಾಪುರ, ಹಬಿಬಪುರ, ತಾವರಪುರ, ಶಾರ್ಜಾಪುರ, ಯಕೂಬಪುರ, ಅಫಜಲಪುರ, ನವರಸಪುರ, ಸಿಕಂದರಪುರ, ಖಾದೀರ್‌ಪುರ, ಕೆಶ್ವಾಪುರ, ಇಮಾಮಪುರ, ಐನಾಪುರ, ಬಮ್ಮನಹಳ್ಳಿ ಮುಂತಾದವು.[೧೫೩] ಉದಾಹರಣೆಗೆ ಶಾಹಪುರ ದ್ವಾರದಿಂದ ಶಹಾಪುರಕ್ಕೆ, ಅಲ್ಲಾಪುರ ದ್ವಾರದಿಂದ ಅಲ್ಲಾಪುರ ಹಾಗೂ ಐನಾಪುರಗಳಿಗೆ, ಫತೇದ್ವಾರದಿಂದ ಇಬ್ರಾಹೀಮಪುರ, ಮೆಕ್ಕಾದ್ವಾರದಿಂದ ಚಂದಾಪುರ ಹಾಗೂ ಖದೀಜಾಪುರ ಇತ್ಯಾದಿಯಾಗಿ ಕಂಡುಬರುತ್ತವೆ.

ಬಜಾರಗಳು

ಮಧ್ಯಕಾಲೀನ ಭಾರತದಲ್ಲಿ ಬಜಾರ ಅಥವಾ ಪೇಟೆಗಳು ವ್ಯಾಪಾರ ನಡೆಯುವಂತಹ ಪ್ರಮುಖ ಕೇಂದ್ರಗಳಾಗಿದ್ದವು. ಯುಸೂಫ್ ಅವಧಿಯಲ್ಲಿ ಮಾರಕೋವಿ ಬಜಾರ, ಥಾನಾ ಬಜಾರ, ನಾಗಠಾಣ ಬಜಾರ, ದೌಲತ ಬಜಾರ, ದಹನ ಬಜಾರ, ಮಾರಕುರ ಬಜಾರ, ಮುರದಖಾನ ಬಜಾರ, ಪಾಲಹ ಬಜಾರ, ಮುಬಾರಕ ಬಜಾರ ಮತ್ತು ಇಸ್ಮಾಯಿಲ್ಲನ ಅವಧಿಯಲ್ಲಿ ಕಮಲಖಾನ ಬಜಾರ, ನಕಾ ಬಜಾರ, ಬರೆ ಕುದವಂದ ಬಜಾರುಗಳಿದ್ದವು. ಮೊದಲನೆಯ ಇಬ್ರಾಹಿಮನ ಅವಧಿಯಲ್ಲಿ ಜಾಗಟೆ ಬಜಾರ, ರಾವಬಜಾರ, ಶೇರ ಕಾರಖಾನ್ ಬಜಾರ, ರಂಗೀನ ಮಸಿದ ಬಜಾರ, ಫತೇಜಮಾನ ಬಜಾರ, ಕಾರಂಜಾ ಬಜಾರ, ಸಫಾ ಬಜಾರ, ಶಿಖರ ಖಾನ ಬಜಾರುಗಳಿದ್ದವು ಒಂದನೆಯ ಅಲಿ ಅವಧಿಯಲ್ಲಿ ಹೊಸಶಹಾಪೇಟ ಬಜಾರ, ಇತರೆ ಇಖ್ಲಾಸಖಾನ

ಬಜಾರ, ಯುಸೂಫ್ ರುಮಿಖಾನ ಬಜಾರ ಶಾಹ ಅಬು ತುರಬ ಬಜಾರ, ಅಬ್ದುರ್ ರಜಾಕ ಬಜಾರ, ಲಾಂಗರ ಬಜಾರ, ಮಹಮ್ಮದ ಶಾಹ ಬಜಾರ, ದಾದಮಹಲ ಬಜಾರ ಮುಂತಾದವುಗಳಾಗಿವೆ. ಕೋಟೆಯ ಹೊರಗೂ ಅನೇಕ ಬಜಾರುಗಳಿದ್ದವು ಹಬಿಬಪುರ ಬಜಾರ, ಸಲಾಬತ ಪುರ ಪೇಟೆ, ತವರಾಪುರ ಪೇಟೆ, ಜೋರಾಪುರ ಪೇಟೆ, ಅಫಜಲಪುರ ಪೇಟೆ, ಶಹಾಪುರ ಪೇಟೆ, ಸಿಕಂದರಪುರ ಪೇಟೆ, ಖವಾಸಪುರ ಪೇಟೆ, ಇಮಾಮಪುರ ಪೇಟೆ ಮುಂತಾದವುಗಳು.[೧೫೪]

ಕೋಟೆಯ ನಾಶ

ವಿಜಾಪುರ ಕೋಟೆಯ ರಕ್ಷಣೆಗೆ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದರು. ಆದರೆ ಆದಿಲ್‌ಶಾಹಿಗಳ ಪತನದ ನಂತರ ಕೋಟೆಯು ಹಂತ ಹಂತವಾಗಿ ನಾಶ ಹೊಂದುತ್ತಿದೆ. ಅದು ಇಂದಿಗೂ ಮುಂದುವರಿದಿರುವುದನ್ನು ನಾವು ಗಮನಿಸಬಹುದು.

ಸುಲ್ತಾನ ಮಹಮ್ಮದ್ ಆದಿಲ್‌ಶಾಹನು ತನ್ನ ರಾಜ್ಯದ ಆಡಳಿತಕ್ಕಾಗಿ 'ದಸ್ತುರುಲ ಅಮಲ' ಎಂಬ ಅನೇಕ ಶಾಸನಗಳನ್ನು ಮಾಡಿದ್ದನು. ಅವುಗಳಲ್ಲಿ ಕೋಟೆಯ ರಕ್ಷಣಾಕ್ರಮಗಳ ಕುರಿತಾಗಿಯೂ ಉಲ್ಲೇಖಿಸಲಾಗಿದೆ. ಕಿಲ್ಲೆ ಹಾಗೂ ಸರಹದ್ದಿನ ರಕ್ಷಣೆಗಾಗಿ ರಾಜ್ಯದ ಹಳೆಯ ಪ್ರಾಮಾಣಿಕ, ನಂಬಿಗಸ್ಥ ಜನರನ್ನು ಮಾತ್ರ ನೌಕರರನ್ನಾಗಿ ನೇಮಿಸಬೇಕು. ಅವರನ್ನು ಪ್ರತಿ ಮೂರು ವರುಷಗಳಿಗೊಮ್ಮೆ ಬದಲಾಯಿಸಬೇಕು. ಕೋಟೆಯ ಕಡೆಯ ಅಧಿಕಾರಿಗಳಿಗೆ ೫೦೦ ಸವಾರರನ್ನು ಸರಕಾರದಿಂದ ಕೊಡಬೇಕು. ಕೋಟೆಯ ಬಾಗಿಲಿನ ವ್ಯವಸ್ಥೆಗಾಗಿ ಮತ್ತು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿಯ ಕೋಟೆಯ ಅಧಿಕಾರಿಯ ಈ ಖಾಸಾ ಸೈನ್ಯವನ್ನು ತೆಗೆದುಕೊಂಡು ವ್ಯವಸ್ಥೆ ಇಡಬೇಕು. ದರಬಾರದ ಎಲ್ಲ ಬಾಗಿಲುಗಳಲ್ಲಿ ಸತ್ಯವಾದ ವಿಷಯಗಳನ್ನು ಬರೆಯುವವರು, ಸುದ್ದಿ ಹೇಳುವವರನ್ನು ಕೆಳಗೆ, ಒಳಗೆ ಮತ್ತು ಮೇಲೆ ಹೀಗೆ ಅಲ್ಲಲ್ಲಿ ಎಚ್ಚರಿಕೆಯಿಂದ ನೇಮಿಸಬೇಕು. ಪ್ರಸಂಗ ಬಂದಾಗ ಅವರು ತಕ್ಷಣ ಎಲ್ಲರೂ ಹಾಜರಾಗಿ, ಬಾಗಿಲ ಮೇಲಿನ ಮುಖ್ಯ ಅಧಿಕಾರಿಯ ಸೂಚನೆಯ ಹೊರತಾಗಿ ಯಾರನ್ನೂ ಹೊರಗಿನಿಂದ ಒಳಗೆ ಮತ್ತು ಒಳಗಿನಿಂದ ಹೊರಗೆ ಹೆಜ್ಜೆ ಇಡಗೊಡಬಾರದು. ಹೊಸಬರು ಬಂದರೆ, ಇವರು ಯಾರು, ಎಲ್ಲಿಂದ ಬಂದರು, ಯಾತಕ್ಕೆ ಬಂದರು, ಯಾರನ್ನು ಭೇಟಿಯಾಗಬೇಕಾಗಿದೆ ಮತ್ತು ಅವರು ಇಲ್ಲಿ ಎಷ್ಟು ದಿನ ಇರುತ್ತಾರೆ ಎಂಬ ಬಗ್ಗೆ ಪೂರ್ತಿ ವಿಚಾರ ಮಾಡದೆ ಅವರನ್ನು ಒಳಗೆ ಬರಗೊಡಬಾರದು. ಈ ರೀತಿಯ ರಕ್ಷಣಾಕ್ರಮಗಳನ್ನು ಕೈಗೊಳ್ಳುತ್ತಿದ್ದರು.[೧೫೫]

ವಿಜಾಪುರ ನಗರ ಮತ್ತು ಕೋಟೆಯ ನಾಶವು ಬಹಳ ದೀರ್ಘಕಾಲದಿಂದ ನಡೆದುಕೊಂಡು ಬಂದಿರುವಂತಹದ್ದು. ಕೋಟೆಯ ನಾಶ ಇಂದಿಗೂ ಮುಂದುವರಿದಿದೆ. ಮೊಗಲ ದೊರೆ ಔರಂಗಜೇಬನು ವಿಜಾಪುರದ ಕೋಟೆಯ ಮೇಲೆ ದಾಳಿ ಮಾಡಿದಾಗ ಕೋಟೆಯು ಸುಲಭವಾಗಿ ವಶವಾಗುವಂತೆ

ಕಾಣಲಿಲ್ಲ. ಹೀಗಾಗಿ ಔರಂಗಜೇಬನು ವಿಜಾಪುರ ಸುತ್ತಮುತ್ತ ಸುರಂಗಮಾರ್ಗವನ್ನು ಕೊರೆದು ನಗರಕ್ಕೆ ಮುತ್ತಿಗೆ ಹಾಕಲು ಆದೇಶಿಸಿದನು. ಯುದ್ಧ ಹಾಗೂ ಕೋಟೆಯನ್ನು ಒಡೆಯುವ ಬಹಳಷ್ಟು ಸಾಮಗ್ರಿಗಳನ್ನು ತೆಗೆದುಕೊಂಡು ಬಂದರು. ಸೈನಿಕರು ಕೋಟೆಯ ಸುತ್ತಮುತ್ತ ತೋಫುಗಳನ್ನು ನಿಲ್ಲಿಸಿ ಔರಂಗಜೇಬನೇ ಯುದ್ಧದಲ್ಲಿ ತೊಡಗಿ ತೋಫಖಾನೆ ಮುಖ್ಯಸ್ಥನಾದ ಗಾಜೀಉದ್ದೀನ್‌ಖಾನ ಹತ್ತಿರ ಬಂದು 'ಕೋಟೆಯನ್ನು ಒಡೆಯುವ ಮುಜಾಹಿದರು, ಯುದ್ಧದಲ್ಲಿ ತಮ್ಮ ಶಕ್ತಿ ಸಾಮರ್ಥ್ಯ ತೋರುವ ವೀರರು, ನನ್ನ ಶಾಹಜಾದೆಗಳ(ಗಾಜಪುತ್ರರ) ವಿಶೇಷ ಸೈನಿಕರು ಇವರೆಲ್ಲರೂ ಕೂಡಿ ಒಮ್ಮೆಲೇ ಎಲ್ಲ ಕಡೆಯಿಂದ ಹಲ್ಲೆ ಮಾಡಿರಿ ಎಂದು ಆದೇಶಿಸಿದನು. ಕೋಟೆಯನ್ನು ತೆಗೆದುಕೊಳ್ಳುವ ವಿಷಯದಲ್ಲಿ ರಾಜಕುಮಾರನ ಕಡೆಯ ಜನರಿಗೂ, ಅಮೀರ ಮತ್ತು ಮನಸುಬದಾರರ ಕಡೆಯ ಜನರಿಗೂ ಬಕ್ಷಿಗಳು ಕೆಲಸವನ್ನು ಹಂಚಿಕೊಡುತ್ತಾರೆ. ಅದರಂತೆ ಮಾಡಬೇಕು. ವಿಜಾಪುರದ ಕೋಟೆಯನ್ನು ಕಟ್ಟಿದ ಭೂಮಿಯಲ್ಲಿ ಅರ್ಧ ಗಜ ಅಗೆದರೂ ಸಾಕು ಕರಿಕಲ್ಲು ದೊರೆಯುತ್ತದೆ. ಹೀಗಾಗಿ ಅವಸರದಿಂದ ಕೆಲಸ ಮಾಡುವ ಬೇಲದಾರರು, ಕಲ್ಲುಕುಟಿಗರು ಕೆಲಸ ಮಾಡಿ ಸೈನ್ಯದ ಆಕ್ರಮಣವನ್ನು ಕೋಟೆಯ ದ್ವಾರದ ಹತ್ತಿರ ತಂದು ಮುಟ್ಟಿಸಿದರು. ದಖಣೀ ಜನರು ಪರಾಕ್ರಮಿಗಳಾಗಿದ್ದರು. ಅವರು ತೋಫುಗಳನ್ನು ಮತ್ತು ಬಂದೂಕುಗಳನ್ನು ಹಾರಿಸುವಲ್ಲಿ ತಮ್ಮ ಸಾಮರ್ಥ್ಯ ಮೆರೆದು ಶತ್ರುಗಳನ್ನು ಪರಾಭವಗೊಳಿಸುವ ಯತ್ನವನ್ನು ಮಾಡುತ್ತಿದ್ದರು. ಆದರೆ ಕೊನೆಗೆ ಮೊಗಲರಿಗೆ ಕೋಟೆಯು ವಶವಾಯಿತು.[೧೫೬]

ಈ ರೀತಿ ಪ್ರಥಮ ಹಂತದಲ್ಲಿ ಕೋಟೆಯ ನಾಶ ಪ್ರಾರಂಭವಾಯಿತು. ಮುಂದೆ ಕ್ರಿ.ಶ. ೧೬೮೯ರವರೆಗೆ ಔರಂಗಜೇಬನು ವಿಜಾಪುರದಲ್ಲಿಯೇ ಇದ್ದನು. ಆಗ ವಿಜಾಪುರದಲ್ಲಿ 'ಮಹಾಮಾರಿ'(ಕಾಲರಾ)ಯ ದೊಡ್ಡ ಉಪದ್ರವವಾಯಿತು. ಈ ಬೇನೆಯಿಂದ ಒಂದೂವರೆ ಲಕ್ಷ ಜನ ಅದರಲ್ಲಿ ವ್ಯಾಪಾರಸ್ಥರು, ಸಿಪಾಯಿಗಳು, ಗ್ರಾಮಸ್ಥರು ಅಲ್ಲದೆ ಅನೇಕ ಅಧಿಕಾರಿ ವರ್ಗದವರು ಸತ್ತರು. ಆಲಂಗಿರ ಬಾದಶಹನ ಜೊತೆಗೆ ಬಂದ ಅನೇಕ ದೊಡ್ಡ ದೊಡ್ಡ ಜನರು ಮತ್ತು ಬಾದಶಹನ ಸ್ತ್ರೀ, ಔರಂಗಬಾದಿ ಎಂಬುವಳು, ಫಾಜಿಲಖಾನ್ ಅಲ್ಲದೆ ಖಾಜಿ, ಮುಫ್ತಿ, ಕರೀಬ ಮುಂತಾದ ಇಮಾಮಗಿರಿ ಮಾಡುವ ಕಾಮಗಾರರು ಮತ್ತು ರಾಜಾ ಜಸವಂತನ ಮಗ ಮಹಂದೀರಾಜ ಮೊದಲಾದವರು ಮರಣ ಹೊಂದಿದರು. ಒಂದು ದಿನ ಅಲ್ಲಾಹಪುರ ದ್ವಾರದಿಂದ ತೆಗೆದುಕೊಂಡು ಹೋದ ಬೆತ್ತಲೆ ಶವಗಳ ಸಂಖ್ಯೆ ಎಣಿಕೆ ಮಾಡಲಾಗಿ ಏಳುಸಾವಿರ ಮತ್ತೊಂದು ಹೇಳಿಕೆಯಂತೆ ೭೭೭ನ್ನು ತಲುಪಿತಂತೆ! ಬಹುತೇಕ ಮನೆಗಳಲ್ಲಿ ರಾತ್ರಿ ಬಾಗಿಲು ಮುಚ್ಚಲು. ಬೆಳಿಗ್ಗೆ ತೆರೆಯಲು ಯಾರೂ ಉಳಿಯುತ್ತಿರಲಿಲ್ಲ. ಮನೆಗಳಲ್ಲಿದ್ದ ಎಲ್ಲ ಸಣ್ಣ–ದೊಡ್ಡ ಸ್ತ್ರೀ ಪುರುಷರೆಲ್ಲರೂ ಸಾಯುತ್ತಿದ್ದರು. ಕಾಲರಾ ಬೇನೆಯು ಲೋಕಪ್ರಳಯದ ದಿನವಾಗಿ ಪರಿಣಮಿಸಿತು. ಈ ಕಾಲರಾ ಬೇನೆ ಸುಮಾರು ಮೂರು ವರುಷಗಳವರೆಗೆ ನಿರಂತರ ನಡೆದೇ ಇತ್ತು. ಇದರಿಂದಾಗಿ ಸಾವಿರಾರು ಮನೆಗಳು ಮತ್ತು ಮಹಲುಗಳು ಬರಿದಾದುವು. ಕೋಟೆಯ ಒಳಬದಿಯಲ್ಲಿ ಕಾಣುವ ಬಹಳಷ್ಟು ಗೋರಿಗಳು ಈ ಮಹಾಮಾರಿ ಉಪದ್ರವದಲ್ಲಿಯವೇ ಆಗಿವೆ[೧೫೭] ಎಂದು ಹೇಳಲಾಗುತ್ತದೆ.

ಕ್ರಿ.ಶ. ೧೬೯೧ ರಿಂದ ೯೨ ಮತ್ತು ಕ್ರಿ.ಶ. ೧೭೦೧ ರಿಂದ ೦೨ರಲ್ಲಿ ಪ್ರಳಯಕಾರಕ ದೊಡ್ಡ ಬರ ಬಿದ್ದಿತು. ಆ ಬರದ ವರ್ಣನೆ ೬೦ ರಿಂದ ೭೦ ವರ್ಷಗಳವರೆಗೆ ಜನರ ಬಾಯಿಯಿಂದ ಹೋಗಲಿಲ್ಲ. ಒಂದು ಅಗುಳು ಅನ್ನ ದೊರೆಯುತ್ತಿರಲಿಲ್ಲ. ಅದರಿಂದ ಅನೇಕ ಜನರು ಗವತಿಯ ಬೀಜಗಳನ್ನು ಮತ್ತು ಪ್ರತಿಯೊಂದು ಮರಗಳ ಬೀಜಗಳನ್ನು ತಿಂದು ರಸ್ತೆಯಲ್ಲಿ ಸಾಯುತ್ತ ಬಿದ್ದುದನ್ನು, ಬಿದ್ದ ಪ್ರೇತಗಳನ್ನು ಕಾಣುತ್ತಿದ್ದರು. ಇನ್ನೂ ಕೆಲವರು ನಾಯಿ-ಬೆಕ್ಕುಗಳನ್ನು ಕತ್ತರಿಸಿ ತಿಂದು ಪ್ರಾಣ ಉಳಿಸಿಕೊಂಡವರೂ ಇದ್ದರು. ಕೊನೆಗೆ ಅವರೂ ಸತ್ತರು. ಕೆಲವರು ಈ ಬರದಲ್ಲಿ ಪ್ರಾಣ ಉಳಿಸಿಕೊಂಡವರು ಮುಂದೆ ಹತ್ತಿದ ಬೇನೆಗಳಿಂದ ಸತ್ತರು. ಹೀಗೆ ಲಕ್ಷಾವಧಿ ಜನರು ಈ ಬರದಲ್ಲಿ ಸತ್ತರು. ಕೆಲ ಜನರು ಕಫನ-ದಫನಗಳಿಲ್ಲದೆ ಹಾಗೆಯೇ ಸತ್ತು ಭೂಮಿಯ ಮೇಲೆ ಬಿದ್ದರು. ಭೂಮಿಯ ಮೇಲೆ ಬಿಳಿಯ ಹಾಸಿಗೆಯ ಹಾಗೆ ಸತ್ತ ಮನುಷ್ಯರ ಅವಶೇಷಗಳು ಕಾಣುತ್ತಿದ್ದವು. ಅಂಥ ದುರ್ಭರ ಪ್ರಸಂಗ ಏಳೆಂಟು ವರುಷಗಳವರೆಗೆ ಇತ್ತು. ಅನಂತರ ಅದರ ಬೆನ್ನ ಹಿಂದೆಯೇ ಮತ್ತೊಂದು ಬರ ಬಿದ್ದಿತು. ಅದು ತನ್ನ ಹಿಂದಿನ ಬರದ ಜೊತೆಗೆ ಸಾಮ್ಯತೆಯನ್ನು ಕಾಯ್ದುಕೊಂಡಿತ್ತು. ಈಗ ಇನ್ನೊಂದು ಬರ ಬಿದ್ದಾಗ ಜನರ ಹತ್ತಿರ ತಮ್ಮ ಜೀವಗಳ ಹೊರತು ಇನ್ನೇನೂ ಉಳಿದಿರಲಿಲ್ಲ.[೧೫೮] ಇದರಿಂದಾಗಿ ವಿಜಾಪುರ ಮತ್ತಷ್ಟು ನಾಶವಾಗುತ್ತಲೇ ಹೋಯಿತು.

ಕ್ರಿ.ಶ. ೧೭೫೯-೬೦ರಲ್ಲಿ ನವಾಬ ಅಲಿ ನಿಜಾಮಖಾನ ಮತ್ತು ಮರಾಠಾ ಜನರ ಮಧ್ಯೆ ಜಗಳ ನಡೆದು, ಅರವತ್ತು ಲಕ್ಷದ ಪ್ರದೇಶಗಳು ಕಡಿಮೆಯಾದವು. ಅನಂತರ ವಿಜಾಪುರವು ಬ್ರಾಹ್ಮಣ ಮರಾಠಾ ಜನರ ಕೈಗೆ ಸಿಕ್ಕಿತು. ಆಗ ಬ್ರಾಹ್ಮಣ ಜನರು ವಿಜಾಪುರ ನಗರದ ವ್ಯವಸ್ಥೆಯನ್ನು ಚೆನ್ನಾಗಿ ಇಡಲಿಲ್ಲ. ವಿಜಾಪುರದ ಉತ್ಕರ್ಷಕ್ಕಾಗಿ ಮತ್ತು ಇಲ್ಲಿ ಕಟ್ಟಡಗಳ ದುರಸ್ತಿಗಾಗಿ ಚಿಂತೆಯನ್ನೇ ಮಾಡಲಿಲ್ಲ. ಇಲ್ಲಿಗೆ ಬಂದ ಅಮಲದಾರನು ಪ್ರತಿದಿನ ಕಂದಾಯ ವಸೂಲಿ ಮಾಡುವುದರಲ್ಲಿಯೇ ನಿರತನಾಗಿರುತ್ತಿದ್ದನು. ಆತ ಎಂದೂ ಪ್ರಜೆಗಳ, ಬಡಬಗ್ಗರ ಮೇಲೆ ಕಣ್ಣು ಹಾಯಿಸಲಿಲ್ಲ. ಇದರಿಂದ ವಿಜಾಪುರದ ಸ್ಥಿತಿಯು ದಿನದಿಂದ ದಿನಕ್ಕೆ ಇನ್ನಷ್ಟು ಹಾಳು ಬೀಳುತ್ತ ನಡೆಯಿತು. ಎಷ್ಟೋ ಮನೆಗಳೂ, ಅಂಗಡಿ ಮುಂಗಟ್ಟುಗಳು ನಿರ್ಮೂಲವಾದವು. ಔರಂಗಜೇಬನು ವಿಜಾಪುರವನ್ನು ಗೆದ್ದುಕೊಂಡಾಗ ಇಲ್ಲಿಯ ಜನಗಣತಿಯನ್ನು, ಮನೆಗಳ ಗಣತಿಯನ್ನು ಮಾಡಿದ್ದನು. ಆಗ ೯,೮೪,೦೦೦ ಸಾವಿರ ಮನೆಗಳು(ಜನರು?), ಲೆಕ್ಕಕ್ಕೆ ಬಂದಿದ್ದವು. ಆದರೆ ಇಂದು ನೋಡಿದರೆ ವಿಜಾಪುರ ನಗರ ಮತ್ತು ಉಪನಗರ, ಕೋಟೆಯ ಒಳಹೊರಗೆಲ್ಲ ಸೇರಿ ೯೦೦ಗಳಿಗಿಂತ ಅಧಿಕ ಮನೆಗಳಿಲ್ಲ. ಆಶ್ಚರ್ಯವೆಂದರೆ ಪ್ರತಿವರುಷ ವಿಜಾಪುರವು ನಾಶವಾಗುತ್ತಲೇ ನಡೆದಿದೆ. ಇಂದು ಈ ನಗರವನ್ನು ಒಂದು ಸಣ್ಣ ಕಸಬೆಗೆ ಅಥವಾ ಒಂದು ಹಳ್ಳಿಗೆ ಹೋಲಿಸುವಂತಿದೆ ಎಂದು 'ಬಸಾತೀನೆ ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.[೧೫೯]

ಮರಾಠರ ನಂತರ ವಿಜಾಪುರವು ಬ್ರಿಟಿಷರ ಕೈಗೆ ಬಂದಿತು. ಇವರ ಆಡಳಿತಾವಧಿಯಲ್ಲಿಯೂ ವಿಜಾಪುರವು ಮೊದಲಿನಂತೆಯೇ ಹಾಳು ಬಿದ್ದ ಊರಾಗಿದೆ. ಬಿದ್ದವುಗಳು ಹಾಗೆಯೇ ಉಳಿದಿವೆ.

ಬ್ರಾಹ್ಮಣರಾದ ಪೇಶ್ವೆಗಳಂತೆ ಅವರ ಆಡಳಿತದಲ್ಲಿ ಯಾರೂ ವಿಜಾಪುರದ ಕಟ್ಟಡಗಳ ವ್ಯವಸ್ಥೆಯನ್ನು ಮಾಡಲಿಲ್ಲ. ಈ ಬಗ್ಗೆ ಚಿಂತೆಯನ್ನೂ ಮಾಡಿಲ್ಲ. ಹೀಗಾಗಿ ಕೋಟೆಯ ಅವನತಿ ನಿರಂತರವಾಗಿ ನಡೆದಿದೆ.[೧೬೦] ಆದರೆ ಇಂದು ವೇಗವಾಗಿ ಬೆಳೆಯುತ್ತಿರುವ ನಗರೀಕರಣದಿಂದ ಕೋಟೆಯು ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿದೆ. ನಗರದ ರಸ್ತೆಗಳ ಅಗಲೀಕರಣದ ನೆಪವನ್ನು ಒಡ್ಡಿ ಕೆಲವು ಕಡೆ ಕೋಟೆಗೋಡೆಯನ್ನು ಒಡೆಯುತ್ತಿದ್ದಾರೆ. ವಿಜಾಪುರ-ಇಂಡಿ ರಸ್ತೆ, ನಾಗಠಾಣ ರಸ್ತೆ, ಬಿ.ಎಲ್.ಡಿ.ಇ. ರಸ್ತೆ, ಲಿಂಗದಗುಡಿ ರಸ್ತೆ, ಬಾಗಲಕೋಟ ರಸ್ತೆಯಲ್ಲಿ ಈ ಪರಿಸ್ಥಿತಿಯನ್ನು ಕಾಣಬಹುದು. ಇನ್ನು ಕೋಟೆಯ ಸರಿಯಾದ ರಕ್ಷಣೆಯಿಲ್ಲದೆ ಕೆಲವು ಕಡೆ ಶೌಚಾಲಯವಾಗಿ ಉಪಯೋಗಿಸುತ್ತಿದ್ದಾರೆ. ಇಂದಿನ ಬಹಮನಿ ದ್ವಾರ, ಮಕ್ಕಾದ್ವಾರ, ಅಲ್ಲಾಪುರ ದ್ವಾರಗಳ ಹತ್ತಿರವೂ ಇದೇ ಪರಿಸ್ಥಿತಿ ಕಂಡುಬರುತ್ತದೆ ಮತ್ತು ಇವು ಜೂಜುಕೋರರ ಅಡ್ಡಾಗಳಾಗಿವೆ. ಕೋಟೆಗೋಡೆಯ ಕಲ್ಲುಗಳನ್ನು ಕಿತ್ತು ಇತರ ಕಟ್ಟಡಗಳಿಗೆ ಉಪಯೋಗಿಸುತ್ತಿರುವುದು ಕಂಡುಬರುತ್ತದೆ. ಇಂದು ಸಂಪೂರ್ಣವಾಗಿ ಹೊರಕೋಟೆಯನ್ನು ಗಮನಿಸಿದಾಗ ಅಲ್ಲಾಪುರದ್ವಾರದಿಂದ ಮಕ್ಕಾದ್ವಾರದವರೆಗೆ ಪೂರ್ಣ ಪ್ರಮಾಣದಲ್ಲಿ ಕಂಡುಬಂದರೂ ಅಲ್ಲಲ್ಲಿ ನಾಶ ಹೊಂದಿದೆ. ಮಕ್ಕಾದ್ವಾರದಿಂದ ಬಿ.ಎಲ್.ಡಿ.ಇ.ಯ ರಸ್ತೆಯವರೆಗಿನ ಕೋಟೆಯ ಗೋಡೆಯು ಪೂರ್ಣ ಪ್ರಮಾಣದಲ್ಲಿ ಅವನತಿಯ ಸ್ಥಿತಿಯಲ್ಲಿದ್ದು ಒಂಟಿಗೋಡೆ ಮಾತ್ರ ಕಂಡುಬರುತ್ತದೆ. ಮುಲಕ್-ಇ-ಮೈದಾನ ತೋಫಿನ ಬುರುಜನ್ನು ಬಿಟ್ಟರೆ ಉಳಿದ ಕೋಟೆಗೋಡೆ ಹಾಗೂ ಬುರುಜುಗಳು ಅವನತಿಯ ಸ್ಥಿತಿಯಲ್ಲಿವೆ. ಬಿ.ಎಲ್.ಡಿ.ಇ. ರಸ್ತೆಯಿಂದ ಅಲ್ಲಾಪುರದ್ವಾರದವರೆಗಿನ ಕೋಟೆಗೋಡೆಯು ಅಲ್ಲಲ್ಲಿ ಪೂರ್ಣ ಪ್ರಮಾಣದಲ್ಲಿ ಕಂಡುಬಂದರೂ ಸ್ಥಳಿಯರಿಂದಲೇ ಹೆಚ್ಚಾಗಿ ಹಾನಿಗೊಳಗಾಗುತ್ತಿದೆ ಮತ್ತು ಕೋಟೆಯ ಸುತ್ತಲೂ ಇರುವ ಕಂದಕಗಳು ನಗರದ ಕೊಳಚೆ ನೀರು ತುಂಬಿಕೊಂಡು ಗಬ್ಬುವಾಸನೆ ಬೀರುತ್ತಿವೆ.

ಇನ್ನುಳಿದಂತೆ ಕೋಟೆಯ ರಕ್ಷಣೆಗೆ ರಾಜ್ಯ ಹಾಗೂ ಕೇಂದ್ರ ಪುರಾತತ್ವ ಇಲಾಖೆಗಳು ಇತ್ತಕಡೆ ಗಮನಹರಿಸಿದಂತೆ ಕಾಣುತ್ತಿಲ್ಲ. ಜಿಲ್ಲೆಯಲ್ಲಿ ಕೆಲವು ಪ್ರಮುಖ ತಾಣಗಳನ್ನು ಬಿಟ್ಟರೆ ಪುರಾತತ್ವ ಇಲಾಖೆಯ ರಕ್ಷಣಾ ಫಲಕಗಳೂ ಕೂಡಾ ಕಂಡುಬರುವುದಿಲ್ಲ. ಇವರ ನಿರ್ಲಕ್ಷತನವೂ ಕೂಡಾ ಕೋಟೆಯ ಅವನತಿಗೆ ಕಾರಣವಾಗಿದೆ. ಇವೆಲ್ಲವಕ್ಕಿಂತ ಮಿಗಿಲಾಗಿ ನಮ್ಮ ದೇಶದ ಪರಂಪರೆ, ಸಂಸ್ಕೃತಿ, ಐತಿಹಾಸಿಕ ಸ್ಮಾರಕಗಳನ್ನು ಉಳಿಸಿಕೊಂಡು ಮುಂದಿನ ತಲೆಮಾರಿಗೆ ಮಾದರಿಯಾಗಿಸುವ ಪ್ರಯತ್ನ ಸ್ಥಳಿಯ ಜನಸಾಮಾನ್ಯರಲ್ಲಿರ ಬೇಕಾದುದು ಮುಖ್ಯ ಆದರೆ ವಿಜಾಪುರದ ಕೋಟೆ ಒಂದೇ ಅಲ್ಲದೆ ಜಿಲ್ಲೆಯಲ್ಲಿರುವ ಎಲ್ಲ ಐತಿಹಾಸಿಕ ಸ್ಮಾರಕಗಳ ಅವನತಿಗೆ ಸ್ಥಳೀಯ ಜನರ ನಿರ್ಲಕ್ಷವೂ ಕೂಡಾ ಕಾರಣವಾಗಿದೆ. ಹೀಗಾಗಿ ಪುರಾತತ್ವ ಇಲಾಖೆ ಜನಸಾಮಾನ್ಯರಿಗೆ ಐತಿಹಾಸಿಕ ಪರಂಪರೆಯ ಮಹತ್ವವನ್ನು ತಿಳಿಸುವುದರ ಜೊತೆಗೆ ಸ್ಥಳಿಯ ಜನರ ಸಹಕಾರದೊಂದಿಗೆ ಕೇಂದ್ರ ಅಥವಾ ರಾಜ್ಯ ಪುರಾತತ್ವ ಇಲಾಖೆಗಳು ಈ ಸ್ಮಾರಕದ ರಕ್ಷಣೆಗೆ ಮುಂದಾಗಬೇಕು. ಇಲ್ಲದಿದ್ದರೆ ದಕ್ಷಿಣ ಭಾರತದಲ್ಲಿಯೇ ಅತಿ ವಿಸ್ತಾರವಾದ ಸ್ಥಳದುರ್ಗ ಕಾಲನ ತುಳಿತಕ್ಕೆ ಸಿಕ್ಕು

ಮುಂದೊಂದು ದಿನ ಅವುಗಳ ಅವಶೇಷಗಳು ಕೂಡಾ ಸಿಗದ ಹಾಗೆ ಸಂಪೂರ್ಣವಾಗಿ ನಾಶ ಹೊಂದುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

ತೊರವಿ

ವಿಜಾಪುರದಿಂದ ಪಶ್ಚಿಮಕ್ಕೆ ೬ ಕಿ.ಮೀ. ದೂರದಲ್ಲಿ ವಿಜಾಪುರ–ಅಥಣಿ ರಸ್ತೆಯಲ್ಲಿರುವ ತೊರವಿ ಎಂಬ ಗ್ರಾಮದಲ್ಲಿ ನವರಸಪುರ ಕೋಟೆ ಕಂಡುಬರುತ್ತದೆ. ಆದಿಲ್‌ಶಾಹಿ ಸುಲ್ತಾನರಲ್ಲಿ ಎರಡನೇ ಇಬ್ರಾಹಿಮ್ ಆದಿಲ್‌ಶಾಹನು ಇದನ್ನು ಒಂದು ಉಪರಾಜಧಾನಿಯನ್ನಾಗಿ ಮಾಡುವ ಯೋಜನೆ ಹಾಕಿದನು. ಕ್ರಿ.ಶ. ೧೫೯೯ ರಿಂದ ೧೬೦೦ರಲ್ಲಿ ಸಂಪೂರ್ಣ ನೂತನ ನಗರದ ಬುನಾದಿಯನ್ನು ಹಾಕಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಇದಕ್ಕೆ ನವರಸಪುರ ಎಂದು ಹೆಸರಿಸಿದನು.[೧೬೧]

ಈ ಹೆಸರು ಬರಲು ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾಗಿದ್ದನ್ನು ಕಾಣುತ್ತೇವೆ. ರಫೀಯುದ್ದೀನ್ ಇಬ್ರಾಹಿಂ ಶಿರಾಜಿ ವಿರಚಿತ 'ತಝ್ಕಿರತುಲ್ ಮುಲೂಕ್' ಎಂಬ ಸಾಹಿತ್ಯ ಕೃತಿಯಲ್ಲಿ ಉಲ್ಲೇಖವಾಗಿರುವಂತೆ ಈ ಪ್ರದೇಶದಲ್ಲಿ ಮೊದಲು 'ತೊರವೆ' ಎಂಬ ಗ್ರಾಮವಿತ್ತು. ಅಲ್ಲಿನ ನೀಲಯ್ಯ ಎಂಬ ಹೆಸರಿನ ಓರ್ವ ವ್ಯಕ್ತಿ ಆಲಂಪನಾರ ಆಸ್ಥಾನಕ್ಕೆ ಬಂದಿದ್ದ. ಅವನು ದರ್ಬಾರಿನಲ್ಲಿರುವ ಯಾರಿಗೂ ತಿಳಿಯದ ಅಪರಿಚಿತ ವ್ಯಕ್ತಿಯಾಗಿದ್ದ. ಇದೇ ವೇಳೆಗೆ ಆಲಂಪನಾರ(ಎರಡನೆಯ ಇಬ್ರಾಹಿಮ್ ಆದಿಲ್‌ಶಾಹ) ತನ್ನ ಕನಸಿನ ನೌರಸ್‌ಪುರವನ್ನು ಕಟ್ಟಿಸಲು ಸೂಕ್ತ ಸ್ಥಳ ಯಾವುದು ಎಂಬ ಯೋಚನೆಯಲ್ಲಿದ್ದನು. ಅವನು ಅಲ್ಲಿಗೆ ಬಂದು ಇದೇ ಗ್ರಾಮದಲ್ಲಿ ಈ ನಗರವನ್ನು ಕಟ್ಟಿಸಿ ಎಂಬ ಸಲಹೆಯನ್ನು ನೀಡಿದ. ಈ ಅಪರಿಚಿತ ಆಗಂತುಕನ ಆಗಮನದಿಂದ ಹೊಸದೊಂದು ಆಸೆ ಹುಟ್ಟಿಕೊಂಡಿತು, ಮನಸ್ಸಿಗೆ ಸಮಾಧಾನವಾಯಿತು. ಆದುದರಿಂದ ಈ ನಗರಕ್ಕೆ ನೌರಸ್‌ಪುರ್(ಫಾರಸಿ ಭಾಷೆಯಲ್ಲಿ ಈ ಶಬ್ದಕ್ಕೆ 'ಅಪರಿಚಿತ ಹೊಸ ಆಗಂತುಕ' ಎಂಬ ಅರ್ಥವಿದೆ.) ಎಂಬ ಹೆಸರು ಇಡಲಾಯಿತು.[೧೬೨]

ಮಹಮ್ಮದ್ ಇಬ್ರಾಹಿಮ್ ಜುಬೇರಿ ವಿರಚಿತ 'ಬಸಾತೀನೆ ಸಲಾತೀನ', ಕೃತಿಯಲ್ಲಿ ಉಲ್ಲೇಖವಾಗಿರುವಂತೆ ಈ ಹೊಸನಗರವನ್ನು ಕಟ್ಟಿ ಪೂರ್ತಿಗೊಳಿಸಿದ ದಿನ ಇಬ್ರಾಹಿಮ್ ಆದಿಲ್‌ಶಾಹನಿಗೆ ಹತ್ತಿರದ ತೊರವಿ ಗ್ರಾಮದ ಒಬ್ಬ ಗೃಹಸ್ಥನು ಒಂದು ಬಾಟಲಿ ಮದ್ಯವನ್ನು ಕಾಣಿಕೆಯಾಗಿ ಕೊಟ್ಟನು. ಅಂಥ ರುಚಿಯಾದ ಮದ್ಯವನ್ನು ಬಾದಶಹನು ಎಂದೂ ಕುಡಿದಿರಲಿಲ್ಲವಂತೆ. ಅದನ್ನು ಎಲ್ಲಿಂದ ತಂದಿರಿ ಎಂದು ಬಾದಶಹನು ವಿಚಾರಿಸಿದನು. ಅದು ಇಲ್ಲಿಯೇ ಉತ್ಪನ್ನವಾದುದೆಂದು ಗೊತ್ತಾದಾಗ ಬಾದಶಹನಿಗೆ ಇನ್ನಷ್ಟು ಆಶ್ಚರ್ಯವಾಯಿತು. ಆಗ ಬಾದಶಹನು ಸಂತೋಷದಿಂದ "ಇಮ್ರೋಜ್ ಮಾರಾ ಕೈಫಿಯತೆ ನವ್ ರಸೀದಾ", "ನನಗೆ ಹೊಸದೊಂದು ಸುಖವನ್ನು ಕೊಟ್ಟ ಈ ರಸ 'ನವರಸೀದ' ಎಂದನು". ಅದೇ ಹೆಸರಿನಿಂದ ಈ ಹೊಸನಗರವನ್ನು ಕರೆಯಬೇಕೆಂದು ನಿರ್ಧರಿಸಲಾಯಿತು. ಆದ್ದರಿಂದ 'ನವರಸಪುರ' ಎಂಬುದಾಗಿ ಕರೆದನು.[೧೬೩]

ಬಾದಶಹನು ಇಲ್ಲಿ ಅರಮನೆ, ಶಾಹಿ ಕಟ್ಟಡಗಳು ಹಾಗೂ ನಗರದ ಕೋಟೆಯ ನಿರ್ಮಾಣದ ಕೆಲಸವನ್ನು ಶಹನವಾಜ್‌ಖಾನ್‌ನಿಗೆ ಒಪ್ಪಿಸಿದನು.[೧೬೪] ಸುಮಾರು ೨೦,೦೦೦ ಕಾರ್ಮಿಕರು ಈ ಹೊಸ ರಾಜಧಾನಿಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ನಿರ್ಮಾಣಗೊಳ್ಳುತ್ತಿರುವ ಹೊಸ ರಾಜಧಾನಿಯ ಪ್ರದೇಶಗಳಲ್ಲಿ ಜನಸಾಮಾನ್ಯರು ಮನೆ ಕಟ್ಟಿಕೊಂಡು ನೆಲೆಯೂರಲು ಪ್ರಾರಂಭಿಸಿದರು. ಅಲ್ಲಲ್ಲಿ ಉದ್ಯಾನಗಳು, ಗೋದಾಮುಗಳು ಮತ್ತು ಶಸ್ತ್ರಾಗಾರಗಳು ಹಾಗೂ ಎರಡು ಮೈಲುಗಳಾಚೆ ಕೋಟೆಗೋಡೆ ನಿರ್ಮಾಣಗೊಂಡಿತು. ಪಕ್ಕದ ರಾಮಲಿಂಗಂ ಕೆರೆಯಿಂದ ಕೊಳವೆಗಳ ಮೂಲಕ ನೀರಿನ ವ್ಯವಸ್ಥೆ ಮಾಡಲಾಯಿತು. ಸಂಗೀತ ಪ್ರಿಯನಾಗಿದ್ದ ಸುಲ್ತಾನನು ಗಗನಮಹಲದ ಮಾದರಿಯಲ್ಲಿ ಸಂಗೀತ ಮಹಲನ್ನು ಕಟ್ಟಿಸಿದನು. ಇದರ ಹಿಂಭಾಗ ರಾಣಿಪರಿವಾರದವರಿಗಾಗಿ 'ನಾರಿಮಹಲ್' ಮತ್ತು ಸ್ವಲ್ಪ ಅಂತರದಲ್ಲಿ ತಗಣಿಮಹಲ್ ನಿರ್ಮಾಣಗೊಂಡವು. ಬಾದಶಹನ ವಾಸಕ್ಕಾಗಿ ಅತಿ ಎತ್ತರವಾದ ಸ್ಥಳದಲ್ಲಿ ವಾಡೆಯನ್ನು ನಿರ್ಮಿಸಲಾಗಿತ್ತು. ಇದರಲ್ಲಿ ನಾನಾ ಪ್ರಕಾರದ ಕಾರಾಗಿರಿಯ ಕುಶಲತೆಯಿತ್ತು. ವಾಡೆಗೆ ಬಹಳ ಕಿಟಕಿಗಳನ್ನು ಬಿಟ್ಟು ಸುಂದರವಾದ ಗೋಡೆ ಮತ್ತು ಮಂಟಪಗಳುಳ್ಳ ಬಾಗಿಲುಗಳಿದ್ದವು. ವಾಡೆಯ ಸುತ್ತಲೂ ನಾಲ್ಕು ಕಡೆಗೆ ಹೂದೋಟ-ಕೈತೋಟಗಳನ್ನು ಮಾಡಿದ್ದರು. ಆ ಅರಮನೆಯ ನಾಲ್ಕು ಕಡೆ ಕಟ್ಟಿದ ಕಟ್ಟಡಗಳಲ್ಲಿ ಬಾದಶಹನ ಸಿಪಾಯಿಗಳು, ನೌಕರ-ಚಾಕರರು, ಸರನೋಬತ ಮಂಡಳಿ, ಇತ್ಯಾದಿ ಇರುವಂತೆ ಕಟ್ಟಿದ್ದರು.

ಎರಡನೇ ಇಬ್ರಾಹಿಂ ಆದಿಲ್‌ಶಾಹನು ಈ ನವರಸಪುರವನ್ನು ನಿರ್ಮಾಣ ಮಾಡಿ ಅಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸಬೇಕು ಎಂಬ ಉದ್ದೇಶವನ್ನಿಟ್ಟುಕೊಂಡಿದ್ದರಿಂದ ಈ ನವರಸಪುರ ನಗರ ಮತ್ತು ನಗರದ ರಕ್ಷಣೆಗಾಗಿ ಸುತ್ತಲೂ ಕೋಟೆಯ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ್ದನು. ಕ್ರಿ.ಶ. ೧೬೦೪ರಲ್ಲಿ ಈ ನಗರದ ಹೊರಗಡೆ ಇರುವ ಜೋಹರಾಪುರ ಬಾಗಿಲಿನಿಂದ ಒಂದು ಕೋಸ ದೂರದಲ್ಲಿ ನವರಸಪುರ ಕೋಟೆಯನ್ನು ಕಟ್ಟಿಸಿದನು[೧೬೫] ಎಂದು 'ಗುಲದಸ್ತಾಯೆ ಬಿಜಾಪುರ' ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ನಗರರಚನೆ ಮತ್ತು ಕೋಟೆಯ ನಿರ್ಮಾಣ ಇನ್ನೂ ಪೂರ್ಣಗೊಳ್ಳದೆ ಇರುವಾಗಲೇ ರಾಜಕೀಯ ತಿಕ್ಕಾಟದಲ್ಲಿ ಅದು ನಿರ್ಮಾಣದ ಜೊತೆಜೊತೆಗೆ ವಿನಾಶದ ಹಾದಿಯನ್ನು ಹಿಡಿಯಿತು.

ನವರಸಪುರದ ಕೋಟೆ ನಿರ್ಮಾಣವು ಪೂರ್ಣಗೊಂಡಿರಲಿಲ್ಲ ಎಂಬುದು ತಿಳಿದುಬರುತ್ತದೆ. ಆದರೂ ನಗರದ ಪೂರ್ವಭಾಗವನ್ನು ಹೊರತುಪಡಿಸಿ ಉಳಿದ ಮೂರು ದಿಕ್ಕುಗಳಲ್ಲಿ ಕೋಟೆಗೋಡೆಯು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ(ತಲನಕ್ಷೆ ನೋಡಿ). ದಕ್ಷಿಣದಲ್ಲಿ ಅತ್ತಲಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಬುಂಡೆಬುರುಜುವಿನಿಂದ ಪಶ್ಚಿಮಭಾಗವನ್ನು ಬಳಸಿಕೊಂಡು ಈ ನಗರದ ಈಶಾನ್ಯಕ್ಕೆ ಕಂಡುಬರುವ ಅಫಜಲಖಾನ್‌ನ ಮಸೀದಿಯ ಹತ್ತಿರದವರೆಗೂ ಈ ಕೋಟೆಯ ನಿರ್ಮಾಣದ ಅವಶೇಷಗಳು ಕಂಡುಬರುತ್ತವೆ. ಪೂರ್ವಭಾಗದಲ್ಲಿ ನಿರ್ಮಿತವಾದ ಕೆರೆಗಳು ಹಾಗೂ ರಾಜಧಾನಿಕೇಂದ್ರಿತ ವಿಜಾಪುರ ಕೋಟೆ ಇರುವುದರಿಂದ ಇತ್ತ ಕಡೆ ಶತ್ರುಗಳ ಆಕ್ರಮಣಗಳು

ನಡೆಯುತ್ತಿರಲ್ಲಿಲ್ಲ. ಆದಕಾರಣ ಪೂರ್ವಭಾಗದಲ್ಲಿ ಕೋಟೆಗೋಡೆ ನಿರ್ಮಾಣದ ಅವಶ್ಯಕತೆಯು ಕಂಡುಬರುವುದಿಲ್ಲ. ಜೊತೆಗೆ ಇದರ ನಿರ್ಮಾಣವು ಕೂಡ ಇನ್ನೂ ಪೂರ್ಣಗೊಂಡಿರಲಿಲ್ಲ ಹೀಗಾಗಿ ಪೂರ್ವಭಾಗದಲ್ಲಿ ಕೋಟೆರಚನೆ ಕಂಡುಬರುವುದಿಲ್ಲ. ಇದು ಒಟ್ಟು ಸುಮಾರು ೮ ಕಿ.ಮೀ. ಅರ್ಧ ವೃತ್ತಾಕಾರವಾದ ಸುತ್ತಳತೆಯನ್ನು ಹೊಂದಿದೆ.

ಕೋಟೆಯು ಇಂದು ಬಹುತೇಕ ವಿನಾಶದ ಅಂಚಿನಲ್ಲಿದ್ದು ಕೆಲವು ಭಾಗಗಳಲ್ಲಿ ಮಾತ್ರ ಉಳಿದುಕೊಂಡುಬಂದಿದೆ. ತೊರವಿಯಲ್ಲಿರುವ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಆವರಣವನ್ನು ಸುತ್ತುವರಿದಂತೆ ಪಶ್ಚಿಮಭಾಗದಿಂದ ಉತ್ತರದ ಕಡೆ ಸುಮಾರು ನಾಲ್ಕು ಕಿ.ಮೀ. ಉದ್ದ ಕೋಟೆಗೋಡೆ ಇದುವರೆಗೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಇದು ಕೂಡ ಜೀರ್ಣಾವಸ್ಥೆಯಲ್ಲಿದೆ. ತೊರವಿ ತಾಂಡಾ ನಂ.೪ಕ್ಕೆ ಹೋಗುವ ರಸ್ತೆಯಿಂದ ಪೂರ್ವಕ್ಕೆ ಅಫಜಲಖಾನ್ ಮಸೀದಿಯ ಹತ್ತಿರದವರೆಗೆ ಹಾಗೂ ಈಗಿನ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವಿಸ್ತರಣಾಕೇಂದ್ರದ ಹಿಂಭಾಗದಲ್ಲಿ ಕೋಟೆಯು ಸಂಪೂರ್ಣವಾಗಿ ಶಿಥಿಲವಾಗಿದ್ದು ಅಲ್ಲಿ ಕೋಟೆಗೋಡೆಯ ಕಲ್ಲು ಮತ್ತು ಗಾರೆಯ ಅವಶೇಷಗಳು ತೋಟಕ್ಕೆ ಹಾಕಿರುವ ಬದುವಿನಂತೆ ನೇರವಾಗಿ ಇದ್ದದ್ದನ್ನು ಕಾಣಬಹುದು. ಉಳಿದಂತೆ ಬುಂಡೆಬುರುಜು ಎಂದು ಕರೆಯಲಾಗುವ ಸ್ಥಳದಲ್ಲಿ ಕೋಟೆಗೋಡೆಯ ಅವಶೇಷಗಳನ್ನು ಕಾಣಬಹುದು. ಇನ್ನುಳಿದ ಕಡೆ ಇದಕ್ಕೆ ಸಂಬಂಧಿಸಿದ ಎಲ್ಲ ಅವಶೇಷಗಳನ್ನು ನೆಲಸಮ ಮಾಡಿ ತೋಟಗಳನ್ನಾಗಿ ಮಾಡಲಾಗಿದೆ.

ಈ ಕೋಟೆಗೆ ಪ್ರಮುಖವಾಗಿ ಎಷ್ಟು ದ್ವಾರಗಳು ಇದ್ದವು ಎಂಬುದು ತಿಳಿದುಬರುವುದಿಲ್ಲ. ಆದರೆ ನನ್ನ ಕ್ಷೇತ್ರಕಾರ್ಯ ಅಧ್ಯಯನದಿಂದ ಎರಡು ದ್ವಾರಗಳನ್ನು ಗುರುತಿಸಲು ಪ್ರಯತ್ನಿಸಿದ್ದೇನೆ. ಒಂದು ಬುಂಡೆಬುರುಜು ಎಂದು ಕರೆಯುವ ಸ್ಥಳದಲ್ಲಿ ದಕ್ಷಿಣಕ್ಕೆ ಮುಖ ಮಾಡಿ, ಇನ್ನೊಂದು ತೊರವಿಯಿಂದ ಉತ್ತರಕ್ಕೆ ತೊರವಿ ತಾಂಡಾ ನಂ.೪ಕ್ಕೆ ಹೋಗುವ ರಸ್ತೆಯಲ್ಲಿದೆ. ದ್ವಾರ ಇದ್ದಿರಬಹುದಾದ ಸ್ಥಳದಲ್ಲಿ ಸುಮಾರು ೨೦ ರಿಂದ ೨೫ ಅಡಿ ಅಂತರದಲ್ಲಿ ಇಕ್ಕೆಲಗಳಲ್ಲಿ ಬುರುಜುಗಳಿದ್ದು ೧೫ ರಿಂದ ೨೦ ಅಡಿ ಎತ್ತರ ಉಳಿದುಕೊಂಡಿವೆ. ಇಲ್ಲಿ ದ್ವಾರದ ಯಾವುದೇ ಅವಶೇಷಗಳು ಕಂಡುಬರದಿದ್ದರೂ ದ್ವಾರದ ಭದ್ರತೆ ಮತ್ತು ಶತ್ರುಗಳ ಆಕ್ರಮಣದ ದೃಷ್ಟಿಕೋನವನ್ನು ಇಟ್ಟುಕೊಂಡು ಇಕ್ಕೆಲಗಳಲ್ಲಿ ಬುರುಜುಗಳನ್ನು ನಿರ್ಮಾಣವಾಗಿದ್ದನ್ನು ಜಿಲ್ಲೆಯ ಎಲ್ಲ ಕೋಟೆಗಳಲ್ಲಿಯೂ ಕಾಣಬಹುದು. ಈ ರೀತಿಯ ರಚನೆ ಈ ಎರಡೂ ಸ್ಥಳದಲ್ಲಿ ಕಾಣಬಹುದು. ಇನ್ನೊಂದು ದಕ್ಷಿಣಕ್ಕೆ ಅಥಣಿ ರಸ್ತೆಯಲ್ಲಿ ಇದ್ದಿರಬಹುದಾದ ಸಾಧ್ಯತೆಗಳಿವೆ. ಆದರೆ ಇಲ್ಲಿ ಕೋಟೆಯು ನಾಶ ಹೊಂದಿರುವುದರಿಂದ ಕಲ್ಲು ಮತ್ತು ಗಾರೆಯ ಅವಶೇಷಗಳು ಮಾತ್ರ ಹರಡಿಕೊಂಡಿವೆ. ತೊರವಿ ತಾಂಡಾ ನಂ.೪ಕ್ಕೆ ಹೋಗುವ ರಸ್ತೆಯಲ್ಲಿ ದ್ವಾರ ಇದ್ದಿರಬಹುದಾದ ಸ್ಥಳದಲ್ಲಿ ಎಡಗಡೆಯ ಬುರುಜು ಇತರೆ ಬುರುಜುಗಳ ರಚನೆಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಈ ಬುರುಜುವಿನ ಹಿಂಭಾಗದಲ್ಲಿ ಒಂದರೊಳಗೆ ಇನ್ನೊಂದರಂತೆ ಕಮಾನಾಕೃತಿಯ ಕೋಣೆಗಳಿದ್ದುದು ಕಂಡುಬರುತ್ತವೆ.

ಈ ರೀತಿಯ ರಚನೆ ವಿಜಾಪುರದ ಹೊರಕೋಟೆಯ ನಾಗಠಾಣ ದ್ವಾರದ ಹತ್ತಿರ ಇರುವ ಬುರುಜೊಂದರಲ್ಲಿ ಕಾಣುತ್ತೇವೆ. ಬಲಬದಿಯ ಇನ್ನೊಂದು ಬುರುಜು ಸುಮಾರು ೭೦ ಮೀ.(೨೩೧ ಅಡಿ) ಸುತ್ತಳತೆಯನ್ನು ಹೊಂದಿದ್ದು ಮಧ್ಯದಲ್ಲಿ ಯಾವುದೇ ಕಲ್ಲು, ಮಣ್ಣು ತುಂಬದೆ ಟೊಳ್ಳಾಗಿರುವುದನ್ನು ಕಾಣಬಹುದು.

ಈ ಕೋಟೆಯ ದ್ವಾರಬಾಗಿಲುಗಳಿಗೆ ಹೊಂದಿಕೊಂಡಿರುವ ಮತ್ತು ಇತರೆಡೆ ಉಳಿದುಕೊಂಡು ಬಂದಂತೆ ಒಟ್ಟು ೨೭ ಬುರುಜುಗಳು ಕಂಡುಬರುತ್ತವೆ. ಕೆಲವು ಭಾಗಶಃ ಪೂರ್ಣಪ್ರಮಾಣದಲ್ಲಿದ್ದರೆ ಉಳಿದವು ವೃತ್ತಾಕಾರದ ಅವಶೇಷಗಳ ಹಾಗೆ ೩ ರಿಂದ ೬ ಅಡಿ ಎತ್ತರ ಉಳಿದುಕೊಂಡಿವೆ. ಇಲ್ಲಿಯ ಬಹುತೇಕ ಬುರುಜುಗಳು ಅರ್ಧವೃತ್ತಾಕಾರವಾಗಿದ್ದು ಮಧ್ಯದಲ್ಲಿ ಟೊಳ್ಳಾಗಿರುವುದು ಕಂಡುಬರುತ್ತವೆ. ಕೋಟೆಗೋಡೆ ಹಾಗೂ ಬುರುಜುವಿನ ಮೇಲೆ ತೆನೆಗಳು ಒಂದೆರಡು ಕಡೆ ಮಾತ್ರ ಕಂಡುಬರುತ್ತಿದ್ದು ಉಳಿದಂತೆ ನಾಶ ಹೊಂದಿವೆ. ಕೋಟೆಗೋಡೆಯು ಸುಮಾರು ೧೦ ರಿಂದ ೧೨ ಅಡಿ ದಪ್ಪವಾಗಿದ್ದು ಕೋಟೆಯು ನಿರ್ಮಾಣ ಹಂತದಲ್ಲಿಯೇ ಸ್ಥಗಿತಗೊಳಿಸಿದ್ದರಿಂದ ಅಟ್ಟಾಲಕದ ರಚನೆ ಕಂಡುಬರುವುದಿಲ್ಲ. ಸದ್ಯ ಉಳಿದುಕೊಂಡು ಬಂದಿರುವ ಕೋಟೆಯು ಎತ್ತರವಾದ ಪ್ರದೇಶದ ಮೇಲೆ ನಿರ್ಮಾಣವಾಗಿದ್ದರಿಂದ ಇಲ್ಲಿ ಕಂದಕ ಇದ್ದಿರಬಹುದಾದ ಯಾವುದೇ ಲಕ್ಷಣಗಳಿಲ್ಲ. ಆದರೂ ಈ ಕೋಟೆಯ ಪೂರ್ವಭಾಗವು ತಗ್ಗಾದ ಪ್ರದೇಶದಿಂದ ಕೂಡಿದ್ದು ಇಲ್ಲಿಂದಲೇ ವಿಜಾಪುರ ನಗರಕ್ಕೆ ನೀರು ಒದಗಿಸುವ ಪ್ರಮುಖ ಕೇಂದ್ರವನ್ನಾಗಿ ಪರಿವರ್ತಿಸಲಾಗಿತ್ತು. ಈ ಊರಿಗೆ ಒಂದು ಕಿ.ಮೀ. ದೂರದಲ್ಲಿ ಮಳೆಯಿಂದ ಬಿದ್ದ ನೀರು ಹಾಗೂ ಹತ್ತಿರದಲ್ಲಿ ಹರಿಯುವ ನಾಲ್ಕಾರು ಚಿಕ್ಕ ಹಳ್ಳಗಳನ್ನು ಭೂಮಿಯ ಮೇಲ್ಬದಿಗೆ ಕಡಿದ ಕಾಲುವೆಗಳ ಮುಖಾಂತರ ತೊರವಿಯ ಹತ್ತಿರಕ್ಕೆ ತಂದು ಇಲ್ಲಿಯ ಕೆರೆಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಇಲ್ಲಿಂದ ಭೂಗತವಾಗಿ ಕಾಲುವೆಗಳ ಮೂಲಕ ನಗರಕ್ಕೆ ನೀರನ್ನು ಒಯ್ಯಲಾಗಿತ್ತು. ಈ ಹಿನ್ನೆಲೆಯಲ್ಲಿ 'ತಝ್ಕಿರತುಲ್ ಮುಲೂಕ್' ಕೃತಿಯಲ್ಲಿ ಉಲ್ಲೇಖಿಸಿರುವಂತೆ ನವರಸಪುರದಲ್ಲಿ ಸರ್ವಕಾಲದಲ್ಲೂ ತುಂಬಿರುವಂತಹ ಒಂದು ದೊಡ್ಡ ಸರೋವರವನ್ನು ನಿರ್ಮಿಸಲಾಗಿತ್ತು. ಅದಕ್ಕಿಂತ ಮೊದಲು ಒಂದು ಕಂದಕವನ್ನು ನಿರ್ಮಾಣ ಮಾಡಲಾಗಿತ್ತು. ಇದು ಆಳವಾಗಿದ್ದು ಕೆಸರನ್ನು ತುಂಬಿಸಲಾಗಿತ್ತು. ಒಂದು ಕಾಲುವೆಯಿಂದ ಇದಕ್ಕೆ ನೀರು ಹರಿಯುತ್ತಿತ್ತು. ಅಲ್ಲಿ ದೊಡ್ಡ ದೊಡ್ಡ ಮರಗಳಿದ್ದವು. ಇದಕ್ಕೆ ಸರಿಯಾಗಿ ಸನಿಹದಲ್ಲಿ ತೋಡು ಇತ್ತು. ತೋಡಿನಲ್ಲಿ ಕಲ್ಲುಗಳನ್ನು ತುಂಬಿಸಲಾಗಿತ್ತು. ನವರಸಪುರದ ನಾಲ್ಕೂ ದಿಕ್ಕುಗಳಲ್ಲಿ 'ದುನ್' ಎಂಬ ಹೆಸರಿನ ನದಿಯೊಂದು ಹರಿಯುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಈ ನೀರು ಕೂಡ ಈ ತಗ್ಗಾದ ಪ್ರದೇಶದಲ್ಲಿ ನಿರ್ಮಿಸಲಾದ ಕೆರೆಗಳಿಗೆ ಬಂದು ಸೇರುತ್ತಿತ್ತು.[೧೬೬] ಹೀಗಾಗಿ ಪೂರ್ವಭಾಗವು ನೈಸರ್ಗಿಕವಾಗಿ ನಿರ್ಮಾಣವಾದ ಕಂದಕದಿಂದ ರಕ್ಷಣೆಯನ್ನು ಪಡೆದಿತ್ತು. ಪೂರ್ವಭಾಗದಲ್ಲಿ ನಿರ್ಮಿತವಾದ ಕೆರೆಗಳು ಹಾಗೂ ಅನತಿ ದೂರದಲ್ಲಿ ರಾಜಧಾನಿ ವಿಜಾಪುರ ಕೋಟೆಯು ಇರುವುದರಿಂದ ಈ ಕಡೆ ಆಕ್ರಮಣಗಳು ನಡೆಯುತ್ತಿರಲಿಲ್ಲ. ಆದಕಾರಣ ಪೂರ್ವ ಭಾಗದಲ್ಲಿ ಕೋಟೆಗೋಡೆ ನಿರ್ಮಾಣದ ಅವಶ್ಯಕತೆಯು ಕಂಡುಬರುವುದಿಲ್ಲ. ಜೊತೆಗೆ ಇದರ

ನಿರ್ಮಾಣವು ಇನ್ನೂ ಪೂರ್ಣಗೊಂಡಿರಲಿಲ್ಲ. ಹೀಗಾಗಿ ಈ ಭಾಗದಲ್ಲಿ ಕೋಟೆರಚನೆ ಕಂಡುಬರುವುದಿಲ್ಲ.

ಕೋಟೆಯು ನಿರ್ಮಾಣದ ಹಂತದಲ್ಲಿರುವಾಗಲೇ ಅದರ ಅವನತಿಯು ಕೂಡ ಅದರ ಜೊತೆಜೊತೆಗೆ ನಡೆದುಕೊಂಡು ಬಂದಿತು. ಒಂದು ಹೇಳಿಕೆಯಂತೆ ನಗರ ನಿರ್ಮಾಣಕಾರ್ಯ ನಡೆಯುತ್ತಿರುವಾಗಲೆ ಜ್ಯೋತಿಷಿಯೊಬ್ಬ ಸುಲ್ತಾನನಿಗೆ ಹಳೆ ರಾಜಧಾನಿ ಬಿಟ್ಟು ಹೊಸ ರಾಜಧಾನಿಗೆ ಹೋದರೆ ಕೇಡು ಖಂಡಿತ ಎಂದು ಹೇಳಿದ ತಕ್ಷಣ ಕಟ್ಟಡ ಕಾರ್ಯಗಳೆಲ್ಲವೂ ಸ್ಥಗಿತಗೊಂಡವಲ್ಲದೆ. ಇಲ್ಲಿ ಬಂದು ನೆಲೆಸಿದ್ದ ಜನರು ಮರಳಿ ಹೋಗಲು ಪ್ರಾರಂಭಿಸಿದರು.[೧೬೭] ಇಷ್ಟೇ ಅಲ್ಲದೆ ಅಹಮದ್‌ನಗರದ ಸರ್ವಾಧಿಕಾರಿಯಾಗಿದ್ದ(ವಜೀರ್) ಮಲಿಕ್ ಅಂಬರನು ಕ್ರಿ.ಶ. ೧೬೨೫ರಲ್ಲಿ ೫೦-೬೦ ಸಾವಿರ ಸೈನಿಕರನ್ನು, ತೋಫುಗಳನ್ನು, ಬಂದೂಕುಗಳನ್ನು ಸಾಕಷ್ಟು ತೆಗೆದುಕೊಂಡು ವಿಜಾಪುರದ ಮೇಲೆ ದಾಳಿ ಮಾಡಿ ನವರಸಪುರವನ್ನು ಹಾಳುಗೆಡವಿದನು. ಆ ದಿನಗಳಲ್ಲಿ ನವರಸಪುರ ನಗರವು ಅರಬ್ ಮತ್ತು ಅಜಂಮಗಳ ನಗರಗಳಿಗಿಂತ ಅಧಿಕವಾಗಿ ತುಂಬಿ ದೊಡ್ಡ ದೊಡ್ಡ ಕಟ್ಟಡಗಳಿಗಿಂತ ಶೋಭಿಸುತ್ತಿತ್ತು ಎಂದು ಹೇಳಲಾಗುತ್ತದೆ. ಆದರೆ ಆ ನಗರದ ಸುತ್ತಲೂ ಕೋಟೆ ಕಟ್ಟಿ ಸಿದ್ಧವಾಗಿರಲಿಲ್ಲ. ಮಲಿಕ್ ಅಂಬರನು ಈ ಸಂಧಿಯನ್ನು ಕಾಯುತ್ತಾ ನವರಸಪುರದ ಮೇಲೆ ದಾಳಿ ಮಾಡಿ ನಾಶ ಮಾಡಿದನು.[೧೬೮] ಹೀಗಾಗಿ ನವರಸಪುರ ನಿರ್ಮಾಣದ ಕಾರ್ಯ ಪೂರ್ಣಗೊಳ್ಳದೆ ಅದನ್ನು ಅರ್ಧದಲ್ಲಿಯೇ ಕೈಬಿಡಲಾಯಿತು. ಈ ಕೋಟೆಯ ನಿರ್ಮಾಣ ಪೂರ್ಣಗೊಂಡಿದ್ದರೆ ವಿಜಾಪುರ ರಾಜಧಾನಿಕೇಂದ್ರಿತ ಪ್ರದೇಶದ ಸುತ್ತಲೂ ನಿರ್ಮಾಣವಾದ ಕೋಟೆಗಿಂತಲೂ ಬಲಿಷ್ಠವಾಗಿರುತ್ತಿತ್ತಲ್ಲದೆ ಅದಕ್ಕಿಂತಲೂ ವಿಶಾಲವಾಗಿರುತ್ತಿತ್ತು. ನಗರ ಪತನವಾದ ೧೭ ವರ್ಷಗಳ ನಂತರ 'ಘುತುಹತೆ ಆದಿಲ್‌ಶಾಹಿ'(ಆದಿಲ್‌ಶಾಹಿ ವಿಜಯಗಳು) ಗ್ರಂಥಕರ್ತ ಅಸ್ತ್ರಾಬದ್‌ನ 'ಘುಜನಿ' ಅಲ್ಲಿಗೆ ಭೇಟಿ ಕೊಟ್ಟನು. ಅವನು ಕಂಡಂತೆ ಈ ನಗರದ ಕಟ್ಟಡಗಳು ಉತ್ತರ ಹಿಂದೂಸ್ತಾನದ ಕಟ್ಟಡಗಳಿಗಿಂತಲೂ ಶ್ರೇಷ್ಠ ದರ್ಜೆಯವಾಗಿದ್ದುವಲ್ಲದೆ. ಈರಾನ್ ಮತ್ತು ಜಗತ್ತಿನ ಇತರ ಭಾಗಗಳಲ್ಲಿರುವ ಇಮಾರತ್ತುಗಳಿಗಿಂತಲೂ ಶ್ರೇಷ್ಠವಾಗಿದ್ದವೆಂದು ಆ ಇತಿಹಾಸಕಾರ ತನ್ನ ಭೇಟಿಯ ಆಧಾರದ ಮೇಲೆ ಹೇಳಿದ್ದಾನೆ.

ಕಾರ್ಜೋಳ

ಇದು ಜಿಲ್ಲಾ ಕೇಂದ್ರವಾದ ವಿಜಾಪುರದಿಂದ ನೈಋತ್ಯಕ್ಕೆ ೪೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಮೂರು ಶಾಸನಗಳು ಲಭ್ಯವಾಗಿದ್ದು ಇವು ಈ ಗ್ರಾಮದ ಪ್ರಾಚೀನತೆಯನ್ನು ಸಾರುತ್ತವೆ. ರಾಷ್ಟ್ರಕೂಟರ ಮೂರನೇ ಕೃಷ್ಣನ ಕಾಲಾವಧಿಯ ಶಾಸನವು ಇವನ ಸಾಮಂತನಾಗಿ ತೈಲಪಯ್ಯನು ನಾಡನ್ನು ಆಳುತ್ತಿದ್ದ(ನಾಡಿನ ಹೆಸರನ್ನು ತಿಳಿಸಿಲ್ಲ) ಎಂದು ಉಲ್ಲೇಖಿಸುತ್ತದೆ.[೧೬೯] ಹೀಗಾಗಿ ರಾಷ್ಟ್ರಕೂಟರ ಕಾಲದಿಂದಲೇ ಗ್ರಾಮದ ಪ್ರಾಚೀನತೆಯು ಕಂಡುಬರುತ್ತದೆ. ಇನ್ನೊಂದು ಶಾಸನ ಚಾಳುಕ್ಯ ಆಹವಮಲ್ಲನ ಕಾಲದ್ದಾಗಿದ್ದು ಕ್ರಿ.ಶ. ೯೯೬ಕ್ಕೆ ಸೇರಿದ್ದಾಗಿದೆ. ಇವನ ಮಾಂಡಳಿಕನಾದ ದಶವರ್ಮದೇವನ

ಪೆರ್ಗಡೆಯಾದ ದಳಾಪಯ್ಯ ಗೊಣ್ಣಯ್ಯ ಮುಂತಾದವರ ಅನುಮತಿಯಂತೆ ಕರಂಜೋಳ ಗ್ರಾಮದ ಊರೊಡೆಯನಾದ ಕೇಸವಯ್ಯನಿಗೆ ತೆರಿಗೆ ನಿಗದಿಗೊಳಿಸಿದ ಬಗ್ಗೆ ತಿಳಿಸುತ್ತದೆ.[೧೭೦] ಕ್ರಿ.ಶ. ೧೨ನೇ ಶತಮಾನದ ತೃಟಿತ ಶಾಸನ ಈ ಗ್ರಾಮವನ್ನು ಕರಂಜೋಳ ಎಂದೇ ಉಲ್ಲೇಖಿಸುತ್ತದೆ.[೧೭೧]

ಗ್ರಾಮದಲ್ಲಿ ಕ್ರಿ.ಶ. ೧೫ನೇ ಶತಮಾನದ ಹಿಂದೂ-ಮುಸ್ಲಿಂ ಶೈಲಿಯ ಕಲ್ಮೇಶ್ವರ ದೇವಾಲಯವಿದ್ದು ಇದು ಮೂಲತಃ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯವಾಗಿದೆ. ಇದರ ಅಧಿಷ್ಠಾನ ಭಾಗ ಮಾತ್ರ ಉಳಿದುಕೊಂಡಿದ್ದು, ಇದರ ಮೇಲ್ಭಾಗವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ. ಇನ್ನುಳಿದಂತೆ ಗ್ರಾಮದಲ್ಲಿ ರಾಚೋಟೇಶ್ವರ, ಬೀರೇಶ್ವರ, ಮಲ್ಲಿಕಾರ್ಜುನ ದೇವಾಲಯಗಳಿವೆ. ಹೀಗಾಗಿ ಕಲ್ಯಾಣ ಚಾಳುಕ್ಯ ಅವಧಿಯಿಂದ ಗ್ರಾಮವು ಮತ್ತಷ್ಟು ವಿಸ್ತಾರವನ್ನು ಪಡೆದಿರಬಹುದು.

ಈ ಗ್ರಾಮದಲ್ಲಿ ಕೋಟೆ ಇದ್ದು ಅದು ಗ್ರಾಮದ ಪೂರ್ವಕ್ಕೆ ಹರಿಯುವ ಹಳ್ಳದ ದಂಡೆಯ ಮೇಲಿದೆ. ಇದು ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ನಿರ್ಮಿಸಿದ ಎರಡು ಸುತ್ತಿನ ಕೋಟೆಯಾಗಿದೆ. ಮೊದಲನೇ ಸುತ್ತಿನ ಅಥವಾ ಹೊರಕೋಟೆ ಗ್ರಾಮರಕ್ಷಣಾ ಕೋಟೆಯಾಗಿದ್ದು ಎರಡನೇ ಸುತ್ತಿನ ಕೋಟೆಯು ದೇಸಾಯಿಗಳ ಮತ್ತು ಅಧಿಕಾರಿವರ್ಗದವರ ರಕ್ಷಣೆಗಾಗಿ ನಿರ್ಮಿಸಿಕೊಂಡ ಕೋಟೆಯಾಗಿದೆ.

ಮೊದಲನೆಯ ಸುತ್ತಿನ ಅಥವಾ ಗ್ರಾಮರಕ್ಷಣಾ ಕೋಟೆಯ ದ್ವಾರವು ಉತ್ತರಾಭಿಮುಖವಾಗಿದೆ. ಇದು ಶಿಥಿಲಗೊಂಡಿದ್ದು ಕೇವಲ ಎದೆಮಟ್ಟದವರೆಗೆ ಕಂಡುಬರುತ್ತದೆ. ಈ ಕೋಟೆಯು ೭೧೩ ಮೀ. ಸುತ್ತಳತೆಯನ್ನು ಹೊಂದಿದ್ದು ಹೊರಕೋಟೆಗೋಡೆಗೆ ಹೊಂದಿಕೊಂಡಂತೆ ಸುಮಾರು ೭ ಬುರುಜುಗಳಿವೆ. ಈ ಕೋಟೆಯ ಮತ್ತೊಂದು ವಿಶೇಷತೆಯೆಂದರೆ ಉತ್ತರದಿಕ್ಕಿನ ಕೋಟೆಗೋಡೆಯನ್ನು ನಿರ್ಮಿಸಿ ಅದರ ಹಿಂಭಾಗದ ೬೦ ಅಡಿ ಅಂತರದಲ್ಲಿ ಮತ್ತೊಂದು ಕೋಟೆಗೋಡೆಯನ್ನು ನಿರ್ಮಿಸಿದ್ದಾರೆ. ಇದು ಪೂರ್ತಿಯಾಗಿ ಸುತ್ತುವರಿಯದೆ ಪೂರ್ವ ಮತ್ತು ಪಶ್ಚಿಮದ ಹೊರಕೋಟೆಗೋಡೆಗೆ ಸಂಧಿಸುತ್ತದೆ. ಇದಕ್ಕೆ ಉತ್ತರಾಭಿಮುಖವಾಗಿ ದ್ವಾರಬಾಗಿಲಿದ್ದು ಇಂದು ಸಂಪೂರ್ಣವಾಗಿ ನಾಶ ಹೊಂದಿದೆ. ಈ ಕೋಟೆಗೋಡೆಯನ್ನು ಸೇರಿಸಿದರೆ ವಾಡೆಯನ್ನು ತಲುಪಲು ಪ್ರಮುಖವಾಗಿ ಮೂರು ಮುಖ್ಯ ದ್ವಾರಗಳ ಮೂಲಕ ಹಾದು ಹೋಗಬೇಕಾಗುತ್ತಿತ್ತು. ಹೊರಕೋಟೆ ಗೋಡೆ ೧೦ ಅಡಿ ದಪ್ಪವಾಗಿದ್ದು ಅದರಲ್ಲಿ ಬಂದೂಕು ಕಿಂಡಿಗಳನ್ನು ಕಾಣುತ್ತೇವೆ. ಕೋಟೆಗೋಡೆಯು ಅಲ್ಲಲ್ಲಿ ಮಾತ್ರ ೫ರಿಂದ ೧೨ ಅಡಿಯವರೆಗೆ ಎತ್ತರ ಉಳಿದಿದ್ದು ಪಶ್ಚಿಮಭಾಗದಲ್ಲಿ ಸಂಪೂರ್ಣ ನಾಶ ಹೊಂದಿದೆ. ಗೋಡೆಯ ತಿರುವಿನಲ್ಲಿ(ಎರಡೂ ಮೂಲೆಗಳಲ್ಲಿ) ಬುರುಜುಗಳು ಮಾತ್ರ ಉಳಿದುಕೊಂಡಿವೆ ಹಾಗೂ ಕೋಟೆಯ ಈಶಾನ್ಯ ಭಾಗದಲ್ಲಿ ಹಳ್ಳದ ಕಡೆ ದಿಡ್ಡಿಬಾಗಿಲು ಕಂಡುಬರುತ್ತದೆ. ಹೊರಕೋಟೆಗೆ ಹೊಂದಿಕೊಂಡು ಒಟ್ಟು ೭ ಬುರುಜುಗಳಿದ್ದು, ಅವು ೧೫, ೧೯, ೨೩, ಅಡಿ ಎತ್ತರ ಉಳಿದುಕೊಂಡಿವೆ. ವೃತ್ತಾಕಾರವಾದ ಬುರುಜುಗಳಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳನ್ನು ಕಾಣಬಹುದು.

ದೇಸಾಯಿಗಳ ವಾಡೆ ಸುತ್ತ ಇರುವ ಒಳಕೋಟೆಯು ಸುಮಾರು ೨೯೫ ಮೀ. ಸುತ್ತಳತೆಯನ್ನು ಹೊಂದಿದೆ. ಇದರ ದ್ವಾರವು ಉತ್ತರಾಭಿಮುಖವಾಗಿದೆ. ಇದಕ್ಕೆ ಹೊಂದಿಕೊಂಡಂತೆ ಇರುವ ಕೋಟೆಗೋಡೆ ಮಾತ್ರ ಉಳಿದುಕೊಂಡಿದ್ದು ಉಳಿದ ಭಾಗ ಜೀರ್ಣ ಸ್ಥಿತಿಯಲ್ಲಿದೆ. ದ್ವಾರಬಾಗಿಲು ಕಮಾನಾಕೃತಿಯಲ್ಲಿದ್ದು ೧೦ ಅಡಿ ಅಗಲ, ೧೭ ಅಡಿ ಎತ್ತರವನ್ನು ಹೊಂದಿದೆ. ಇದರ ಮುಂಭಾಗದಲ್ಲಿ ಆಧುನಿಕವಾಗಿ ನಿರ್ಮಿಸಿದ ಗುರು ದತ್ತಾತ್ರೇಯ ದೇವಾಲಯವಿದೆ. ಈ ಕೋಟೆಗೋಡೆಯು ೧೦ ಅಡಿ ದಪ್ಪವಾಗಿದ್ದು ಹೊರಭಾಗದಲ್ಲಿ ೩ ಅಡಿ ೬ ಅಂಗುಲ ಬಂದೂಕುಕಿಂಡಿಗಳನ್ನು ಕಾಣಬಹುದು. ಶತ್ರುಗಳ ಆಕ್ರಮಣದ ಸಂದರ್ಭದಲ್ಲಿ ಅಥವಾ ಕಾವಲು ಕಾಯಲು ಕೋಟೆಗೋಡೆಯಲ್ಲಿ ಸುಮಾರು ೭ ಅಡಿ ಅಗಲವಾದ ಅಟ್ಟಾಲಕವಿದೆ. ಹೊರಕೋಟೆಗೋಡೆ ಹಾಳಾಗಿದ್ದರಿಂದ ಅಲ್ಲಿ ಅಟ್ಟಾಲಕ ರಚನೆಗಳು ಶಿಥಿಲವಾಗಿವೆ. ಈ ಗೋಡೆಯು ಸಹ ಅಟ್ಟಾಲಕದವರೆಗೆ ಮಾತ್ರ ಉಳಿದುಕೊಂಡಿದ್ದು ಅದರ ಮೇಲೆ ಕೈಪಿಡಿಗೋಡೆ ಮತ್ತು ತೆನೆಗಳು ನಾಶ ಹೊಂದಿವೆ. ಈ ಒಳಕೋಟೆಗೋಡೆಗೆ ಈಶಾನ್ಯ ಮತ್ತು ನೈರುತ್ಯ ಭಾಗದಲ್ಲಿ ಬುರುಜುಗಳಿದ್ದು. ಅಟ್ಟಾಲಕದ ಮೇಲಿಂದ ಅವುಗಳ ಮೇಲ್ಭಾಗಕ್ಕೆ ಹೋಗಲು ಬಾಗಿಲುಗಳಿವೆ. ಇವು ಹೊರಕೋಟೆಯ ಬುರುಜುಗಳಿಗಿಂತ ಎತ್ತರವಾಗಿದ್ದು ಇವು ಸುಮಾರು ೫೦ ಅಡಿ ಎತ್ತರ ಉಳಿದುಕೊಂಡಿವೆ. ನೈರುತ್ಯಭಾಗದ ಬುರುಜು ಮಧ್ಯಭಾಗದಲ್ಲಿ ಟೊಳ್ಳಾಗಿದ್ದದ್ದು ಕಂಡುಬರುತ್ತದೆ. ಇಂದು ಅದರ ಬಾಗಿಲನ್ನು ಕಲ್ಲಿನಿಂದ ಮುಚ್ಚಲಾಗಿದೆ. ಹೊರಕೋಟೆಯ ಮೇಲಿನ ಬುರುಜುಗಳು ಮತ್ತು ಅದರ ಆಚೆಗೂ ಕೂಡ ಜರಗುವ ಘಟನೆಗಳು ಸ್ಪಷ್ಟವಾಗಿ ಕಾಣುವಂತೆ ಎತ್ತರವಾಗಿ ನಿರ್ಮಿಸಲಾಗಿದೆ. ಈ ಕೋಟೆಗೆ ದಕ್ಷಿಣ ಭಾಗದಲ್ಲಿ ದಿಡ್ಡಿಬಾಗಿಲಿದ್ದು ಇದ್ದು ಕೋಟೆಗೋಡೆ ಬಿದ್ದು ಮುಚ್ಚಿಹೋಗಿದೆ. ಇದರ ಮಧ್ಯೆ ದೇಸಾಯಿಗಳ ಮನೆಗಳು ಕಂಡುಬರುತ್ತವೆ. ಕೋಟೆಯ ಪೂರ್ವಕ್ಕೆ ಹರಿಯುವ ಚಿಕ್ಕ ಹಳ್ಳವು ಕೋಟೆಯ ಒಂದು ಪಾರ್ಶ್ವಕ್ಕೆ ನೈಸರ್ಗಿಕವಾಗಿ ರಕ್ಷಣೆಯನ್ನು ಒದಗಿಸುತ್ತಿತ್ತು.

ಜೈನಾಪುರ

ಜಿಲ್ಲಾ ಮತ್ತು ತಾಲೂಕು ಕೇಂದ್ರವಾದ ವಿಜಾಪುರದಿಂದ ನೈರುತ್ಯಕ್ಕೆ ೨೬ ಕಿ.ಮೀ. ದೂರದಲ್ಲಿದೆ. ಜೈನಾಪುರ ಗ್ರಾಮದ ಹೆಸರು ಸಾಕಷ್ಟು ಚರ್ಚಾಸ್ಪದವಾಗಿದೆ. ಪ್ರಾಚೀನ ಕಾಲದಿಂದಲೂ ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿಯೂ ಜೈನಾಪುರ ಪ್ರಸಿದ್ಧಿ ಪಡೆದಿತ್ತು. ಜೈನರು ವಾಸವಾಗಿದ್ದ ಸ್ಥಳವನ್ನು ಪುರವೆಂದು ಕರೆದು, ಜೈನರ+ಪುರ=ಜೈನಾಪುರ ಎಂದಾಯಿತು ಎಂದು ಹೇಳಲಾಗುತ್ತದೆ. ಸು. ೧೨ನೆಯ ಶತಮಾನದ ಕಲ್ಯಾಣಚಾಳುಕ್ಯ ವಾಸ್ತುಶೈಲಿಯ ಗರ್ಭಗೃಹ ಮಾತ್ರವಿರುವ ರಾಮತೀರ್ಥರ ಮಠ ಕೃಷ್ಣಾ ಮೇಲ್ದಂಡೆ ಯೋಜನೆ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಸು. ೧೭-೧೮ನೆಯ ಶತಮಾನದ ಹಿಂದೂ-ಮುಸ್ಲಿಂ ವಾಸ್ತುಶೈಲಿಯನ್ನು ಹೊಂದಿರುವ ದತ್ತಾತ್ರೇಯ ದೇವಾಲಯ ಗ್ರಾಮದ ಮಧ್ಯದಲ್ಲಿ ಇದೆ. ದೇಸಗತಿ ಕೋಟೆಯ ಮುಂದೆ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾದ ಮಸೀದಿ ಕಂಡುಬರುತ್ತವೆ. ಇವು ಗ್ರಾಮದ ಪ್ರಾಚೀನತೆಯನ್ನು ತಿಳಿಸಿಕೊಡುವ ಕುರುಹುಗಳಾಗಿವೆ.

ಕೃಷ್ಣಾನದಿಯ ದಂಡೆಯ ಮೇಲೆ ಕಂಡುಬರುವ ಪ್ರಮುಖ ದೇಸಗತಿಗಳಲ್ಲಿ ಜೈನಾಪುರ ದೇಸಾಯರದು ಜಿಲ್ಲೆಯ ಬಲಾಢ್ಯ ದೇಸಗತಿ ಮನೆತನವಾಗಿದೆ. ಈ ದೇಸಗತಿಯ ಮೂಲ ಹಾಗೂ ಪೂರ್ವಜರ ಕುರಿತು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಕ್ರಿ.ಶ. ೧೮೭೫ರಿಂದ ಸಂಗಪ್ಪ ಗದಿಗೆಪ್ಪ ದೇಸಾಯಿಯವರಿಂದ ಈ ಮನೆತನದ ಇತಿಹಾಸ ಸ್ಪಷ್ಟವಾಗಿ ತಿಳಿದುಬರುತ್ತದೆ.[೧೨] ಆದರೆ ಕ್ರಿ.ಶ. ೧೬೭೯ರಲ್ಲಿ ಔರಂಗಜೇಬನ ಸೈನ್ಯಾಧಿಕಾರಿ ದಿಲೇರಖಾನ್‌ನು ರಾಜಧಾನಿ ವಿಜಾಪುರದ ಮೇಲೆ ದಾಳಿ ಮಾಡಿ ಯಶಸ್ವಿಯಾಗದೇ ಮರಳಿ ಹೋಗುವಾಗ ವಿಜಾಪುರದ ರಾಜ್ಯದ ತರಫ್-ತರಫ್‌ಗಳಲ್ಲಿನ ಪ್ರದೇಶಗಳನ್ನು ಕೊಳ್ಳೆ ಹೊಡೆದು ನಾಶ ಪಡಿಸಿದನು. ವಿಜಾಪುರದ ಹೊರಪ್ರದೇಶದಲ್ಲಿ ಬೀಡುಬಿಟ್ಟಿದ್ದ ಇವನು ಸೈನ್ಯಸಮೇತ ಬೇಗಂ ತಲಾಬದಿಂದ ಕಾಖಂಡಕಿಗೆ ಹೊರಟುಹೋದನು. ಐವತ್ತಾರು ದಿನ ಕಾಖಂಡಕಿಯಲ್ಲಿ ಇದ್ದು ನಂತರ ಜೈನಾಪುರಕ್ಕೆ ಹೋದನು. ಆಗ ಜೈನಾಪುರದಲ್ಲಿಯ ದೇಸಾಯಿಯು ತನ್ನ ಜಾಗದ ವ್ಯವಸ್ಥೆಯನ್ನು ಮಾಡಿಕೊಂಡು ಯುದ್ಧಕ್ಕೆ ನಿಂತನು. ಆ ದಿನ ದಿಲೇರಖಾನ್‌ನ ಆನೆ ಮತ್ತು ೬೦-೭೦ ಜನರು ಗಾಯಗೊಂಡರು. ಅದೇ ದಿನ ಸಾಯಂಕಾಲ ದಿಲೇರಖಾನ್‌ನು ತೀವ್ರ ಪೈಪೋಟಿ ಒಡ್ಡಿ ಹಲ್ಲೆ ಮಾಡಿದನು. ಇಲ್ಲಿಯ ದೇಸಾಯಿ ಮತ್ತು ೪೦ರಿಂದ ೫೦ ಜನ ಸೈನಿಕರು ಕೊಲೆಯಾದರು. ಜೈನಾಪುರವನ್ನು ಲೂಟಿ ಮಾಡಲಾಯಿತು. ಮರುದಿನ ಮೊಹರಂನ ೧೦ನೆಯ ದಿನ ೧ ಫೆಬ್ರವರಿ ೧೬೮೦ರಂದು ಅದೇ ಊರಲ್ಲಿ ಮುಕ್ಕಾಮು ಮಾಡಿದನು. ದಿನಾಂಕ ೨ ಫೆಬ್ರವರಿ ೧೬೮೦ರಂದು ದಿಲೇರಖಾನ್‌ನು ಕೊಲ್ಹಾರಕ್ಕೆ ಹೊರಟು ಹೋದನು.[೧೩] ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಆದಿಲ್‌ಶಾಹಿಗಳ ಆಡಳಿತಾವಧಿಯಿಂದಲೇ ದೇಸಗತಿ ಮನೆತನ ಕಾರ್ಯ ನಿರ್ವಹಿಸುತ್ತಿತ್ತು ಎಂಬುದು ತಿಳಿದುಬರುತ್ತದೆ.

ದೇಸಾಯಿಗಳ ಕಾಲದಲ್ಲಿ ನಿರ್ಮಾಣವಾದ ಕೋಟೆಯನ್ನು ಈಗಲೂ ಈ ಗ್ರಾಮದಲ್ಲಿ ಕಾಣಬಹುದು. ಇದರ ಮಧ್ಯಭಾಗದಲ್ಲಿ ವಾಡೆಯ ಅವಶೇಷಗಳು ಕಂಡುಬರುತ್ತವೆ. ಮುಖ್ಯದ್ವಾರವು ಉತ್ತರಾಭಿಮುಖವಾಗಿದ್ದು ಕಮಾನಾಕೃತಿಯಲ್ಲಿದೆ. ಪ್ರವೇಶದ ಇಕ್ಕೆಲಗಳಲ್ಲಿ ಅಂಕಣಗಳಿದ್ದದ್ದು ಕಂಡುಬರುತ್ತದೆ. ಕೋಟೆಗೋಡೆಯು ಬಹುತೇಕ ಹಾಳಾಗಿದ್ದು ಉತ್ತರಭಾಗದಲ್ಲಿ ಮಾತ್ರ ಕಂಡುಬರುತ್ತದೆ. ಅದು ಅಲ್ಲಲ್ಲಿ ಸುಮಾರು ೨೦ ಅಡಿ ಎತ್ತರವಾಗಿದ್ದು ಗೋಡೆಯಲ್ಲಿ ಬಂದೂಕುಕಿಂಡಿಗಳನ್ನು ಕಾಣಬಹುದು. ಪೂರ್ವದ ಕೋಟೆಗೋಡೆಗೆ ಹೊಂದಿಕೊಂಡಂತೆ ಬುರುಜು ಇದ್ದು ಶಿಥಿಲಾವಸ್ಥೆಯಲ್ಲಿದೆ. ಇನ್ನುಳಿದಂತೆ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿರುವುದರಿಂದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಆದಿಲ್‌ಶಾಹಿಗಳ ಕಾಲಾವಧಿಯಿಂದಲೇ ಇಲ್ಲಿ ದೇಸಗತಿ ಮನೆತನ ಕಂಡುಬಂದರೂ ಪ್ರಾರಂಭದಲ್ಲಿ ನಿರ್ಮಾಣವಾದ ಕೋಟೆ ಉಳಿದುಕೊಂಡು ಬಂದಿಲ್ಲ. ಆದರೆ ಸದ್ಯ ಗ್ರಾಮದಲ್ಲಿ ಅಳಿದುಳಿದ ಕೋಟೆಯ ರಚನೆಯನ್ನು ನೋಡಿದಾಗ ಇದು ೧೯ನೆಯ ಶತಮಾನದ ಪೂರ್ವಾವಧಿಯಲ್ಲಿ ನಿರ್ಮಿಸಿರುವ ಸಾಧ್ಯತೆಗಳಿವೆ.

ತಿಡಗುಂದಿ

ತಿಡಗುಂದಿ ವಿಜಾಪುರದಿಂದ ೧೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ ಹೊಂದಿಕೊಂಡು ವಿಜಾಪುರ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯು ಹಾದುಹೋಗಿದೆ. ಕ್ರಿ.ಶ. ೧೦೮೩ರ ತ್ರಿಭುವನಮಲ್ಲನ ಕಾಲದ ಶಾಸನ ತಿಡಗುಂದಿಯಲ್ಲಿದ್ದು ವ್ಯಾವಡ ೧೨ ಹಳ್ಳಿಗಳನ್ನು ಕುರಿತು ತಿಳಿಸುತ್ತದೆ.[೧೭೪] ಆದರೆ ಈ ಗ್ರಾಮದ ಬಗ್ಗೆ ಉಲ್ಲೇಖವಿಲ್ಲ. ತರ್ದವಾಡಿ ಸಾಸಿರದ ಕಂಪಣ(ಉಪವಿಭಾಗ) ವಾಯ್ವಡ ದ್ವಾದಶ(ಹನ್ನೆರಡು)ದಲ್ಲಿ ಈ ತಿಡಗುಂದಿ ಗ್ರಾಮವು ಒಳಗೊಂಡಿತ್ತು.[೧೭೫] ಇಲ್ಲಿಂದ ಮರಾಠರ ಆಡಳಿತಾವಧಿಯವರೆಗೂ ಗ್ರಾಮದ ಇತಿಹಾಸ ಅಸ್ಪಷ್ಟವಾಗಿದೆ.

ಮರಾಠರ ಆಡಳಿತಾವಧಿಯಲ್ಲಿ ತಿಡಗುಂದಿ ಗ್ರಾಮವು ವಿಜಾಪುರ ಪ್ರಾಂತದ ಅರ್ಧಕಂದಾಯ ವಿಭಾಗದ ಒಂದು ಗ್ರಾಮವಾಗಿತ್ತು.[೧೭೬] ಗ್ರಾಮದಲ್ಲಿ ೧೭ ಮತ್ತು ೧೮ನೆಯ ಶತಮಾನದ ಕಾಲಘಟ್ಟಕ್ಕೆ ಸಂಬಂಧಿಸಿದ ಕೋಟೆಯಿದ್ದದ್ದು ಕಂಡುಬರುತ್ತದೆ. ಆದರೆ ಕೋಟೆಯನ್ನು ಯಾರು ಕಟ್ಟಿಸಿದರು ಎಂಬುದಕ್ಕೆ ಯಾವುದೇ ಆಕರಗಳು ಲಭ್ಯವಾಗಿಲ್ಲ. ಹೀಗಾಗಿ ಕೋಟೆಯ ವಾಸ್ತುಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಕೋಟೆಯು ಕ್ರಿ.ಶ. ೧೮ ಮತ್ತು ೧೯ನೇ ಶತಮಾನದ ಕಾಲಘಟ್ಟಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು.

ಗ್ರಾಮದಲ್ಲಿರುವ ಕೋಟೆಯು ಎರಡು ಸುತ್ತಿನ ಕೋಟೆಯಾಗಿದ್ದು ಹೊರಕೋಟೆಯು ಗ್ರಾಮದ ಸುತ್ತಲೂ ಒಳಕೋಟೆಯು ದೇಸಾಯಿಗಳ ವಾಡೆಯ ಸುತ್ತಲೂ ಕಂಡುಬರುತ್ತದೆ. ಹೊರಕೋಟೆ ಗೋಡೆಯ ದ್ವಾರವು ಉತ್ತರಾಭಿಮುಖವಾಗಿದ್ದು ದ್ವಾರದ ಯಾವುದೇ ಅವಶೇಷ ಉಳಿದಿಲ್ಲ. ದ್ವಾರ ಇದ್ದ ಸ್ಥಳದಲ್ಲಿ ಗುಂಡುಕಲ್ಲನ್ನು ಇಟ್ಟು ಅಗಸೆಬಾಗಿಲು ಎಂದು ಇಂದು ಸ್ಥಳೀಯರು ಪೂಜಿಸುತ್ತಾರೆ. ಇದರ ಮುಂಭಾಗದಲ್ಲಿ ಆಂಜನೇಯ ದೇವಸ್ಥಾನ ಕಂಡುಬರುತ್ತದೆ. ಹೊರಕೋಟೆಯು ಶಿಥಿಲಗೊಂಡಿದ್ದು, ದಕ್ಷಿಣ ಭಾಗದ ಕೋಟೆಗೋಡೆ ಮಾತ್ರ ಸುಮಾರು ೬ ಅಡಿ ಎತ್ತರದವರೆಗೆ ಉಳಿದುಕೊಂಡಿದೆ. ದಕ್ಷಿಣ ಭಾಗದ ಕೋಟೆಗೆ ಹೊಂದಿಕೊಂಡು ನೈರುತ್ಯಕ್ಕೆ ೨೦ ಅಡಿ ಸುತ್ತಳತೆ ೧೦ ಅಡಿ ಎತ್ತರದ ಬುರುಜು ಕಂಡುಬರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಪಶ್ಚಿಮದ ಕೋಟೆಗೋಡೆಯ ತಳಪಾಯದ ಸಾಲು ಕಂಡುಬರುತ್ತದೆ. ಅಲ್ಲಲ್ಲಿ ಹಾಳಾದ ಕೋಟೆಗೋಡೆಯನ್ನು ಕಾಣಬಹುದು.

ಒಳಕೋಟೆ ವಾಡೆಯ ರಕ್ಷಣೆಗಾಗಿ ಸಣ್ಣ ಕಟೆದ ಕಲ್ಲು ಮತ್ತು ಹಾಳುಮಣ್ಣನ್ನು ಉಪಯೋಗಿಸಿ ನಿರ್ಮಿಸಿದ. ೧೮ ಅಡಿ ಎತ್ತರ, ೧೦ ಅಡಿ ದಪ್ಪವಾದ ಗೋಡೆ ಕಂಡುಬರುತ್ತದೆ. ಅಲ್ಲಲ್ಲಿ ಕೋಟೆಗೋಡೆ ಹಾಳಾಗಿದ್ದು ಪೂರ್ವ ಮತ್ತು ದಕ್ಷಿಣಭಾಗದಲ್ಲಿ ಭಾಗಶಃ ಉಳಿದುಕೊಂಡಿದೆ. ಗೋಡೆಯಲ್ಲಿ ೨ ಅಡಿ ಎತ್ತರ, ೬ ಅಂಗುಲ ಅಗಲವಿರುವ ಬಂದೂಕುಕಿಂಡಿಗಳು ಕಂಡುಬರುತ್ತವೆ. ಉತ್ತರಕ್ಕೆ ಇರುವ ಕೋಟೆಗೋಡೆಗೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಕೋಟೆಯ ದ್ವಾರವು ಚೌಕಾಕಾರವಾಗಿದ್ದು ಪೂರ್ವಾಭಿಮುಖವಾಗಿದೆ. ಇದು ೬ ಅಡಿ ೬ ಅಂಗುಲ ಅಗಲ, ೧೩ ಅಡಿ ಎತ್ತರವಾಗಿದ್ದು ಜೀರ್ಣೋದ್ಧಾರಗೊಂಡಿದೆ ಎಂದು ಹೇಳಬಹುದು.

ಒಳಕೋಟೆಯ ಪೂರ್ವದಿಕ್ಕಿನ ಕೋಟೆಗೋಡೆಗೆ ಹೊಂದಿಕೊಂಡು ಈಶಾನ್ಯ ಮತ್ತು ಆಗ್ನೇಯ ದಿಕ್ಕಿನಲ್ಲಿ ಎರಡು ಬುರುಜುಗಳು ಇವೆ. ಈಶಾನ್ಯದಿಕ್ಕಿನಲ್ಲಿರುವ ಬುರುಜು ೫ ಮೀ. ಎತ್ತರ ಉಳಿದುಕೊಂಡಿದ್ದು ಇದನ್ನು ಹುಡೆದ ಲಕ್ಷ್ಮೀ ಎಂದು ಪೂಜಿಸುತ್ತಾರೆ. ಆಗ್ನೇಯಕ್ಕೆ ಇರುವ ಬುರುಜು ೧೯ ಅಡಿ ಎತ್ತರ ಉಳಿದುಕೊಂಡಿದೆ. ಒಳಕೋಟೆಯ ಒಳಗೆ ಆಧುನಿಕವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ನಾಗಠಾಣ

ಇದು ಜಿಲ್ಲಾ ಮತ್ತು ತಾಲೂಕು ಕೇಂದ್ರವಾದ ವಿಜಾಪುರದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಆದಿಲ್‌ಶಾಹಿಗಳ ಆಡಳಿತಾವಧಿಯಿಂದಲೇ ಗ್ರಾಮದ ಪ್ರಾಚೀನತೆ ತಿಳಿದುಬರುತ್ತದೆ. ಇದಕ್ಕಿಂತಲೂ ಪೂರ್ವದಲ್ಲಿನ ಇದರ ಪ್ರಾಚೀನತೆ ಕುರಿತಾಗಿ ಯಾವುದೇ ಕುರುಹುಗಳು ಲಭ್ಯವಾಗಿಲ್ಲ. ಆದಿಲ್‌ಶಾಹಿಗಳು ಮತ್ತು ಮೊಗಲರ ಆಡಳಿತಾವಧಿಯಲ್ಲಿ ಪ್ರಮುಖ ಗ್ರಾಮವಾಗಿದ್ದು ಕ್ರಿಶ. ೧೬೮೬ರಿಂದ ೧೭೪ರ ಅವಧಿಯಲ್ಲಿ ಇಂಡಿ ಪರಗಣದ ೨೧ ಹಳ್ಳಿಗಳಲ್ಲಿ ನಾಗಠಾಣವು ಒಂದಾಗಿತ್ತು.[೧೬೬]

ಗ್ರಾಮದಲ್ಲಿ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾದ ಹೊರಕೋಟೆ ಮತ್ತು ನಂತರ ಕಾಲಘಟ್ಟದಲ್ಲಿ ನಿರ್ಮಾಣವಾದ ದೇಸಾಯಿಗಳ ವಾಡೆ ಕಂಡುಬರುತ್ತದೆ. ಗ್ರಾಮದ ಸುತ್ತಲೂ ಇರುವ ಹೊರಕೋಟೆಯು ಸಂಪೂರ್ಣವಾಗಿ ಹಾಳಾಗಿದೆ. ಕೋಟೆಯ ದ್ವಾರಬಾಗಿಲು ಮತ್ತು ಅಳಿದುಳಿದ ಬುರುಜುಗಳು ಇಂದು ಕಂಡುಬರುತ್ತವೆ. ಉತ್ತರಾಭಿಮುಖವಾಗಿರುವ ಕೋಟೆದ್ವಾರವು ಕಮಾನಾಕೃತಿಯಲ್ಲಿದ್ದು ೧೪ ಅಡಿ ದಪ್ಪ, ೧೫ ಅಡಿ ೧೮ ಅಂಗುಲ ಅಗಲ, ೩೦ ಅಡಿ ಎತ್ತರ ಕಂಡುಬರುತ್ತದೆ. ಕೋಟೆದ್ವಾರದ ಮೇಲೆ ಕೈಪಿಡಿಗೋಡೆ ಮತ್ತು ಅದರ ಮೇಲೆ ತೆನೆಗಳು ಕಂಡುಬರುತ್ತವೆ. ತೆನೆಗಳು ೩ ಅಡಿ ಎತ್ತರ ೨ ಅಡಿ ಅಗಲವಾಗಿದ್ದು ಮಧ್ಯದಲ್ಲಿ ಬಂದೂಕುಕಿಂಡಿಗಳಿವೆ. ಇದೇ ರೀತಿಯ ರಚನೆ ಕೋಟೆಗೋಡೆಗೆ ಇದ್ದಿರಬಹುದು. ಆದರೆ ಕೋಟೆಗೋಡೆ ಸಂಪೂರ್ಣವಾಗಿ ಅವನತಿ ಹೊಂದಿದೆ. ದ್ವಾರಬಾಗಿಲಿಗೆ ಹೊಂದಿಕೊಂಡು ಎರಡು ಬುರುಜುಗಳಿದ್ದು ೧೫ ಅಡಿ ಎತ್ತರ ಉಳಿದುಕೊಂಡಿವೆ. ದ್ವಾರದ ಪಶ್ಚಿಮಕ್ಕೆ ಕಲ್ಲಯ್ಯಮಠದ ಹತ್ತಿರ ಒಂದು ಬುರುಜು ಇದ್ದು ಸುಮಾರು ೮ ಅಡಿ ಎತ್ತರ ಉಳಿದಿದ್ದು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಸ್ಥಳೀಯರು ಹೇಳುವಂತೆ ಗ್ರಾಮದ ಸುತ್ತಲೂ ಕೋಟೆ ಇದ್ದು ನಾಲ್ಕು ದಿಕ್ಕಿಗೂ ಬುರುಜುಗಳಿದ್ದವು ಎಂದು ಹೇಳುತ್ತಾರೆ. ಆದರೆ ಇವು ಇಂದು ಪೂರ್ಣವಾಗಿ ಹಾಳಾಗಿದ್ದು ಕೋಟೆಗೋಡೆ ಮತ್ತು ಉಳಿದ ದಿಕ್ಕುಗಳ ಬುರುಜುಗಳು ಕಂಡುಬರುವುದಿಲ್ಲ. ದ್ವಾರದ ಎದುರಿಗೆ ಆಂಜನೇಯ ಮತ್ತು ಪರಮಾನಂದ ದೇವಸ್ಥಾನಗಳಿವೆ. ಈ ಕೋಟೆಯ ಮಧ್ಯಭಾಗದಲ್ಲಿ ಗೌಡರವಾಡೆ ಎಂದು ಕರೆಯುವ ವಾಡೆ ಇದ್ದು ಚೌಕಾಕಾರದ ದ್ವಾರ ಮತ್ತು ಸುಮಾರು ೨೫ ಅಡಿ ಎತ್ತರವಾದ ಗೋಡೆ ಇದ್ದು ಮರುನಿರ್ಮಾಣಗೊಂಡಿವೆ. ಸುತ್ತಲೂ ನಾಲ್ಕು ಮೂಲೆಗಳಲ್ಲಿ ಬುರುಜುಗಳಿದ್ದು ಮುಂಭಾಗದ

ಎರಡು ಬುರುಜುಗಳು ಉತ್ತಮ ಸ್ಥಿತಿಯಲ್ಲಿವೆ. ಇವು ೨೫ ಅಡಿ ಎತ್ತರವಾಗಿದ್ದು ಅದರಲ್ಲಿ ಬಂದೂಕುಕಿಂಡಿಗಳನ್ನು ಕಾಣಬಹುದು.

ಮಮದಾಪುರ

ಇದು ಜಿಲ್ಲಾಕೇಂದ್ರವಾದ ವಿಜಾಪುರದಿಂದ ನೈಋುತ್ಯಕ್ಕೆ ೨೨ ಕಿ.ಮಿ. ದೂರದಲ್ಲಿದೆ. ಆದಿಲ್‌ಶಾಹಿ ವಂಶದ ಆರನೇ ಸುಲ್ತಾನನಾಗಿದ್ದ ಮಹಮ್ಮದ್ ಆದಿಲ್‌ಶಾಹನು(ಕ್ರಿ.ಶ. ೧೬೨೬-೧೬೫೬) ಅಂತಾಪುರ, ಬಾರಿಗೆ, ಖಾಸ್‌ಬಾಗ್ ಮತ್ತು ಚೌಡಾಪುರಗಳನ್ನು ಒಂದುಗೂಡಿಸಿ ತನ್ನ ಹೆಸರಿನಿಂದಲೇ ಮಹಮ್ಮದಪುರ ಎಂಬ ಈ ಗ್ರಾಮವನ್ನು ಕ್ರಿ.ಶ. ೧೬೩೩ರಲ್ಲಿ ನಿರ್ಮಿಸಿದನು. ಇದನ್ನು ತನ್ನ ಧಾರ್ಮಿಕ ಗುರುವಾಗಿದ್ದ ಚೌಡಾಪುರದ ಸೂಫಿ ಸಂತ ಕಮಲಸಾಹಿಬ್ ಭವಿಷ್ಯವಾಣಿಯಾಗಿದ್ದ ಮಮದಾಪುರದ ಸ್ಥಾಪನೆಯು ಮಹಮ್ಮದನ್ ಹಸ್ತದಿಂದ ಅಸ್ತಿತ್ವಕ್ಕೆ ಬಂದಿತೆಂದು ಇಲ್ಲಿ ನಂಬಿಕೆಯಿದೆ.[೧೮೮]

ಮಹಮ್ಮದ ಆದಿಲ್‌ಶಾಹನ ಪ್ರಧಾನಮಂತ್ರಿಯಾಗಿದ್ದ ಖವಾಸಖಾನನ ಶಾಸನವು ಕೆರೆಗೆ ಅಡ್ಡಲಾಗಿ ಕಟ್ಟಿರುವ ಗೋಡೆಯಲ್ಲಿದ್ದು ಈ ಗ್ರಾಮದಲ್ಲಿ ದೊಡ್ಡ ಕೆರೆ ಮತ್ತು ಸಣ್ಣ ಕೆರೆಗಳನ್ನು ಕ್ರಿ.ಶ. ೧೬೩೩-೩೪ ಮತ್ತು ಕ್ರಿ.ಶ. ೧೬೩೪-೩೫ರಲ್ಲಿ ನಿರ್ಮಿಸಿದನು ಎಂದು ಉಲ್ಲೇಖಿಸುತ್ತವೆ.[೧೮೯] ಅಲ್ಲದೆ ಕೃಷಿಭೂಮಿಯನ್ನು ನೀರಾವರಿಗೆ ಒಳಪಡಿಸಿದನಲ್ಲದೆ ಗ್ರಾಮದಲ್ಲಿ ಮರಗಿಡಗಳನ್ನು ನೆಟ್ಟು ಸುಂದರ ಉದ್ಯಾನವನ್ನಾಗಿ ಪರಿವರ್ತಿಸಿದನು ಎಂದು ಕೆರೆಯ ಗೋಡೆಯ ಮೇಲಿರುವ ಎರಡು ಪರ್ಶಿಯನ್ ಭಾಷೆಯ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಕ್ಯಾಂಪ್‌ಬೆಲ್ ವಿರಚಿತ ಗ್ಯಾಸೆಟಿಯರ್‌ನಲ್ಲಿ ಮಹಮ್ಮದ್ ಆದಿಲ್‌ಶಾಹನ ಪ್ರಧಾನ ಮಂತ್ರಿಯಾಗಿದ್ದ ಮುರಹರಿಪಂಥದ ಬ್ರಾಹ್ಮಣನಾಗಿದ್ದ ಜಗದ್ ಮುರಾರಿಯು ಈ ಊರಿನ ಕೆರೆಯನ್ನು ನಿರ್ಮಿಸಿದ ಎಂದು ಉಲ್ಲೇಖಿಸುತ್ತದೆ.[೧೯೦] ಒಟ್ಟಾರೆ ಈ ಗ್ರಾಮವು ಮಹಮ್ಮದ್ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ನಿರ್ಮಾಣವಾದಂತೆ ಕಂಡುಬರುತ್ತದೆ. ಗ್ರಾಮವನ್ನು ನಿರ್ಮಿಸಿ ಗ್ರಾಮದ ಸುತ್ತಲೂ ಕೋಟೆಯನ್ನು ಈತನ ಕಾಲಾವಧಿಯಲ್ಲಿಯೇ ನಿರ್ಮಿಸಿರಬಹುದು ಎಂದು ಅಭಿಪ್ರಾಯಿಸಬಹುದು. ಮುಂದೆ ಈ ಗ್ರಾಮದ ಜಹಗೀರನ್ನು ಜೈನಾಪುರ ದೇಸಾಯಿಗಳು ಹೊಂದಿದ್ದು ಇವರ ಕಾಲದಲ್ಲಿ ಒಳಕೋಟೆ ಮತ್ತು ವಾಡೆಗಳು ನಿರ್ಮಾಣವಾದಂತೆ ತೋರುತ್ತದೆ.[೧೯೧]

ಆದಿಲ್‌ಶಾಹಿಗಳ ಅವನತಿಯ ನಂತರ ಕ್ರಿ.ಶ. ೧೬೮೬ರಿಂದ ೧೭೬೦ರ ಅವಧಿಯಲ್ಲಿ ಮಮದಾಪುರ ಒಂದು ಪ್ರಮುಖ ಪರಗಣವಾಗಿದ್ದು ಇದನ್ನು ಪರಗಣ ನಬಿಪುರ ಉರ್ಫ್ ಮಹಮ್ಮದಪುರ ಎಂದು ಕರೆಯಲಾಗಿದೆ. ಇದರಲ್ಲಿ ಮೂಲಿ, ಡುಪಿ, ತಾರಾಪುರ, ಕಾರಿ, ಕೂಟಬಾಕಿ, ಲುಲುಮೆರಿ, ಮಂಕ್ಣೂರ, ಸಾದರಹಳ್ಳಿ, ಹಸ್ಕಿ, ಅಂಕುನಿ, ಮದಪುರ, ಕೊಟ್ಟುಬಾಡಿ, ಮದಕನಹಾಳ, ದಲ್ವಾಪುರ, ಕಪರಕನ್ನೂರ, ಅರುಂಖಿ, ಕಹಳ, ರುಬಾಪುರ, ಕೊಟ್ಕೆಡ, ಅಹಮದಾಬಾದ ಉರ್ಫ್ ಲಕಮ, ಹಂಚನಾಳ ಮುಂತಾದವುಗಳನ್ನು ಒಳಗೊಂಡಿತ್ತು.[೧೯೨] ಮರಾಠರ

ಆಡಳಿತಾವಧಿಯಲ್ಲಿಯೂ(ಕ್ರಿ.ಶ. ೧೭೬೦ರಿಂದ ೧೮೪೮) ಮಮದಾಪುರ ಒಂದು ಪ್ರಮುಖ ಪರಗಣವಾಗಿ ಮುಂದುವರಿದಿದ್ದು ಅದರಲ್ಲಿ ೧೫ ಹಳ್ಳಿಗಳಿದ್ದವು. ಅವುಗಳೆಂದರೆ ಮಮದಾಪುರ, ಬೆಳ್ಳುಬ್ಬಿ, ಸುತಗುಂಡಿ, ದೇವರೆ ಗೈನೂರ, ಮುಡಗುಂದಿ, ಹಂಚಿನಾಳ, ಕೊರಬಾಗಿ, ಸಿಗುಣಸಿ, ದೇವಪುರ, ಅರ್ಜುಣಗಿ, ಕತುರಾಳ, ಹುಕ್ಕುಂಡಿ, ಹಲ್ಗಣಿ, ಲಿಂಗದಳ್ಳಿ ಮತ್ತು ಕಂಬಾಗಿಗಳನ್ನು ಒಳಗೊಂಡಿತ್ತು. ಈ ಪರಗಣವು ಮುಂದೆ ಬ್ರಿಟಿಷರ ಆಡಳಿತಕ್ಕೆ ಯಥಾವತ್ತಾಗಿ ಒಳಪಟ್ಟಿತು.[೧೮೩]

ಮಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ನಿರ್ಮಾಣವಾದ ಹೊರಕೋಟೆಯು ಗ್ರಾಮವನ್ನು ಸುತ್ತುವರಿದಿದ್ದು ಕಂಡುಬರುತ್ತದೆ. ಕೋಟೆಯ ಪೂರ್ವದಲ್ಲಿ ಹರಿದಿರುವ ಹಳ್ಳವು ಇದಕ್ಕೆ ನೈಸರ್ಗಿಕ ರಕ್ಷಣೆಯನ್ನು, ಜೊತೆಗೆ ಕೋಟೆಯ ಮುಖ್ಯದ್ವಾರಕ್ಕೆ ಎದುರಾಗಿ ಇರುವ ಬೃಹತ್ ಕೆರೆ ಕೂಡ ಕೋಟೆಗೆ ಶತ್ರುಗಳಿಂದ ರಕ್ಷಣೆ ನೀಡುತ್ತಿದ್ದದ್ದು ತಿಳಿದುಬರುತ್ತದೆ. ಕೋಟೆಯು ಇಂದು ಸಂಪೂರ್ಣವಾಗಿ ಜೀರ್ಣ ಸ್ಥಿತಿಯಲ್ಲಿದ್ದು ಅಲ್ಲಲ್ಲಿ ಉಳಿದುಕೊಂಡಿರುವ ಕೋಟೆಗೋಡೆ ಹಾಗೂ ಬುರುಜುವಿನ ಅವಶೇಷಗಳು ಮಾತ್ರ ಕಂಡುಬರುತ್ತವೆ. ಸದ್ಯ ಆದಿಲ್‌ಶಾಹಿಗಳ ಕಾಲದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣವಾದ ದ್ವಾರವು ಜಿಲ್ಲೆಯಲ್ಲಿ ನಿರ್ಮಾಣವಾದ ಎಲ್ಲ ಕೋಟೆದ್ವಾರಗಳಿಗಿಂತ ಅತಿ ಎತ್ತರವಾಗಿದೆ. ವಿಜಾಪುರ ಕೋಟೆಯ ದ್ವಾರಗಳ ಹಾಗೆ ಇದು ಕೂಡ ಕಮಾನಾಕೃತಿಯಲ್ಲಿದೆ. ತಳಮಟ್ಟದಲ್ಲಿ ಕೆಂಪುವರ್ಣದ ಕಲ್ಲುಗಳನ್ನು ಮೇಲ್ಭಾಗದಲ್ಲಿ ಕಪ್ಪುಕಲ್ಲುಗಳನ್ನು ಹಾಗೂ ಗಚ್ಚನ್ನು ಬಳಸಿ ನಿರ್ಮಿಸಿದ್ದಾರೆ. ದ್ವಾರ ೧೫ ಅಡಿ ೫೧ ಅಂಗುಲ ಅಗಲವಾಗಿದ್ದು ದ್ವಾರದ ಗೋಡೆಯ ದಪ್ಪ ೧೯ ಅಡಿ ಇದೆ. ದ್ವಾರದ ಎರಡು ಬದಿಯಲ್ಲಿ ವೃತ್ತಾಕಾರದ ಬುರುಜುಗಳಿದ್ದು ಇತ್ತೀಚೆಗಷ್ಟೇ ಅವು ನಾಶ ಹೊಂದಿವೆ ಎಂದು ಸ್ಥಳೀಯರು ಹೇಳುತ್ತಾರೆ. ದ್ವಾರಬಾಗಿಲ ಪ್ರವೇಶದ ಇಕ್ಕೆಲಗಳಲ್ಲಿ ಸೈನಿಕರ ಕೊಠಡಿಗಳಿದ್ದು ಇಂದು ಬಲಭಾಗದ ಕೊಠಡಿ ಮಾತ್ರ ಉಳಿದುಕೊಂಡಿದೆ. ಈ ದ್ವಾರಬಾಗಿಲ ಎಡಭಾಗದ ಉತ್ತರದಿಕ್ಕಿನಲ್ಲಿ ಎರಡು ಕೋಟೆಗೋಡೆಗಳು ಸಂಧಿಸುವ ಮೂಲೆಗೆ ಅಳಿದುಳಿದ ಬುರುಜುಗಳಿದ್ದು ಅದನ್ನು ಸ್ಥಳೀಯರು ರಕ್ಷಣೆ ಮಾಡಿ ಸುಣ್ಣ ಬಳಿದು ಹುಡೆದ ಲಕ್ಷ್ಮೀ ಎಂದು ಪೂಜಿಸುತ್ತಾರೆ. ಉತ್ತರದಿಕ್ಕಿನಲ್ಲಿಯೇ ಅಲ್ಲಲ್ಲಿ ಕೋಟೆಗೋಡೆ ಉಳಿದುಕೊಂಡಿದ್ದು ಕಂಡುಬರುತ್ತದೆ. ಕೋಟೆಗೊಡೆಯನ್ನು ದಪ್ಪವಾದ ದೊಡ್ಡಗಾತ್ರದ ಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಿದ್ದು ಸುಮಾರು ೫ರಿಂದ ೧೨ ಅಡಿ ಎತ್ತರ ಉಳಿದುಕೊಂಡುಬಂದಿದೆ. ಈ ಕೋಟೆಗೋಡೆಗೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಕೋಟೆಯ ಒಳಗೆ ದಕ್ಷಿಣಭಾಗದಲ್ಲಿ ಪೇಶ್ವೆಗಳ ಅಥವಾ ಜೈನಾಪುರದ ದೇಸಾಯಿಗಳ ಕಾಲಾವಧಿಯಲ್ಲಿ ನಿರ್ಮಾಣವಾದ ಮತ್ತೊಂದು ಚಿಕ್ಕ ಕೋಟೆ ಇದೆ. ಇದು ಉತ್ತರ ಮತ್ತು ಪೂರ್ವ ಭಾಗದಲ್ಲಿ ಮಾತ್ರ ಉಳಿದುಕೊಂಡಿದೆ. ಉಳಿದ ಭಾಗ ಪೂರ್ಣವಾಗಿ ನಾಶ ಹೊಂದಿ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಉಳಿದ ಕೋಟೆಗೋಡೆಯು ಸುಮಾರು ೨೮ ಅಡಿ ಎತ್ತರವಾಗಿದ್ದು ಮೇಲ್ಭಾಗದಲ್ಲಿ ಅಟ್ಟಾಲಕ ಹಾಗೂ ಎದೆ ಮಟ್ಟದವರೆಗೆ ಕೈಪಿಡಿಗೋಡೆ ಕಂಡುಬರುತ್ತದೆ.

ಕೈಪಿಡಿಗೋಡೆಯಲ್ಲಿ ದೂರ ಮತ್ತು ಸಮೀಪ ದೃಷ್ಟಿಕೋನವನ್ನು ಇಟ್ಟುಕೊಂಡು ೪೫೦ ಮತ್ತು ೯೦೦ ಕೋನಾಕೃತಿಯಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳಿವೆ. ಕೋಟೆಗೋಡೆಯ ಹೊರಭಾಗದಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳನ್ನು ಸ್ಪಷ್ಟವಾಗಿ ಕಾಣಬಹುದು. ಈ ಕೋಟೆಗೆ ಆಗ್ನೇಯ ಮತ್ತು ವಾಯವ್ಯ ದಿಕ್ಕಿನಲ್ಲಿ ಎರಡು ಬುರುಜುಗಳು ಕಂಡುಬರುತ್ತವೆ. ಆದರೆ ಆಗ್ನೇಯದಿಕ್ಕಿನಲ್ಲಿ ಇರುವ ಬುರುಜು ಸಂಪೂರ್ಣವಾಗಿ ನಾಶ ಹೊಂದಿದ್ದು ವೃತ್ತಾಕಾರವಾಗಿ ಅದರ ಅವಶೇಷಗಳು ಹರಡಿಕೊಂಡಿವೆ. ವಾಯವ್ಯ ಭಾಗದ ಬುರುಜು ಕನಿಷ್ಠ ಸ್ಥಿತಿಯಲ್ಲಿದ್ದರೂ. ಸುಮಾರು ೪೦ ಅಡಿ ಎತ್ತರ ಉಳಿದುಕೊಂಡಿದೆ. ಮೇಲ್ಭಾಗಕ್ಕೆ ಹೋಗಲು ಬುರುಜುವಿನ ಎರಡು ಗೋಡೆಗಳ ಮಧ್ಯೆ ವೃತ್ತಾಕಾರವಾಗಿ ಮೆಟ್ಟಿಲುಗಳಿವೆ. ಬುರುಜು ಮತ್ತು ಕೋಟೆಗೋಡೆಯನ್ನು ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಿದ್ದರಿಂದ ಬಂದೂಕುಕಿಂಡಿಗಳು ಮಣ್ಣು ಬಿದ್ದು ಮುಚ್ಚಬಾರದು ಎಂಬ ಉದ್ದೇಶದಿಂದ ಮಣ್ಣಿನ ಕೊಳವೆಗಳನ್ನು ಉಪಯೋಗಿಸಿದ್ದು ಕಂಡುಬರುತ್ತವೆ. ಇನ್ನುಳಿದಂತೆ ಒಳಕೋಟೆಯು ಜೀರ್ಣ ಸ್ಥಿತಿಯಲ್ಲಿದ್ದು ಒಳಗಡೆ ವಾಡೆಯ ಕಟ್ಟಡದ ಅವಶೇಷಗಳು ಕಂಡುಬರುತ್ತವೆ. ಇದ್ದ ಕೋಟೆ ಗೋಡೆಯನ್ನು ಕೆಡವಿ ಅದರ ಕಲ್ಲು ಮತ್ತು ಮಣ್ಣನ್ನು ಬಳಸಿ ಮನೆ ಕಟ್ಟಲು ಸ್ಥಳೀಯರು ಬಳಸುತ್ತಿದ್ದದ್ದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿತು. ಇನ್ನೂ ಅಲ್ಪಾವಧಿಯಲ್ಲಿಯೇ ಉಳಿದ ಕೋಟೆಯು ಕೂಡ ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿದೆ.

ಗ್ರಾಮದಲ್ಲಿ ಮಧ್ಯಭಾಗದಲ್ಲಿ ಸೂಫಿ ಸಂತ ಕಮಲ್‌ಸಾಹಿಬ್(ಮಹಮ್ಮದ್ ಆದಿಲ್‌ಶಹಾನ ಸಮಕಾಲೀನ) ದರ್ಗಾ, ಇದರ ಸಮೀಪ ಪೀರ್ ಸಂದಲ್ ಸಾಹೇಬ್‌ರ ಸಮಾಧಿಯಿದೆ. ಊರ ಹೊರಗೆ ಬಯಲು ಹನುಮಂತನ ದೇವಸ್ಥಾನ, ಕ್ರಿ.ಶ. ೧೮೭೫ರಲ್ಲಿ ಸ್ಥಳೀಯ ಗ್ರಾಮಲೆಕ್ಕಿಗ ನಿರ್ಮಿಸಿದ ವಿಠೋಬಾ ದೇವಸ್ಥಾನವಿದೆ. ಸಿದ್ಧೇಶ್ವರ ಮತ್ತು ಕೆರೆಯ ಏರಿ ಮೇಲೆ ಲಕ್ಷ್ಮೀ ದೇವಾಲಯಗಳಿವೆ.

೪.೨. ಇಂಡಿ ತಾಲೂಕಿನ ಕೋಟೆಗಳು

ಅಥರ್ಗಾ

ಅಥರ್ಗಾ ಇಂಡಿಯಿಂದ ದಕ್ಷಿಣಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಶಿಲಾತಾಮ್ರಯುಗಕ್ಕೆ ಸಂಬಂಧಿಸಿದ ಕೆಂಪುವರ್ಣದ ಮಡಕೆಚೂರುಗಳು ಈ ಗ್ರಾಮದಲ್ಲಿ ದೊರಕಿದ್ದು ಈ ಕಾಲಘಟ್ಟದಿಂದ ಜನವಸತಿ ಇಲ್ಲಿ ಬೆಳೆದು ಬಂದಿರಬಹುದು.[೧೮೪] ಆದರೆ ಗ್ರಾಮದ ಪ್ರಾಚೀನತೆ ಕುರಿತು ಇದುವರೆಗೆ ಯಾವುದೇ ಕುರುಹುಗಳು ಲಭ್ಯವಾಗಿಲ್ಲ. ಈ ಗ್ರಾಮದಲ್ಲಿ ಕೋಟೆಯಿದ್ದು, ಇದು ದೇಸಾಯಿಗಳ ಕಾಲದ ವಾಡೆಯ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿ ದ್ವಾರವನ್ನು ಹೊಂದಿರುವ ಕೋಟೆಯನ್ನು ಸ್ಥಳೀಯವಾಗಿ ಲಭ್ಯವಾಗುವ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಸದ್ಯ ಕೋಟೆಗೋಡೆಯು ಉತ್ತರದಿಕ್ಕಿನಲ್ಲಿ ಮಾತ್ರ ಉಳಿದುಕೊಂಡುಬಂದಿದೆ. ಈ ಕೋಟೆ ಗೋಡೆಯು

ಸು. ೧೦ ಅಡಿ ದಪ್ಪವನ್ನು ಹೊಂದಿದ್ದು ಕೊಟೆಗೋಡೆ ಹೊರತು ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಸ್ಥಳೀಯರು ಹೇಳುವ ಪ್ರಕಾರ ಸುಮಾರು ಮೂರರಿಂದ ನಾಲ್ಕು ಎಕರೆ ವಿಸ್ತೀರ್ಣದಲ್ಲಿ ಕೋಟೆಗೋಡೆಯು ಸುತ್ತುವರಿದಿದ್ದು ಅದಕ್ಕೆ ಹೊಂದಿಕೊಂಡು ನಾಲ್ಕು ಬುರುಜುಗಳಿದ್ದವು ಎಂದು ಹೇಳುತ್ತಾರೆ ಆದರೆ ಇಂದು ಉತ್ತರಕ್ಕೆ ಮಾತ್ರ ಎರಡು ವೃತ್ತಾಕಾರದ ಬುರುಜುಗಳಿದ್ದು ಮಣ್ಣಿನ ದಿಬ್ಬಗಳ ಹಾಗೆ ಕಂಡುಬರುತ್ತವೆ. ಕೋಟೆಯೊಳಗೆ ಇಂದು ವಾಡೆಯ ಯಾವುದೇ ಅವಶೇಷಗಳು ಉಳಿದಿಲ್ಲ. ಅಲ್ಲಿ ಆಧುನಿಕ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಕೋಟೆಯ ಮುಂದೆ ಸುಮಾರು ೧೯ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ನಿರ್ಮಿಸಿರುವ ಅಷ್ಟಕೋನಾಕೃತಿಯ ಬಸವಣ್ಣ ದೇವಾಲಯವಿದೆ. ಇನ್ನುಳಿದಂತೆ ಕೋಟೆಯ ನಿರ್ಮಾಣ ಅಥವಾ ಗ್ರಾಮದ ಪ್ರಾಚೀನತೆ ತಿಳಿಸುವ ಯಾವುದೇ ಆಕರಗಳು ಇದುವರೆಗೆ ಲಭ್ಯವಾಗಿಲ್ಲ.

ಕೋಟ್ನಾಳ

ಇದು ತಾಲೂಕುಕೇಂದ್ರವಾದ ಇಂಡಿಯಿಂದ ೨೮ ಕಿ.ಮೀ. ದೂರದಲ್ಲಿದೆ ಮತ್ತು ವಿಜಾಪುರ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯಿಂದ ಪೂರ್ವಕ್ಕೆ ನಾಲ್ಕು ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದಲ್ಲಿ ಕೋಟೇಶ್ವರ ಎಂಬ ದೇವಾಲಯವಿರುವುದರಿಂದ ಕೋಟ್ನಾಳ ಎಂದು ಹೆಸರು ಬಂದಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಕೋಟ್ನಾಳ ಗ್ರಾಮದ ಪ್ರಾಚೀನತೆ ವಿಜಾಪುರ ಆದಿಲ್‌ಶಾಹಿಗಳ ಆಡಳಿತಾವಧಿಯಿಂದ ಪ್ರಾರಂಭವಾಗುತ್ತದೆ. ಇದಕ್ಕಿಂತಲೂ ಹಿಂದೆ ಗ್ರಾಮವು ಸ್ಥಾಪಿತವಾಗಿದ್ದರ ಕುರಿತಾಗಿ ಯಾವುದೇ ಪುರಾತತ್ವೀಯ ಆಧಾರಗಳು ಇದುವರೆಗೆ ಲಭ್ಯವಾಗಿಲ್ಲ.

ಕೋಟ್ನಾಳ ಗ್ರಾಮವು ಆದಿಲ್‌ಶಾಹಿ ಅರಸರ ಕಾಲದಿಂದಲೂ ಜಂಬಗಿ ದೇಸಾಯಿ ಹಾಗೂ ಚಾಂದಕವಠೆ ದೇಸಾಯಿಗಳ ಆಡಳಿತಕ್ಕೆ ಒಳಪಟ್ಟಿತ್ತು.[೧೮೫] ವಿಜಾಪುರದ ಆದಿಲ್‌ಶಾಹಿ ಅರಸರು ದೇಸಾಯಿಯವರ ಧೈರ್ಯ ಸಾಹಸ ಮೆಚ್ಚಿ ೨೦ ಹಳ್ಳಿಗಳನ್ನು ಇನಾಮು ಹಾಕಿಕೊಟ್ಟರು. ಅವರು ಐದು ಸಾವಿರ ಸೈನಿಕರ ತುಕಡಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರೆಂದು ತಿಳಿದುಬರುತ್ತದೆ. ಆದಿಲ್‌ಶಾಹಿ ಅರಸರಿಂದ ಅವರಿಗೆ ದೊರೆತ ಇನಾಮು ಪತ್ರ, ಫರ್ಮಾನುಗಳು ಈಗ ಈ ಮನೆತನದವರಲ್ಲಿ ಉಳಿದುಬಂದಿಲ್ಲ. ಮೂಲತಃ ಜಂಬಗಿಯ ದೇಶಮುಖರು ವಿಜಾಪುರ ಆದಿಲ್‌ಶಾಹಿಗಳ ಕಾಲದಲ್ಲಿ ಸರಶೆಟ್ಟಿ ಎಂಬ ಹೆಸರನ್ನು ಹೊಂದಿದ ಸರಾಫಿ ವ್ಯಾಪಾರಸ್ಥರಾಗಿದ್ದರು. ಅಲ್ಲಿಂದ ರಾಜಕೀಯ ಜೀವನ ಆರಂಭಿಸಿದ ಇವರು ಮರಾಠಾ ಪೇಶ್ವೆಗಳಿಂದಲೂ ಜಂಬಗಿ ಗ್ರಾಮವನ್ನು ಇನಾಂ ಆಗಿ ಪಡೆದುಕೊಂಡರು. ಮುಂದೆ ಕೋಟ್ನಾಳ ಎಂಬ ಗ್ರಾಮದಲ್ಲಿ ಬಲಾಢ್ಯವಾದ ಕೋಟೆಯನ್ನು ನಿರ್ಮಿಸಿಕೊಂಡರು. ಅಂದಿನಿಂದ ಜಂಬಗಿ ಗ್ರಾಮದ ಜೊತೆಗೆ ಕೋಟ್ನಾಳದ ದೇಶಮುಖರಾಗಿ ವಿಜಾಪುರ ಜಿಲ್ಲೆಯಲ್ಲಿ ಅಡಳಿತ ನಿರ್ವಹಿಸಿದ್ದಾರೆ.[೧೮೬]

ಪೇಶ್ವೆಗಳು ತಮ್ಮ ರಾಜ್ಯದ ಸಂರಕ್ಷಣೆಗಾಗಿ ಅಲ್ಲಲ್ಲಿ ಆಯಕಟ್ಟಿನ ಸ್ಥಳಗಳನ್ನು ಗುರುತಿಸಿ ಕೋಟೆಗಳನ್ನು ನಿರ್ಮಿಸಿ ಸೈನಿಕ ಪಡೆಗಳನ್ನು ನಿಯೋಜನೆ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ

ಕೋಟ್ನಾಳದ ಕೋಟೆ ನಿರ್ಮಾಣಗೊಂಡಿರುವ ಸಾಧ್ಯತೆಗಳುಂಟು. ಕೋಟ್ನಾಳದ ಕೋಟೆಯಲ್ಲಿ ಬೃಹತ್ ಸಂಖ್ಯೆಯಲ್ಲಿ ಸೈನಿಕರನ್ನು ಹಾಗೂ ಅತ್ಯಾವಶ್ಯಕ ಮದ್ದುಗುಂಡುಗಳನ್ನು ಸಂಗ್ರಹಿಸಿಡಲಾಯಿತು. ಇದರ ಉಸ್ತುವಾರಿಯನ್ನು ಜಂಬಗಿಯ ದೇಶಮುಖರಿಗೆ ವಹಿಸಲಾಯಿತು. ಹೀಗೆ ಕೋಟ್ನಾಳದ ಕೋಟೆ ಮದ್ದು ಗುಂಡುಗಳ ಸಂಗ್ರಹದ ಸೈನಿಕ ಕೇಂದ್ರವಾಯಿತು.[೧೮೭] ಕ್ರಿ.ಶ. ೧೭೬೦ ರಿಂದ ೧೮೪೮ರ ಅವಧಿಯಲ್ಲಿ ಕೋಟ್ನಾಳ ವಿಜಾಪುರ ಪ್ರಾಂತದ ಅರ್ಧಕಂದಾಯ ವಿಭಾಗವಾಗಿತ್ತು(Half Villages).[೧೮೮]

ಕೋಟ್ನಾಳದ ದೇಶಮುಖರು ಕ್ರಿ.ಶ. ೧೮೫೭ರ ವರೆಗೆ ಈ ಪ್ರದೇಶದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಧ್ವನಿಯು ಕರ್ನಾಟಕದಲ್ಲಿ ಮೊಳಗಿದ ಸಂದರ್ಭದಲ್ಲಿ ಮುಂಬೈ ಕರ್ನಾಟಕದಲ್ಲಿ ನರಗುಂದದ ಬಾಬಾಸಾಹೇಬ್, ಸುರಪುರದ ವೆಂಕಟಪ್ಪ ನಾಯಕ, ಜಮಖಂಡಿಯ ಭೋಟುಸಿಂಗ ಮುಂತಾದವರ ಜೊತೆಗೆ ಕೋಟ್ನಾಳದ ಬಸಲಿಂಗಪ್ಪ ದೇಶಮುಖರು ಕೂಡಿಕೊಂಡು ಗುಪ್ತವಾಗಿ ಕ್ರಾಂತಿಕಾರಿಗಳಿಗೆ ಸಹಕಾರಿಯಾದರು. ಇವರು ಮದ್ದುಗುಂಡುಗಳ ಸರಬರಾಜು ಮಾಡಲು ಒಪ್ಪಿಕೊಂಡರು. ಆದರೆ ಈ ಸುಳಿವು ಸೊಲ್ಲಾಪುರದ ಕಲೆಕ್ಟರಿಗೆ ತಿಳಿದು ಬಸಲಿಂಗಪ್ಪ ಮತ್ತು ಆತನ ಮಗ ಇವನನ್ನು ಸೊಲ್ಲಾಪುರದಲ್ಲಿ ಗಲ್ಲಿಗೇರಿಸಲಾಯಿತು. ಕ್ರಿ.ಶ. ೧೮೫೭ರ ದಂಗೆಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಬ್ರಿಟಿಷರು ಕೋಟ್ನಾಳದಲ್ಲಿರುವ ದೇಶಮುಖರ ಬಲಾಢ್ಯ ಕಿಲ್ಲೆಯನ್ನು ಧ್ವಂಸಗೊಳಿಸಿದರು. ಅಲ್ಲಿದ್ದ ಮದ್ದುಗುಂಡುಗಳನ್ನು ವಶಪಡಿಸಿಕೊಂಡು ದೇಶಮುಖರಿಗೆ ನೀಡಲಾಗಿದ್ದ ಸಂಪೂರ್ಣ ಇನಾಂ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡರು.[೧೮೯]

ವಿಜಾಪುರ ಜಿಲ್ಲೆಯಲ್ಲಿ ದೊರೆಯುವ ಮೂರು ಸುತ್ತಿನ ಕೋಟೆಗಳಲ್ಲಿ ಕೋಟ್ನಾಳ ಕೂಡ ಒಂದಾಗಿದೆ. ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯು ಪ್ರಮುಖವಾಗಿ ಮೂರು ಮುಖ್ಯದ್ವಾರಗಳನ್ನು ಹೊಂದಿದೆ. ಕೋಟೆ ಹಾಗೂ ಕೋಟೆಯೊಳಗಿನ ವಾಡೆ ಅಲ್ಲಲ್ಲಿ ಹಾಳಾಗಿದ್ದರೂ ಕೋಟೆಯ ಸಂಪೂರ್ಣ ಚಿತ್ರಣ ನಮಗೆ ನೋಡಲು ಸಿಗುತ್ತದೆ. ಇದು ರಕ್ಷಣೆಗೆ ಒಳಪಡದಿದ್ದರೆ ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ನಾಶ ಹೊಂದುವುದರಲ್ಲಿ ಸಂಶಯವೇ ಇಲ್ಲ.

ಹೊರಸುತ್ತಿನ ಕೋಟೆಯ ಮುಖ್ಯದ್ವಾರವು ಉತ್ತರಾಭಿಮುಖವಾಗಿದ್ದು ಈ ಕೋಟೆಗೋಡೆ ಸುಮಾರು ೬೬೩ ಮೀ. ಸುತ್ತಳತೆಯನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ದ್ವಾರವು ೧೧ ಅಡಿ ಅಗಲವಾಗಿದೆ. ಮುಖ್ಯದ್ವಾರದ ಮೇಲ್ಭಾಗವೆಲ್ಲ ಹಾಳಾಗಿದ್ದು ಅಲ್ಪಸ್ವಲ್ಪ ಉಳಿದುಕೊಂಡಿದೆ. ಮುಖ್ಯ ದ್ವಾರವನ್ನು ಪ್ರವೇಶಿಸಿದೊಡನೆ ಪ್ರವೇಶದ ಎರಡೂ ಬದಿಯಲ್ಲಿ ಸೈನಿಕರ ವಿಶ್ರಾಂತಿ ಕೊಠಡಿಗಳಿದ್ದು ಅದರ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಮುಖ್ಯದ್ವಾರವನ್ನು ಶತ್ರುಗಳು ಸುಲಭವಾಗಿ ಪ್ರವೇಶಿಸದಂತೆ ಮತ್ತು ದ್ವಾರದ ದೃಢತೆಯನ್ನು ಹೆಚ್ಚಿಸಲು ಎರಡು ಬದಿಯಲ್ಲಿ ೬೦

ಅಡಿ ವೃತ್ತಾಕಾರದ ಬುರುಜುಗಳಿವೆ. ಬುರುಜುಗಳ ಅರ್ಧಭಾಗ ನಾಶ ಹೊಂದಿದ್ದು ೧೯ ಅಡಿ ಎತ್ತರ ಮಾತ್ರ ಉಳಿದುಕೊಂಡಿವೆ. ಶತ್ರುಗಳು ಸುಲಭವಾಗಿ ಒಳಹೋಗದಂತೆ ತಡೆಯಲು ಬುರುಜುನಿಂದ ನೇರವಾಗಿ ದ್ವಾರಬಾಗಿಲ ಹತ್ತಿರ ಬರುವ ಶತ್ರುಗಳ ಮೇಲೆ ಅಕ್ರಮಣ ಮಾಡಲು ಬಂದೂಕು ಕಿಂಡಿಗಳಿವೆ. ಬುರುಜುವಿನ ಮೇಲಿನ ಕೈಪಿಡಿಗೋಡೆ ಮತ್ತು ತೆನೆಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಈ ತೆನೆಗಳ ಕಿಂಡಿಗಳ ಮೂಲಕ ಕೋಟೆಯಿಂದ ದೂರದಲ್ಲಿ ಬರುವ ಶತ್ರುಗಳ ಮೇಲೆ ನಿಗಾ ಇಡಲಾಗುತಿತ್ತು. ಹೊರಕೋಟೆ ಗೋಡೆಯು ಸುಮಾರು ೩.೪ ಅಡಿ ದಪ್ಪವಿದ್ದು ದಕ್ಷಿಣ ಭಾಗದ ಕೋಟೆಗೋಡೆ ಮಾತ್ರ ಅಲ್ಲಲ್ಲಿ ೧೫ ರಿಂದ ೧೮ ಅಡಿ ಎತ್ತರ ಉಳಿದುಕೊಂಡಿದೆ. ಆದರೆ ಉಳಿದ ಮೂರು ಭಾಗಗಳಲ್ಲಿ ನಾಶವಾಗಿದ್ದು ೩ ರಿಂದ ೫ ಅಡಿ ಎತ್ತರ ಮಾತ್ರ ಕಂಡುಬರುತ್ತದೆ. ಈ ಕೋಟೆಗೋಡೆಯ ಬಂದೂಕು ಕಿಂಡಿಗಳು ೩ ಅಡಿ ಎತ್ತರ, ೬ ಅಂಗುಲ ಅಗಲವಾಗಿವೆ. ಕೋಟೆಗೋಡೆಯ ಭದ್ರತೆ ಮತ್ತು ಶತ್ರುಗಳ ಆಕ್ರಮಣವನ್ನು ದೂರದಿಂದಲೇ ತಡೆಗಟ್ಟಲು ಹೊರಕೋಟೆಗೋಡೆಗೆ ಹೊಂದಿಕೊಂಡು ಎಂಟು ವೃತ್ತಾಕಾರದ ಬುರುಜುಗಳು ಕಂಡುಬರುತ್ತವೆ. ಇವು ಸುಮಾರು ೬೦ ರಿಂದ ೬೫ ಅಡಿ ಸುತ್ತಳತೆ ಹೊಂದಿದ್ದು ಇವು ೧೦ ರಿಂದ ೨೦ ಅಡಿ ಎತ್ತರ ಮಾತ್ರ ಉಳಿದುಕೊಂಡಿವೆ. ಹೊರಕೋಟೆಯ ದಕ್ಷಿಣಭಾಗದಲ್ಲಿ ಇರುವ ಒಂದು ಬುರುಜುವಿನ ಕೆಳಭಾಗದಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸುವ ಕೋಣೆ ಕಂಡುಬರುತ್ತದೆ. ಒಳಭಾಗದಲ್ಲಿ ಕೋಣೆಯು ವಿಶಾಲವಾಗಿದ್ದು ಅದರ ಬಾಗಿಲು (೨X೨ ಅಡಿ) ಮಾತ್ರ ಚಿಕ್ಕದಾಗಿದೆ. ಬಹುಶ ಮದ್ದು ಗಾಳಿ ಮತ್ತು ಬೆಳಕಿನ ಸಂಯೋಜನೆಯಿಂದ ಸ್ಫೋಟಗೊಳ್ಳದಂತೆ ಕ್ರಮ ಕೈಗೊಂಡಿರಬಹುದು ಎನ್ನಬಹುದು. ಹೊರಕೋಟೆಯ ಉತ್ತರಭಾಗದಲ್ಲಿ ಕೋಟೆಗೋಡೆಗೆ ಹೊಂದಿಕೊಂಡು ಹಳ್ಳದಂತೆ ಉದ್ದವಾದ ತಗ್ಗಾದ ಪ್ರದೇಶವಿದೆ. ಇದು ಕೋಟೆಯೊಳಗೆ ಶತ್ರುಗಳು ಸುಲಭವಾಗಿ ತಲುಪದಂತೆ ಕಂದಕ ನಿರ್ಮಾಣ ಮಾಡಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಕಂದಕವೂ ಇಂದು ಪೂರ್ಣವಾಗಿ ಮುಚ್ಚಿಹೋಗಿದ್ದು ಅಳಿದುಳಿದ ಕುರುಹಾಗಿ ತಗ್ಗಾದ ಪ್ರದೇಶದಂತೆ ಕಂಡುಬರುತ್ತದೆ.

ಎರಡನೆಯ ಸುತ್ತಿನ ಕೋಟೆಯು ೩೧೬ ಮೀ. ಸುತ್ತಳತೆಯನ್ನು ಹೊಂದಿದ್ದು ೩ ೧/೨ ಅಡಿ ಅಗಲವನ್ನು ಹೊಂದಿದೆ. ಈ ಕೋಟೆಗೋಡೆಯು ಹಾಳಾದ ಸ್ಥಿತಿಯಲ್ಲಿದ್ದು ೫ ರಿಂದ ೧೫ ಅಡಿ ಎತ್ತರದವರೆಗೆ ಉಳಿದುಕೊಂಡಿರುವುದನ್ನು ಕಾಣುತ್ತೇವೆ. ಈ ಕೋಟೆಯ ದ್ವಾರವು ಉತ್ತರಾಭಿಮುಖವಾಗಿದ್ದು(೧೧ ಅಡಿ ಅಗಲವಾಗಿದೆ) ಅದಕ್ಕೆ ಹೊಂದಿಕೊಂಡು ಎರಡು ಬುರುಜುಗಳಿವೆ. ಈ ದ್ವಾರವು ಹಾಳಾಗಿದ್ದು ಕೇವಲ ಪ್ರವೇಶದ ಬದಿಯಲ್ಲಿ ದ್ವಾರದ ಅಳಿದುಳಿದ ಗೋಡೆ ಒಳಭಾಗದಲ್ಲಿ ಎರಡು ಅಂಕಣಗಳು ಇರುವುದನ್ನು ಕಾಣಬಹುದು. ಕೋಟೆಯ ಹೊರಕೋಟೆ ಗೋಡೆ ಮತ್ತು ಮಧ್ಯದ ಕೋಟೆಗೋಡೆಯ ಮಧ್ಯದಲ್ಲಿ ಪೂರ್ವ ಮತ್ತು ಉತ್ತರ ಭಾಗದಲ್ಲಿ ವಸತಿ ನಿವೇಶನಗಳ ಅವಶೇಷಗಳನ್ನು ಕಾಣುತ್ತೇವೆ. ಬಹುಶ ಇವು ಜನಸಾಮಾನ್ಯರ ಇಲ್ಲವೇ

ಅಧಿಕಾರಿ ವರ್ಗ ಮತ್ತು ಸೈನಿಕರ ವಸತಿ ನೆಲೆಗಳಾಗಿರಬಹುದು. ಈ ನಿವೇಶನಗಳು ಅಂಕುಡೊಂಕಾಗಿರದೆ ನೇರವಾಗಿ ಇರುವುದನ್ನು ಕಾಣುತ್ತೇವೆ. ಇಂದು ಅವೆಲ್ಲವೂ ಹಾಳಾಗಿದ್ದು ಅದರ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಈ ಎರಡನೆಯ ಕೋಟೆಯ ದ್ವಾರದ ಮುಂದೆ ಲಕ್ಷ್ಮೀ ಮತ್ತು ಮರಗಮ್ಮ ಎಂದು ಕರೆಯುವ ಎರಡು ಚಿಕ್ಕ ಗುಡಿಗಳಿವೆ.

ಮೂರನೆಯ ಸುತ್ತಿನ ಕೋಟೆಯು ಇಂದಿಗೂ ನೋಡಲು ಆಕರ್ಷಕವಾಗಿ ಕಾಣುತ್ತದೆ. ಈ ಕೋಟೆಯ ಚೌಕಾಕಾರವಾದ ದ್ವಾರವು ಪೂರ್ವಾಭಿಮುಖವಾಗಿದ್ದು ಎತ್ತರವಾದ ಜಗತಿಯ ಮೇಲಿದೆ. ಹೀಗಾಗಿ ದ್ವಾರವನ್ನು ತಲುಪಲು ಮೆಟ್ಟಿಲುಗಳಿವೆ. ಒಳಗೆ ಪ್ರವೇಶಿಸಿದೊಡನೆ ನೇರವಾಗಿ ವಾಡೆಗೆ ಸಂಪರ್ಕಿಸದೆ ಇಂಗ್ಲಿಷಿನ 'L' ಆಕಾರದ ಪ್ರವೇಶವನ್ನು ಹೊಂದಿದೆ. ದ್ವಾರವನ್ನು ಪ್ರವೇಶಿಸಿದೊಡನೆ 'L' ಆಕಾರದಲ್ಲಿಯೇ ದ್ವಾರದ ಒಳಭಾಗದಲ್ಲಿ ಅಂಕಣಗಳನ್ನು ಹೊಂದಿದೆ. ತುರ್ತುಸಂಧರ್ಭದಲ್ಲಿ ಉಪಯೋಗಿಸಲು ಈ ದ್ವಾರ ಬಾಗಿಲಿಗೆ ೯೦೦ ಕೋನಾಕೃತಿಯಲ್ಲಿ ದಿಡ್ಡಿಬಾಗಿಲು ನಿರ್ಮಿಸಲಾಗಿದೆ. ಮೂರನೇ ಸುತ್ತಿನ ಕೋಟೆಗೋಡೆಯು ೫ ಅಡಿ ದಪ್ಪವನ್ನು ಹೊಂದಿದ್ದು ೨೦ ರಿಂದ ೨೨ ಅಡಿ ಎತ್ತರ ಉಳಿದುಕೊಂಡಿದೆ. ಈ ಗೋಡೆಯ ಮೇಲಿನ ಕೈಪಿಡಿಗೋಡೆ ಹಾಳಾಗಿದ್ದರೂ ಇಂದಿಗೂ ಕೋಟೆಗೋಡೆಯು ಭದ್ರವಾಗಿ ನಿಂತಿದೆ. ಇದರ ಮೇಲ್ಭಾಗದಲ್ಲಿ ಬಂದೂಕು ಕಿಂಡಿಗಳನ್ನು ಕಾಣಬಹುದು. ಇದಕ್ಕೆ ಹೊಂದಿಕೊಂಡು ೫ ಬುರುಜುಗಳಿದ್ದು ಸುಮಾರು ೬೦ ರಿಂದ ೭೦ ಅಡಿ ಸುತ್ತಳತೆ ಮತ್ತು ೪೦ ರಿಂದ ೫೦ ಅಡಿ ಎತ್ತರವಾಗಿವೆ. ಬುರುಜುಗಳ ಮಧ್ಯಭಾಗದಲ್ಲಿ ಬಂದೂಕುರಂಧ್ರಗಳಿವೆ. ಈ ಕೋಟೆಗೋಡೆಯು ಸುಮಾರು ೫ ಅಡಿ ದಪ್ಪವಾಗಿದ್ದು ಮೇಲ್ಭಾಗದಲ್ಲಿ ಸೈನಿಕರ ಚಲನವಲನಕ್ಕೆ ಅಟ್ಟಾಲಕವನ್ನು ಮಾಡಿದ್ದಾರೆ. ಈ ಅಟ್ಟಾಲಕದ ಸಮಾನಾಂತರವಾಗಿ ಬುರುಜುವಿಗೆ ಬಾಗಿಲುಗಳಿದ್ದು ಮೇಲೆ ಹೋಗಲು ಮೆಟ್ಟಿಲುಗಳನ್ನು ಮಾಡಿದ್ದಾರೆ. ಕೆಲವು ಬುರುಜುಗಳು ಮಧ್ಯೆ ಟೊಳ್ಳಾಗಿದ್ದು ಸೈನಿಕರು ಕಾವಲು ಕಾಯಲು ಅಥವಾ ಒಳಗಡೆಯಿಂದಲೇ ಶತ್ರುಗಳ ಮೇಲೆ ಆಕ್ರಮಣ ಮಾಡುವಂತೆ ಬಂದೂಕು ಕಿಂಡಿಗಳಿವೆ. ಕೆಲವೊಂದು ಸಂದರ್ಭದಲ್ಲಿ ಈ ಟೊಳ್ಳಾದ ಭಾಗದಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಿಡುತ್ತಿದ್ದರು. ಬುರುಜುವಿನ ಮೇಲ್ಭಾಗ ಅಥವಾ ಕೋಟೆಗೋಡೆಯ ಮೇಲೆ ಹತ್ತಲು ಅಲ್ಲಲ್ಲಿ ಗೋಡೆಗೆ ಹೊಂದಿಕೊಂಡು ಮೆಟ್ಟಿಲುಗಳು ಕಂಡುಬರುತ್ತವೆ. ಮೂರನೇ ಸುತ್ತಿನ ಕೋಟೆಗೋಡೆಯ ಪಶ್ಚಿಮಭಾಗದಲ್ಲಿ ಒಂದು ಚಿಕ್ಕದಾದ ದಿಡ್ಡಿ ಬಾಗಿಲು ಕೂಡ ಇದೆ.

ಮೂರನೆಯ ಸುತ್ತಿನ ಕೋಟೆಯೊಳಗೆ ದೇಶಮುಖರು ವಾಸಿಸುವ ವಾಡೆಯಿದ್ದು, ಇಂದು ಈ ವಾಡೆ ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಈ ವಾಡೆಯ ದ್ವಾರವು ಚೌಕಾಕಾರವಾಗಿದ್ದು ಉತ್ತರಾಭಿಮುಖವಾಗಿದೆ. ಈ ಮೂರನೇ ಸುತ್ತಿನ ಕೋಟೆಯ ಒಳಗೆ ವಾಡೆ ಮುಂಭಾಗ ವಿಶಾಲವಾದ ಪ್ರಾಂಗಣವಿದೆ. ಈ ಪ್ರಾಂಗಣದಲ್ಲಿ ೯ ಬಾಗಿಲುಗಳುಳ್ಳ ಕುದುರೆ ಲಾಯಗಳು, ಬಾವಿ, ಧಾನ್ಯಗಳನ್ನು ಹಾಗೂ ಮದ್ದುಗುಂಡುಗಳನ್ನು ಸಂಗ್ರಹಿಸುವ ಕಣಜಗಳು ಕಂಡುಬರುತ್ತವೆ. ದೇಸಾಯಿಗಳು ವಾಸಿಸುವ ವಾಡೆಯ ಭಾಗ ವಿನಾಶದ ಹಂತದಲ್ಲಿದ್ದು ಇದರ ಒಂದು ಭಾಗದಲ್ಲಿ ಇಂದು ದೇಶಮುಖರು

ವಾಸವಿದ್ದಾರೆ. ವಾಡೆಯನ್ನು ಪ್ರವೇಶಿಸಿದೊಡನೆ ಬಲಭಾಗದಲ್ಲಿ ಒಂದು ಕೋಣೆಯಲ್ಲಿ ಶಿವಲಿಂಗವಿದ್ದು ಅದನ್ನು ಕೋಟೇಶ್ವರ ದೇವಸ್ಥಾನ ಎಂದು ಕರೆಯುತ್ತಾರೆ. ಬಹುಶಃ ಈ ಕೋಟೇಶ್ವರನಿಂದ ಕೋಟ್ನಾಳ ಎಂಬ ಹೆಸರು ಈ ಗ್ರಾಮಕ್ಕೆ ಬಂದಿರುವ ಸಾಧ್ಯತೆಗಳಿವೆ. ಇನ್ನುಳಿದಂತೆ ವಾಡೆಯೊಳಗೆ ೫ ಕಿ.ಗ್ರಾಂ. ಭಾರವನ್ನು ಹೊಂದಿದ ನಾಲ್ಕು ಕಬ್ಬಿಣದ ಗುಂಡುಗಳಿವೆ.

ಒಟ್ಟಾರೆಯಾಗಿ ವಿಜಾಪುರ ಆದಿಲ್‌ಶಾಹಿಗಳಿಂದ ವತನದಾರಿಕೆಯನ್ನು ಪಡೆದು ಬೃಹತ್ತಾದ ಕೋಟೆಯನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡಿದ್ದು ಒಂದು ಸಾಧನೆಯೇ ಸರಿ. ಈ ಕೋಟೆಯು ಬಯಲು ಪ್ರದೇಶದಲ್ಲಿ ಕೋಟೆಗೆ ಅನುಸರಿಸಬೇಕಾದ ಎಲ್ಲ ಲಕ್ಷಣಗಳನ್ನು ಅನುಸರಿಸಿ ಕೋಟೆಯನ್ನು ನಿರ್ಮಿಸಿದ್ದಾರೆ. ಈ ಜಿಲ್ಲೆಯಲ್ಲಿ ಇನ್ನೂ ಉತ್ತಮ ಸ್ಥಿತಿಯಲ್ಲಿರುವ ಕೋಟೆಗಳಲ್ಲಿ ಕೋಟ್ನಾಳ ಕೋಟೆಯು ಒಂದಾಗಿದೆ. ಈ ಕೋಟೆಯ ಸಂರಕ್ಷಣೆಯನ್ನು ಕೈಗೊಳ್ಳದೇ ಇದ್ದಲ್ಲಿ ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ನಾಶ ಹೊಂದುತ್ತದೆ.

ಕ್ಯಾತನಕೇರಿ

ಇದು ತಾಲೂಕುಕೇಂದ್ರವಾದ ಇಂಡಿಯಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿದೆ. ಕಲ್ಯಾಣ ಚಾಳುಕ್ಯರ ಕಾಲಾವಧಿಯ ಕೇದಾರಲಿಂಗ ದೇವಾಲಯ ಗ್ರಾಮದಲ್ಲಿ ಕಂಡುಬರುತ್ತದೆ. ಈ ದೇವಾಲಯದ ಪಕ್ಕದಲ್ಲಿ ಅವನತಿ ಹೊಂದಿದ ಸುಮಾರು ಎರಡು ಎಕರೆ ವಿಸ್ತೀರ್ಣದಲ್ಲಿ ಕೋಟೆಯ ಅವಶೇಷಗಳಿವೆ. ಕೋಟೆಯು ಪೂರ್ವಾಭಿಮುಖವಾಗಿದ್ದು ಒಟ್ಟು ೧೪೭ ಮೀ.(೪೮೩ ಅಡಿ) ಸುತ್ತಳತೆಯನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಮುಖ್ಯದ್ವಾರದ ಮುಂದೆ ಆಂಜನೇಯ ದೇವಸ್ಥಾನವಿದೆ. ಕೋಟೆಯ ಆಧಾರವೆಂಬಂತೆ ಪಶ್ಚಿಮಭಾಗದಲ್ಲಿ ಒಂದು ವೃತ್ತಾಕಾರದ ಬುರುಜು ಕಂಡುಬರುತ್ತದೆ. ಇದು ಸುಮಾರು ೨೦ ಅಡಿ ಎತ್ತರ, ೩೦ ಅಡಿ ಸುತ್ತಳತೆ ಹೊಂದಿದೆ. ಬುರುಜುವಿನ ಮಧ್ಯಭಾಗದಲ್ಲಿ ಬಂದೂಕುರಂಧ್ರಗಳಿದ್ದು ೩ ಅಡಿ ಉದ್ದ, ೧೦ ಅಂಗುಲ ಅಗಲವಾಗಿವೆ. ಬುರುಜುವಿನ ಮೇಲ್ಭಾಗಕ್ಕೆ ಹೋಗಲು ಸುಮಾರು ೫ ಅಡಿ ಎತ್ತರದ ಮೇಲೆ ೩ ಅಡಿ ಎತ್ತರ, ೨.೫ ಅಡಿ ಅಗಲವಿರುವ ಚಿಕ್ಕಬಾಗಿಲಿದೆ. ಬುರುಜು ಕೂಡ ಅವನತಿಯ ಅಂಚಿನಲ್ಲಿದೆ. ಈ ಬುರುಜುವಿನ ಮೇಲೆ ನಿಂತು ನೋಡಿದರೆ ಕೋಟೆಗೋಡೆ, ಅದರೊಳಗಿನ ಕಟ್ಟಡಗಳ ಅವಶೇಷಗಳು ಕಂಡುಬರುತ್ತವೆ. ಈ ಕೋಟೆಯನ್ನು ಸ್ಥಳೀಯ ಆಡಳಿತ ವರ್ಗದವರ ರಕ್ಷಣೆಗಾಗಿ ನಿರ್ಮಿಸಿಕೊಂಡ ಕೋಟೆ ಎಂದು ಹೇಳಬಹುದು.

ನಿಂಬಾಳ

ಇಂಡಿಯಿಂದ ೨೬ ಕಿ.ಮೀ. ದಕ್ಷಿಣಕ್ಕೆ ಇರುವ ನಿಂಬಾಳ ಗ್ರಾಮವು ಸೂಕ್ಷ್ಮಶಿಲಾಯುಗಕ್ಕೆ ಸಂಬಂಧಿಸಿದ ನೆಲೆಯಾಗಿದೆ. ಈ ಕಾಲಘಟ್ಟದ ಸೂಕ್ಷ್ಮ ಶಿಲೋಪಕರಣಗಳು ಇಲ್ಲಿ ಪತ್ತೆಯಾಗಿವೆ.[೧೯೦] ಶಾಸನಗಳಲ್ಲಿ ಗ್ರಾಮವನ್ನು ನಿಂಬಹಳ್ಳ,[೧೯೧] ನಿಂಬವಟಿಟಿದ,[೧೯೨] ನಿಬಿಬಹುರ[೧೯೩] ಎಂದು

ಉಲ್ಲೇಖಿಸಲಾಗಿದೆ. ತರ್ದವಾಡಿ ಸಾಸಿರದ ಉಪವಿಭಾಗವಾದ ರೂವಿಗೆ ಮೂವತ್ತಾರು ಆಡಳಿತ ವಿಭಾಗದಲ್ಲಿ ಈ ನಿಂಬಾಳ ಗ್ರಾಮವು ಸೇರಿತ್ತು. ಕ್ರಿ.ಶ. ೧೩೦೪ರ ಶಾಸನ ಉಲ್ಲೇಖಿತ ನಿಬಿಬಹುರ, ನಿಂಬಹಳ್ಳ ಸ್ಥಳನಾಮ ಕುರಿತು ನೋಡುವುದಾದರೆ 'ಪುರ', 'ಪುರಿ' ದ್ರಾವಿಡ ಸ್ಥಳನಾಮ ವಾರ್ಗಿಕ 'ಊರು' ಪದದ ಪರ್ಯಾಯಪದವಾಗಿ ಕೆಲವಡೆ ಕಾಣಿಸಿಕೊಂಡಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ 'ಪುರ' ಪಟ್ಟಣ ಎನ್ನುವ ಅರ್ಥದಲ್ಲಿ ಬಳಕೆಗೊಂಡಿದೆ. ದ್ರಾವಿಡ ಮೂಲದ ಪಳ್ಳಿ ಎಂಬುದು ಕನ್ನಡದಲ್ಲಿಯೂ 'ಪಳ್ಳಿ' ಎಂಬ ಶಬ್ದರೂಪವೇ ಸಮಾನವಾಗಿ ಬಳಕೆಯಾಗಿದೆ. ಪಳ್ಳ ಎಂದರೆ ತಗ್ಗು, ಆಳ ತೊರೆ ಎಂಬರ್ಥವಿರುವುದರಿಂದ 'ಹಳ್ಳಿ' ತಗ್ಗು ಅಥವಾ ತೊರೆ ಆಶ್ರಯದಲ್ಲಿರುವ ಊರು ಎನ್ನಬಹುದು.[೧೯೪]

ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯ ವಾಸ್ತುಶೈಲಿಯನ್ನು ಹೊಂದಿರುವ ಕೋಟಿಶಂಕರಲಿಂಗ ದೇವಾಲಯವಿದೆ. ಕಲ್ಯಾಣ ಚಾಳುಕ್ಯ, ಕಳಚುರಿ, ಯಾದವರಿಗೆ ಸಂಬಂಧಿಸಿದ ಒಂಬತ್ತು ಶಾಸನಗಳಿದ್ದು ಅವು ಪ್ರಕಟಗೊಂಡಿವೆ. ಕ್ರಿ.ಶ. ೧೧೭೪ರ ಸೋವಿದೇವನ ಕಾಲದ ಶಾಸನವು ತಡವಲಗೆಯ ಪ್ರಭು ವಾರರಸ, ಬಸವರಸ, ಬೀಚರಸ ಭೂತರಸ, ಬಿಜ್ಜರಸ ಮುಂತಾದವರು ತಮ್ಮೂರ ಹೊಲದಲ್ಲಿ ನಿಂಬಹಳ್ಳದ ಕೋಟಿಶಂಕರದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೧೯೫] ಕ್ರಿ.ಶ. ೧೧೭೬ರ ರಾಯಮುರಾರಿ ಸೋವಿದೇವನ ಶಾಸನವು ಮಹಾಮಂಡಳೇಶ್ವರನೊಬ್ಬ ಸಂಕರದೇವರಿಗೆ ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.[೧೯೬] ಕ್ರಿ.ಶ. ೧೩ನೇ ಶತಮಾನದ ಶಾಸನವು ಕೋಟಿಸಂಕರ ದೇವಾಲಯಕ್ಕೆ ದಾನ ನೀಡಿರುವ ಭೂಮಿಯ ಎಲ್ಲೆಗಳನ್ನು ಈ ಶಾಸನ ತಿಳಿಸುತ್ತದೆ. ತಡವಲಗೆ, ರಾಜವಳ್ಳಿ, ಹೊರತಿ, ಮಣಲಿ, ತೆನೆಯಹಳ್ಳಿ ಮೊದಲಾದ ಗ್ರಾಮಗಳ ಉಲ್ಲೇಖವಿದೆ. ಶಾಸನದ ಕೊನೆಯಲ್ಲಿ ಪಂಚಲಿಂಗ ದೇವರಿಗೆ ರೂಗಿ ಸೀಮೆಯೊಳಗೆ ಭೂಮಿಯನ್ನು ದಾನ ಬಿಟ್ಟಂತೆ ಹೇಳಿದೆ.[೧೯೭] ಈ ರೀತಿಯಾಗಿ ಉಳಿದ ಶಾಸನಗಳು ಸಹ ಕೋಟಿಶಂಕರಲಿಂಗ ದೇವಾಲಯಕ್ಕೆ ದಾನ ಕೊಟ್ಟಿದ್ದನ್ನು ತಿಳಿಸುತ್ತವೆ.

ಕಲ್ಯಾಣ ಚಾಳುಕ್ಯರ ಕಾಲಾವಧಿಯಿಂದ ಪ್ರಸಿದ್ಧಿಗೆ ಬಂದ ಈ ಗ್ರಾಮವು ವಿವಿಧ ಅರಸು ಮನೆತನಗಳ ಆಳ್ವಿಕೆಗೊಳಪಟ್ಟಿರುವುದನ್ನು ಕಾಣಬಹುದು. ಆದಿಲ್‌ಶಾಹಿಗಳ ಆಳ್ವಿಕೆಯ ನಂತರ ಕ್ರಿ.ಶ. ೧೭೬೦ ರಿಂದ ೧೮೪೮ರಲ್ಲಿ ಹೊರ್ತಿ ಪರಗಣದಲ್ಲಿ ನಿಂಬಾಳವು ಒಂದು ಕಂದಾಯ ಗ್ರಾಮವಾಗಿದ್ದುದು ತಿಳಿದು ಬರುತ್ತದೆ.[೧೯೮]

ಆದಿಲ್‌ಶಾಹಿಗಳ ಕಾಲದಲ್ಲಿಯೇ ನಿಂಬಾಳ ದೇಸಗತಿಯನ್ನು ಅವರಿಂದ ಪಡೆದುಕೊಂಡರು ಎಂದು ವಿ.ವಿ.ದೇಸಾಯಿಯವರು ಹೇಳುತ್ತಾರೆ. ಏಣದರಾವ ದೇಸಾಯಿ ಎಂಬುವವರು ಇವರ ಮೂಲಪುರುಷರಾಗಿದ್ದು ಇವರ ಕಾಲದಲ್ಲಿಯೇ ನಿಂಬಾಳ ಗ್ರಾಮವನ್ನು ವತನಾಗಿ ಪಡೆದುಕೊಂಡರು. ನಿಂಬಾಳ, ತಡವಲಗಾ, ಹಂಜಗಿ, ಬಬಲಾದಿ, ಹಳಗುಣಕಿ, ಹೊರ್ತಿ, ಕ್ಯಾತನಕೇರಿ ಗ್ರಾಮಗಳು

ತಮ್ಮ ವತನಗಾರಿಕೆಯಲ್ಲಿದ್ದವು ಎಂದು ಮತ್ತು ದೇಸಾಯಿಗಳ ವಾಡೆ ಸುತ್ತ ಇರುವ ಈ ಕೋಟೆಯು ಆದಿಲ್‌ಶಾಹಿಗಳ ಕಾಲದಲ್ಲಿಯೇ ನಿರ್ಮಾಣವಾಯಿತೆಂದು ಹೇಳುತ್ತಾರೆ.

ಈ ಗ್ರಾಮದಲ್ಲಿ ದೇಸಗತಿಗಳ ಕಾಲಾವಧಿಯಲ್ಲಿ ನಿರ್ಮಾಣವಾದ ಈ ಕೋಟೆ ಕಲ್ಯಾಣ ಚಾಳುಕ್ಯ ಕಾಲದ ಕೋಟಿಶಂಕರಲಿಂಗ ದೇವಾಲಯದ ಹತ್ತಿರವೇ ಕಂಡುಬರುತ್ತದೆ. ಕೋಟೆಯು ಸಂಪೂರ್ಣವಾಗಿ ವಿನಾಶದ ಅಂಚಿನಲ್ಲಿದ್ದು ಅದರ ಮಧ್ಯೆ ಹಳೇಕಾಲದ ವಾಡೆಗಳನ್ನು ತೆಗೆದು ಹಾಕಿ ಈಗ ಹೊಸದಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಕೋಟೆಯು ಸುಮಾರು ೧೭೬ ಮೀ. ಸುತ್ತಳತೆಯನ್ನು ಹೊಂದಿದ್ದು ಕಲ್ಲು ಮತ್ತು ಮುಕ್ಕಾಲು ಭಾಗ ಮಣ್ಣನ್ನು ಬಳಸಿ ನಿರ್ಮಿಸಲಾಗಿದ್ದು ಮಣ್ಣಿನಿಂದ ನಿರ್ಮಿಸಿದ ಮೃತ್ತಿಕಾದುರ್ಗದ ಹಾಗೆ ಕಂಡುಬರುತ್ತದೆ. ೯ ಅಡಿ ಅಗಲದ ಕೋಟೆಗೋಡೆಯನ್ನು ಹೊರಭಾಗದ ಎರಡು ಬದಿಯಲ್ಲಿ ಒಂದೇ ಕಲ್ಲಿನ ಸ್ತರವನ್ನು ನಿರ್ಮಿಸಿ ಮಧ್ಯೆ ಹಾಳುಮಣ್ಣನ್ನು ಉಪಯೋಗಿಸಿದ್ದಾರೆ. ಇಂದು ಸುಮಾರು ೫ ರಿಂದ ೧೦ ಅಡಿ ಎತ್ತರ ಕೋಟೆಗೋಡೆಯು ಅಲ್ಲಲ್ಲಿ ಉಳಿದುಕೊಂಡಿದ್ದು ಬಹುತೇಕ ನಾಶವಾಗಿದೆ. ಅಲ್ಲದೆ ಕಲ್ಲಿನ ಸ್ತರಗಳು ಬಿದ್ದುಹೋಗಿದ್ದು ಮಧ್ಯದ ಮಣ್ಣಿನ ಗೋಡೆ ಮಾತ್ರ ಉಳಿದು ಕೊಂಡಿದೆ. ಪೂರ್ವಾಭಿಮುಖವಾಗಿ ದ್ವಾರಬಾಗಿಲಿದ್ದು ಅದನ್ನು ಚೌಕಾಕಾರವಾಗಿ ನಿರ್ಮಿಸಿದ್ದಾರೆ. ಇದು ಮೊದಲು ಕಮಾನಾಕೃತಿಯಲ್ಲಿತ್ತು ಎಂದೂ ದ್ವಾರದ ಒಳ ಪ್ರವೇಶದಲ್ಲಿ ಎರಡು ಬದಿಯಲ್ಲಿ ಅಂಕಣಗಳಿದ್ದವು ಎಂದೂ ಈಗ ಕೋಟೆಯೊಳಗೆ ವಾಸವಿರುವ ವಿ.ವಿ. ದೇಸಾಯಿ ಅವರು ಹೇಳುತ್ತಾರೆ. ಈಗಿನ ಕೋಟೆಗೋಡೆಯ ಮೇಲೆ ತಾವು ಚಿಕ್ಕವರಿದ್ದಾಗ ಒಂದು ಎತ್ತಿನ ಬಂಡಿಯು ಕೋಟೆಯ ಮೇಲೆ ಸುತ್ತುವರಿಯುವಷ್ಟು ಗೋಡೆ ಅಗಲವಾಗಿತ್ತು. ಆದರೆ ಇಂದು ಗೋಡೆಯು ಬಿದ್ದು ಅದರ ಅರ್ಧ ಭಾಗ ಮಾತ್ರ ಉಳಿದಿದೆ ಎನ್ನುತ್ತಾರೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೋಟೆಗೋಡೆಯ ತಳಪಾಯದ ಅಳತೆಯನ್ನು ಗಮನಿಸಿದಾಗ ೯ ಅಡಿ ಇದ್ದದ್ದು ಕಂಡುಬಂದಿತು. ಹೀಗಾಗಿ ಇದರ ಮೇಲೆ ಅಟ್ಟಾಲಕವನ್ನು ನಿರ್ಮಿಸಿದ್ದರು ಎಂದು ಹೇಳಬಹುದು. ಪೂರ್ವಾಭಿಮುಖವಾದ ಕೋಟೆಗೆ ಆಗ್ನೇಯ ಮತ್ತು ವಾಯವ್ಯ ದಿಕ್ಕಿನಲ್ಲಿ ಸುಮಾರು ೩೦ ಅಡಿ ಎತ್ತರದ ಬುರುಜುಗಳು ಉಳಿದುಕೊಂಡಿದ್ದು ಅವುಗಳನ್ನು ಹೊರಭಾಗದಲ್ಲಿ ಸುತ್ತಲೂ ಕಲ್ಲಿನ ಸ್ತರದಿಂದ ನಿರ್ಮಿಸಿದ್ದು ಮಧ್ಯದಲ್ಲಿ ಹಾಳುಮಣ್ಣನ್ನು ತುಂಬಿ ನಿರ್ಮಿಸಿದ್ದಾರೆ. ಇಂದು ಬುರುಜುವಿನ ೧೦ ರಿಂದ ೧೨ ಅಡಿ ಎತ್ತರ ಮಾತ್ರ ಕಲ್ಲಿನ ಸ್ತರದ ಗೋಡೆ ಉಳಿದುಕೊಂಡಿದ್ದು ಮೇಲ್ಭಾಗ ನಾಶಹೊಂದಿದೆ. ಅದರ ಮೇಲ್ಭಾಗದ ಮಣ್ಣಿನ ಬುರುಜು ಕಾಲಘಟ್ಟಕ್ಕೆ ಎದೆಯೊಡ್ಡಿ ವಿನಾಶದ ಅಂಚಿನಲ್ಲಿದೆ. ಬುರುಜುವಿನ ಮೇಲ್ಭಾಗಕ್ಕೆ ಹೋಗಲು ಕೋಟೆಗೋಡೆಯ ಅಟ್ಟಾಲಕದ ಸಮಾನಾಂತರವಾಗಿ ಬಾಗಿಲುಗಳನ್ನು ನಿರ್ಮಿಸಿದ್ದಾರೆ. ಕೋಟೆಗೋಡೆ ಹಾಗೂ ಬುರುಜುವಿನಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳು ಇರುವುದನ್ನು ಕಾಣಬಹುದು. ಮಣ್ಣನ್ನು ಹೆಚ್ಚಾಗಿ ಬಳಸಿ ನಿರ್ಮಿಸಿದ್ದರಿಂದ ಕಿಂಡಿಗಳು ಮುಚ್ಚದಂತೆ ಮಣ್ಣಿನಿಂದ ಕೊಳವೆಗಳನ್ನು ಮಾಡಿ ಹಾಕಿದ್ದು ಒಂದು ವಿಶೇಷವಾಗಿದೆ. ಈ ರೀತಿಯ ಮಣ್ಣಿನ ಕೊಳವೆಯನ್ನು ಬಳಸಿದ್ದು

ನಾವು ಮಮದಾಪುರ ಕೋಟೆ ಹಾಗೂ ಬುರುಜುವೊಂದರಲ್ಲಿ ಕಾಣುತ್ತೇವೆ. ಈ ಕೋಟೆಯನ್ನು ದೇಸಾಯಿಗಳು ತಮ್ಮ ಸ್ವರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸಿದ್ದಾಗಿದೆ.

ಸಾತಲಗಾಂವ

ಮಹಾರಾಷ್ಟ್ರ ರಾಜ್ಯದ ಗಡಿಪ್ರದೇಶಕ್ಕೆ ಹೊಂದಿಕೊಂಡಂತ್ತಿರುವ ಈ ಗ್ರಾಮವು ತಾಲೂಕು ಕೇಂದ್ರವಾದ ಇಂಡಿಯಿಂದ ೫೦ ಕಿ.ಮೀ. ದೂರದಲ್ಲಿದೆ. ಇಲ್ಲಿ ಶಿಲಾತಾಮ್ರಯುಗಕ್ಕೆ ಸಂಬಂಧಿಸಿದ ಕುರುಹುಗಳು ಕಂಡುಬಂದಿವೆ.[೯೯] ಕ್ರಿ.ಶ. ೧೪೮೧ರ ಶಾಸನವು ಅಲ್ಲಿರುವ ಹನುಮಂತ ದೇವಾಲಯದ ಸಭಾಂಗಣ ನಿರ್ಮಾಣ ಸಂಪೂರ್ಣವಾಯಿತು ಎಂದು ತಿಳಿಸುತ್ತದೆ. ಇಲ್ಲಿ ರಾಮರಾಸನ ಉಲ್ಲೇಖವಿದ್ದು.[೧೦೦] ಬಹುಶಃ ಅವನು ಈ ಸಂಭಾಂಗಣವನ್ನು ಕಟ್ಟಿಸಿದವನಾಗಿರಬೇಕು.

ಗ್ರಾಮದ ಸುತ್ತಲೂ ಕೋಟೆಗೋಡೆ ಇದ್ದದ್ದು ಕಂಡುಬರುತ್ತದೆ. ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ಕಟ್ಟಲಾಗಿದೆ. ಕೋಟೆಗೋಡೆಯು ೪ ಅಡಿ ದಪ್ಪ ಹಾಗೂ ೩ ರಿಂದ ೭ ಅಡಿ ಎತ್ತರದ ವರೆಗೆ ಗ್ರಾಮದ ಸುತ್ತಲೂ ಇದ್ದು ಶಿಥಿಲಾವಸ್ಥೆಯಲ್ಲಿದೆ. ಕೋಟೆಯ ವಾಯವ್ಯಭಾಗದಲ್ಲಿ ಅದಕ್ಕೆ ಹೊಂದಿಕೊಂಡ ವೃತ್ತಾಕಾರದ ಬುರುಜಿದ್ದು ಅದು ವಿನಾಶದ ಅಂಚಿನಲ್ಲಿದೆ. ಕೋಟೆಯ ದ್ವಾರಬಾಗಿಲು ಪೂರ್ವಾಭಿಮುಖವಾಗಿದ್ದು ಅದಕ್ಕೆ ಹೊಂದಿಕೊಂಡು ಎರಡೂ ಬದಿಯಲ್ಲಿ ಬುರುಜುಗಳಿದ್ದವು ಎಂದು ಸ್ಥಳೀಯರಾದ ಬಸಣ್ಣ ಸಿದ್ಧರಾಯ ದೈವಾಡಿ(ವ. ೬೫) ಅವರು ಹೇಳುತ್ತಾರೆ. ಆದರೆ ಇಂದು ಆ ದ್ವಾರವನ್ನು ಸಂಪೂರ್ಣವಾಗಿ ತೆಗೆದುಹಾಕಿ ನೂತನ ದ್ವಾರವನ್ನು ನಿರ್ಮಿಸಿದ್ದಾರೆ. ಕೋಟೆಯ ಒಳಗಡೆ ದೇಸಾಯರ ಮನೆಗೆ ಹೊಂದಿಕೊಂಡು ಬುರುಜಿದ್ದು ೩೦ ಅಡಿ ಎತ್ತರ ಉಳಿದುಕೊಂಡಿದೆ. ವಾಡೆಗೆ ಹೊಂದಿಕೊಂಡು ಸುತ್ತಲೂ ನಾಲ್ಕು ಬುರುಜುಗಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಅವು ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿವೆ. ಇನ್ನುಳಿದಂತೆ ಈಗಿನ ದೇಸಾಯಿಗಳ ಮನೆಯ ಮುಂದೆ ಕಮಾನು ಮಾದರಿಯ ಬಾಗಿಲುಳ್ಳ ಬಾವಿ, ಕೋಟೆಯ ದ್ವಾರಬಾಗಿಲ ಮುಂದೆ ಶಿವಯೋಗೇಶ್ವರ ಗುಡಿ, ಕ್ರಿ.ಶ. ೧೪೮೧ರಲ್ಲಿ ನಿರ್ಮಿಸಿದ ಆಂಜನೇಯ ದೇವಸ್ಥಾನವಿದೆ ಮತ್ತು ಗ್ರಾಮದ ಮುಂದೆ ಸರಕಾರಿ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಿಸಿದ ಇಂಡೋ-ಇಸ್ಲಾಮಿಕ್ ಶೈಲಿಯ ಮಿನಾರವಿದೆ. ಇದನ್ನು ಈ ಗ್ರಾಮದ ದೇಸಾಯಿಗಳ ಸಮಾಧಿ ಎಂದು ಹೇಳಲಾಗುತ್ತದೆ. ಈ ಮಿನಾರದ ಮುಂದೆ ದೇಸಾಯಿಗಳ ಸಮಾಧಿಗಳಿವೆ. ಅದರ ಹಿಂಭಾಗದ ಗೋಡೆಯ ಮೇಲೆ ದೇಸಾಯಿಗಳ ವಂಶಾವಳಿಯನ್ನು ನಾಗರಿ ಲಿಪಿಯಲ್ಲಿ ಬರೆಯಲಾಗಿದೆ.

ಸಾಲೋಟಗಿ

ಇಂಡಿಯಿಂದ ಪೂರ್ವಕ್ಕೆ ೮ ಕಿ.ಮೀ. ದೂರದಲ್ಲಿರುವ ಸಾಲೋಟಗಿಯು ರಾಷ್ಟ್ರಕೂಟರ ಕಾಲದಲ್ಲಿಯೇ ಪ್ರಸಿದ್ಧ ವಿದ್ಯಾಕೇಂದ್ರವಾಗಿ ಹೆಸರು ಪಡೆದಿತ್ತು. ಶಾಸನಗಳು ಈ ಗ್ರಾಮವನ್ನು

ಶಾಲಾಪಾವಿಟ್ಟಗೆ,[೨೦೧] ಪೌಠಗೆ[೨೦೨] ಎಂದು ಉಲ್ಲೇಖಿಸುತ್ತವೆ. ಸ್ಥಳನಾಮವನ್ನು ಕುರಿತು ನೋಡುವುದಾದರೆ ಇ,-ಎ,-ಕೆ,-ಗೆ ಬದ್ಧರೂಪದಲ್ಲಿ ಕಾಣಿಸಿಕೊಳ್ಳುವ ಸ್ಥಳನಾಮಗಳ ಅಂತ್ಯದ ಈ ಸ್ಥಳವಾಚಕಗಳ ಮೂಲ ನಿರ್ಧರಿಸುವುದು ಸದ್ಯಕ್ಕೆ ಕಷ್ಟಕರವಾಗಿದೆ. ಡಾ. ಆರ್.ಸಿ. ಹಿರೇಮಠರು 'ಕೆ', 'ಗೆ'ಗಳ ಬಗ್ಗೆ ಹೇಳುತ್ತಾ ಅದು ಗ್ರಾಮ>ಗಾಮ>ಗಾವೆ>ಗಾವ>ಗಾ>ಗೆ>ಗಿ ಆಗಿದೆಯೆಂದಿದ್ದಾರೆ. ಪಾವಿಟ್ಟಗೆ(ಪೌಠಗೆ) ಸಾಲೋಟಗಿ ಆಗಿರಬಹುದು.[೨೦೩]

ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಕ್ರಿ.ಶ. ೯೪೫ರ ಶಾಸನ ಸಾಲೋಟಗಿಯು ಒಂದು ಪ್ರಮುಖ ವಿದ್ಯಾಕೇಂದ್ರವಾಗಿದ್ದರ ಬಗ್ಗೆ ತಿಳಿಸುತ್ತದೆ. ಮೂರನೇ ಕೃಷ್ಣನು ಮಾನ್ಯಖೇಟದಲ್ಲಿದ್ದಾಗ ಇವನ ಪ್ರಧಾನಮಂತ್ರಿ ಸಂಧಿವಿಗ್ರಹಿಯಾದ ನಾರಾಯಣ ಎಂಬುವವನು ಒಂದು ಶಾಲೆ ಕಟ್ಟಿಸಿ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಿದ. ಅಲ್ಲಿ ಅಧ್ಯಯನಕ್ಕೆ ನಾನಾ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು ಎಂದು ಮತ್ತು ಅವರ ವಸತಿಗೆ, ದೀಪ, ಶಾಲೆಗೆ, ಬ್ರಾಹ್ಮಣರಿಗೆ ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೨೦೪]

ಕಾಲದ ಉಲ್ಲೇಖವಿಲ್ಲದ ಯಾದವ ದೊರೆ ಭಿಲ್ಲಮನ ಕಾಲಾವಧಿಯ ಸಾಲೋಟಗಿ ಶಾಸನವು ಮಂತ್ರಿ ಮಾಯಿದೇವ, ಇವನ ಕೈಕೆಳಗಿನ ಅಧಿಕಾರಿ ಬಂದರಸನನ್ನು ವರ್ಣಿಸಿದೆ. ಬಂದರಸನು ಪೌಠಗೆಯ ಭೋಗೇಶ್ವರ ದೇವರಿಗೆ ಮಾವುಳಿಗನೂರನ್ನು ದಾನ ಬಿಟ್ಟ ವಿಷಯವಿದೆ.[೨೦೫] ಕ್ರಿ.ಶ. ೧೨ನೇ ಶತಮಾನದ ಇನ್ನೊಂದು ತೃಟಿತ ಶಾಸನ ಈ ಗ್ರಾಮದಲ್ಲಿ ಕಂಡುಬರುತ್ತದೆ.[೨೦೬] ರಾಷ್ಟ್ರಕೂಟರ ಕಾಲದಿಂದಲೂ ಪ್ರಾಮುಖ್ಯ ಪಡೆದ ಸಾಲೋಟಗಿ ಕಲ್ಯಾಣ ಚಾಳುಕ್ಯ, ಸೇವುಣರ ಕಾಲದವರೆಗೆ ಪ್ರಮುಖ ವಿದ್ಯಾಕೇಂದ್ರವಾಗಿ, ಅಗ್ರಹಾರವಾಗಿ ಮುಂದುವರಿದುಕೊಂಡು ಬಂದಿದ್ದು ಕಂಡುಬರುತ್ತದೆ.

ಆದಿಲ್‌ಶಾಹಿಗಳ ಆಡಳಿತಕ್ಕೆ ಈ ಗ್ರಾಮವು ಒಳಪಟ್ಟಾಗ ಇಲ್ಲಿ ಎರಡನೇ ಇಬ್ರಾಹಿಂ ಆದಿಲ್‌ಶಾಹನು ಗ್ರಾಮದ ಉತ್ತರಕ್ಕೆ ಇರುವ ಶಿವಯೋಗೇಶ್ವರ ದೇವಾಲಯುವನ್ನು ಜೀರ್ಣೋದ್ಧಾರಗೊಳಿಸಿದ್ದಾನೆಂದು ಹೇಳಲಾಗುತ್ತದೆ. ಮೂಲತಃ ಇದು ಕ್ರಿ.ಶ. ೧೨ನೆಯ ಶತಮಾನದ ಕಲ್ಯಾಣ ಚಾಳುಕ್ಯ ದೇವಾಲಯವಾಗಿದ್ದು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಜೀರ್ಣೋದ್ಧಾರಗೊಂಡ ನಂತರ ಮೂಲ ಅವಶೇಷಗಳು ದೇವಾಲಯದ ಪ್ರಾಕಾರ ಮಂಟಪ ಮತ್ತು ದೇವಾಲಯದ ಆವರಣದಲ್ಲಿ ಹರಡಿಕೊಂಡಿವೆ. ಸು. ೧೨ನೆಯ ಶತಮಾನಕ್ಕೆ ಸೇರಿದ ಶಿವಯೋಗೀಶ್ವರ ಎಂದು ಕರೆಯಲ್ಪಡುವ ಇನ್ನೊಂದು ದೇವಾಲಯ ಗ್ರಾಮದ ಮಧ್ಯದಲ್ಲಿದೆ. ಸು. ೧೫ನೆಯ ಶತಮಾನಕ್ಕೆ ಸೇರಿದ ರಾಮಲಿಂಗೇಶ್ವರ ದೇವಾಲಯಗಳು ಗ್ರಾಮದಲ್ಲಿ ಕಂಡುಬರುತ್ತವೆ. ಕ್ರಿ.ಶ. ೧೬೭೯ರಲ್ಲಿ ಔರಂಗಜೇಬನ ಸೈನ್ಯಾಧಿಕಾರಿ ದಿಲೇರಖಾನನ ನೇತೃತ್ವದಲ್ಲಿ ವಿಜಾಪುರ ಕೋಟೆಯ ಮೇಲೆ ದಾಳಿ ಮಾಡಲು ಹೋಗುತ್ತಿರುವಾಗ ಸಾಲೋಟಗಿ ಮತ್ತು ಕಾಸೇಗಾಂವಗಳನ್ನು ಲೂಟಿ ಮಾಡಿ ಅಲ್ಲಿಯ ಜನರನ್ನು ಹೊಡೆದು ಆ ಗ್ರಾಮಗಳನ್ನು ವಶಪಡಿಸಿಕೊಂಡರು ಎಂದು ತಿಳಿದುಬರುತ್ತದೆ.[೨೦೭]

ಗ್ರಾಮದಲ್ಲಿ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾದ ಕೋಟೆ ಇದ್ದದ್ದು ಕಂಡುಬರುತ್ತದೆ. ಆದರೆ ಇಂದು ಸಂಪೂರ್ಣವಾಗಿ ನಾಶ ಹೊಂದಿ ಉತ್ತರಾಭಿಮುಖವಾಗಿರುವ ಮುಖ್ಯದ್ವಾರ ಮತ್ತು ದ್ವಾರದ ಬಲಭಾಗಕ್ಕೆ ಅನತಿ ದೂರದಲ್ಲಿ ಅಲ್ಪ ಸ್ವಲ್ಪ ಕೋಟೆಗೋಡೆ ಉಳಿದುಕೊಂಡಿದೆ. ಈ ಕೋಟೆಗೋಡೆಯು ಕೂಡಾ ಶಿಥಿಲಾವಸ್ಥೆಯಲ್ಲಿದ್ದು ಅಲ್ಪಾವಧಿಯಲ್ಲಿ ಕಾಣದಾಗುತ್ತದೆ. ಈ ಕೋಟೆಯ ಕಲ್ಲು ಮತ್ತು ಮಣ್ಣನ್ನು ಸ್ಥಳೀಯರು ತಮ್ಮ ಮನೆಗಳ ನಿರ್ಮಾಣಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಈ ಗ್ರಾಮದಲ್ಲಿ ಕೋಟೆ ಇದ್ದುದರ ಬಗ್ಗೆ ಆಧಾರವಾಗಿ ಉಳಿದುಬಂದಿರುವುದು ಕೋಟೆಯ ಮುಖ್ಯದ್ವಾರ. ಇದು ಕಮಾನಾಕೃತಿಯಲ್ಲಿದ್ದು ಇದು ೩೦ ಅಡಿ ಎತ್ತರ, ೧೬ ಅಡಿ ಅಗಲವಾಗಿದೆ. ದ್ವಾರದ ಪ್ರವೇಶದಲ್ಲಿ ಎರಡು ಭಾಗದಲ್ಲಿ ಕಮಾನಾಕೃತಿಯಲ್ಲಿ ಸೈನಿಕರ ಕೊಠಡಿಗಳಿವೆ. ದ್ವಾರದ ಮೇಲ್ಭಾಗವು ಸಂಪೂರ್ಣವಾಗಿ ಸ್ಥಳೀಯರಿಂದ ಜೀರ್ಣೋದ್ಧಾರ ಗೊಂಡಿರುವುದರಿಂದ ಉಳಿದ ಲಕ್ಷಣಗಳು ಕಾಣಸಿಗುವುದಿಲ್ಲ. ಈ ಸೈನಿಕರ ಕೊಠಡಿಗಳ ಮೇಲೆ ಇನ್ನೊಂದು ಮಹಡಿ ಇದ್ದು ಅಲ್ಲಿಯೂ ಎರಡೂ ಬದಿಯಲ್ಲಿ ಕೊಠಡಿಗಳನ್ನು ನಿರ್ಮಿಸಿದ್ದಾರೆ. ದ್ವಾರದ ಮೇಲೆ ಹತ್ತಲು ಕೋಟೆಗೋಡೆಯ ಮೇಲಿನ ಅಟ್ಟಾಲಕದ(ಈ ಗೋಡೆ ಬಿದ್ದಿದೆ.) ಸಮಾನಾಂತರವಾಗಿ ಮೆಟ್ಟಿಲುಗಳಿವೆ. ದ್ವಾರದ ಮುಂಭಾಗದಲ್ಲಿ ಅಕ್ಕಪಕ್ಕದಲ್ಲಿ ಎರಡು ಆನೆಯ ಶಿಲ್ಪಗಳು, ಎರಡು ವೀರಗಲ್ಲುಗಳು, ಆರು ಸಾಲುಗಳ ತುಂಡುಶಾಸನ ಕಂಡುಬರುತ್ತವೆ. ಕೋಟೆಯ ದ್ವಾರದ ಎದುರಾಗಿ ಕಲ್ಯಾಣ ಚಾಳುಕ್ಯ ಶೈಲಿಯ ದ್ವಾರಬಂಧ ಮತ್ತು ಕಂಬಗಳ ಅವಶೇಷಗಳನ್ನು ಬಳಸಿಕೊಂಡು ನಿರ್ಮಿಸಿದ ಆಂಜನೇಯ ದೇವಸ್ಥಾನವಿದೆ.

ಹಲಸಂಗಿ

ಜಿಲ್ಲಾಕೇಂದ್ರವಾದ ವಿಜಾಪುರದಿಂದ ಉತ್ತರಕ್ಕೆ ೪೧ ಕಿ.ಮೀ. ತಾಲೂಕುಕೇಂದ್ರವಾದ ಇಂಡಿಯಿಂದ ಪಶ್ಚಿಮಕ್ಕೆ ೧೨ ಕಿ.ಮೀ. ದೂರದಲ್ಲಿ ಇರುವ ಹಲಸಂಗಿ ಗ್ರಾಮವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ. "ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುವವರು ಹಲಸಂಗಿ ಹೆಸರನ್ನು ಮರೆಯುವಂತಿಲ್ಲ. ಕನ್ನಡ ನುಡಿಯ ನವೋದಯಕ್ಕೆ ಕಾರಣವಾದ ಕೆಲವೇ ಕೇಂದ್ರಗಳಲ್ಲಿ ಅದೊಂದು" ಎಂದು ಅದರ ಮೇಲ್ಮೆಯನ್ನು ಸಿದ್ಧಯ್ಯ ಪುರಾಣಿಕರು ಎತ್ತಿತೋರಿಸಿದ್ದಾರೆ. ಜಾನಪದ ಸಾಹಿತ್ಯ, ಅದರಲ್ಲೂ ಲಾವಣಿ ಸಾಹಿತ್ಯಕ್ಕೆ ಹಲಸಂಗಿ ಕೊಡುಗೆ ಅಪಾರವಾದದ್ದು. ಹಲಸಂಗಿ ಗೆಳೆಯರು ಲಾವಣಿಗಳ ಶ್ರೇಷ್ಠತೆಯನ್ನು ಅಭಿವ್ಯಕ್ತಗೊಳಿಸಿ ನಮ್ಮ ದೇಶಿಯ ಜಾನಪದದ ಜ್ಞಾನಪರಂಪರೆಯನ್ನು ಮತ್ತಷ್ಟು ವಿಸ್ತಾರಗೊಳಿಸಿದ್ದಾರೆ. ಅಲ್ಲದೆ ಇಲ್ಲಿಯೇ ಹುಟ್ಟಿ ಬೆಳೆದ ಮಧುರಚೆನ್ನರು ಹಲಸಂಗಿ ಹೆಸರನ್ನು ಕನ್ನಡ ಸಾಹಿತ್ಯದಲ್ಲಿ ಸ್ಥಿರಸ್ಥಾಯಿಯಾಗುವಂತೆ ಮಾಡಿದ್ದಾರೆ.

ತರ್ದವಾಡಿ ಸಾಸಿರದ ಆಡಳಿತದ ಉಪವಿಭಾಗವಾದ 'ಮೊವತ್ತಾರುಂಬಾಡ'ದಲ್ಲಿ ಹಲಸಂಗಿ ಗ್ರಾಮವು ಒಳಗೊಂಡಿತ್ತು. ಎಂಬುದು ಕ್ರಿ.ಶ. ೧೧೬೮ರ ತೃಟಿತ ಶಾಸನದಿಂದ ತಿಳಿದು ಬರುತ್ತದೆ.[೨೦೮] ಇದೇ ಶಾಸನವು ಶಿಲಾಹಾರ ವಂಶದ ಮಹಾಮಂಡಳೇಶ್ವರ ಚೌಂಡರಸನು ಸ್ವಯಂಭುದೇವರಿಗೆ

ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೆ ಕ್ರಿ.ಶ. ೧೩ನೇ ಶತಮಾನದ ಶಾಸನವು ಕೂಡ ಗಂಗಯ ಮತ್ತು ಹಲವರು ಸೇರಿ ಇದೇ ದೇವರಿಗೆ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.[೨೦೯] ಹೀಗಾಗಿ ಕಲ್ಯಾಣ ಚಾಳುಕ್ಯರ ಆಡಳಿತಾವಧಿಯಿಂದಲೇ ಈ ಗ್ರಾಮವು ಪ್ರಾಮುಖ್ಯತೆಯನ್ನು ಪಡೆದಿತ್ತೆಂದು ಹೇಳಬಹುದು.

ಮಧುರಚೆನ್ನರು ಗ್ರಾಮದ ಶ್ರೀ ವೆಂಕಟೇಶ ಬಳವಂತ ಕುಲಕರ್ಣಿ ಅವರ ಹತ್ತಿರ ಇದ್ದ ಹಳೇ ಕಾಗದದಲ್ಲಿನ ಹಲಸಂಗಿ ಇತಿಹಾಸವನ್ನು ೧೯೪೪ರಲ್ಲಿ ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದು ಇಂತಿದೆ. ಕ್ರಿ.ಶ. ೧೩೯೭ರಲ್ಲಿ ದಿಲ್ಲಿ ಬಾದಶಾಹನ ಆಜ್ಞೆಯಂತೆ ಸನ್ ೮೦೦ ಫಸಲಿನಲ್ಲಿ(ಕ್ರಿ.ಶ. ೧೩೯೭) ಖಾಜೀಜಹಾನ್ ಇಲ್ಲಿನ ಕೋಟೆ ಕಟ್ಟಿಸಿ ದಂಡಿನ ಠಾಣ್ಯವಾಗಿಸಿದ. ಅದೇ ಖಾಜೀ ಜಹಾನ ಸರದಾರನು ವಿಜಾಪುರಕ್ಕೆ ಹೋಗಿ ಅಲ್ಲಿಯೂ ಕೋಟೆ ಕಟ್ಟಿಸಿ ರಾಜ್ಯಕಾರಭಾರ ನಿರ್ವಹಿಸಿದನು ಎಂದು ಉಲ್ಲೇಖಿಸಲಾಗಿದೆ. ಅವನ ನಂತರ ಎರಡರಿಂದ ನಾಲ್ಕು ತಲೆಮಾರಿನವರೆಗೆ ಅವನ ವಂಶದವರೇ ರಾಜ್ಯಾಧಿಕಾರ ಮಾಡಿದರು ಎಂದು ತಿಳಿಸಲಾಗಿದೆ.[೨೧೦] ಬಹಮನಿ ಸುಲ್ತಾನ ಎರಡನೇ ಅಲ್ಲಾವುದ್ದೀನ್ ಅಹಮದ್(ಕ್ರಿ.ಶ. ೧೪೩೬–೧೪೫೮) ಕಾಲಾವಧಿಯ ಶಾಸನ ಹಲಸಂಗಿಯಿಂದ ವರದಿಯಾಗಿದ್ದು. ಇದು ಸುಲ್ತಾನನ ಗಡಿಯನ್ನು ನಿರ್ದೇಶಿಸುವ ಗಡಿಬಂಧ ಶಾಸನವಾಗಿದೆ.[೨೧೧] ಹಲಸಂಗಿಯು ಬಹಮನಿ ಸುಲ್ತಾನರ ಕಾಲದಲ್ಲಿಯೂ ಪ್ರಾಮುಖ್ಯ ಪಡೆದ ಗ್ರಾಮವಾಗಿತ್ತು ಎಂದು ಅಭಿಪ್ರಾಯಿಸಬಹುದು. ನಂತರ ಆದಿಲ್‌ಶಾಹಿಗಳ ಆಡಳಿತಕ್ಕೆ ಹಲಸಂಗಿ ಒಳಪಡುತ್ತದೆಂದು ತಿಳಿದುಬರುತ್ತದೆ. ಕ್ರಿ.ಶ. ೧೫೫೩ರಲ್ಲಿ ಅಲಿ ಆದಿಲ್‌ಶಾಹನು ವಿಜಯನಗರದ ಮೇಲೆ ವಿಜಯ ಸಾಧಿಸಿ ಬಂದ ನಂತರ ತನ್ನ ವಜೀರನಿಗೆ ಜಹಗೀರು ಹಾಕಿಕೊಟ್ಟನು. ಇದಾದ ಮೂರು ವರ್ಷಗಳ ನಂತರ ಕ್ರಿ.ಶ. ೧೫೫೬ರಲ್ಲಿ ಊರಿನ ಪೂರ್ವಕ್ಕೆ ಕೋಟೆಯನ್ನು ಕಟ್ಟಿಸಿದನು ಮತ್ತು ಇದರ ಒಳಗೆ ನರಸೂಬಾ ದೇವಾಲಯವಿದೆ ಎಂದು ಉಲ್ಲೇಖವಿದೆ.[೨೧೨] ಹಲಸಂಗಿಯಲ್ಲಿಯೇ ಇರುವ ದಾಖಲೆಯ ಪ್ರಕಾರ ಕ್ರಿ.ಶ. ೧೩೯೭ರಲ್ಲಿಯೇ ಇಲ್ಲಿ ಕೋಟೆಯನ್ನು ಕಟ್ಟಲಾಯಿತು ಎಂದು ಹೇಳಲಾಗಿದೆ. ಹೀಗಾಗಿ ಆದಿಲ್‌ಶಾಹಿಗಳ ಕಾಲದಲ್ಲಿ ಕೋಟೆಯು ಜೀರ್ಣೋದ್ಧಾರವಾಗಿರಬಹುದು. ಒಳಕೋಟೆ ಪ್ರತ್ಯೇಕವಾಗಿದ್ದು ಅಲ್ಲಿ ಎತ್ತರವಾದ ಕಟ್ಟೆಯ ಮೇಲೆ ನರಸಿಂಹನ ಶಿಲ್ಪವಿದೆ. ಸ್ಥಳೀಯರು ಇಲ್ಲಿ ಮೊದಲು ದೇವಾಲಯವಿತ್ತು ಎಂದು ಹೇಳುತ್ತಾರೆ. ಹೀಗಾಗಿ ಹಲಸಂಗಿಯಲ್ಲಿರುವ ಒಳಕೋಟೆಯು ಆದಿಲ್‌ಶಾಹಿಗಳ ಕಾಲದಲ್ಲಿ, ಹೊರಕೋಟೆಯು ದೆಹಲಿ ಸುಲ್ತಾನರ ಆಡಳಿತಾವಧಿಯಲ್ಲಿ ನಿರ್ಮಾಣವಾಗಿರಬಹುದು ಎಂದು ಅಭಿಪ್ರಾಯಪಡಬಹುದು. ಇದೇ ವಜೀರನು ಗ್ರಾಮದ ಹೊರಗೆ ಎರಡು ಗುಮ್ಮಟಗಳನ್ನು ಕ್ರಿ.ಶ. ೧೫೬೦ರಲ್ಲಿ ನಿರ್ಮಿಸಿದ್ದಾನೆ. ಒಂದು ತನಗೋಸ್ಕರ, ಇನ್ನೊಂದು ಧಾರ್ಮಿಕ ಗುರುವಾದ ದಾದೆಸಾಹಿಬ್ ಅವರಿಗಾಗಿ.

ಸಿಕಂದರ್ ಆದಿಲ್‌ಶಾಹನ ಕಾಲಾವಧಿಯಲ್ಲಿ ಹಲಸಂಗಿಯನ್ನು ಔರಂಗಜೇಬನು ವಶಪಡಿಸಿಕೊಳ್ಳುತ್ತಾನೆ. ಕ್ರಿ.ಶ. ೧೬೭೯ರಲ್ಲಿ ಔರಂಗಜೇಬನ ಸೈನ್ಯಾಧಿಕಾರಿ ದಿಲೇರಖಾನನು ವಿಜಾಪುರದ

ಮೇಲೆ ದಾಳಿ ಮಾಡಲು ಬಂದಾಗ ತನ್ನ ಸೈನ್ಯಕ್ಕೆ ಆಹಾರಸಾಮಗ್ರಿಗಳು ಬರುವ ಮಾರ್ಗವನ್ನು ಮುಕ್ತವಾಗಿಡಲು, ಧೂಳಖೇಡದಲ್ಲಿಯೇ ಪಕ್ಕಾ ವ್ಯವಸ್ಥೆ ಮಾಡಿ ದಿನಾಂಕ ೧೯ ಶಾಅಬನ್(೧೭ ಸೆಪ್ಟೆಂಬರ್ ೧೬೮೯)ರಂದು ಅಲ್ಲಿಂದ ಕೋಚ್(ಮುಂದೆ ನಡೆದು) ಮಾಡಿ ಹಲಸಂಗಿಯ ಮುಕ್ಕಾಮಿಗೆ ಬಂದನು. ದಿನಾಂಕ ೨೨ ರಂದು(೨೦ ಸೆಪ್ಟೆಂಬರ್ ೧೬೮೯) ಅಲ್ಲಿಯೇ ಮುಕ್ಕಾಮು ಮಾಡಿ ಅಲ್ಲಿಯ ಕೋಟೆಯನ್ನು ದುರಸ್ತಿಮಾಡಿ ಆಹಾರಸಾಮಗ್ರಿಗಳು ಹೋಗಿ ಬರಲು ಅಲ್ಲೊಂದು ಠಾಣೆಯನ್ನು ಮಾಡಿದನು. ದಿನಾಂಕ ೧೧ ರಮಜಾನ(೦೭ ಅಕ್ಟೋಬರ್ ೧೬೮೯)ರಂದು ಬಮ್ಮನಹಳ್ಳಿಗೆ ಬಂದು ಉಳಿದುಕೊಂಡನು ಎಂಬುದು ತಿಳಿದುಬರುತ್ತದೆ.[೨೧೩] ಆದಿಲ್‌ಶಾಹಿಗಳು ಪತನಗೊಂಡ ಮೇಲೆ ನಂತರ ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ನಿಜಾಮ್-ಉಲ್-ಮುಲ್ಕ ಅಧೀನಕ್ಕೆ ಈ ಪ್ರದೇಶ ಒಳಪಡುತ್ತದೆ. ಮುಂದೆ ಇವನ ಮಗ ನಿಜಾಮ್ ಅಲಿ ಎಂಬುವವನ ಸ್ವಾಧೀನಕ್ಕೂ ಒಳಪಟ್ಟಿರುತ್ತದೆ.[೨೧೪] ಕ್ರಿ.ಶ. ೧೭೫೨ರಲ್ಲಿ ನಿಜಾಮನು ಹಲಸಂಗಿಯ ಜಾಗೀರನ್ನು ಪೊಗದಿಯಾಗಿ ಉದಾಜಿ ಚವಾಣ ಹಿಮ್ಮತಬಹಾದುರನಿಗೆ ನೀಡುತ್ತಾನೆ.[೨೧೫] ಇದೇ ವೇಳೆಗೆ ಮುಸಲ್ಮಾನರ ಪ್ರಬಲಪ್ರತಿ ಸ್ಪರ್ಧಿಯಾಗಿ ಬೆಳೆದ ಮರಾಠರ ಆಡಳಿತಕ್ಕೆ ಕ್ರಿ.ಶ. ೧೭೬೦ರ ನಂತರ ಒಳಪಡುತ್ತದೆ. ಕ್ರಿ.ಶ. ೧೭೭೦ರವರೆಗೆ ಒಮ್ಮೆ ಮರಾಠರ ಅಧೀನದಲ್ಲಿ ಮತ್ತೊಮ್ಮೆ ಮುಸ್ಲಿಮರ ಆಡಳಿತಕ್ಕೆ ಒಳಪಡುತ್ತದೆ. ಅದು ಮೊದಲು ಸ್ವಲ್ಪ ದಿವಸ ಸಾತಾರೆ ಸರದಾರ ಚವ್ಹಾಣರ ಕಡೆಗೂ ನಂತರ ಕೆಲದಿನ ಪೇಶ್ವೆಯವರ ಅಧೀನಕ್ಕೆ ಒಳಪಡುತ್ತದೆ. ಇದು ಮರಾಠರ ಆಡಳಿತಾವಧಿಯಲ್ಲಿ ವಿಜಾಪುರ ಸರಕಾರದ ಒಂದು ಪ್ರಮುಖ ಕಂದಾಯ ವಿಭಾಗವಾಗಿತ್ತು. ಕ್ರಿ.ಶ. ೧೮೧೮ರಲ್ಲಿ ಬ್ರಿಟಿಷರು ಮರಾಠರನ್ನು ಸಂಪೂರ್ಣವಾಗಿ ಸೋಲಿಸಿದ ಮೇಲೆ ಇದು ಬ್ರಿಟಿಷರ ಅಧೀನಕ್ಕೆ ಬಂದಿತು. ನಂತರ ಇದು ಸ್ವತಂತ್ರ ಸೊಲ್ಲಾಪುರ ಕಲೆಕ್ಟರೇಟ್ ರಚನೆಯಾದ ಮೇಲೆ ಈ ಕಲೆಕ್ಟರೇಟ್‌ಗೆ ಒಳಪಟ್ಟಿತು.[೨೧೬]

ಹೀಗೆ ದೆಹಲಿ ಸುಲ್ತಾನರಿಂದ ಹಿಡಿದು ಬಹಮನಿ, ಆದಿಲ್‌ಶಾಹಿ, ಮೊಗಲರು, ನಿಜಾಮ್‌ಶಾಹಿ, ಮರಾಠರು ಮತ್ತು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿರುವುದು ಕಂಡುಬರುತ್ತದೆ. ಮುಸ್ಲಿಮ ಆಡಳಿತಕ್ಕೆ ಒಳಪಟ್ಟ ನಂತರ ನಿರ್ಮಾಣವಾದ ಕೋಟೆ, ಗುಮ್ಮಟ, ಬಾವಿಗಳನ್ನು ಹಾಗೂ ಕ್ರಿ.ಶ. ೧೪೩೫ ರಿಂದ ೧೪೫೮ರ ಕಾಲಾವಧಿಯ ಅನೇಕ ಶಾಸನಗಳು ಈ ಗ್ರಾಮದಲ್ಲಿ ಕಂಡುಬಂದಿದ್ದು ಪ್ರಮುಖ ಆಡಳಿತ ಕೇಂದ್ರವಾಗಿ ಬೆಳೆದಿತ್ತು ಎಂದು ಹೇಳಬಹುದು.

ಸ್ಥಳನಾಮ

"ದಿಲ್ಲಿ ಬಾದಶಹನ ಸೈನ್ಯಾಧಿಕಾರಿ ಖಾಜಿಜಹಾನ್ ಹಲಸಂಗಿಗೆ ಬಂದಾಗ ಅಲ್ಲಿ ಸಂಗಿ ಎಂಬುವ ಕುರುಬರ ಹೆಣ್ಣುಮಗಳು ಕುರಿಹಟ್ಟಿ ಹಾಕಿಕೊಂಡು ಇದ್ದಳು. ಈ ಹಟ್ಟಿಯ ಬಳಿ ವಸತಿ ಮಾಡಲಿಕ್ಕೆ ಸರದಾರನು ಹೇಳಿದನು. ಅವನು ಹಲಸಂಗಿಯಲ್ಲಿ ಸನ್ ೮೦೦ರ ಫಸಲಿನಲ್ಲಿ ಕಿಲ್ಲೆಕಟ್ಟಿ ಇರೋದು ಮಾಡಿದನು. ಕಿಲ್ಲೆಕಟ್ಟಿದ ಜಾಗೆಯಲ್ಲಿ ಸಂಗಿ ಎಂಬುವಾಕಿ ಹಟ್ಟಿ ಹಾಕಿಕೊಂಡು

ಇದ್ದಳು. ಅದರ ದಶಿಯಿಂದ ಆಕೀ ಹೆಸರಲ್ಲೆ ಹಲ್ಸಂಗಿ ಅಂತ ಹೆಸರು ಇಟ್ಟರು ಮತ್ತು ಸದರಿ ದಿವಸದಿಂದ ಹಿಡಿದು ಹಲಸಂಗಿ ಅಂತ ಕಾಗದ ಪತ್ರದಲ್ಲಿ ಬರೀತ ಬರುತ್ತಾರೆ". [೨೧೭] ಹೀಗೆ ಹಲಸಂಗಿ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಇನ್ನೊಂದು ಹೇಳಿಕೆಯಂತೆ ಬಿಸಿಲು ಬೇಗೆಯಲ್ಲಿ ಬಂದ ಆದಿಲ್‌ಶಾಹಿ ಕಾಲದ ಸರದಾರನೊಬ್ಬನಿಗೆ ತಣ್ಣೀರನ್ನು ಕೊಟ್ಟ ಸಂಗವ್ವನ ಮುಖದಲ್ಲಿ ಹಲ್ಲು ಒಡೆದು ಕಾಣಿಸಿದ್ದರಿಂದ ಈ ಊರಿಗೆ 'ಹಲಸಂಗಿ' ಎಂಬ ಹೆಸರು ಬಂದಿತು ಎಂದು ಸ್ಥಳೀಯವಾಗಿ ಹೇಳುತ್ತಾರೆ. ಕಲ್ಯಾಣ ಚಾಳುಕ್ಯರ ಅವಧಿಯಿಂದಲೇ ಈ ಗ್ರಾಮವು ಬೆಳಕಿಗೆ ಬಂದಿದೆ. ಹೀಗಾಗಿ 'ಹಲಸಂಗಿ' ಎಂಬ ಹೆಸರು ಕೂಡ ಚಾಳುಕ್ಯರ ಅವಧಿಯಲ್ಲಿ ಬಂದಿರುವ ಸಾಧ್ಯತೆಗಳುಂಟು.

ಮಧುರಚೆನ್ನರಿದ್ದಾಗ ಆ ಗ್ರಾಮವನ್ನು ಸಂದರ್ಶಿಸಿದ ಕೆಲವು ಸಾಹಿತಿಗಳು ಅದರ ವೈಶಿಷ್ಟ್ಯಗಳನ್ನು ತಮ್ಮ ಲೇಖನಗಳ ಮೂಲಕ ವ್ಯಕ್ತಪಡಿಸಿದ್ದಾರೆ. "ಹಲಸಂಗಿ ಒಂದು ಕೊಂಪೆಹಳ್ಳಿ, ಆದರೆ ಅಲ್ಲಿಯ ನವಿಲು ಕುಣಿತವನ್ನು ಕಂಡವರು ಅಖಿಲ ಕರ್ನಾಟಕದ ದಶದಿಕ್ಕಿನ ವಿಚಾರವಂತರು ಮಧುರಚೆನ್ನರಿರುವಷ್ಟು ಕಾಲ ಹಲಸಂಗಿ ಕನ್ನಡ ವಿಚಾರವಂತರಿಗೆ ಒಂದು ಯಾತ್ರಾಸ್ಥಳವಾಗಿತ್ತು" ಎಂದಿದ್ದಾರೆ. ದ.ಬಾ. ಕುಲಕರ್ಣಿಯವರು.

ಚಕ್ರಾಂತರು "ನಿಸರ್ಗದತ್ತ ಶಾಂತಿಯಲ್ಲಿ ನೆಲೆಸಿದ ಹಳ್ಳಿ!! ಹತ್ತಿರದಲ್ಲಿ ಹರಿಯುವ ಹಳ್ಳದ ನೀರಿನ ಜುಳುಜುಳು ನಿನಾದ, ನವಿಲುಗಳ ಕೇಕೆ ಹಲಸಂಗಿಯ ನಿಸರ್ಗ ಸೌಂದರ್ಯಕ್ಕೆ ಮೆರುಗು ಕೊಡುತ್ತವೆ. ಪ್ರೇಕ್ಷಕರನ್ನು ಮುಗ್ಧಗೊಳಿಸುತ್ತವೆ."

ಡಾ. ಶಿವರಾಮ ಕಾರಂತರು ಅದನ್ನು 'ನವಿಲೂರು' ಎಂದು ಬಣ್ಣಿಸಿದ್ದಾರೆ. "ಹಲಸಂಗಿ ಊರಿನ ನೆನಪಾದಾಗಲೆಲ್ಲ ಆ ಊರಿನ ನವಿಲುಗಳನ್ನು ನಾನೆಂದೂ ಮರೆಯಲಾರೆ. ಊರಿನ ಮಗ್ಗುಲಲ್ಲಿ ಹಳ್ಳವಿದೆ. ಅದರ ಬಳಿಯಲ್ಲೇ ಬೇವಿನ ಮರಗಳ ತೋಪಿದೆ. ಸಂಜೆ ನೂರಾರು ನವಿಲುಗಳು ಬಂದು ತೋಪಿನಲ್ಲಿ ಸೇರುತ್ತವೆ. ಅವುಗಳ ಕೇಕಾರವವೇ ಕೇಕಾರವ! ಒಮ್ಮೆ ನಾನು ಆ ಊರಿಗೆ ಹೋದಾಗ ಬಾನಿನಲ್ಲಿ ಕಾರ್ಮುಗಿಲುಗಳು ಕವಿದಿದ್ದು, ಆ ನವಿಲುಗಳು ಹುಚ್ಚುಕುಣಿತವನ್ನು ಪ್ರದರ್ಶಿಸಿದ ನೋಟವಂತೂ ನನ್ನ ಮನಸ್ಸನ್ನು ಮುಗ್ಧವನ್ನಾಗಿ ಮಾಡಿತ್ತು. ಅದೇ ನೆನಪಿನಿಂದ ಒಂದು ದಿನ 'ಮೇಘಮಯೂರ' ಎಂಬ ನೃತ್ಯ ಯೋಜನೆಯನ್ನು ಮಾಡಿದೆ" ಹೀಗೆ ಕಾರಂತರನ್ನು ಮುಗ್ಧಗೊಳಿಸಿ ನೃತ್ಯ ಯೋಜನೆಗೆ ತೊಡಗಿಸಿದ ಹಳ್ಳಿ ಬೇರೊಂದಿಲ್ಲ..[೨೧೮]

ಹೀಗೆ ಐತಿಹಾಸಿಕ ಮಹತ್ವವನ್ನು ಪಡೆದ ಹಲಸಂಗಿ ಗ್ರಾಮದ ಮುಂದೆ ದೊಡ್ಡ ಹಳ್ಳವಿದ್ದು ಪಶ್ಚಿಮದಿಂದ ಊರಿನ ಉತ್ತರಭಾಗವನ್ನು ಬಳಸಿಕೊಂಡು ಪೂರ್ವದ ಕಡೆ ಹರಿಯುತ್ತದೆ. ಹಳ್ಳದ ದಂಡೆಗುಂಟ ಹಾಗೂ ಊರಿನ ಆಂಜನೇಯ ದೇವಸ್ಥಾನ, ಚಾವಡಿಕಟ್ಟೆ ಹತ್ತಿರ ದೊಡ್ಡ ದೊಡ್ಡ ಹುಣಸೆ ಮತ್ತು ಬೇವಿನ ಮರಗಳೂ ಇಂದಿಗೂ ಕಂಡುಬರುತ್ತವೆ. ಇದರಿಂದಾಗಿ ಊರಿಗೆ ನೈಸರ್ಗಿಕವಾದ ಚೆಲುವು ಬಂದಿದೆ. ಗ್ರಾಮದ ಉತ್ತರಕ್ಕೆ ಮೂರು ಮೈಲಿ ಅಂತರದಲ್ಲಿ ಗಡಿ

ರೇಖೆಯಾಗಿ ಭೀಮಾನದಿಯು ಹರಿಯುತ್ತದೆ. ಕಪ್ಪುಮಣ್ಣಿನ ಭೂಮಿಯನ್ನು ಹೊಂದಿರುವ ಈ ಗ್ರಾಮದಲ್ಲಿ ನಿರ್ಮಿಸಿರುವ ಕೋಟೆಯು ಇಂದಿಗೂ ಅದರ ಸೌಂದರ್ಯವನ್ನು ಉಳಿಸಿಕೊಂಡು ಜೀರ್ಣ ಸ್ಥಿತಿಯಲ್ಲಿದೆ.

ದೆಹಲಿ ಸುಲ್ತಾನರ ಕಾಲದಲ್ಲಿ ನಿರ್ಮಾಣವಾದ ಕೋಟೆಗಳಲ್ಲಿ ಹಲಸಂಗಿ ಕೋಟೆಯು ಪ್ರಮುಖವಾಗಿದೆ. ಬಲಿಷ್ಠವಾಗಿ ನಿರ್ಮಿಸಲಾದ ಈ ಕೋಟೆಯು ಗಡಿಬಂಧ ಕೋಟೆಯಾಗಿದೆ. ಕ್ರಿ.ಶ. ೧೩೭೭ರ ಕಾಲದಲ್ಲಿ ನಿರ್ಮಿಸಲಾದ ಕೋಟೆಯು ಮೊದಲು ಗ್ರಾಮದ ಸುತ್ತಲೂ ನಿರ್ಮಿಸಿದ್ದು ಕಂಡುಬರುತ್ತದೆ. ನಯವಾಗಿ ಕೆತ್ತಿದ ಚೌಕಾಕಾರದ ಕಲ್ಲು, ಮಣ್ಣು ಮತ್ತು ಗಚ್ಚನ್ನು ಬಳಸಿಕೊಂಡು ನಿರ್ಮಿಸಲಾಗಿದ್ದು ನೋಡಲು ಆಕರ್ಷಕವಾಗಿದೆ. ಆದರೂ ಬಹುತೇಕ ಭಾಗ ಬಿದ್ದು ಹಾಳಾಗಿದೆ. ಹೊರಕೋಟೆ ದ್ವಾರಬಾಗಿಲು ಮತ್ತು ಅದಕ್ಕೆ ಹೊಂದಿಕೊಂಡ ಬಲಭಾಗದ ಕೊಟೆಗೋಡೆಯು ಒಳ ಕೋಟೆಯ ಗೋಡೆಗೆ ಸಂಧಿಸುವವರೆಗೆ ಮುಂದುವರಿದಿದ್ದು ಕಂಡುಬರುತ್ತದೆ. ಇದು ೦೫ ರಿಂದ ೦೮ ಅಡಿ ಎತ್ತರ ಮಾತ್ರ ಉಳಿದುಕೊಂಡಿದ್ದು ಅದರಲ್ಲಿ ಬಂದೂಕುರಂಧ್ರಗಳು ಇರುವುದನ್ನು ಕಾಣಬಹುದು. ಈ ಹೊರಕೋಟೆಯ ದ್ವಾರವು ಪೂರ್ವಾಭಿಮುಖವಾಗಿದ್ದು, ಕಮಾನು ಮಾದರಿಯಲ್ಲಿದ್ದು ನೋಡಲು ಆಕರ್ಷಕವಾಗಿದೆ. ಇದರ ಒಳಪ್ರವೇಶದ ಎರಡೂ ಬದಿಯಲ್ಲಿ ಸೈನಿಕರ ವಿಶ್ರಾಂತಿಗಾಗಿ ಅಂಕಣಗಳಿದ್ದು ಇಂದು ಅವುಗಳ ಜಗತಿ ಭಾಗ ಮಾತ್ರ ಉಳಿದುಕೊಂಡಿದೆ. ಈ ದ್ವಾರವು ಸುಮಾರು ೧೧.೫೫ ಅಡಿ ಅಗಲ, ೧೧.೨೨ ಅಡಿ ಎತ್ತರವನ್ನು ಹೊಂದಿದೆ. ಈ ದ್ವಾರವನ್ನು ಪ್ರವೇಶಿಸಿದ ಮೇಲೆ ನಮಗೆ ಆಧುನಿಕವಾಗಿ ನಿರ್ಮಾಣಗೊಂಡ ಲಕ್ಷ್ಮೀ, ವಿಠೋಬಾ ಮತ್ತು ಮಹಾದೇವ ದೇವಾಲಯಗಳು ಕಂಡುಬರುತ್ತವೆ. ಈ ಹೊರ ಕೋಟೆದ್ವಾರದ ಮುಂಭಾಗದಲ್ಲಿ ಆಂಜನೇಯ ದೇವಸ್ಥಾನವಿದ್ದು ಅದನ್ನು ಆಧುನಿಕವಾಗಿ ಪುನರ್ ನಿರ್ಮಿಸಲಾಗಿದೆ.

ಬಹುಶಃ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾದ ಒಳಕೋಟೆಯ ಮುಖ್ಯದ್ವಾರ ಉತ್ತರಾಭಿಮುಖವಾಗಿದ್ದು ಇಂದು ದ್ವಾರವು ಸಂಪೂರ್ಣವಾಗಿ ಅವನತಿ ಹೊಂದಿದೆ. ಒಳಕೋಟೆಯು ವಿಜಾಪುರದಲ್ಲಿ ನಿರ್ಮಾಣವಾದ ಕೋಟೆಗಿಂತ ಆಕರ್ಷಕವಾಗಿದ್ದು ನಯವಾಗಿ ಕೆತ್ತಿದ ಕಲ್ಲುಗಳನ್ನು ಮತ್ತು ಗಚ್ಚನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಕೋಟೆಗೋಡೆಯು ಸುಮಾರು ಮೂವತ್ತು ಅಡಿ ಎತ್ತರವಾಗಿದ್ದು ಕಟೆದ ಕಲ್ಲುಗಳ ಅಂಚನ್ನು ಸರಿಯಾಗಿ ಹೊಂದಿಸಿ ಸಂದುಗಳುಂಟಾಗದಂತೆ ಗೋಡೆಯನ್ನು ನಿರ್ಮಿಸಿದ್ದಾರೆ. ಗೋಡೆಯ ಭದ್ರತೆಯ ದೃಷ್ಟಿಯಿಂದ ಒಂದು ಸ್ತರದಿಂದ ಮತ್ತೊಂದು ಸ್ತರಕ್ಕೆ ಒಳಬಾಗಿದಂತೆ ಕಟ್ಟಿದ್ದಾರೆ. ಅದರ ಮೇಲೆ ಕೋಟೆತೆನೆಗಳು ಕಂಡುಬರುತ್ತವೆ. ಕೋಟೆಯ ಹೊರಭಾಗದಲ್ಲಿ ಎರಡು ಹಂತದಲ್ಲಿ ಬಂದೂಕುಕಿಂಡಿಗಳು ಕಂಡುಬರುತ್ತವೆ. ಕೈಪಿಡಿಗೋಡೆಯಿಂದ ತೆನೆಯ ಹಿಂದೆ ಅಟ್ಟಾಲಕದ ಮೇಲೆ ನಿಂತುಕೊಂಡು ಬಂದೂಕುಗಳಿಂದ ಶತ್ರುಗಳ ಮೇಲೆ ಆಕ್ರಮಣ ಮಾಡುವಂತೆ ಮಾಡಿದ್ದಾರೆ. ಈ ಬಂದೂಕು ಕಿಂಡಿಗಳು ೪೫೦, ೯೦೦ ಕೋನಾಕೃತಿಯಲ್ಲಿದ್ದು ದೂರ ಮತ್ತು ಸಮೀಪದ ಶತ್ರುಗಳ ಆಕ್ರಮಣದ ದೃಷ್ಟಿಕೋನವನ್ನು ಇಟ್ಟುಕೊಂಡು

ನಿರ್ಮಿಸಲಾಗಿದೆ. ಒಂದೇ ಕಿಂಡಿಯಿಂದ ಎಡ, ಮಧ್ಯ, ಬಲ ಭಾಗಕ್ಕೆ ಪ್ರಯೋಗಿಸುವಂತೆಯೂ ನಿರ್ಮಿಸಲಾಗಿದೆ. ಈ ಬಂದೂಕುಕಿಂಡಿಗಳು ಹೊರಭಾಗದಲ್ಲಿ ಅಡಿ ಎತ್ತರ, ೫ ರಿಂದ ೬ ಅಂಗುಲ ಅಗಲ, ಅಲ್ಲದೆ ೧ ಅಡಿ ಎತ್ತರದ ಕಿಂಡಿಗಳು ಕಂಡುಬರುತ್ತವೆ. ಬಂದೂಕು ಕಿಂಡಿಗಳ ಮೇಲೆ ಮತ್ತು ಕೋಟೆತೆನೆಯ ಕೆಳಭಾಗದಲ್ಲಿ ಕೋಟೆಗೋಡೆಗೆ ಅಲಂಕಾರಿಕವಾದ ಪಟ್ಟಿಯನ್ನು ನಿರ್ಮಿಸಿದ್ದಾರೆ. ತೆನೆಗಳು ೪X೬ ಅಡಿ ಎತ್ತರವಾಗಿದ್ದು ಕೋಟೆಯ ಅಲಂಕಾರಕ್ಕೆ ಮತ್ತಷ್ಟು ಕಾರಣವಾಗಿವೆ. ಇಂದು ಈ ತೆನೆಗಳು ವಾಯವ್ಯದ ಕೋಟೆಗೋಡೆ ಮೇಲೆ ಮಾತ್ರ ಕಂಡುಬರುತ್ತವೆ. ಕೋಟೆಗೋಡೆಯು ಅಲ್ಲಲ್ಲಿ ಸಂಪೂರ್ಣವಾಗಿ ಉಳಿದುಕೊಂಡಿದ್ದು ಕಂಡುಬಂದರೆ, ಕೆಲವು ಭಾಗ ಶಿಥಿಲಾವಸ್ಥೆಯಲ್ಲಿದೆ.

ಇಂದು ಕೋಟೆಗೋಡೆಯ ಒಳಭಾಗದಲ್ಲಿ ಗೋಡೆ ಮತ್ತು ಅಟ್ಟಾಲಕ ಭಾಗಗಳು ಸಂಪೂರ್ಣವಾಗಿ ಬಿದ್ದುಹೋಗಿದ್ದು ಗೋಡೆ ಹೊರಭಾಗ ಮಾತ್ರ ಗಟ್ಟಿಯಾಗಿ ಉಳಿದುಕೊಂಡಿದೆ. ಈ ಪಶ್ಚಿಮ ಭಾಗದಲ್ಲಿ ಕೋಟೆಗೋಡೆಗೆ ಹೊಂದಿಕೊಂಡು ದೇವಕೋಷ್ಠಕದ ಹಾಗೆ ನಿರ್ಮಿಸಿ ಅದರಲ್ಲಿ ನರಸಿಂಹ ಶಿಲ್ಪವನ್ನು ಇಡಲಾಗಿದೆ. ಈ ಕೋಟೆಯ ಹಿಂಭಾಗದಲ್ಲಿ ಕೋಟೆಗೋಡೆಗೆ ಹೊಂದಿಕೊಂಡು ಕ್ವಾಟೆಜಕ್ಕವ್ವನ ಚಿಕ್ಕ ಗುಡಿಯನ್ನು ನಿರ್ಮಿಸಲಾಗಿದೆ.

ಹಲಸಂಗಿ ಕೋಟೆಯಲ್ಲಿ ಬುರುಜುಗಳನ್ನು ಅಲಂಕಾರಿಕವಾಗಿ ನಿರ್ಮಿಸಲಾಗಿದೆ. ಇಂದು ಹೊರಕೋಟೆಗೆ ಹೊಂದಿಕೊಂಡು ಯಾವುದೇ ಬುರುಜುಗಳು ಕಂಡುಬರುವುದಿಲ್ಲ. ಒಳಕೋಟೆಗೆ ಹೊಂದಿಕೊಂಡಂತೆ ಚೌಕ, ಆಯತ ಮತ್ತು ವೃತ್ತಾಕಾರದಲ್ಲಿದ್ದು ಕೋಟೆಯ ಅಲಂಕಾರವನ್ನು ಮತ್ತಷ್ಟು ಇಮ್ಮಡಿಗೊಳ್ಳುವಂತೆ ಮಾಡಲಾಗಿದೆ. ಒಳಕೋಟೆಗೆ ಹೊಂದಿಕೊಂಡು ವಾಯವ್ಯ ಭಾಗದಲ್ಲಿ ಇರುವ ವೃತ್ತಾಕಾರದ ಬುರುಜು ನಂತರದ ಕಾಲಘಟ್ಟದಲ್ಲಿ ನಿರ್ಮಾಣವಾಗಿದ್ದು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಕೋಟೆಯ ಒಳಗಡೆ ಅಧಿಕಾರಿವರ್ಗ, ಸೈನಿಕರ ವಸತಿನೆಲೆಗಳ ಅವಶೇಷಗಳು ಕಂಡುಬರುತ್ತವೆ. ಕೋಟೆಯ ಒಳಗಡೆ ಮುಳ್ಳುಕಂಟಿಗಳು ಬೆಳೆದುಕೊಂಡು ವಿನಾಶದ ಅಂಚಿನಲ್ಲಿದೆ. ಈ ಕೋಟೆಗೆ ಹೊಂದಿಕೊಂಡು ದಕ್ಷಿಣಭಾಗದಲ್ಲಿ ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ನಿರ್ಮಾಣವಾದ ಬಾವಿ ಮತ್ತು ಪಶ್ಚಿಮಕ್ಕೆ ಗ್ರಾಮದ ಹೊರಗೆ ಒಂದು ಗುಮ್ಮಜ ಕಂಡುಬರುತ್ತದೆ.

ದೆಹಲಿ ಸುಲ್ತಾನರಿಂದ ಹಲಸಂಗಿ ಕೋಟೆಯ ನಿರ್ಮಾಣಕಾರ್ಯ ಪ್ರಾರಂಭವಾಗಿ ಅದು ಬಹಮನಿ, ಆದಿಲ್‌ಶಾಹಿ, ಮೊಗಲರು, ಹೈದರಾಬಾದ್‌ನ ನಿಜಾಮರ ಕಾಲದಲ್ಲಿ ಕೆಲವು ಮಾರ್ಪಾಟುಗಳೊಂದಿಗೆ ಜೀರ್ಣೋದ್ಧಾರಗೊಂಡಿತೆಂದು ಹೇಳಬಹುದು. ಇದೊಂದು ಗಡಿಬಂಧ ಕೋಟೆಯಾಗಿದ್ದರೂ ತುಂಬಾ ಆಕರ್ಷಕವಾಗಿ ನಿರ್ಮಿಸಲಾಗಿದೆ. ಆದರೆ ಕಾಲನ ತುಳಿತಕ್ಕೆ ಸಿಕ್ಕು ಅಲ್ಪಾವಧಿಯಲ್ಲಿಯೇ ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿದೆ. ಇದರ ರಕ್ಷಣೆ ಮಾಡುವುದು ಅತಿ ಅವಶ್ಯಕವಾಗಿ ಕಂಡುಬರುತ್ತದೆ.

ಕೋಟೆಗೆ ಬಲಿದಾನ

ನಾಡಜನರ ಹಿತರಕ್ಷಣೆಗಾಗಿ, ಊರ ಬಾವಿ, ಕೆರೆ ಒಡ್ಡು, ಕೋಟೆ ಕೊತ್ತಲಗಳನ್ನು ಕಟ್ಟಿಸುವಾಗ ಅಡ್ಡಿ–ಆತಂಕಗಳು ಬರುವುದು ಸಹಜ. ಅಂತಹ ಸಂದರ್ಭಗಳಲ್ಲಿ ಸಹಜವಾಗಿ ಮಾನವ ಪಾರಲೌಕಿಕ, ಅಂತರಾತ್ಮದ ಪರಾಮರ್ಶೆಗೆ ತೊಡಗುತ್ತಾನೆ. ದೈವೀಭಾವದೆಡೆಗೆ ಓಲುತ್ತಾನೆ. ಆಗ ಹಿರಿಯರ, ಅನುಭವಿಗಳ ಜೋಯಿಸರ ಮೊರೆ ಹೋದಾಗ, ಪಾರಂಪರಗತವಾಗಿ ರೂಢಿಯಲ್ಲಿರುವ 'ನರಬಲಿ' ಜೀವಂತವಾಗಿ ಮನುಷ್ಯನನ್ನು ಕಟ್ಟಡದಲ್ಲಿ ಇರಿಸಿ ಕಟ್ಟುವ ಸಂದರ್ಭಗಳು ಅನಿವಾರ್ಯವಾಗುತ್ತವೆ.[೨೯] ವೇದಗಳ ಕಾಲಕ್ಕಾಗಲೇ ನರಬಲಿ ಕೊಡುವ ಆಚರಣೆಯು ಭಾರತದಲ್ಲಿ ಕಂಡುಬರುತ್ತದೆ. ಅದರಲ್ಲಿ ಹೆಚ್ಚಾಗಿ ಗರ್ಭಿಣಿ ಮಹಿಳೆಯರೇ ಬಲಿಯಾಗಿರುವುದನ್ನು ಕಾಣಬಹುದು. ಇವು ನಮ್ಮ ಜನಪದರ ಸಂಪ್ರದಾಯ, ಆಚರಣೆ, ನಂಬಿಕೆಗಳಲ್ಲಿ ಹಾಸುಹೊಕ್ಕಾಗಿವೆ. ಬಲಿಯ ಉದ್ದೇಶವು ಜನೋಪಕಾರ ಕೆಲಸಕ್ಕೆ, ಒಂದನ್ನು ಹಾಳು ಮಾಡುವುದರಿಂದ ಇನ್ನೊಂದನ್ನು ಉಳಿಸಿಕೊಳ್ಳುವ ತ್ಯಾಗದ ಪ್ರತೀಕವಾಗಿರುತ್ತದೆ.

ಕರ್ನಾಟಕದ ಅನೇಕ ಭಾಗಗಳಲ್ಲಿ ಕೋಟೆಗೆ ಬಲಿಯಾಗಿರುವ ಪ್ರಸಂಗಗಳು ಅಲ್ಲಿಯ ಮೌಖಿಕ ಆಕರ, ಕಾವ್ಯ, ಸಾಹಿತ್ಯ, ಜಾನಪದ ಹಾಡುಗಳಿಂದ ವ್ಯಕ್ತವಾಗಿರುವುದನ್ನು ಕಾಣಬಹುದು. ಇದೇ ರೀತಿ ಹಲಸಂಗಿ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ನರಬಲಿ ಕೊಟ್ಟಿರುವ ಪ್ರಸಂಗವು[೩೦] ಇನ್ನೂ ಜನಮನದಲ್ಲಿ ಉಳಿದುಕೊಂಡು ಬಂದಿದೆ. ಹಲಸಂಗಿ ಊರಿಗೆ ಚಚ್ಚೌಕು ಆಕಾರದ ಕೋಟೆ ಕಟ್ಟಿಸಲು ಆದಿಲ್‌ಶಾಹಿ ಸರದಾರನು ಯೋಚಿಸಿದಾಗ ಅವನ ಕನಸಿನಲ್ಲಿ ಒಬ್ಬ ಮುದುಕ ಬಂದು ಆ ಕೋಟೆಯಲ್ಲಿ ಮೊದಲು ಒಳಮನಿ ಕಟ್ಟಿಸಿ, ಚೊಚ್ಚಿಲ ಬಸುರಿಯೊಬ್ಬಳನ್ನು ಅವಳ ಇಚ್ಛೆಯಿಂದಲೇ ಇರಿಸಬೇಕೆಂದು ಹೇಳುವನು. ಸರದಾರನು ಅಂತಹ ಹೆಣ್ಣುಮಗಳ ಶೋಧನೆಗೆ ಊರಿನಲ್ಲಿ ಡಂಗುರ ಸಾರಿದಾಗ ಮೊದಲು ಹಾರುವರ ಹೆಣ್ಣುಮಗಳು ಇರುವುದಾಗಿ ತಿಳಿದುಬರುವುದು. ಆದರೆ ಆಕೆಯಾಗಲಿ, ಆಕೆಯ ಮಾವನಾಗಲಿ ಈ ಕಾರ್ಯಕ್ಕೆ ಒಪ್ಪುವುದಿಲ್ಲ. ಇನ್ನೇನು ಮಾಡುವುದೆಂದು ಹಾಗೆಯೇ ಕೋಟೆ ಕಟ್ಟಿಸಲು ಹೋದರೆ ಕೋಟೆಗೋಡೆ ಮತ್ತೆ ಕುಸಿಯುವುದು. ಇದರಿಂದ ಸರದಾರನು ಚಿಂತೆಗೊಳಗಾಗುವನು. ಆಗ ಮಾದಿಗರ ಜಾತಿಯ ಜಕ್ಕವ್ವ ಚೊಚ್ಚಿಲ ಬಸುರಿ ಇರುವ ಸುದ್ದಿ ಆತನಿಗೆ ತಿಳಿಯುವುದು. ಜಕ್ಕವ್ವನ ಗಂಡ ಭೀಮಣ್ಣ, ಮಾವ ಮುದ್ದಣ್ಣ ಬಹಳ ಒಳ್ಳೆಯ ಮನುಷ್ಯನೆಂಬುದು ತಿಳಿದುಬರುವುದು. ಸರದಾರನು ಅವನನ್ನು ಕರೆಯಿಸಿ ವಿಷಯ ತಿಳಿಸಿದಾಗ ಸರದಾರನಿಗೆ ಅವನು ವಚನ ಕೊಡುವನಾದರೂ ದುಃಖಿತನಾಗುವನು. ಮುಖ ಸಪ್ಪಗೆ ಮಾಡಿಕೊಂಡು ಮನೆಗೆ ಬಂದಾಗ ಜಕ್ಕವ್ವ ಮಾವನ ಮುಖ ನೋಡಿ ಕಾರಣ ಕೇಳುವಳು. ಮಾವನಿಂದ ವಿಷಯ ತಿಳಿದುಕೊಂಡ ಆಕೆ ಸ್ವಸಂತೋಷದಿಂದ ಕೋಟೆಗೋಡೆಯ ಒಳಮನೆಗೆ ಹೋಗಲು ಸಿದ್ಧಳಾಗುವಳು. ಆಗಲೆ ಅವಳಿಗೆ ಭೂದೇವಿ ಕನಸಿನಲ್ಲಿ ಬಂದು ತನ್ನ ಹೊಟ್ಟೆಯಲ್ಲಿ ಬರಲು ಹೇಳಿದ್ದಳಂತೆ. ಅಂತೂ ಆಕೆಯನ್ನು ಕೋಟೆಗೋಡೆಯ ಒಳಮನೆಯಲ್ಲಿ

ಬಾಣಂತಿಗೆ ಬೇಕಾಗುವ ಎಲ್ಲ ವ್ಯವಸ್ಥೆಯನ್ನು ಮಾಡಿ ಜೀವಂತವಾಗಿ ಇರಿಸಿದರು. ಅವಳು ಅಲ್ಲಿಯೇ ಚೊಚ್ಚಲ ಮಗುವನ್ನು ಹೆತ್ತು ಜೋಗುಳ ಹಾಡಿದಳು. ಅವಳ ಧ್ವನಿಯನ್ನು ಆಗ ಜನರು ಕೇಳಿದರಂತೆ. ಮುಂದೆ ಸರದಾರನು ಅವಳಿಗಾಗಿ ಒಂದು ಗುಡಿ ಕಟ್ಟಿಸಿದನು. ಕೋಟೆಯ ಪಶ್ಚಿಮಭಾಗದಲ್ಲಿ ಕೋಟೆಗೋಡೆಗೆ ಹೊಂದಿಕೊಂಡಿರುವ ಗುಡಿಯನ್ನು ಇಂದಿಗೂ ಕಾಣಬಹುದು. ಅದನ್ನು ಕ್ವಾಟೆ ಜಕ್ಕವ್ವ ಎಂದು ಕರೆಯುತ್ತಾರೆ.

ಜಕ್ಕವ್ವ ಕೋಟೆಗೆ ಆಹುತಿಯಾದ ಮೇಲೆ ಜಕ್ಕವ್ವನ ಮನೆತನಕ್ಕೆ ಅರಸನು ಊರ ಗೌಡಕಿ ಮತ್ತು ೮೦ ಎಕರೆ ಜಮೀನನ್ನು ಅಣಚಿ, ಹಲಸಂಗಿ, ನಂದ್ಯಾಳ ಗ್ರಾಮಗಳಲ್ಲಿ ನೀಡಿದನು. ಜಕ್ಕವ್ವನ ವಂಶಸ್ಥರು ಈಗಲೂ ಈ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ ಎಂಬುದು ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ಹಿರಗಣ್ಣ ಭೀಮಶ ಮಾಲಗಾರ(ವ-೬೫) ಮಾಹಿತಿಯನ್ನು ನೀಡಿದರು. ಇಲ್ಲಿ ಪ್ರತಿವರ್ಷ ಮೇ ತಿಂಗಳಲ್ಲಿ ಕ್ವಾಟೆಜಕ್ಕವ್ವನ ಜಾತ್ರೆ ಮಾಡುತ್ತಾರೆ.

ಕೋಟೆಯ ನಾಶ

ಕೋಟೆಯು ಇಂದು ಜೀರ್ಣಾವಸ್ಥೆಯಲ್ಲಿದ್ದು ಅಲ್ಪಾವಧಿಯಲ್ಲಿಯೇ ಸಂಪೂರ್ಣವಾಗಿ ನಾಶ ಹೊಂದುತ್ತದೆ ಎಂಬುವದರಲ್ಲಿ ಸಂಶಯವೇ ಇಲ್ಲ. ಕೋಟೆಯ ಅವನತಿಯು ಸುಮಾರು ಮೂರು ಶತಮಾನಗಳಿಂದ ನಡೆದುಕೊಂಡು ಬಂದಿದೆ. ಮರಾಠರ ಆಡಳಿತಾವಧಿಯಲ್ಲಿ ಕ್ರಿ.ಶ. ೧೭೯೦ರ ಸುಮಾರಿಗೆ ಬಹುದೊಡ್ಡ ಬರ ಮೂರು ವರುಷಗಳವರೆಗೆ ಬೀಳುತ್ತದೆ. ಆಗ ಒಂದು ಅಗುಳು ಅನ್ನ ಸಹ ದೊರಕುವುದಿಲ್ಲ. ಆಗ ಊರಿನ ಜನರೆಲ್ಲಾ ಬೇರೆಡೆ ವಲಸೆ ಹೋದಾಗ ಕೋಟೆ ಮತ್ತು ಗ್ರಾಮವು ಪೂರ್ತಿ ಹಾಳು ಬೀಳುತ್ತದೆ. ಮುಂದೆ ಐದಾರು ವರ್ಷಗಳವರೆಗೆ ಪರಗಣೆಯಲ್ಲಿ ಕೆಲವು ತೆರಿಗೆಗಳ ನಿಯಮಗಳನ್ನು ಸಡಿಲಿಸಿ ಗ್ರಾಮದಲ್ಲಿ ಜನರು ಬಂದು ಪುನಃ ನೆಲಸುವಂತೆ ಮಾಡುತ್ತಾರೆ. ಇದಾದ ಏಳೆಂಟು ವರ್ಷಗಳಲ್ಲಿ ಮತ್ತೊಂದು ಬರ ಬಿದ್ದು ಜನರ ಸ್ಥಿತಿ ಚಿಂತಾಜನಕವಾಗುತ್ತದೆ. ಇದರ ಮಧ್ಯೆ ಕ್ರಿ.ಶ. ೧೮೦೧ರ ಸುಮಾರಿನಲ್ಲಿ ಬಿದ್ದ ಭಾರಿ ಮಳೆಯಿಂದ ಹಲಸಂಗಿ ಹಳ್ಳ ಮಹಾಪೂರ ಬಂದು ಅರ್ಧ ಊರು ಮುಳುಗಿ ಹೋಯಿತು. ಬ್ರಿಟಿಷರ ಕೈಗೆ ಹಲಸಂಗಿ ಒಳಪಟ್ಟಾಗ ಅವರ ಕಾಲದಲ್ಲಿ ಕೋಟೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಹೀಗಾಗಿ ಕೋಟೆಯು ಅವನತಿಯ ಕಡೆಗೆ ಸಾಗಿತು. ಅದು ಇಂದಿಗೂ ಮುಂದುವರಿದಿದೆ. ಸದ್ಯ ಕೋಟೆಯು ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು ಒಳಕೋಟೆಯ ಹೊರಭಾಗ ಮಾತ್ರ ಆಕರ್ಷಕವಾಗಿ ಕಾಣುತ್ತದೆ. ಆದರೆ ಒಳಭಾಗದಲ್ಲಿ ಕೋಟೆಗೋಡೆಯ ಕಲ್ಲುಗಳನ್ನು ಪೂರ್ತಿಯಾಗಿ ಕಿತ್ತುಹಾಕಿ ಅವುಗಳನ್ನು ಮನೆ ಕಟ್ಟಲು ತೆಗೆದುಕೊಳ್ಳುತ್ತಿದ್ದಾರೆ. ಕೋಟೆಯ ಒಳಗಿನ ಆವರಣದಲ್ಲಿ ಮುಳ್ಳುಕಂಟಿಗಳು ಬೆಳೆದು ಇಂದು ಊರಿನ ಶೌಚಾಲಯವಾಗಿ ಮಾರ್ಪಟ್ಟಂತಿದೆ. ಒಟ್ಟಾರೆ ಸ್ಥಳೀಯರಾಗಲಿ ಅಥವಾ ಪುರಾತತ್ವ ಇಲಾಖೆ ಈಕಡೆ ಲಕ್ಷ್ಯ ವಹಿಸಿದರೆ ಅಳಿದುಳಿದ ಕೋಟೆಯು ಮುಂದಿನ ಜನಾಂಗಕ್ಕೆ ಮಾದರಿಯಾಗಬಹುದು. ಇಲ್ಲದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಕೋಟೆಯು ಈ ಗ್ರಾಮದಲ್ಲಿ ಇತ್ತು ಎಂಬುದೇ ಕಾಣದಂತೆ ನಾಶ ಹೊಂದುವುದರಲ್ಲಿ ಸಂಶಯವಿಲ್ಲ.

ಹೊರ್ತಿ

ಹೊರ್ತಿಯು ಇಂಡಿಯಿಂದ ಪಶ್ಚಿಮಕ್ಕೆ ೪೫ ಕಿ.ಮೀ. ವಿಜಾಪುರದಿಂದ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೨[೨೨೧] ಮತ್ತು ಕ್ರಿ.ಶ. ೧೩ನೆಯ[೨೨೨] ಶತಮಾನದ ನಿಂಬಾಳದ ತೃಟಿತ ಶಾಸನಗಳು ಈ ಗ್ರಾಮವನ್ನು "ಹೊರತಿ" ಎಂದು ಉಲ್ಲೇಖಿಸುತ್ತವೆ. ಕಲ್ಯಾಣ ಚಾಳುಕ್ಯ ವಾಸ್ತುಶೈಲಿಯನ್ನು ಹೊಂದಿರುವ ಈಶ್ವರ ದೇವಾಲಯ ಗ್ರಾಮದ ದಕ್ಷಿಣಕ್ಕೆ ಕಂಡುಬರುತ್ತದೆ. ಗ್ರಾಮದ ದಕ್ಷಿಣಕ್ಕೆ ಬೆಟ್ಟದ ಮೇಲೆ ಸುಮಾರು ೧೮ನೆಯ ಶತಮಾನದಲ್ಲಿ ನಿರ್ಮಿಸಿರುವ ರೇವಣಸಿದ್ಧೇಶ್ವರ ದೇವಾಲಯವಿದೆ. ಹೀಗಾಗಿ ಕಲ್ಯಾಣ ಚಾಳುಕ್ಯರ ಅವಧಿಯಿಂದ ಗ್ರಾಮದ ಪ್ರಾಚೀನತೆ ಕಂಡುಬರುತ್ತದೆ. ಬ್ರಿಟಿಷರ ಆಡಳಿತಾವಧಿಯಲ್ಲಿ ಕ್ರಿ.ಶ. ೧೭೬೦ರಿಂದ ೧೮೪೮ರ ಅವಧಿಯಲ್ಲಿ ಇದು ವಿಜಾಪುರ ಸರಕಾರದ ಪ್ರಮುಖ ಪರಗಣವಾಗಿದ್ದು ೨೧ ಹಳ್ಳಿಗಳನ್ನು ಒಳಗೊಂಡಿತ್ತು.[೨೨೩]

ಗ್ರಾಮದಲ್ಲಿ ಕೋಟೆ ಇದ್ದಿರಬಹುದಾದ ಕುರುಹುಗಾಗಿ ಕೋಟೆಯ ಮುಖ್ಯ ದ್ವಾರ(ಅಗಸೆ ಬಾಗಿಲು ಎಂದು ಕರೆಯುತ್ತಾರೆ) ಮತ್ತು ಅದಕ್ಕೆ ಸಮಾನಾಂತರ ದೂರದಲ್ಲಿ ಪಶ್ಚಿಮಕ್ಕೆ ಒಂದು ವೃತ್ತಾಕಾರದ ಬುರುಜು ಕಂಡುಬರುತ್ತದೆ. ಕೋಟೆಯ ದ್ವಾರವು ಕಮಾನಾಕೃತಿಯಲ್ಲಿದ್ದು ಒಳಗಡೆ ಪ್ರವೇಶ ಮಾಡಿದಾಗ ಎರಡು ಬದಿ ಅಂಕಣಗಳು ಕಂಡುಬರುತ್ತವೆ. ಆದರೆ ಅವು ಇಂದು ಶಿಥಿಲಗೊಂಡಿವೆ. ಕೋಟೆಗೆ ೧೨ ಅಡಿ ಅಗಲ, ೧೪ ಅಡಿ ಎತ್ತರ ಪ್ರವೇಶದ್ವಾರವಿದೆ. ಇದಕ್ಕೆ ಸಮಾನಾಂತರ ದೂರದಲ್ಲಿ ೧೫ ಅಡಿ ಎತ್ತರ ಉಳಿದುಕೊಂಡಿರುವ ವೃತ್ತಾಕಾರದ ಬುರುಜು ಕಂಡುಬರುತ್ತದೆ. ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಬಳಸಿ ಇದನ್ನು ನಿರ್ಮಿಸಲಾಗಿದೆ. ಉಳಿದಂತೆ ಕೋಟೆಯ ಗೋಡೆ ಮತ್ತು ಇತರ ಭಾಗಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಈ ಕೋಟೆಯ ದ್ವಾರ ಹಾಗೂ ಬುರುಜುವಿನ ಲಕ್ಷಣಗಳನ್ನು ನೋಡಿದಾಗ ಕ್ರಿ.ಶ. ೧೭ನೇ ಶತಮಾನದಲ್ಲಿ ರಚನೆಗೊಂಡಿರಬಹುದು. ಸ್ಥಳೀಯರು ಹೇಳುವಂತೆ ಗ್ರಾಮದ ಸುತ್ತಲೂ ನಾಲ್ಕು ಮೂಲೆಗೆ ಒಂದರಂತೆ ಬುರುಜುಗಳಿದ್ದವು. ಅವು ಕ್ರಮೇಣ ನಾಶವಾಗಿವೆ ಎಂದು ಹೇಳುತ್ತಾರೆ. ಅಲ್ಲದೆ ವೇಗವಾಗಿ ಬೆಳೆಯುತ್ತಿರುವ ಈ ಗ್ರಾಮವು ಕೋಟೆಯ ನಾಶಕ್ಕೆ ಕಾರಣವಾಗಿರಬಹುದು.

೪.೩. ಬಸವನ ಬಾಗೇವಾಡಿ ತಾಲೂಕಿನ ಕೋಟೆಗಳು

ಇಂಗಳೇಶ್ವರ

ಇಂಗಳೇಶ್ವರ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಈಶಾನ್ಯ ದಿಕ್ಕಿನಲ್ಲಿ ೧೦ ಕಿ.ಮೀ. ದೂರದಲ್ಲಿದೆ. ಪ್ರಾಗಿತಿಹಾಸಕಾಲಕ್ಕೆ ಸಂಬಂಧಿಸಿದಂತೆ ಇಂಗಳೇಶ್ವರ ಗ್ರಾಮದಲ್ಲಿ ಮಧ್ಯ-ಅಂತ್ಯ ಹಳೆಶಿಲಾಯುಗದ, ಆದಿ ಮತ್ತು ಮಧ್ಯ ಇತಿಹಾಸ ಕಾಲದ ಅವಶೇಷಗಳು ಪತ್ತೆಯಾಗಿವೆ.[೨೨೪] ಶಾಸನಗಳಲ್ಲಿ 'ಅಗ್ರಹಾರ ಇಂಗಳೇಶ್ವರ', 'ಎಂಗಳೇಶ್ವರ', 'ಯಿಂಗಳೇಶ್ವರ' ಎಂಬ

ಉಲ್ಲೇಖಗಳಿವೆ. ಕೆಲವು ಪ್ರಾಚೀನ ಕಾವ್ಯಗಳಲ್ಲಿ ಈ ಊರಿನ ಪ್ರಸ್ತಾಪವಿದೆ. ಸೋಮನಾಥ ಕವಿಯ 'ಬಸವ ಪುರಾಣ'ದಲ್ಲಿ 'ಹಿಂಗಳೇಶ್ವರ ಬಾಗವಾಟಿ', ಭೀಮಕವಿಯ 'ಬಸವ ಪುರಾಣ'ದಲ್ಲಿ 'ಇಂಗಳೇಶ್ವರ ಬಾಗೇವಾಡಿ', ಚಾಮರಸನ 'ಪ್ರಭುಲಿಂಗಲೀಲೆ'ಯಲ್ಲಿ 'ಲಿಂಗಳೇಶ್ವರ ಬಾಗೇವಾಡಿ', ಸಿಂಗಿರಾಜನ 'ಬಸವಚರಿತೆ'ಯಲ್ಲಿ 'ಇಂಗಳೇಶ್ವರ ಬಾಗೇವಾಡಿ' ಎಂದು ಉಲ್ಲೇಖಿಸಲಾಗಿದೆ.[೨೨೫] ಹೂವಿನ ಹಿಪ್ಪರಗಿಯ ಕ್ರಿ.ಶ. ೮೬೨ರ ಶಾಸನವು ಇಂಗಳೇಶ್ವರ, ಬಾಗೇವಾಡಿ ಎಂದು ಈ ಎರಡು ಊರುಗಳು ಪ್ರತ್ಯೇಕವಾಗಿರುವಂತೆ ಉಲ್ಲೇಖಿಸುತ್ತದೆ.[೨೨೬] ಆದರೆ ಕವಿಗಳು ತಮ್ಮ ಕಾವ್ಯಗಳಲ್ಲಿ ಬಾಗೇವಾಡಿಯನ್ನು ಗುರುತಿಸಲು ಇಂಗಳೇಶ್ವರ ಹೆಸರನ್ನು ಬಳಸಿಕೊಂಡಂತೆ ಕಾಣುತ್ತದೆ. ಕ್ಯಾಂಪ್‌ಬೆಲ್ ರಚಿಸಿದ ಬಾಂಬೆ ಪ್ರೆಸಿಡೆನ್ಸಿ ಗ್ಯಾಜೆಟಿಯರ್‌ನಲ್ಲಿರುವ ಐತಿಹ್ಯದಿಂದ ತಿಳಿದುಬರುವ ಇನ್ನೊಂದು ಮಾಹಿತಿಯೆಂದರೆ, "ಈ ಗ್ರಾಮದ ಸಂಸ್ಥಾಪಕನು ತಿಂಗಳಿಗೆ ಒಂದು ಸಲ ಗ್ರಾಮದ ಜನರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಶಿವನ ದರ್ಶನ ಮಾಡಿಸುತ್ತಿದ್ದನು. ಆದ್ದರಿಂದ ಈ ಊರಿಗೆ ತಿಂಗಳೇಶ್ವರ ಎಂದು ಕರೆಯಲಾಯಿತು. ನಂತರ ಕಾಲಘಟ್ಟದಲ್ಲಿ ಇಂಗಳೇಶ್ವರವಾಗಿ ಮಾರ್ಪಾಡಾಯಿತು" ಎಂಬುದು ಪ್ರತೀತಿ.

ಬಸವನ ಬಾಗೇವಾಡಿ ಪರಿಸರದಲ್ಲಿ ಮುತ್ತಗೆ ಮೂವತ್ತು, ಹೆಬ್ಬಾಳ ಪನ್ನೆರಡು, ಸೋಗಿಲು ಪನ್ನೆರಡು, ಮುಂಬಾಡ, ಕೆಂಪನಕುಳಿ ಆರುಂಬಾಡ ಎಂಬ ಕೆಲವು ಆಡಳಿತ ವಿಭಾಗಗಳಿದ್ದು, ಅವುಗಳಲ್ಲಿ ಇಂಗಳೇಶ್ವರ ಯಾವ ವಿಭಾಗಕ್ಕೆ ಸೇರಿತ್ತೆಂಬುದು ಸ್ಪಷ್ಟವಾಗುವುದಿಲ್ಲ. ಈ ಊರನ್ನು ಶಾಸನಗಳು ಯಾವುದೇ ಅಂಕಿ ಸಂಖ್ಯೆಗಳಿಂದ ಗುರುತಿಸಿಲ್ಲ. ಬದಲಾಗಿ ಇಂಗಳೇಶ್ವರದ ಕ್ರಿ.ಶ. ೧೧೨೮ರ ಶಾಸನ 'ಶ್ರೀಮದುತ್ತಮದಗ್ರಹಾರ ವಿಂಗಳೇಶ್ವರ',[೨೨೭] ಕ್ರಿ.ಶ. ೧೨೬೫ರ ಶಾಸನ "ತದ್ದವಾಡಿ ಸಾಸಿರದಾದಿ [ಬ]ಣಂಜು ಪಟ್ಟಣಂ ಸಿರಿಗೆ ನಿವಾಸ ದೇಸಿಯ ತಮರ್ಮ್ಮನೆ ದಕ್ಷಿಣ ವಾರಣಾಸಿ ಸೌಂದರ[ಸುರ] [ಸ್ತ್ರೈ]ಳ ಸಾಸನ[ಗ್ರ]ಹಂ ನೆಗಳುತ್ತಮದಗ್ರಹಾರ ಶೇಖರ ಸಮೆಯಕ್ಕೆ ಸೋಭಿಪ ಸಿಖಾಮಣಿ ಡಿಸುವಿಂಗಳೇಸ್ವರಂ"[೨೨೮] ಎಂದು ಈ ಊರನ್ನು ಉಲ್ಲೇಖಿಸುತ್ತವೆ. ಇದು ಪ್ರಮುಖ ಅಗ್ರಹಾರವಾಗಿ, ಬಣಂಜು ಪಟ್ಟಣವಾಗಿರುವ ವಿವರ ದಾಖಲಾಗಿದೆ.

ಕ್ರಿ.ಶ. ೧೧೨೮ರ ಚಾಳುಕ್ಯ ಮೂರನೆಯ ಸೋಮೇಶ್ವರನ ಕಾಲದ ಶಾಸನವು ಮಹಾಮಂಡಳೇಶ್ವರ ಕಳಚುರಿವಂಶದ ಪೆರ್ಮಾಡಿರಾಯನು ತರ್ದ್ದವಾಡಿ ಸಾಸಿರವನ್ನಾಳುತ್ತಿರುವಾಗ ಮನೆವೆರ್ಗ್ಗಡೆ, ದಂಡನಾಯಕ ಸಾಯಿಪಯ್ಯ ಎಂಬುವವನ ಶ್ರೀಕರಣನಾದ ನೀಲಕಂಠನಾಯಕನು ಅಗ್ರಹಾರದ ಇಂಗಳೇಶ್ವರದಲ್ಲಿ ಮಾಡಿಸಿದ ತ್ರಿಕೂಟ ನೀಲಕಂಠೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[೨೨೯] ಕ್ರಿ.ಶ. ೧೨೬೫ರ ಶಾಸನವು ಮಹಾದೇವನೆಂಬ ಆಡಳಿತಾಧಿಕಾರಿಯ ಕುರಿತು ಹಾಗೂ ಇಂಗಳೇಶ್ವರವನ್ನು ಪಿರಿಯ ಬಣಂಜು ಪಟ್ಟಣವೆಂದೂ ಇದು ತರ್ದವಾಡಿ ಸಾಸಿರದಲ್ಲಿತ್ತೆಂದೂ ವರ್ಣಿಸುತ್ತದೆ. ಕ್ರಿ.ಶ. ೧೧೭೬ರ ಶಾಸನ ರಾಯಮುರಾರಿ ಸೋವಿದೇವನ ಕಾಲದಲ್ಲಿ ಇವನ ಸಾಮಂತನಾಗಿ ಸಹವಾಸಿ ವಂಶದ ಅಂಮಣ ದಂಡನಾಯಕನಿರುತ್ತಾನೆ. ಅವನ

ಮಗ ಸೋವಿದೇವ ದಂಡಾದಿಪ, ಚಂದ್ರವಂಶದ ಇವನು ಇಂಗಳೇಶ್ವರಪುರವನ್ನು ಕರ್ನಾಟಕದ ಕಾಶಿಪುರವಾಗಿ ಪರಿವರ್ತಿಸಿದನಂತೆ.[೨೩೦] ಈ ಶಾಸನಗಳು ಇಂಗಳೇಶ್ವರದಲ್ಲಿ ದಂಡನಾಯಕರ, ಆಡಳಿತಾಧಿಕಾರಿಗಳ ಆಳ್ವಿಕೆಯನ್ನು ದೃಢಪಡಿಸುತ್ತವೆ. ಅಲ್ಲದೆ. ಕ್ರಿ.ಶ. ೧೧೭೬ರ ಶಾಸನ ಇಂಗಳೇಶ್ವರಪುರ ಎಂದು ಉಲ್ಲೇಖಿಸುತ್ತದೆ. ಪುರ ಅಂದರೆ ಕೋಟೆ, ದುರ್ಗ[೨೩೧] ಎಂಬ ಅರ್ಥವನ್ನು ಕೊಡುವುದರಿಂದ ಕ್ರಿ.ಶ. ೧೨ನೇ ಶತಮಾನಕ್ಕಿಂತಲೂ ಮೊದಲೇ ಈ ಊರಿನಲ್ಲಿ ಕೋಟೆ ಇತ್ತು ಎಂಬುದು ತಿಳಿದುಬರುತ್ತದೆ.

ಈ ಊರಿನಲ್ಲಿ ನಾನು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಊರ ಸುತ್ತಲೂ ಕೋಟೆ ಇದ್ದದ್ದು ಕಂಡುಬಂದಿತು. ಪ್ರಸ್ತುತ ಉತ್ತರ ಮತ್ತು ಪಶ್ಚಿಮ ಭಾಗದ ಭಾಗಶಃ ಕೋಟೆಗೋಡೆ ಉಳಿದುಕೊಂಡಿದ್ದು ಇನ್ನುಳಿದ ಭಾಗ ನಾಶ ಹೊಂದಿ ಅಲ್ಲಲ್ಲಿ ಕೋಟೆಯ ಅವಶೇಷಗಳು ಮಾತ್ರ ಕಂಡುಬರುತ್ತವೆ. ಈ ಕೋಟೆಯನ್ನು ಎರಡು ಹಂತಗಳಲ್ಲಿ ಕಟ್ಟಲಾಗಿದೆ. ಕೋಟೆಯ ತಳಭಾಗವನ್ನು ನೋಡಿದರೆ ಮೊದಲು ಮಣ್ಣಿನಿಂದ ಗೋಡೆಯನ್ನು ನಿರ್ಮಿಸಿದ್ದು ಅನಂತರ ಕಾಲಘಟ್ಟದಲ್ಲಿ ದಪ್ಪವಾದ ಗುಂಡುಕಲ್ಲು, ಕಲ್ಲುಚಿಪ್ಪು, ಮಣ್ಣನ್ನು ಬಳಸಿ ಪುನರ್‌ನಿರ್ಮಾಣ ಮಾಡಿದ್ದು ಕಂಡುಬರುತ್ತದೆ. ಕೋಟೆಯ ಗೋಡೆಯು ತಳದಲ್ಲಿ ೧.೮೦ ಮೀ.ನಷ್ಟು ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗಿದೆ. ಇದು ಸುಮಾರು ೨ರಿಂದ ೩.೫೦ ಮೀ. ಎತ್ತರದವರೆಗೆ ಉಳಿದುಕೊಂಡಿದೆ. ಸ್ಥಳೀಯರು ಊರಿನ ಸುತ್ತಲೂ ಕೋಟೆ ಗೋಡೆಗೆ ಹೊಂದಿಕೊಂಡು ಆರು ವೃತ್ತಾಕಾರದ ಕೊತ್ತಳಗಳು ಇದ್ದವು ಎಂದು ಹೇಳುತ್ತಾರೆ. ಆದರೆ ಇಂದು ಉತ್ತರದಿಕ್ಕಿಗೆ ಇರುವ ಕೋಟೆಗೋಡೆಗೆ ಹೊಂದಿಕೊಂಡು ಅರ್ದವೃತ್ತಾಕಾರದ ಒಂದು ಕೊತ್ತಳವಿದ್ದು ೨ ಮೀ. ಎತ್ತರ ಮಾತ್ರ ಉಳಿದುಕೊಂಡಿದೆ. ಉತ್ತರಕ್ಕೆ ಅಭಿಮುಖವಾಗಿ ಕೋಟೆಯ ದ್ವಾರಬಾಗಿಲು ಇದ್ದು ಆಧುನಿಕವಾಗಿ ಪುನರನಿರ್ಮಾಣಗೊಂಡಿದೆ. ಈ ಕೋಟೆಯ ಪಶ್ಚಿಮ ಮತ್ತು ಉತ್ತರಭಾಗದಲ್ಲಿ ಕಂದಕವಿದ್ದು ಇಂದು ಅವು ಊರಿನ ಕೊಳಚೆ ನೀರು ಹರಿದುಹೋಗುವ ಕಾಲುವೆಗಳಾಗಿ ಮಾರ್ಪಟ್ಟಿವೆ.

ಕಲ್ಯಾಣ ಚಾಳುಕ್ಯರ ಅವಧಿಯ ವೇಳೆಗಾಗಲೇ ಕೋಟೆಯ ನಿರ್ಮಾಣದ ರಚನೆಯಲ್ಲಿ ಹಾಗೂ ಯುದ್ಧತಂತ್ರಗಾರಿಕೆಯಲ್ಲಿ ಆದ ಬದಲಾವಣೆಗಳಿಂದ ಮಣ್ಣಿನ ಕೋಟೆಗಳ ಬದಲಾಗಿ ದಪ್ಪದಾದ ಕಲ್ಲು, ಕಲ್ಲು ಚಿಪ್ಪು, ಮಣ್ಣನ್ನು ಬಳಸಿಕೊಂಡು ಎತ್ತರವಾದ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತು. ವೈರಿಗಳು ಸುಲಭವಾಗಿ ಕೋಟೆಯ ಗೋಡೆಯನ್ನು ಏರದಂತೆ ಸುತ್ತಲೂ ಆಳವಾದ ಕಂದಕವನ್ನು ನಿರ್ಮಿಸುತಿದ್ದರು. ಇಂಗಳೇಶ್ವರದ ಕೋಟೆಯು ಕೂಡ ಮೊದಲು ಮಣ್ಣಿನಿಂದ ನಿರ್ಮಾಣವಾಗಿದ್ದು ಇದರ ಮೇಲೆ ದಪ್ಪವಾದ ಕಪ್ಪು ಕಲ್ಲುಗಳ(ಕಲ್ಲುಗಳನ್ನು ಕಟೆಯದೆ ಯಥಾವತ್ತಾಗಿ ಬಳಸಿಕೊಂಡಿದ್ದಾರೆ)ನ್ನು ಉಪಯೋಗಿಸಿ ಕೋಟೆಗೋಡೆ ನಿರ್ಮಿಸಿದ್ದಾರೆ. ಈ ಕೋಟೆಯ ಲಕ್ಷಣಗಳನ್ನು ಗಮನಿಸಿದಾಗ ಕಲ್ಯಾಣ ಚಾಳುಕ್ಯರ ಕಾಲದ್ದೆಂದು ಹೇಳಬಹುದು. ಈ ಕೋಟೆಯ ಒಳಗೆ ಕಲ್ಯಾಣ ಚಾಳುಕ್ಯರ ಕಾಲದ ಸೋಭಾನದೇವರ ಗುಡಿ, ಸೋಮನಾಥ ದೇವಾಲಯ, ನಾರಾಯಣ

ದೇವಾಲಯಗಳು, ಬಸವಣ್ಣನು ಜನಿಸಿದ ಮನೆ(ಇಂದು ಪುನರ್‌ನಿರ್ಮಾಣಗೊಂಡಿದೆ)ಯಿದೆ. ಅಲ್ಲದೆ ಕಲ್ಯಾಣ ಚಾಳುಕ್ಯ, ಕಳಚುರಿ, ಯಾದವರಿಗೆ ಸಂಬಂಧಿಸಿದ ಶಾಸನ, ನಿಷಿಧಿಗಲ್ಲು, ವೀರಗಲ್ಲು, ಅನೇಕ ಶಿಲ್ಪಗಳು ಕಂಡುಬರುತ್ತವೆ. ಜೊತೆಗೆ ಇದೊಂದು ಪ್ರಮುಖ ಬಣಂಜು ಪಟ್ಟಣವಾಗಿದೆ. ಒಟ್ಟಾರೆಯಾಗಿ ಕೋಟೆಯ ವಾಸ್ತುಶೈಲಿ ಮತ್ತು ಪುರಾತತ್ವೀಯ ಅವಶೇಷಗಳ ಹಿನ್ನೆಲೆಯಲ್ಲಿ ಕೋಟೆಯು ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ನಿರ್ಮಾಣವಾದದ್ದು ಎಂದು ಸ್ಪಷ್ಟಪಡಿಸಬಹುದು.[೨೩೨] ಪ್ರಸ್ತುತ ಕೋಟೆಗೋಡೆಯನ್ನು ಕೆಡವಿ ಅದರ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ಕೋಟೆ ಇದ್ದ ಸ್ಥಳದಲ್ಲಿಯೇ ಮನೆಗಳನ್ನು ನಿರ್ಮಿಸುತ್ತಿದ್ದಾರೆ. ಕೆಲವೇ ದಿನಗಳಲ್ಲಿ ಅಳಿದುಳಿದ ಕೋಟೆಯು ಸಹ ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿದೆ.

ನಿಡಗುಂದಿ

ಕೃಷ್ಣಾನದಿಯ ಎಡದಂಡೆಯ ಮೇಲಿರುವ ನಿಡಗುಂದಿ ಗ್ರಾಮವು ಆಲಮಟ್ಟಿ ಅಣೆಕಟ್ಟಿನಿಂದ ಉತ್ತರಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೧೭೬ರ ಇಂಗಳೇಶ್ವರ ಶಾಸನವು ಕಳಚೂರ್ಯ ಚಕ್ರವರ್ತಿ ರಾಯಮುರಾರಿ ಸೋವಿದೇವನ ಆಡಳಿತಾವಧಿಯಲ್ಲಿ ದಂಡನಾಯಕನೊಬ್ಬ ಮತ್ತು ಹೆಬ್ಬಾಳ ಪ್ರಭು ಮುಖ್ಯವಾಗಿ ನಿಡಗುಂದೆಯ ದಾರಿಯಿಂ ಪಡುವಲ ಸೀಮೆಯಿಂ ಬಡಗಲು ಮಾಲಿಗಗೆಯಂ ಮೂಸಲು ಕೆರೆಯಂ ತೆಂಕಲು ಹೆಬ್ಬಾಳ ಗಡಿಂಬದಲ್ಲಿ ಅಳೆದು ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.[೨೩೩]

ನಿಡಗುಂದಿ ಎಂಬ ಸ್ಥಳನಾಮವನ್ನು ಕುರಿತು ನೋಡುವುದಾದರೆ 'ಕುಂದ' ದ್ರಾವಿಡ ಮೂಲದಿಂದ ಬಂದ ಶಬ್ದವಾಗಿದ್ದು ಕನ್ನಡದಲ್ಲಿ ಕೊಂಡ ಎಂದು ಇದರ ಅರ್ಥ. ಎತ್ತರದ ಸ್ಥಳ ಇಲ್ಲವೇ ಗುಡ್ಡ, ಬೆಟ್ಟ ಎಂದಾಗುತ್ತದೆ. ಮೂಲತಃ ಈ ಅರ್ಥವನ್ನು ಸೂಚಿಸುವ ಕುನ್ದ>ಕುಂದ>ಗುಂದ>ಗುಡ್ಡ ಕ್ರಮೇಣ ಇಂಥ ಸ್ಥಳದ ಬಳಿ ಬೆಳೆದ ಊರುಗಳನ್ನು ಸೂಚಿಸತೊಡಗಿತು. ಹೀಗಾಗಿ ನಿಡಗುಂದಿ ಎಂಬ ಗ್ರಾಮನಾಮವು ನಿಸರ್ಗಸೂಚಿ ಸ್ಥಳನಾಮವಾಗಿದೆ. ನಿಡಗುಂದೆ(ಕ್ರಿ.ಶ. ೧೧೭೬ರಶಾಸನ)>ನಿಡಗುಂದಿ(ನಿಡು–ಎತ್ತರ,ಉದ್ದ)+ಕುಂದ(–ಬೆಟ್ಟ)>ನಿಡಕುಂದ>ನಿಡಗುಂದ> ನಿಡಗುಂದೆ>ನಿಡಗುಂದಿಯಾಗಿದೆ.[೨೩೪]

ಸುರಪುರ ನಾಯಕ ಜನಾಂಗದ ವಂಶಸ್ಥರು ಎಂದು ಹೇಳಿಕೊಳ್ಳುವ ದೇಸಾಯರು ಪೇಶ್ವೆಗಳಿಂದ ನಿಡಗುಂದಿ ಹಾಗೂ ಸುತ್ತಲಿನ ಹಳ್ಳಿಗಳ ವತನದಾರಿಕೆಯನ್ನು ಪಡೆದುಕೊಂಡು ಇಲ್ಲಿ ನೆಲೆಸಿದ್ದಾರೆ. ಈ ದೇಸಗತಿಯ ಮೂಲನೆಲೆ ನಿಡಗುಂದಿಯಾದರೂ ಇದರ ಹೆಸರು ವಡವಡಗಿ ದೇಸಗತಿಯೆಂದು ಜಿಲ್ಲೆಯಲ್ಲಿ ಪ್ರಚಲಿತದಲ್ಲಿದೆ.[೨೩೫] ಈ ದೇಸಾಯಿಗಳ ಅವಧಿಯಲ್ಲಿ ನಿಡಗುಂದಿಯ ಬೆಟ್ಟದ ಮೇಲೆ ನಿರ್ಮಾಣವಾದ ಕೋಟೆ ಮತ್ತು ಮಧ್ಯದ ವಾಡೆಯ ಅವಶೇಷಗಳು ಈ ದೇಸಗತಿಯ ಕುರುಹುಗಳಾಗಿ ಉಳಿದುಕೊಂಡಿವೆ. ಸುಮಾರು ೨೦ ಅಡಿ ಎತ್ತರ ಕಂಡುಬರುವ ಬೃಹತ್ ಶಿಲಾಬಂಡೆಗಲ್ಲಿನ

ಮೇಲೆ ನಿರ್ಮಿತವಾಗಿದೆ. ಹೀಗಾಗಿ ಇದೊಂದು ಗಿರಿದುರ್ಗದಂತೆ ಕಂಡುಬರುತ್ತದೆ. ಇಲ್ಲಿ ಒಂದಕ್ಕೊಂದು ಹೊಂದಿಕೊಂಡು ಎರಡು ಕೋಟೆಗಳು ಕಂಡುಬರುತ್ತವೆ. ಉತ್ತರಾಭಿಮುಖವಾಗಿರುವ ಕೋಟೆಗೋಡೆಯ ವಾಯವ್ಯದ ಬುರುಜುವಿಗೆ ಪೂರ್ವಾಭಿಮುಖವಾಗಿರುವ ಕೋಟೆಗೋಡೆಯು ಸಂಯೋಜನೆಗೊಳ್ಳುತ್ತದೆ.

ಮೊದಲನೇ ಕೋಟೆಯು ೧೮೮ ಮೀ. ಸುತ್ತಳತೆ ಹೊಂದಿದ್ದು ಉತ್ತರಾಭಿಮುಖವಾಗಿ ದ್ವಾರವನ್ನು ಹೊಂದಿದೆ. ಈ ಕೋಟೆಯು ಸುಮಾರು ಉತ್ತರಭಾಗದ ಕೋಟೆಗೋಡೆಯು ಸಂಪೂರ್ಣವಾಗಿ ನಾಶ ಹೊಂದಿದೆ. ಇದರ ಮೂಲಕ ಒಳಪ್ರವೇಶಿಸಿದರೆ ನಾಲ್ಕೂ ಗೋಡೆಗಳ ಮಧ್ಯೆ ವಿಶಾಲವಾದ ಪ್ರಾಂಗಣವಿದ್ದು ಇಂದು ಮುಳ್ಳುಕಂಟಿಗಳು ಬೆಳೆದುಕೊಂಡಿವೆ. ಇದನ್ನು ಸೈನಿಕರ ತರಬೇತಿಗಾಗಿ ಬಳಸುತ್ತಿದ್ದರು ಎಂದು ಸ್ಥಳೀಯರು ಹೇಳುತ್ತಾರೆ. ಈ ಕೋಟೆಗೋಡೆಗೆ ಹೊಂದಿಕೊಂಡು ಪಶ್ಚಿಮಾಭಿಮುಖವಾಗಿರುವ ಇನ್ನೊಂದು ದ್ವಾರವಿದೆ. ಇದರ ಮೂಲಕ ಒಳಪ್ರವೇಶಿಸಿದಾಗ ಅಲ್ಲಿ ಆಯತಾಕಾರದ ಪ್ರಾಂಗಣವಿದೆ. ಅಲ್ಲಿಂದ ಉತ್ತರಾಭಿಮುಖವಾಗಿರುವ ದ್ವಾರದ ಮೂಲಕ ಎರಡನೇ ಕೋಟೆಯನ್ನು ಪ್ರವೇಶಿಸಬಹುದು. ಈ ಕೋಟೆಯಲ್ಲಿ ದೇಸಾಯಿಗಳ ವಾಡೆಯ ಅವಶೇಷಗಳು ಕಂಡುಬರುತ್ತವೆ. ಈ ದ್ವಾರ ಪ್ರವೇಶಿಸುವುದಕ್ಕಿಂತಲೂ ಮುಂಚೆ ಅದನ್ನು ತಲುಪಲು ಮೆಟ್ಟಿಲುಗಳಿವೆ. ಈ ದ್ವಾರವು ಕಮಾನಿನಾಕೃತಿಯಲ್ಲಿದೆ. ೭ ಅಡಿ ೬೦ ಅಂಗುಲ ಅಗಲ, ೯ ಅಡಿ ೯ ಅಂಗುಲ ಎತ್ತರ ದ್ವಾರವಿದ್ದು ಒಳಗೆ ಇಕ್ಕೆಲಗಳಲ್ಲಿ ಅಂಕಣಗಳಿವೆ. ಸೈನಿಕರ ವಿಶ್ರಾಂತಿಗಾಗಿ ಇವುಗಳನ್ನು ನಿರ್ಮಿಸಿರಬಹುದು ಎಂದು ಹೇಳಬಹುದು. ಈ ಮುಖ್ಯದ್ವಾರದ ಮೇಲೆ ಮಹಡಿಯಿದೆ. ಇದರ ಮೇಲ್ಚಾವಣಿ ಬಿದ್ದುಹೋಗಿದೆ. ಆದರೆ ಮೇಲಂತಸ್ತಿನ ಗೋಡೆಯು ಸುತ್ತುವರಿದಂತಿದ್ದು ಅದರಲ್ಲಿ ಎರಡು ಕಮಾನಾಕೃತಿಯ ಕಿಟಕಿಗಳಿವೆ. ಇವುಗಳ ಮಧ್ಯೆ ತೆರೆದ ಸಜ್ಜೆ ಇದ್ದು ಇಂದು ನಾಶವಾಗಿದೆ. ಬಹುಶಃ ದೇಸಾಯಿಗಳು ಇಲ್ಲಿಂದ ಕುಳಿತು ಸೈನಿಕರ ತರಬೇತಿ ಮತ್ತು ಇಡೀ ಗ್ರಾಮದ ಚಟುವಟಿಕೆಗಳನ್ನು ವೀಕ್ಷಿಸಲು ಅನುಕೂಲವಾಗುವಂತಿದೆ. ಈ ದ್ವಾರಕ್ಕೆ ಹೊಂದಿಕೊಂಡಂತೆ ಎರಡು ಸುತ್ತಿನ ಕೋಟೆಗೋಡೆ ಕಂಡುಬರುತ್ತದೆ. ಇವುಗಳ ಮಧ್ಯದ ಅಂತರ ೪ ಅಡಿ ಇದ್ದು ಎರಡನೇ ಸುತ್ತಿನ ಒಳಗೋಡೆಗೆ ಹೊಂದಿಕೊಂಡು ಸುತ್ತಲೂ ವಸತಿ ನಿವೇಶನಗಳ ಅವಶೇಷಗಳಿವೆ. ಇವುಗಳ ಮಧ್ಯೆ ಇರುವ ವಾಡೆಯ ಕುರುಹಾಗಿ ಅಧಿಷ್ಠಾನದ ಅವಶೇಷಗಳನ್ನು ಕಾಣುತ್ತೇವೆ. ಉತ್ತರಾಭಿಮುಖವಾಗಿರುವ ಕೋಟೆಯು ಸುಮಾರು ೨೦೭ ಮೀ. ಸುತ್ತಳತೆಯನ್ನು ಹೊಂದಿದ್ದು ೭ ಅಡಿ ದಪ್ಪವಾದ ಗೋಡೆಯನ್ನು ಹೊಂದಿದೆ. ಗೋಡೆಯ ಮೇಲೆ ಅಳಿದುಳಿದ ಕೈಪಿಡಿಗೋಡೆ ಇದ್ದು ಅದರಲ್ಲಿ ಬಂದೂಕುಕಿಂಡಿಗಳನ್ನು ಕಾಣುತ್ತೇವೆ.

ಈ ಕೋಟೆಗೆ ಒಟ್ಟು ಏಳು ಬುರುಜುಗಳಿದ್ದು ಸುಮಾರು ೫೦ ಅಡಿ ಎತ್ತರ ೬೦ ಅಡಿ ಸುತ್ತಳತೆಯನ್ನು ಹೊಂದಿವೆ. ಇಲ್ಲಿಯ ಬುರುಜುಗಳನ್ನು ಕೆಳಗಿನಿಂದ ಮೇಲ್ಮಟ್ಟದವರೆಗೆ ಟೊಳ್ಳಾಗಿ ಎರಡು ಮಹಡಿಗಳಿರುವಂತೆ ನಿರ್ಮಿಸಿರುವುದು ಇವುಗಳ ವಿಶೇಷತೆಯಾಗಿದೆ. ಮಹಡಿಯಿಂದಲೂ ಶತ್ರುಗಳ ಮೇಲೆ ಆಕ್ರಮಣ ಮಾಡಲು ಬಂದೂಕುಕಿಂಡಿಗಳಿವೆ. ಮಧ್ಯಭಾಗದಲ್ಲಿಯೂ ಅದೇ ರೀತಿ

ಕಿಂಡಿಗಳನ್ನು ಕಾಣುತ್ತೇವೆ. ಜೊತೆಗೆ ಬುರುಜುವಿನ ಮೇಲಿನ ಕೈಪಿಡಿ ಗೋಡೆಯಲ್ಲಿಯೂ ಬಂದೂಕು ಕಿಂಡಿಗಳನ್ನು ಕಾಣುತ್ತೇವೆ. ಹೊರಗಿನಿಂದ ಬುರುಜನ್ನು ಗಮನಿಸಿದಾಗ ಮೂರು ಹಂತದಲ್ಲಿ ಬಂದೂಕು ಕಿಂಡಿಗಳಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಕೋಟೆಯು ಎತ್ತರವಾದ ಬೆಟ್ಟದ ಮೇಲೆ ಇರುವುದರಿಂದ ಬೆಟ್ಟವನ್ನು ಹತ್ತಿ ಬರುವ ಸೈನಿಕರ ಚಲನವಲನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಮಿಸಲಾಗಿದೆ ಎನ್ನಬಹುದು. ಇಂದು ಕೋಟೆಯಲ್ಲಿ ಜನವಸತಿ ಇಲ್ಲದ ಕಾರಣ ಮುಳ್ಳುಕಂಟಿಗಳು ಬೆಳೆದುಕೊಂಡು ಶಿಥಿಲಾವಸ್ಥೆಯಲ್ಲಿದೆ.

ಬಸವನ ಬಾಗೇವಾಡಿ

ತಾಲೂಕುಕೇಂದ್ರವಾದ ಬಸವನ ಬಾಗೇವಾಡಿಯು ವಿಜಾಪುರದಿಂದ ಆಗ್ನೇಯಕ್ಕೆ ೪೦ ಕಿ.ಮೀ. ದೂರದಲ್ಲಿದೆ. ಪ್ರಾಗಿತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದ ಈ ಪ್ರದೇಶದಲ್ಲಿ ಆದಿ ಮತ್ತು ಮಧ್ಯ ಹಳೆ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿವೆ.[೨೩೬] ಅಲ್ಲದೆ ಬಸವನ ಬಾಗೇವಾಡಿ–ಇಂಗಳೇಶ್ವರ ರಸ್ತೆಯ ಎಡ, ಬಲದ ವಿಶಾಲವಾದ ಜಾಗದಲ್ಲಿ ಸೂಕ್ಷ್ಮಶಿಲಾಯುಗ, ನೂತನಶಿಲಾಯುಗ ಮತ್ತು ಶಿಲಾತಾಮ್ರಯುಗಕ್ಕೆ ಸೇರಿದ ವಿವಿಧ ಉಪಕರಣಗಳು ಹರಡಿವೆ. ಕೆಮ್ಮಣ್ಣು ಲೇಪನವುಳ್ಳ ಚರ್ಟ್ ಕಲ್ಲುಗಳೊಂದಿಗೆ ಉಪಕರಣಗಳ ತಯಾರಿಕೆಗೆ ಬಳಸಿದ ಚಕ್ಕೆಗಳನ್ನು ಎಬ್ಬಿಸಿದ ಕಲ್ಲುತುಂಡುಗಳೇ ವಿಶೇಷವಾಗಿವೆ.[೨೩೭] ಬಸವನ ಬಾಗೇವಾಡಿ ಇತಿಹಾಸವು ನಮಗೆ ಸ್ಪಷ್ಟವಾಗುವುದು ಕಲ್ಯಾಣ ಚಾಳುಕ್ಯರ ಕಾಲದಿಂದ ಎಂದು ಹೇಳಬಹುದು.

ಶಾಸನಗಳಲ್ಲಿ ಇದನ್ನು 'ಬಾಗವಾಡಿ',[೨೩೮] 'ಅಗ್ರಹಾರ ಬಾಗವಾಡಿ',[೨೩೯] 'ತರ್ದವಾಡಿ ಮಧ್ಯದ ಗ್ರಾಮ ಬಾಗವಾಡಿ'[೨೪೦] ಎಂದು ಗುರುತಿಸುತ್ತವೆ. ಅನೇಕ ಕವಿಗಳು ತಮ್ಮ ಕಾವ್ಯಗಳಲ್ಲಿ ಈ ಊರನ್ನು ಪ್ರಸ್ತಾಪಿಸಿದ್ದಾರೆ. ಹರಿಹರ ಕವಿಯ ಬಸವರಾಜದೇವರ ರಗಳೆಯಲ್ಲಿ 'ಅಗ್ರಹಾರಂ ಬಾಗವಾಡ', ಸೋಮನಾಥನ ಬಸವ ಪುರಾಣದಲ್ಲಿ 'ತಿಂಗಳೇಶ್ವರ ಬಾಗವಡಿ', ಭೀಮಕವಿಯ ಬಸವ ಪುರಾಣದಲ್ಲಿ 'ಇಂಗಳೇಶ್ವರ ಬಾಗೇವಾಡಿ', ಚಾಮರಸನ ಪ್ರಭುಲಿಂಗಲೀಲೆಯಲ್ಲಿ 'ಲಿಂಗಳೇಶ್ವರ ಬಾಗೇವಾಡಿ', ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿಯಲ್ಲಿ 'ಬಾಗೇವಾಡಿ', ಸಿಂಗಿರಾಜನ ಬಸವ ಚರಿತ್ರೆಯಲ್ಲಿ 'ಇಂಗಳೇಶ್ವರ ಬಾಗೇವಾಡಿ', ಷಡಕ್ಷರದೇವನ ಬಸವರಾಜ ವಿಜಯದಲ್ಲಿ 'ಕರ್ನಾಟ ಶ್ರೀಯನ ಸೌಭಾಗ್ಯ ಕೇಶಾಗಾರ ಮೆನಿಸಿದ ಬಾಗೇವಾಡಿ', ಗರಣಿಯ ಬಸವಲಿಂಗನ ಬಸವೇಶ್ವರ ಕಾವ್ಯದಲ್ಲಿ 'ಬಾಗೇವಾಡಿ' ಎಂಬ ಉಲ್ಲೇಖಗಳು ಬಂದಿವೆ.[೨೪೧] ಶಾಸನಗಳಲ್ಲಿ ಇಂಗಳೇಶ್ವರ ಮತ್ತು ಬಾಗೇವಾಡಿ ಈ ಎರಡು ಊರುಗಳು ಪ್ರತ್ಯೇಕವಾಗಿಯೇ ಉಲ್ಲೇಖಗೊಂಡಿವೆ. ಕವಿಗಳು ಬಾಗೇವಾಡಿಯನ್ನು ಗುರುತಿಸಲು ಇಂಗಳೇಶ್ವರದ ಹೆಸರನ್ನು ಬಳಸಿಕೊಂಡಂತೆ ಕಾಣುತ್ತದೆ.

ಬಸವನ ಬಾಗೇವಾಡಿ ಎಂಬ ಸ್ಥಳನಾಮವನ್ನು ಕುರಿತು ನೋಡುವುದಾದರೆ ಕಲ್ಯಾಣ ಚಾಳುಕ್ಯರ ಕಾಲಕ್ಕಾಗಲೇ ಇದು 'ಬಾಗೇವಾಡಿ' ಎಂದೇ ಶಾಸನಗಳಲ್ಲಿ ಉಲ್ಲೇಖವಾಗಿದೆ. ಬಾಗೆ ಎಂದರೆ ಒಂದು ಬಗೆಯ ಮರ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಬಾಗೆಯ ಎಂದರೆ ಒಬ್ಬ

ವ್ಯಕ್ತಿಯ ಹೆಸರು. ಬಾಗೆಯ ಪದವನ್ನು ಬಾಗೆ+ಅಯ>ಅಯ್ಯ ಎಂದು ವಿಭಜಿಸಲು ಸಾಧ್ಯ. ಬಾಗೆಯಾರ್ ಎಂದು ವಿಭಜಿಸಲಾಗಿದೆ. ಒಟ್ಟಾರೆ ಬಾಗೆಯ ಎಂಬ ಪ್ರಸಿದ್ಧ ವ್ಯಕ್ತಿಯೊಬ್ಬ ಇದ್ದು ಆತ ನೆಲೆಸಿರುವ ಸ್ಥಳಕ್ಕೆ ವಾಡ ಎಂದಿದ್ದು 'ಎ'ಕಾರಂತ ಪದ ಕನ್ನಡದಲ್ಲಿ 'ಇ' ಕಾರಾಂತವಾಗಿ 'ಬಾಗೆವಾಡಿ' ಆಗಿರಬಹುದೆಂದು ಊಹಿಸಬಹುದಾಗಿದೆ.[೨೪೨] ೧೯೬೮ರಲ್ಲಿ ಜರುಗಿದ ಶ್ರೀ ಬಸವೇಶ್ವರರ ಅಷ್ಟಶತಮಾನೋತ್ಸವದ ಸ್ಮಾರಕವಾಗಿ ಬಸವಣ್ಣನವರು ಜನಿಸಿದ ಈ ಸ್ಥಳಕ್ಕೆ ಬಸವನ ಬಾಗೇವಾಡಿ ಎಂದು ಕರೆಯಲಾಯಿತು.

ಇದು ಮೊಗಲರು ಮತ್ತು ಹೈದರಾಬಾದಿನ ನಿಜಾಮನ ಆಡಳಿತಾವಧಿಯಲ್ಲಿ ಕ್ರಿ.ಶ. ೧೬೮೬ರಿಂದ ೧೭೬೦ರವರೆಗೆ ವಿಜಾಪುರ ಸರಕಾರದ ಒಂದು ಪ್ರಮುಖ ಪರಗಣವಾಗಿದ್ದು ೨೭ ಹಳ್ಳಿಗಳನ್ನು ಒಳಗೊಂಡಿತ್ತು.[೨೪೩] ಕ್ರಿ.ಶ. ೧೭೬೦ರ ನಂತರ ಪೇಶ್ವೆ ಬಾಲಾಜಿಯು ಬಸವನ ಬಾಗೇವಾಡಿಯಲ್ಲಿ ಘೋರ್ಪಡೆ ಮನೆತನದ ಪರಶುರಾಮ ಪಂಡಿತ ಪ್ರತಿನಿಧಿಯನ್ನು ಮರಾಠ ಜಾಗೀರದಾರನನ್ನಾಗಿ ನೇಮಿಸಿದನು. ಕ್ರಿ.ಶ. ೧೮೧೮ರ ನಂತರ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಮೇಲೆ ಇದೊಂದು ಪ್ರಮುಖ ಕಂದಾಯದ ಉಪವಿಭಾಗವಾಗಿತ್ತು.[೨೪೪]

ಚಾಳುಕ್ಯರ ಕಾಲದಲ್ಲಿ ಪ್ರಮುಖ ಪಟ್ಟಣವಾಗಿ ಬೆಳೆದುಬಂದ ಬಾಗೇವಾಡಿಯಲ್ಲಿ ಅದರ ರಕ್ಷಣೆಗೆ ಕೋಟೆಯನ್ನು ಕಟ್ಟಿಸಿರುವ ಸಾಧ್ಯತೆಗಳಿವೆ. ಆದರೆ ಅದರ ಅವಶೇಷಗಳು ಕಂಡುಬರುವುದಿಲ್ಲ. ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ನಿರ್ಮಿತವಾಗಿರುವ ಕೋಟೆಯ ಅವಶೇಷಗಳು ಈ ಊರಲ್ಲಿ ಕಂಡುಬರುತ್ತವೆ. ಅದರ ಕುರುಹಾಗಿ ಇಂದು ನಮಗೆ ಬಸವನ ಬಾಗೇವಾಡಿ ಬಸ್‌ನಿಲ್ದಾಣದಿಂದ ಮನಗೂಳಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಕಮಾನಾಕೃತಿಯ ಮುಖ್ಯದ್ವಾರ ಮಾತ್ರ ಉಳಿದುಕೊಂಡು ಬಂದಿದೆ. ದ್ವಾರವು ೧೫ ಅಡಿ ಅಗಲ, ೨೦ ಅಡಿ ಎತ್ತರವಾಗಿದ್ದು ಅದರ ಮೇಲೆ ಕೈಪಿಡಿಗೋಡೆ ಮತ್ತು ತೆನೆಗಳ ರಚನೆ ಕಂಡುಬರುತ್ತದೆ. ಇದರಲ್ಲಿ ವೀಕ್ಷಣಾ ಮತ್ತು ಬಂದೂಕುರಂಧ್ರಗಳನ್ನು ಕಾಣುತ್ತೇವೆ. ಇನ್ನುಳಿದಂತೆ ವೇಗವಾಗಿ ಬೆಳೆಯುತ್ತಿರುವ ನಗರೀಕರಣದಿಂದ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿದೆ. ಹೀಗಾಗಿ ಕೋಟೆಯ ಇತರೆ ಅವಶೇಷಗಳು ಕಾಲನ ತುಳಿತಕ್ಕೆ ಸಿಕ್ಕು ಸಂಪೂರ್ಣವಾಗಿ ನಾಶ ಹೊಂದಿವೆ.

ಬ್ಯಾಲ್ಯಾಳ

ಬ್ಯಾಲ್ಯಾಳ ಬಸವನ ಬಾಗೇವಾಡಿಯಿಂದ ನೈರುತ್ಯಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನತೆ ಕುರಿತಾಗಿ ನಮಗೆ ಇದುವರೆಗೆ ಯಾವುದೇ ಆಕರಗಳು ಲಭ್ಯವಾಗಿಲ್ಲ. ಹೀಗಾಗಿ ಆದಿಲ್‌ಶಾಹಿಗಳ ಕಾಲಘಟ್ಟದಿಂದ ಈ ಗ್ರಾಮದ ಇತಿಹಾಸವನ್ನು ಗುರುತಿಸಬಹುದು.

ಗ್ರಾಮದ ಸುತ್ತಲೂ ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಕೋಟೆ ಇದೆ. ಕೋಟೆಯ ಮಧ್ಯಭಾಗದಲ್ಲಿ ದೇಸಾಯಿಗಳ ಕಾಲದ ವಾಡೆ ಇದ್ದು ಮಧ್ಯದ ವಾಡೆ

ತಲುಪಲು ಮೂರು ದ್ವಾರಬಾಗಿಲುಗಳಿಂದ ಹಾಯ್ದು ಹೋಗಬೇಕು. ಕೋಟೆಯ ಒಳಗೆ ಆಧುನಿಕ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಕೋಟೆಯನ್ನು ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿದೆ. ತಳಮಟ್ಟದ ಭಾಗದಲ್ಲಿ ದಪ್ಪದಾದ ಕಲ್ಲುಗಳನ್ನು, ಮೇಲ್ಭಾಗಕ್ಕೆ ಹೋದಂತೆ ಕಡಿಮೆ ಗಾತ್ರದ ಕಲ್ಲು, ಕಲ್ಲುಚಿಪ್ಪುಗಳನ್ನು ಬಳಸಿ ಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಯು ಒಟ್ಟು ಸುಮಾರು ೫೯೧ ಮೀ. ಸುತ್ತಳತೆಯನ್ನು ಹೊಂದಿದೆ. ಕೋಟೆಗೋಡೆ ೮ ಅಡಿ ದಪ್ಪವಾಗಿದ್ದು. ನಾಲ್ಕು ದಿಕ್ಕುಗಳಲ್ಲಿ ಕಂಡುಬರುತ್ತದೆ. ಉತ್ತರಕ್ಕೆ ಇರುವ ಕೋಟೆಗೋಡೆ ೧೫ರಿಂದ ೨೦ ಅಡಿ ಎತ್ತರವಿದೆ. ಉಳಿದಂತೆ ಇನ್ನು ಮೂರು ದಿಕ್ಕುಗಳ ಕೋಟೆಗೋಡೆ ಅಲ್ಲಲ್ಲಿ ಹಾಳಾಗಿದ್ದು ೪ರಿಂದ ೮ ಅಡಿ ಎತ್ತರದವರೆಗೆ ಉಳಿದುಕೊಂಡಿದೆ. ಕೋಟೆಯನ್ನು ಶತ್ರುಗಳು ಸುಲಭವಾಗಿ ಪ್ರವೇಶಿಸದಂತೆ ಇಂಗ್ಲೀಷಿನ 'L' ಆಕಾರದಲ್ಲಿ ಪ್ರವೇಶವನ್ನು ಕಲ್ಪಿಸಲಾಗಿದೆ. ಪೂರ್ವಕ್ಕೆ ಮುಖ ಮಾಡಿರುವ ದ್ವಾರವನ್ನು ಪ್ರವೇಶಿಸಿದರೆ ೯೦X೬೬ ಅಡಿ ತಡೆಗೋಡೆಯಿಂದ ಆವೃತವಾದ ಚೌಕಾಕಾರದ ಪ್ರಾಂಗಣವಿದೆ. ಈ ಆವರಣದಲ್ಲಿ ದಕ್ಷಿಣಕ್ಕೆ ಮುಖ ಮಾಡಿ ಆಂಜನೇಯ ದೇವಸ್ಥಾನವಿದೆ. ಇದಕ್ಕೆ ಅಭಿಮುಖವಾಗಿ ಉತ್ತರಾಭಿಮುಖವಾಗಿರುವ ಕೋಟೆಯ ಮುಖ್ಯದ್ವಾರವನ್ನು ಕಾಣಬಹುದು. ದ್ವಾರಬಾಗಿಲು ಕಮಾನಾಕೃತಿಯಲ್ಲಿದ್ದು ಮುಂದಿನ ಭಾಗ ಬಿದ್ದುಹೋಗಿದೆ. ಕೋಟೆಯ ಪ್ರವೇಶದ್ವಾರದಲ್ಲಿ ಎರಡು ಬದಿಯಲ್ಲಿ ಸೈನಿಕರ ಕೊಠಡಿಗಳಿದ್ದದ್ದು ಕಂಡುಬರುತ್ತದೆ. ಈ ಪ್ರವೇಶದ್ವಾರದ ಒಳಗೆ ಹೋದ ಮೇಲೆ ಎಡಭಾಗದಲ್ಲಿ ಪ್ರವೇಶದ್ವಾರಕ್ಕೆ ಹೊಂದಿಕೊಂಡು ಕೋಟೆಗೋಡೆ ಮೇಲೆ ಹತ್ತಲು ಮೆಟ್ಟಿಲುಗಳಿವೆ.

ಕೋಟೆಗೋಡೆಯ ಮೇಲಿನ ಕೈಪಿಡಿಗೋಡೆ ಮತ್ತು ತೆನೆಗಳು ನಾಶ ಹೊಂದಿದೆ. ಗೋಡೆಯ ಹೊರಭಾಗದಲ್ಲಿ ೨ ಅಡಿ ಎತ್ತರ ೬ ಅಂಗುಲ ಅಗಲದ ಬಂದೂಕುಕಿಂಡಿಗಳನ್ನು ಕಾಣಬಹುದು. ಶತ್ರುಗಳ ಆಕ್ರಮಣವು ಸುಲಭಸಾಧ್ಯವಾಗದಂತೆ ಕೋಟೆಯ ಸುತ್ತಲೂ ೩೦ ಅಡಿ ಅಗಲವಾದ ಕಂದಕವಿದೆ. ಇಂದು ಪೂರ್ತಿ ಮಣ್ಣಿನಿಂದ ಮುಚ್ಚಿ ಹೋಗಿದ್ದು ಅದರಲ್ಲಿ ಮುಳ್ಳುಕಂಟಿಗಳು ಬೆಳೆದುಕೊಂಡಿವೆ. ಕೋಟೆಗೋಡೆಗೆ ಹೊಂದಿಕೊಂಡು ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ನಾಲ್ಕು ಬುರುಜುಗಳಿವೆ. ಶತ್ರುಗಳ ಚಲನವಲನ ಗ್ರಹಿಸಲು ಮತ್ತು ಕೋಟೆಯ ಭದ್ರತೆಯ ದೃಷ್ಟಿಯಿಂದ ಇವುಗಳನ್ನು ನಿರ್ಮಿಸಲಾಗಿದೆ. ಕೋಟೆಗೋಡೆಗಿಂತ ಬುರುಜುಗಳು ಎತ್ತರವಾಗಿದ್ದು ಕೋಟೆಗೋಡೆಯ ಅಟ್ಟಾಲಕ ಭಾಗಕ್ಕೆ ಸಮನಾಗಿ ಬುರುಜುವಿನ ಮೇಲೆ ಹತ್ತಲು ದ್ವಾರಗಳಿವೆ. ಇಂದು ಪೂರ್ಣ ಪ್ರಮಾಣದಲ್ಲಿ ಉಳಿದುಕೊಳ್ಳದೆ ಅವನತಿಯ ಸ್ಥಿತಿಯಲ್ಲಿವೆ.

ಉತ್ತರಾಭಿಮುಖವಾಗಿರುವ ಪ್ರವೇಶದ್ವಾರದಿಂದ ನೇರವಾಗಿ ಒಳಸಾಗಿದಾಗ ಇನ್ನೊಂದು ಚೌಕಕಾರದ ದ್ವಾರವು ಎದುರುಗೊಳ್ಳುತ್ತದೆ. ಇದನ್ನು ಪ್ರವೇಶಿಸಿದ ಮೇಲೆ ಎದುರುಗಡೆ ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾದ ದೇಸಾಯಿಗಳ ವಾಡೆ ಕಂಡುಬರುತ್ತದೆ. ಇಂದು ವಾಡೆಯಲ್ಲಿ ಯಾರು ವಾಸವಿಲ್ಲ. ಹೀಗಾಗಿ ವಾಡೆ ಪೂರ್ತಿ ಪಾಳುಬಿದ್ದಿದೆ. ವಾಡೆಯ ಒಳಗಡೆ ಪ್ರತ್ಯೇಕ ದೇವಾಲಯ ಕೋಣೆ, ವಾಸದ ಕೊಠಡಿಗಳು, ದೊಡ್ಡದಾದ ದರಬಾರ ಹಾಲ್, ದನದ ಕೊಟ್ಟಿಗೆಗಳನ್ನು

ಕಾಣುತ್ತೇವೆ. ಇಂದು ಕೋಟೆ ಮತ್ತು ವಾಡೆಗಳು ರಕ್ಷಣೆಯಿಲ್ಲದೆ ಸಂಪೂರ್ಣ ಅವನತಿ ಸ್ಥಿತಿಯತ್ತ ಸಾಗುತ್ತಿವೆ. ಕೋಟೆಯ ಕಲ್ಲು ಮತ್ತು ಮಣ್ಣನ್ನು ಬಳಸಿ ಸ್ಥಳೀಯರು ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಇದನ್ನು ಗ್ರಾಮದ ಜನರ ಹಾಗೂ ಆಡಳಿತವರ್ಗದವರ ರಕ್ಷಣೆಗಾಗಿ ನಿರ್ಮಿಸಲಾದ ಕೋಟೆ ಎಂದು ಹೇಳಬಹುದು.

೪.೪. ಮುದ್ದೇಬಿಹಾಳ ತಾಲೂಕಿನ ಕೋಟೆಗಳು

ಇಂಗಳಗಿ

ಕೃಷ್ಣಾನದಿಯ ಎಡದಂಡೆಯ ಮೇಲಿರುವ ಇಂಗಳಗಿ ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೩೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ನನ್ನ ಕ್ಷೇತ್ರಕಾರ್ಯ ಅವಧಿಯಲ್ಲಿ ಹೊಸದಾಗಿ ಮಧ್ಯ ಹಳೆಶಿಲಾಯುಗದ ಕೈಗೊಡಲಿಯನ್ನು ಶೋಧಿಸಲಾಗಿದೆ. ನಾರಾಯಣಪುರ ಜಲಾಶಯದ ಕೃಷ್ಣಾ ನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಇಂಗಳಗಿ ಗ್ರಾಮವು ಇಂದು ಸ್ಥಳಾಂತರಗೊಂಡಿದೆ. ಹಳೆಗ್ರಾಮದಲ್ಲಿ ಕೋಟೆಯಿದ್ದು ಸಂಪೂರ್ಣವಾಗಿ ಹಿನ್ನೀರಿನಿಂದ ಮುಳುಗಡೆಯಾಗಿರುವುದರಿಂದ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿದೆ. ಮಧ್ಯದಲ್ಲಿ ಕಲ್ಲು ಮತ್ತು ಮಣ್ಣಿನ ಅವಶೇಷಗಳು ಹಾಗೂ ೧೫ ಅಡಿ ಎತ್ತರದ ಮಣ್ಣಿನ ದಿಬ್ಬದ ಹಾಗೆ ಒಂದು ಬುರುಜು ಮಾತ್ರ ಕಂಡುಬರುತ್ತದೆ.

ಕೂಚಬಾಳ

ಇದು ತಾಲೂಕು ಕೇಂದ್ರವಾದ ಮುದ್ದೇಬಿಹಾಳದಿಂದ ೨೩ ಕಿ.ಮೀ. ದೂರದಲ್ಲಿದೆ. ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ ಹಾಗೂ ಸೂಕ್ಷ್ಮಶಿಲಾಯುಗದ ನೆಲೆಯಾಗಿದ್ದು ಸಮಾನಾಂತರ ನೀಳಚಕ್ಕೆ ಕಲೆಗಳಿರುವ ಮೂಲಶಿಲಾಗಟ್ಟಿ, ಇಬ್ಬದಿ ನೀಳಚಕ್ಕೆ ಹಾಗೂ ಉಬ್ಬೇಣುಳ್ಳ ನೀಳಚಕ್ಕೆ ಉಪಕರಣಗಳು ಪತ್ತೆಯಾಗಿವೆ.[೨೪೫] ಕಲ್ಯಾಣ ಚಾಳುಕ್ಯರ ಕಾಲದ ಸಂಗಮೇಶ್ವರ ದೇವಾಲಯ ಕ್ರಿ.ಶ. ೧೭ನೆಯ ಶತಮಾನದ ವಾಸ್ತುಶೈಲಿಯನ್ನು ಹೊಂದಿರುವ ಆಂಜನೇಯ ದೇವಸ್ಥಾನವಿದೆ. ಇವು ಗ್ರಾಮದ ಪ್ರಾಚೀನತೆಗೆ ನಿದರ್ಶನಗಳಾಗಿವೆ.

ಗ್ರಾಮದ ಸುತ್ತಲೂ ಕಂಡುಬರುವ ಕೋಟೆಯನ್ನು ತೆಳುವಾದ ಸುಣ್ಣ(ಸೇದಿಕಲ್ಲು) ಶಿಲೆಗಳಿಂದ ನಿರ್ಮಿಸಲಾಗಿದೆ. ಒಟ್ಟು ೨೯೩ ಮೀ. ಸುತ್ತಳತೆಯನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ದ್ವಾರಬಾಗಿಲು ೪ ಮೀ. ಅಗಲವಾಗಿದ್ದು ಮೇಲ್ಭಾಗ ಪೂರ್ತಿ ನಾಶ ಹೊಂದಿದ್ದರಿಂದ ದ್ವಾರಬಾಗಿಲ ಗೋಡೆಗಳು ಮಾತ್ರ ಉಳಿದುಕೊಂಡಿವೆ. ಉತ್ತರಭಾಗದ ಕೋಟೆಗೋಡೆಯಲ್ಲಿ ದಿಡ್ಡಿಬಾಗಿಲಿದ್ದು ಇದು ಅರ್ಧಭಾಗ ಮಾತ್ರ ಉಳಿದುಕೊಂಡಿದ್ದು ೪ ಅಡಿ ಅಗಲವಿದೆ. ಕೋಟೆಗೋಡೆಯು ಪೂರ್ವ ಮತ್ತು ದಕ್ಷಿಣಭಾಗದಲ್ಲಿ ಸುಮಾರು ೨೫ ಅಡಿ ಎತ್ತರ ಕಂಡುಬಂದರೆ, ಇತರೆ ಭಾಗದಲ್ಲಿ ೫ರಿಂದ ೮ ಅಡಿ ಎತ್ತರ ಉಳಿದುಕೊಂಡಿದ್ದು ೫ ಅಡಿ ದಪ್ಪವಿದೆ. ಕೋಟೆಗೋಡೆಗೆ ಹೊಂದಿಕೊಂಡು

ಇಲ್ಲವೇ ಅರ್ಧ ಬಿದ್ದಿರುವ ಕೋಟೆಗೋಡೆಯ ಮೇಲೆ ಮತ್ತೆ ಗೋಡೆಯನ್ನು ಕಟ್ಟಿ ಆಧುನಿಕವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಕೋಟೆಗೋಡೆಯ ಹೊರಭಾಗದಲ್ಲಿ ಬಂದೂಕುಕಿಂಡಿಗಳನ್ನು ಕಾಣಬಹುದು.

ಕೋಟೆಗೋಡೆಗೆ ಹೊಂದಿಕೊಂಡು ಸುತ್ತಲೂ ನಾಲ್ಕು ಮೂಲೆಗಳಲ್ಲಿ ನಾಲ್ಕು ಬುರುಜುಗಳಿವೆ. ಆದರೆ ಇದರಲ್ಲಿ ಎರಡು ಮಾತ್ರ ಉಳಿದುಕೊಂಡಿದ್ದು ಒಂದು ಬುರುಜು ೨೫ ಅಡಿ, ಇನ್ನೊಂದು ೩೦ ಅಡಿ ಎತ್ತರವಿದೆ. ಉಳಿದೆರಡು ಅವಶೇಷಗಳು ಮಾತ್ರ ಕಂಡುಬರುತ್ತವೆ. ಇವುಗಳ ಮಧ್ಯೆ ಮತ್ತು ಮೇಲ್ಭಾಗದಲ್ಲಿ ಬಂದೂಕುರಂಧ್ರಗಳಿವೆ. ಹೀಗಾಗಿ ಇವು ಮಧ್ಯಭಾಗದಲ್ಲಿ ಟೊಳ್ಳಾಗಿದ್ದವು ಎಂದು ಹೇಳಬಹುದು. ಇಲ್ಲಿಯ ಒಂದು ಬುರುಜುವಿನಲ್ಲಿ ಪೂರ್ವಭಾಗದಲ್ಲಿ ಪೂರ್ವಕ್ಕೆ ಮುಖ ಮಾಡಿ ೨ ಅಡಿ ಎತ್ತರ, ೧.೫೦ ಅಡಿ ಅಗಲವಾದ ಫಿರಂಗಿಕಿಂಡಿಯಿದೆ. ಈ ಗ್ರಾಮದಲ್ಲಿ ಯಾವುದೇ ದೇಸಗತಿ ಮನೆತನಗಳು ಕಂಡುಬರುವುದಿಲ್ಲ. ಹೀಗಾಗಿ ಇದೊಂದು ಗ್ರಾಮರಕ್ಷಣೆಗಾಗಿ ಸ್ಥಳೀಯರೇ ನಿರ್ಮಿಸಿಕೊಂಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ.

ಕ್ಯಾತನಡೋಣಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೨೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪ್ರಾಚೀನತೆ ಕುರಿತು ನಮಗೆ ಯಾವುದೇ ಐತಿಹಾಸಿಕ ಆಕರಗಳು ಇದುವರೆಗೆ ಲಭ್ಯವಾಗಿಲ್ಲ. ಗ್ರಾಮದಲ್ಲಿ ನಿರ್ಮಾಣವಾದ ಕೋಟೆಯು ಇಂದು ಸಂಪೂರ್ಣವಾಗಿ ವಿನಾಶದ ಅಂಚಿನಲ್ಲಿದೆ. ಗ್ರಾಮವನ್ನು ಸುತ್ತುವರಿದಂತೆ ಮೂರು ಅಡಿ ಎತ್ತರದ ೧.೩೦ ಅಡಿ ದಪ್ಪದ ಕೋಟೆಗೋಡೆ ಅಲ್ಲಲ್ಲಿ ಕಂಡುಬರುತ್ತದೆ. ಇದನ್ನು ಸ್ಥಳೀಯವಾಗಿ ಸಿಗುವ ದಪ್ಪ ಗುಂಡುಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿ ದ್ವಾರವನ್ನು ಹೊಂದಿದ್ದು ಶಿಥಿಲಗೊಂಡಿದೆ. ದ್ವಾರಬಾಗಿಲು ಇರುವ ಸ್ಥಳವನ್ನು ಸ್ಥಳೀಯರು ಅಗಸೆ ಬಾಗಿಲು ಎಂದು ಒಂದು ಗುಂಡುಕಲ್ಲನ್ನು ಇಟ್ಟು ಪೂಜಿಸುತ್ತಾರೆ. ಆಗ್ನೇಯಭಾಗದಲ್ಲಿ ಕಲ್ಲುಬಂಡೆಯ ದಿಬ್ಬದ ಮೇಲೆ ೧೫ ಅಡಿ ಎತ್ತರದ ಬುರುಜು ಉಳಿದುಕೊಂಡಿದ್ದು ಅದರಲ್ಲಿ ಬಂದೂಕುಕಿಂಡಿಗಳನ್ನು ಕಾಣಬಹುದು. ಬುರುಜುವಿಗೆ ಹೊಂದಿಕೊಂಡಂತೆ ಎರಡು ಬದಿಯಲ್ಲಿ ೧೦ರಿಂದ ೨೦ ಅಡಿ ಉದ್ದ ಹಾಗೂ ೩ ಅಡಿ ಎತ್ತರವಾಗಿರುವ ಕೋಟೆಗೋಡೆಯು ಉಳಿದುಕೊಂಡಿದೆ. ದಕ್ಷಿಣಭಾಗದ ಕೋಟೆ ಗೋಡೆಯು ಬಂಡೆಕಲ್ಲಿನ ದಿಬ್ಬದ ಮೇಲೆ ನಿರ್ಮಾಣವಾಗಿದ್ದು ಉಳಿದ ಮೂರು ಭಾಗದಲ್ಲಿ ಕೋಟೆಗೋಡೆಯನ್ನು ನೆಲಮಟ್ಟದಲ್ಲಿ ನಿರ್ಮಿಸಿದ್ದು ಕಂಡುಬರುತ್ತದೆ. ಈ ಕೋಟೆಯನ್ನು ಗ್ರಾಮದ ಜನರು ತಮ್ಮ ರಕ್ಷಣೆಗಾಗಿ ಸ್ಥಳೀಯರೇ ನಿರ್ಮಿಸಿಕೊಂಡಿರುವ ಸಾಧ್ಯತೆಗಳಿವೆ. ಕ್ರಿ.ಶ. ೧೫ರಿಂದ ೧೮ನೇ ಶತಮಾನದವರೆಗೆ ನಡೆದ ಸಂಘರ್ಷಗಳಿಂದ ತಪ್ಪಿಸಿಕೊಳ್ಳಲು ಸ್ಥಳೀಯರೇ ತಮ್ಮ ಗ್ರಾಮದ ರಕ್ಷಣೆಗಾಗಿ ನಿರ್ಮಿಸಿಕೊಂಡ ಕೋಟೆ ಇದಾಗಿದೆ.

ಜಟ್ಟಗಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೧೮ ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನತೆ ಕುರಿತಾಗಿ ತಿಳಿಸುವ ಯಾವುದೇ ಆಕರಗಳು ಇದುವರೆಗೆ ಲಭ್ಯವಾಗಿಲ್ಲ. ಹೀಗಾಗಿ ಗ್ರಾಮದ ಪ್ರಾಚೀನತೆಯನ್ನು ಕ್ರಿ.ಶ. ೧೬ನೇ ಶತಮಾನದಿಂದಲೇ ಗುರುತಿಸಲಾಗುತ್ತದೆ.

ಕ್ರಿ.ಶ. ೧೬ರಿಂದ ೧೭ನೇ ಶತಮಾನದಲ್ಲಿ ನಿರ್ಮಾಣವಾದ ಕೋಟೆಯಿದ್ದು ಗ್ರಾಮದ ಸುತ್ತಲೂ ಕಂಡುಬರುತ್ತದೆ. ಸ್ಥಳೀಯವಾಗಿ ಸಿಗುವ ದಪ್ಪವಾದ ಗುಂಡುಕಲ್ಲು ಕಟೆದು ಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಕೋಟೆಗೋಡೆಯು ಬಹುತೇಕ ನಾಶ ಹೊಂದಿದ್ದು, ಅಲ್ಲಲ್ಲಿ ಕಂಡುಬರುವ ಕೋಟೆಯ ಗೋಡೆಯ ಅವಶೇಷಗಳು ೩ರಿಂದ ೪ ಅಡಿ ಎತ್ತರ ೬.೫ ಅಡಿ ದಪ್ಪವಾಗಿದ್ದ ಗೋಡೆ ಕಂಡುಬರುತ್ತದೆ. ಉತ್ತರಕ್ಕೆ ಕಲ್ಲುಬಂಡೆಯ ದಿಬ್ಬದ ಮೇಲೆ ಸುಮಾರು ೨೦ ಅಡಿ ಎತ್ತರವಾಗಿರುವ ಬುರುಜು ಉಳಿದುಕೊಂಡಿದ್ದು ಬುರುಜುವಿನ ಮೇಲ್ಭಾಗಕ್ಕೆ ಹೋಗಲು ೧೪ ಅಡಿ ಎತ್ತರದ ಮೇಲೆ ೩X೨.೫೦ ಅಡಿ ಉದ್ದಗಲದ ಬಾಗಿಲು ಉಳಿದುಕೊಂಡಿದೆ. ಇನ್ನುಳಿದಂತೆ ಬುರುಜುವಿನಲ್ಲಿ ಬಂದೂಕುರಂಧ್ರಗಳು ಕಂಡುಬರುತ್ತವೆ. ಬಹುಶಃ ಕೋಟೆಯೊಳಗೆ ಸುಮಾರು ೨೦ರಿಂದ ೩೦ ಮನೆಗಳು ಇಂದು ಕಂಡುಬರುತ್ತವೆ. ಹೀಗಾಗಿ ಗ್ರಾಮದ ಜನರೇ ತಮ್ಮ ರಕ್ಷಣೆಗಾಗಿ ನಿರ್ಮಿಸಿಕೊಂಡಿರುವ ಕೋಟೆಯಾಗಿದೆ ಎಂದು ಹೇಳಬಹುದು.

ನಾಗಬೇನಾಳ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೩೫ ಕಿ.ಮೀ. ಮತ್ತು ನಾಲತವಾಡದಿಂದ ೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನತೆ ಬಗ್ಗೆ ಯಾವುದೇ ಆಕರಗಳು ಲಭ್ಯವಿಲ್ಲ. ಆದರೆ ಇದು ದೇಸಗತಿಯ ಆಡಳಿತಕ್ಕೆ ಒಳಪಟ್ಟಿದ್ದು ತಿಳಿದುಬರುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ಕಂಡುಬರುವ ದೇಸಗತಿ ಮನೆತನಗಳಲ್ಲಿ ನಾಲತವಾಡ ದೇಶಮುಖರು ಪ್ರಮುಖರಾಗಿದ್ದಾರೆ. ಮೂಲತಃ ನಾಗಬೇನಾಳದ ವತನದಾರರಾದ ಈ ದೇಶಮುಖರು ಆಡಳಿತದ ಅನುಕೂಲತೆಗಾಗಿ ತಮ್ಮ ವಾಸದ ಸ್ಥಳವನ್ನು ಅಂದಿನ ಹೋಬಳಿಕೇಂದ್ರವಾಗಿದ್ದ ನಾಲತವಾಡಕ್ಕೆ ಸ್ಥಳಾಂತರಿಸಿದರು. ಅಂದಿನಿಂದ ಇವರನ್ನು ನಾಲತವಾಡದ ದೇಶಮುಖರೆಂದೇ ಕರೆಯುತ್ತಾರೆ.[೨೪೬] ಮರಾಠ ಪೇಶ್ವೆಗಳಿಂದ ಈ ನಾಗಬೇನಾಳದ ವತನದಾರಿಕೆ ಲಭಿಸಿದಂತೆ ಕಂಡುಬರುತ್ತದೆ. ಮರಾಠ ಹಾಗೂ ಬ್ರಿಟಿಷರ ಕಾಲಾವಧಿಯಲ್ಲಿಯೂ ಇದು ಮುಂದುವರಿದುಕೊಂಡು ಬಂದಿದೆ. ಇವರ ಆರಂಭಿಕ ಮೂಲದ ಕುರಿತಾಗಿ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಸದ್ಯ ನಮಗೆ ದೊರೆತ ದಾಖಲೆಯ ಪ್ರಕಾರ ನಾಗಬೇನಾಳ ದೇಶಮುಖರ ರಾಜಕೀಯ ಇತಿಹಾಸವು ಶ್ರೀ ಸಂಗಪ್ಪ ಅಣ್ಣಾಸಾಹೇಬ ದೇಶಮುಖ ಇವರ ಕಾಲದಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಇವರ ನಂತರ ಇವರ ಮಗನಾದ ಬಸಲಿಂಗಪ್ಪ ಸಂಗಪ್ಪ ದೇಶಮುಖರು ಅಧಿಕಾರಕ್ಕೆ ಬಂದಾಗ ನಾಗಬೇನಾಳದ

ಮೂಲವಾಡೆಯ ಜೊತೆಗೆ ಅಂದು ಹೋಬಳಿಕೇಂದ್ರವಾಗಿದ್ದ ನಾಲತವಾಡದಲ್ಲಿ ಒಂದು ವಾಡೆಯನ್ನು ನಿರ್ಮಿಸಿದರು. ಅಂದಿನಿಂದ ತಮ್ಮ ಕೇಂದ್ರಸ್ಥಾನವನ್ನು ನಾಗಬೇನಾಳದಿಂದ ನಾಲತವಾಡಕ್ಕೆ ಬದಲಾವಣೆ ಮಾಡಿದರು.[೨೪೬] ಒಟ್ಟು ಇವರಿಗೆ ೪೦ ಹಳ್ಳಿಗಳ ವತನದಾರಿಕೆ ಲಭ್ಯವಾಗಿತ್ತು. ಈ ದೇಶಮುಖರ ಕಾಲದಲ್ಲಿ ನಾಗಬೇನಾಳದಲ್ಲಿ ನಿರ್ಮಾಣವಾದ ಕೋಟೆ ಮತ್ತು ವಾಡೆ ಇಂದಿಗೂ ಉಳಿದುಕೊಂಡು ಬಂದಿದೆ.

ದಪ್ಪವಾದ ಗುಂಡುಕಲ್ಲು, ಕಟೆದ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ನಿರ್ಮಿಸಿದ ಕೋಟೆಯು ಚೌಕಾಕಾರವಾಗಿದ್ದು ಮಧ್ಯದ ವಾಡೆ ತಲುಪಲು ಐದು ಪ್ರವೇಶದ್ವಾರಗಳಿದ್ದು ಪ್ರತಿಯೊಂದು ಪ್ರವೇಶದ್ವಾರದ ನಿರ್ಮಾಣದ ಹಿನ್ನೆಲೆ ಶತ್ರುಗಳು ಕೋಟೆಯನ್ನು ಸುಲಭವಾಗಿ ಆಕ್ರಮಿಸದಂತೆ ತಂತ್ರಗಾರಿಕೆಯನ್ನು ಹೆಣೆಯಲಾಗಿದೆ. ಕೋಟೆಯು ಚೌಕಾಕಾರವಾಗಿದ್ದು ೪೪೫ ಮೀ. ಸುತ್ತಳತೆಯನ್ನು ಹೊಂದಿದೆ. ೧೧.೫೦ ಅಡಿ ದಪ್ಪದ ಕೋಟೆಗೋಡೆಯನ್ನು ಹೊಂದಿದ್ದು ಇಂದಿಗೂ ನೋಡಲು ಆಕರ್ಷಕವಾಗಿ ಕಂಡುಬರುತ್ತಿದ್ದು ಪೂರ್ಣಪ್ರಮಾಣದಲ್ಲಿ ಉಳಿದು ಕೊಂಡುಬಂದಿದೆ. ಹೀಗಾಗಿ ಕೋಟೆಗೋಡೆಯ ಎಲ್ಲ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಕೋಟೆಗೋಡೆ ಸುತ್ತಲೂ ನಾಲ್ಕು ಕಡೆ ೩೦ ಅಡಿ ಎತ್ತರವಾಗಿದ್ದು. ಕೆಳಭಾಗದಲ್ಲಿ ದಪ್ಪವಾದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದ್ದು ಮೇಲ್ಭಾಗಕ್ಕೆ ಹೋದಂತೆ ಕಡಿಮೆ ಗಾತ್ರದ ಕಟೆದ ಕಲ್ಲುಗಳನ್ನು ಬಳಸಿದ್ದಾರೆ. ಗೋಡೆಯ ಮಧ್ಯದಲ್ಲಿ ಎರಡು ಹಂತದಲ್ಲಿ ಬಂದೂಕು ಮತ್ತು ವೀಕ್ಷಣಾ ಕಿಂಡಿಗಳಿವೆ. ಬಂದೂಕುಕಿಂಡಿಗಳು ಒಂದರಿಂದ ಮತ್ತೊಂದರ ಮಧ್ಯೆ ೨ ಅಡಿ ಅಂತರವಿದ್ದು ೩ ಅಡಿ ಎತ್ತರ, ೯ ಅಂಗುಲ ಅಗಲವಾದ ಕಿಂಡಿಗಳಿವೆ. ಇವುಗಳನ್ನು ಕೋಟೆಯ ಒಳಗಿನಿಂದ ನೋಡಿದಾಗ ಒಂದೇ ಕಿಂಡಿಯಿಂದ ಮೂರು ಕಡೆ ಗುರಿಯಿಟ್ಟು ಹೊಡೆಯುವಂತೆ ನಿರ್ಮಿಸಲಾಗಿದೆ. ಗೋಡೆಗೆ ಆಲಂಕಾರಿಕವಾಗಿ ಒಂದು ಕಲ್ಲಿನಿಂದ ನಿರ್ಮಿಸಿದ ೬ ಅಂಗುಲ ಅಗಲವಾದ ಮುಂಚಾಚಿದ ಪಟ್ಟಿ ಇದೆ. ಅದರ ಮೇಲೆ ಎದೆ ಮಟ್ಟದವರೆಗೆ ಕೈಪಿಡಿಗೋಡೆ ಇದ್ದು ಅದರಲ್ಲಿಯೇ ಅಲಂಕಾರಕ್ಕಾಗಿ ತೆನೆಗಳ ರಚನೆ ಕಂಡುಬರುತ್ತದೆ. ಕೈಪಿಡಿಗೋಡೆ ಹಿಂಭಾಗದಲ್ಲಿ ಸೈನಿಕರು ನಿಂತುಕೊಳ್ಳಲು ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಅಟ್ಟಾಲಕವನ್ನು ನಿರ್ಮಿಸಲಾಗಿದೆ. ಉತ್ತರದ ಕೋಟೆಗೋಡೆಯಲ್ಲಿ ದಿಡ್ಡಿಬಾಗಿಲು ಇದ್ದು ಇಂದು ಕೋಟೆಯೊಳಗೆ ಇರುವ ಸ್ಥಳೀಯರು ಕಂದಕದ ಮಧ್ಯೆ ನಿರ್ಮಿಸಿದ ಬಾವಿಯಲ್ಲಿನ ನೀರು ತರಲು ಉಪಯೋಗಿಸುತ್ತಿದ್ದಾರೆ.

ಕೋಟೆಗೋಡೆಗೆ ಹೊಂದಿಕೊಂಡು ವೃತ್ತಾಕಾರದ ಆರು ಬುರುಜುಗಳು ೪೦ ಅಡಿ ಎತ್ತರದವರೆಗೆ ಇದ್ದು ಮಧ್ಯೆ ಬಂದೂಕುಕಿಂಡಿಗಳು ಕಂಡುಬರುತ್ತವೆ. ಬುರುಜುಗಳು ಆಕರ್ಷಕವಾಗಿ ಕಂಡುಬರಲು ಕೈಪಿಡಿಗೋಡೆಯಲ್ಲಿ ಆಲಂಕಾರಿಕವಾಗಿರುವ ತೆನೆಗಳ ರಚನೆ ಕಂಡುಬರುತ್ತದೆ.

ಕೋಟೆಯ ಸುತ್ತಲೂ ಕಂದಕವಿದ್ದು ೪೦ ಅಡಿ ಅಗಲವಾಗಿದೆ. ಇಂದು ಕಂದಕವು ಮುಚ್ಚಿಕೊಂಡಿದೆ. ಕಂದಕದ ಸುತ್ತಲೂ ೪ ಅಡಿ ದಪ್ಪದ ಗೋಡೆಯನ್ನು ಹೊಂದಿದ್ದು ೫೯೬

ಮೀ. ಸುತ್ತಳತೆಯಿದೆ. ಈ ಹೊರ ರಕ್ಷಣಾಗೋಡೆಯು ಭದ್ರವಾಗಿ ಉಳಿಯಲು ಮಣ್ಣಿನಿಂದ ಇಳಿಪೊರೆ ನಿರ್ಮಿಸಲಾಗಿದೆ.

ಕೋಟೆಗೋಡೆಯನ್ನು ಪ್ರವೇಶಿಸಿ ವಾಡೆಯನ್ನು ತಲುಪಲು ಪ್ರಮುಖವಾಗಿ ಐದು ದ್ವಾರಗಳನ್ನು ನಿರ್ಮಿಸಿದ್ದಾರೆ. ಮೊದಲನೇ ದ್ವಾರವು 'C' ಆಕಾರದಲ್ಲಿದ್ದು ಚೌಕಾಕಾರವಾಗಿದೆ. ಇದರ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ ದ್ವಾರದ ರಕ್ಷಣೆಗೆ ಎರಡು ಕಡೆ ಬುರುಜುಗಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಇಂದು ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಮೊದಲನೇ ದ್ವಾರವನ್ನು ಪ್ರವೇಶಿಸಿದ ಮೇಲೆ ದೊಡ್ಡ ವರ್ತುಲಾಕಾರದ ಆವರಣ ಕಂಡುಬರುತ್ತದೆ. ಆವರಣವು ಕೋಟೆಗೋಡೆಯಿಂದ ಸುತ್ತುವರಿದಿದೆ. ಆವರಣದಿಂದ ಮುಂದೆ ಸಾಗಿದರೆ ಪೂರ್ವಾಭಿಮುಖವಾಗಿರುವ ಎರಡನೇ ದ್ವಾರ ಕಂಡುಬರುತ್ತದೆ. ಕಮಾನಾಕೃತಿಯ ದ್ವಾರವು ಪ್ರವೇಶಿಸಿದ ಮೇಲೆ ಇಕ್ಕೆಲಗಳಲ್ಲಿ ಕಾವಲುಗಾರರು ಅಥವಾ ಸೈನಿಕರ ಕೊಠಡಿಗಳಿವೆ. ಇಲ್ಲಿಂದ ಮುಂದೆ 'S' ಆಕಾರದಲ್ಲಿ ಬಲಭಾಗಕ್ಕೆ ಹೋದರೆ ಮೂರನೇ ದ್ವಾರ ಕಂಡುಬರುತ್ತದೆ. ಇದು ಕಮಾನಾಕೃತಿಯಲ್ಲಿದ್ದು ಇಕ್ಕೆಲಗಳಲ್ಲಿ ಕಾವಲುಗಾರರ ಕೊಠಡಿಗಳಿವೆ. ಉತ್ತರಾಭಿಮುಖವಾಗಿರುವ ದ್ವಾರದಿಂದ ಒಳಗೆ ಬಂದಾಗ ಆಯತಾಕಾರದ ದೊಡ್ಡ ಆವರಣವಿದೆ. ಇದು ೨೧X೩೬ ಮೀ. ಉದ್ದಗಲವಾಗಿದೆ. ದ್ವಾರಬಾಗಿಲು ದಾಟಿ ಆವರಣದಲ್ಲಿ ಬರುವ ಶತ್ರುಗಳ ಮೇಲೆ ದಾಳಿ ಮಾಡಲು ಅಥವಾ ದ್ವಾರದ ರಕ್ಷಣೆಗೆ ಎರಡು ಬುರುಜುಗಳು ಕಂಡುಬರುತ್ತವೆ. ಈ ದ್ವಾರವು ೧೦ ಅಡಿ ಅಗಲ, ೧೧ ಅಡಿ ಎತ್ತರವಿದ್ದು ಈ ದ್ವಾರಕ್ಕೆ ದಪ್ಪ ಮರದ ತೊಲೆಗಳನ್ನು ಕಬ್ಬಿಣದ ಹಿಡಿಪಟ್ಟಿಯಿಂದ ಬಂಧಿಸಿ ಮಾಡಿದ ಬಾಗಿಲುಗಳಿವೆ. ಈ ಆವರಣದಿಂದ ಬಂದು ಬಲಕ್ಕೆ ತಿರುಗಿದಾಗ ನಾಲ್ಕನೇ ದ್ವಾರವು ಸಿಗುತ್ತದೆ. ಇದು ಪೂರ್ವಾಭಿಮುಖವಾಗಿದ್ದು ಒಳಭಾಗದ ಇಕ್ಕೆಲಗಳಲ್ಲಿ ಕಾವಲುಗಾರರ ಕೊಠಡಿಗಳು, ಅರ್ಧವೃತ್ತಾಕಾರದ ಗುಪ್ತದ್ವಾರಗಳು ಕಂಡುಬರುತ್ತವೆ. ಮುಂದೆ ಐದನೇ ದ್ವಾರವು ಉತ್ತರಾಭಿಮುಖವಾಗಿದ್ದು, ಇದು ವಾಡೆಯ ಪ್ರವೇಶದ್ವಾರವಾಗಿದ್ದು ಚೌಕಾಕಾರವಾಗಿದೆ. ಪ್ರತಿಯೊಂದು ದ್ವಾರವು ಪ್ರವೇಶಿಸಿದ ಮೇಲೆ ಚೌಕಾಕಾರದ ಕಾವಲುಗಾರರ ಕೊಠಡಿಗಳಿದ್ದು ಹೀಗಾಗಿ ದ್ವಾರಬಾಗಿಲ ಮೇಲೆ ಸುತ್ತಲೂ ಕೈಪಿಡಿಗೋಡೆ ಮತ್ತು ತೆನೆಗಳನ್ನು ಹೊಂದಿರುವ ಚೌಕಾಕಾರದ ಛತ್ತು ಇದ್ದು, ಇವು ದ್ವಾರಬಾಗಿಲಿನ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಒಂದನೆಯ ಮತ್ತು ಎರಡನೆಯ ದ್ವಾರಗಳು ಕಂದಕದ ಸುತ್ತ ಇರುವ ರಕ್ಷಣಾಗೋಡೆಗೆ ಹೊಂದಿಕೊಂಡಿವೆ. ಉಳಿದ ಎರಡು ದ್ವಾರಗಳು ಕೋಟೆಗೋಡೆಗೆ ಹೊಂದಿಕೊಂಡರೆ ಒಂದು ವಾಡೆಯ ಸುತ್ತಲೂ ಇರುವ ರಕ್ಷಣಾಗೋಡೆಗೆ ಹೊಂದಿಕೊಂಡಿದೆ.

ಕೋಟೆಯ ನೈರುತ್ಯ ಭಾಗದಲ್ಲಿ ವಾಡೆಯಿದ್ದು ವಾಡೆಯ ಸುತ್ತಲೂ ಬಂದೂಕು ಕಿಂಡಿ, ಕೈಪಿಡಿಗೋಡೆ ಇರುವ ರಕ್ಷಣಾಗೋಡೆಯಿದ್ದು ಇದಕ್ಕೆ ಹೊಂದಿಕೊಂಡು ಕೋಟೆಯ ಮಧ್ಯಭಾಗದಲ್ಲಿರುವಂತೆ ಉಳಿದ ಬುರುಜುಗಳಿಗಿಂತ ೪೫ ಅಡಿ ಎತ್ತರದ ಬುರುಜಿದೆ. ಈ ಬುರುಜುವಿನ ಮೇಲೆ ನಿಂತು ನೋಡಿದರೆ ಕೋಟೆಯೊಳಗೆ ಮತ್ತು ಕೋಟೆ ಹೊರಗಿನ ಎಲ್ಲ

ಚಟುವಟಿಕೆಗಳನ್ನು ಕಾಣಬಹುದು. ಇನ್ನು ವಾಡೆಯೊಳಗೆ ಎರಡು ಅಂತಸ್ತಿನ ಕಟ್ಟಡಗಳು, ಮೊಗಸಾಲೆಗಳಿದ್ದು ಇಂದು ಯಾರೂ ವಾಸಿಸುತಿಲ್ಲ. ಹೀಗಾಗಿ ಎಲ್ಲವೂ ಅವನತಿಯ ಸ್ಥಿತಿಯಲ್ಲಿವೆ. ಕೋಟೆಯೊಳಗೆ ಇಂದು ಆಧುನಿಕವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ವಾಡೆಯೊಳಗೆ ಗುಪ್ತವಾಗಿ ಸುರಂಗಮಾರ್ಗವಿದ್ದು ಅದು ಕೋಟೆಯ ಹೊರಗಿನ ವರೆಗೂ ಅದರ ದಾರಿಯಿದೆ ಎಂದು ಸ್ಥಳೀಯರು ಹೇಳುತ್ತಾರೆ. ಧಾನ್ಯಗಳನ್ನು ಸಂಗ್ರಹಿಸಲು ಕಣಜಗಳನ್ನು ಕೋಟೆಯಲ್ಲಿ ಕಾಣಬಹುದು. ಒಟ್ಟಾರೆಯಾಗಿ ಕೋಟೆಯ ಮಧ್ಯದಲ್ಲಿ ದೇಶಮುಖರ ರಕ್ಷಣೆಗಾಗಿ ಅದರ ಮುಂಭಾಗದಲ್ಲಿ ಅಧಿಕಾರಿವರ್ಗ ಹಾಗೂ ಗ್ರಾಮದ ಜನರ ರಕ್ಷಣೆಗಾಗಿ ಈ ಕೋಟೆಯನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಈಗಲೂ ಈ ಗ್ರಾಮದ ಬಹುತೇಕ ಮನೆಗಳು ಈ ಕೋಟೆಯೊಳಗೆ ಕಂಡುಬರುತ್ತವೆ. ವಿಜಾಪುರ ಜಿಲ್ಲೆಯಲ್ಲಿ ನಿರ್ಮಾಣವಾದ ಎಲ್ಲ ಕೋಟೆಗಳಿಗಿಂತ ಇದು ಪೂರ್ಣ ಹಾಗೂ ಸುವ್ಯವಸ್ಥೆಯಲ್ಲಿರುವ ಕೋಟೆಗಳಲ್ಲಿ ಒಂದಾಗಿದೆ.

ತಾಳಿಕೋಟೆ

ಭೀಮಾ ನದಿಯ ಎಡದಂಡೆಯ ಮೇಲೆ ಸ್ಥಾಪಿತವಾಗಿರುವ ತಾಳಿಕೋಟೆ ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೨೫ ಕಿ.ಮೀ. ದೂರದಲ್ಲಿದೆ. ವ್ಯಾಪಾರ ಮತ್ತು ವಾಣಿಜ್ಯೀಕರಣದಿಂದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಇದು ಕೂಡ ಒಂದಾಗಿದೆ. ಇಂದು ಒಂದು ತಾಲೂಕುಕೇಂದ್ರವಾಗುವಷ್ಟರ ಮಟ್ಟಿಗೆ ಬೆಳೆದುನಿಂತಿದೆ.

ಕ್ರಿ.ಶ. ೧೧೮೧,[೨೪೮] ೧೧೮೪[೨೪೯] ಮತ್ತು ೧೨೨೫[೨೫೦]ರ ಶಾಸನಗಳು ಈ ಗ್ರಾಮವನ್ನು 'ತಾಳಿಯಕೋಟೆ' ಎಂದು ಉಲ್ಲೇಖಿಸುತ್ತವೆ. ತಾಳಿಕೋಟೆ ಅಥವಾ ಶಾಸನೋಕ್ತ ತಾಳಿಯಕೋಟೆ ಐತಿಹಾಸಿಕ ಮಹತ್ವ ಪಡೆದ ಸ್ಥಳವಾಗಿದೆ. ತಾಳಿಕೋಟೆ ಎಂಬ ಹೆಸರು ಬರಲು ಕೆಲವು ವೃತ್ತಾಂತಗಳಿವೆ.

*ಊರಿನ ಗ್ರಾಮದೇವತೆಯಾದ ದ್ಯಾಮವ್ವ ಮದುವೆಗೆ ಬಡಬಗ್ಗರಿಗೆ ಬೇಡಿದಾಗಲೆಲ್ಲ ತನ್ನ ತಾಳಿಯನ್ನು ಕೊಡುತ್ತಿದ್ದುದರಿಂದ ಈ ಊರಿಗೆ ತಾಳಿಕೋಟೆಯೆಂದು ಹೆಸರು ಬಂದಿತೆಂದು ಸ್ಥಳೀಯರು ಹೇಳುತ್ತಾರೆ.

*ಶಾಹಿ ದೊರೆಗಳ ನಾಲ್ಕು ಜನ ಸೈನಿಕರು ತಾಳಿಕೋಟೆಯಲ್ಲಿ ಠಿಕಾಣಿ ಹೂಡಿದಾಗ ಅವರ ಮೇಲೆ ಯುದ್ಧ ಮಾಡಲು ವಿಜಯನಗರದ ಅರಸರು ದಾಳಿ ಮಾಡಿ ತಮ್ಮ ಬೃಹತ್ ಫಿರಂಗಿಗಳಿಂದ ಕೋಟೆಗೋಡೆಯನ್ನು ಒಡೆಯಲು ಪ್ರಯತ್ನಿಸಿದರು. ಸುಲ್ತಾನರ ಸೈನಿಕರು ಸಮರ್ಥವಾಗಿ ಈ ದಾಳಿಯನ್ನು ತಡೆದುದರಿಂದ ಈ ಊರಿಗೆ ತಡೆಯ ಕೋಟೆಯೆಂದು ಕರೆದರು. ಮುಂದೆ ಅದು ಜನರ ಬಾಯಲ್ಲಿ ಬರಬರುತ್ತ ತಾಳಿಕೋಟೆಯಾಯಿತೆಂದು ಈ ಊರಿನ ಕೆಲವು ಹಿರಿಯರು ಹೇಳುತ್ತಾರೆ.[೨೫೧]

*ಡೋಣಿ ನದಿಯ ದಂಡೆಯ ಮೇಲೆ ತಾಳೆ ಮರಗಳು ಹೆಚ್ಚಾಗಿ ಬೆಳೆಯುತ್ತಿದ್ದವು. ಈ ಗ್ರಾಮಕ್ಕೆ ತಾಳೆಯ ಮರಗಳೇ ಕೋಟೆಯಂತೆ ರಕ್ಷಣೆ ಒದಗಿಸಿದ್ದವು. ಆದ ಕಾರಣ ಈ ಊರಿಗೆ ತಾಳಿಕೋಟೆ ಎಂದು ಹೆಸರು ಬಂದಿತೆಂದು ಸ್ಥಳೀಯರು ಹೇಳುತ್ತಾರೆ.

*ಊರಿನ ಸುತ್ತಲೂ ಬೃಹತ್ ಕೋಟೆಯು ಸುತ್ತುವರಿದಿದ್ದರಿಂದ ತಾಳಿಕೋಟೆ ಎಂಬ ಹೆಸರು ಬಂದಿತೆಂದು ಜನಮನದಲ್ಲಿ ಪ್ರಚಲಿತದಲ್ಲಿದೆ.

ಶಿಲಾ-ತಾಮ್ರಯುಗ ಮತ್ತು ಬೃಹತ್‌ಶಿಲಾಯುಗಕ್ಕೆ ಸಂಬಂಧಿಸಿದ ನೆಲೆಯಾಗಿರುವ[೨೫೨] ಈ ನಗರದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ರಾಮದೇವರ ಮತ್ತು ಸಿದ್ಧಲಿಂಗೇಶ್ವರ ದೇವಾಲಯಗಳಿವೆ. ಇಲ್ಲಿ ಚಾಳುಕ್ಯರು ಮತ್ತು ಯಾದವರಿಗೆ ಸಂಬಂಧಿಸಿದ ಐದು ಶಾಸನಗಳು ಕಂಡುಬರುತ್ತವೆ. ಇವು ಗ್ರಾಮದ ಪ್ರಾಚೀನತೆಗೆ ನಿದರ್ಶನವಾಗಿವೆ. ಯಾದವರ ಹಾಗೂ ಆದಿಲ್‌ಶಾಹಿಗಳ ಕಾಲಾವಧಿಯಲ್ಲಿ ಇದು ಸೈನ್ಯವನ್ನಿರಿಸುವ ಠಾಣ್ಯವಾಗಿರಬೇಕು. ಈ ಕುರಿತು ಕ್ರಿ.ಶ. ೧೨೨೫ ಮತ್ತು ಕ್ರಿ.ಶ. ೧೫೦೦ರ ತಾಳಿಕೋಟೆಯಲ್ಲಿರುವ ಶಾಸನಗಳು ಸುಳುಹು ನೀಡುತ್ತವೆ.

ಆದಿಲ್‌ಶಾಹಿಗಳ ಆಡಳಿತದ ಕೊನೆಯ ಘಟ್ಟದಲ್ಲಿ ಔರಂಗಜೇಬನ ಸೈನ್ಯಾಧಿಕಾರಿ ದಿಲೇರಖಾನನು ವಿಜಾಪುರದ ಮೇಲೆ ದಾಳಿ ಮಾಡಿ ಯಶಸ್ವಿಯಾಗದೆ ವಿಫಲನಾಗಿ ಹಿಂದುರುಗಿ ಹೋಗುವಾಗ ವಿಜಾಪುರ ಸುತ್ತಲಿನ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಹಾಗೆಯೇ ತಾಳಿಕೋಟೆಯ ಮೇಲೆ ದಾಳಿ ಮಾಡಿದ. ಅಲ್ಲಿನ ಮೊಕಾದಾಮ ಮಂಡಳಿಯು ದಿಲೇರಖಾನನ್ನು ಎದುರಿಸಿ ಆತನ ದಂಡಿಗೆ ಎದುರಾಗಿ ಕೋಟೆಯ ಮೇಲಿನ ತೋಪುಗಳನ್ನು ಹಾರಿಸಿದರಾದರೂ ಕೊನೆಗೆ ಕೋಟೆಯು ದಿಲೇರಖಾನನ ವಶವಾಯಿತು. ಅಲ್ಲಿ ಕುದುರೆಗಳನ್ನು ಕಸಿದುಕೊಂಡು ಊರನ್ನು ಕೊಳ್ಳೆ ಹೊಡೆದು ನಾಶ ಮಾಡಿದನು. ಅಲ್ಲದೆ ಸುಮಾರು ಒಂದು ಸಾವಿರ ಜನರನ್ನು ಬಂಧಿಸಿದನು ಎಂದು ತಿಳಿದುಬರುತ್ತದೆ.[೨೫೩]

ಆದಿಲ್‌ಶಾಹಿಗಳ ಅವನತಿಯ ನಂತರ ಕ್ರಿ.ಶ. ೧೬೮೬ ರಿಂದ ೧೭೬೦ರ ಅವಧಿಯಲ್ಲಿ ತಾಳಿಕೋಟೆಯು ಒಂದು ಪ್ರಮುಖ ಪರಗಣವಾಗಿದ್ದು ಇದರಲ್ಲಿ ೨೦೬ ಹಳ್ಳಿಗಳನ್ನು ಒಳಗೊಂಡಿತ್ತು. ಕ್ರಿ.ಶ. ೧೭೬೦ರ ನಂತರ ತಾಳಿಕೋಟೆ ಪ್ರದೇಶವು ಮರಾಠರ ವಶವಾದ ಮೇಲೆ ಪೇಶ್ವೆ ಬಾಳಾಜಿ ಬಾಜಿರಾಯನು ಇದನ್ನು ತನ್ನ ಹೆಂಡತಿ ಸಹೋದರ ಆನಂದರಾವ ರಾಸ್ತಿಯಾ ಎಂಬುವವನಿಗೆ ವಹಿಸಿ ಅದಕ್ಕೆ ಮರಾಠ ಜಾಗೀರದಾರ(ಸರಂಜಾಮಿಯಾಗಿ)ನಾಗಿ ನೇಮಿಸಿದನು.[೨೫೪] ಇವನು ಇಲ್ಲಿ ಆನಂದರಾವ ಪೇಟ್, ಕೈಲಾಸ ಪೇಟೆಯೆಂಬ ಎರಡು ಪೇಟೆಗಳನ್ನು ಕಟ್ಟಿಸಿದನು. ಕ್ರಿ.ಶ. ೧೮೧೮ರಲ್ಲಿ ಪೇಶ್ವೆ(ಮರಾಠರು)ಗಳು ಅವನತಿ ಹೊಂದಿದ ಮೇಲೆ ಆನಂದರಾವ ರಾಸ್ತಿಯಾನ ಮೊಮ್ಮಗ ಬಾಳಾಸಾಹೇಬ ರಾಸ್ತಿಯಾ ಅಥವಾ ಬಲವಂತರಾವ ಮಾಧವರಾವ್ ತಾಳಿಕೋಟೆಯಲ್ಲಿ ಇರುತ್ತಿದ್ದನು. ಇವನು ತಾಳಿಕೋಟೆಯಲ್ಲಿ ವಾಡೆಯನ್ನು ನಿರ್ಮಿಸಿ ಗ್ರಾಮವನ್ನು ಮತ್ತಷ್ಟು ವಿಸ್ತರಿಸಿದನು.[೨೫೫]

ತಾಳಿಕೋಟೆಯು ಕಲ್ಯಾಣ ಚಾಳುಕ್ಯರು, ಯಾದವರು, ಬಹಮನಿ ಮತ್ತು ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ಒಂದು ಪ್ರಮುಖ ನಗರವಾಗಿ ಬೆಳೆದುಬಂದಿತು. ಕಲ್ಯಾಣ ಚಾಳುಕ್ಯರ ಕ್ರಿ.ಶ. ೧೧೮೧ ಮತ್ತು ೧೧೮೪ರ ಶಾಸನದಲ್ಲಿ 'ಕೋಟೆಯ' ಉಲ್ಲೇಖವಿರುವುದರಿಂದ ಈ ಊರಿನಲ್ಲಿ ೧೨ನೇ ಶತಮಾನಕ್ಕಾಗಲೆ ಕೋಟೆ ಇದ್ದಿರಬಹುದು ಎಂದು ಅಭಿಪ್ರಾಯ ಪಡಲಾಗಿದೆ. ಆದರೆ ಈ ಕಾಲಘಟ್ಟದಲ್ಲಿ ನಿರ್ಮಾಣವಾದ ಕೋಟೆಯ ಯಾವುದೇ ಕುರುಹುಗಳು ಉಳಿದುಕೊಂಡು ಬಂದಿಲ್ಲ. ಕ್ರಿ.ಶ. ೧೫೬೫ರಲ್ಲಿ ಶಾಹಿ ಸುಲ್ತಾನರ ಮತ್ತು ವಿಜಯನಗರದ ಅರಸರ ಮಧ್ಯೆ ನಡೆದ ಕಾಳಗವು ಭಾರತೀಯ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲಾಗಿದೆ. ಈ ಯುದ್ಧದ ಸಂದರ್ಭದಲ್ಲಿ ಶಾಹಿ ಸುಲ್ತಾನರ ಸೈನ್ಯವು ತಾಳಿಕೋಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೀಡುಬಿಟ್ಟಿದ್ದು ಉಲ್ಲೇಖನೀಯ. ಹೀಗಾಗಿ ಆದಿಲ್‌ಶಾಹಿಗಳ ಅಧೀನದಲ್ಲಿರುವ ತಾಳಿಕೋಟೆಯಲ್ಲಿ ಇವರು ಕೋಟೆಯನ್ನು ನಿರ್ಮಿಸಿ ಇದನ್ನು ಪ್ರಮುಖ ಸೈನಿಕ ನೆಲೆಯನ್ನಾಗಿಸಿಕೊಂಡಿದ್ದರು. ಹೀಗಾಗಿ ಈ ಕಾಲಘಟ್ಟದಲ್ಲಿ ನಿರ್ಮಾಣವಾದ ಕೋಟೆಯು ಇದುವರೆಗೂ ಕಾಣಸಿಗುತ್ತದೆ. ಆದರೆ ಕಾಲನ ತುಳಿತಕ್ಕೆ ಸಿಕ್ಕು ಕ್ರಮೇಣ ನಾಶವಾಗುತ್ತಾ ನಡೆದಿದೆ.

ಸದ್ಯ ಊರಿನ ಸುತ್ತ ಇರುವ ಕೋಟೆಯು ಸೇದಿಕಲ್ಲಿ(ಲೈಮ್ ಸ್ಟೋನ್)ನಿಂದ ಸುಮಾರು ೧೬ನೇ ಶತಮಾನದಲ್ಲಿ ನಿರ್ಮಿಸಿದ್ದಾಗಿದೆ. ಆದರೆ ಇಂದು ಕೋಟೆಯು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಊರಿನ ಸುತ್ತ ಸುತ್ತುವರಿದ ಈ ಕೋಟೆಯು ೨.೬೧೪ ಕಿ.ಮೀ. ಸುತ್ತಳತೆಯನ್ನು ಹೊಂದಿದ್ದು ಕೋಟೆಯ ಬಲಭಾಗದಲ್ಲಿ ಭೀಮಾ ನದಿಯು ವರ್ತುಲಾಕಾರದಲ್ಲಿ ಹರಿಯುತ್ತದೆ. ಹೀಗಾಗಿ ಈ ಭಾಗವು ನೈಸರ್ಗಿಕವಾಗಿಯೇ ನದಿಯಿಂದ ರಕ್ಷಣೆ ಪಡೆದಿದ್ದು ಇದೊಂದು ಜಲದುರ್ಗದಂತೆ ಕಂಡುಬರುತ್ತದೆ. ಇಲ್ಲಿಯ ಸಮತಲವಾದ ಭೂಪ್ರದೇಶವು ಮೇಲ್ಭಾಗದಲ್ಲಿ ಕಪ್ಪುಮಣ್ಣನ್ನು ಹೊಂದಿದ್ದು ಅದು ೫ ರಿಂದ ೬ ಅಡಿ ಎತ್ತರದವರೆಗೆ ಮಾತ್ರ ಕಂಡುಬರುತ್ತದೆ. ಅದರ ತಳಭಾಗದಲ್ಲಿ ಸುಣ್ಣಶಿಲೆಯ ಕಣಿವೆಯೇ ಕಂಡುಬರುತ್ತದೆ. ಕೋಟೆಯ ನಿರ್ಮಾಣವನ್ನು ಮಾಡುವಾಗ ಗಟ್ಟಿಯಾದ ತರ ಸಿಗುವವರೆಗೆ ಅಗೆದು ಅದರ ಮೇಲೆ ಸ್ಥಳೀಯವಾಗಿಯೇ ಸಿಗುವ ಕಲ್ಲನ್ನು ಬಳಸಿ ಕೋಟೆಗೋಡೆಯನ್ನು ನಿರ್ಮಿಸಿದ್ದಾರೆ. ಈ ಕೋಟೆಯ ಇನ್ನೊಂದು ವಿಶೇಷತೆಯೆಂದರೆ ಕೋಟೆ ನಿರ್ಮಾಣದಲ್ಲಿ ಮಣ್ಣನ್ನು ಬಳಸದೆ ಕೇವಲ ತೆಳುವಾದ ಕಲ್ಲುಗಳನ್ನೇ ಬಳಸಿದ್ದಾರೆ. ಈ ಪ್ರದೇಶದಲ್ಲಿ ಇಂದಿಗೂ ಮನೆಗಳ ಗೋಡೆ ಮತ್ತು ಮೇಲ್ಛಾವಣಿಯನ್ನು ಮಣ್ಣನ್ನು ಬಳಸದೆ ಈ ಸೇದಿಕಲ್ಲನ್ನೇ ಬಳಸಿ ನಿರ್ಮಿಸುತ್ತಾರೆ. ಹಾಗಾಗಿ ಎಂಥ ಮಳೆಗಾಲದ ಸಂದರ್ಭದಲ್ಲಿಯೂ ಗೋಡೆ ದೃಢವಾಗಿಯೇ ನಿಲ್ಲುತ್ತವೆ. ಈ ರೀತಿಯ ರಚನೆಯನ್ನು ನಾವು ಕೂಚಬಾಳ, ಮಿಣಜಗಿ, ಬಳಗಾನೂರ, ಹಿರೂರು ಕೋಟೆಗಳಲ್ಲಿಯೂ ಕಾಣಬಹುದು. ಕೋಟೆಗೋಡೆಯ ದಪ್ಪ ೨ ಮೀ.ನಿಂದ ೨.೭೦ ಮೀ.ರವರೆಗೆ ಇದ್ದು ಅದರಲ್ಲಿ ಅಟ್ಟಾಲಕ ೧.೫೦ ಮೀ. ಕೈಪಿಡಿಗೋಡೆ ೧.೨೦ ಮೀ. ದಪ್ಪ ಇದೆ. ಅಲ್ಲದೆ ಈ ಕೈಪಿಡಿ ಗೋಡೆಯಲ್ಲಿಯೇ ಅಲಂಕಾರಿಕವಾಗಿ ಒಂದೇ ಕಲ್ಲಿನಲ್ಲಿ ಮಾಡಿದ ತೆನೆಗಳ ರಚನೆ ಕಂಡುಬರುತ್ತದೆ. ಆದರೆ ಇಲ್ಲಿ ತೆನೆಗಳನ್ನು ಯಾವುದೇ ರಕ್ಷಣಾತ್ಮಕ ದೃಷ್ಟಿಕೋನವನ್ನು

ಇಟ್ಟುಕೊಂಡು ನಿರ್ಮಿಸದಿರುವುದು ಕಂಡುಬರುತ್ತದೆ. ಊರನ್ನು ಸುತ್ತುವರಿದ ಕೋಟೆಯ ಉದ್ದ, ಎತ್ತರ, ಅಗಲಗಳಲ್ಲಿ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದು.

ಕೋಟೆಯ ಒಂದು ಭಾಗವು ನೈಸರ್ಗಿಕವಾಗಿ ಹರಿಯುವ ನದಿಯಿಂದ ಕಂದಕದಂತೆ ರಕ್ಷಣೆ ಪಡೆದರೆ ಉಳಿದ ಮೂರು ದಿಕ್ಕುಗಳಲ್ಲಿ ಕಂದಕವನ್ನು ನಿರ್ಮಿಸಲಾಗಿತ್ತು ಎಂದು ಹೇಳಬಹುದು. ಇಂದಿಗೂ ಕೋಟೆಯ ಸುತ್ತಲೂ ಇರುವ ಕಂದಕವು ಕೆಲವು ಕಡೆ ನಗರದ ಕೊಳಚೆ ನೀರು ನಿಲ್ಲುವ ಸ್ಥಳಗಳಾಗಿ ಮಾರ್ಪಟ್ಟಿದ್ದರೆ ಇನ್ನುಳಿದ ಭಾಗದಲ್ಲಿ ಶಿಥಿಲವಾಗಿದ್ದು ತಗ್ಗಾದ ಪ್ರದೇಶದಂತೆ ಕಂಡುಬರುತ್ತದೆ.

ಈ ಕೋಟೆಗೆ ಐದು ದ್ವಾರಬಾಗಿಲುಗಳಿದ್ದವು ಎಂದು ಯಮನಪ್ಪ ನಾಯ್ಕೋಡಿ(ವ-೭೦) ಅವರು ಹೇಳುತ್ತಾರೆ. ಅವು ಮಿಣಜಗಿ ಅಗಸೆ, ಸಮಗಾರ ಅಗಸೆ, ಮೈಲೇಶ್ವರ ಅಗಸೆ, ಕೊಡೆಕಲ್ಲ ಅಗಸೆ, ದೋಣಿ ಅಗಸೆ ಇವುಗಳಲ್ಲಿ ಎರಡು ಶಿಥಿಲಾವಸ್ಥೆಯಲ್ಲಿದ್ದು ಉಳಿದ ಮೂರು ದ್ವಾರಬಾಗಿಲುಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಕೋಟೆಗೋಡೆಗೆ ಹೊಂದಿಕೊಂಡು ವೃತ್ತಾಕಾರ, ಅರ್ಧವೃತ್ತಾಕಾರದ ಬುರುಜುಗಳಿದ್ದು ಇವು ವಿಜಾಪುರ ಜಿಲ್ಲೆಯಲ್ಲಿರುವ ಕೋಟೆಗಳ ಬುರುಜುಗಳಿಗಿಂತ ಕೆಲವೊಂದು ಭಿನ್ನತೆಗಳಿರುವುದನ್ನು ಕಾಣಬಹುದು. ಈ ಬುರುಜುಗಳನ್ನು ಕೋಟೆಗೋಡೆಗೆ ಹೊಂದಿಕೊಂಡು ೧.೫೦ ಮೀ. ದಪ್ಪವಾದ ವೃತ್ತಾಕಾರದ ಗೋಡೆಯನ್ನು ಸುಮಾರು ೮ ಮೀ. ಎತ್ತರದವರೆಗೆ ನಿರ್ಮಿಸಿ ಒಳಗಡೆ ಎದೆಮಟ್ಟದವರೆಗೆ ಮಾತ್ರ ಕಲ್ಲು, ಮಣ್ಣನ್ನು ಹಾಕಿ ಮುಚ್ಚಲಾಗಿದೆ. ಉಳಿದ ಭಾಗವನ್ನು ಟೊಳ್ಳಾಗಿ ನಿರ್ಮಿಸಿದ್ದಾರೆ. ೫ ಮೀ. ಎತ್ತರದ ವೃತ್ತಾಕಾರದ ಬುರುಜುವಿನ ಗೋಡೆಗಳಲ್ಲಿ ೧೪ ಇಂಚು ಅಗಲ, ೦.೬೪ ಮೀ. ಎತ್ತರವಾದ ಬಂದೂಕು ಮತ್ತು ೧೦X೧೫ ಇಂಚು ಉದ್ದಗಲದ ವೀಕ್ಷಣಾರಂಧ್ರಗಳನ್ನು ಕಾಣಬಹುದು. ಕೋಟೆಯ ಮಧ್ಯಭಾಗದಲ್ಲಿ ಕ್ರಿ.ಶ. ೧೬೫೦ರಲ್ಲಿ ಆನಂದರಾವ ರಾಸ್ತೆ ಎಂಬುವವನು ವಾಡೆಯನ್ನು ಕಟ್ಟಿಸಿದನು. ಜೀರ್ಣಾವಸ್ಥೆಯಲ್ಲಿರುವ ವಾಡೆಯು ಇಂದು ಅಳಿವಿನ ಅಂಚಿನಲ್ಲಿದೆ.

ಇನ್ನುಳಿದಂತೆ ಕೋಟೆಯ ಒಳಗೆ ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ನಿರ್ಮಾಣವಾದ ಪಂಚ್‌ಪೀರ್ ದರ್ಗಾ, ನಗರಖಾನೆ ಅಲ್ಲದೆ ಜನ್ನದನ ಮಖಾನ ಓಣಿಯಲ್ಲಿ ಯಮನೂರಪ್ಪನ ದರ್ಗಾ, ಮಬಾದ್ಧನ್ ಖಾದಿರಿ ದರ್ಗಾ ಜೊತೆಗೆ ಇದೇ ಸ್ಥಳದಲ್ಲಿಯೇ ತಾಳಿಕೋಟೆ ಯುದ್ಧದಲ್ಲಿ ಸತ್ತ ಆನೆಗಳನ್ನು ಇಲ್ಲಿ ತಂದು ಸಮಾಧಿ ಮಾಡಲಾಗಿದೆ ಎಂದು ಹೇಳುವ ಹತ್ತಿ ಮಜಾರ ಕಂಡುಬರುತ್ತವೆ.

ಬಲದಿನ್ನಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ४೦ ಕಿ.ಮೀ. ದೂರದಲ್ಲಿದೆ. ಕೃಷ್ಣಾನದಿಯ ದಂಡೆಯ ಮೇಲೆ ಕಂಡುಬರುವ ಹಳೆ ಗ್ರಾಮವು ಇಂದು ಬಸವಸಾಗರ(ನಾರಾಯಣಪುರ) ಜಲಾಶಯ ಯೋಜನೆಯಲ್ಲಿ ಮುಳುಗಡೆಯಾಗಿದೆ. ಬಲ=ಸೇನೆ, ದಿನ್ನೆ=ಎತ್ತರದ ಸ್ಥಳ, ಕೋಟೆ

ಕೊತ್ತಲಗಳಿರುವ ಈ ಊರಲ್ಲಿ ಗಡಿರಕ್ಷಕ ಪಡೆಗಳು ದೂರಿನಿಂದ ವೈರಿಸೇನೆಯನ್ನು ನಿರೀಕ್ಷಿಸುತ್ತಿರುವುದರಿಂದ ಬಲದಿನ್ನಿ ಎಂದು ಕರೆಯಲಾಯಿತು. ಅಲ್ಲದೆ ಸೇನೆಯ ಹೆಗ್ಗಡೆ ಇಲ್ಲಿ ಇದ್ದಿರುವ ಸಾಧ್ಯತೆಯಿದೆ. ಏಕೆಂದರೆ ಈ ಊರಿನ ಒಂದು ಜಮೀನಿಗೆ ಹೆಗ್ಗಡೆ ಪ್ರಧಾನಿಯ ಹೊಲ ಎಂಬ ಹೆಸರಿದೆ. ಸ್ಥಳೀಯವಾಗಿ ಅದು ಹೆಗ್ಗಣಪರದಾನಿ ಹೊಲ ಎಂದಾಗಿದೆ[೨೫೬]

ಬಲದಿನ್ನಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಇಲ್ಲಿ ನಾಡಗೌಡ ಎಂಬ ಮನೆತನ ದೇಸಗತಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡಿದ್ದಾರೆ. ಈ ಮನೆತನದ ಮೂಲಪುರುಷ ಮುದ್ದುಲಿಂಗಪ್ಪ. ಈ ಮನೆತನದಲ್ಲಿ ಒಟ್ಟು ೧೮ ಜನ ದೇಸಾಯರು ಗಾದಿ ಮಾಲೀಕರಾಗಿ ದೇಸಗತಿಯನ್ನು ಆಳುತ್ತಾ ಬಂದಿರುವರು. ಮೂಲ ದೇಸಾಯರ ಕುರಿತು ನಿಖರವಾದ ಆಕರಗಳು ಲಭ್ಯವಿಲ್ಲ. ಲಿಂಗಪ್ಪ ಉರುಫ್ ಲಿಂಗರಾಜ ನಾಡಗೌಡರಿಂದ ಈ ಮನೆತನದ ಚರಿತ್ರೆಯು ಹೆಚ್ಚು ಸ್ಪಷ್ಟವಾಗುತ್ತದೆ. ಬಲದಿನ್ನಿಯ ನಾಡಗೌಡರು ಮೊದಲು ನಾಲತವಾಡ ಪರಗಣದ ಮುಖ್ಯಸ್ಥರಾಗಿ ನಿಯುಕ್ತಿಗೊಂಡಿದ್ದರು. ಕಾರಣಾಂತರಗಳಿಂದ ನಾಲತವಾಡದಿಂದ ಬಲದಿನ್ನಿಗೆ ವರ್ಗಾಯಿಸಿ ಅಲ್ಲಿ ಒಟ್ಟು ೪೪ ಹಳ್ಳಿಗಳ ವತನದಾರಿಕೆಯನ್ನು ಸಂಪಾದಿಸಿಕೊಂಡು ಬಲದಿನ್ನಿ ಕೇಂದ್ರಸ್ಥಾನದಿಂದ ಆಡಳಿತ ಮಾಡಿದ್ದಾರೆ.[೨೫೭] ಇವರ ಕಾಲಾವಧಿಯಲ್ಲಿ ನಿರ್ಮಾಣವಾದ ಕೋಟೆಯು ಕೃಷ್ಣಾನದಿಯ ದಂಡೆಯ ಮೇಲಿದ್ದು ಇದೊಂದು ಜಲದುರ್ಗದಂತೆ ಕಂಡುಬರುತ್ತದೆ. ಈ ಕೋಟೆಯನ್ನು ಯಾರು ಕಟ್ಟಿಸಿದರೆಂದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಕೋಟೆಯು ಇಂದು ಜಲಾಶಯದ ಹಿನ್ನೀರಿನಲ್ಲಿ ಸಂಪೂರ್ಣವಾಗಿ ಮುಳುಗಡೆಯಾಗಿದೆ.

ಇದು ಎರಡು ಸುತ್ತಿನ ಕೋಟೆಯಾಗಿದ್ದು ಜಲದುರ್ಗ ಹಾಗೂ ನೆಲದುರ್ಗವಾಗಿದೆ. ಪೂರ್ವಾಭಿಮುಖ ದ್ವಾರವನ್ನು ಹೊಂದಿರುವ ಈ ಕೋಟೆಯ ದಕ್ಷಿಣಭಾಗದಲ್ಲಿ ಕೃಷ್ಣಾನದಿ ಹರಿಯುತ್ತದೆ. ಹೀಗಾಗಿ ದಕ್ಷಿಣಭಾಗವು ಸ್ವಾಭಾವಿಕವಾಗಿ ನದಿಯಿಂದ ರಕ್ಷಣೆ ಪಡೆದಿದೆ. ಉಳಿದ ಮೂರು ಕಡೆ ಕಂದಕವನ್ನು ನಿರ್ಮಿಸಿ ಅದರಿಂದ ರಕ್ಷಣೆ ಪಡೆಯುತ್ತಿದ್ದರು.

ಪೂರ್ವಾಭಿಮುಖವಾಗಿ ಸುಮಾರು ೩೬೭ ಮೀ. ಸುತ್ತಳತೆಯನ್ನು ಹೊಂದಿರುವ ಹೊರಕೋಟೆಯು ಇಂದು ಸಂಪೂರ್ಣವಾಗಿ ಹಾಳಾಗಿದೆ. ಇಂದು ಕೋಟೆಗೋಡೆಯು ಅವಶೇಷಗಳಿಂದ ಕೂಡಿದ ಬದುವು(ಒಡ್ಡು) ಹಾಗೇ ಸುತ್ತಲೂ ಕಂಡುಬರುತ್ತದೆ. ಕೋಟೆಗೋಡೆಯ ನಾಲ್ಕು ಕಡೆ ಬುರುಜುಗಳಿದ್ದು ಆಗ್ನೇಯ ಮೂಲೆಯಲ್ಲಿರುವ ಬುರುಜು ಮಾತ್ರ ೨೦ ಅಡಿ ಎತ್ತರ ಉಳಿದುಕೊಂಡಿದೆ. ಉಳಿದಂತೆ ಮೂರು ದಿಕ್ಕುಗಳಲ್ಲಿ ಮೂರು ಹುಡೆವುಗಳು ನಾಶ ಹೊಂದಿ ಇಂದು ಮಣ್ಣಿನ ದಿಬ್ಬದ ಹಾಗೆ ಕಂಡುಬರುತ್ತವೆ. ಈ ಕೋಟೆಗೋಡೆಯ ಸುತ್ತ ಸುಮಾರು ೪೦ ಅಡಿ ಅಗಲವಾದ ಕಂದಕ ಕೋಟೆಯ ಸುತ್ತಲೂ ಕಂಡುಬರುತ್ತದೆ. ಇಂದು ಕಂದಕವು ನದಿಯ ನೀರಿನಿಂದ ಕೊಚ್ಚಿಬಂದ ಮಣ್ಣಿನಿಂದ ತುಂಬಿಕೊಂಡಿದೆ. ಕಂದಕಕ್ಕೆ ಹೊರಭಾಗದಲ್ಲಿ ಸುತ್ತಲೂ ಗೋಡೆಯನ್ನು ನಿರ್ಮಿಸಿ ಮಧ್ಯದ ನೀರು ಯಾವಾಗಲೂ ಸಂಗ್ರಹವಾಗಿರುವಂತೆ ವ್ಯವಸ್ಥೆ ಮಾಡಿದ್ದಾರೆ. ಹೊರಭಾಗದ

ಕಂದಕವು ಸುಮಾರು ೬೫೫ ಮೀ. ಸುತ್ತಳತೆಯನ್ನು ಹೊಂದಿದೆ. ಕಂದಕಕ್ಕೆ ಕೃಷ್ಣಾನದಿಯ ನೀರು ಬರುವಂತೆ ವ್ಯವಸ್ಥೆ ಮಾಡಲಾಗಿದೆ. (ಹೊರಕೋಟೆ ಮತ್ತು ಹೊರಭಾಗದ ಕಂದಕದ ಗೋಡೆಯ ಮಧ್ಯೆ ೪೦ ಅಡಿ ಅಂತರವಿದೆ.) ದ್ವಾರದ ಮುಂಭಾಗ ಕಂದಕವನ್ನು ದಾಟಿದ ಮೇಲೆ ಅಲ್ಲಿ ಆಂಜನೆಯ ದೇವಸ್ಥಾನವನ್ನು ನಿರ್ಮಿಸಲಾಗಿದೆ.

ಎರಡನೇ ಸುತ್ತಿನ ಅಥವಾ ಒಳಕೋಟೆಗೋಡೆಯು ಸುಮಾರು ೧೪೪ ಮೀ. ಸುತ್ತಳತೆಯನ್ನು ಹೊಂದಿದ್ದು ಮಧ್ಯಭಾಗದಲ್ಲಿ ಮನೆಯ ನಿವೇಶನ ಅಥವಾ ವಾಡೆಯ ಅವಶೇಷಗಳು ಕಂಡುಬರುತ್ತವೆ. ಪೂರ್ವಾಭಿಮುಖವಾಗಿ ಚೌಕಾಕಾರವಾಗಿರುವ ಈ ಕೋಟೆಯ ದ್ವಾರವು ೬ ಅಡಿ ಅಗಲ, ೧೦ ಅಡಿ ಎತ್ತರ ಕಂಡುಬರುತ್ತದೆ. ದ್ವಾರದ ಪ್ರವೇಶದ ಒಳಗೆ ಇಕ್ಕೆಲಗಳಲ್ಲಿ ಅಂಕಣಗಳಿವೆ. ಎರಡನೇ ಸುತ್ತಿನ ಕೋಟೆಗೋಡೆಯು ಪೂರ್ವ ಮತ್ತು ಉತ್ತರದಿಕ್ಕಿನಲ್ಲಿ ಮಾತ್ರ ಉಳಿದುಕೊಂಡಿದ್ದು ಉಳಿದ ಎರಡು ಭಾಗಗಳಲ್ಲಿ ಕೋಟೆ ಬಿದ್ದು ನಾಶ ಹೊಂದಿ ದಿಬ್ಬಗಳ ಹಾಗೆ ಕಂಡುಬರುತ್ತವೆ. ಈ ಕೋಟೆಯ ವಿಶೇಷತೆ ಎಂದರೆ ಕೋಟೆಗೋಡೆಯಲ್ಲಿರುವ ಬಂದೂಕುಕಿಂಡಿಗಳು ಕೋಟೆಗೋಡೆ ಮಧ್ಯಭಾಗದಲ್ಲಿ ಕಂಡುಬರುತ್ತವೆ. ದೂರದಲ್ಲಿ ಬರುವ ಶತ್ರುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸಿದ ಮೊದಲನೇ ಸುತ್ತನ್ನು ದಾಟಿ ಎರಡನೆ ಸುತ್ತನ್ನು ಆಕ್ರಮಿಸಲು ಬಂದ ಶತ್ರುಗಳನ್ನು ಗಮನದಲ್ಲಿಟ್ಟುಕೊಂಡು ಅಂದರೆ ಸಮೀಪ ದೃಷ್ಟಿಕೋನವನ್ನು ಇಟ್ಟುಕೊಂಡು ನಿರ್ಮಿಸಲಾಗಿದೆ. ಈ ಬಂದೂಕು ಕಿಂಡಿಗಳಿಂದ ಮೇಲ್ಭಾಗದಲ್ಲಿ ಮತ್ತೆ ಸು. ೧೫ ಅಡಿ ಕೋಟೆಗೊಡೆಯನ್ನು ಕಾಣಬಹುದು. ಕೋಟೆಗೋಡೆಯ ತಳಭಾಗದಲ್ಲಿ ದಪ್ಪವಾಗಿದ್ದು ಮೇಲಕ್ಕೆ ಕಿರಿದಾಗುತ್ತಾ ಹೋಗಿದೆ. ಮೇಲ್ಭಾಗದಲ್ಲಿ ೪ ಅಡಿ ದಪ್ಪ ಕಂಡುಬರುತ್ತದೆ ಮತ್ತು ಕೋಟೆಗೋಡೆಯ ಒಳಗಡೆ ಶತ್ರುಗಳ ಚಲನವಲನ ಮತ್ತು ಕೋಟೆ ಹಿಂಬಂದಿಯಿಂದ ಶತ್ರುಗಳ ಮೇಲೆ ಆಕ್ರಮಣ ಮಾಡಲು ೨.೫೦ ಮೀ. ಅಗಲವಾದ ಅಟ್ಟಾಲಕ ಕಂಡುಬರುತ್ತದೆ.

ಒಳಕೋಟೆಗೆ ಆಗ್ನೇಯ ಮತ್ತು ವಾಯವ್ಯ ಭಾಗದ ಮೂಲೆಗಳಲ್ಲಿ ಎರಡು ಬುರುಜುಗಳಿದ್ದು ೨೬ ಮೀ. ಸುತ್ತಳತೆ ೫೬ ಅಡಿ ಎತ್ತರವನ್ನು ಹೊಂದಿದ್ದು ಪೂರ್ಣಪ್ರಮಾಣದಲ್ಲಿ ಉಳಿದುಕೊಂಡಿವೆ. ಬುರುಜುವಿನ ಮಧ್ಯೆ ಮತ್ತು ಮೇಲ್ಭಾಗದಲ್ಲಿ ಎರಡು ಹಂತದಲ್ಲಿ ಬಂದೂಕುಕಿಂಡಿಗಳು ಕಂಡುಬರುತ್ತವೆ. ಬುರುಜುವಿನ ಮೇಲ್ಭಾಗ ರಕ್ಷಣೆಗಾಗಿ ಮೂರು ಅಡಿ ಎತ್ತರವಾದ ಕೈಪಿಡಿಗೋಡೆಯನ್ನು ನಿರ್ಮಿಸಲಾಗಿದೆ. ಬುರುಜುವಿನ ಮೇಲ್ಭಾಗಕ್ಕೆ ಹೋಗಲು ಬುರುಜುವಿನ ಒಳಭಾಗದಲ್ಲಿ ಚೌಕಾಕಾರದ ಬಾಗಿಲುಗಳಿದ್ದು ಅಟ್ಟಾಲಕ ಭಾಗದಿಂದ ಮೇಲ್ಭಾಗಕ್ಕೆ ಹೋಗಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ಗ್ರಾಮಗಳಲ್ಲಿ ನಿರ್ಮಾಣವಾದ ಕೋಟೆಯ ಬುರುಜುಗಳು ಸಂಪೂರ್ಣವಾಗಿ ವಿನಾಶದ ಅಂಚಿನಲ್ಲಿದ್ದು ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡಿಲ್ಲ. ಈ ಕೋಟೆಯ ಎರಡು ಬುರುಜುಗಳು ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡು ಬಂದಿವೆ.

ವಾಯವ್ಯಕ್ಕೆ ಇರುವ ಬುರುಜುವಿನ ಕೆಳಗೆ ನೆಲಮಟ್ಟದಲ್ಲಿ ಒಂದು ಗುಪ್ತವಾದ ಕೊಠಡಿಯಿದ್ದು ಬಹುಶಃ ಇದನ್ನು ಮದ್ದು, ಗುಂಡುಗಳನ್ನು ಸಂಗ್ರಹಿಸಲು ಉಪಯೋಗಿಸಲು ನಿರ್ಮಿಸಿರಬಹುದು. ಇನ್ನುಳಿದಂತೆ ಕೋಟೆಯ ಒಳಗಿನ ವಾಡೆಯು ಪೂರ್ಣ ಹಾಳಾಗಿದ್ದು ಅದರ ಅವಶೇಷಗಳು ಕಂಡುಬರುತ್ತವೆ. ಈ ಕೋಟೆಯ ಇನ್ನೊಂದು ವಿಶೇಷತೆಯೆಂದರೆ ಕೋಟೆಯಲ್ಲಿ ಧಾನ್ಯಗಳನ್ನು ಸಂಗ್ರಹಿಸಲು ಹಗೇವು(ಕಣಜ)ಗಳಿರುವುದು ಕಂಡುಬರುತ್ತದೆ. ಕಾರಣ ಕೃಷ್ಣಾನದಿಯ ಫಲವತ್ತಾದ ಭೂಮಿಯನ್ನು ಹೊಂದಿರುವ ಈ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯನ್ನು ಬೆಳೆಯುವುದರಿಂದ ಧಾನ್ಯಗಳ ಸಂಗ್ರಹಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬರುತ್ತವೆ. ಇಂದು ನಾರಾಯಣಪುರದ ಹಿನ್ನೀರಿನಲ್ಲಿ ಕೋಟೆಯು ಮುಳುಗುವುದರಿಂದ ಹಗೇವುಗಳು ಕುಸಿದುಬಿದ್ದು ನೀರು ತುಂಬಿಕೊಂಡಿವೆ. ಕೋಟೆಯ ಒಳಗಡೆ ಒಂದು ಅಡಿ ಪ್ರಮಾಣದ ನೆಲಮಟ್ಟದ ಮೇಲೆ ಹಿನ್ನೀರು ಇದ್ದಾಗಲೂ ಕೋಟೆಯ ಪ್ರದೇಶದಲ್ಲಿ ತಿರುಗಾಡುವುದು ಅಪಾಯಕಾರಿಯಾಗಿದೆ. ಹಿನ್ನೀರಿನಿಂದ ಕೋಟೆಯು ಸಂಪೂರ್ಣವಾಗಿ ಮುಳುಗಿದ್ದು ಜೀರ್ಣಾವಸ್ಥೆಯಲ್ಲಿದೆ.

ಬಸರಕೋಡ

ಇದು ತಾಲೂಕು ಕೇಂದ್ರವಾದ ಮುದ್ದೇಬಿಹಾಳದಿಂದ ವಾಯವ್ಯ ದಿಕ್ಕಿಗೆ ೧೨ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೮ನೇ ಶತಮಾನದಿಂದಲೇ ಗ್ರಾಮದ ಇತಿಹಾಸ ತಿಳಿದುಬರುತ್ತದೆ. ಕ್ರಿ.ಶ. ೮ನೇ ಶತಮಾನದ ತೃಟಿತ ಶಾಸನ ದೇವಾಲಯವೊಂದನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.[೨೫೮] ಕ್ರಿ.ಶ. ೧೨೫೬ರ ಮತ್ತು ಕ್ರಿ.ಶ. ೧೨೫೭ರ ಎರಡು ಕಾಲಮಾನಗಳನ್ನು ಉಲ್ಲೇಖಿಸುವ ಫಡೆಕನೂರು ಶಾಸನ[೨೫೯] ಯಾದವ ಕನ್ನರದೇವನ ಕಾಲದ್ದಾಗಿದೆ. ಈ ಶಾಸನದ ಕೊನೆಯಲ್ಲಿ 'ಬಸುರಿಕೋಡದ' ಮಹಾಪ್ರಭು ಪ್ರಣುತರಕ್ಷಾಮಣಿ, ಕನ್ನಡ ನಾಲ್ಕು ಸಾವಿರ ದೇಸಿಯ ದಂಡನಾಯಕ ನೂಲರಸನು ತನ್ನ ಅಧಿಕಾರದ ಹಾಗಿಲು ಹನ್ನೆರಡರಲ್ಲಿಯ ಪಡಿಯಕನೂರಲ್ಲಿ ಸೊನ್ನಲಿಗೆಯ ಶ್ರೀರಾಮನಾಥ ದೇವರಿಗೆ ದತ್ತಿಯನ್ನು ಬಿಟ್ಟ ವಿಷಯವಿದೆ.

ಬಸರಕೋಡ ಎಂಬ ಸ್ಥಳನಾಮವನ್ನು ಕುರಿತು ವಿವೇಚಿಸುವುದಾದರೆ 'ಕೋಡ' ಎಂಬ ಪದವು ದ್ರಾವಿಡ ಭಾಷೆಗಳಿಗೆಲ್ಲ ಸಮಾನವಾದ ಈ ಸ್ಥಳನಾಮವಾಚಕವು ಶಿಖರ, ಬೆಟ್ಟದ ತುದಿ ಎಂಬ ಭೂಸ್ಥಿತಿಯನ್ನು ಸೂಚಿಸುತ್ತದೆ. ಕನ್ನಡದ 'ಕೋಡು' ಎಂಬ ಪದ ತೊರೆ(ಹೊಳೆ), ಶಾಖೆ, ಕೋಡು ಎಂಬರ್ಥವನ್ನು ಕೊಡುತ್ತದೆ. ಬಾಸುರಕೋಡ(ಕ್ರಿ.ಶ. ೮೬೨)>ಬಸರಕೋಡ(ಬಸರಿ (ಮರ)+ಕೋಡ>ಬಾಸುರಿಕೋಡ>ಬಸರಿಕೋಡವಾಗಿದೆ.[೨೬೦]

ಲಿಪಿ ದೃಷ್ಟಿಯಿಂದ ಕ್ರಿ.ಶ. ೧೪ನೇ ಶತಮಾನದ ಇನ್ನೊಂದು ಶಾಸನ ಗ್ರಾಮದಲ್ಲಿದ್ದು ನುಡಿಗಟ್ಟಿನ ರೀತಿಯಲ್ಲಿದೆ. ಲೆಂಕರನ್ನು ಕೊಲ್ಲುವವರು ಯಾರೂ ಇಲ್ಲ, ಇದೇ ರೀತಿ ನಾಯ ಮಾಂಸವನ್ನು ತಿಂದವರಿಲ್ಲ ಎಂದು ತಿಳಿಸುತ್ತದೆ.[೨೬೧] ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯರ ಕಾಲಾವಧಿಯ

ಈಶ್ವರ, ಮೂರುಲಿಂಗ, ಕರಿಬಸಪ್ಪ ದೇವಾಲಯಗಳಿವೆ ಮತ್ತು ೧೮ನೇ ಶತಮಾನಕ್ಕೆ ಸೇರಿದ ಬಸವಣ್ಣ ದೇವಾಲಯವಿದೆ. ಈ ಎಲ್ಲ ಅವಶೇಷಗಳು ಗ್ರಾಮದ ಪ್ರಾಚೀನತೆಯನ್ನು ಸಾರುತ್ತವೆ.

ಆದಿಲ್‌ಶಾಹಿಗಳಿಂದ ಬಸರಕೋಡದ ನಾಡಗೌಡರು ಈ ಗ್ರಾಮವನ್ನು ದೇಸಗತಿಯನ್ನಾಗಿ ಪಡೆದುಕೊಂಡರು. ಈ ವಂಶದಲ್ಲಿ ಶ್ರೀ ಹುಚ್ಚಪ್ಪ ನಾಡಗೌಡ ಎಂಬುವವರು ಅಸಾಮಾನ್ಯ ಶೂರರಾಗಿದ್ದು ಆದಿಲ್‌ಶಾಹಿ ಸುಲ್ತಾನರಿಂದ ಬಸರಕೋಡ ಗ್ರಾಮವನ್ನು ಉಂಬಳಿಯಾಗಿ ಅಥವಾ ಇನಾಂ ಪಡೆದುಕೊಂಡರು. ಮೊದಲು ಮುದ್ದೇಬಿಹಾಳ ಪಟ್ಟಣವನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ಮಾಡುತ್ತಿದ್ದ ಇವರು ಆದಿಲ್‌ಶಾಹಿಗಳ ಕೋರಿಕೆಯ ಮೇರೆಗೆ ಮುದ್ದೇಬಿಹಾಳ ಕೋಟೆಯನ್ನು ಸುಲ್ತಾನರಿಗೆ ಬಿಟ್ಟುಕೊಟ್ಟು ಬಸರಕೋಡಕ್ಕೆ ಬಂದು ನೆಲೆಸಿದರೆಂದು ತಿಳಿದುಬರುತ್ತದೆ. ಈ ಗ್ರಾಮವನ್ನು ತಮ್ಮ ಕೇಂದ್ರ ನೆಲೆಯಾಗಿ ಮಾಡಿಕೊಂಡು ದೀರ್ಘಕಾಲದವರೆಗೆ ಜಿಲ್ಲೆಯಲ್ಲಿ ಆಡಳಿತ ಮಾಡಿದ ಇವರು ಬಸರಕೋಡದ ನಾಡಗೌಡರೆಂದು ವಿಜಾಪುರ ಜಿಲ್ಲೆಯಲ್ಲಿ ಹೆಸರು ಪಡೆದಿದ್ದಾರೆ.[೨೮] ಈ ಗ್ರಾಮದಲ್ಲಿ ಕೋಟೆ ಹಾಗೂ ವಾಡೆಯಿದ್ದು, ಕೋಟೆಯನ್ನು ಯಾರು ಕಟ್ಟಿಸಿದರು ಎಂಬುದು ತಿಳಿದುಬರುವುದಿಲ್ಲ. ಆದರೆ ವಾಸ್ತುಶಿಲ್ಪ ದೃಷ್ಟಿಕೋನವನ್ನಿಟ್ಟುಕೊಂಡು ನೋಡಿದರೆ ಇದು ಆದಿಲ್‌ಶಾಹಿಗಳ ಕಾಲಾವಧಿಯಲ್ಲಿ ಈ ದೇಸಗತಿಯವರೇ ನಿರ್ಮಾಣ ಮಾಡಿರಬಹುದು.

ಕೋಟೆಗೆ ಸಂಬಂಧಿಸಿದಂತೆ ಇಂದು ಕೇವಲ ಕೋಟೆಯ ದ್ವಾರಬಾಗಿಲು ಮತ್ತು ಒಂದು ಭಾಗದಲ್ಲಿ ಕೋಟೆಯ ಬುರುಜು ಮಾತ್ರ ಉಳಿದುಕೊಂಡಿದೆ. ಇನ್ನುಳಿದಂತೆ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಕೋಟೆಯ ಮುಖ್ಯದ್ವಾರವು ಕಮಾನಾಕೃತಿಯಲ್ಲಿ ನಿರ್ಮಾಣಗೊಂಡಿದ್ದು ೧೮ ಅಡಿ ಅಗಲ ಮತ್ತು ೧೮ ಅಡಿ ಎತ್ತರವನ್ನು ಹೊಂದಿದೆ. ದ್ವಾರದ ಒಳಭಾಗದಲ್ಲಿ ಸೈನಿಕರ ಕೊಠಡಿಗಳಿದ್ದು ಅವುಗಳನ್ನು ಪಂಚಾಯಿತಿ ಕೋಣೆಗಳಾಗಿ ಮಾರ್ಪಡಿಸಿದ್ದಾರೆ. ದ್ವಾರದ ಹೊರಭಾಗದ ಕೈಪಿಡಿಗೋಡೆಯಲ್ಲಿ ಬಂದೂಕು ಮತ್ತು ವೀಕ್ಷಣಾರಂಧ್ರಗಳು, ಮೇಲ್ಭಾಗದಲ್ಲಿ ಕೋಟೆಯ ತೆನೆಗಳು ಕಂಡುಬರುತ್ತವೆ. ಇದರ ಎಡಭಾಗದಲ್ಲಿ ದಿಡ್ಡಿಬಾಗಿಲು 'L' ಆಕಾರದಲ್ಲಿದ್ದು ಇಂದು ಅದು ಬಳಕೆಯಿಲ್ಲದ್ದರಿಂದ ಮುಚ್ಚಿಹೋಗಿದೆ. ಅಲ್ಲದೆ ಮೇಲುಗಡೆ ಹೋಗಲು ಮೆಟ್ಟಿಲುಗಳಿವೆ. ಈ ದ್ವಾರದಿಂದ ಸ್ವಲ್ಪ ದೂರದಲ್ಲಿ ಆಗ್ನೇಯದಿಕ್ಕಿನಲ್ಲಿ ಸುಮಾರು ೨೫ ಅಡಿ ಎತ್ತರದ ಬುರುಜು ಕಂಡುಬರುತ್ತದೆ. ಇದರ ಹೊರಭಾಗದ ಮಧ್ಯೆ ಮತ್ತು ಮೇಲ್ಭಾಗದಲ್ಲಿ ಬಂದೂಕುಕಿಂಡಿಗಳಿವೆ. ಬುರುಜು ಕೂಡ ಹಾಳಾದ ಸ್ಥಿತಿಯಲ್ಲಿದೆ. ಸ್ಥಳೀಯರು ಗ್ರಾಮದ ನಾಲ್ಕೂ ಮೂಲೆಗಳಲ್ಲಿ ಇಂತಹ ಬುರುಜುಗಳಿದ್ದವು. ಅದರೆ ಇಂದು ಅವು ಪೂರ್ತಿ ಹಾಳಾಗಿದ್ದು ಈ ಒಂದು ಬುರುಜು ಮಾತ್ರ ಉಳಿದುಕೊಂಡಿದೆ. ಅದೇ ರೀತಿ ಕೋಟೆಗೋಡೆಯು ಕೂಡ ಇಂದು ನೋಡಲು ಕಾಣಸಿಗುವುದಿಲ್ಲ. ಈ ದ್ವಾರ ಮತ್ತು ಬುರುಜುವಿನ ನಿರ್ಮಾಣಶೈಲಿ ಮತ್ತು ಲಕ್ಷಣಗಳನ್ನು ಗಮನಿಸಿದಾಗ ಇದು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ನಿರ್ಮಿಸಿದ್ದೆಂದು ಹೇಳಬಹುದು.

ಗ್ರಾಮದಲ್ಲಿ ನಾಡಗೌಡರು ನಿರ್ಮಿಸಿದ ವಾಡೆಯಿದೆ. ಈ ವಾಡೆಯಲ್ಲಿ ನಿರ್ಮಿಸಲಾದ ಕುದುರೆಯ ಪಾಗ ಹಾಗೂ ಆನೆಗಳನ್ನು ಕಟ್ಟುವ ಸ್ಥಳಗಳನ್ನು ಗಮನಿಸಿದಾಗ ಬಸರಕೋಡದ ನಾಡಗೌಡರು ಹೊಂದಿದ ಸೈನಿಕ ಶಕ್ತಿಯ ಚಿತ್ರಣವು ಲಭಿಸುತ್ತದೆ. ವಾಡೆಯ ಎಡಭಾಗದಲ್ಲಿ ನಿರ್ಮಿಸಲಾದ ಸದರಕಟ್ಟೆಯು ಅಂದಿನ ನ್ಯಾಯಾಲಯವಾಗಿತ್ತು. ವಾಡೆಯಲ್ಲಿ ಮನರಂಜನೆ ವೇದಿಕೆಯಿದ್ದು ಜನಪದ ಕುಣಿತ, ಸಂಗೀತ ಕಾರ್ಯಕ್ರಮಗಳನ್ನು ವಿವಿಧ ಕಲಾವಿದರಿಂದ ಏರ್ಪಡಿಸಲಾಗುತ್ತಿತ್ತು. ಇಂತಹ ಬೃಹತ್‌ವಾಡೆಯು ಅಂದಿನ ನಾಡಗೌಡರ ರಾಜಕೀಯ ಪ್ರಾಬಲ್ಯತೆ ಹಾಗೂ ಸಾಮಾಜಿಕ ಪ್ರತಿಷ್ಠೆಯ ಸಂಕೇತವಾಗಿದೆ.

ಬಳಗಾನೂರು

ಬಳಗಾನೂರು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೩೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ನಾಲ್ವತ್ತುಂಬಾಡದಲ್ಲಿ ಬರುವಂತಹ ಒಂದು ಹಳ್ಳಿಯಾಗಿತ್ತು. ತರ್ದವಾಡಿ ಸಾಸಿರದ ಉಪವಿಭಾಗವಾದ ನಾಲ್ವತ್ತುಂಬಾಡವು ಮುದ್ದೇಬಿಹಾಳ ತಾಲೂಕಿನ ಮಧ್ಯಭಾಗದ ನಾಲ್ವತ್ತು ಹಳ್ಳಿಗಳ ವ್ಯಾಪ್ತಿಯನ್ನು ಹೊಂದಿತ್ತು. ಅದರಲ್ಲಿ ಬಳಗಾನೂರು ಗ್ರಾಮವು ಒಳಗೊಂಡಿದೆ.[೨೬೩]

ಗ್ರಾಮರಕ್ಷಣಾ ದೃಷ್ಟಿಕೋನವನ್ನಿಟ್ಟುಕೊಂಡು ನಿರ್ಮಿಸಿದ ಕೋಟೆಯು ಗ್ರಾಮವನ್ನು ಸುತ್ತುವರಿದಿದೆ. ಈ ಕೋಟೆಯನ್ನು ಸ್ಥಳೀಯವಾಗಿ ಸಿಗುವ ಸುಣ್ಣ ಶಿಲೆಯ ದಪ್ಪ ಮತ್ತು ತೆಳುವಾದ ಹಾಸುಗಲ್ಲನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಈ ಕೋಟೆಗೆ ಹೆಚ್ಚಿನ ಪ್ರಮಾಣದಲ್ಲಿ ಮಣ್ಣು ಬಳಸದೆ ಕೋಟೆಗೋಡೆಯ ಉಂಟಾದ ಸಂದುಗಳಿಗೆ ಮಾತ್ರ ಉಪಯೋಗಿಸಿದ್ದು ಕಂಡುಬರುತ್ತದೆ. ಕೋಟೆಯ ನಿರ್ಮಾಣ ಶೈಲಿ ಮತ್ತು ಲಕ್ಷಣಗಳನ್ನು ಗಮನಿಸಿದಾಗ ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ನಿರ್ಮಿಸಿರುವ ಸಾಧ್ಯತೆಗಳಿವೆ. ಪೂರ್ವಾಭಿಮುಖವಾಗಿರುವ ಕೋಟೆಯ ದ್ವಾರವು ಕಮಾನಾಕೃತಿಯಲ್ಲಿದೆ. ದ್ವಾರಬಾಗಿಲಿಗೆ ದಪ್ಪವಾದ ಸುಣ್ಣ ಶಿಲೆಯನ್ನು ಉಪಯೋಗಿಸಿದ್ದು ದ್ವಾರಬಾಗಿಲು ೮.೫೦ ಅಡಿ ಅಗಲ, ೧೪ ಅಡಿ ಎತ್ತರ ಕಂಡುಬರುತ್ತದೆ. ಒಟ್ಟು ಕೋಟೆಯು ೪೭೧ ಮೀ. ಸುತ್ತಳತೆ ಹೊಂದಿದ್ದು ಕೋಟೆಗೋಡೆಗೆ ತಳಪಾಯದಲ್ಲಿ ದಪ್ಪವಾದ ಸುಣ್ಣ ಶಿಲೆಯನ್ನು ಅದರ ಮೇಲ್ಮಟ್ಟದಲ್ಲಿ ತೆಳುವಾದ(೩ ಅಂಗುಲ) ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆಯದಪ್ಪ ೪ ರಿಂದ ೫ಅಡಿಯವರೆಗೆ ಕಂಡುಬರುತ್ತದೆ. ಕೋಟೆಗೋಡೆ ತಳಮಟ್ಟದಿಂದ ಮೇಲ್ಭಾಗದವರೆಗೆ ಕಿರಿದಾಗುತ್ತಾ ಹೋಗಿದೆ. ಕೋಟೆಗೋಡೆಗೆ ಹೊಂದಿಕೊಂಡು ನಾಲ್ಕು ಮೂಲೆಗಳಲ್ಲಿ ಬುರುಜುಗಳಿದ್ದು ಅದರಲ್ಲಿ ಆಗ್ನೇಯಕ್ಕೆ ಇರುವ ಬುರುಜು ಮಾತ್ರ ಸ್ವಲ್ಪಮಟ್ಟಿಗೆ ಯಥಾವತ್ತಾಗಿ ಉಳಿದುಕೊಂಡಿದೆ. ಉಳಿದ ಬುರುಜುಗಳ ಸುತ್ತ ಗೋಡೆಯು ಬಿದ್ದುಹೋಗಿದ್ದು ಮಧ್ಯಭಾಗದಲ್ಲಿರುವುದು ಮಾತ್ರ ಉಳಿದುಕೊಂಡಿದೆ. ಈ ನಾಲ್ಕು ಬುರುಜುಗಳನ್ನು ಹುಡೆದ ಲಕ್ಷ್ಮೀ ಎಂದೇ ಪೂಜಿಸುತ್ತಾರೆ. ಆಗ್ನೇಯದಿಕ್ಕಿನ ಬುರುಜು ೨೪ ಅಡಿ ಎತ್ತರ ಉಳಿದುಕೊಂಡಿದ್ದು ಮಧ್ಯ ಮತ್ತು ಮೇಲ್ಭಾಗದಲ್ಲಿ ಬಂದೂಕುಕಿಂಡಿಗಳಿವೆ. ಈ ಬುರುಜುಗಳು ಮಧ್ಯಭಾಗದಲ್ಲಿ ಟೊಳ್ಳಾಗಿದ್ದು ಒಳಗಡೆಯಿಂದ ಶತ್ರುಗಳ ಮೇಲೆ ಆಕ್ರಮಣ ಮಾಡಲು ಬಂದೂಕು

ಮತ್ತು ವೀಕ್ಷಣಾಕಿಂಡಿಗಳನ್ನು ಮಾಡಿದ್ದಾರೆ. ಇವುಗಳಲ್ಲಿನ ಬಂದೂಕುಕಿಂಡಿಗಳು ಒಳಗಿನಿಂದ ಒಮ್ಮೆಲೆ ಮೂರು ಕಡೆ ಗಮನವಿಡುವಂತೆ ನಿರ್ಮಿಸಿ ೪೫೦, ೯೦೦ ಕೋನಾಕೃತಿಯಲ್ಲಿವೆ. ಉಳಿದಂತೆ ಮೇಲ್ಭಾಗ ಬಿದ್ದು ಹೋಗಿದ್ದು ಅದರ ಲಕ್ಷಣಗಳನ್ನು ಗುರುತಿಸಲು ಕಷ್ಟಕರವಾಗುತ್ತದೆ. ಕೋಟೆಯೊಳಗೆ ಆಧುನಿಕ ಮನೆಗಳಿರುವುದನ್ನು ಕಾಣಬಹುದು. ದ್ವಾರಬಾಗಿಲ ಮುಂಭಾಗ ಆಂಜನೇಯ ದೇವಸ್ಥಾನವಿದೆ. ಕೋಟೆಯ ಆಗ್ನೇಯಭಾಗದಲ್ಲಿ ಆದಿಲ್‌ಶಾಹಿಗಳ ಕಾಲಾವಧಿಯ ಕೊನೆಯ ಘಟ್ಟದಲ್ಲಿ ನಿರ್ಮಿಸಿದ ಮಸೀದಿ ಕಂಡುಬರುತ್ತದೆ. ಮಿನಾರುಗಳ ದ್ವಾರಬಾಗಿಲವಿದ್ದು ಸುತ್ತಲೂ ಪ್ರಾಕಾರಗೋಡೆಯನ್ನು ನಿರ್ಮಿಸಲಾಗಿದೆ.

ಮುದ್ದೇಬಿಹಾಳ

ತಾಲೂಕುಕೇಂದ್ರವಾದ ಮುದ್ದೇಬಿಹಾಳವು ವಿಜಾಪುರದಿಂದ ಆಗ್ನೇಯಕ್ಕೆ ೮೩ ಕಿ.ಮೀ. ದೂರದಲ್ಲಿದೆ. ಒಂದು ಕಡಿದಾದ ಹಳ್ಳದ ಪೂರ್ವದಂಡೆಯ ಮೇಲೆ ಪರ್ವತಗಿರಿ ಎಂಬ ಗ್ರಾಮವೂ, ಪಶ್ಚಿಮ ದಂಡೆಯ ಮೇಲೆ ಮುದ್ದೇಬಿಹಾಳ ಎಂಬ ಗ್ರಾಮವೂ ಇದ್ದು ಇವೆರಡೂ ಸೇರಿಯೇ ಈಗಿನ ಮುದ್ದೇಬಿಹಾಳ ಆಗಿದೆ ಎಂದು ಸ್ಥಳೀಯ ಪ್ರತೀತಿಯಿದೆ. ಮುದ್ದೇಬಿಹಾಳ ಪದನಿಷ್ಪತ್ತಿಯು ಮೂರು ಕಡಿದಾದ ದಿಬ್ಬ(ದಿಣ್ಣೆ)ಗಳ ಮೇಲೆ ನೆಲೆಸಿದ ಊರು ಮುದ್ದೇಹಾಳ, ಮುಂದೆ ಕಾಲಾಂತರದಲ್ಲಿ ಮುದ್ದೇಬಿಹಾಳವಾಗಿರಬೇಕೆಂದು ರಂ.ಶ್ರೀ. ಮುಗಳಿಯವರು ಹೇಳುತ್ತಾರೆ. ಅದೇ ರೀತಿ ಮೂರ+ದಿಬ್ಬೆ+ಪಾಳ್ಯೆ ಅಂದರೆ 'ಮುದ್ದಬ್ಬೆಯ ಪಾಳ್ಯವೇ ಮುದ್ದೇಬಿಹಾಳ್' ಎಂದಾಯಿತೆಂದು ಎಂ.ಎಂ. ಕಲಬುರ್ಗಿ ಅವರು ಅಭಿಪ್ರಾಯಪಡುತ್ತಾರೆ.[೨೬೪]

ಹರಿಹರನ ಬಸವರಾಜದೇವರ ರಗಳೆಯಲ್ಲಿ 'ಮುತ್ತಬ್ಬೆಯ ಪಕ್ಕದೊಳ್....... ನಾಲ್ಕೆರಡು ವರ್ಷಂ ಸುಖದೊಳಿರೆ' ಎಂಬ ನುಡಿಗಳು ಕಂಡುಬರುತ್ತವೆ. ಬಸವಣ್ಣನ ಮುತ್ತಬ್ಬೆಯ ಊರೇ 'ಮುತ್ತಬ್ಬೆಹಾಳ'ವಾಗಿ ಅದೇ ನಂತರದಲ್ಲಿ ಮುದ್ದೇಬಿಹಾಳ ಆಗಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.[೨೬೫] ಅಲ್ಲದೆ ವಿಜಾಪುರ ಆದಿಲ್‌ಶಾಹಿಗಳ ಕಾಲದಲ್ಲಿ "ಮುದ್ದೇಮಹಲ್" ಅಂದರೆ ದಾಸ್ತಾನು ಕೊಠಡಿ ಅಥವಾ ಸಂಗ್ರಹದ ಕೋಣೆಯಾಗಿದ್ದ ಈ ಪ್ರದೇಶವು ಮುಂದೆ ಮುದ್ದೇಬಿಹಾಳ ಎಂದು ಮಾರ್ಪಾಟುಗೊಂಡಿರಬಹುದು ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ.

ನಗರದಲ್ಲಿನ ಕೋಟೆಯೊಳಗೆ ಕಲ್ಯಾಣ ಚಾಲುಕ್ಯರ ಈಶ್ವರ ದೇವಾಲಯ, ಮುಂಭಾಗದಲ್ಲಿ ಕಲ್ಯಾಣಿ, ಇದೇ ದೇವಾಲಯದಲ್ಲಿರುವ ಯಾದವ ಚಕ್ರವರ್ತಿ ರಾಮಚಂದ್ರದೇವನ ಕ್ರಿ.ಶ. ೧೨೮೧ರ ಶಾಸನ[೨೬೬] ಇವು ಈ ನಗರದ ಪ್ರಾಚೀನತೆಗೆ ನಿದರ್ಶನವಾಗಿವೆ. ಬಸರಕೋಡದ ನಾಡಗೌಡರ ಮೂಲಪುರುಷನಾದ ಪರಮಣ್ಣನೆಂಬ ಅಧಿಕಾರಿಯು ಕ್ರಿ.ಶ. ೧೬೮೦ರಲ್ಲಿ ಈ ಮುದ್ದೇಬಿಹಾಳ ಪಟ್ಟಣವನ್ನು ಕಟ್ಟಿಸಿದನು ಎಂದು ಹೇಳಲಾಗುತ್ತದೆ.[೨೬೭] ಇದೇ ಮನೆತನಕ್ಕೆ ಸೇರಿದ ಪಾಳೆಯಗಾರನಂತಿದ್ದ ಹುಚ್ಚಪ್ಪ ನಾಡಗೌಡನ ಆಳ್ವಿಕೆಯಲ್ಲಿ ಇಲ್ಲಿ ಮತ್ತಷ್ಟು ಜನವಸತಿ ಬೆಳೆದಿರಬೇಕು. ಕ್ರಿ.ಶ. ೧೭೬೪ರಲ್ಲಿ

ನಾಲ್ಕನೆಯ ಮಾಧವರಾವ್ ಪೇಶ್ವೆಯು ಹೈದರಾಬಾದ್ ನಿಜಾಮ್‌ನಿಂದ ವಿಜಾಪುರ ಜಿಲ್ಲೆಯ ಪ್ರದೇಶಗಳನ್ನು ವಶಪಡಿಸಿಕೊಂಡನು. ಆಗ ಶಿವಶಂಕರಯ್ಯನವರ ಮಗನಾದ ಹುಚ್ಚಪ್ಪ ನಾಡಗೌಡರು ಪೇಶ್ವೆಗಳ ಅಧೀನತೆಯನ್ನು ಒಪ್ಪಿಕೊಂಡು ೧೦ ಹಳ್ಳಿಗಳನ್ನು ಇವರಿಂದ ಮತ್ತೆ ಇನಾಂ ಆಗಿ ಪಡೆದುಕೊಂಡನು.[೨೮] ಅದರೆ ಕೆಲವೇ ತಿಂಗಳುಗಳಲ್ಲಿ ಮುದ್ದೇಬಿಹಾಳದಿಂದ ಬಸರಕೋಡಕ್ಕೆ ತಮ್ಮ ಕೇಂದ್ರಸ್ಥಾನವನ್ನು ಬದಲಾಯಿಸಿಕೊಂಡಂತೆ ಕಾಣುತ್ತದೆ. ಅಂದಿನಿಂದ ಅವರು ಬಸರಕೋಡದ ನಾಡಗೌಡರು ಎಂದು ಜಿಲ್ಲೆಯಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಕ್ರಿ.ಶ. ೧೮೧೮ರವರೆಗೆ ಇದು ಪೇಶ್ವೆಗಳ ಅಧೀನದಲ್ಲಿದ್ದು ಮುಂದೆ ಬ್ರಿಟಿಷರ ಕೈವಶವಾಯಿತು. ಅಂದಿನಿಂದ ಇದು ಜಿಲ್ಲೆಯ ಒಂದು ಉಪವಿಭಾಗವಾಗಿ ಮುಂದುವರಿದುಕೊಂಡು ಬಂದಿತು.[೨೯]

ನಾಡಗೌಡ ಮನೆತನಕ್ಕೆ ಸೇರಿದ ಹುಚ್ಚಪ್ಪ ನಾಡಗೌಡನು ಕ್ರಿ.ಶ. ೧೭೨೦ರಲ್ಲಿ ಮುದ್ದೇಬಿಹಾಳದಲ್ಲಿ ಕೋಟೆಯನ್ನು ಕಟ್ಟಿಸಿದನು.[೨೦] ಜೊತೆಗೆ ಕೋಟೆಯ ಮಧ್ಯದಲ್ಲಿ ಅರಮನೆ, ಕುದುರೆಯ ಪಾಗ, ಆಡಳಿತ ಕಚೇರಿ, ನ್ಯಾಯಾಲಯದ ಸದರಕಟ್ಟೆಗಳನ್ನು ಕಟ್ಟಿಸಿದನು. ಕಾಲಾಂತರದಲ್ಲಿ ಈ ವಂಶದ ಉತ್ತರಾಧಿಕಾರಿಗಳು ತಮ್ಮ ವಾಸಸ್ಥಳವನ್ನು ಬಸರಕೋಡಕ್ಕೆ ಬದಲಾಯಿಸಿದ್ದರಿಂದ ನಗರದ ಮಧ್ಯದಲ್ಲಿ ಕಂಡುಬರುವ ಕೋಟೆಯನ್ನು ಹೊರತುಪಡಿಸಿ ಅವರ ವೈಭವದ ಕುರುಹುಗಳಾದ ಇವು ಇಂದು ಸಂಪೂರ್ಣವಾಗಿ ನಾಶ ಹೊಂದಿವೆ.

ನಗರದ ಮಧ್ಯದಲ್ಲಿ ಕಂಡುಬರುವ ಈ ಕೋಟೆಯನ್ನು ಸ್ಥಳೀಯವಾಗಿ ಕಿಲ್ಲೆ ಎಂದು ಕರೆಯುತ್ತಾರೆ. ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿರುವ ಕೋಟೆಯು ಸುಮಾರು ೧.೦೨೪ ಕಿ.ಮೀ. ಸುತ್ತಳತೆಯನ್ನು ಹೊಂದಿದ್ದು ಇಂದು ಜೀರ್ಣಾವಸ್ಥೆಯಲ್ಲಿದೆ. ಏರುತಗ್ಗುಗಳಿಂದ ಕೂಡಿದ ಕಲ್ಲುಬಂಡೆಯ ಹಾಸಿನ ಮೇಲೆ ಕೋಟೆಯು ನಿರ್ಮಾಣಗೊಂಡಿದೆ. ಹೀಗಾಗಿ ಗೋಡೆಯ ಎತ್ತರದಲ್ಲಿ ಹೆಚ್ಚು ಕಡಿಮೆ ಕಂಡುಬರುತ್ತದೆ. ಇಂದು ಕೆಲವು ಭಾಗಗಳು ಪೂರ್ಣವಾಗಿ ನಾಶ ಹೊಂದಿದ್ದು ೧೦ ರಿಂದ ೧೫ ಅಡಿಯವರೆಗೆ ದಪ್ಪ, ಸುಮಾರು ೩೦ ಅಡಿ ಎತ್ತರವನ್ನು ಹೊಂದಿದೆ. ಸುಮಾರು ೧೦ ಅಡಿ ಎತ್ತರದ ಮೇಲೆ ಎರಡು ಹಂತದಲ್ಲಿ ಬಂದೂಕುಕಿಂಡಿಗಳಿದ್ದು ೩ ಅಡಿ ಎತ್ತರ, ೬ ಅಂಗುಲ ಅಗಲವಾಗಿವೆ. ಈ ಬಂದೂಕು ಕಿಂಡಿಗಳನ್ನು ದೂರ ಮತ್ತು ಸಮೀಪ ದೃಷ್ಟಿಕೋನವನ್ನಿಟ್ಟುಕೊಂಡು ನಿರ್ಮಿಸಲಾಗಿದ್ದು, ಒಂದೇ ಕಿಂಡಿಯಲ್ಲಿ ಎರಡರಿಂದ ನಾಲ್ಕು ಪ್ರತಿಕಿಂಡಿಗಳನ್ನು ಇವುಗಳಲ್ಲಿ ಕಾಣಬಹುದು. ಕೋಟೆಯ ೨ ಅಡಿ ಎತ್ತರದ ಕೈಪಿಡಿಗೋಡೆಯ ಮೇಲೆ ೩ ಅಡಿ ಅಗಲ ೩ ಅಡಿ ಎತ್ತರದ ತೆನೆಗಳು ಕಂಡುಬರುತ್ತವೆ. ಶತ್ರುಗಳು ಕೋಟೆಯ ಮೇಲೆ ದಾಳಿ ಮಾಡಿದಾಗ ತೆನೆಗಳ ಹಿಂದೆ ನಿಂತು ಪ್ರತಿದಾಳಿ ಮಾಡಲು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಕೈಪಿಡಿಗೋಡೆಯ ಹಿಂದೆ ಸುಮಾರು ೫ ರಿಂದ ೮ ಅಡಿ ಅಗಲವಾದ ಅಟ್ಟಾಲಕವಿದೆ. ಕೋಟೆಗೋಡೆಯ ದಪ್ಪವು ಹೆಚ್ಚು ಕಡಿಮೆ ಇರುವುದರಿಂದ ಅಟ್ಟಾಲಕದ ರಚನೆಯಲ್ಲಿಯೂ ವ್ಯತ್ಯಾಸವಿದೆ.

ಚೌಕಾಕಾರದ ಮುಖ್ಯದ್ವಾರವು ಪಶ್ಚಿಮಾಭಿಮುಖವಾಗಿದ್ದು ಪೂರ್ಣಪ್ರಮಾಣದಲ್ಲಿ ಉಳಿದುಕೊಂಡಿಲ್ಲ. ದ್ವಾರದ ತೊಲೆಯ ಪಟ್ಟಿಕೆಯ ಲಲಾಟದಲ್ಲಿ ಗಣೇಶನನ್ನು, ಅಕ್ಕಪಕ್ಕದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ. ಪ್ರವೇಶದ ಇಕ್ಕೆಲಗಳಲ್ಲಿ ಸೈನಿಕರ ಕೊಠಡಿಗಳಿದ್ದು ಅವಶೇಷಗಳಾಗಿ ಉಳಿದುಕೊಂಡಿವೆ. ಕೋಟೆಯ ಮುಖ್ಯದ್ವಾರವು ಮುಚ್ಚಿದಾಗ ಒಳಗೆಹೋಗಿಬರಲು ಮತ್ತು ತುರ್ತುಸಂದರ್ಭದಲ್ಲಿ ಉಪಯೋಗಿಸಲು ಅರ್ಧವೃತ್ತಾಕಾರದಲ್ಲಿ ದಿಡ್ಡಿಬಾಗಿಲಿದ್ದು ಅದನ್ನು ಇಂದು ಕಲ್ಲುಗಳನ್ನಿಟ್ಟು ಮುಚ್ಚಲಾಗಿದೆ.

ಕೋಟೆಯ ಸುತ್ತಲೂ ಮತ್ತೊಂದು ಪ್ರತಿ ರಕ್ಷಣಾಗೋಡೆಯನ್ನು ನಿರ್ಮಿಸಲಾಗಿದೆ. ಇವುಗಳ ಮಧ್ಯದ ಅಂತರ ೪೦ ಅಡಿ ಅಗಲವಾಗಿದ್ದು ಉತ್ತರ ಭಾಗದಲ್ಲಿ ಕಂಡುಬರುತ್ತದೆ. ಇದು ಬಹುಶಃ ಕೋಟೆಯ ಸುತ್ತಲೂ ಇರುವ ಕಂದಕದ ನೀರು ತಡೆಹಿಡಿಯಲು ಅಥವಾ ಹೊರಸುತ್ತಿನ ಗೋಡೆಯನ್ನು ಶತ್ರುಗಳು ದಾಟಿ ಬಂದಾಗ ಎರಡರ ಮಧ್ಯೆ ಸೈನಿಕರನ್ನು ಇಕ್ಕಟ್ಟಿಗೆ ಸಿಕ್ಕಿಸುವ ತಂತ್ರ ಇದಾಗಿರಬಹುದು. ಈ ರೀತಿಯ ರಚನೆ ಮುದ್ದೇಬಿಹಾಳ ತಾಲೂಕಿನಲ್ಲಿ ನಿರ್ಮಾಣವಾದ ಬಹುತೇಕ ಕೋಟೆಗಳಲ್ಲಿಯೂ ಕಾಣಬಹುದು. ಕೋಟೆಗೋಡೆಯ ಭದ್ರತೆ ಮತ್ತು ಶತ್ರುಗಳ ಮೇಲೆ ಆಕ್ರಮಣ ಮಾಡಲು ತೋಫುಗಳನ್ನು ಇಡಲು ಅಥವಾ ಶತ್ರುಗಳನ್ನು ದೂರದಲ್ಲಿಯೇ ತಡೆಯುವ ಉದ್ದೇಶದಿಂದ ಗೋಡೆಗೆ ಹೊಂದಿಕೊಂಡು ಬುರುಜುಗಳನ್ನು ನಿರ್ಮಿಸಲಾಗಿದೆ. ಇಂದು ಸುಮಾರು ೧೪ ವೃತ್ತಾಕಾರ ಮತ್ತು ಅರ್ಧವೃತ್ತಾಕಾರದ ಬುರುಜುಗಳು ಕಂಡುಬರುತ್ತವೆ. ಮಧ್ಯದಲ್ಲಿ ಟೊಳ್ಳಾಗಿರುವ ಇವು ೩೫ ರಿಂದ ೪೦ ಅಡಿ ಎತ್ತರದವರೆಗೆ ಕಂಡುಬರುತ್ತವೆ. ಮೇಲ್ಭಾಗಕ್ಕೆ ಹೋಗಲು ಅಟ್ಟಾಲಕದ ಸಮಾನಾಂತರವಾಗಿ ದ್ವಾರ ಇದ್ದದ್ದು ಕಂಡುಬರುತ್ತದೆ.

ಕೋಟೆಯ ಉತ್ತರ ಮತ್ತು ದಕ್ಷಿಣಭಾಗದಲ್ಲಿ ಎತ್ತರದ ಪ್ರದೇಶವಿದ್ದು ಇವರೆಡರ ಮಧ್ಯೆ ತಗ್ಗಾದ ಇಳಿಜಾರು ಪ್ರದೇಶವಿದೆ. ನಗರೀಕರಣ ಬೆಳೆಯುವುದಕ್ಕಿಂತಲೂ ಮೊದಲು ಇಲ್ಲಿ ಹಳ್ಳ ಹರಿಯುತ್ತಿರಬಹುದು. ಆದರೆ ಇಂದು ಆ ತಗ್ಗಾದ ಪ್ರದೇಶದಲ್ಲಿ ಪಟ್ಟಣದ ಕೊಳಚೆನೀರು ಹರಿದು ಹೋಗುತ್ತದೆ. ಹಳ್ಳದ ನೀರು ಕೋಟೆಯೊಳಗೆ ಪ್ರವೇಶಿಸಿ ಮತ್ತೆ ಕೋಟೆಯೊಳಗಿನಿಂದಲೇ ಹೋಗುವಂತೆ ಕಾಲುವೆ ನಿರ್ಮಿಸಿದ್ದು, ತುರ್ತುಸಂದರ್ಭದಲ್ಲಿ ನೀರನ್ನು ಸಂಗ್ರಹಿಸಿರುವ ಸಾಧ್ಯತೆಗಳಿವೆ. ನೀರು ಒಳ ಬಂದು ಹೊರಹೋಗಲು ಎರಡು ಭಾಗಗಳಲ್ಲಿ ಕಮಾನಾಕೃತಿಯ ಐದು ತೆರೆದ ಬಾಗಿಲುಗಳನ್ನು ಬಿಟ್ಟಿದ್ದಾರೆ. ಕೋಟೆಯೊಳಗಿನಿಂದ ಹರಿಯುವ ಈ ನೀರು ಮುಂದೆ ದೊಡ್ಡದಾದ ಕೆರೆಯನ್ನು ಸೇರುವಂತೆ ಮಾಡಲಾಗಿದೆ. ಕೋಟೆಯ ಮಧ್ಯೆ ಈ ಹಳ್ಳದ ದಂಡೆಯ ಮೇಲೆ ಕ್ರಿ.ಶ. ೧೭ನೇ ಶತಮಾನದ ಈಶ್ವರ ದೇವಾಲಯ ಮತ್ತು ಕಲ್ಯಾಣಿ ಕಂಡುಬರುತ್ತವೆ.

ವೇಗವಾಗಿ ಬೆಳೆಯುತ್ತಿರುವ ನಗರೀಕರಣದಿಂದಾಗಿ ಕೋಟೆಯು ವಿನಾಶದ ಅಂಚಿನಲ್ಲಿದೆ. ಕೋಟೆ ಗೋಡೆಗೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದು ಒಳಭಾಗದಲ್ಲಿ ಸುತ್ತಲೂ ಕಂಡುಬರುತ್ತದೆ. ಕೆಲವು ಕಡೆ ಕಲ್ಲುಗಳನ್ನು ಕಿತ್ತು ಸ್ಥಳೀಯರು ಮನೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

ಇದೇ ರೀತಿ ಮುಂದುವರಿದರೆ ಕೋಟೆಯು ಅಲ್ಪಾವಧಿಯಲ್ಲಿಯೇ ಸಂಪೂರ್ಣವಾಗಿ ನಾಶ ಹೊಂದುವುದು.

ಮಡಕೇಶ್ವರ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಕುಂಬಾರ ಜನರು ಹೆಚ್ಚು ವಾಸವಿದ್ದು ಅವರು ಮಡಕೆಗಳನ್ನು ಮಾಡಿ ಜೀವನೋಪಾಯವನ್ನು ಸಾಗಿಸುತ್ತಿದ್ದರು. ಹೀಗಾಗಿ ಮಡಿಕೆಶಿರೂರ ಎಂಬ ಹೆಸರು ಬಂದಿತು ಎಂದು, ಇನ್ನೊಂದು ಹೇಳಿಕೆಯ ಪ್ರಕಾರ ಕುಂಬಾರನು ತಾನು ಮಾಡಿದ ಮಡಕೆಗಳನ್ನು ಮಾರಲು ಎತ್ತಿನ ಬಂಡಿಯಲ್ಲಿ ಹೊತ್ತುಕೊಂಡು ಹೋಗುತ್ತಿರುವಾಗ ಎತ್ತಿನ ಬಂಡಿ ಬಿದ್ದರೂ ಮಡಕೆಗಳು ಒಡೆಯಲಿಲ್ಲ. ಹೀಗಾಗಿ ಆ ಕುಂಬಾರನು 'ಹೊನ್ನ ಮಡಕೆ ಶಿರೂರು' ಎಂದು ಹೇಳಿದ. ಮುಂದೆ ಇದು ಮಡಕೇಶ್ವರವಾಗಿ ಬದಲಾವಣೆ ಹೊಂದಿತು ಎಂದು ಸ್ಥಳೀಯರು ಹೇಳುತ್ತಾರೆ. ಅಲ್ಲದೆ ಈ ಗ್ರಾಮದಲ್ಲಿ ಕುಂಬಾರ ಜನರು ಹೆಚ್ಚು ವಾಸವಾಗಿದ್ದರು. ಆದರೆ ಇಂದು ಗ್ರಾಮದಲ್ಲಿ ಕುಂಬಾರರ ಮನೆಗಳು ಕಡಿಮೆ ಇವೆ ಎಂದು ಸ್ಥಳೀಯರಾದ ಮಲ್ಲನಗೌಡ ಬಸವಂತ್ರಾಯ ಬಿರಾದಾರ(ವ:೬೫) ಹೇಳುತ್ತಾರೆ.

ಗ್ರಾಮದ ದಕ್ಷಿಣಕ್ಕೆ ಹರಿಯುವ ಹಳ್ಳದ ಹತ್ತಿರ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯವಿದ್ದು ಇಂದು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದ್ದು ನವರಂಗ ಭಾಗ ಮಾತ್ರ ಉಳಿದುಕೊಂಡಿದೆ ಮತ್ತು ಕ್ರಿ.ಶ. ೧೭ ಮತ್ತು ೧೮ನೇ ಶತಮಾನದಲ್ಲಿ ನಿರ್ಮಿತವಾದ ಮಲ್ಲಿಕಾರ್ಜುನ ದೇವಾಲಯ ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣವಾದ ದೇವಾಲಯಗಳು ಗ್ರಾಮದ ಪ್ರಾಚೀನತೆಯನ್ನು ತಿಳಿಸಿಕೊಡುತ್ತವೆ. ಅಲ್ಲದೆ ಕೋಟೆಯ ಮುಖ್ಯದ್ವಾರದ ಹತ್ತಿರ ನಾಗ ಮತ್ತು ಇತರೆ ತೃಟಿತ ಶಿಲ್ಪಗಳಿವೆ. ಈ ಗ್ರಾಮವು ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ತಾಳಿಕೋಟೆ ಪರಗಣಕ್ಕೆ ಒಳಪಟ್ಟಿತ್ತು.

ಗ್ರಾಮದಲ್ಲಿ ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ನಿರ್ಮಾಣವಾಗಿರುವ ಗ್ರಾಮದ ಸುತ್ತಲೂ ಕೋಟೆಯಿದೆ. ಇದರ ಮುಖ್ಯದ್ವಾರವು ಪೂರ್ವಾಭಿಮುಖವಾಗಿದ್ದು ೧೧.೫೦ ಅಡಿ ಅಗಲ, ೧೦ ಅಡಿ ಎತ್ತರವನ್ನು ಹೊಂದಿದೆ. ಪ್ರವೇಶದ ಇಕ್ಕೆಲಗಳಲ್ಲಿ ೧೪.೫೦X೧೦.೫೦ ಅಡಿ ಉದ್ದಗಲದ ಅಂಕಣಗಳಿದ್ದು, ಅಲ್ಲಿಂದ ಮೇಲ್ಭಾಗಕ್ಕೆ ಹೋಗಲು ಮೆಟ್ಟಿಲುಗಳಿವೆ. ದ್ವಾರಬಾಗಿಲಿನ ಮೇಲೆ ಕೈಪಿಡಿಗೋಡೆ ೨.೫೦ ಅಡಿ ಎತ್ತರ ೯ ಅಂಗುಲ ಅಗಲವಾಗಿದ್ದು ಒಂದೇ ಕಿಂಡಿಯಿಂದ ಮೂರು ದಿಕ್ಕುಗಳಲ್ಲಿ ನೇರವಾಗಿ ದೃಷ್ಟಿಯನ್ನು ಇಡುವಂತೆ ನಿರ್ಮಿಸಲಾಗಿದೆ. ತುರ್ತುಸಂದರ್ಭದಲ್ಲಿ ಉಪಯೋಗಿಸಲು ದ್ವಾರಬಾಗಿಲಿನಲ್ಲಿ ಅರ್ಧ ವೃತ್ತಾಕಾರದ ೩ ಅಡಿ ಅಗಲ ೪ ಅಡಿ ಎತ್ತರದ ದಿಡ್ಡಿಬಾಗಿಲು ಕಂಡುಬರುತ್ತದೆ. ಕೋಟೆಗೋಡೆಯು ಗ್ರಾಮವನ್ನು ಸುತ್ತುವರಿದಿದ್ದು ಕೆಲವು ಕಡೆ ಹಾಳಾಗಿದ್ದು ಉಳಿದ ಕೋಟೆಗೋಡೆಯು ೧೦ರಿಂದ ೨೦ ಅಡಿ ಎತ್ತರ ಕಂಡುಬರುತ್ತದೆ. ಕೋಟೆಗೋಡೆಯ ತೆನೆಗಳು ಅಥವಾ ಕೈಪಿಡಿಗೋಡೆ ಮತ್ತು ಅಟ್ಟಾಲಕಗಳ ರಚನೆ ಕಂಡುಬರುವುದಿಲ್ಲ.

ಅದರಲ್ಲಿ ಬಂದೂಕುಕಿಂಡಿಗಳು ಕಂಡುಬರುತ್ತವೆ. ಕೋಟೆಗೋಡೆಗೆ ಹೊಂದಿಕೊಂಡು ನಾಲ್ಕು ದಿಕ್ಕುಗಳ ಮೂಲೆಗಳಲ್ಲಿ ಬುರುಜುಗಳಿದ್ದು ಕೆಳಮಟ್ಟದಲ್ಲಿ ೧೦೦ರಿಂದ ೧೧೨ ಅಡಿ ಸುತ್ತಳತೆಯಿದ್ದು ಬುರುಜುವಿನ ಮೇಲೆ ಹೋದಂತೆ ಕಿರಿದಾಗುತ್ತಾ ಹೋಗಿದೆ. ಮೇಲ್ಭಾಗದಲ್ಲಿ ೮೨ರಿಂದ ೯೦ ಅಡಿ ಸುತ್ತಳತೆಯನ್ನು ಹೊಂದಿದೆ. ಇವು ಮಧ್ಯಭಾಗದಲ್ಲಿ ಟೊಳ್ಳಾಗಿದ್ದು ಕಂಡುಬರುತ್ತದೆ. ಇನ್ನುಳಿದಂತೆ ಕೋಟೆಯು ಕಾಲನ ತುಳಿತಕ್ಕೆ ಒಳಗಾಗಿ ಕ್ರಮೇಣ ನಾಶವಾಗತೊಡಗಿದೆ.

ಮಲಗಲದಿನ್ನಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೨೧ ಕಿ.ಮೀ. ದೂರದಲ್ಲಿದೆ. ಸ್ಥಳೀಯರು ಹೇಳುವಂತೆ ತಾಳೀಕೋಟೆಯ ರಾಸ್ತೆಗಳ(ಮರಾಠ ಆಡಳಿತಾಧಿಕಾರಿಗಳು) ಕಾಲದಲ್ಲಿ ಕೋಟೆಯು ನಿರ್ಮಾಣವಾಗಿದ್ದು ಮುಂದೆ ಇದು ನಾಲತವಾಡ ವತನಕ್ಕೆ ಒಳಪಟ್ಟಿತ್ತು ಎಂದು ಸ್ಥಳಿಯರು ಹೇಳುತ್ತಾರೆ. ಗ್ರಾಮವನ್ನು ಸುತ್ತುವರಿದಂತೆ ಕೋಟೆಯಿದ್ದು ಇಂದು ಸಂಪೂರ್ಣವಾಗಿ ಹಾಳಾಗಿದೆ. ಉತ್ತರ ಮತ್ತು ಪಶ್ಚಿಮಭಾಗದಲ್ಲಿ ೭ರಿಂದ ೮ ಅಡಿಯವರೆಗೆ ಅಲ್ಲಲ್ಲಿ ಉಳಿದುಕೊಂಡಿದ್ದು ಉಳಿದಂತೆ ಕೋಟೆಯ ತಳಪಾಯ ಕಂಡುಬರುತ್ತದೆ. ಕೋಟೆಗೋಡೆಯು ೬ ಅಡಿ ದಪ್ಪವಾಗಿದೆ. ಉಳಿದಂತೆ ಈಶಾನ್ಯ ಭಾಗದಲ್ಲಿ ೨೫ ಅಡಿ ಎತ್ತರವಾದ ಒಂದು ಬುರುಜು ಮಾತ್ರ ಉಳಿದುಕೊಂಡಿದೆ. ಕೋಟೆಗೋಡೆಗೆ ಹೊಂದಿಕೊಂಡು ಒಟ್ಟು ೮ ಬುರುಜುಗಳು ಇದ್ದವು. ಆದರೆ ಇಂದು ಅವು ಉಳಿದುಕೊಂಡುಬಂದಿಲ್ಲ. ಎಂದು ಸ್ಥಳೀಯರು ಹೇಳುತ್ತಾರೆ.

ಮಿಣಜಗಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೨೬ ಕಿ.ಮೀ., ತಾಳಿಕೋಟೆಯಿಂದ ೪ ಕಿ.ಮೀ. ದೂರದಲ್ಲಿದೆ. ಶಿಲಾತಾಮ್ರಯುಗಕ್ಕೆ ಸೇರಿದ ನೆಲೆಯಾಗಿದ್ದು ಜೋರ್ವೆ ಮಾದರಿ ಹಾಗೂ ಬ್ರಹ್ಮಗಿರಿ ಮಾದರಿಯ ಕಂದು ಮಡಕೆ ಚೂರು, ಉಜ್ಜಿ ನಯಗೊಳಿಸಿದ ಕೊಡಲಿ ಉಪಕರಣಗಳು ದೊರೆತಿವೆ.[೨೧] ಕ್ರಿ.ಶ. ೧೧೮೪ರ ಮಿಣಜಗಿ ಶಾಸನ ಕಲ್ಯಾಣ ಚಾಳುಕ್ಯ ದೊರೆ ವೀರ ಸೋಮೇಶ್ವರನ ಆಳ್ವಿಕೆಯ ಕಾಲದ್ದಾಗಿದ್ದು, ಈತನ ಮಹಾಪ್ರಧಾನ ಸೇನಾಧಿಪತಿ ಕುಮಾರ ನರನಾರಸಿಂಹನ ಅಧಿಕಾರಿಯಾದ ಹಗರಟ್ಟಿಗೆ-೩೦೦ರ ಬಾಡ ಮಹಾಗ್ರಾಮಂ ಮಿಣಂಜಿಗೆಯ ಮಹಾಪ್ರಭು ಮಾಚಿರಾಜನನ್ನು ಹೆಸರಿಸುತ್ತದೆ. ಅವನು ತ್ರಿಕೂಟಾಚಲವನ್ನು ನಿರ್ಮಿಸಿ ಮಾಚೇಶ್ವರ, ಮಲ್ಲಿಕಾರ್ಜುನ ಮತ್ತು ಮಾಧವ ದೇವರನ್ನು ಪ್ರತಿಷ್ಠಾಪಿಸುತ್ತಾನೆ. ಈ ತ್ರಿಕೂಟಾಚಲಕ್ಕೆ ಬೈಸ್ಯಕುಲದ ವಿರುಪರಸ, ಹೆಗ್ಗಡೆ, ದೇಸಿಯ ದಣ್ಣಾಯಕ ನನ್ನರಸ, ಪ್ರಭುಮೂಲಿಗ, ಎಂಟುಹಿಟ್ಟು ಸಮಸ್ತ ಪ್ರಜೆಗಳು ಮುಮ್ಮರಿದಂಡಗಳು ಮೊದಲಾದವರು ಆಸ್ಥಾನದ ಆಚಾರ್ಯ ಅಮ್ರಿತರಾಸಿ ಪಂಡಿತರಿಗೆ, ದೇವರ ಅಂಗ, ರಂಗಬೋಗಕ್ಕೆ ಖಂಡಸ್ಫುಟಿತ, ಜೀರ್ಣೋದ್ಧಾರಕ್ಕೆ ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಈ ದಾನವನು ತಂಬದಡಿಯ ಸೀಮೆಯಿಂ ಬೆಳಹನೂರ ಸಿಂಮೆಯಿಂ ಮೂಡಲು ಮಾಣಿಕೇಸ್ವರದ

ಕೋಲಲು ಬಿಟ್ಟ ಮತ್ತುರುಯಿಪ್ಪತ್ತು ೨೪ ಆ ಕೋಲಲು ದೇವರ ತೋಟ ಕೋಟೆಯ ದಾರಿಯಿಂ ತಂಕ ಡೋಣಿಯಿಂ ಪಡುವಲು ಮತ್ತರೊಂದು ಅ ದೇವರಿಂ ಪಡುವಲುಯವರಿಗೆ ನಿವೇಸನವೆರಡು ದಾನ ಬಿಟ್ಟಿದ್ದನ್ನು ತಿಳಿಸುತ್ತದೆ.[೨೭] ಇಲ್ಲಿ ಕೋಟೆಯ ದಾರಿಯಲ್ಲಿ ಭೂಮಿಯನ್ನು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಹೀಗಾಗಿ ಗ್ರಾಮದಲ್ಲಿ ಈ ಕಾಲಾವಧಿಯ ಕೋಟೆ ಇದ್ದಿರಬಹುದಾದ ಸಾಧ್ಯತೆಗಳಿವೆ. ಗ್ರಾಮದ ದಕ್ಷಿಣಕ್ಕೆ ೪ ಕಿ.ಮೀ. ದೂರದಲ್ಲಿ ತಾಳಿಕೋಟೆಯು ಕಂಡುಬರುತ್ತದೆ. ತಾಳಿಯ ಕೋಟೆ ಗ್ರಾಮದ ಹೆಸರು ಕಲ್ಯಾಣ ಚಾಳುಕ್ಯರ ಕಾಲಘಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಬಹುಶ ಈ ಗ್ರಾಮದ ಕಡೆಗೆ ಇರುವ ಭೂಮಿಯನ್ನು ಗುರುತಿಸುವಾಗ ಕೇವಲ ಕೋಟೆ ಎಂದು ಉಲ್ಲೇಖಿಸಿರುವ ಸಾಧ್ಯತೆಗಳಿವೆ. ಈ ಗ್ರಾಮವು ಮರಾಠರ ಆಳ್ವಿಕೆಯಲ್ಲಿ ತಾಳಿಕೋಟೆ ರಾಸ್ತೆಗಳ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಸ್ಥಳೀಯರು ಹೇಳುತ್ತಾರೆ.

ವಿಜಾಪುರ ಜಿಲ್ಲೆಯಲ್ಲಿ ವೃತ್ತಾಕಾರವಾಗಿ ಕಂಡುಬರುವ ಕೋಟೆ ಇದಾಗಿದೆ. ವಿಜಾಪುರ ಮತ್ತು ಈ ಕೋಟೆಯನ್ನು ಬಿಟ್ಟರೆ ಜಿಲ್ಲೆಯಲ್ಲಿ ಯಾವುದೇ ವೃತ್ತಾಕಾರದ ಕೋಟೆಗಳು ಕಂಡುಬರುವುದಿಲ್ಲ. ಈ ಕೋಟೆಯ ಇನ್ನೊಂದು ವಿಶೇಷ ಲಕ್ಷಣವೆಂದರೆ ಇಲ್ಲಿಯ ಬುರುಜುಗಳು ಜಿಲ್ಲೆಯಲ್ಲಿರುವ ಎಲ್ಲ ಕೋಟೆಗಳಿಗಿಂತ ಅತಿ ಎತ್ತರವಾಗಿದ್ದು ಸುಮಾರು ೬೦ ಅಡಿ ಎತ್ತರವನ್ನು ಹೊಂದಿವೆ. ಕೋಟೆಗೋಡೆಯು ವೃತ್ತಾಕಾರವಾಗಿ ೩೦೫ ಮೀ. ಸುತ್ತಳತೆಯಿದೆ. ಕೋಟೆಯ ಗೋಡೆ ಭಾಗ ಹೆಚ್ಚು ಹಾಳಾಗಿದ್ದು ಕೆಲವು ಭಾಗದಲ್ಲಿ ೧೦ರಿಂದ ೨೫ ಅಡಿ ಎತ್ತರದವರೆಗೆ ಉಳಿದುಕೊಂಡಿದ್ದು ೫ ಅಡಿ ದಪ್ಪವಾಗಿದೆ. ಅದರಲ್ಲಿ ಬಂದೂಕುಕಿಂಡಿಗಳನ್ನು ಕಾಣಬಹುದು. ಒಳಭಾಗದ ಕೋಟೆಗೋಡೆಗೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿದ್ದಾರೆ. ಅಲ್ಲದೆ ಕೋಟೆಗೋಡೆಯನ್ನೇ ತಮ್ಮ ವಾಸದ ಮನೆಯ ಗೋಡೆಯನ್ನಾಗಿ ಪರಿವರ್ತಿಸಿದ್ದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿತು. ಕೋಟೆಗೋಡೆಯ ಸುತ್ತ ಕಂದಕವಿದ್ದು ಅದರ ಸುತ್ತಲೂ ಮತ್ತೊಂದು ರಕ್ಷಣಾಗೋಡೆಯಿದೆ. ಇದು ಇಂದಿಗೂ ಬಹುತೇಕ ಉಳಿದುಕೊಂಡು ಬಂದಿದ್ದು ಕಂದಕದ ಸುತ್ತ ಇರುವ ರಕ್ಷಣಾಗೋಡೆಯು ೪೦೦ ಮೀ. ಸುತ್ತಳತೆ ಹೊಂದಿದೆ. ಕಂದಕವು ಕೆಲವು ಕಡೆ ೧೦ ಅಡಿ ಅಗಲವಾಗಿದ್ದರೆ, ಕೆಲವು ಕಡೆ ೧೫ ಅಡಿ ಅಗಲವಾಗಿದ್ದು ಕಂಡುಬರುತ್ತದೆ. ಕೊಟೆಗೋಡೆಗೆ ಹೊಂದಿಕೊಂಡು ನಾಲ್ಕು ಬುರುಜುಗಳಿದ್ದು ೫೦ರಿಂದ ೬೦ ಅಡಿ ಎತ್ತರದವರೆಗೆ ಉಳಿದುಕೊಂಡಿವೆ. ಬುರುಜುವಿನಲ್ಲಿ ಮೂರು ಹಂತದಲ್ಲಿ ಬಂದೂಕುಕಿಂಡಿಗಳಿವೆ. ಬುರುಜುವಿನ ಮೇಲ್ಭಾಗಕ್ಕೆ ಹೋಗಲು ಸುಮಾರು ೧೮ ಅಡಿ ಎತ್ತರದಲ್ಲಿ ಬಾಗಿಲಿದ್ದು, ಅದರ ಮೇಲೆ ಹೋಗಲು ವೃತ್ತಾಕಾರದ ಮೆಟ್ಟಿಲುಗಳಿವೆ. ಬುರುಜುವಿನ ಮಧ್ಯಭಾಗ ಟೊಳ್ಳಾಗಿದ್ದು ಮೇಲ್ಭಾಗದಲ್ಲಿ ಸುಮಾರು ೧೨ ಅಡಿ ಎತ್ತರ ಕೈಪಿಡಿಗೋಡೆಯಿದ್ದು ಅದರಲ್ಲಿ ಬಂದೂಕು ವೀಕ್ಷಣಾರಂಧ್ರಗಳನ್ನು ಕಾಣಬಹುದು. ಬಂದೂಕುಕಿಂಡಿಗಳು ಕೆಳ, ಮಧ್ಯ ಮತ್ತು ನೇರ ದೃಷ್ಟಿಕೋನವನ್ನಿಟ್ಟುಕೊಂಡು ನಿರ್ಮಿಸಲಾಗಿದೆ. ಕೈಪಿಡಿಗೋಡೆಯ ಮೇಲೆಯೂ ಸೈನಿಕರು ಗಾಳಿ ಮತ್ತು ಮಳೆಯಿಂದ ರಕ್ಷಣೆ ಪಡೆಯಲು ಅದರ ಮೇಲೆ ಮೇಲ್ಛಾವಣಿ ಇದ್ದಿರಬಹುದಾದ ಸಾಧ್ಯತೆಗಳಿವೆ.

ಬುರುಜುಗಳನ್ನು ಸ್ಥಳೀಯವಾಗಿ ಹುಡೆಯೆಂದು ಕರೆಯುತ್ತಾರೆ. ಕೋಟೆಯ ದ್ವಾರವು ಉತ್ತರಾಭಿಮುಖವಾಗಿದ್ದು ಇಂದು ಯಾವುದೇ ಅವಶೇಷಗಳು ಕಂಡುಬರುವುದಿಲ್ಲ. ಸದ್ಯ ಇರುವ ಆಂಜನೇಯ ಮತ್ತು ಬಸವೇಶ್ವರ ದೇವಸ್ಥಾನದ ಸ್ಥಳದಲ್ಲಿ ಕೋಟೆಯ ದ್ವಾರವಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಅದನ್ನು ಈಗ ಅಗಸಿಗಲ್ಲು ಎಂದು ಕರೆಯುತ್ತಾರೆ. ಈ ದೇವಾಲಯಗಳ ಆವರಣದಲ್ಲಿ ತೃಟಿತ ಶಾಸನ, ಗಣಪತಿ, ವಿಷ್ಣು, ಸೂರ್ಯ, ಸಪ್ತಮಾತೃಕೆಯರ ಶಿಲ್ಪಗಳಿವೆ.

ಯರಲರಘೋರಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೧೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನತೆ ಕುರಿತು ನಮಗೆ ತಿಳಿದುಬರುವುದಿಲ್ಲ. ಇಲ್ಲಿಯ ದೇಶಮುಖರ ಕಾಲಾವಧಿಯಿಂದ ಗ್ರಾಮದ ಇತಿಹಾಸ ತಿಳಿದುಬರುತ್ತದೆ. ಯರಲರಘೋರಿ ದೇಶಮುಖರ ಶಾಖೆಯು ಕೇಸಾಪುರದ ಶಾಖೆಯ ಕೆಳಗೆ ಬರುವ ದೇಸಗತಿ ಮನೆತನವಾಗಿದೆ ಎಂದು ಈಗಿನ ದೊಡ್ಡಪ್ಪ ಬಸವರಾಜ ದೇಶಮುಖರು(ವ: ೪೦) ತಿಳಿಸುತ್ತಾರೆ. ಇವರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಲಾಗುವ ಕೋಟೆಯು ಗ್ರಾಮವನ್ನು ಸುತ್ತುವರಿದಂತೆ ಕಂಡುಬರುತ್ತದೆ. ಆದರೆ ಕೋಟೆಯು ಇಂದು ಸಂಪೂರ್ಣವಾಗಿ ನಾಶ ಹೊಂದಿ ದ್ವಾರ ಮತ್ತು ಬುರುಜುಗಳು ಮಾತ್ರ ಕಂಡುಬರುತ್ತವೆ. ಉತ್ತರಾಭಿಮುಖವಾಗಿರುವ ದ್ವಾರವು ಕಮಾನಾಕೃತಿಯಲ್ಲಿದ್ದು ಪ್ರವೇಶದ ಇಕ್ಕೆಲಗಳಲ್ಲಿ ಕಾವಲುಗಾರರ ಕೊಠಡಿಗಳಿವೆ. ಆದರೆ ದ್ವಾರಬಾಗಿಲ ಮೆಲ್ಚಾವಣಿ ಬಿದ್ದು ಹಾಳಾಗಿದೆ. ದ್ವಾರಬಾಗಿಲಿನ ಪ್ರವೇಶದ ಬಲಭಾಗಕ್ಕೆ ದ್ವಾರಬಾಗಿಲಿನ ಬಲಭಾಗದ ಕೋಟೆಗೋಡೆಗೆ ಹೊಂದಿಕೊಂಡು ದೇಶಮುಖರು ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಸ್ಥಳೀಯರು ಹೇಳುವ ಪ್ರಕಾರ ಗ್ರಾಮದ ಸುತ್ತಲೂ ಕೋಟೆಯಿದ್ದು ನಾಲ್ಕೂ ಮೂಲೆಗಳಲ್ಲಿ ಬುರುಜುಗಳಿದ್ದವು ಎಂದು ಹೇಳುತ್ತಾರೆ. ಆದರೆ ಕೋಟೆಗೋಡೆಯ ಅವಶೇಷಗಳು ಅಲ್ಲಲ್ಲಿ ಕಂಡುಬರುತ್ತಿದ್ದು ಕೋಟೆಯ ವಾಯವ್ಯ ಭಾಗದಲ್ಲಿ ೧೫ ಅಡಿ ಎತ್ತರ ಮಾತ್ರ ಬುರುಜು ಉಳಿದುಕೊಂಡಿದ್ದು ಮಧ್ಯಭಾಗ ಟೊಳ್ಳಾಗಿರುವುದನ್ನು ಕಾಣಬಹುದು. ನೈರುತ್ಯ ಭಾಗದ ಬುರುಜು ಇದ್ದ ಸ್ಥಳದಲ್ಲಿ ವೃತ್ತಾಕಾರವಾಗಿ ಅದರ ಅವಶೇಷಗಳು ಕಂಡುಬರುತ್ತವೆ. ಇನ್ನುಳಿದಂತೆ ದ್ವಾರದ ಮುಂಭಾಗದಲ್ಲಿ ಆಂಜನೇಯ ದೇವಸ್ಥಾನ ಮತ್ತು ಕಮಾನಾಕೃತಿಯಲ್ಲಿ ನಿರ್ಮಿಸಿದ ಬಾಗಿಲುಳ್ಳ ಬಾವಿಯಿದೆ.

ವನಹಳ್ಳಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ಈಶಾನ್ಯಕ್ಕೆ ೩೦ ಕಿ.ಮೀ ದೂರದಲ್ಲಿದೆ. ಶಿಲಾ–ತಾಮ್ರಯುಗಕ್ಕೆ ಸೇರಿದ ನೆಲೆಯಾಗಿದ್ದು ಕಪ್ಪು ಚಿತ್ರಿತ ಕೆಂಪು ಮಡಕೆಚೂರು, ನೀಳಚಕ್ಕೆ ಉಜ್ಜಿ ನಯಗೊಳಿಸಿದ ಶಿಲೋಪಕರಣಗಳು ದೊರೆತಿವೆ.[೨೭೩] ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಸಂಗಮೇಶ್ವರ ದೇವಾಲಯ ಮತ್ತು ಒಂದು ವೀರಗಲ್ಲು ಕಂಡುಬರುತ್ತವೆ.

ಸ್ಥಳೀಯರು ಹೇಳುವಂತೆ ಮೂಲ ಹೂವಿನಹಳ್ಳಿಯನ್ನು ವನಹಳ್ಳಿ ಎಂದು ಕರೆಯಲಾಯಿತು ಎಂದು ಹೇಳುತ್ತಾರೆ. ಇನ್ನೊಂದು ಹೇಳಿಕೆಯಂತೆ ಈ ಊರಿನ ಸುತ್ತಮುತ್ತ ಹೆಚ್ಚಾಗಿ ಮರಗಳು ಬೆಳೆದುಕೊಂಡಿರುವುದರಿಂದ ಅದಕ್ಕೆ ವನವೆಂತಲೂ ಮತ್ತು ಆ ವನದಲ್ಲಿ ಹಳ್ಳ(ಬೆಳ್ಳಿ ಹಳ್ಳ) ಹರಿಯುತ್ತಿದ್ದರಿಂದ ಅದು ವನಹಳ್ಳಿಯಾಯಿತೆಂದು ಹೇಳಲಾಗುತ್ತದೆ.[೨೪]

ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ವನಹಳ್ಳಿ ತಾಳಿಕೋಟೆ ಪರಗಣಕ್ಕೆ ಒಳಪಟ್ಟಿತ್ತು. ಈ ಅವಧಿಯಲ್ಲಿ ನಿರ್ಮಾಣವಾಗಿತ್ತೆಂದು ಹೇಳುವ ಕೋಟೆಯು ಗ್ರಾಮವನ್ನು ಸುತ್ತುವರಿದಂತೆ ಕಂಡುಬರುತ್ತದೆ. ಆದರೆ ಇಂದು ಪೂರ್ವ ಮತ್ತು ಉತ್ತರಭಾಗದಲ್ಲಿ ಮಾತ್ರ ಕೋಟೆಯ ಅವಶೇಷಗಳು ಉಳಿದುಕೊಂಡಿವೆ. ಇದರ ಉತ್ತರಭಾಗದಲ್ಲಿ ಸ್ಥಳೀಯವಾಗಿ ಕರೆಯುವ ಬೆಳ್ಳಿಹಳ್ಳ ಹರಿಯುತ್ತದೆ. ಕೋಟೆಯನ್ನು ಸುಣ್ಣ ಶಿಲೆಯನ್ನು ಬಳಸಿ ನಿರ್ಮಿಸಿದ್ದಾರೆ. ಪೂರ್ವಾಭಿಮುಖವಾಗಿರುವ ದ್ವಾರಬಾಗಿಲು ೧೫ ಅಡಿ ಎತ್ತರ, ೭.೫೦ ಅಡಿ ಅಗಲವಾಗಿದೆ. ದ್ವಾರದ ಮೇಲ್ಭಾಗವನ್ನು ೧೯೫೬ರಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ. ಕೋಟೆಗೋಡೆ ನೆಲಮಟ್ಟದಲ್ಲಿ ೫ ಅಡಿ ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗಿ ೩.೫೦ ಅಡಿ ಅಗಲವಾಗಿ ಕಂಡುಬರುತ್ತದೆ. ಅದರಲ್ಲಿ ಬಂದೂಕುಕಿಂಡಿಗಳಿದ್ದು ೨ ಅಡಿ ಎತ್ತರ, ೬ ಅಂಗುಲ ಅಗಲವಾಗಿವೆ. ಕೋಟೆಯ ವಾಯವ್ಯಭಾಗದಲ್ಲಿ ಬುರುಜು ಉಳಿದುಕೊಂಡಿದ್ದು ೨೦ ಅಡಿ ಎತ್ತರ ಮಾತ್ರ ಉಳಿದುಕೊಂಡಿದೆ. ಉಳಿದ ದಿಕ್ಕುಗಳಲ್ಲಿನ ಬುರುಜುಗಳು ಸಂಪೂರ್ಣ ನಾಶ ಹೊಂದಿವೆ. ಕೋಟೆಯ ಪಶ್ಚಿಮ ಭಾಗದಲ್ಲಿ ಶಿಥಿಲಾವಸ್ಥೆಯಲ್ಲಿರುವ ದಿಡ್ಡಿಬಾಗಿಲು ಕಂಡುಬರುತ್ತದೆ. ಮುಖ್ಯದ್ವಾರದ ಎಡಭಾಗಕ್ಕೆ ಆಂಜನೇಯ ದೇವಾಲಯವಿದ್ದು ಅದರ ಹಿಂಭಾಗದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಜೀರ್ಣೋದ್ಧಾರಗೊಂಡ ಸಂಗಮೇಶ್ವರ ದೇವಾಲಯವಿದೆ. ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಕಂಡುಬರುತ್ತವೆ. ದೇವಾಲಯದ ಮುಂದಿನ ಮಂಟಪದಲ್ಲಿ ಸಪ್ತಮಾತೃಕೆಯರ ಶಿಲ್ಪ, ವೀರಗಲ್ಲುಗಳನ್ನು ಇರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಪುಷ್ಕರಿಣಿಯಿದ್ದು ಹಾಳುಬಿದ್ದಿದೆ. ವೇಗವಾಗಿ ಬೆಳೆಯುತ್ತಿರುವ ಗ್ರಾಮದಿಂದ ಅಲ್ಪಾವಧಿಯಲ್ಲಿ ಉಳಿದ ಕೋಟೆಯು ನಾಶವಾಗುವ ಹಂತದಲ್ಲಿದೆ. ಅದನ್ನು ರಕ್ಷಿಸುವ ಜವಾಬ್ದಾರಿ ಮುಖ್ಯವಾಗಿ ಗ್ರಾಮದ ಜನರಲ್ಲಿ ನಡೆಯಬೇಕು.

ಸರೂರ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೧೦ ಕಿ.ಮೀ. ದೂರದಲ್ಲಿದೆ. ಕಲ್ಯಾಣ ಚಾಳುಕ್ಯರ ಕಾಲಾವಧಿಯಿಂದಲೇ ಗ್ರಾಮದ ಪ್ರಾಚೀನತೆ ಕಂಡುಬರುತ್ತದೆ. ಕ್ರಿ.ಶ. ೧೨೧೦ರ ಶಾಸನ ಯಾದವ ಸಿಂಘಣದೇವನ ಕಾಲದ ಶಾಸನವು ಈ ಗ್ರಾಮವನ್ನು 'ಸರಲೂರ' ಎಂದು ಉಲ್ಲೇಖಿಸುತ್ತದೆ.[೨೫] ಸರಲೂರ ಮಲ್ಲಿನಾಥ ದೇವರಿಗೆ ದಾನ ಕೊಟ್ಟಿದ್ದನ್ನು ಹೇಳಿದೆ. ಕ್ರಿ.ಶ. ೧೨೧೫ರ ಸರೂರದ ಯಾದವ ಸಿಂಘಣದೇವನ ಕಾಲದ ಶಾಸನ, ತೃಟಿತ ತುಂಡುಶಾಸನವಾಗಿದ್ದು

ಚಾಳುಕ್ಯ ದೊರೆ ತ್ರೈಲೋಕ್ಯ ಮಲ್ಲದೇವನನ್ನು ಉಲ್ಲೇಖಿಸುತ್ತದೆ.[೨೭೬] ಬಹುಶಃ ಮೊದಲನೆಯ ಸೋಮೇಶ್ವರನಾಗಿದ್ದು ಅವನು ರಾಜ್ಯಭಾರ ಮಾಡುತ್ತಿದ್ದುದನ್ನು ತಿಳಿಸುವ ಭಾಗವಾಗಿದೆ.

'ಸರಊರ' ಊರು ದ್ರಾವಿಡ ಮೂಲದ 'ಇರ್' ಅಥವಾ 'ಉರ್'ದಿಂದ ಬಂದಿದ್ದು, ಅದರರ್ಥ ಇರುವಿಕೆ, ನೆಲಸುವಿಕೆ ಎಂದಾಗುತ್ತದೆ. ತರ್ದವಾಡಿ ನಾಡಿನ ಶಾಸನಸ್ಥ ಸ್ಥಳ ಸರೂರ ವಸತಿವಾಚಿ ಊರು ವಾರ್ಗಿಕವಿರುವ ಸ್ಥಳವಾಗಿದೆ.[೨೭೭] ಶಾಂತಮುತ್ಯಾನ ಮಗ ರೇವಣಸಿದೆದ್ಧೇಶ್ವರರು ತಪಸ್ಸು ಮಾಡಿ ಕರೆಮಲ್ಲಿಗೆ ಹೂವಿನ ಸರ ಬೇಕು ಅಂದಾಗ ಆಗ ಆ ಹೂವಿನ ಸರ ಪ್ರತ್ಯಕ್ಷವಾಯಿತು. ಅದು ಮುಂದೆ 'ಸರೂರು' ಆಯಿತು ಎಂದು ಸ್ಥಳೀಯರು ಹೇಳುತ್ತಾರೆ.

ಸುಮಾರು ೧೨ನೇ ಶತಮಾನಕ್ಕೆ ಸೇರಿದ ಶಾಸನಗಳು ರಾಮಲಿಂಗೇಶ್ವರ ಮತ್ತು ೧೬ ಮತ್ತು ೧೭ನೆಯ ಶತಮಾನಕ್ಕೆ ಸೇರಿದ ಈಶ್ವರ ಮತ್ತು ಸಂಗಮೇಶ್ವರ ದೇವಾಲಯಗಳು ಗ್ರಾಮದಲ್ಲಿದ್ದು ಗ್ರಾಮದ ಪ್ರಾಚೀನತೆಯನ್ನು ತಿಳಿಸಿಕೊಡುತ್ತವೆ. ಸ್ಥಳೀಯರಾದ ಪದ್ಮರಾಜ ಗುಂಡಪ್ಪ ಗೂಗಿ(ವ. ೭೦) ಅವರು ಹೇಳುವ ಪ್ರಕಾರ ಹಗರಗುಂಡ ಮತ್ತು ಸರೂರು ಎರಡು ಊರನ್ನು ಕೂಡಿ ಒಬ್ಬ ದೇಶಮುಖರು ಆಳ್ವಿಕೆ ಮಾಡುತ್ತಿದ್ದರು. ಇವರ ವಂಶಾವಳಿ ನಾಶವಾದ ನಂತರ ಕೇಸಾಪುರ ದೇಸಾಯರ ಅಧೀನಕ್ಕೆ ಈ ಗ್ರಾಮವು ಒಳಪಟ್ಟಿತ್ತು ಎಂದು ಹೇಳುತ್ತಾರೆ. ಈ ರೀತಿಯಾಗಿ ಪ್ರಾಚೀನತೆಯನ್ನು ಹೊಂದಿರುವ ಗ್ರಾಮದ ಸುತ್ತಲೂ ಕ್ರಿ.ಶ. ೧೬ ಅಥವಾ ೧೭ನೇ ಶತಮಾನದಲ್ಲಿ ಕೋಟೆಯನ್ನು ನಿರ್ಮಿಸಿದ್ದು ಕಂಡುಬರುತ್ತದೆ.

ಗ್ರಾಮದ ಸುತ್ತಲೂ ಕೋಟೆಯಿದ್ದು ಇಂದು ಕೋಟೆಯು ಶಿಥಿಲಾವಸ್ಥೆಯಲ್ಲಿದೆ. ಅಲ್ಲಲ್ಲಿ ಕೋಟೆಗೋಡೆ ಮತ್ತು ಅದರ ಅವಶೇಷಗಳು ಉಳಿದುಕೊಂಡಿವೆ. ಕೆಲ ಭಾಗದಲ್ಲಿ ಕೋಟೆಗೋಡೆಯ ತಳಪಾಯದ ಕಲ್ಲಿನ ನೇರಸಾಲು ಕಂಡುಬರುತ್ತದೆ. ಉಳಿದ ಕೋಟೆಗೋಡೆಯನ್ನು ನೋಡಿದಾಗ ಅದರ ತಳಪಾಯದಲ್ಲಿ ೫ ಅಡಿ ಅಗಲವಿದ್ದು ಮೇಲಕ್ಕೆ ಹೊದಂತೆ ಕಿರಿದಾಗುತ್ತಾ ಹೋಗಿದೆ. ಕೋಟೆಯನ್ನು ದಪ್ಪ ಒರಟಾದ ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆಯ ದ್ವಾರವು ಪೂರ್ವಾಭಿಮುಖವಾಗಿದ್ದು ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡಿಲ್ಲ. ಇದು ಕಮಾನು ಮಾದರಿಯಲ್ಲಿ ಅಲ್ಪಸ್ವಲ್ಪ ಉಳಿದುಕೊಂಡಿದೆ. ದ್ವಾರದ ಒಳಗೆ ಸೈನಿಕರ ಕೊಠಡಿಗಳಿದ್ದು ಜಗತಿ ಭಾಗ ಮಾತ್ರ ಕಂಡುಬರುತ್ತದೆ. ಇತ್ತೀಚೆಗೆ ದ್ವಾರವನ್ನು ಜೀರ್ಣೋದ್ಧಾರಗೊಳಿಸುತ್ತಿದ್ದಾರೆ. ಕೋಟೆಯನ್ನು ಶತ್ರುಗಳು ಸುಲಭವಾಗಿ ಆಕ್ರಮಿಸದಂತೆ ಕೋಟೆಯ ಸುತ್ತಲೂ ಕಂದಕ ನಿರ್ಮಾಣ ಮಾಡಿದ್ದು ಕಂಡುಬರುತ್ತದೆ. ಅದೇ ರೀತಿ ನನ್ನ ಕ್ಷೇತ್ರಕಾರ್ಯದಲ್ಲಿ ತಿಳಿದುಬರುವ ಒಂದು ಪ್ರಮುಖ ಕೋಟೆಯ ಲಕ್ಷಣವೆಂದರೆ ಮುದ್ದೇಬಿಹಾಳದ ಬಹುತೇಕ ಕೋಟೆಗಳಲ್ಲಿ ಕಂದಕದಲ್ಲಿನ ನೀರು ಹಾಳಾಗದಂತೆ ನೀರು ಬಹುದಿನ ಉಳಿದುಕೊಂಡು ಬರುವಂತೆ ಮತ್ತು ಕಂದಕದಲ್ಲಿ ಮಣ್ಣು ಬಿದ್ದು ಮುಚ್ಚದಂತೆ ಹೊರಕೋಟೆಗೋಡೆಯ ೨೦ ರಿಂದ ೪೦ ಮೀ. ಅಂತರದಲ್ಲಿ ಮತ್ತೊಂದು ರಕ್ಷಣಾಗೋಡೆಯನ್ನು ನಿರ್ಮಿಸಿದ್ದಾರೆ. ಅದೇ ರೀತಿ ಇಲ್ಲಿಯೂ ಕಂದಕದ ಸುತ್ತಲೂ ಮತ್ತೊಂದು

ರಕ್ಷಣಾಗೋಡೆಯನ್ನು ನಿರ್ಮಿಸಿದ್ದು ಇಲ್ಲಿನ ಕೊಟೆಗೋಡೆಯ ಅವಶೇಷಗಳಿಂದ ಸ್ಪಷ್ಟಪಡಿಸಬಹುದು. ಕೋಟೆಗೋಡೆಗೆ ಹೊಂದಿಕೊಂಡು ಈಶಾನ್ಯಭಾಗದ ಮೂಲೆಯಲ್ಲಿ ಮಾತ್ರ ಒಂದು ಬುರುಜುವಿನ ಅವಶೇಷಗಳು ಮಾತ್ರ ಕಂಡುಬರುತ್ತವೆ. ಇನ್ನುಳಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೋಟೆಗೋಡೆಗೆ ಹೊಂದಿಕೊಂಡಿರುವ ನಾಶ ಹೊಂದಿರುವ ಬುರುಜುವಿನ ಸ್ಥಳದಲ್ಲಿ ಹುಡೆದ ಲಕ್ಷ್ಮೀ ಎಂದು ಒಂದು ಕಲ್ಲನ್ನು ಇಟ್ಟು ಪೂಜಿಸುತ್ತಿದ್ದಾರೆ. ಒಟ್ಟು ನಾಲ್ಕು ಕಡೆ ಈ ರೀತಿಯಾಗಿ ಕಂಡುಬಂದಿತು. ಹೀಗಾಗಿ ಹುಡೆದ ಲಕ್ಷ್ಮೀ ಸ್ಥಳಗಳು ಕೋಟೆಯ ಬುರುಜುವಿನ ಸ್ಥಳಗಳೆಂದು ಖಚಿತವಾಗಿ ಹೇಳಬಹುದು.

ಇನ್ನುಳಿದಂತೆ ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸಂಬಂಧಿಸಿದ ರಾಮಲಿಂಗೇಶ್ವರ ಸಂಗಮೇಶ್ವರ ದೇವಾಲಯಗಳು, ಕ್ರಿ.ಶ. ೧೮೨೬ರಲ್ಲಿ ಭೀಕರ ಪ್ಲೇಗ್ ರೋಗ ಹರಡಿದಾಗ ಗ್ರಾಮದ ಜನರು ಪ್ಲೇಗ್ ರೋಗದ ಭಯದಿಂದ ದೂರಾಗಲು ಪಿಲೆಕ್ಕಮ್ಮನ ಗುಡಿಯನ್ನು ಕೋಟೆಯ ಉತ್ತರ ಭಾಗದಲ್ಲಿ ನಿರ್ಮಿಸಿದ್ದಾರೆ. ಊರ ಮುಂದಿರುವ ಆಂಜನೇಯ ದೇವಸ್ಥಾನದ ಆವರಣದಲ್ಲಿ ಬಲಕೈಯಲ್ಲಿ ಖಡ್ಗ ಎಡಕೈಯಲ್ಲಿ ಅಕ್ಷಯಪಾತ್ರೆಯನ್ನು ಹಿಡಿದುಕೊಂಡು ತ್ರಿಭಂಗಿಯಲ್ಲಿ ನಿಂತಿರುವ ಹೆಣ್ಣುಶಿಲ್ಪ, ಶಂಖ, ಚಕ್ರ, ಗದೆ ಮತ್ತು ಅಭಯಹಸ್ತವನ್ನು ಹೊಂದಿರುವ ವಿಷ್ಣು, ನಾಗಶಿಲ್ಪಗಳು, ತುರುಗೋಳ ವೀರಗಲ್ಲು, ನಂದಿ ಶಿಲ್ಪ, ಅಲ್ಲದೆ ಊರಿನ ಒಂದು ಕಟ್ಟೆಯ ಮೇಲೆ ಸೂರ್ಯ, ಗಣೇಶ, ವೀರಗಲ್ಲು ಶಿಲ್ಪಗಳು ಕಂಡುಬರುತ್ತವೆ. ಅಲ್ಲದೆ ಊರಿನ ಮಧ್ಯೆ ಒಂದು ಚಿಕ್ಕ ಗುಡಿಯಲ್ಲಿ ೩ ಅಡಿ ಎತ್ತರದ ಕುಳಿತ ಭಂಗಿಯಲ್ಲಿರುವ ಕಾಳಿ ಶಿಲ್ಪ ಕಂಡುಬರುತ್ತದೆ.

ಹಡಲಗೇರಿ

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ಪಶ್ಚಿಮಕ್ಕೆ ೪ ಕಿ.ಮೀ. ದೂರದಲ್ಲಿದೆ. ಮುದ್ದೇಬಿಹಾಳದ ಊರ ಮಧ್ಯದ ಈಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೨೮೧ರ ಯಾದವ ರಾಮಚಂದ್ರದೇವನ ಕಾಲದ ಶಾಸನದಲ್ಲಿ ಈ ಗ್ರಾಮವನ್ನು 'ಹಾಡಲಿಗೆಜ್' ಎಂದು ಉಲ್ಲೇಖಿಸುತ್ತದೆ.[೨೮] ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯ ವಾಸ್ತುಶಿಲ್ಪವನ್ನು ಒಳಗೊಂಡ ಸಂಗಮೇಶ್ವರ ದೇವಾಲಯ ಗ್ರಾಮದ ಮಧ್ಯದಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು ಇಂದು ಜೀರ್ಣೋದ್ಧಾರಗೊಂಡಿದೆ. ಹೀಗಾಗಿ ಕಲ್ಯಾಣ ಚಾಳುಕ್ಯರ ಅವಧಿಯಿಂದಲೇ ಈ ಗ್ರಾಮದ ಪ್ರಾಚೀನತೆ ತಿಳಿದುಬರುತ್ತದೆ.

ಬಸರಕೋಡದ ನಾಡಗೌಡರ ಎರಡನೇ ಶಾಖೆ ಹಡಲಗೇರಿಗೆ ಬಂದು ನೆಲೆಸಿದರು ಎಂದು ಸ್ಥಳೀಯರು ಹೇಳುತ್ತಾರೆ. ಇವರ ವಂಶಸ್ಥರು ಗ್ರಾಮದಲ್ಲಿ ವಾಸವಿದ್ದಾರೆ. ಇವರ ಅಧಿಕಾರದಲ್ಲಿ ಏಳು ವತನ ಹಳ್ಳಿಗಳಿದ್ದವು. ಅವು ಗೆದ್ದಲಮರಿ, ಹರಿಂದ್ರಾಳ, ಮದ್ನಾಳ, ಕಾಮಲದಿನ್ನಿ, ಗಂಗೂರ, ಹಡಲಗೇರಿ, ನಾಗರಾಳ ಎಂದು ಹೇಳುತ್ತಾರೆ.

ಗ್ರಾಮದ ಸುತ್ತಲೂ ಇರುವ ಕೋಟೆಯು ಸುಮಾರು ೫೪೦ ಮೀ. ಸುತ್ತಳತೆಯನ್ನು ಹೊಂದಿದೆ. ಇದರ ನಿರ್ಮಾಣ ಮತ್ತು ವಾಸ್ತುಶೈಲಿಯ ಲಕ್ಷಣಗಳನ್ನು ಗಮನಿಸಿದಾಗ ಇದು

ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ನಿರ್ಮಾಣವಾಗಿರಬಹುದು ಎಂದು ಹೇಳಬಹುದು. ಕೋಟೆಯ ನಿರ್ಮಾಣ ಕುರಿತು ನಮಗೆ ಯಾವುದೇ ಲಿಖಿತ ಆಕರಗಳು ಲಭ್ಯವಾಗಿಲ್ಲ.

ಗ್ರಾಮವನ್ನು ಸುತ್ತುವರಿದಿರುವ ಕೋಟೆಯು ಚೌಕಾಕಾರವಾಗಿ ಕಂಡುಬರುತ್ತದೆ. ೬ ಅಡಿ ದಪ್ಪದ ಕೋಟೆಗೋಡೆಯನ್ನು ಮಧ್ಯಮಗಾತ್ರದ ದಪ್ಪದ ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆಗೋಡೆಯು ಪೂರ್ಣ ಪ್ರಮಾಣದಲ್ಲಿ ಉಳಿದುಕೊಳ್ಳದೆ ಗ್ರಾಮದ ಸುತ್ತಲೂ ೫ ರಿಂದ ೮ ಅಡಿ ಎತ್ತರದವರೆಗೆ ಕಂಡುಬರುತ್ತದೆ. ಕೆಲವು ಭಾಗಗಳಲ್ಲಿ ಅವನತಿ ಹೊಂದಿದ್ದು ಕೋಟೆಯ ತಳಹಾಸು ಮಾತ್ರ ಗೋಚರಿಸುತ್ತದೆ. ಈ ಕೋಟೆಯನ್ನು ಸುತ್ತುವರಿದಂತೆ ೨೦ ಅಡಿ ಅಗಲವಾಗಿರುವ ಕಂದಕ ಇದ್ದಿರಬಹುದಾದ ಲಕ್ಷಣಗಳಿದ್ದು ಇಂದು ಮುಚ್ಚಿಹೋಗಿದೆ. ಈ ಕಂದಕವನ್ನು ಸುತ್ತುವರಿದಂತೆ ಮತ್ತೊಂದು ೫ ಅಡಿ ದಪ್ಪವಾದ ಹೊರಗೋಡೆ ಇದ್ದು ೬೯೭ ಮೀ. ಸುತ್ತಳತೆಯನ್ನು ಹೊಂದಿದೆ. ಇದನ್ನು ಕಂದಕದ ನೀರನ್ನು ತಡೆಹಿಡಿಯಲು ಸುತ್ತಲೂ ನಿರ್ಮಿಸಿದ್ದು ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ದ್ವಾರವು ಕಮಾನಾಕೃತಿಯಲ್ಲಿದ್ದು ೧೦ ಅಡಿ ಅಗಲ, ೧೧.೫೦ ಅಡಿ ಎತ್ತರವನ್ನು ಹೊಂದಿದೆ. ದ್ವಾರದ ಮೇಲ್ಭಾಗದಲ್ಲಿ ತೆನೆಗಳು ಕಂಡುಬರುತ್ತವೆ. ಪ್ರವೇಶದ ಇಕ್ಕೆಲಗಳಲ್ಲಿ ಕಾವಲುಗಾರರ ೧೩.೫೦ ಅಡಿ ಅಗಲವಾದ ಅಂಕಣಗಳಿವೆ. ದ್ವಾರಬಾಗಿಲನ್ನು ಸಿಮೆಂಟನ್ನು ಲೇಪಿಸಿ ಜೀರ್ಣೋದ್ಧಾರಗೊಳಿಸಿದ್ದು ದ್ವಾರದ ಮೇಲ್ಭಾಗದಲ್ಲಿ ಪಂಚಾಯಿತಿ ಕೋಣೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಪಶ್ಚಿಮಭಾಗದ ಗೋಡೆಯು ನೇರವಾಗಿರದೆ ವಕ್ರವಾಗಿ ಕಂಡುಬರುತ್ತದೆ. ಕೋಟೆಗೋಡೆಯ ಭದ್ರತೆ ಮತ್ತು ಶತ್ರುಗಳ ಆಕ್ರಮಣವನ್ನು ತಡೆಗಟ್ಟಲು ಕೋಟೆಗೋಡೆಗೆ ಹೊಂದಿಕೊಂಡು ಒಟ್ಟು ಏಳು ಬುರುಜುಗಳು ಕಂಡುಬರುತ್ತವೆ. ದ್ವಾರದ ಬಲಭಾಗದಿಂದ ನಾಲ್ಕು ಬುರುಜುಗಳು ೮ ಅಡಿಯಿಂದ ೨೫ ಅಡಿ ಎತ್ತರದವರೆಗೆ ಉಳಿದುಕೊಂಡುಬಂದಿರುವುದನ್ನು ಕಾಣುತ್ತೇವೆ. ಬುರುಜುವಿನ ಮೇಲ್ಭಾಗಕ್ಕೆ ಹೋಗಲು ಚೌಕಾಕಾರದ ಬಾಗಿಲುಗಳಿದ್ದದ್ದು ಎರಡು ಬುರುಜುಗಳಲ್ಲಿ ಮಾತ್ರ ಕಾಣಬಹುದು. ವಾಯವ್ಯಭಾಗದ ಬುರುಜು ಸಂಪೂರ್ಣ ಹಾಳಾಗಿದ್ದು ಸುತ್ತುವರಿದ ತಳಪಾಯ ಮಾತ್ರ ಕಂಡುಬರುತ್ತದೆ. ಕೋಟೆಗೋಡೆ ಬಹುತೇಕ ನಾಶವಾಗಿರುವುದರಿಂದ ದ್ವಾರ ಮತ್ತು ಬುರುಜುಗಳಲ್ಲಿ ಬಂದೂಕುಕಿಂಡಿಗಳನ್ನು ಕಾಣುತ್ತೇವೆ. ಕೋಟೆಯ ದ್ವಾರದ ಮುಂಭಾಗದಲ್ಲಿ ಆಂಜನೇಯ ದೇವಸ್ಥಾನವಿದ್ದು ಪುನರ್ ನಿರ್ಮಾಣ ಮಾಡುತ್ತಿದ್ದಾರೆ. ಸ್ಥಳೀಯರು ಮನೆಗಳನ್ನು ನಿರ್ಮಿಸಲು ಕೋಟೆಗೋಡೆಯ ಕಲ್ಲು ಮತ್ತು ಮಣ್ಣನ್ನು ಬಳಸಿಕೊಳ್ಳುತ್ತಿದ್ದದ್ದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿತು. ಇದೇ ರೀತಿ ಮುಂದುವರಿದರೆ ಕೋಟೆ ಇದ್ದಿರಬಹುದಾದ ಕುರುಹುಗಳು ಕೂಡ ನಮಗೆ ಕಾಣಸಿಗುವುದಿಲ್ಲ.

ಹಿರೇಮುರಾಳ

ಹಿರೇಮುರಾಳ ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೧೦ ಕಿ.ಮೀ. ದೂರದಲ್ಲಿದೆ. ಕ್ರಿ.ಶ. ೧೬ನೆಯ ಶತಮಾನಕ್ಕೆ ಸೇರಿದ ಎರಡು ಶಾಸನಗಳು ಗ್ರಾಮದಲ್ಲಿವೆ. ಒಂದು ಶಾಸನ

ಅಪೂರ್ಣವಾಗಿದ್ದು ಸಂಗಮನಾಥದೇವ ಎಂಬ ಉಲ್ಲೇಖವನ್ನು ಬಿಟ್ಟರೆ ಉಳಿದ ವಿವರಗಳು ಲಭ್ಯವಿಲ್ಲ.[೨೯] ಇನ್ನೊಂದು ತೃಟಿತ ಶಾಸನ ಭೋಜನಾಯಕ ಎಂಬುವವನು ಸಂಗಮನಾಥ ದೇವರಿಗೆ ಭೂಮಿ ಹಾಗೂ ಮನೆಯ ನಿವೇಶನವನ್ನು ದಾನವಾಗಿ ಕೊಟ್ಟ ವಿವರವಿದೆ.[೩೦] ಹೀಗಾಗಿ ಗ್ರಾಮದ ಪ್ರಾಚೀನತೆ ಲಭ್ಯ ಆಕರಗಳ ಹಿನ್ನೆಲೆಯಲ್ಲಿ ಕ್ರಿ.ಶ. ೧೬ನೆಯ ಶತಮಾನದಿಂದಲೇ ಪ್ರಾರಂಭವಾಗುತ್ತದೆ.

ವಿಜಾಪುರ ಜಿಲ್ಲೆಯಲ್ಲಿ ದೇಸಾಯಿ, ದೇಶಮುಖ ಹಾಗೂ ನಾಡಗೌಡ ಎಂಬ ಪದಗಳ ಮಧ್ಯೆ ಜಹಗೀರದಾರ ಎಂಬ ಪದವು ದೇಶಗತಿಯ ಪರ್ಯಾಯಪದವಾಗಿ ಪ್ರಯೋಗವಾಗಿದೆ. ಈ ಹಿರೇಮುರಾಳ ಜಹಗೀರದಾರರನ್ನು ಸಹ ಗ್ರಾಮ್ಯವಾಗಿ ಧಣೇರು, ಧಣಿಗಳು ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದ ನಂತರ ಸುರಪುರದ ನಾಯಕರು ವಿಜಾಪುರ ಆದಿಲ್‌ಶಾಹಿಗಳ ಮಾಂಡಳಿಕರಾಗಿ ಮಾರ್ಪಟ್ಟರು. ಈ ನಾಯಕರ ಅಧೀನದಲ್ಲಿ ಹಲವಾರು ಜಹಗೀರದಾರರು, ದೇಶಪಾಂಡೆಗಳು, ಗೌಡ, ಪಾಟೀಲರ ಜೊತೆಗೆ ದೇಸಾಯಿಗಳು ಚಿಕ್ಕಮಟ್ಟ ಜಮೀನುದಾರಿಕೆಯನ್ನು ಹೊಂದಿದವರಾಗಿದ್ದರು. ಇವರ ರಾಜಾಶ್ರಯದಲ್ಲಿ ಹೊರಹೊಮ್ಮಿದ ಹಲವಾರು ವತನದಾರ ಮನೆತನಗಳಲ್ಲಿ ವಿಜಾಪುರ ಜಿಲ್ಲೆಯ ಮುರಾಳ ಗ್ರಾಮದ ಜಹಗೀರದಾರರು ಒಬ್ಬರಾಗಿದ್ದಾರೆ.[೩೧]

ಮುರಾಳ ಗ್ರಾಮದ ಜಹಗೀರದಾರಿಕೆಯ ಮನೆತನದ ಮೂಲ ಪುರುಷರಾದ ರಾಮೋಜಿರಾವ್ ನರಸಿಂಗರಾವ್ ಪಂತಜಿಯವರು ಈ ಗ್ರಾಮದ ಜಹಗೀರದಾರಿಕೆಯನ್ನು ಸುರಪುರದ ನಾಯಕರಿಂದ ಉಂಬಳಿಯಾಗಿ ಪಡೆದರು. ಇವರು ಸುರಪುರದ ಆಸ್ಥಾನದಲ್ಲಿ ಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರ ವಿದ್ವತ್ತಿಗೆ ಮಾರುಹೋದ ದೊರೆ ವೆಂಕಟಪ್ಪನು ಮಂತ್ರಿ ರಾಮೋಜಿ ಪಂತರಿಗೆ ಮುರಾಳ ಹಾಗೂ ಅದರ ಸುತ್ತಲಿನ ಗ್ರಾಮಗಳ ಜಹಗೀರದಾರಿಕೆಯನ್ನು ನೀಡಿ ಗೌರವಿಸಿದನು. ಈ ಜಹಗೀರದಾರ ಮನೆತನದಲ್ಲಿ ಅತ್ಯಂತ ಪ್ರಮುಖ ಮತ್ತು ವರ್ಣರಂಜಿತ ವ್ಯಕ್ತಿಯೆಂದರೆ ಒಂದನೆಯ ನರಸಿಂಗರಾವ್ ಆಗಿದ್ದಾರೆ. ಸದ್ಯ ಮುರಾಳದಲ್ಲಿರುವ ಭವ್ಯವಾದ ವಾಡೆ, ಬಲಾಢ್ಯವಾದ ಹುಡೆ ಹಾಗೂ ದೇವಸ್ಥಾನಗಳನ್ನು ಈ ಒಂದನೆಯ ನರಸಿಂಗರಾವರೇ ಕಟ್ಟಿಸಿದರೆಂದು ಪ್ರತೀತಿ.[೩೨] ಇವರ ಅಧಿಕಾರಾವಧಿಯಲ್ಲಿ ತಮ್ಮ ಹಿರಿಯರಿಂದ ದೊರೆತ ವತನದಾರಿಕೆಯನ್ನು ಉಳಿಸಿ, ಬೆಳೆಸಿ, ಬಲಪಡಿಸುವುದರೊಂದಿಗೆ ಜಿಲ್ಲೆಯ ಬಲಾಢ್ಯ ಜಹಗೀರದಾರರಾಗಿ ಹೊರಹೊಮ್ಮಿದರು. ಇವರ ವಂಶಸ್ಥರು ಈಗಲೂ ಗ್ರಾಮದ ಮಧ್ಯೆಯಿರುವ ಕೋಟೆಯೊಳಗಿನ ವಾಡೆಯೊಳಗೆ ವಾಸವಿದ್ದಾರೆ.

ಗ್ರಾಮದಲ್ಲಿ ಸುತ್ತಲೂ ಎರಡು ಸುತ್ತಿನ ಕೋಟೆಯಿದ್ದು ಗ್ರಾಮವನ್ನು ಸುತ್ತುವರಿದಿರುವ ಕೋಟೆಯು ಆಯತಾಕಾರದಲ್ಲಿ ಕಂಡುಬರುತ್ತದೆ. ಆಗ್ನೇಯ ಭಾಗದಲ್ಲಿ ಕೋಟೆಯು 'L' ಆಕಾರದಲ್ಲಿ ಹಿಂಚಾಚಿಕೊಂಡಿದ್ದು ಕಂಡುಬರುತ್ತದೆ. ಒಟ್ಟು ಕೋಟೆಗೋಡೆಯು ೫೯೨ ಮೀ. ಸುತ್ತಳತೆಯನ್ನು

ಹೊಂದಿದೆ. ಗೋಡೆಯ ದಪ್ಪ ೫ ಅಡಿಯಾಗಿದ್ದು ಕೆಳಭಾಗದಲ್ಲಿ ದಪ್ಪವಾದ ಕಟೆದ ಮತ್ತು ಗುಂಡುಕಲ್ಲುಗಳನ್ನು ಮೇಲ್ಭಾಗದಲ್ಲಿ ಚಿಕ್ಕದಾದ ಕಟೆದ ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆಗೋಡೆಯು ಪೂರ್ಣ ಪ್ರಮಾಣದಲ್ಲಿ ಇದ್ದದ್ದು ಕಂಡುಬರುತ್ತದೆ. ಆದರೆ ಉತ್ತರ ಭಾಗದಲ್ಲಿ ಹಾಳಾಗಿದ್ದು ಉಳಿದ ೩ ರಿಂದ ೪ ಅಡಿ ಎತ್ತರದ ಗೋಡೆಯನ್ನು ಬಳಸಿಕೊಂಡು ಸ್ಥಳೀಯರು ಅದರ ಮೇಲೆ ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಪೂರ್ವ, ದಕ್ಷಿಣಭಾಗದ ಕೋಟೆಗೋಡೆ ೫ ಅಡಿ ದಪ್ಪವಾಗಿದ್ದು ಮೇಲ್ಭಾಗದಲ್ಲಿ ೪ ಅಡಿ ಅಗಲವಾದ ಅಟ್ಟಾಲಕ, ೫ ಅಡಿ ಎತ್ತರದ ಕೈಪಿಡಿಗೋಡೆ ಇದೆ. ಕೈಪಿಡಿಗೋಡೆಯಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳನ್ನು ಕಾಣಬಹುದು. ಶತ್ರುಗಳ ಆಕ್ರಮಣದ ದೃಷ್ಟಿಕೋನವನ್ನಿಟ್ಟುಕೊಂಡು ಒಂದು ಬಂದೂಕುಕಿಂಡಿಯಿಂದ ಮೂರು ಕಡೆ ಗುರಿ ಇಡುವಂತೆ ೪೫೦, ೯೦೦ ಕೋನದಲ್ಲಿ ಕಿಂಡಿಗಳನ್ನು ಬಿಟ್ಟಿದ್ದಾರೆ. ಕೋಟೆಗೋಡೆಯು ಅಲಂಕಾರಿಕವಾಗಿ ಕಾಣಲು ಕೈಪಿಡಿಗೋಡೆಯಲ್ಲಿಯೇ ತೆನೆಗಳ ಅಲಂಕಾರ ಮಾಡಲಾಗಿದೆ. ಆದರೆ ತೆನೆಗಳು ಬಿಡಿಬಿಡಿಯಾಗಿ ಕಂಡುಬರುವುದಿಲ್ಲ. ಕೋಟೆಯ ದ್ವಾರವು ನಾಶ ಹೊಂದಿದ್ದು ದ್ವಾರ ಇದ್ದ ಸ್ಥಳ ಮಾತ್ರ ಗುರುತಿಸಬಹುದು. ದ್ವಾರದ ಹತ್ತಿರವೇ ಕೋಟೆಯೊಳಗೆ ಆಂಜನೇಯ ದೇವಸ್ಥಾನವಿದೆ. ಕೋಟೆಗೋಡೆಗೆ ಹೊಂದಿಕೊಂಡು ಏಳು ಬುರುಜುಗಳಿದ್ದು ೫೫ ರಿಂದ ೬೦ ಅಡಿಯವರೆಗೆ ಸುತ್ತಳತೆಯನ್ನು ಹೊಂದಿವೆ. ಕೆಲವು ಬುರುಜುಗಳಲ್ಲಿ ಕೈಪಿಡಿಗೋಡೆಯಲ್ಲಿಯೇ ಅಲಂಕಾರಕ್ಕಾಗಿ ತೆನೆಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಆದರೆ ಇವು ಪ್ರತ್ಯೇಕವಾಗಿಲ್ಲ. ಕೆಲವು ಬುರುಜುಗಳ ಮೇಲ್ಭಾಗ ಹಾಳಾಗಿದ್ದು ಬಂದೂಕು ಮತ್ತು ವೀಕ್ಷಣಾಕಿಂಡಿಗಳು ಮಾತ್ರ ಕಂಡುಬರುತ್ತವೆ.

ಗ್ರಾಮದ ಸುತ್ತ ಇರುವ ಕೋಟೆಗೋಡೆಗೆ ಹೊಂದಿಕೊಂಡಂತೆ ಕಂದಕವಿದ್ದು ೩೦ ಅಡಿ ಅಗಲವಾಗಿದೆ. ಕಂದಕದಲ್ಲಿ ಮಣ್ಣು ಬೀಳದಂತೆ ಮತ್ತು ನೀರನ್ನು ಹಿಡಿದಿಡಲು ಕಂದಕದ ಸುತ್ತಲೂ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯ ಇನ್ನೊಂದು ವಿಶೇಷ ಲಕ್ಷಣವೆಂದರೆ ಕೋಟೆಗೋಡೆಯು ಭದ್ರವಾಗಿ ಬಾಳಿಕೆ ಬರುವಂತೆ ಮತ್ತು ಕಂದಕ ನೀರಿನಿಂದ ಕೋಟೆಗೋಡೆಯು ಕುಸಿದು ಬೀಳದಂತೆ ಕೋಟೆಯ ಸುತ್ತಲೂ ಮಣ್ಣನ್ನು ತುಂಬಿ ಇಳಿಜಾರಾಗಿ ಮಾಡಲಾಗಿದೆ. ಇದಕ್ಕೆ ಇಳಿವೋರೆ ಎಂದು ಕರೆಯುವರು. ಕಂದಕದ ಸುತ್ತಲೂ ಇರುವ ರಕ್ಷಣಾಗೋಡೆಯ ಹಿಂಬದಿಯಲ್ಲಿ ಇಳಿಜಾರಾಗಿ ಮಣ್ಣನ್ನು ತುಂಬಿದ್ದು ಇದು ಕೂಡ ಇಳಿವೋರೆಯ ಹಾಗೆ ಕಂಡುಬರುತ್ತದೆ.

ಕೋಟೆಯೊಳಗೆ ನೈರುತ್ಯ ಭಾಗದಲ್ಲಿ ಜಾಗೀರದಾರರ ವಾಡೆ ಕಂಡುಬರುತ್ತದೆ. ವಾಡೆಯ ಸುತ್ತಲೂ ಇರುವ ಕೋಟೆಗೋಡೆಯನ್ನು ನಾಲ್ಕು ದಿಕ್ಕುಗಳಲ್ಲಿ ನಿರ್ಮಿಸದೆ ಪೂರ್ವ ಮತ್ತು ಉತ್ತರಭಾಗದಲ್ಲಿ ಮಾತ್ರ ಕಟ್ಟಿ ಹೊರಕೋಟೆಗೋಡೆಗೆ ಸಂಧಿಸುವಂತೆ ನಿರ್ಮಿಸಲಾಗಿದೆ. ಅದರ ಮಧ್ಯೆ ವಾಡೆ ಕಂಡುಬರುತ್ತದೆ. ಈ ಕೋಟೆಗೋಡೆ ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡಿದ್ದು ಕೋಟೆಗೋಡೆಯ ಮೇಲೆ ಬಂದೂಕು ಕಿಂಡಿಗಳು, ಕೈಪಿಡಿಗೋಡೆ, ಅದರಲ್ಲಿ ಅಲಂಕಾರಿಕವಾಗಿ ತೆನೆ ಮತ್ತು ಕೋಟೆಯ ಒಳಭಾಗದಲ್ಲಿ ಅಟ್ಟಾಲಕ ಕಂಡುಬರುತ್ತವೆ. ಕೋಟೆಯೊಳಗಿನ ವಾಡೆಯನ್ನು

ತಲುಪಲು ಎರಡು ಪ್ರವೇಶದ್ವಾರಗಳಿವೆ. ವಾಡೆಯ ಸುತ್ತ ಇರುವ ಕೋಟೆಯ ಮೊದಲನೇ ದ್ವಾರವು ಉತ್ತರಾಭಿಮುಖವಾಗಿದ್ದು, ಚೌಕಾಕಾರದ ಬಾಗಿಲನ್ನು ಹೊಂದಿದೆ. ಇದರ ಮೇಲೆ ಕಮಾನಾಕೃತಿಯಲ್ಲಿ ಅಲಂಕಾರ ಮಾಡಿದ್ದಾರೆ. ಈ ದ್ವಾರ ಶಿಥಿಲಾವಸ್ಥೆಯಲ್ಲಿದ್ದು ೮.೨೫ ಅಡಿ ಅಗಲ, ೧೧ ಅಡಿ ಎತ್ತರವಾಗಿದೆ. ಈ ದ್ವಾರವನ್ನು ಪ್ರವೇಶಿಸಿದ ಮೇಲೆ ಬಲಭಾಗಕ್ಕೆ ೧೮ ಅಡಿ ಎತ್ತರದ ಬುರುಜು ಕಂಡುಬರುತ್ತದೆ. ಅಲ್ಲದೆ ೧೪X೧೦ ಮೀ. ಉದ್ದಗಲದ ಪ್ರಾಂಗಣವಿದ್ದು ಸುತ್ತ ರಕ್ಷಣಾಗೋಡೆ ನಿರ್ಮಿಸಲಾಗಿದೆ. ನಂತರ ಪೂರ್ವಾಭಿಮುಖವಾದ ಪ್ರವೇಶದ್ವಾರವನ್ನು ಪ್ರವೇಶಿಸಿದ ಮೇಲೆ ವಾಡೆ ಕಂಡುಬರುತ್ತದೆ. ಈ ಪ್ರವೇಶದ್ವಾರವು ನಾಶವಾಗಿದ್ದು ಅರ್ಧಭಾಗ ಮಾತ್ರ ಉಳಿದುಕೊಂಡಿದೆ. ವಾಡೆಯೊಳಗೆ ಇಕ್ಕೆಲಗಳಲ್ಲಿ ಮೊಗಸಾಲೆಗಳು, ಪಕ್ಕದಲ್ಲಿ ಬೃಹದಾಕಾರದ ದನದ ಕೊಟ್ಟಿಗೆ, ಆಧುನಿಕವಾಗಿ ನಿರ್ಮಿಸಿದ ಮನೆಯಿದೆ. ವಾಡೆಯೊಳಗೆ ಪ್ರತ್ಯೇಕ ಕಮಾನಾಕೃತಿಯ ದ್ವಾರವುಳ್ಳ ನೀರಿನ ಬಾವಿಯೊಂದು ಕಂಡುಬರುತ್ತದೆ.

ಒಟ್ಟಾರೆಯಾಗಿ ಗ್ರಾಮದ ಸುತ್ತ ಇರುವ ಕೋಟೆಗೋಡೆಯು ಜೀರ್ಣ ಹಂತದಲ್ಲಿದೆ. ವಾಡೆಯ ಸುತ್ತ ಇರುವ ಕೋಟೆ ಮಾತ್ರ ಪೂರ್ಣ ಪ್ರಮಾಣದಲ್ಲಿ ಕಂಡುಬಂದರೂ ಅದು ಕೂಡ ಕ್ರಮೇಣ ನಾಶವಾಗುತ್ತಿದೆ. ಹೀಗಾಗಿ ಕೋಟೆಯ ರಕ್ಷಣೆ ಅವಶ್ಯಕವಾಗಿದೆ. ಕೋಟೆಯೊಳಗೆ ಪಾರ್ವತಿಗುಡಿ, ಎತ್ತರ ಜಗತಿಯ ಮೇಲೆ ನಿರ್ಮಾಣವಾದ ೧೬ನೇ ಶತಮಾನ ಕಾಲಘಟ್ಟದ ದಾವಲಮಲಿಕ್ ದರ್ಗಾ ಇದೆ.

ಹಿರೂರು

ಇದು ತಾಲೂಕುಕೇಂದ್ರವಾದ ಮುದ್ದೇಬಿಹಾಳದಿಂದ ೧೯ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿ ಸೂಕ್ಷ್ಮಶಿಲಾಯುಗ ಮತ್ತು ಶಿಲಾತಾಮ್ರಯುಗಕ್ಕೆ ಸಂಬಂಧಿಸಿದ ಕಂದುವರ್ಣದ ಬ್ರಹ್ಮಗಿರಿ ಮಾದರಿಯ ಮಡಕೆಭಾಗ, ಉಜ್ಜಿ ನಯಗೊಳಿಸಿದ ಶಿಲೋಪಕರಣಗಳು ದೊರೆತಿವೆ.[೨೮೩] ಕ್ರಿ.ಶ. ೧೨ನೆಯ ಶತಮಾನದ ಶಿವಶರಣೆ ತಿಲಕವ್ವ ಇದೇ ಗ್ರಾಮದವಳು. ಜೈನ ಮತಸ್ಥಳಾಗಿದ್ದ ಇವಳು ಶರಣಧರ್ಮವನ್ನು ಸ್ವೀಕರಿಸುತ್ತಾಳೆ. ಕಲ್ಯಾಣ ಚಾಳುಕ್ಯರ ಕಾಲದ ಭೋಗೇಶ್ವರ ಮತ್ತು ಶಂಕರಲಿಂಗ ದೇವಾಲಯಗಳು ಇವೆ.[೨೮೪]

ಗ್ರಾಮದಲ್ಲಿರುವ ಕ್ರಿ.ಶ. ೧೧೮೯ರ ಶಾಸನ ತೃಟಿತವಾಗಿದ್ದು ಯಾದವ ನಾರಾಯಣನ ಕಾಲಕ್ಕೆ ಸಂಬಂಧಿಸಿದುದಾಗಿದೆ. ಸಿವದೇವ ಪಂಡಿತ ಹಾಗೂ ಮನ್ನೆಯ ಈಶ್ವರದೇವನನ್ನು ಉಲ್ಲೇಖಿಸುತ್ತದೆ.[೨೮೫] ಲಿಪಿಯ ದೃಷ್ಟಿಯಿಂದ ಕ್ರಿ.ಶ. ೧೨ನೇ ಶತಮಾನದ ಇನ್ನೊಂದು ತೃಟಿತ ಶಾಸನವಿದ್ದು[೨೮೬] ಯಾವುದೇ ವಿಷಯ ತಿಳಿದುಬರುವುದಿಲ್ಲ. ಕ್ರಿ.ಶ. ಸುಮಾರು ೧೮ನೆಯ ಶತಮಾನಕ್ಕೆ ಸೇರಿದ ಮತ್ತೊಂದು ಶಾಸನ ಶಂಕರದೇವರಿಗೆ ಗುಡಿಯ ದಕ್ಷಿಣಕ್ಕಿರುವ ಭೂಮಿಯನ್ನು ದಾನವಾಗಿ ಕೊಟ್ಟಿದ್ದನ್ನು, ಇದನ್ನು ಪ್ರಭುಗಳು ಪೂಜಾದಿಗಳನ್ನು ನಡೆಸುವರು ಎಂದಿದೆ.[೨೮೭] ಪ್ರಾಗಿತಿಹಾಸ

ಕಾಲದಿಂದಲೂ ಗುರುತಿಸಿಕೊಳ್ಳುವ ಗ್ರಾಮವು ಚಾಲುಕ್ಯರ ಅವಧಿಯಿಂದ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತು ಎಂದು ಹೇಳಬಹುದು.

ಗ್ರಾಮವನ್ನು ಸುತ್ತುವರಿದಂತೆ ಕೋಟೆಯಿದ್ದದ್ದು ಕಂಡುಬರುತ್ತದೆ. ಆದರೆ ಇಂದು ಕೋಟೆಗೋಡೆಯ ಯಾವುದೇ ಅವಶೇಷಗಳು ಉಳಿದುಕೊಳ್ಳದೆ ಸಂಪೂರ್ಣವಾಗಿ ನಾಶ ಹೊಂದಿವೆ. ಆದರೆ ಇದಕ್ಕೆ ಸಂಬಂಧಿಸಿದ ಐದು ಬುರುಜುಗಳು ಗ್ರಾಮದ ಸುತ್ತಲೂ ಕಂಡುಬರುತ್ತವೆ. ಬುರುಜುಗಳನ್ನು ಸ್ಥಳೀಯವಾಗಿ ಸಿಗುವಸುಣ್ಣ ಶಿಲೆ(ಲೈಮ್‌ಸ್ಟೋನ್)ಯ ತೆಳುವಾದ ಸೆದಿಕಲ್ಲನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಜೊತೆಗೆ ಮುಖ್ಯದ್ವಾರ ಪೂರ್ವಾಭಿಮುಖವಾಗಿದ್ದು, ಈ ಸ್ಥಳದಲ್ಲಿ ದ್ವಾರದ ಒಂದು ಬದಿಯ ಚೌಕಟ್ಟು ಮಾತ್ರ ಉಳಿದುಕೊಂಡಿದೆ. ಇದರಲ್ಲಿ ಯಾದವ ನಾರಾಯಣ ಎಂದು ಉಲ್ಲೇಖಿಸುವ ತೃಟಿತ ಶಾಸನದ ಕಲ್ಲನ್ನು ಸೇರಿಸಿ ನಿರ್ಮಿಸಲಾಗಿದೆ. ಈ ಸ್ಥಳವನ್ನು ಊರ ಅಗಸೆಬಾಗಿಲು ಎಂದು ಸ್ಥಳೀಯರು ಕರೆಯುತ್ತಾರೆ. ಉಳಿದಂತೆ ಬುರುಜುಗಳನ್ನು ಹೊರತುಪಡಿಸಿ ಕೋಟೆಯ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಮುಖ್ಯದ್ವಾರ ಇರುವ ಸ್ಥಳದಲ್ಲಿ ಇದಕ್ಕೆ ಹೊಂದಿಕೊಂಡಂತೆ ಬುರುಜಿದ್ದು ಸುಮಾರು ೪೫ ಅಡಿ ಎತ್ತರವಾಗಿದೆ. ಇದರಲ್ಲಿ ಮೂರು ಹಂತದ ಬಂದೂಕು ಕಿಂಡಿಗಳನ್ನು ಕಾಣುತ್ತೇವೆ. ಮಧ್ಯಭಾಗ, ಪೂರ್ತಿ ಮೇಲ್ಮಟ್ಟದ ಭಾಗ, ಇವೆರಡರ ಮಧ್ಯಭಾಗ ಈ ರೀತಿ ಒಟ್ಟು ಮೂರು ಹಂತದಲ್ಲಿ ಕಾಣುತ್ತೇವೆ. ೨೦ ಅಡಿ ಎತ್ತರದ ಮೇಲೆ ಬುರುಜುವಿನ ಮೇಲೆ ಹತ್ತಲು ೩ ಅಡಿ ಎತ್ತರ, ೨.೫೦ ಅಡಿ ಅಗಲವಾದ ಬಾಗಿಲಿದ್ದು ಬುರುಜು ಮಧ್ಯದಲ್ಲಿ ಟೊಳ್ಳಾಗಿದೆ. ಸದ್ಯ ಮೇಲೆ ಹೋಗದಂತೆ ಬಾಗಿಲನ್ನು ಮುಚ್ಚಲಾಗಿದೆ. ಇನ್ನುಳಿದಂತೆ ಮೇಲ್ಭಾಗದಲ್ಲಿ ಕೈಪಿಡಿಗೋಡೆಯಿದ್ದು ತೆನೆಗಳ ರಚನೆಯಿರುವುದಿಲ್ಲ. ಒಳಗಡೆಯಿಂದ ಬಂದೂಕುಕಿಂಡಿಗಳನ್ನು ನೋಡಿದಾಗ ಒಂದರಲ್ಲಿಯೇ ಮೂರು ಕಡೆ ಗುರಿ ಇಡುವಂತೆ ನಿರ್ಮಿಸಲಾಗಿದೆ. ಇನ್ನುಳಿದಂತೆ ಎಲ್ಲ ಬುರುಜುಗಳು ಮೇಲಿನ ಬುರುಜುವಿನ ಲಕ್ಷಣಗಳನ್ನು ಹೊಂದಿವೆ. ಆದರೆ ನೈರುತ್ಯ ದಿಕ್ಕಿನಲ್ಲಿರುವ ಬುರುಜು ಮುಕ್ಕಾಲು ಭಾಗ ಮಾತ್ರ ಉಳಿದುಕೊಂಡಿದ್ದು ಉಳಿದ ಭಾಗ ನಾಶ ಹೊಂದಿದೆ. ಅದರ ಮಧ್ಯೆ ಮರ ಬೆಳೆದು ಕೊಂಡಿದೆ. ಇನ್ನು ವಾಯವ್ಯದಿಕ್ಕಿನಲ್ಲಿರುವ ಬುರುಜು ಪೂರ್ಣ ಪ್ರಮಾಣದಲ್ಲಿ ಉಳಿದುಕೊಂಡಿದ್ದು ೪೮ ಅಡಿ ಎತ್ತರವಾಗಿದೆ. ಇದರ ಕೆಳಭಾಗದಲ್ಲಿ ಚಪ್ಪಡಿ ಕಲ್ಲುಗಳಿಂದ ಚಿಕ್ಕದಾದ ಲಕ್ಷ್ಮೀಯ ಗುಡಿಯನ್ನು ಕಟ್ಟಿ ಹುಡೆದಲಕ್ಷ್ಮೀ ಎಂದು ಪೂಜಿಸುತ್ತಾರೆ. ಈಶಾನ್ಯದಿಕ್ಕಿನಲ್ಲಿರುವ ಬುರುಜು ೨೫ ಅಡಿ ಎತ್ತರ ಉಳಿದು ಕೊಂಡಿದೆ. ಇನ್ನುಳಿದಂತೆ ಪೂರ್ವದಿಕ್ಕಿನಲ್ಲಿ ಕೋಟೆಗೋಡೆಯ ಮಧ್ಯದಲ್ಲಿ ಮತ್ತೊಂದು ಬುರುಜುಯಿದ್ದು ಒಂದು ಭಾಗದಲ್ಲಿ ಮಾತ್ರ ೫ ಅಡಿ ಎತ್ತರ ಉಳಿದುಕೊಂಡಿದೆ. ದ್ವಾರಬಾಗಿಲ ಮುಂಭಾಗದಲ್ಲಿ ಆಂಜನೇಯ ದೇವಸ್ಥಾನವಿದೆ. ಕಲ್ಯಾಣ ಚಾಳುಕ್ಯರ ಕಾಲದ ಬೋಗೇಶ್ವರ ದೇವಾಲಯ ಕೋಟೆಯ ಮಧ್ಯದಲ್ಲಿ ಕಂಡುಬರುತ್ತಿದ್ದು ಅಧಿಷ್ಠಾನ ಭಾಗ ನೆಲದಲ್ಲಿ ಮುಚ್ಚಿಹೋಗಿದೆ. ಗರ್ಭಗೃಹ ಮತ್ತು ಅಂತರಾಳದ ಭಿತ್ತಿಭಾಗ ಮಾತ್ರ ಉಳಿದುಕೊಂಡಿದ್ದು, ಅದನ್ನು ೧೬ ಮತ್ತು ೧೭ನೇ

ಶತಮಾನದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ನವರಂಗ ಭಾಗದಲ್ಲಿ ಕಮಾನುಗಳುಳ್ಳ ಮಂಟಪ ಕಂಡುಬರುತ್ತದೆ. ಕಲ್ಯಾಣ ಚಾಳುಕ್ಯರ ಕಾಲಕ್ಕೆ ಸಂಬಂಧಿಸಿದ ಶಂಕರಲಿಂಗ ಗುಡಿಯು ಗ್ರಾಮದ ದಕ್ಷಿಣಭಾಗದಲ್ಲಿ ಸರಕಾರಿ ಶಾಲೆಯ ಹತ್ತಿರವಿದ್ದು ಶಿಥಿಲಾವಸ್ಥೆಯಲ್ಲಿದೆ. ಇಂದು ಗರ್ಭಗೃಹ ಹಾಗೂ ಅಂತರಾಳ ಮಾತ್ರ ಕಂಡುಬರುತ್ತವೆ. ಈ ದೇವಾಲಯದ ಪಕ್ಕದಲ್ಲಿಯೇ ೧೭ನೆಯ ಶತಮಾನದಲ್ಲಿ ನಿರ್ಮಿಸಿರಬಹುದಾದ ಮಸೀದಿಯಿದೆ. ಗ್ರಾಮದಲ್ಲಿ ಕೆಲವು ತ್ರುಟಿತ ಶಾಸನಗಳು ಮತ್ತು ಶಿಲ್ಪಗಳು ಅಲ್ಲಲ್ಲಿ ಹರಡಿಕೊಂಡಿವೆ.

೪.೫. ಸಿಂದಗಿ ತಾಲೂಕಿನ ಕೋಟೆಗಳು

ಸಿಂದಗಿ ಜಿಲ್ಲಾಕೇಂದ್ರವಾದ ವಿಜಾಪುರದಿಂದ ೬೦ ಕಿ.ಮೀ. ದೂರದಲ್ಲಿದ್ದು ೨೧೭೬.೪೦ ಚ.ಕಿ.ಮೀ ವಿಸ್ತಾರವನ್ನು ಹೊಂದಿದೆ. ಭೌಗೋಳಿಕವಾಗಿ ಒಣಹವೆಯನ್ನು ಹೊಂದಿರುವ ಈ ಭೂಪ್ರದೇಶವು ಕಪ್ಪು ಹಾಗೂ ಮಡ್ಡಿಮಿಶ್ರಿತ ಮಣ್ಣಿನಿಂದ ಕೂಡಿದೆ. ಈ ತಾಲೂಕಿನ ಗಡಿಯಾಗಿ ಭೀಮಾ ಮತ್ತು ಡೋಣಿ ನದಿಗಳು ಹರಿಯುತ್ತಿದ್ದು, ಈ ನದಿಕೊಳ್ಳಗಳ ಆಶ್ರಯದಲ್ಲಿ ಪ್ರಾಗಿತಿಹಾಸ ಕಾಲದ ಹಲವು ಮಹತ್ವದ ನೆಲೆಗಳು ಕಂಡುಬಂದಿವೆ. ಇವುಗಳಲ್ಲಿ ಕೆಲವು ಆದಿ ಇತಿಹಾಸ ಕಾಲದವರೆಗಿನ ಮುಂದುವರಿದ ಸಾಂಸ್ಕೃತಿಕ ನೆಲೆಗಳಾಗಿವೆ.

ಆಲಮೇಲ

ತಾಲೂಕುಕೇಂದ್ರದಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿರುವ ಆಲಮೇಲ ಗ್ರಾಮವು ಒಂದು ಹೋಬಳಿಯಾಗಿದೆ. ಪ್ರಾಗಿತಿಹಾಸ ಕಾಲದ ನೆಲೆಯಾದ ಈ ಗ್ರಾಮದಲ್ಲಿ ಶಿಲಾತಾಮ್ರಯುಗಕ್ಕೆ ಸೇರಿದ ಕಂದು ವರ್ಣದ ಮಡಕೆ, ಕಪ್ಪುವರ್ಣದ ಚಿತ್ರಗಳಿರುವ ಕೆಂಪುಮಡಕೆ ಮತ್ತು ಚರ್ಟ ಶಿಲೆಯಲ್ಲಿ ತಯಾರಿಸಿದ ವಿವಿಧ ಉಪಕರಣಗಳು ಪತ್ತೆಯಾಗಿವೆ.[೨೮೮] ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ಎಳಮೇಲ–ಮೂವತ್ತು ಎಂಬ ಹೆಸರು ಪಡೆದು ಮೂವತ್ತು ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತು ಎಂಬುದು ದೇವರ ನಾವದಗಿಯ ಕ್ರಿ.ಶ. ೧೧೪೦,[೨೮೯] ಕಡ್ಲೇವಾಡ ಕ್ರಿ.ಶ. ೧೧೬೮[೨೯೦] ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ಅವಧಿಯಲ್ಲಿ ಚಾಳುಕ್ಯರ ಸಾಮಂತರಾದ ಶಿಲಾಹಾರ ಮನೆತನದವರು ಈ ಪ್ರದೇಶವನ್ನು ಆಳುತ್ತಿದ್ದರು. ನಂತರದ ಅವಧಿಯಲ್ಲಿ ಕಳಚೂರಿ ಬಿಜ್ಜಳನನ್ನು ಕೊಂದ ಜಗದೇವ ಮಲ್ಲಿಬೊಮ್ಮ ವಂಶಸ್ಥರು ಆಲಮೇಲದ ದೇಸಗತಿಗಳಿಸುವರು.[೨೯೧] ಕ್ರಿ.ಶ. ೧೫೦೨ರಲ್ಲಿ ವಿಜಾಪುರ ಆದಿಲ್‌ಶಾಹಿ ಅರಸರಿಂದ ಆಲಮೇಲ ಪರಗಣದ ಅಧಿಕಾರಿ ಹುದ್ದೆಯನ್ನು ಇನಾಂ ರೂಪದಲ್ಲಿ ಪಡೆದುಕೊಂಡರು. ಹೀಗೆ ಆದಿಲ್‌ಶಾಹಿಗಳಿಂದ ಇನಾಂ ಪಡೆದ ಈ ಮನೆತನದ ಮಲಶೆಟ್ಟಿ ಎಂಬುವವನು ಈ ವಂಶದ ಮೂಲಪುರುಷನಾಗಿರುವನು. ಆಲಮೇಲ ಪರಗಣದ ಆಡಳಿತ ನಿರ್ವಹಣೆಗಾಗಿ ಈ ವತನವನ್ನು ಆದಿಲ್‌ಶಾಹಿಗಳಿಂದ ಶೂರರಾದ ದೇಶಮುಖರ ಪೂರ್ವಜ ಮಲಶೆಟ್ಟಿ ಎಂಬುವವನು ಪಡೆದುಕೊಂಡನು. ಆದಿಲ್‌ಶಾಹಿಗಳಿಂದ ಚೌರಾತ್ ಹಳ್ಳಿಗಳ

ಇನಾಂದಾರಿಕೆಯನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಆಲಮೇಲದ ದೇಶಮುಖರಿಗೆ ದೇಸಾಯಿಯೆಂದು ಸಂಬೋಧಿಸಿದ್ದನ್ನು ಗಮನಿಸಬಹುದು.[೨೯೨] ಈ ದೇಶಮುಖರು ವಿಜಾಪುರ ಆದಿಲ್‌ಶಾಹಿ, ನಂತರ ಪೇಶ್ವೆಗಳಿಂದ ಕೆಲವು ಜಮೀನನ್ನು ಇನಾಮಾಗಿ ಪಡೆದಿದ್ದರಿಂದ ಇವರು ಸುತ್ತ ಎಂಬತ್ತು ಹಳ್ಳಿಗಳಿಗೆ ಧಣಿಗಳಾದರು.

ಕ್ರಿ.ಶ. ೧೬೮೬ ರಿಂದ ೧೭೮೬ರವರೆಗೆ ಮೊಗಲರು ಮತ್ತು ನಿಜಾಮ್‌ರ ಆಡಳಿತಾವಧಿಯಲ್ಲಿ ಆಲಮೇಲವು ಪ್ರಮುಖ ಪರಗಣವಾಗಿದ್ದು ೭೫ ಹಳ್ಳಿಗಳನ್ನು ಒಳಗೊಂಡಿತ್ತು. ಕ್ರಿ.ಶ. ೧೭೬೦ರಲ್ಲಿ ಈ ಪ್ರದೇಶವನ್ನು ತಮ್ಮ ವಶಕ್ಕೆ ಪಡೆದ ಮೇಲೆ ಪೇಶ್ವೆ ಬಾಲಾಜಿಯು ಮುಧೋಳದ ಮಾಲೋಜಿ ಘೋರ್ಪಡೆಗೆ ಆಲಮೇಲ, ಇಂಡಿ, ಕಡಕೋಳ ಮತ್ತು ತಾಂಬಾಗಳನ್ನು ಕ್ರಿ.ಶ. ೧೭೮೧-೮೨ರಲ್ಲಿ ಜಾಗೀರಗಳನ್ನಾಗಿ ವಹಿಸಿಕೊಟ್ಟನು.[೧೯೩]

ಈ ಗ್ರಾಮದ ಸುತ್ತಲೂ ಕೋಟೆಯಿದ್ದುದರ ಕುರುಹಾಗಿ ಇದರ ಅವಶೇಷಗಳು ಇಂದಿಗೂ ಕಂಡುಬರುತ್ತವೆ. ಕ್ರಿ.ಶ. ೧೮೮೪ರಲ್ಲಿ ಪ್ರಕಟವಾದ ಕ್ಯಾಂಪ್‌ಬೆಲ್ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖವಿರುವಂತೆ ಸ್ಥಳೀಯ ನಾಡಗೌಡರು ಈ ಕೋಟೆಯನ್ನು ಕಟ್ಟಿಸಿದರು ಎಂದು ಹೇಳಲಾಗುತ್ತದೆ.[೨೯೪] ಆದರೂ ಇದರ ಬಗ್ಗೆ ಖಚಿತವಾಗಿ ತಿಳಿಸುವ ಆಕರಗಳು ಲಭ್ಯವಿಲ್ಲ. ಪ್ರಸ್ತುತ ಪ್ರಕೃತಿಯ ಸಹಜ ವೈಪರೀತ್ಯ ಹಾಗೂ ವೇಗವಾಗಿ ಬೆಳೆಯುತ್ತಿರುವ ನಗರೀಕರಣ ಕಾರಣದಿಂದ ಕೋಟೆಯ ಬಹುತೇಕ ಭಾಗ ಶಿಥಿಲಗೊಂಡಿದೆ. ಅಳಿದುಳಿದ ಕೋಟೆಗೋಡೆಯ ಮೇಲೆ ಇತ್ತೀಚೆಗೆ ಮನೆಗಳನ್ನು ನಿರ್ಮಿಸಿಕೊಂಡಿದ್ದರಿಂದ ಇದರ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಆದರೆ ಈ ಕೋಟೆಯೊಳಗಡೆ ವಿವಿಧ ದಿಕ್ಕುಗಳಿಂದ ಪ್ರವೇಶಿಸಲು ಪ್ರಮುಖವಾಗಿ ನಾಲ್ಕು ಕೋಟೆ ದ್ವಾರಗಳಿದ್ದು ಸ್ಥಳೀಯವಾಗಿ ಅವುಗಳನ್ನು ದೇವರ ಅಗಸೆ, ದೇವಣಗಾಂವ ಅಗಸೆ, ಖಡ್ನಿ ಅಗಸೆ, ಬಳಗಾನೂರ ಅಗಸೆ ಎಂದು ಕರೆಯುತ್ತಾರೆ. ಇವುಗಳಲ್ಲಿ ಮೂರು ದ್ವಾರಗಳು ಮಾತ್ರ ಉಳಿದುಕೊಂಡಿವೆ.

ಈ ಕೋಟೆಯ ದ್ವಾರಗಳನ್ನು ಮಧ್ಯಮಗಾತ್ರದ ಕಲ್ಲುಗಳನ್ನು ನಯವಾಗಿ ಕೆತ್ತಿ ಕಲ್ಲುಗಳ ಅಂಚುಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಂಡು ಸಂಧಿಗಳು ಉಂಟಾಗದಂತೆ ನಿರ್ಮಿಸಿದ್ದಾರೆ. ಗೋಡೆಯ ಮಧ್ಯದಲ್ಲಿ ಚಿಕ್ಕ ಕಲ್ಲು, ಮಣ್ಣು, ಗಾರೆಯನ್ನು ಬಳಸಿದ್ದಾರೆ. ಗ್ರಾಮದ ದಕ್ಷಿಣಕ್ಕೆ ಬರುವ ಕೋಟೆಯ ದ್ವಾರವನ್ನು ದೇವರ ಅಗಸೆ ಎಂದು ಕರೆಯುತ್ತಾರೆ. ಈ ದ್ವಾರವು ಕಮಾನು ಮಾದರಿಯಲ್ಲಿದ್ದು ೧೪೧/೨ ಅಡಿ ಅಗಲ ೩೦ ಅಡಿ ಎತ್ತರವಾಗಿದ್ದು ಗೋಡೆಯು ೮೧/೨ ಅಡಿ ದಪ್ಪವಾಗಿದೆ. ಇದರ ಎರಡು ಬದಿಯಲ್ಲಿ ವೃತ್ತಾಕಾರದ ಬುರುಜುಗಳಿವೆ. ಬುರುಜು ಮತ್ತು ದ್ವಾರದ ಕೈಪಿಡಿಗೋಡೆಯಲ್ಲಿ ವೀಕ್ಷಣಾ ಮತ್ತು ಬಂದೂಕು ಕಿಂಡಿಗಳಿವೆ. ಬುರುಜುವಿನ ಮೇಲೆ ಹತ್ತಲು ಸಾಧ್ಯವಾಗದಂತೆ ಎರಡು ಭಾಗದಲ್ಲಿಯೂ ಬಾಗಿಲಿಗೆ ಹೊಂದಿಕೊಂಡು ಆಧುನಿಕ ಅಂಗಡಿ ಮಳಿಗೆಗಳನ್ನು ನಿರ್ಮಿಸಿಕೊಂಡಿದ್ದಾರೆ. ದ್ವಾರದ ಪ್ರವೇಶದ ಎರಡೂ ಬದಿಗಳಲ್ಲಿ ಎತ್ತರವಾದ ಕಟ್ಟೆಗಳಿದ್ದು ಇವು ಕಾವಲುಗಾರರಿಗಾಗಿ ನಿರ್ಮಿಸಿದ ಅಂಕಣಗಳಾಗಿದ್ದವು ಎಂಬುದು ಅಲ್ಲಿ ಉಳಿದಿರುವ

ಅವಶೇಷಗಳಿಂದ ಗುರುತಿಸಬಹುದು. ದಕ್ಷಿಣಕ್ಕೆ ಇರುವ ಈ ದ್ವಾರವು ಉಳಿದ ಎರಡು ದ್ವಾರಗಳಿಗಿಂತ ನಾಶ ಹೊಂದದೆ ಸುಸ್ಥಿತಿಯಲ್ಲಿದೆ. ಉತ್ತರಕ್ಕೆ ಇರುವ ದ್ವಾರವನ್ನು ಖಡ್ನಿ ಅಗಸೆ ಎಂದು ಕರೆಯುತ್ತಾರೆ. ಇದರ ಪ್ರವೇಶ ದ್ವಾರ ೧೪೧/೨ ಅಡಿ ಅಗಲವಾಗಿದ್ದು, ದ್ವಾರದ ಗೋಡೆಯು ೧೧ ಅಡಿ ದಪ್ಪವಾಗಿದೆ. ಈ ದ್ವಾರದ ಮೇಲಿನ ಕಮಾನು ಬಿದ್ದುಹೋಗಿದ್ದರಿಂದ ಎತ್ತರದ ಅಳತೆ ಸಿಗುವುದಿಲ್ಲ. ಆದರೆ ಸ್ಥಳೀಯರ ಪ್ರಕಾರ ದೇವರ ಅಗಸೆಯಷ್ಟೇ ಸಮಾನಾಂತರವಾಗಿ ಇದರ ಕಮಾನಿತ್ತು ಎಂದು ಹೇಳುತ್ತಾರೆ. ಈ ದ್ವಾರದ ಪ್ರವೇಶದ ಬಲಭಾಗಕ್ಕೆ ೩ ಅಡಿ ಅಗಲ, ೬೧/೨ ಅಡಿ ಎತ್ತರದ ಚಿಕ್ಕ ಬಾಗಿಲಿದ್ದು ಇದನ್ನು ದಿಡ್ಡಿಬಾಗಿಲು ಎಂದು ಹೇಳಬಹುದು. ಪ್ರವೇಶದ ಎರಡು ಬದಿಗಳಲ್ಲಿ ಎತ್ತರವಾದ ಆನೆಯ ಶಿಲ್ಪಗಳಿವೆ. ಪೂರ್ವಕ್ಕೆ ಇರುವ ದ್ವಾರವನ್ನು ದೇವಣಗಾಂವ ಅಗಸೆ ಎಂದು ಕರೆಯುತ್ತಾರೆ. ಇದರ ಎರಡು ಬದಿಗಳ ಗೋಡೆ ಮಾತ್ರ ಉಳಿದುಕೊಂಡಿದ್ದು ೧೦ ಅಡಿ ದಪ್ಪ, ೧೪ ಅಡಿ ಅಗಲವಾಗಿದ್ದು ಉಳಿದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಇನ್ನುಳಿದಂತೆ ಸ್ಥಳೀಯರು ಹೇಳುವ ಬಳಗಾನೂರ ಅಗಸೆ ಇರುವ ಸ್ಥಳದಲ್ಲಿ ಯಾವುದೇ ಅವಶೇಷಗಳಿರದೆ ಸಂಪೂರ್ಣವಾಗಿ ನಾಶ ಹೊಂದಿದೆ.

ಗ್ರಾಮದ ಮಧ್ಯಭಾಗದಲ್ಲಿ ಎತ್ತರವಾದ ಜಗತಿಯ ಮೇಲೆ ನಿರ್ಮಿಸಿದ ದೇಸಾಯಿಗಳ ಕಾಲದ ವಾಡೆಯಿದ್ದು, ಇದರ ದ್ವಾರಬಾಗಿಲನ್ನು ಕಮಾನಿನಾಕಾರದಲ್ಲಿ ನಿರ್ಮಿಸಲಾಗಿದೆ. ಈ ಕಮಾನಿನ ಮೇಲ್ಭಾಗದಲ್ಲಿ ಮತ್ತೊಂದು ಮಹಡಿಯಿದ್ದು ಅಲ್ಲಿಂದಲೇ ಹೊರಗಿನ ಸೈನಿಕರ ಚಲನವಲನಗಳನ್ನು ವೀಕ್ಷಿಸಬಹುದು. ಮಧ್ಯಮಗಾತ್ರದ ಕೆತ್ತನೆಕಲ್ಲುಗಳನ್ನು ಬಳಸಿ ನಿರ್ಮಿಸಿದ ವಾಡೆ ನೋಡಲು ಇಂದಿಗೂ ಆಕರ್ಷಕ ಶೈಲಿಯಲ್ಲಿದೆ. ಆದರೆ ಇಂದು ವಾಡೆಯ ಒಳಗೆ ಯಾರೂ ವಾಸಿಸುವುದಿಲ್ಲ. ಹೀಗಾಗಿ ಇದ್ದ ವಾಡೆಯು ಕೂಡ ಕಾಲನ ತುಳಿತಕ್ಕೆ ಒಳಗಾಗಿ ಕ್ರಮೇಣ ನಾಶವಾಗುತ್ತಿದೆ.

ಜಾಲವಾದ

ಕೋರವಾರದಿಂದ ೧೦ ಕಿ.ಮೀ. ದೂರದಲ್ಲಿರುವ ಜಾಲವಾದ ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯ ಅವಧಿಗೆ ಸಂಬಂಧಿಸಿದ ಶಂಕರಲಿಂಗ ದೇವಾಲಯ ಮತ್ತು ತೃಟಿತಗೊಂಡಿರುವ ಎರಡು ಶಾಸನಗಳಿದ್ದು, ಅವು ಗ್ರಾಮದ ಪ್ರಾಚೀನತೆಯನ್ನು ತಿಳಿಸುತ್ತವೆ. ೧೬೮೬ ರಿಂದ ೧೭೬೦ ರಲ್ಲಿ ಇದು ದೇವರಹಿಪ್ಪರಗಿ ಪರಗಣದ ೧೯ ಹಳ್ಳಿಗಳಲ್ಲಿ ಒಂದಾಗಿತ್ತು.[೨೯೫]

ಗ್ರಾಮದಲ್ಲಿ ೧೭ ಮತ್ತು ೧೮ನೇ ಶತಮಾನದಲ್ಲಿ ನಿರ್ಮಿಸಲಾದ ಕೋಟೆಯು ಸುಮಾರು ೪ ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಇದರ ಪ್ರವೇಶದ್ವಾರವು ಪೂರ್ವಕ್ಕೆ ಮುಖಮಾಡಿದೆ. ಪ್ರಸ್ತುತ ಕೋಟೆಯ ಪ್ರವೇಶದ್ವಾರ, ಪಶ್ಚಿಮ ಮತ್ತು ಉತ್ತರದಿಕ್ಕಿನಲ್ಲಿರುವ ಕೋಟೆಗೋಡೆಗಳು ನಾಶ ಹೊಂದಿದ್ದು ಅಲ್ಲಿ ಕಲ್ಲು ಮತ್ತು ಮಣ್ಣಿನ ದಿಬ್ಬಗಳನ್ನು ಕಾಣಬಹುದು. ಪೂರ್ವ ಮತ್ತು ದಕ್ಷಿಣಕ್ಕೆ

ಇರುವ ಗೋಡೆಯು ಸ್ವಲ್ಪ ಮಟ್ಟಿಗೆ ಯಥಾಸ್ಥಿತಿಯಲ್ಲಿದೆ. ಗೋಡೆಯು ೩೦ ಅಡಿ ಎತ್ತರವಿದ್ದು ಗೋಡೆಯ ತಳಭಾಗದಲ್ಲಿ ದಪ್ಪವಾದ ಗುಂಡುಕಲ್ಲು, ಮಧ್ಯದಲ್ಲಿ ಮಧ್ಯಮಗಾತ್ರದ, ಮೇಲ್ಭಾಗದಲ್ಲಿ ಕಟೆದ ಕಲ್ಲುಗಳನ್ನು ಉಪಯೋಗಿಸಿ ಕೋಟೆ ಗೋಡೆಯನ್ನು ನಿರ್ಮಿಸಿದ್ದಾರೆ. ಇದರಿಂದ ಕೋಟೆಯು ಕಾಲಘಟ್ಟದಲ್ಲಿ ಜೀರ್ಣೋದ್ಧಾರವಾಗಿದ್ದು ಕಂಡುಬರುತ್ತದೆ. ಕೋಟೆಯ ಕೈಪಿಡಿಗೋಡೆಯನ್ನು ಮಣ್ಣಿನಿಂದ ನಿರ್ಮಿಸಿದ್ದು ಇದರಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳನ್ನು ಕಾಣಬಹುದು, ಇವು ೧ ಮೀ. ಎತ್ತರ, ೪ ಇಂಚು ಅಗಲವಾಗಿವೆ. ಕೋಟೆಯ ವಾಯವ್ಯಭಾಗದಲ್ಲಿ ಕಮಾನು ಮಾದರಿಯಲ್ಲಿ ದಿಡ್ಡಿಬಾಗಿಲಿದ್ದು ಇದು ವಾಯವ್ಯಭಾಗದಲ್ಲಿ ಕೋಟೆ ಗೋಡೆಗೆ ಹೊಂದಿಕೊಂಡಿರುವ ಬಾವಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ನೈರುತ್ಯಭಾಗದಲ್ಲಿ ಬುರುಜುವಿದ್ದು ಸುಮಾರು ೬೦ ಅಡಿ ಎತ್ತರವಿದೆ. ಇದರ ತಳಪಾಯದ ಸುತ್ತಳತೆ ೩೬ ಮೀ. ಇದೆ. ೧೩ ಅಡಿ ಎತ್ತರದ ಮೇಲೆ ಕಾವಲುಗೋಪುರದ ಮೇಲೆ ಹತ್ತಲು ಬಾಗಿಲಿದೆ. ಇದು ೧೧/೨ ಮೀ. ಅಗಲ, ೨ ಮೀ. ಎತ್ತರವಿದೆ. ಕೋಟೆಯ ಒಳಗಡೆ ದೇಸಾಯಿಗಳ ವಾಡೆ, ಕೋಟೆಗೋಡೆಗೆ ಹೊಂದಿಕೊಂಡು ಒಳಗಡೆ ಸುತ್ತಲೂ ವಸತಿಮನೆಗಳಿವೆ. ಪ್ರಸ್ತುತ ಇಂದು ಅವೆಲ್ಲ ಸಂಪೂರ್ಣವಾಗಿ ನಾಶ ಹೊಂದಿ ಅದರ ಅವಶೇಷಗಳು ಮಾತ್ರ ಉಳಿದುಕೊಂಡಿವೆ.

ದೇವೂರ

ದೇವೂರ ದೇವರ ಹಿಪ್ಪರಗಿಯಿಂದ ೪ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಸೂಕ್ಷ್ಮ ಶಿಲಾಯುಗದ ನೆಲೆಯಾಗಿದೆ. ಈ ಗ್ರಾಮವನ್ನು ಕ್ರಿ.ಶ. ೧೦೨೯,[೨೯೬] ಕ್ರಿ.ಶ. ೧೦೬೪[೨೯೭] ಹಾಗೂ ಕ್ರಿ.ಶ. ೧೧೯೬೨[೨೯೮] ಶಾಸನಗಳಲ್ಲಿ 'ದೇವಪುರ' ಎಂದು ಉಲ್ಲೇಖವಿದೆ. 'ಪುರ', 'ಪುರಿ' ದ್ರಾವಿಡ ಸ್ಥಳನಾಮ ವಾರ್ಗಿಕ 'ಊರು'ದ ಪರ್ಯಾಯ ಪದವಾಗಿ ಕೆಲವಡೆ ಕಾಣಿಸಿಕೊಂಡಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ 'ಪುರ' ಪಟ್ಟಣ ಎನ್ನುವ ಅರ್ಥದಲ್ಲಿ ಬಳಕೆಗೊಂಡಿದೆ. ಸಾಮಾನ್ಯವಾಗಿ ಇದು ಆ ಸ್ಥಳದ ದೇವಾಲಯವನ್ನು ಕುರಿತು ಸೂಚಿಸುತ್ತದೆ. ದೇವವಳ್ಳಿ(ಕ್ರಿ.ಶ.೧೧೭೨), ದೇವಪುರ(ಕ್ರಿ.ಶ.೧೦೨೯) ದೇವೂರ(ದೇವ+ಪುರ> ದೇವಪುರ> ದೇವೂರವಾಗಿದೆ). [೨೯೯] ಚಾಳುಕ್ಯರ ಕಾಲದಲ್ಲಿ ಒಂದು ಪ್ರಮುಖ ಗ್ರಾಮವಾಗಿ ಬೆಳಕಿಗೆ ಬಂದ ಈ ಗ್ರಾಮದಲ್ಲಿ ಚಾಳುಕ್ಯ ಮತ್ತು ಯಾದವರಿಗೆ ಸಂಬಂಧಿಸಿದ ನಾಲ್ಕು ಶಾಸನಗಳು, ಚಾಳುಕ್ಯ ಅವಧಿಯಲ್ಲಿ ನಿರ್ಮಾಣವಾದ ರಾಮೇಶ್ವರ ದೇವಾಲಯವಿದ್ದು ಗ್ರಾಮದ ಪ್ರಾಚೀನತೆಗೆ ನಿದರ್ಶನವಾಗಿವೆ.

ಈ ಗ್ರಾಮದಲ್ಲಿ ನಾಲ್ಕು ಎಕರೆ ವಿಸ್ತೀರ್ಣದಲ್ಲಿ ಕೋಟೆಯಿದೆ ಪ್ರಕೃತಿಯ ಸಹಜ ವೈಪರೀತ್ಯ ಮತ್ತು ವೇಗವಾಗಿ ಬೆಳೆಯುತ್ತಿರುವ ಗ್ರಾಮ ನಗರೀಕರಣದಿಂದ ಕೋಟೆಯು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಕೋಟೆಯ ಅವಶೇಷಗಳು ಕಲ್ಲು ಮತ್ತು ಮಣ್ಣಿನ ದಿಬ್ಬಗಳ ರೂಪದಲ್ಲಿ ಉಳಿದುಕೊಂಡಿವೆ. ಆದರೆ ಕೋಟೆಯ ವಾಯವ್ಯಭಾಗಕ್ಕೆ ಮಾತ್ರ ಕೋಟೆಯ ಕಾವಲುಗೋಪುರ ಸುಸ್ಥಿತಿಯಲ್ಲಿದ್ದು ಈ ಗ್ರಾಮದಲ್ಲಿ ಕೋಟೆ ಇದ್ದುದರ ಬಗ್ಗೆ ಖಚಿತ ಆಧಾರವಾಗಿದೆ. ಜೊತೆಗೆ ಈ

ಕಾವಲುಗೋಪುರದ ಹತ್ತಿರ ಕೋಟೆಯ ಹೊರಭಾಗದಲ್ಲಿ ದೊಡ್ಡಬಾವಿ ಮತ್ತು ಕೋಟೆಯ ದಕ್ಷಿಣಕ್ಕೆ ಕೋಟೆಯ ಒಳಭಾಗದಲ್ಲಿ ಕಲ್ಲಿನಿಂದ ವೃತ್ತಾಕಾರವಾಗಿ ನಿರ್ಮಿಸಿದ ಚಿಕ್ಕಬಾವಿಯಿದೆ. ಈ ಕೋಟೆಯ ದ್ವಾರಬಾಗಿಲು ಉತ್ತರಕ್ಕೆ ಮುಖ ಮಾಡಿದ್ದು ನಾಲ್ಕು ಮೂಲೆಗಳಲ್ಲಿ ಕಾವಲು ಗೋಪುರಗಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಸದ್ಯ ಕೋಟೆ ಇದ್ದುದರ ಬಗ್ಗೆ ಇತಿಹಾಸವನ್ನು ಸಾರುವ ಕಾವಲುಗೋಪುರವನ್ನು ದೊಡ್ಡ ಹಾಗೂ ಮಧ್ಯಮಗಾತ್ರದ ಒರಟು ಮತ್ತು ಕಟೆದ ಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಇದರ ಸುತ್ತಳತೆ ೩೫ ಮೀ. ಇದ್ದು, ೪೮ ಅಡಿ ಎತ್ತರವಿದೆ. ಮೇಲ್ಭಾಗಕ್ಕೆ ಹೋಗಲು ೩೧/೨ ಮೀ. ಎತ್ತರದಲ್ಲಿ ಕಮಾನು ಮಾದರಿಯಲ್ಲಿ ಬಾಗಿಲಿದ್ದು. ಬಾಗಿಲು ೧೦ ಅಡಿ ಎತ್ತರ, ೩.೪ ಅಡಿ ಅಗಲವಿದೆ. ಕಾವಲುಗೋಪುರದ ಮೇಲ್ಭಾಗದಲ್ಲಿ ೧೦.೪ ಅಡಿ ಎತ್ತರವಾದ ಕೈಪಿಡಿಗೋಡೆಯಿದ್ದು ೪ ಅಡಿ ದಪ್ಪವಿದೆ. ಇದರಲ್ಲಿ ಬಂದೂಕು ಕಿಂಡಿಗಳಿದ್ದು ೭೫ ಸೆಂ.ಮೀ. ಎತ್ತರ, ೧೭ ಇಂಚು ಅಗಲವಾಗಿವೆ. ಒಂದು ಬಂದೂಕುಕಿಂಡಿಯಿಂದ ಮತ್ತೊಂದು ಬಂದೂಕುಕಿಂಡಿಗೆ ೩.೪ ಅಡಿ ಅಂತರವಿದ್ದು ಈ ಬಂದೂಕುರಂಧ್ರಗಳ ಮೇಲ್ಭಾಗದಲ್ಲಿ ವೀಕ್ಷಣಾಕಿಂಡಿಗಳಿವೆ. ಇದರಲ್ಲಿ ನೇರ, ಎಡ, ಬಲಬದಿಗೆ ನೋಡುವ ಹಾಗೆ ಮೂರು ರೀತಿಯ ದೃಷ್ಟಿಕೋನವನ್ನಿಟ್ಟುಕೊಂಡು ರಚಿಸಿದ್ದಾರೆ. ಕಾವಲುಗೋಪುರದ ಮೇಲ್ಭಾಗದ ಮಧ್ಯಭಾಗದಲ್ಲಿ ಚಿಕ್ಕ ಕಟ್ಟಡವೊಂದು ವೃತ್ತಾಕಾರವಾಗಿದ್ದು ೧೧ ಅಡಿ ಎತ್ತರ, ೯ ಮೀ. ಸುತ್ತಳತೆ ಹೊಂದಿದ್ದು ಇದನ್ನು ಕಾವಲು ಗೋಪುರದ ಹಾಗೆ ನಿರ್ಮಿಸಿದ್ದಾರೆ. ಇದು ಶತ್ರುಗಳ ಆಕ್ರಮಣದ ತುರ್ತುಸಂದರ್ಭದಲ್ಲಿ ಮೇಲುಗಡೆ ನಿಂತುಕೊಂಡು ನಗಾರಿ ಬಾರಿಸಲು ಅಥವಾ ಕಹಳೆ ಊದಲು ಇದನ್ನು ನಿರ್ಮಿಸಿರುವ ಸಾಧ್ಯತೆಗಳುಂಟು. ಪ್ರಸ್ತುತ ಈ ಕಾವಲುಗೋಪುರವನ್ನು ಸ್ಥಳೀಯರು ಹುಡೆದ ಲಕ್ಷೀ ಎಂದು ಕರೆಯುತ್ತಾರೆ. ಗ್ರಾಮದಲ್ಲಿ ದೇವರ ಹಿಪ್ಪರಗಿಗೆ ಹೋಗುವ ಮಾರ್ಗದಲ್ಲಿ ಹುಡೆ ಇದ್ದು ವಿನಾಶದ ಅಂಚಿನಲ್ಲಿದೆ.

ಮಣೂರು

ತಾಲೂಕುಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿರುವ ಮಣೂರನ್ನು ಸ್ಥಳೀಯರು ಮಡ್ಡಿಮಣೂರು ಎಂದು ಕರೆಯುತ್ತಾರೆ. ಕ್ರಿ.ಶ. ೧೧ನೇ ಶತಮಾನದ ಪರಮಾನಂದ ದೇವಾಲಯದಲ್ಲಿರುವ ಶಾಸನವು ಈ ಗ್ರಾಮವನ್ನು ‘ಮಣ್ಣಿಯೂರ’ ಎಂದು ಉಲ್ಲೇಖಿಸುತ್ತದೆ.[೩೦೦] ಕ್ರಿ.ಶ. ೧೦೪೪೮[೩೦೧] ಇನ್ನೊಂದು ಚಾಳುಕ್ಯ ಶಾಸನವು ಗ್ರಾಮದಲ್ಲಿದ್ದು ಚಾಳುಕ್ಯರ ಆಡಳಿತಾವಧಿಯಿಂದಲೇ ಈ ಗ್ರಾಮದ ಪ್ರಾಚೀನತೆ ತಿಳಿದುಬರುತ್ತದೆ. ಶಾಸನೋಕ್ತ ಮಣಿಯೂರು>ಮಣೂರ>ಮಾಣ್(ಎತ್ತರ)>ಮಾಣ್+ಊರ>ಮಾಣಿಯೂರ> ಮಣಿಯೂರ>ಮಣೂರ ಆಗಿದೆ.[೩೦೨] ಈ ಗ್ರಾಮದ ಸುತ್ತಲೂ ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ನಿರ್ಮಾಣವಾದ ಕೋಟೆಯಿದ್ದು. ಇದರ ಮಧ್ಯಭಾಗದಲ್ಲಿ ಪೇಶ್ವೆಗಳ ಕಾಲದಲ್ಲಿ ನಿರ್ಮಾಣವಾದ ಒಳಕೋಟೆ ಮತ್ತು ದೇಸಾಯಿಗಳ ವಾಡೆ ಕಂಡುಬರುತ್ತದೆ.

ಗ್ರಾಮದ ಸುತ್ತಲೂ ಇರುವ ಕೋಟೆಯು ಚೌಕಾಕಾರವಾಗಿದ್ದು ಇದೊಂದು ನೆಲದುರ್ಗವಾಗಿದೆ. ಕೋಟೆಯ ಆಗ್ನೇಯಭಾಗದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಕೋಟೆಯ ಪ್ರವೇಶದ್ವಾರ ಮತ್ತು ಅದಕ್ಕೆ ಹೊಂದಿಕೊಂಡು ದಕ್ಷಿಣಭಾಗದ ಕೋಟೆಗೋಡೆ ಮಾತ್ರ ಉಳಿದುಕೊಂಡಿದ್ದು ಉಳಿದ ಮೂರು ಭಾಗಗಳಲ್ಲಿನ ಕೋಟೆಗೋಡೆಯು ನಾಶ ಹೊಂದಿದೆ. ಅದರ ಅವಶೇಷಗಳ ಮೇಲೆ ಸ್ಥಳೀಯರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಪ್ರವೇಶದ್ವಾರವು ೧೨೧/೨ಅಡಿ ಅಗಲ, ೧೨ ಅಡಿ ಎತ್ತರ ಮತ್ತು ೧೧ ಅಡಿ ದಪ್ಪವಾದ ಗೋಡೆಯನ್ನು ಹೊಂದಿದೆ. ಚೌಕಾಕಾರವಾಗಿ ನಿರ್ಮಿಸಲಾಗಿರುವ ಈ ದ್ವಾರಬಾಗಿಲಿನ ಮೇಲೆ ಕಮಾನು ಆಕೃತಿಯ ಪಟ್ಟಿಕೆ ನಿರ್ಮಿಸಿದ್ದು ಆಕರ್ಷಕವಾಗಿ ಕಾಣುತ್ತದೆ. ಪ್ರವೇಶದ್ವಾರದ ಒಳಭಾಗದಲ್ಲಿ ಪ್ರಸ್ತುತ ಹಾಳಾಗಿರುವ ಅಂಕಣಗಳಿದ್ದು ಅವು ಕಾವಲುಗಾರರ ತಂಗುದಾಣಗಳಾಗಿದ್ದವು. ಪ್ರವೇಶದ್ವಾರದ ಎರಡು ಭಾಗಗಳಲ್ಲಿನ ಬುರುಜುಗಳು ೨೪ ಅಡಿ ಎತ್ತರವಾಗಿವೆ. ಬುರುಜುವಿನ ಮೇಲ್ಭಾಗದ ಕೈಪಿಡಿಗೋಡೆ ೩ ಅಡಿ ದಪ್ಪ, ೨೫ ಮೀ. ಸುತ್ತಳತೆಯನ್ನು ಹೊಂದಿದೆ. ಕೈಪಿಡಿಗೋಡೆಯಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳಿದ್ದು, ಬಂದೂಕು ಕಿಂಡಿಗಳು ೫೦ ಸೆಂ.ಮೀ. ಎತ್ತರ, ೩ ಇಂಚು ಅಗಲವಾಗಿವೆ. ಬುರುಜು ಕೆಳಹಂತದಿಂದ ಮೇಲಿನವರೆಗೂ ಏಕರೂಪದಲ್ಲಿರದೆ ಮೇಲ್ಭಾಗಕ್ಕೆ ಹೋದಂತೆ ಬುರುಜುವಿನ ಸುತ್ತಳತೆ ಕಡಿಮೆಯಾಗುತ್ತಾ ಹೋಗುತ್ತದೆ. ಭದ್ರತೆಯ ದೃಷ್ಟಿಕೋನವನ್ನು ಇಟ್ಟುಕೊಂಡು ಈ ರೀತಿ ಒಳಬಾಗುವಂತೆ ನಿರ್ಮಿಸಿದ್ದಾರೆ. ಬುರುಜುಗಳು ಪ್ರವೇಶದ್ವಾರಕ್ಕೆ ಹೊಂದಿಕೊಂಡರೂ ಪ್ರವೇಶದ್ವಾರಕ್ಕೆ ಸಮಾನಾಂತರದಲ್ಲಿರದೆ ಪ್ರವೇಶದ್ವಾರಕ್ಕಿಂತ ಕಡಿಮೆ ಎತ್ತರವನ್ನು ಹೊಂದಿವೆ. ಈ ಕೋಟೆಯ ಪ್ರವೇಶದ್ವಾರಕ್ಕೆ ಮತ್ತು ಬುರುಜುಗಳಿಗೆ ನುಣುಪಾಗಿ ಕಟೆದ ಮಧ್ಯಮಗಾತ್ರದ ಕಲ್ಲುಗಳನ್ನು ಬಳಸಿ ನಿರ್ಮಿಸಿದ್ದು ಸಂದುಗಳಲ್ಲಿ ಗಾರೆಯನ್ನು ಲೇಪಿಸಿದ್ದಾರೆ. ಕೋಟೆಯ ದಕ್ಷಿಣಭಾಗದಲ್ಲಿನ ಗೋಡೆ ಮಾತ್ರ ಉಳಿದುಕೊಂಡಿದ್ದು ಭಾಗಶಃ ಕಟೆದ ಕಲ್ಲುಗಳು ಮತ್ತು ಗುಂಡುಕಲ್ಲುಗಳನ್ನು ಉಪಯೋಗಿಸಿದ್ದಾರೆ. ಈ ಕೋಟೆಗೋಡೆಯ ಕೈಪಿಡಿಗೋಡೆಯಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳನ್ನು ಕಾಣಬಹುದು. ಕೋಟೆಯ ಗೋಡೆಯು ಹೊರಭಾಗದಲ್ಲಿ ಮಾತ್ರ ನೋಡಲು ಕಾಣಸಿಗುತ್ತದೆ. ಒಳಗಡೆ ಗೋಡೆಗೆ ಹೊಂದಿಕೊಂಡು ಮನೆಗಳನ್ನು ನಿರ್ಮಿಸಿದ್ದಾರೆ. ಸ್ಥಳೀಯರು ಹೇಳುವಂತೆ ಈ ಕೋಟೆಗೋಡೆಯು ಊರ ಸುತ್ತಲೂ ಇದ್ದು ಅದಕ್ಕೆ ಹೊಂದಿಕೊಂಡಂತೆ ಮೂರು ದಿಕ್ಕುಗಳಲ್ಲಿ ಬುರುಜುಗಳಿದ್ದವು. ಪ್ರಸ್ತುತ ಅವು ನಾಶ ಹೊಂದಿವೆ ಎಂದು ಹೇಳುತ್ತಾರೆ.

ಒಳಕೋಟೆಯನ್ನು ಕಟೆದ ಕಲ್ಲುಗಳು ಮತ್ತು ಒರಟು ಗುಂಡುಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಿದ್ದಾರೆ. ಈ ಒಳಕೋಟೆಗೆ ಪೂರ್ವಕ್ಕೆ ಮತ್ತು ಉತ್ತರಕ್ಕೆ ಪ್ರವೇಶದ್ವಾರಗಳಿದ್ದು, ಪೂರ್ವದ ಪ್ರವೇಶದ್ವಾರವು ೮ ಅಡಿ ಅಗಲ, ೧೦.೪ ಅಡಿ ಎತ್ತರವಾಗಿದ್ದು ಚೌಕಾಕಾರವಾಗಿದೆ. ಉತ್ತರಕ್ಕಿರುವ ಪ್ರವೇಶದ್ವಾರವು ಪ್ರಸ್ತುತ ನಾಶ ಹೊಂದಿರುವುದರಿಂದ ಅವಶೇಷಗಳು ಮಾತ್ರ ಕಂಡುಬರುತ್ತವೆ. ಕೋಟೆಗೋಡೆಯ ಕೆಳಭಾಗವು ೬ ಅಡಿ ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗಿ ನಿರ್ಮಿತವಾಗಿದೆ. ೪೦ ಅಡಿ ಎತ್ತರವಾಗಿರುವ ಕೋಟೆಗೋಡೆಯ ಮೇಲ್ಭಾಗದಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳಿವೆ.

ಒಳಕೋಟೆಯ ಆಗ್ನೇಯಭಾಗಕ್ಕೆ ವೃತ್ತಾಕಾರವಾದ ಬುರುಜುವಿದ್ದು ಪ್ರಸ್ತುತ ಅದರ ಅರ್ಧಭಾಗ ನಾಶ ಹೊಂದಿದ್ದು ಅದರ ಮೇಲ್ಭಾಗದಲ್ಲಿ ಮುಳ್ಳುಕಂಟಿಗಳು ಬೆಳೆದುಕೊಂಡಿವೆ. ಒಳಕೋಟೆಯ ಮಧ್ಯಭಾಗದಲ್ಲಿ ವಾಡೆಯಿದ್ದು ಅದರ ಅವಶೇಷಗಳು ಮಾತ್ರ ಕಂಡುಬರುತ್ತವೆ. ಈಗಿರುವ ದೇಸಾಯಿಗಳು ಇತ್ತೀಚೆಗೆ ಕೋಟೆಯ ಒಳಗಡೆ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಒಳಕೋಟೆಯ ಉತ್ತರ ಪ್ರವೇಶದ್ವಾರದ ಎಡಕ್ಕೆ ಧಾನ್ಯಗಳನ್ನು ಸಂಗ್ರಹಿಸಲು ನಾಲ್ಕು ಕಣಜಗಳಿ(ಹಗೇವು)ವೆ. ಒಳಕೋಟೆ ಮಧ್ಯದಿಂದ ತುರ್ತು ಪರಿಸ್ಥಿತಿಯಲ್ಲಿ ತಪ್ಪಿಸಿಕೊಂಡು ಹೋಗಲು ಸುರಂಗಮಾರ್ಗವಿದ್ದುದರ ಸ್ಥಳವನ್ನು ಸ್ಥಳೀಯರು ಈಗಲೂ ಗುರುತಿಸುತ್ತಾರೆ. ಸದ್ಯ ಅದು ಪೂರ್ತಿಯಾಗಿ ಮಣ್ಣಿನಿಂದ ಮುಚ್ಚಿಕೊಂಡಿದೆ. ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಿರುವ ಈ ಒಳಕೋಟೆಯನ್ನು ಇಂದಿಗೂ ನೋಡಬಹುದಾಗಿದೆ.

ರಾಂಪೂರ

ಇದು ತಾಲೂಕುಕೇಂದ್ರವಾದ ಸಿಂದಗಿಯಿಂದ ಉತ್ತರಕ್ಕೆ ೬ ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನತೆಗೆ ಸಂಬಂಧಪಟ್ಟಂತೆ ಯಾವುದೇ ಆಕರಗಳು ನಮಗೆ ಲಭ್ಯವಿಲ್ಲ. ಆದರೆ ಇದು ಕ್ರಿ.ಶ. ೧೬೮೬ ರಿಂದ ೧೭೬೦ರ ಅವಧಿಯಲ್ಲಿ ಆಲಮೇಲ ಪರಗಣದ ಒಂದು ಗ್ರಾಮವಾಗಿತ್ತು.[೩೦೩] ಈ ಗ್ರಾಮದ ಮಧ್ಯದಲ್ಲಿ ಕೋಟೆಯಿದ್ದು ಇದು ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾಯಿತೆಂದು ಸ್ಥಳೀಯರು ಹೇಳುತ್ತಾರೆ. ಚೌಕಾಕಾರವಾಗಿರುವ ಈ ಕೋಟೆಯನ್ನು ಕಟ್ಟುವಾಗ ಅದರ ತಳಭಾಗದಲ್ಲಿ ಗಟ್ಟಿಯಾದ ಕಲ್ಲಿನ ಕಣಿ ಇರುವ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ನಿರ್ಮಿಸಿದ್ದಾರೆ. ಹೀಗಾಗಿ ಕೋಟೆಯು ಇನ್ನೂ ಉತ್ತಮವಾದ ಸ್ಥಿತಿಯಲ್ಲಿದೆ. ಕೋಟೆಯನ್ನು ನಿರ್ಮಿಸುವಾಗ ಅದರ ತಳಪಾಯದಲ್ಲಿ ಒರಟಾದ ದಪ್ಪ ಗುಂಡುಕಲ್ಲುಗಳನ್ನು ಅದರ ಮೇಲೆ ಮಧ್ಯಮಗಾತ್ರದ ಕಟೆದ ಕಲ್ಲುಗಳನ್ನು(ಉದಾ: ೧೪X೧೯ ಸೆಂ.ಮೀ. ಉದ್ದಗಲ, ೧೪X೧೪ಸೆಂ.ಮೀ. ಉದ್ದಗಲ ಗಾತ್ರದ) ಬಳಸಿ ಕಟ್ಟಿದ ಈ ಕೋಟೆಯು ಸಿಂದಗಿ ತಾಲೂಕಿನ ಉಳಿದ ಕೋಟೆಗಿಂತ ಉತ್ತಮ ಸ್ಥಿತಿಯಲ್ಲಿದ್ದು ಆಕರ್ಷಣೀಯವಾಗಿದೆ. ಕೋಟೆಗೋಡೆಯು ತಳಮಟ್ಟದಲ್ಲಿ ೧೦ ಅಡಿ ದಪ್ಪವಾಗಿದ್ದು ಮೇಲ್ಭಾಗಕ್ಕೆ ಕಿರಿದಾಗುತ್ತಾ ಹೋಗಿದೆ. ಗೋಡೆಯ ನಿರ್ದಿಷ್ಟ ಎತ್ತರದಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳಿದ್ದು ಕ್ರಮವಾಗಿ ಅವು ಒಂದು ಅಡಿ ಎತ್ತರ, ಮೂರು ಇಂಚು ಅಗಲ, ಮತ್ತು ೨೧/೨ ಅಡಿ ಎತ್ತರ, ೪ ಇಂಚು ಅಗಲವಾಗಿವೆ. ಕೋಟೆಯ ಪ್ರವೇಶವು 'L' ಆಕಾರದಲ್ಲಿದ್ದು ಶತ್ರುಗಳು ನೇರವಾಗಿ ಒಳನುಗ್ಗಲು ಸಾಧ್ಯವಾಗದಂತೆ ತಂತ್ರವನ್ನು ಉಪಯೋಗಿಸಿದ್ದಾರೆ. ಕೋಟೆಯ ಹೊರದ್ವಾರಬಾಗಿಲು ಎತ್ತರವಾದ ಮೆಟ್ಟಿಲುಗಳ ಮೇಲಿದ್ದು ಚೌಕಾಕಾರವಾಗಿದೆ. ೧೬೧/೨ ಅಡಿ ಅಗಲ, ೨೦ ಅಡಿ ಎತ್ತರವಿದೆ. ಪ್ರವೇಶದ ಎರಡು ಭಾಗಗಳಲ್ಲಿ ಅಂಕಣಗಳಿವೆ. ಇನ್ನೊಂದು ಒಳದ್ವಾರಬಾಗಿಲು ಕೋಟೆಗೋಡೆಗೆ ಹೊಂದಿಕೊಂಡಿದ್ದು ೧೩ ಅಡಿ ಅಗಲ, ೧೫ ಅಡಿ ಎತ್ತರವಾಗಿದ್ದು, ಈ ಒಳದ್ವಾರಬಾಗಿಲಿನಿಂದ ಹೊರದ್ವಾರಬಾಗಿಲಿಗೆ. ಹೋಗುವರೆಗೆ 'L' ಆಕಾರದಲ್ಲಿ ಅಡ್ಡಲಾಗಿ ಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಗೋಡೆಗೆ ಹೊಂದಿಕೊಂಡು ನೈರುತ್ಯ ಭಾಗದಲ್ಲಿ ಎತ್ತರವಾದ ಕಾವಲುಗೋಪುರವಿದ್ದು ಇದಕ್ಕೆ ಮೇಲ್ಭಾಗದಲ್ಲಿ ಸುತ್ತಲೂ ಮುಂಚಾಚಿದ ಪಟ್ಟಿಯನ್ನು ನಿರ್ಮಿಸಿ ಸುಂದರವಾಗಿ ಕಾಣುವಂತೆ

ಮಾಡಿದ್ದಾರೆ. ಕೋಟೆಯ ಒಳಗಡೆ ವಾಡೆ ಪ್ರಸ್ತುತ ನಾಶವಾಗಿದ್ದು ಅದರ ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಕೋಟೆಯ ಒಳಗೆ ನೈರುತ್ಯ ಭಾಗದಲ್ಲಿ ಬಾವಿಯಿದ್ದು ಇದಕ್ಕೆ ಹೊಂದಿಕೊಂಡು ೧೮ನೇ ಶತಮಾನದಲ್ಲಿ ನಿರ್ಮಾಣವಾದ ಗಣೇಶನ ಗುಡಿ ಇದೆ. ಸದ್ಯ ಈ ಕೋಟೆಯ ಒಳಗಡೆ ಸಂಗನಗೌಡ ತಮ್ಮನಗೌಡ ಪಾಟೀಲ(ಬ್ರಾಹ್ಮಣರು) ಇವರು ಕೋಟೆಯಲ್ಲಿ ಆಧುನಿಕ ಮನೆಗಳನ್ನು ನಿರ್ಮಿಸಿಕೊಂಡು ವಾಸವಿದ್ದಾರೆ.

ಸಿಂದಗಿ.

ಸಿಂದಗಿ ವಿಜಾಪುರ ಜಿಲ್ಲೆಯ ಒಂದು ತಾಲೂಕುಕೇಂದ್ರ. ಕ್ರಿ.ಶ. ೧೨೦೦ರಲ್ಲಿ ಸಿಂಧುಬಲ್ಲಾಳ ಎಂಬುವವನು ಸಿಂದಗಿಯನ್ನು ಆಳುತ್ತಿದ್ದುದರಿಂದ ಈ ಪ್ರದೇಶಕ್ಕೆ 'ಸಿಂದಗಿ'[೩೦೪] ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಆದರೆ ಕ್ರಿ.ಶ. ೧೦೪೦ರ[೩೦೫] ಎರಡನೇ ಸೋಮೇಶ್ವರನ ವಿಜಾಪುರ ಮ್ಯೂಸಿಯಂನಲ್ಲಿರುವ ಶಾಸನವು 'ಕಂಪಣ ಸಿಂದಿಗೆ ಹನ್ನೆರಡು' ಎಂದು ಉಲ್ಲೇಖಿಸುತ್ತದೆ. ಹೀಗಾಗಿ ಸಿಂಧುಬಲ್ಲಾಳ ಎಂಬ ವ್ಯಕ್ತಿಯಿಂದ ಈ ಹೆಸರು ಬರದೆ ಇದಕ್ಕಿಂತಲೂ ಪೂರ್ವದಲ್ಲಿ ಅಥವಾ ಕ್ರಿ.ಶ. ೧೦೪೦ಕ್ಕಿಂತ ಮೊದಲೇ ಈ ಪ್ರದೇಶಕ್ಕೆ ಸಿಂದಗಿ ಎಂಬ ಹೆಸರು ಬಂದಿತೆಂಬುದು ನನ್ನ ಅಭಿಪ್ರಾಯವಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಕ್ರಿ.ಶ. ೧೧೧೧,[೩೦೬] ಕ್ರಿ.ಶ. ೧೧೨೦,[೩೦೭] ಕ್ರಿ.ಶ. ೧೧೨೯ರ[೩೦೮] ವಿಜಾಪುರ ಮ್ಯೂಸಿಯಂನಲ್ಲಿರುವ ಶಾಸನಗಳು, ಕ್ರಿ.ಶ. ೧೧೩೩ರ[೩೦೯] ಮಲಘಾಣ, ಕ್ರಿ.ಶ. ೧೧೬೮ರ[೩೧೦] ಕಡ್ಲೇವಾಡ ಶಾಸನಗಳಲ್ಲಿ ಸಿಂದಿಗೆ, ಮಹಾಗ್ರಹಾರ ಸಿಂದಿಗೆ, ಸಿಂದಿಗೆ ಹನ್ನೆರಡು, ಹನ್ನೆರಡರ ಮೊದಲ ಬಾಡಂ ಸಿನ್ದಿಗೆ ಎಂದು ಉಲ್ಲೇಖಿಸುತ್ತವೆ. ಹೀಗಾಗಿ ಸಿಂದಗಿ ಎಂಬ ಹೆಸರು ಕಲ್ಯಾಣ ಚಾಳುಕ್ಯರ ಆಡಳಿತಾವಧಿಯಲ್ಲಾಗಲೇ ಹೆಚ್ಚು ಪ್ರಚಲಿತವಿದ್ದು ಕಂಡುಬರುತ್ತದೆ. ಆರ್.ಎಸ್. ಪಂಚಮುಖಿಯವರ ಪ್ರಕಾರ ಕದಂಬರ ರಾಜ್ಯವು ಉತ್ತರದಲ್ಲಿ ಸಿಂಧುಥಯರಾಷ್ಟ್ರ ಅಂದರೆ ಇಂದಿನ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕು, ಕರ್ಣೇಸಕನದಿ–ಕೃಷ್ಣಾನದಿಯವರೆಗೂ ವಿಸ್ತರಿಸಿತ್ತು ಎಂದು ಹೇಳುತ್ತಾರೆ.[೩೧೧] ಇಲ್ಲಿ ಉಲ್ಲೇಖಿಸಿರುವ ಸಿಂಧುಥಯರಾಷ್ಟ್ರವು ಸಿಂದಗಿಯೇ ಆಗಿದ್ದಲ್ಲಿ ಕದಂಬರ ಕಾಲಕ್ಕಾಗಲೆ ಇದೊಂದು ಗಡಿಪ್ರದೇಶವಾಗಿ ಈ ವೇಳೆಗೆ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು ಎಂದು ಅಭಿಪ್ರಾಯಿಸಬಹುದು ಆದರೂ ಈ ಕುರಿತಾಗಿ ಇನ್ನೂ ಅಧ್ಯಯನಗಳು ನಡೆಯಬೇಕಾದುದು ಅವಶ್ಯಕವಾಗಿ ಕಾಣುತ್ತದೆ. ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ಸಿಂದಗಿಯು ವಿಜಾಪುರ ಸರಕಾರದ ಪರಗಣವಾಗಿತ್ತು. ನಂತರ ಕ್ರಿ.ಶ. ೧೮೬೮ರಲ್ಲಿ ಸಿಂದಗಿ ತಾಲೂಕು ಕೇಂದ್ರವಾಗಿ ರೂಪಿತಗೊಳ್ಳುವವರೆಗೆ ಮಧ್ಯಯುಗೀನ ಚರಿತ್ರೆಯಲ್ಲಿ ಅಷ್ಟೊಂದು ಮಹತ್ವದಾಗಿ ಗುರುತಿಸಿಕೊಳ್ಳುವುದಿಲ್ಲ. ಆದರೂ ಕ್ರಿ.ಶ. ೧೮೨೪ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಸಿಂದಗಿ ಬಂಡಾಯ ಕರ್ನಾಟಕ ಇತಿಹಾಸದಲ್ಲಿ ಬೆಳ್ಳಿಚುಕ್ಕೆಯಾಗಿ ಕಂಡುಬರುತ್ತದೆ.

ಕಲ್ಯಾಣ ಚಾಳುಕ್ಯರ ಕಾಲಘಟ್ಟದಿಂದ ಗುರುತಿಸಿಕೊಳ್ಳುವ ಸಿಂದಗಿಯಲ್ಲಿ ಚಾಳುಕ್ಯರ ಕಾಲಕ್ಕೆ ಸಂಬಂಧಿಸಿದ ಕ್ರಿ.ಶ. ೧೧೨೦ರಲ್ಲಿ ನಿರ್ಮಿಸಿದ ಸಂಗಮೇಶ್ವರ ದೇವಾಲಯ(ಶಾಸನೋಕ್ತ ಮೂಲಸ್ಥಾನ)

ಪ್ರಮುಖವಾಗಿದೆ. ಸಿಂದಗಿಯ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ ಮತ್ತೊಂದು ಚಟ್ಟನ ದೇಗುಲವನ್ನು ಉಲ್ಲೇಖಿಸುತ್ತದೆ[೩೧೨] ಆದರೆ ಇಂದು ಅದು ಕಾಣಸಿಗುವುದಿಲ್ಲ. ಈ ಗ್ರಾಮದಲ್ಲಿ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ಕೋಟೆ ಇತ್ತು ಎಂದು ಕ್ಯಾಂಪ್‌ಬೆಲ್ ರಚಿಸಿದ ಗ್ಯಾಸೆಟಿಯರ್‌ನಲ್ಲಿ[೩೧೩] ಉಲ್ಲೇಖಿಸಲಾಗಿದೆ. ಆದರೆ ಇಂದು ಕೋಟೆಯ ಕುರಿತಾಗಿ ಯಾವುದೇ ಕುರುಹುಗಳು ನಮಗೆ ಕಾಣಸಿಗುವುದಿಲ್ಲ.

ಕ್ರಿ.ಶ. ೧೮೨೪ರಲ್ಲಿ ಸಿಂದಗಿ ಬಂಡಾಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚಿದಂಬರ ದೀಕ್ಷಿತ ಹಾಗೂ ದಿವಾಕರ ದೀಕ್ಷಿತರು ಬ್ರಿಟಿಷರ ವಿರುದ್ಧ ದಂಗೆಯೆದ್ದು ಸಿಂದಗಿ ಕೋಟೆಯನ್ನು ವಶಪಡಿಸಿಕೊಂಡು ತಮ್ಮ ಹಿಡಿತದಲ್ಲಿಟ್ಟುಕೊಂಡರು. ಧಾರವಾಡದ ಬ್ರಿಟಿಷ್ ಕಲೆಕ್ಟರ್ ಈ ದಂಗೆಯನ್ನು ಅಡಗಿಸಿ ಕೋಟೆಯನ್ನು ತಮ್ಮ ವಶಕ್ಕೆ ಪಡೆದುಕೊಂಡ. ಅಲ್ಲದೆ ಕ್ರಿ.ಶ. ೧೮೬೬ರಲ್ಲಿ ಬ್ರಿಟಿಷರು ಸಿಂದಗಿ ಕೋಟೆಯನ್ನು ಸಂಪೂರ್ಣವಾಗಿ ನಾಶಗೊಳಿಸಿದರಲ್ಲದೆ ಕೋಟೆಗೆ ಬಳಸಿದ ಕಲ್ಲು ಮತ್ತು ಮಣ್ಣನ್ನು ತೆಗೆದುಕೊಂಡು ಸಿಂದಗಿಯಲ್ಲಿ ಸಬ್ ಡಿವಿಜನ್ ಕಛೇರಿಯನ್ನು ಕಟ್ಟಲಾಯಿತು ಎಂದು ತಿಳಿದುಬರುತ್ತದೆ.[೩೧೪] ಕೋಟೆಯ ಕುರಿತಾಗಿ ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಯಾವುದೇ ಕುರುಹುಗಳು ಲಭ್ಯವಾಗಿಲ್ಲ. ಸ್ಥಳೀಯರು ಹೇಳುವಂತೆ ಈಗಿನ ಹಳೆ ಬಜಾರನ ಬಸವಣ್ಣದೇವರ ಗುಡಿಯ ಹತ್ತಿರ ಉತ್ತರಕ್ಕೆ ಮುಖ ಮಾಡಿ ಒಂದು ದ್ವಾರಬಾಗಿಲಿತ್ತು ಎಂದು ಹೇಳುತ್ತಾರೆ. ಅದಕ್ಕೆ ಪೂರಕವೆಂಬಂತೆ ಆ ಸ್ಥಳದ ಹತ್ತಿರವೇ ಆಂಜನೇಯನ ದೇವಸ್ಥಾನವಿದೆ(ಪ್ರತಿಯೊಂದು ರಾಜಧಾನಿ, ಪಟ್ಟಣ, ಗ್ರಾಮಗಳಲ್ಲಿ ನಿರ್ಮಿಸಿದ ಕೋಟೆಯ ದ್ವಾರಬಾಗಿಲ ಮುಂದೆ ವೀರತ್ವದ ಸಂಕೇತವಾಗಿ ಆಂಜನೇಯ ದೇವಸ್ಥಾನವಿರುವುದನ್ನು ನಾವು ಕಾಣಬಹುದು). ಹೀಗಾಗಿ ಅಲ್ಲಿ ಕೋಟೆದ್ವಾರ ಇದ್ದಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಒಟ್ಟಾರೆ ವಿಜಾಪುರ ಜಿಲ್ಲೆಯ ಪರಿಸರವನ್ನು ನೈಸರ್ಗಿಕವಾಗಿ ಕೃಷ್ಣಾ, ಭೀಮಾ ಮತ್ತು ಮಧ್ಯದ ಡೋಣಿ ಕಣಿವೆ ಎಂದು ಮೂರು ಪಟ್ಟಿಕೆಗಳನ್ನಾಗಿ ವಿಂಗಡಿಸಿಕೊಂಡು ನೋಡಲಾಗಿ ಈ ನದಿಯ ಕಣಿವೆಗಳು ಫಲವತ್ತಾದ ಕಪ್ಪುಮಣ್ಣಿನಿಂದ ಕೂಡಿದ್ದು ಸಮೃದ್ಧ ಆಹಾರಧಾನ್ಯಗಳ ಉತ್ಪಾದನೆಗೆ ಪ್ರಸಿದ್ಧವಾಗಿವೆ. ಡೋಣಿ ಕಣಿವೆಯ ಪ್ರದೇಶವನ್ನು 'ಧಾನ್ಯದ ಕಣಜ'ವೆಂದೇ ಕರೆಯುತ್ತಾರೆ. ಈ ಕಣಿವೆ ಪ್ರದೇಶದಲ್ಲಿ ಅನೇಕ ಹಳ್ಳಕೊಳ್ಳಗಳು ಹರಿಯುತ್ತಿದ್ದು ಮಾನವವಸತಿಗೆ ಪ್ರಶಸ್ತವಾಗಿರುವ ಅಂಶ ತಿಳಿದುಬರುತ್ತದೆ. ಹೀಗಾಗಿ ಈ ನದಿ ಕಣಿವೆಗಳಲ್ಲಿ ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಬಳಸಿಕೊಂಡು ಅನೇಕ ಕೋಟೆ–ಕೊತ್ತಲಗಳನ್ನು ನಿರ್ಮಿಸಲಾಗಿದೆ. ಸ್ಥಳೀಯವಾಗಿ ಸಿಗುವ ಕಪ್ಪುಕಲ್ಲು(ಬೆಸಾಲ್ಟ್) ಮತ್ತು ಸುಣ್ಣದ (ಲೈಮ್) ಶಿಲೆಗಳು ಗಟ್ಟಿತನ, ಬಾರ ಮತ್ತು ಬಾಳಿಕೆ ಬರುವ ಲಕ್ಷಣವಿರುವುದರಿಂದ ಇವುಗಳನ್ನೇ ಕೋಟೆಗಳ ನಿರ್ಮಾಣದಲ್ಲಿ ಬಳಸಿಕೊಳ್ಳಲಾಗಿದೆ. ಹೀಗಾಗಿ ನೂರಾರು ವರ್ಷ ಕಳೆದರೂ ಅವು ಇಂದಿಗೂ ಉಳಿದುಕೊಂಡು ಬಂದಿವೆ.

ಸಮತಟ್ಟಾದ ಭೂಪ್ರದೇಶವನ್ನು ಹೊಂದಿರುವುದರಿಂದ ಇಲ್ಲಿ ನಿರ್ಮಾಣವಾದ ಎಲ್ಲ ಕೋಟೆಗಳು ಸ್ಥಳದುರ್ಗಗಳಾಗಿವೆ. ನದಿತೀರದಲ್ಲಿ ನಿರ್ಮಾಣವಾದ ತಾಳಿಕೋಟೆ, ಬಲದಿನ್ನಿಯಂತಹ ಕೆಲವು ಕೋಟೆಗಳು ಜಲದುರ್ಗದಂತೆ ಕಂಡುಬಂದರೂ ಅವು ಕೋಟೆಯ ಒಂದು ಪಾರ್ಶ್ವಕ್ಕೆ ಮಾತ್ರ ರಕ್ಷಣೆಯನ್ನು ಪಡೆಯುತ್ತವೆ. ಈ ಅಧ್ಯಯನವನ್ನು ಇಡಿಯಾಗಿ ನೋಡಿದಲ್ಲಿ ಮತ್ತು ಅಧ್ಯಯನದ ನಿಮಿತ್ತ ಕೈಗೊಂಡ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಹೇಳಬೇಕಾದರೆ ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯದ ಈ ಭೂಪ್ರದೇಶದಲ್ಲಿ ಒಟ್ಟು ೪೦ ಕೋಟೆಗಳನ್ನು ದಾಖಲಿಸಿ ವಿಶ್ಲೇಷಿಸಲಾಗಿದೆ.

ಇತಿಹಾಸ ಕಾಲಘಟ್ಟದಿಂದ ಜಿಲ್ಲೆಯು ಮೌರ್ಯ, ಶಾತವಾಹನ, ಕದಂಬರು, ಬಾದಾಮಿ ಚಾಳುಕ್ಯರ ಆಡಳಿತ ವ್ಯಾಪ್ತಿಗೆ ಈ ಪ್ರದೇಶ ಒಳಪಟ್ಟಿತ್ತು ಎಂದು ಹೇಳಲಾಗುತ್ತದೆ. ಆದರೆ ಇವರ ಆಳ್ವಿಕೆಯ ಕುರಿತಾಗಿ ಯಾವುದೇ ಪುರಾತತ್ವೀಯ ಆಕರಗಳು ನಮಗೆ ಲಭ್ಯವಾಗಿಲ್ಲ. ಕ್ರಿ.ಶ. ೫೪೩ರಲ್ಲಿ ಒಂದನೇ ಪುಲಕೇಶಿಯಿಂದ ಬಾದಾಮಿಯಲ್ಲಿ ನಿರ್ಮಾಣವಾದ ಕೋಟೆಯು ಪ್ರಥಮ ಶಾಸನೋಕ್ತ ಕೋಟೆಯಾಗಿದೆ. ಬಾದಾಮಿ ವಿಜಾಪುರ ಜಿಲ್ಲೆಗೆ ತೀರ ಹತ್ತಿರದಲ್ಲಿರುವುದರಿಂದ ಬಾದಾಮಿ ಕೋಟೆಯ ಪ್ರಭಾವವು ಈ ಪ್ರದೇಶದಲ್ಲಿ ಬೀರಬಹುದಾಗಿದ್ದರೂ ಇಲ್ಲಿ ಕೋಟೆಗಳ ನಿರ್ಮಾಣಕ್ಕೆ ಮನಸ್ಸು ಮಾಡಿರಲಿಲ್ಲವೆಂದು ತೋರುತ್ತದೆ. ಅಲ್ಲದೆ ಸಾಮಾನ್ಯವಾಗಿ ಅವರ ಆಡಳಿತಕ್ಕೆ ತೀರ ಹತ್ತಿರವಾದ ಭಾಗವಾಗಿರುವುದರಿಂದ ಇಲ್ಲಿ ಕೋಟೆಯ ನಿರ್ಮಾಣದ ಅವಶ್ಯಕತೆ ಅವರಿಗೆ ಉಂಟಾಗಿರಲಿಲ್ಲ. ಹೀಗಾಗಿ ಇವರ ಕಾಲಘಟ್ಟದಲ್ಲಿ ಕೋಟೆಗಳ ನಿರ್ಮಾಣಕ್ಕೆ ಕೈಹಾಕಲಿಲ್ಲವೆಂದು ತೋರುತ್ತದೆ.

ಬಾದಾಮಿ ಚಾಲುಕ್ಯರ ನಂತರ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದ ಮೇಲೆ ತರ್ದವಾಡಿಯು(ಇಂದಿನ ತದ್ದೇವಾಡಿ) ಪ್ರಮುಖ ಆಡಳಿತ ವಿಭಾಗವಾಗಿದ್ದು, ಅದರಲ್ಲಿ ಅನೇಕ ಉಪವಿಭಾಗಗಳನ್ನು ಹೊಂದಿತ್ತು. ಇವುಗಳನ್ನು ಇವರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣ ಚಾಳುಕ್ಯ, ಕಳಚುರಿ, ಸೇವುಣರು ಮುಂದುವರಿಸಿಕೊಂಡು ಬಂದಿರುವುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ. ರಾಷ್ಟ್ರಕೂಟರ ಕಾಲದಲ್ಲಿಯೇ ಪ್ರಮುಖ ಆಡಳಿತ ವಿಭಾಗವಾಗಿ ಬಂದ ತರ್ದವಾಡಿ ಸಾಸಿರದಲ್ಲಿ ಇವರ ಆಳ್ವಿಕೆಯ ಕಾಲಾವಧಿಗೆ ಸಂಬಂಧಿಸಿದ ಕೋಟೆಗಳು ನಿರ್ಮಾಣವಾಗಿರಬಹುದು. ಆದರೆ ಅದರ ಕುರಿತಾಗಿ ನಮಗೆ ಯಾವುದೇ ಶಾಸನ ಮತ್ತು ಪುರಾತತ್ವೀಯ ಆಕರಗಳು ಕಂಡುಬರುವುದಿಲ್ಲ. ಹೀಗಾಗಿ ಲಭ್ಯ ಆಕರಗಳ ಹಿನ್ನೆಲೆಯಲ್ಲಿ ವಿಜಾಪುರ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಅನೇಕ ಕೋಟೆಗಳು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಕೆಲವು ಶಾಸನಗಳು ಕೋಟೆಯ ಕುರಿತಾಗಿ ಉಲ್ಲೇಖಿಸುತ್ತವೆ. ಇವುಗಳಲ್ಲಿ ಇಂಗಳೇಶ್ವರ ಗ್ರಾಮದಲ್ಲಿ ನಿರ್ಮಾಣವಾದ ಕೋಟೆಯ ಅವಶೇಷಗಳು ಇದುವರೆಗೂ ಉಳಿದುಕೊಂಡು ಬಂದಿವೆ. ಉಳಿದಂತೆ ಮುತ್ತಿಗಿ, ಹೆಬ್ಬಾಳ, ತದ್ದೇವಾಡಿ, ಸಿಂದಗಿ, ಆಲಮೇಲ, ಕುಮಸಗಿ, ರೂಗಿ, ಕನ್ನೂರ, ತಂಬ, ನಾಲತವಾಡ, ಕಂಬಾಗಿ, ಹಡಗಲಿ ಮುಂತಾದ ಇಂದಿನ ಗ್ರಾಮಗಳು ಪ್ರಾಚೀನ ಕಾಲದಲ್ಲಿ ತರ್ದವಾಡಿ ನಾಡಿನ ಆಡಳಿತದ

ಉಪವಿಭಾಗಗಳಾಗಿದ್ದು, ಇಲ್ಲಿಯ ಆಡಳಿತವರ್ಗವು ಕೋಟೆಯನ್ನು ಕಟ್ಟಿಸಿದ್ದು ತಿಳಿದುಬರುತ್ತದೆ. ಆಲಮೇಲ, ತಾಳಿಕೋಟೆ, ಇಂಗಳೇಶ್ವರ, ವಿಜಾಪುರದ ಅರಕಿಲ್ಲಾಗಳಲ್ಲಿ ಕಲ್ಯಾಣ ಚಾಳುಕ್ಯರ ಕಾಲಾವಧಿಯಲ್ಲಿಯೇ ಕೋಟೆಯು ನಿರ್ಮಾಣವಾಗಿದ್ದು, ಅವು ಕಾಲಘಟ್ಟದಲ್ಲಿ ಜೀರ್ಣೋದ್ಧಾರಗೊಂಡು ರಚನೆಯಲ್ಲಿ ಬೇರೆ ರೂಪವನ್ನು ಪಡೆದುಕೊಂಡಿವೆ ಎಂಬುದು ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದುಬರುತ್ತದೆ. ಇನ್ನುಳಿದ ಪ್ರದೇಶಗಳಲ್ಲಿ ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿರುವುದನ್ನು ಕಾಣುತ್ತೇವೆ. ಇವರ ಕಾಲದಲ್ಲಿ ನಿರ್ಮಾಣವಾದ ದೇವಾಲಯ ಹಾಗೂ ಇತರೆ ಕಟ್ಟಡಗಳು ಸೇವುಣರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದ್ದರೂ ಅವು ಮುಂದೆ ಇಡೀ ದಕ್ಷಿಣ ಭಾರತವನ್ನು ಆಕ್ರಮಿಸಿದ ಮುಸ್ಲಿಮರ ಪ್ರಭುತ್ವಕ್ಕೆ ಸಿಕ್ಕು ಅವು ನಾಶ ಹೊಂದಿ, ಅದೇ ಸ್ಥಳದಲ್ಲಿ ಮತ್ತೆ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಹೊಸದಾಗಿ ಕೋಟೆಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣಬಹುದು.

ಕ್ರಿ.ಶ. ೧೪ನೆಯ ಶತಮಾನದ ಪ್ರಥಮ ಪಾದದಲ್ಲಿ ಇಡೀ ದಕ್ಷಿಣ ಭಾರತವು ದೆಹಲಿ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿತ್ತು. ಆದರೆ ಅವರ ಆಳ್ವಿಕೆ ಅಲ್ಪಕಾಲಾವಧಿಯಲ್ಲಿಯೇ ಕೊನೆಗೊಂಡಿದ್ದರಿಂದ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಹಾಗೂ ಕ್ರಿ.ಶ. ೧೩೪೭ರಲ್ಲಿ ಬಹಮನಿ ಸಾಮ್ರಾಜ್ಯಗಳು ಸ್ಥಾಪಿತವಾದವು. ಆಗ ವಿಜಾಪುರವು ಬಹಮನಿಗಳ ಆಡಳಿತಕ್ಕೆ ಒಳಪಟ್ಟಿದ್ದು ತಿಳಿದುಬರುತ್ತದೆ. ಮೂಲ ತರ್ದವಾಡಿ ಆಡಳಿತ ವಿಭಾಗಗಳೆಲ್ಲವನ್ನು ಪ್ರಾಂತ, ಪರಗಣಗಳನ್ನಾಗಿ ಮತ್ತು ಜಹಾಗೀರಗಳನ್ನಾಗಿ ವಿಂಗಡಿಸಲಾಯಿತು. ಈ ಅವಧಿಯಲ್ಲಿ ವಿಜಾಪುರವು ಗುಲಬರ್ಗಾ ಪ್ರಾಂತದ ಒಂದು ಪರಗಣವಾಗಿದ್ದು ಮುಂದೆ ಕ್ರಿ.ಶ. ೧೪೮೦ರಲ್ಲಿ ಅದೊಂದು ಪ್ರತ್ಯೇಕ ಪ್ರಾಂತವಾಗಿ ವಿಭಾಗವಾಗುತ್ತದೆ. ಇದೇ ವೇಳೆಯಲ್ಲಿ ಬಹಮನಿ ಸಾಮ್ರಾಜ್ಯ ಒಡೆದು ಐದು ಶಾಹಿ ಮನೆತನಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆದಿಲ್‌ಶಾಹಿಗಳು ಇಲ್ಲಿ ಆಡಳಿತವನ್ನು ಸ್ಥಾಪಿಸಿದರು. ಮುಖ್ಯವಾಗಿ ಕ್ರಿ.ಶ. ೧೪ನೆಯ ಶತಮಾನವು ರಾಜಕೀಯವಾಗಿ ಸಂಕೀರ್ಣವಾದ ಕಾಲಘಟ್ಟವಾಗಿದ್ದು ಅದು ಸಂಘರ್ಷಗಳಿಂದ ತುಂಬಿಹೋಗಿತ್ತು. ಈ ಸಂಘರ್ಷಗಳು ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದವರೆಗೆ ಮುಂದುವರಿದುಕೊಂಡು ಬರುತ್ತವೆ. ವಿಜಯನಗರ ಪತನವಾದ ಮೇಲೆ ಈ ಸಂಘರ್ಷಗಳು ಕೊನೆಯಾದವು ಎನ್ನುವಷ್ಟರಲ್ಲಿ ದಕ್ಷಿಣದ ಶಾಹಿಸುಲ್ತಾನರು, ಅನೇಕ ಸಣ್ಣಪುಟ್ಟ ಸಂಸ್ಥಾನಿಕರು ತಮ್ಮ ಪರಸ್ಪರ ದ್ವೇಷ, ಅಸೂಯೆಗಳಿಂದ ಪ್ರೇರಿತರಾಗಿ ದಕ್ಷಿಣದ ರಾಜಕೀಯ ಸಾರ್ವಭೌಮತ್ವಕ್ಕಾಗಿ ಪರಸ್ಪರ ಪ್ರತಿಸ್ಪರ್ಧಿಗಳಾಗಿ ಹೋರಾಟದಲ್ಲಿ ತೊಡಗಿದರು. ಈ ಹಿನ್ನೆಲೆಯಲ್ಲಿ ವಿಜಾಪುರ, ಬೆಳಗಾವಿ, ಗುಲಬರ್ಗಾ, ರಾಯಚೂರು, ಸಗರ, ಹಲಸಂಗಿ, ಮಮದಾಪುರಗಳಲ್ಲಿ ಮತ್ತಷ್ಟು ಗಟ್ಟಿಮುಟ್ಟಾದ ಅಭೇದ್ಯವಾದ ಕಲ್ಲಿನ ಕೋಟೆಗಳು ನಿರ್ಮಾಣವಾದವು. ಅಲ್ಲದೆ ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಯುದ್ಧತಾಂತ್ರಿಕತೆಯಲ್ಲಿ ಆದ ಕ್ರಾಂತಿಕಾರಕ ಬದಲಾವಣೆಯಿಂದ ಮತ್ತು ಸಿಡಿಮದ್ದಿನ ಬಳಕೆಯಿಂದ ಮನುಷ್ಯನನ್ನು ಮತ್ತಷ್ಟು ವಿಚಾರಶೀಲನನ್ನಾಗಿ ಮಾಡಿತು. ಜೊತೆಗೆ ಈ ಕಾಲಾವಧಿಯಲ್ಲಿ ಬಯಲುಕಾಳಗಗಳಿಗಿಂತ ಹೆಚ್ಚಾಗಿ ಕೋಟೆ ಕಾಳಗಗಳು

ನಡೆದಿವೆ. ಈ ಹಿನ್ನೆಲೆಯಲ್ಲಿ ಕೋಟೆಯ ರಚನೆಯು ಕೂಡ ಶತ್ರುಗಳ ಬಲಿಷ್ಠತೆಗೆ ಅನುಗುಣವಾಗಿ ನಿರ್ಮಾಣವಾದವು. ಪ್ರತಿಯೊಬ್ಬ ಅರಸನೂ ಒಬ್ಬರ ಮೇಲೆ ಇನ್ನೊಬ್ಬರ ಅವಲಂಬನೆ ಹೆಚ್ಚಾಯಿತು. ಈ ಸಮಯದಲ್ಲಿ ಯುದ್ಧವು ಆಗಾಗ ಜರಗುತ್ತಿದ್ದರೂ ಅಲ್ಪಾವಧಿಯಲ್ಲಿಯೇ ಜಯದ ನಿರ್ಣಯವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕೋಟೆಗಳ ನಿರ್ಮಾಣದಲ್ಲಿ ಅಧಿಕಾರದ ಪೈಪೋಟಿ ನಡೆದದ್ದು ಕಂಡುಬರುತ್ತದೆ. ಇದರಿಂದ ಪ್ರೇರಿತರಾದ ಸ್ಥಳೀಯ ದೇಸಗತಿ ಆಡಳಿತಗಾರರೂ ಬಲಿಷ್ಠವಾದ ಕೋಟೆಗಳನ್ನು ನಿರ್ಮಿಸುವಲ್ಲಿ ತಮ್ಮ ಪ್ರತಿಷ್ಠೆಯನ್ನು ಮೆರೆದದ್ದು ಕಂಡುಬರುತ್ತದೆ. ಕೆಲವೊಮ್ಮೆ ಇತರ ಕೆಳಗಿನ ದೇಸಗತಿಗಳು, ಗ್ರಾಮದ ಪ್ರಮುಖ ಆಡಳಿತವರ್ಗ, ಗ್ರಾಮದ ಜನರು ಹಾಗೂ ಪ್ರತಿಷ್ಠಿತರು ಕೋಟೆಗಳ ನಿರ್ಮಾಣದಲ್ಲಿ ತಮ್ಮ ಮೇಲಿನ ಇತರ ಶ್ರೀಮಂತವರ್ಗದವರನ್ನು ಮೀರಿಸಿದ್ದೂ ಕಂಡುಬರುತ್ತದೆ. ಅಲ್ಲದೆ ಆದಿಲ್‌ಶಾಹಿಗಳು ಮತ್ತು ಹಿಂದೂ ರಾಜಮನೆತನವಾದ ವಿಜಯನಗರದ ಮಧ್ಯೆ ಸುದೀರ್ಘವಾದ ಕಾಳಗಗಳು ನಡೆದುಕೊಂಡು ಬಂದಿವೆ. ಆದರೆ ಇವರ ಮಧ್ಯದ ಗಡಿರೇಖೆಯಾದ ಕೃಷ್ಣಾನದಿ ಪ್ರದೇಶ ಹಾಗೂ ಜಿಲ್ಲೆಯ ಶೇ. ೮೦ರಷ್ಟು ಭಾಗದಲ್ಲಿ ಹಿಂದೂಧರ್ಮದ ದೇಸಗತಿ ಮನೆತನಗಳೇ ಸ್ಥಳೀಯ ಆಡಳಿತಗಾರರಾಗಿ ಕಾರ್ಯ ನಿರ್ವಹಿಸಿದ್ದು ಕಂಡುಬರುತ್ತದೆ. ಆದರೂ ಇವರು ಕೋಟೆಗಳನ್ನು ನಿರ್ಮಿಸಿಕೊಳ್ಳುವುದರ ಮೇಲೆ ಆದಿಲ್‌ಶಾಹಿಗಳು ಯಾವುದೇ ರೀತಿಯ ನಿರ್ಬಂಧ ಹೇರದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಹೀಗಾಗಿ ಆದಿಲ್‌ಶಾಹಿಗಳ ಧಾರ್ಮಿಕ ಸಹಿಷ್ಣುತೆಯನ್ನು ಕೋಟೆಗಳ ನಿರ್ಮಾಣದ ಹಿನ್ನೆಲೆಯಲ್ಲಿ ಮತ್ತಷ್ಟು ಸ್ಪಷ್ಟಪಡಿಸಬಹುದು. ಹೀಗಾಗಿ ಈ ಕಾಲಾವಧಿಯಲ್ಲಿ ವಿಜಾಪುರ ಜಿಲ್ಲೆಯಲ್ಲಿ ಅನೇಕ ಕೋಟೆಗಳು ನಿರ್ಮಾಣವಾದವು.

ಆದಿಲ್‌ಶಾಹಿಗಳ ಅವನತಿಯ ನಂತರ ವಿಜಾಪುರ ಪ್ರದೇಶವು ಮೊಗಲರು, ನಂತರ ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿತು. ದಖ್ಖನಿನಲ್ಲಿ ಚಕ್ರಾಧಿಪತ್ಯ ಸ್ಥಾಪಿಸುವ ನಿಜಾಮನ ಧೋರಣೆಗೆ ಮರಾಠರು ಪ್ರತಿರೋಧವಾಗಿದ್ದರು. ಕ್ರಿ.ಶ. ೧೭೬೦ರಲ್ಲಿ ನಡೆದ ಯುದ್ಧದಲ್ಲಿ ಜಯವನ್ನು ಸಾಧಿಸಿದ ಮರಾಠರ ಅಧೀನಕ್ಕೆ ವಿಜಾಪುರ ಪ್ರಾಂತದ ಹೆಚ್ಚಿನ ಪ್ರದೇಶಗಳು ಹೈದರಾಬಾದ್ ನಿಜಾಮನಿಂದ ವರ್ಗಾಯಿಸಲ್ಪಟ್ಟವು. ಇದೇ ವೇಳೆಗೆ ಪ್ರಬಲರಾಗಿದ್ದ ಮೈಸೂರಿನ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ತಮ್ಮ ರಾಜ್ಯವನ್ನು ಮತ್ತಷ್ಟು ವಿಸ್ತರಿಸಬೇಕು ಎಂಬ ಮನೋಭಾವನೆಯಿಂದ ಕೃಷ್ಣಾನದಿಯವರೆಗೂ ದಾಳಿ ಕೈಗೊಂಡರು. ಆಗ ಹೈದರಾಬಾದ್ ನಿಜಾಮ, ಮರಾಠರು ಹಾಗೂ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಮಧ್ಯೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಹೀಗಾಗಿ ವಿಜಾಪುರ ಪ್ರದೇಶವನ್ನೊಳಗೊಂಡಂತೆ ಉತ್ತರ ಕರ್ನಾಟಕದ ಬಹುತೇಕ ಭಾಗಗಳು ಯುದ್ಧ, ದರೋಡೆಗಳಿಂದಲೇ ತುಂಬಿಕೊಂಡಿದ್ದವು. ಈ ಸಮಯವನ್ನು ಸದುಪಯೋಗಪಡಿಸಿಕೊಂಡ ಬ್ರಿಟಿಷರು ದಕ್ಷಿಣ ಭಾರತದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಕ್ರಿ.ಶ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಬ್ರಿಟಿಷರ ಆಡಳಿತಾವಧಿಯಲ್ಲಿ ವಿಜಾಪುರವು ಮುಂಬೈ ಕರ್ನಾಟಕದ ಭಾಗವಾಗಿ ಮುಂದುವರಿಯಿತು. ಇಲ್ಲಿ ಕ್ರಿ.ಶ. ೧೮ರಿಂದ ೧೯ನೇ ಶತಮಾನದ ಒಂದು ರಾಜಕೀಯ ಸಂಘರ್ಷಗಳಿಂದ ತಪ್ಪಿಸಿಕೊಳ್ಳಲು

ಅನೇಕ ಪಾಳೆಯಪಟ್ಟುಗಳು, ಸಂಸ್ಥಾನಿಕರು, ಸ್ಥಳೀಯ ಆಡಳಿತಗಾರರಾದ ದೇಸಗತಿ ಮನೆತನಗಳು ತಮ್ಮ ಹಾಗೂ ಗ್ರಾಮದ ಜನರ ರಕ್ಷಣೆಗಾಗಿ ಅನೇಕ ಕೋಟೆಗಳನ್ನು ಕಟ್ಟಿಕೊಂಡರು. ಜಿಲ್ಲೆಯಲ್ಲಿ ಈ ಅವಧಿಯಲ್ಲಿ ನಿರ್ಮಾಣವಾದ ಕೋಟೆಗಳು ಮುಸ್ಲಿಂ ರಕ್ಷಣಾ ವಾಸ್ತುಶಿಲ್ಪದ ಲಕ್ಷಣಗಳನ್ನು ಅಳವಡಿಸಿಕೊಂಡರೂ ಮರಾಠರು ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ರಕ್ಷಿಸುವ ಹಾಗೂ ಇಸ್ಲಾಮಿನ ಹೆದ್ದೇರಿಗಳನ್ನು ತಡೆಯುವ ಮಹೋದ್ದೇಶಗಳಿಂದ ಕೋಟೆಯ ನಿರ್ಮಾಣದಲ್ಲಿ ಕೆಲವೊಂದು ಬದಲಾವಣೆಗಳಾದದ್ದನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾಗಿ ಕೋಟೆಗಳ ಮಧ್ಯೆ ವಾಡೆ ಎನ್ನುವ ವಿಶಿಷ್ಟವಾದ ದೇಸಗತಿ ಮನೆತನಗಳ ವಸತಿಗೃಹಗಳನ್ನು ಅಳವಡಿಸಲಾಗಿತ್ತು. ಈ ಪ್ರಕ್ರಿಯೆಯು ಮರಾಠರ ಕೋಟೆಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುತ್ತದೆ. ಮರಾಠರ ವಾಸ್ತುಶೈಲಿಯಿಂದ ಪ್ರಭಾವಿತವಾದ ಕೋಟೆಗಳನ್ನು ಜಿಲ್ಲೆಯ ಕೋಟ್ನಾಳ, ಸಾತಲಗಾಂವ, ಆಲಮೇಲ, ರಾಂಪೂರ, ಮಣೂರ, ಹಿರೇಮುರಾಳ, ಬಲದಿನ್ನಿ, ನಾಗಬೇನಾಳ, ತಾಳಿಕೋಟೆ, ಮುದ್ದೇಬಿಹಾಳ, ಬಸರಕೋಡ, ಯರಲಝೇರಿ, ಜೈನಾಪುರ, ಕಾಜೋರ್ಳ, ಬ್ಯಾಲ್ಯಾಳ, ಮಮದಾಪುರ ಮುಂತಾದ ಕೋಟೆಗಳಲ್ಲಿ ಕಾಣಬಹುದು. ಇಲ್ಲಿ ನಿರ್ಮಾಣವಾದ ವಾಡೆಗಳು ದೃಢವಾಗಿದ್ದು ಇದುವರೆಗೂ ಉಳಿದುಕೊಂಡು ಬಂದಿವೆ.

ಬ್ರಿಟಿಷರ ಅಧೀನಕ್ಕೆ ಈ ಪ್ರದೇಶವು ಒಳಪಟ್ಟ ನಂತರ ಮರಾಠರ ಆಡಳಿತದಲ್ಲಿ ಸ್ಥಳೀಯ ಆಡಳಿತಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಜಹಗೀರದಾರರು, ದೇಸಾಯಿಯರು, ದೇಶಮುಖರು, ಸಂಸ್ಥಾನಿಕರು, ದೇಶಪಾಂಡೆ, ನಾಡಗೌಡ ಮುಂತಾದ ಚಿಕ್ಕಪುಟ್ಟ ಆಡಳಿತಗಾರರು ಬ್ರಿಟಿಷರ ಅಧೀನಕ್ಕೊಳಪಟ್ಟರು. ಅಂದಿನಿಂದ ಅವರ ಆಡಳಿತವನ್ನು ಮೊಟಕುಗೊಳಿಸಿ ಅವರನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡರಲ್ಲದೆ, ಅವರು ಬ್ರಿಟಿಷರ ವಿರುದ್ಧ ದಂಗೆ ಏಳದಂತೆ ಸೂಕ್ತ ಕ್ರಮಗಳನ್ನು ಕೈಗೊಂಡರು. ಇಂತಹ ರಾಜಕೀಯ ವ್ಯವಸ್ಥೆಯಲ್ಲಿ ಕೋಟೆಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತ ಬಂದಿರುವುದನ್ನು ಕಾಣುತ್ತೇವೆ.

ಈ ರೀತಿಯಾಗಿ ಜಿಲ್ಲೆಯಲ್ಲಿ ಬೆಳೆದುಬಂದ ಕೋಟೆಗಳ ಪಕ್ಷಿನೋಟವನ್ನು ಇಡಿಯಾಗಿ ಗಮನಿಸಿದಾಗ ಹಾಗೂ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಆದಿಲ್‌ಶಾಹಿ ಆಡಳಿತಾವಧಿಯಲ್ಲಿಯೇ ಹೆಚ್ಚು ಕೋಟೆಗಳು ನಿರ್ಮಾಣಗೊಂಡಿದ್ದು ಕಂಡುಬರುತ್ತದೆ. ಹೀಗೆ ಕ್ರಿ.ಶ. ೧೯ ನೆಯ ಶತಮಾನದವರೆಗೆ ಜಿಲ್ಲೆಯ ರಾಜಧಾನಿಕೇಂದ್ರಿತ, ಸ್ಥಳೀಯ ಆಡಳಿತ ವಿಭಾಗಗಳಲ್ಲಿ ಹಾಗೂ ಪ್ರತಿ ಗ್ರಾಮಗಳಲ್ಲಿ ನಿರ್ಮಾಣಗೊಂಡ ಕೋಟೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ಪ್ರತಿ ಕೋಟೆ-ಕೊತ್ತಲಗಳ ಚಾರಿತ್ರಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ನಿರ್ಮಾಣದ ಉದ್ದೇಶ, ರಚನೆ, ವಾಸ್ತುವಿನ್ಯಾಸ, ತಂತ್ರಗಾರಿಕೆ ಹಾಗೂ ಅವುಗಳ ಮಹತ್ವವನ್ನು ಕುರಿತು ಮೊದಲ ಬಾರಿಗೆ ತಲಸ್ಪರ್ಶಿಯಾಗಿ ಅಧ್ಯಯನ ಇಲ್ಲಿ ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೧೦, ಸಂ.೮೦, ಪು.೩೪೩

೨. ಅದೇ, ಸಂ.೪೦, ಪು.೬೮ ಮತ್ತು ಸಂ.೪೨, ಪು.೭೧

೩. SII., Vol.XVIII, No.೧೬೫, p.೨೨೭ ಮತ್ತು No.೧೫೬, p.೨೦೯

೪. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಬಸಾತೀನೆ ಸಲಾತೀನ, ಪು.೨೨

೫. ಕ.ವಿ.ಶಾ.ಸಂ.೧೦, ಸಂ.೪೯, ಪು.೮೧

೬. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪು.೧೨೩

೭. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, ತಾರೀಖ–ಎ–ಫರಿಶ್ತಾ, ಭಾಗ.೩, ಪು.೪೮

೮. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೩

೯. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೨೦೨

೧೦. Henry Cousens, 1976, Bijapur and its Architectural Remains, p.೨೩

೧೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೩

೧೨. Henry Cousens, 1976, cited earlier, p.೨೫

೧೩. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೧೩, ಪು.೭೭

೧೪. ಮಹಮ್ಮದ್ ಸಿಬ್ಗತ್‌ಉಲ್ಲಾಹ್(ಅನು.), ೨೦೧೪, ಇಬ್ರಾಹೀಮನಾಮಾ, ಪು.೨೩

೧೫. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೫–೪೯

೧೬. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೧೭, ಪು.೮೧

೧೭. ಅದೇ, ಸಂ.೧೧೮, ಪು.೮೧

೧೮. ಅದೇ, ಸಂ.೧೧೯, ಪು.೮೨

೧೯. ಅದೇ, ಸಂ.೧೨೧, ಪು.೮೩

೨೦. Henry Cousens, 1976, cited earlier, p.೨೩

೨೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೮-೪೯

೨೨. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, ತಝ್ಕಿರತುಲ್ ಮುಲೂಕ್, ಪು.೧೫೨

೨೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೧೫

೨೪. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೮೧, ಪು.೧೧೮

೨೫. ಅದೇ, ಸಂ.೮೨, ಪು.೧೧೯

೨೬. ಅದೇ, ಸಂ.೮೧, ಪು.೧೧೭

೨೭. ಅದೇ, ಸಂ.೧೨೧, ಪು.೮೩

೨೮. ಅದೇ, ಸಂ.೧೨೪, ಪು.೮೫

೨೯. ಅದೇ, ಸಂ.೧೨೮, ಪು.೮೮

೩೦. ಅದೇ, ಸಂ.೧೨೯, ಪು.೮೮

೩೧. ಅದೇ, ಸಂ.೧೩೦, ಪು.೮೯

೩೨. ಅದೇ, ಸಂ.೧೩೧, ಪು.೮೯

೩೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೦೫-೧೦೬

೩೪. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೨೯-೧೩೦

೩೫. Henry Cousens, 1976, cited earlier, p.೨೮

೩೬. Nayeem M.A., 2008, The Heritage of the Adilshahis of Bijapur, p.೧೦೫

೩೭. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮೌಲಾನಾ ಮಹಬೂಬರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಫ್ತಕುರ್ಸಿ, ಪು.೨೧೬

೩೮. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೧೯-೧೧೨

೩೯. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೪೧, ಪು.೯೪

೪೦. ಅದೇ, ಸಂ.೧೪೨, ಪು.೯೫

೪೧. ಅದೇ, ಸಂ.೧೪೩, ಪು.೯೬

೪೨. ಅದೇ, ಸಂ.೧೪೬, ಪು.೯೭

೪೩. ಅದೇ, ಸಂ.೧೬೫, ಪು.೧೧೦

೪೪. ಅದೇ, ಸಂ.೧೪೯, ಪು.೯೯

೪೫. ಅದೇ, ಸಂ.೧೬೯, ಪು.೧೧೩

೪೬. ಅದೇ, ಸಂ.೧೭೦, ಪು.೧೧೩

೪೭. ಅದೇ, ಸಂ.೧೭೮, ಪು.೧೧೮

೪೮. ಅದೇ, ಸಂ.೨೧೪, ಪು.೧೩೫

೪೯. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೪, ಪೂರ್ವೋಕ್ತ, ಪು.೨೩

೫೦. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೪, ಪೂರ್ವೋಕ್ತ, ಪು.೭೨

೫೧. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೪, ಪೂರ್ವೋಕ್ತ, ಪು.೧೫೨

೫೨. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೦೫

೫೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೦

೫೪. James M. Campbell(Edit.), 1884, cited earlier, p.೫೬೮

೫೫. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೩೧

೫೬. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮೌಲಾನಾ ಮಹಬೂಬರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಫ್ತಕುರ್ಸಿ, ಪು.೨೨೭

೫೭. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೪, ಪೂರ್ವೋಕ್ತ, ಪು.೭೧

೫೮. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೫, ಅಲಿನಾಮಾ, ಪು.೧೫೫–೧೫೬

೫೯. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೭೩

೬೦. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೮೧

೬೧. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೦೨

೬೨. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೦೫

೬೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೦

೬೪. James M. Campbell(Edit.), 1884, cited earlier, p.೫೬೮

೬೫. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೭೫

೬೬. Nayeem M. A., 2008, cited earlier, p.೧೦೫

೬೭. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೩೧

೬೮. ಕುಲಕರ್ಣಿ ಆರ್.ಕೆ.,(ಅನು.), ೨೦೧೪, ಫುತೂಹತೆ ಅಲಂಗೀರ್, ಪು.೨೪೨

೬೯. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೬೯

೭೦. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೦

೭೧. James M. Campbell(Edit.), 1884, cited earlier, p.೫೬೮

೭೨. Joshi S. K., 1936, Defence Architecture in Early Karnataka, p.೧೧೩

೭೩. Henry Cousens, 1976, cited earlier, p.೨೮

೭೪. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೩೭

೭೫. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೭೩

೭೬. ಅಣ್ಣಿಗೇರಿ ಎ.ಎಂ., ೧೯೮೦, ವಿಜಾಪುರ ಶಿಲ್ಪಕಲಾ ವೈಭವ, ಪು.೪೯

೭೭. ಕ.ಪ.ಅ. ಮತ್ತು ಉ. ಶಾಸನಗಳು, ಸಂ.೧೩೨, ಪು.೯೦

೭೮. ಅಬ್ದುಲ್ ಜಯಿದಖಾನ್(ಅನು.), ೧೯೯೭, ಕಿತಾಬ್-ಎ-ನೌರಸ್, ಪು.೫೩

೭೯. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೩

೮೦. James M. Campbell (Edit.), 1884, cited earlier, p.೬೩೮

೮೧. ಕುಲಕರ್ಣಿ ಆರ್.ಕೆ.,(ಅನು.), ೨೦೧೪, ಪೂರ್ವೋಕ್ತ, ಪು.೨೪೨

೮೨. ಕ.ಪ.ಅ. ಮತ್ತು ಉ. ಶಾಸನಗಳು, ಸಂ.೧೪೧, ಪು.೯೪

೮೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೫೮

೮೪. ಕ.ಪ.ಅ. ಮತ್ತು ಉ. ಶಾಸನಗಳು, ಸಂ.೧೭೦, ಪು.೧೧೩

೮೫. ಕ.ಪ.ಅ. ಮತ್ತು ಉ. ಶಾಸನಗಳು, ಸಂ.೧೪೬, ಪು.೯೬

೮೬. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೮೧

೮೭. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೫೨

೮೮. ಕಡಕೋಳ ಎಚ್. ಎಂ.,(ಸಂ.), ೨೦೧೦, ಬಿಜಾಪುರ ಜಿಲ್ಲಾ ಸಾಂಸ್ಕೃತಿಯ ಪರಂಪರೆ, ಪು.೧೯೬

೮೯. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೪೯, ಪು.೯೯

೯೦. James M. Campbell(Edit.), 1884, cited earlier, p.೫೬೯

೯೧. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೪೨, ಪು.೯೫

೯೨. ಅದೇ, ಸಂ.೧೭೮, ಪು.೧೧೮

೯೩. ಅದೇ, ಸಂ.೧೪೩, ಪು.೯೬

೯೪. ಅದೇ, ಸಂ.೧೩೦, ಪು.೮೯

೯೫. ಅದೇ, ಸಂ.೨೧೪, ಪು.೧೩೫

೯೬. Henry Cousens, 1976, cited earlier, p.೩೨

೯೭. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೦೬

೯೮. James M. Campbell(Edit.), 1884, cited earlier, p.೫೭೧

೯೯. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, ಪೂರ್ವೋಕ್ತ, ಪು.೧೧೬

೧೦೦. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೨೧೪, ಪು.೧೩೫

೧೦೧. ತಿಪ್ಪೇಸ್ವಾಮಿ ಎಸ್., ೨೦೦೫, ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ,(ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೬೨

೧೦೨. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೩೦, ಪು.೮೯

೧೦೩. Henry Cousens, 1976, cited earlier, p.೩೫

೧೦೪. ಕುಲಕರ್ಣಿ ಆರ್.ಕೆ.,(ಅನು.), ೨೦೧೪, ಪೂರ್ವೋಕ್ತ, ಪು.೨೪೭

೧೦೫. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, ಪೂರ್ವೋಕ್ತ, ಪು.೧೧೬

೧೦೬. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೩೧, ಪು.೮೯

೧೦೭. ಅದೇ, ಸಂ.೧೬೫, ಪು.೧೧೦

೧೦೮. Nayeem M.A., 2008, cited earlier, p.೧೦೭

೧೦೯. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೨೯

೧೧೦. ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೨೯, ಪು.೮೮

೧೧೧. ಅದೇ, ಸಂ.೧೪೨, ಪು.೯೫

೧೧೨. ಅದೇ, ಸಂ.೧೭೮, ಪು.೧೧೮

೧೧೩. Henry Cousens, 1976, cited earlier, p.೩೫

೧೧೪. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೧೦೫

೧೧೫. ಚನ್ನಬಸಪ್ಪ ಎಸ್. ಪಾಟೀಲ, ೧೯೯೯, ಕರ್ನಾಟಕ ಕೋಟೆಗಳು, ಪು.೧೫೦

೧೧೬. ಕಡಕೋಳ ಎಚ್.ಎಂ.,(ಅನು.), ೨೦೧೧, ಪೂರ್ವೋಕ್ತ, ಪು.೧೭೯

೧೧೭. ಚನ್ನಬಸಪ್ಪ ಎಸ್. ಪಾಟೀಲ(ಲೇ.), ೧೯೯೯, ಬಿಜಾಪುರದ ತೋಪುಗಳು, ಇತಿಹಾಸ ದರ್ಶನ ಸಂ.೧೪, ಪು.೧೩೨

೧೧೮. ಸೋಮಶೇಖರ್ ಎಸ್.ವೈ., ೨೦೦೯, ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಪು.೫೮

೧೧೯. ಅಣ್ಣಿಗೇರಿ ಎ. ಎಂ., ೧೯೮೦, ಪೂರ್ವೋಕ್ತ, ಪು.೪೭

೧೨೦.ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೩೫, ಪು.೯೧

೧೨೧.ಅದೇ, ಸಂ.೧೨೦, ಪು.೮೨

೧೨೨.ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೦೦

೧೨೩.ಅದೇ, ಪು.೯೫

೧೨೪.ಅಣ್ಣಿಗೇರಿ ಎ.ಎಂ., ೧೯೮೦, ಪೂರ್ವೋಕ್ತ, ಪು.೪೮

೧೨೫.ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮೌಲಾನಾ ಮಹಬೂಬರ್ ರಹಮಾನ ಮದನಿ(ಅನು.), ೨೦೧೪, ತಾರೀಖೆ ಹಪ್ತಕುರ್ಸಿ, ಪು.೨೨೧

೧೨೬.ಷೇಕ್ ಅಲಿ ಬಿ., ೧೯೯೭, ಕರ್ನಾಟಕ ಚರಿತ್ರೆ ಸಂ.೪, ಪು.೧೧೧

೧೨೭.ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೦೦-೩೦೧

೧೨೮.ಮಹನೂರ್ ಜಮಾನಿ ಬೇಗಂ ಮತ್ತು ಇತರರು(ಅನು.), ೨೦೧೫, ಮೊಹಮ್ಮದ ನಾಮಾ, ಪು೭೪-೭೬

೧೨೯.ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೭೪, ಪು.೧೧೫

೧೩೦.ಮಹನೂರ್ ಜಮಾನಿ ಬೇಗಂ ಮತ್ತು ಇತರರು(ಅನು.), ೨೦೧೫, ಪೂರ್ವೋಕ್ತ, ಪು.೭೪

೧೩೧.ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೫, ಅಲಿನಾಮಾ, ಪು.೧೬೨

೧೩೨.ಕುಲಕರ್ಣಿ ಆರ್.ಕೆ.,(ಅನು.), ೨೦೧೪, ಪೂರ್ವೋಕ್ತ, ಪು.೨೪೭

೧೩೩.ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೦೧

೧೩೪. ASI, 2000, Revised Lists of Antiquarian Remains in the Bombay Presi dency, Vol.VIII, p.೧೭೭

೧೩೫. Henry Cousens, 1976, cited earlier, p.೬೪೧

೧೩೬.ಚೆನ್ನಬಸಪ್ಪ ಎಸ್. ಪಾಟೀಲ(ಲೇ.), ೧೯೯೯, ಪೂರ್ವೋಕ್ತ, ಸಂ.೧೪, ಪು.೧೯೩

೧೩೭.ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಸಂ.೧೫೫, ಪು.೧೦೩

೧೩೮.ಚೆನ್ನಬಸಪ್ಪ ಎಸ್. ಪಾಟೀಲ(ಲೇ.), ೧೯೯೯, ಪೂರ್ವೋಕ್ತ, ಸಂ.೧೪, ಪು.೧೯೩

೧೩೯. ASI, 2000, Revised Lists of Antiquarian Remains in the Bombay Presi dency, Vol.VIII, p.೧೭೭

೧೪೦. ಅಣ್ಣಿಗೇರಿ ಎ.ಎಂ., ೧೯೮೦, ಪೂರ್ವೋಕ್ತ, ಪು.೩೭

೧೪೧. ASI, 2000, Revised Lists of Antiquarian Remains in the Bombay Presi dency, Vol.VIII, p.೧೭೭

೧೪೨. ಚೆನ್ನಬಸಪ್ಪ ಎಸ್. ಪಾಟೀಲ(ಲೇ.), ೧೯೯೯, ಪೂರ್ವೋಕ್ತ, ಸಂ.೧೪, ಪು.೧೯೩

೧೪೩. ಕುಲಕರ್ಣಿ ಆರ್.ಕೆ.,(ಅನು.), ೨೦೧೪, ಪೂರ್ವೋಕ್ತ, ಪು.೨೪೭

೧೪೪. ಚೆನ್ನಬಸಪ್ಪ ಎಸ್. ಪಾಟೀಲ(ಲೇ.), ೧೯೯೯, ಪೂರ್ವೋಕ್ತ, ಸಂ.೧೪, ಪು.೧೯೩

೧೪೫. ಅದೇ, ಪು.೧೯೭

೧೪೬. ಮಹಮ್ಮದ್ ಸಿಬ್ಗತ್‌ಉಲ್ಲಾಹ್(ಅನು.), ೨೦೧೫, ಅಲಿನಾಮಾ, ಪು.೧೬೨

೧೪೭. ಕೃಷ್ಣ ಕೊಲ್ಹಾರಕುಲಕರ್ಣಿ. ೨೦೦೨, ಬಿಜಾಪುರ ಆದಿಲಶಾಹಿ, ಪು.೨೮೮

೧೪೮. ಅದೇ, ಪು.೨೮೯

೧೪೯. ASI, 2000, Revised Lists of Antiquarian Remains in the Bombay Pres dency, Vol.VIII, p.೧೭೪–೧೭೫

೧೫೦. Abdul Gani Imaratwale, 2007, History of Bijapur Subah, p.೫೭

೧೫೧. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೪೩೧

೧೫೨. ಕೃಷ್ಣ ಕೊಲ್ಹಾರಕುಲಕರ್ಣಿ. ೨೦೦೨, ಪೂರ್ವೋಕ್ತ, ಪು.೨೯೬

೧೫೩. Abdul Gani Imaratwale, 2007, cited earlier, p.೫೮

೧೫೪. Abdul Gani Imaratwale, 2007, cited earlier, p.೫೭

೧೫೫. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೩೬೫–೩೮೬

೧೫೬. ಅದೇ, ಪು.೫೮೧

೧೫೭. ಅದೇ, ಪು.೫೯೬–೫೯೭

೧೫೮. ಅದೇ, ಪು.೬೧೮–೬೨೦

೧೫೯. ಅದೇ, ಪು.೬೨೧–೬೨೨

೧೬೦. ಅದೇ, ಪು.೬೨೫

೧೬೧. ಮಹಮ್ಮದ್ ಸಿಬ್ಬತ್‌ಉಲ್ಲಾಹ್(ಅನು.), ೨೦೧೪, ಇಬ್ರಾಹೀಮನಾಮಾ, ಪು.೨೮ ಮತ್ತು ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೮೫

೧೬೨. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, ಪೂರ್ವೋಕ್ತ, ಪು.೨೨೭

೧೬೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೪೨

೧೬೪. ಅದೇ, ಪು.೨೩೯

೧೬೫. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, ಗುಲದಸ್ತಾಯೆ ಬಿಜಾಪುರ, ಪು.೧೩೩

೧೬೬. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, ಪೂರ್ವೋಕ್ತ, ಪು.೨೨೬ ಮತ್ತು ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೦೯೨

೧೬೭. ರವಿ ಎಸ್. ಚವ್ಹಾಣ, ೨೦೦೯, ಆದಿಲ್‌ಶಾಹಿಗಳ ಕಾಲದ ಪ್ರಮುಖ ಸ್ಮಾರಕಗಳು, ಪು.೨೫ –೨೬

೧೬೮. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೨೭೧

೧೬೯. ಕ.ವಿ.ಶಾ.ಸಂ.೧೦, ಸಂ.೮೪, ಪು.೧೨೯

೧೭೦. ಕ.ವಿ.ಶಾ.ಸಂ.೧೦, ಸಂ.೮೫, ಪು.೧೩೧

೧೭೧. ಕ.ವಿ.ಶಾ.ಸಂ.೧೦, ಸಂ.೮೬, ಪು.೧೩೨

೧೭೨. ಶೇಕದಾರ ವಿ.ಎಸ್., ೨೦೧೧, ವಿಜಾಪುರ ಜಿಲ್ಲೆಯ ದೇಸಗತಿಗಳು, ಪು.೮೮

೧೭೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೪೧–೫೪೨

೧೭೪. ಕ.ವಿ.ಶಾ.ಸಂ.೧೦, ಸಂ.೭೨, ಪು.೧೦೮

೧೭೫. ಕೊಪ್ಪಾ ಎಸ್.ಕೆ., ೧೯೯೦, ತರ್ದವಾಡಿ ನಾಡು, ಪು.೨೧

೧೭೬. Abdul Gani Imaratwale, 2007, cited earlier, p.೨೮೦

೧೭೭. ಅದೇ, ಪು.೨೦೭

೧೭೮. James M. Campbell(Edit.), 1884, cited earlier, p.೬೬೨

೧೭೯. Ramesh K.V.,(E.E.), Sampath M.D.(Edi.), 2003, Studies in Indian Epigra phy, Journal Vol.XXIX, p.೩೭–೪೦

೧೮೦. James M. Campbell(Edit.), 1884, cited earlier, p.೬೬೨

೧೮೧. ಅದೇ, ಪು.೬೬೨

೧೮೨. Abdul Gani Imaratwale, 2007, cited earlier, p.೨೦೬

೧೮೩. ಅದೇ, ಪು.೨೮೧

೧೮೪. ಶಿವತಾರಕ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೪೧೮

೧೮೫. ಬಾಗಾಯತ್ ವಿ.ಎಮ್.,(ಲೇ.), ೨೦೦೨, ನಿರ್ಲಕ್ಷಿತ ಕೋಟ್ನಾಳ ಕಿಲ್ಲೆಯ ಇತಿಹಾಸ, ಇತಿಹಾಸ ದರ್ಶನ ಸಂ.೧೭, ಪು.೨೨೮

೧೮೬. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೮೧

೧೮೭. ಅದೇ, ಪು.೮೧

೧೮೮. Abdul Gani Imaratwale, 2007, cited earlier, p.೨೮೦

೧೮೯. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೧೨೭

೧೯೦. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೨೧

೧೯೧. ಕ.ವಿ.ಶಾ.ಸಂ.೧೦, ಸಂ.೩೯, ಪು.೧೭೭

೧೯೨. ಅದೇ, ಸಂ.೪೫, ಪು.೧೮೩

೧೯೩. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೩೫

೧೯೪. ಅದೇ, ಪು.೩೫

೧೯೫. ಕ.ವಿ.ಶಾ.ಸಂ.೧೦, ಸಂ.೩೯, ಪು.೧೭೭

೧೯೬. ಅದೇ, ಸಂ.೩೭, ಪು.೧೭೫

೧೯೭. ಅದೇ, ಸಂ.೪೨, ಪು.೧೮೦

೧೯೮. Abdul Gani Imaratwale, 2007, cited earlier, p.೨೮೦

೧೯೯. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.

೨೦೦. ಕ.ವಿ.ಶಾ.ಸಂ.೧೦, ಸಂ.೭೦, ಪು.೨೧೪

೨೦೧. ಅದೇ, ಸಂ.೧೮, ಪು.೩೧

೨೦೨. ಅದೇ, ಸಂ.೭೨, ಪು.೨೧೫

೨೦೩. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೩೬

೨೦೪. ಕ.ವಿ.ಶಾ.ಸಂ.೧೦, ಸಂ.೧೮, ಪು.೩೧

೨೦೫. ಅದೇ, ಸಂ.೭೨, ಪು.೨೧೫

೨೦೬. ಅದೇ, ಸಂ.೭೧, ಪು.೨೧೫

೨೦೭. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೨೯

೨೦೮. ಕ.ವಿ.ಶಾ.ಸಂ.೧೦, ಸಂ.೭೩, ಪು.೨೨೦

೨೦೯. ಅದೇ, ಸಂ.೭೪, ಪು.೨೨೧

೨೧೦. ಮಧುರಚೆನ್ನರು(ಸಂಗ್ರಹಕಾರರು), ೧೯೪೪, ಹಲಸಂಗಿಯ ಹಿಂದಿನ ಇತಿಹಾಸ, ಜಯಕರ್ನಾಟಕ ಸಂ.೨೨, ಸಂ.೦೭

೨೧೧. Epigraphia Indica, Arabic and Persian Supplement, 1987, p.೪೬

೨೧೨. James M. Campbell(Edit.), 1884, cited earlier, p.೬೫೧

೨೧೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೩೦

೨೧೪. ಮಧುರಚೆನ್ನರು(ಸಂಗ್ರಹಕಾರರು), ೧೯೪೪, ಪೂರ್ವೋಕ್ತ, ಪು.೧೧

೨೧೫. James M. Campbell(Edit.), 1884, cited earlier, p.೬೫೧

೨೧೬. ಕಾಪಸೆ ಜಿ.ಎಸ್., ೧೯೭೬, ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ, ಪು.೧೧

೨೧೭. ಅದೇ, ಪು.೧೧

೨೧೮. ಅದೇ, ಪು.೧೨

೨೧೯. ಲಕ್ಷ್ಮೀದೇವಿ ಶಾಸ್ತ್ರೀ, ೨೦೦೫, ರಾಯಚೂರ ಕೋಟೆ ನರಬಲಿ ಪ್ರಸಂಗ, ಪು.೦೯

೨೨೦. ಕಾಪಸೆ ಜಿ.ಎಸ್., ೧೯೭೬, ಪೂರ್ವೋಕ್ತ, ಪು.೯-೧೦

೨೨೧. ಕ.ವಿ.ಶಾ.ಸಂ.೧೦, ಸಂ.೭೯, ಪು.೨೩೧

೨೨೨. ಅದೇ, ಸಂ.೪೨, ಪು.೧೮೦

೨೨೩. Abdul Gani Imaratwale, 2007, cited earlier, p.೨೮೦

೨೨೪. ವಾಸುದೇವ ಬಡಿಗೇರ(ಸಂ.), ೨೦೧೦, ಬಸವನ ಬಾಗೇವಾಡಿ, ಪು.೦೪

೨೨೫. ಅದೇ, ಪು.೩೨

೨೨೬. ಕ.ವಿ.ಶಾ.ಸಂ.೧೦, ಸಂ.೬೩, ಪು.೪೯೨

೨೨೭. ಅದೇ, ಸಂ.೦೧, ಪು.೩೮೭

೨೨೮. ಅದೇ, ಸಂ.೧೨, ಪು.೪೦೨

೨೨೯. ಅದೇ, ಸಂ.೦೧, ಪು.೩೮೫

೨೩೦. ಅದೇ, ಸಂ.೦೩, ಪು.೩೮೯

೨೩೧. ಕನ್ನಡ ನಿಘಂಟು ಸಂ.೦೬, ೧೯೯೦, ಪು.೫೬೯

೨೩೨. ಮಂಜುನಾಥ ಎಸ್. ಪಾಟೀಲ(ಲೇ.), ೨೦೧೫, ಇಂಗಳೇಶ್ವರ ಗ್ರಾಮದಲ್ಲಿನ ಕಲ್ಯಾಣ ಚಾಳುಕ್ಯರ ಕಾಲದ ಕೋಟೆ, ಇತಿಹಾಸ ದರ್ಶನ ಸ.೩೦, ಪು.೩೨೯

೨೩೩. ಕ.ವಿ.ಶಾ.ಸಂ.೧೦, ಸಂ.೦೩, ಪು.೩೮೮

೨೩೪. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೩೮

೨೩೫. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೨೦೮

೨೩೬. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೦೪

೨೩೭. ಅದೇ, ಪು.೦೮

೨೩೮. ಕ.ವಿ.ಶಾ.ಸಂ.೧೦, ಸಂ.೨೩, ಪು.೪೧೨

೨೩೯. ಅದೇ, ಸಂ.೨೪, ಪು.೪೧೪

೨೪೦. EI., XXI-XXII, ಅರ್ಜುನವಾಡ(ಬೆಳಗಾವಿ ಜಿಲ್ಲೆ), ಪು.೯–೧೪

೨೪೧. ವಾಸುದೇವ ಬಡಿಗೇರ(ಸಂ.), ೨೦೧೦, ಪೂರ್ವೋಕ್ತ, ಪು.೩೩

೨೪೨. ಅದೇ, ಪು.೨೧

೨೪೩. Abdul Gani Imaratwale, 2007, cited earlier, p.೨೦೩

೨೪೪. James M. Campbell(Edit.), 1884, cited earlier, p.೫೬೫

೨೪೫. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೩೪

೨೪೬. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೧೦೮

೨೪೭. ಅದೇ, ಪು.೧೦೮

೨೪೮. ಕ.ವಿ.ಶಾ.ಸಂ.೧೦, ಸಂ.೫೧, ಪು.೫೬೫

೨೪೯. ಅದೇ, ಸಂ.೫೫, ಪು.೫೭೨

೨೫೦. ಅದೇ, ಸಂ.೫೨, ಪು.೫೬೭

೨೫೧. ಶೇಷಾಚಲ ಹವಾಲ್ದಾರ ಮತ್ತು ಚಂದ್ರಗೌಡ ಕುಲಕರ್ಣಿ(ಸಂ.), ೨೦೦೪, ತಾಳಿಕೋಟೆ ಐತಿಹಾಸಿಕ ಹಿನ್ನೆಲೆ, ಪು.೦೩

೨೫೨. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೩೭

೨೫೩. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, ಪೂರ್ವೋಕ್ತ, ಪು.೫೪೩-೫೪೪

೨೫೪. Abdul Gani Imaratwale, 2007, cited earlier, p.೨೭೨

೨೫೫. James M. Campbell(Edit.), 1884, cited earlier, p.೬೭೮

೨೫೬. ಮೇಲಕಾರ ಎಸ್.ಕೆ. ಮತ್ತು ಚಲವಾದಿ ಎಸ್.ಜಿ.,(ಲೇ.), ೨೦೧೪, ಮುದ್ದೇಬಿಹಾಳ ತಾಲೂಕಿನ ಇತಿಹಾಸ ದರ್ಶನ, ಪು.೧೫೨

೨೫೭. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೩೪-೩೮

೨೫೮. ಕ.ವಿ.ಶಾ.ಸಂ.೧೦, ಸಂ.೨೩, ಪು.೫೩೨

೨೫೯. ಅದೇ, ಸಂ.೩೩, ಪು.೫೪೦

೨೬೦. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೩೯

೨೬೧. ಕ.ವಿ.ಶಾ.ಸಂ.೧೦, ಸಂ.೨೨, ಪು.೫೩೧

೨೬೨. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೧೫೪-೧೫೫

೨೬೩. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೧೯

೨೬೪. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೧೩೪-೧೧೩೫

೨೬೫. ಅದೇ, ಪು.೧೧೩೫

೨೬೬. ಕ.ವಿ.ಶಾ.ಸಂ.೧೦, ಸಂ.೦೨, ಪು.೫೦೮

೨೬೭. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೧೩೪

೨೬೮. James M. Campbell(Edit.), 1884, cited earlier, p.೬೬೩

೨೬೯. Abdul Gani Imaratwale, 2007, cited earlier, p.೨೭೭

೨೭೦. James M. Campbell(Edit.), 1884, cited earlier, p.೬೬೩

೨೭೧. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೪೨

೨೭೨. ಕ.ವಿ.ಶಾ.ಸಂ.೧೦, ಸಂ.೩೭, ಪು.೫೪೬

೨೭೩. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೪೩

೨೭೪. ಮೇಲಕಾರ ಎಸ್.ಕೆ. ಮತ್ತು ಚಲವಾದಿ ಎಸ್.ಜಿ.,(ಲೇ.), ೨೦೧೪, ಪೂರ್ವೋಕ್ತ, ಪು.೧೫೬

೨೭೫. ಕ.ವಿ.ಶಾ.ಸಂ.೧೦, ಸಂ.೫೮, ಪು.೫೭೪

೨೭೬. ಅದೇ, ಸಂ.೫೯, ಪು.೫೭೫

೨೭೭. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೨೭-೨೮

೨೭೮. ಕ.ವಿ.ಶಾ.ಸಂ.೧೦, ಸಂ.೦೨, ಪು.೫೦೮

೨೭೯. ಅದೇ, ಸಂ.೬೧, ಪು.೫೭೭

೨೮೦. ಅದೇ, ಸಂ.೬೨, ಪು.೫೭೮

೨೮೧. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೧೯೫

೨೮೨. ಅದೇ, ಪು.೧೯೬-೧೯೭

೨೮೩. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೪೪

೨೮೪. ವಾಸುದೇವ ಬಡಿಗೇರ, ೨೦೦೬, ಕರ್ನಾಟಕ ದೇವಾಲಯ ಕೋಶ ವಿಜಾಪುರ ಜಿಲ್ಲೆ, ಪು.೧೨೦

೨೮೫. ಕ.ವಿ.ಶಾ.ಸಂ.೧೦, ಸಂ.೪೪, ಪು.೫೫೭

೨೮೬. ಅದೇ, ಸಂ.೪೫, ಪು.೫೫೮

೨೮೭. ಅದೇ, ಸಂ.೪೬, ಪು.೫೫೮

೨೮೮. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೪೦

೨೮೯. ಕ.ವಿ.ಶಾ.ಸಂ.೧೦, ಸಂ.೫೧, ಪು.೩೦೦

೨೯೦. ಅದೇ, ಸಂ.೪೧, ಪು.೨೮೨

೨೯೧. ಸಿದ್ಧರಾಮ ಉಪ್ಪಿನ(ಲೇ.), ೨೦೧೧, ಆಲಮೇಲದ ದೇಶಮುಖರು, ಸಿಂದಗಿ ಹನ್ನೆರಡು ಸ್ಮರಣಸಂಚಿಕೆ, ಪು.೧೫

೨೯೨. ಶೇಕದಾರ ವಿ.ಎಸ್., ೨೦೧೧, ಪೂರ್ವೋಕ್ತ, ಪು.೫೧

೨೯೩. Abdul Gani Imaratwale, 2007, cited earlier, p.೨೦೨

೨೯೪. James M. Campbell(Edit.), 1884, cited earlier, p.೫೪೮-೫೪೯

೨೯೫. Abdul Gani Imaratwale, 2007, cited earlier, p.೨೦೬

೨೯೬. ಕ.ವಿ.ಶಾ.ಸಂ.೧೦, ಸಂ.೮೦, ಪು.೩೪೩

೨೯೭. ಅದೇ, ಸಂ.೭೯, ಪು.೩೪೦

೨೯೮. ಅದೇ, ಸಂ.೭೮, ಪು.೩೩೯

೨೯೯. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೪೦

೩೦೦. ಕ.ವಿ.ಶಾ.ಸಂ.೧೦, ಸಂ.೭೭, ಪು.೩೩೮

೩೦೧. ಅದೇ, ಸಂ.೭೬, ಪು.೩೩೭

೩೦೨. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೩೯

೩೦೩. Abdul Gani Imaratwale, 2007, cited earlier, p.೨೦೨

೩೦೪. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ಪೂರ್ವೋಕ್ತ, ಪು.೧೧೬೩

೩೦೫. ಕ.ವಿ.ಶಾ.ಸಂ.೧೦, ಸಂ.೨೯, ಪು.೫೫

೩೦೬. ಅದೇ, ಸಂ.೩೦, ಪು.೫೬

೩೦೭. ಅದೇ, ಸಂ.೩೧, ಪು.೫೭

೩೦೮. ಅದೇ, ಸಂ.೩೨, ಪು.೬೦

೩೦೯. ಅದೇ, ಸಂ.೬೦, ಪು.೩೧೫

೩೧೦. ಅದೇ, ಸಂ.೪೧, ಪು.೨೮೨

೩೧೧.ಪಂಚಮುಖಿ ರಾ.ಸ್ವಾ, ೨೦೦೮, ಕರ್ನಾಟಕ ಇತಿಹಾಸ ಸಂ.೦೧, ಪು.೧೩೦

೩೧೨.ವಾಸುದೇವ ಬಡಿಗೇರ, ೨೦೦೬, ಪೂರ್ವೋಕ್ತ, ಪು.೭೪-೭೫

೩೧೩. James M. Campbell(Edit.), 1884, cited earlier, p.೬೭೬

೩೧೪.ಅದೇ, ಪು.೬೭೬-೬೭೭

ಅಧ್ಯಾಯ ಐದು

ರಕ್ಷಣಾ ಸಂಬಂಧಿ ಸ್ಮಾರಕಗಳು

೫.೧. ಹುಡೆವುಗಳು

೫.೨. ಅಗಸೆ ಬಾಗಿಲುಗಳು

೫.೩. ಹಗೆವುಗಳು

೫.೪. ನೀರಿನ ಸಂಗ್ರಹಣೆ

೫.೫. ದೇವಾಲಯಗಳು

೫.೬. ಭಿತ್ತಿ ಶಿಲ್ಪಗಳು

ಅಧ್ಯಾಯ ಐದು

ರಕ್ಷಣಾ ಸಂಬಂಧಿ ಸ್ಮಾರಕಗಳು

ರಾಜ್ಯದ ರಾಜಧಾನಿಯ ರಕ್ಷಣೆಯಲ್ಲಿ ಕೋಟೆಗಳು ಎಷ್ಟು ಪ್ರಮುಖವಾಗಿದ್ದವೋ ಅದೇ ರೀತಿ ಸ್ಥಳೀಯ ಆಡಳಿತಗಾರರು ತಮ್ಮ ಹಾಗೂ ಜನರ ರಕ್ಷಣೆಗಾಗಿ ಗ್ರಾಮಗಳಲ್ಲಿ ಕೋಟೆ, ವಾಡೆ, ಹುಡೆವುಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣುತ್ತೇವೆ. ಜೊತೆಗೆ ಶತ್ರುಗಳ ದೀರ್ಘಕಾಲಿಕ ಆಕ್ರಮಣವನ್ನು ಎದುರಿಸುವಲ್ಲಿ ಕೋಟೆಯೊಳಗೆ ಹಾಗೂ ರಕ್ಷಣಾತ್ಮಕ ಕಟ್ಟಡಗಳನ್ನು ಹೊಂದಿರದ ಗ್ರಾಮಗಳಲ್ಲಿ ಜೀವನಾವಶ್ಯಕವಾದ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಹಗೇವು(ಕಣಜ)ಗಳಂತಹ ಸ್ಮಾರಕಗಳು ನಿರ್ಮಾಣವಾದದ್ದು ಕಂಡುಬರುತ್ತವೆ. ಪ್ರಾದೇಶಿಕ ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಇಂತಹ ಕೆಲವು ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೧. ಹುಡೆವುಗಳು

ರಕ್ಷಣಾಸ್ಮಾರಕಗಳ ಹಿಂದೆ ಸ್ಥಳೀಯ ಆರ್ಥಿಕತೆಯು ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ನನ್ನ ಬಲವಾದ ನಂಬಿಕೆ. ಕಾರಣ ಸಾಮಾಜಿಕ ಏಣಿಶ್ರೇಣಿಗಳನ್ನು ಹೊಂದಿರುವ ಸಂಪತ್ಭರಿತವಾದ ನಾಡು ಅಥವಾ ಗ್ರಾಮಗಳು ತಮ್ಮ ಸಂಪತ್ತಿನ ವೃದ್ಧಿಯಾದಂತೆ ಬಲವಾದ ರಕ್ಷಣೆಯು ಅವಶ್ಯಕವಾಗುತಿತ್ತು. ಹಾಗಾಗಿ ಅಲ್ಲಿಯ ಜನರ ಹಾಗೂ ಸಂಪತ್ತಿನ ರಕ್ಷಣೆಗಾಗಿ ಬಲಿಷ್ಠವಾದ ಕೋಟೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಅದೇ ರೀತಿ ಸ್ಥಳೀಯ ಆಡಳಿತಾಧಿಕಾರಿಗಳು ತಮ್ಮ ಸಾಮಾಜಿಕ ಏಣಿಶ್ರೇಣಿಗಳಿಗೆ ಅನುಗುಣವಾಗಿ ಸೇನಾವ್ಯವಸ್ಥೆ ಹೊಂದಿದವರು ತಮ್ಮ ಸ್ಥಾನವನ್ನು ಮತ್ತಷ್ಟು ಉನ್ನತೀಕರಿಸಿಕೊಳ್ಳಲು ಬಲವಾದ ಕೋಟೆಗಳ ನಿರ್ಮಾಣಕ್ಕೆ ಕೈ ಹಾಕುತ್ತಿದ್ದರು. ಆದರೆ ಅಷ್ಟೊಂದು ಸಂಪತ್ಭರಿತವಲ್ಲದ ನಾಡು ಮತ್ತು ಸಾಮಾಜಿಕ ಉನ್ನತ ಶ್ರೇಣಿಯನ್ನು ಹೊಂದಿರದ ಅಧಿಕಾರಿಗಳು ತಮ್ಮ ಅವಶ್ಯಕತೆ ಮತ್ತು ತಮ್ಮ ಮೇಲೆ ಜರಗಬಹುದಾದ ಸ್ಥಳೀಯ ಮತ್ತು ಬಾಹ್ಯದಾಳಿಗಳನ್ನು ದೃಷ್ಟಿಕೋನದಲ್ಲಿಟ್ಟುಕೊಂಡು ಸಣ್ಣಮಟ್ಟ ಕೋಟೆಗಳನ್ನು ಅಥವಾ ತಮ್ಮ ಗ್ರಾಮದಲ್ಲಿ ಒಂದು

ಅಥವಾ ಎರಡು ಅದಕ್ಕಿಂತಲೂ ಹೆಚ್ಚಿನ ಹುಡೆವುಗಳನ್ನು ನಿರ್ಮಿಸಿಕೊಂಡಿರಬಹುದು ಎಂದು ಅಭಿಪ್ರಾಯಿಸಬಹುದು.

ಸ್ಥಳೀಯ ಪ್ರಭುತ್ವವನ್ನು ಹೊಂದಿರದೆ ಇರುವ ಕೆಲವು ಗ್ರಾಮಗಳ ಜನರೂ ತಮ್ಮ ಗ್ರಾಮದ ಜನರ ರಕ್ಷಣೆಗಾಗಿ, ಗ್ರಾಮದ ಜನಸಂಖ್ಯೆ ಮತ್ತು ವಿಸ್ತಾರಕ್ಕನುಗುಣವಾಗಿ ಕೋಟೆ ಅಥವಾ ಹುಡೆವುಗಳನ್ನು ನಿರ್ಮಿಸಿಕೊಂಡಿದ್ದಾರೆ. ಬಹುತೇಕ ಚಿಕ್ಕಪುಟ್ಟ ಗ್ರಾಮಗಳೇ ತಮ್ಮ ರಕ್ಷಣೆಗೆ ಅವಶ್ಯಕತೆಗೆ ಅನುಗುಣವಾಗಿ ಹುಡೆವುಗಳನ್ನು ನಿರ್ಮಿಸಿಕೊಂಡಿರಬಹುದು. ಇಂತಹ ಗ್ರಾಮಗಳು ಮುಂದೆ ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು. ಇಂಥಹ ಹುಡೆವುಗಳಿಂದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ಹಾಗೂ ಸ್ಥಳೀಯ ವಾಸ್ತುವಿನ್ಯಾಸವನ್ನು ತಿಳಿದುಕೊಳ್ಳಬಹುದು. ಅಲ್ಲದೆ ಪ್ರಾದೇಶಿಕ ಇತಿಹಾಸ ರಚನೆಯಲ್ಲಿ ಇನ್ನಷ್ಟು ಸ್ಪಷ್ಟತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ರಕ್ಷಣಾಕಟ್ಟಡಗಳ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ವಿಜಾಪುರ ಜಿಲ್ಲೆಯಾದ್ಯಂತ ಕಂಡುಬರುವ ಹುಡೆವುಗಳ ಕುರಿತು ಅಧ್ಯಯನಗಳು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಪಟ್ಟಿವೆ. ಈ ಹಿನ್ನೆಲೆಯಲ್ಲಿ ಗ್ರಾಮಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಹುಡೆವುಗಳ ಕುರಿತು ಅಧ್ಯಯನ ಕೈಗೊಳ್ಳುವುದು ಅಗತ್ಯವಾದುದರಿಂದ ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಆದರೆ ಇವುಗಳ ಕುರಿತಾಗಿ ಯಾವುದೇ ಲಿಖಿತ ದಾಖಲೆಗಳು ಲಭ್ಯವಾಗಿಲ್ಲ.

ವಿಜಾಪುರ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡ ಗ್ರಾಮಗಳಲ್ಲೆಲ್ಲಾ ಹಲವು ಬಗೆಯ ಹುಡೆವುಗಳು ಕಂಡುಬಂದಿವೆ. ಅವುಗಳಲ್ಲಿ ಬಹುತೇಕ ಅವಶೇಷಗಳು ಉಳಿದುಕೊಳ್ಳದ ಹಾಗೇ ಸಂಪೂರ್ಣವಾಗಿ ನಾಶ ಹೊಂದಿವೆ. ಆದರೆ ಆ ಗ್ರಾಮದಲ್ಲಿ ಹುಡೆವು ಇದ್ದಿರಬಹುದಾದ ಕುರುಹಾಗಿ ಅಲ್ಲಿ ಹುಡೆದ ಲಕ್ಷ್ಮೀ ಎಂದು ಒಂದು ಗುಂಡುಕಲ್ಲು ಅಥವಾ ಇತ್ತೀಚಿನ ಶಿಲ್ಪವನ್ನು ನಾಲ್ಕು ಚಪ್ಪಡಿಕಲ್ಲುಗಳ ಗುಡಿಯ ಮಧ್ಯೆ ಇಟ್ಟು ಸ್ಥಳೀಯರು ಇಂದಿಗೂ ಪೂಜಿಸುತ್ತಿದ್ದಾರೆ. ಕಾರಣ ಹುಡೆವುಗಳು ಗ್ರಾಮದ ಸಂಪತ್ತನ್ನು ರಕ್ಷಣೆ ಮಾಡುವ ದೈವೀಪ್ರತೀಕವಾಗಿ ಕಂಡುಬರುತ್ತವೆ. ಹೀಗಾಗಿ ಅಲ್ಲಿ ಹುಡೆವುಗಳು ಅವನತಿ ಹೊಂದಿದ್ದರೂ ಅಲ್ಲಿ ಅದರ ಕುರುಹಾಗಿ ಹುಡೆದ ಲಕ್ಷ್ಮೀ ಎಂದು ಪೂಜಿಸುತ್ತಾರೆ.

ಜಿಲ್ಲೆಯಾದ್ಯಂತ ಬಹುತೇಕ ಗ್ರಾಮಗಳಲ್ಲಿ ಹುಡೆವುಗಳು ಕಂಡುಬಂದರೂ ಇವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದರಿಂದ ಹಲವು ಹುಡೆವುಗಳು ವಿನಾಶದ ಹಂತದಲ್ಲಿವೆ. ಇಷ್ಟೊಂದು ಹುಡೆವುಗಳ ನಿರ್ಮಾಣದ ಕಾರಣದ ಹಿನ್ನೆಲೆಯನ್ನು ಗಮನಿಸಿದಾಗ ವಿಶಿಷ್ಟವಾದ ಈ ಗ್ರಾಮ ರಕ್ಷಣಾವಾಸ್ತು ಅಥವಾ ಹುಡೆವುಗಳು ಸೀಮಿತ ಪ್ರದೇಶದಲ್ಲಿ ಹಾಗೂ ಸೀಮಿತ ಕಾಲಾವಧಿಯಲ್ಲಿ ನಿರ್ಮಿಸಿರುವ ಅಂಶ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಮಧ್ಯಕಾಲೀನ ರಾಜಕೀಯ ಡೆಕ್ಕನ್ ಪ್ರದೇಶವೆಂದು ಗುರುತಿಸಲ್ಪಡುವ ಉತ್ತರ ಕರ್ನಾಟಕ, ದಕ್ಷಿಣ ಮಹಾರಾಷ್ಟ್ರ ಮತ್ತು ವಾಯವ್ಯ

ಆಂಧ್ರಪ್ರದೇಶಗಳ ಬಯಲಿನಲ್ಲಿ ಬರುವ ಗ್ರಾಮಗಳಲ್ಲಿ ಇವು ಕಂಡುಬರುತ್ತವೆ. ಭೀಮಾ, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಗಡಿಗುಂಟ ದೊರಕುವ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಹುಡೆಗಳನ್ನು ನಿರ್ಮಿಸಿರುವುದನ್ನು ನಾವು ಕಾಣುತ್ತೇವೆ.[೧] ಜಿಲ್ಲೆಯ ಕೃಷ್ಣಾ ಮತ್ತು ಭೀಮಾ ನದಿಗಳು ಮಧ್ಯಕಾಲೀನ ವಿಜಯನಗರ, ಬಹಮನಿ ನಂತರ ಆದಿಲ್‌ಶಾಹಿ ಹಾಗೂ ಅಹಮದ್‌ನಗರದ ನಿಜಾಂಶಾಹಿಗಳಿಗೆ ಗಡಿರೇಖೆಗಳಾಗಿದ್ದವು ಎಂಬ ಅಂಶ ಗಮನಿಸುವಂತದ್ದು. ಗಡಿ ಭಾಗಗಳಲ್ಲಿ ಹೋರಾಟಗಳು ಸಾಮಾನ್ಯವಾಗಿ ಕಂಡುಬರುವುದರಿಂದ ಜನರನ್ನು ರಕ್ಷಿಸಿಕೊಳ್ಳಲು ಕೋಟೆ ಅಥವಾ ಹುಡೆವುಗಳನ್ನು ನಿರ್ಮಿಸಿಕೊಳ್ಳಲಾಗಿತ್ತು. ಎಂಬ ಅಭಿಪ್ರಾಯ ಇವುಗಳ ದೊರಕುವಿಕೆಯಿಂದ ವ್ಯಕ್ತವಾಗುತ್ತದೆ. ಪ್ರಸ್ತುತ ಅಧ್ಯಯನದ ಹುಡೆವುಗಳು ಮುದ್ದೇಬೀಹಾಳ ಮತ್ತು ಸಿಂದಗಿ ತಾಲೂಕಿನಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದರೆ, ವಿಜಾಪುರ, ಇಂಡಿ, ಬಸವನ ಬಾಗೇವಾಡಿ ತಾಲೂಕುಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಕಾಲ

ಈ ಹುಡೆವುಗಳ ನಿರ್ಮಾಣದ ಶೈಲಿ ಮತ್ತು ರಚನಾವಿನ್ಯಾಸವನ್ನು ಗಮನಿಸಿದಾಗ ಕ್ರಿ.ಶ. ೧೫ ರಿಂದ ೧೯ನೇ ಶತಮಾನದಲ್ಲಿ ನಿರ್ಮಾಣವಾದ ಕೋಟೆಗಳ ಲಕ್ಷಣಗಳನ್ನೇ ಬಹುತೇಕ ಹೊಂದಿಕೊಳ್ಳುತ್ತವೆ. ಜೊತೆಗೆ ಈ ಪ್ರದೇಶದಲ್ಲಿ ನಡೆದ ಯುದ್ಧಸಂಘರ್ಷಗಳು ಇದೇ ಕಾಲಾವಧಿಯಲ್ಲಿ ಅವ್ಯಾಹತವಾಗಿ ನಡೆದುಕೊಂಡು ಬಂದವು. ಈ ಸಂದರ್ಭದಲ್ಲಿ ಗ್ರಾಮದ ರಕ್ಷಣೆಯು ಒಂದು ಪ್ರಮುಖ ಸವಾಲಾಗಿತ್ತು. ಅವರ ಸೈನಿಕ ಕಾರ್ಯಾಚರಣೆಗಳಿಂದ ಗ್ರಾಮಗಳು ತುಂಬಾ ಕಷ್ಟ ನಷ್ಟ ಅನುಭವಿಸುತ್ತಿದ್ದವು. ಇಂತಹ ಸನ್ನಿವೇಶಗಳನ್ನು ಗ್ರಾಮಸ್ಥರು ಮುಂಚಿತವಾಗಿ ತಿಳಿದುಕೊಂಡು ಅದರ ವಿರುದ್ಧ ತಾತ್ಕಾಲಿಕ ರಕ್ಷಣೆಯನ್ನು ಪಡೆಯಲು ಹುಡೆವುಗಳನ್ನು ನಿರ್ಮಿಸಿಕೊಂಡಂತೆ ಕಾಣುತ್ತದೆ. ಹೀಗಾಗಿ ಇವುಗಳ ಕಾಲಮಾನವನ್ನು ಸಹ ಕ್ರಿ.ಶ. ೧೫ ರಿಂದ ೧೯ನೇ ಶತಮಾನವಾಗಿರಬಹುದೆಂದು ಅಭಿಪ್ರಾಯ ಪಡಬಹುದು.

ಹುಡೆವುಗಳ ಲಕ್ಷಣಗಳು

ವಿಜಾಪುರ ಜಿಲ್ಲೆಯಲ್ಲಿ ವೃತ್ತಾಕಾರ ಮತ್ತು ಚೌಕಾಕಾರವಾಗಿರುವ ಹುಡೆವುಗಳು ಕಂಡುಬರುತ್ತವೆ. ಇವುಗಳ ರಚನಾಶೈಲಿ ಮತ್ತು ವಿನ್ಯಾಸದಲ್ಲಿ ಕೋಟೆಯ ಪ್ರಭಾವ ಕಂಡುಬರುತ್ತದೆ. ಇವುಗಳನ್ನು ಸ್ಥಳೀಯವಾಗಿ ಸಿಗುವ ಕಟೆದ ಅಥವಾ ಗುಂಡುಕಲ್ಲುಗಳನ್ನು ಮತ್ತು ಮಣ್ಣನ್ನು ಬಳಸಿ ನಿರ್ಮಿಸಲಾಗಿದೆ. ಬಹುತೇಕ ಹುಡೆವುಗಳು ಆ ಗ್ರಾಮದ ಎತ್ತರವಾದ ಪ್ರದೇಶ ಅಥವಾ ದಿಬ್ಬದ ಮೇಲೆ ನಿರ್ಮಾಣಗೊಂಡಿವೆ.

ಜಿಲ್ಲೆಯಲ್ಲಿ ಕಂಡುಬರುವ ಬಹುತೇಕ ಹುಡೆವುಗಳು ೩೦ ರಿಂದ ೩೫ ಅಡಿ ಎತ್ತರವನ್ನು ಹೊಂದಿದ್ದು ಇಂದು ಅವು ಶಿಥಿಲಾವಸ್ಥೆಯಲ್ಲಿವೆ. ಕೆಳಭಾಗದಲ್ಲಿ ಹುಡೆವುಗಳು ಸುಮಾರು ೫೦

ರಿಂದ ೭೦ ಅಡಿ ವೃತ್ತಾಕಾರವಾಗಿದ್ದು ಮೇಲಕ್ಕೆ ಕಿರಿದಾಗುತ್ತಾ ಹೋಗಿ ಮೇಲ್ಭಾಗದಲ್ಲಿ ೪೦ ರಿಂದ ೬೦ ಅಡಿ ವೃತ್ತಾಕಾರವನ್ನು ಹೊಂದಿವೆ. ಹೀಗಾಗಿ ಕೆಲವು ಸಿಲಿಂಡರ್, ಇನ್ನು ಕೆಲವು ಚಿಮಣಿ ಆಕಾರದ ರಚನೆಯಂತೆ ಕಂಡುಬರುತ್ತವೆ. ಈ ಹುಡೆವುಗಳ ಮೇಲೆ ಹೋಗಲು ಕೆಲವೊಂದಕ್ಕೆ ೧೦ ರಿಂದ ೨೦ ಅಡಿ ಎತ್ತರದ ಮೇಲೆ ದ್ವಾರಗಳಿದ್ದರೆ ಕೆಲವುಗಳಿಗೆ ತಳಮಟ್ಟದಿಂದಲೇ ದ್ವಾರಗಳಿವೆ. ದ್ವಾರದ ಬಾಗಿಲುವಾಡ ಕಲ್ಲು ಮತ್ತು ಮರದಿಂದ ಮಾಡಿರುವುದನ್ನು ಕಾಣಬಹುದು. ಕೆಲವು ಹುಡೆವುಗಳಿಗೆ ಮರದ ತೊಲೆ ಮತ್ತು ಬಾಗಿಲುಗಳಿವೆ. ಹುಡೆವಿನ ಮಧ್ಯಭಾಗದಲ್ಲಿಯೇ ನೇರವಾಗಿ ಏಣಿಯ ರೀತಿಯಲ್ಲಿ ಮೆಟ್ಟಿಲುಗಳಿರುವುದನ್ನು ಕಾಣುತ್ತೇವೆ. ಈ ರೀತಿಯ ಹುಡೆವುಗಳ ಮಧ್ಯಭಾಗ ಟೊಳ್ಳಾಗಿರುವುದಿಲ್ಲ. ಇನ್ನೊಂದು ರೀತಿಯ ಹುಡೆವುಗಳ ಮಧ್ಯಭಾಗ ನೋಡಿದರೆ ವೃತ್ತಾಕಾರವಾದ ಹುಡೆವಿನ ಗೋಡೆಯಲ್ಲಿಯೇ ಅರ್ಧವೃತ್ತಾಕಾರವಾಗಿ ಮೆಟ್ಟಿಲುಗಳಿವೆ. ಈ ರೀತಿಯ ಹುಡೆವುಗಳು ಟೊಳ್ಳಾಗಿರುವುದನ್ನು ಕಾಣಬಹುದು. ವಿಜಾಪುರ ಜಿಲ್ಲೆಯ ಬಹುತೇಕ ಹುಡೆವುಗಳ ಈ ರೀತಿಯ ರಚನೆಯನ್ನೇ ಕಾಣುತ್ತೇವೆ. ಕೆಲವು ಹುಡೆವುಗಳು ಮಧ್ಯಭಾಗ ಕಲ್ಲು ಮಣ್ಣಿನಿಂದ ತುಂಬಿಕೊಂಡಿದ್ದು ಮೇಲ್ಭಾಗ ಮಾತ್ರ ತೆರೆದುಕೊಂಡಿರುವುದನ್ನು ಕಾಣಬಹುದು. ಟೊಳ್ಳಾಗಿರುವ ಹುಡೆವುಗಳಲ್ಲಿ ಹುಡೆವಿನ ಮೇಲ್ಭಾಗದಿಂದ ಮಧ್ಯಭಾಗಕ್ಕೆ ಬರಲು ಮೆಟ್ಟಿಲುಗಳ ನಿರ್ಮಾಣ ಕಂಡುಬರುವುದಿಲ್ಲ. ಇಲ್ಲಿ ಚೌಕಾಕಾರದ ಒಂದು ಕಿಂಡಿಯನ್ನು ೨.೫೦X೨.೫೦ ಇರುವ ಹಾಗೆ ಬಿಟ್ಟು ಅದರಲ್ಲಿ ಜನರನ್ನು ಅಥವಾ ಕಾವಲುಗಾರರನ್ನು ಹಗ್ಗದ ಸಹಾಯದಿಂದ ಒಳಗೆ ಬಿಡುವ ಮತ್ತು ಮೇಲಕ್ಕೆತ್ತುವ ಕೆಲಸವನ್ನು ಮಾಡುತ್ತಿದ್ದರು. ಇಲ್ಲವೇ ಈ ರೀತಿಯ ರಚನೆಯಲ್ಲಿ ಕಟ್ಟಿಗೆಯ ಏಣಿಗಳನ್ನು ಬಳಸಿರಬಹುದು.

ಜಿಲ್ಲೆಯಲ್ಲಿ ಕಂಡುಬರುವ ಎಲ್ಲಾ ಹುಡೆವಿನ ಮೇಲ್ಭಾಗದಲ್ಲಿ ಎದೆಮಟ್ಟದವರೆಗೆ ಕೈಪಿಡಿಗೋಡೆ ಇದ್ದದ್ದು ಕಂಡುಬರುತ್ತದೆ. ಆದರೆ ತೆನೆಗಳ ರಚನೆಯನ್ನು ಹೊಂದಿಲ್ಲ. ಬಹುತೇಕ ಹುಡೆವುಗಳ ಮೇಲ್ಭಾಗ ಹಾಳಾಗಿದ್ದು ಅವುಗಳ ಅರ್ಧಭಾಗ ಮಾತ್ರ ಉಳಿದುಕೊಂಡಿವೆ. ಈ ಪ್ರತಿಯೊಂದು ಹುಡೆವುಗಳಲ್ಲಿ ಶತ್ರುಗಳು ಆಕ್ರಮಣ ಮಾಡಿದಾಗ ಇದರಲ್ಲಿ ರಕ್ಷಣೆ ಪಡೆದು ಶತ್ರುಗಳು ಇದನ್ನು ಭೇದಿಸದಂತೆ ಸುತ್ತಲೂ ಬಂದೂಕು ಮತ್ತು ವೀಕ್ಷಣಾ ಕಿಂಡಿಗಳಿರುವುದನ್ನು ಕಾಣುತ್ತೇವೆ. ಮಧ್ಯದಲ್ಲಿ ಟೊಳ್ಳಾಗಿರುವ ಹುಡೆವುಗಳಲ್ಲಿ ಎರಡು ಹಂತದಲ್ಲಿ, ಇತರೆ ಹುಡೆವುಗಳಲ್ಲಿ ಒಂದೇ ಹಂತದಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳನ್ನು ಕಾಣಬಹುದು.

ಸಾಮಾನ್ಯವಾಗಿ ಹುಡೆವುಗಳ ಮೇಲ್ಚಾವಣಿ ಅಥವಾ ಮಾಳಿಗೆಯನ್ನು ಜನರು ತಾವು ವಾಸಿಸುವ ಮನೆಗಳ ರಚನೆಯ ರೀತಿಯಲ್ಲಿಯೇ ಕಟ್ಟಿಗೆಯನ್ನು ಬಳಸಿ ನಿರ್ಮಿಸಿದ್ದನ್ನು ಕಾಣಬಹುದು. ಮೇಲ್ಚಾವಣಿಯ ಭದ್ರತೆ ಮತ್ತು ಬಾಳಿಕೆಯ ದೃಷ್ಟಿಯಿಂದ ಹುಡೆವಿನ ಮಾಳಿಗೆಯ ಕಟ್ಟಡದ ಭಾರವನ್ನು ತಡೆದುಕೊಳ್ಳಲು ಮಧ್ಯಭಾಗದಲ್ಲಿ ಮರದ ಕಂಬಗಳನ್ನು ಅಳವಡಿಸಲಾಗಿದೆ. ಮರದ ಕಂಬಗಳ ಗಾತ್ರ ಮುಖ್ಯವಾಗಿ ಚಾವಣಿ ರಚನೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ

ಕಂಬಗಳನ್ನು ಮಾಡಲು ನೇರವಾಗಿ ಹಾಗೂ ಯಾವುದೇ ಹುಳುಕು ಇಲ್ಲದ ಮರವನ್ನು ಆಯ್ಕೆ ಮಾಡುತ್ತಿದ್ದರು. ಮೇಲ್ಮೈಯನ್ನು ಬಾಚಿಯಿಂದ ಕೆತ್ತಿ ಸಮತಟ್ಟಾಗಿ ಮಾಡುತ್ತಿದ್ದರು. ಈ ರೀತಿಯ ರಚನೆಗಳು ಕಂಡುಬರುತ್ತವೆ.[೧]

ಹುಡೆವುಗಳ ಮಹತ್ವ

ಮಧ್ಯಕಾಲೀನದಲ್ಲಿ ಪದೇ ಪದೇ ನಡೆಯುತ್ತಿದ್ದ ಯುದ್ಧ ಅಥವಾ ದಾಳಿಗಳನ್ನು ಎದುರಿಸುವಲ್ಲಿ ಸ್ಥಳೀಯರು ತಮ್ಮ ರಕ್ಷಣೆಗೆ ಕೈಗೊಂಡ ಕ್ರಮಗಳನ್ನು ಹುಡೆವುಗಳ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಇವುಗಳ ನಿರ್ಮಾಣ ಅಂದಿನ ರಾಜಕಿಯ, ಸಾಮಾಜಿಕ, ಆರ್ಥಿಕ ಹಾಗೂ ಸ್ಥಳೀಯ ವಾಸ್ತುಶೈಲಿಯ ಮೇಲೆ ಪ್ರಭಾವ ಬೀರಿದ್ದನ್ನು ಕಾಣಬಹುದು.

ವೈರಿಗಳ ಆಕ್ರಮಣ ಕಾಲದಲ್ಲಿ ಗ್ರಾಮದ ನಾಗರಿಕರಿಗೆ ತಾತ್ಕಾಲಿಕ ರಕ್ಷಣೆ ಪಡೆಯುವುದಕ್ಕೆ ಇವು ಅನುಕೂಲ ಮಾಡಿಕೊಡುತ್ತಿದ್ದವು ಎಂಬ ಅಭಿಪ್ರಾಯ ಇವುಗಳ ಗಾತ್ರ ಹಾಗೂ ವಾಸ್ತುವಿನ್ಯಾಸಗಳ ಆಧಾರದಿಂದ ವ್ಯಕ್ತವಾಗುತ್ತದೆ. ಇವುಗಳ ಒಳಭಾಗದಲ್ಲಿ ಮೇಲ್ಛಾವಣಿಗೆ ಹೋಗಲು ಒಳಗಡೆ ಮೆಟ್ಟಿಲುಗಳ ಸೌಲಭ್ಯವಿದೆ. ಇವುಗಳ ಕುಂಬಿ ಅಥವಾ ಕೈಪಿಡಿಗೋಡೆಯಲ್ಲಿ ಬಂದೂಕುಕಿಂಡಿಗಳು ಇದ್ದು ಆಕ್ರಮಣದ ಕಾಲದಲ್ಲಿ ಗ್ರಾಮದ ಯುವಕರು ಅಥವಾ ವೀರಪಡೆ ಆಕ್ರಮಣಕಾರರಿಗೆ ಪ್ರತಿರೋಧ ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಇವು ಸಂಕೇತ ರವಾನಿಸುವ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಒಂದು ಹುಡೆಯಿಂದ ಇನ್ನೊಂದು ಗ್ರಾಮದಲ್ಲಿರುವ ಹುಡೆಯನ್ನು ಕಾಣಲು ಸಾಧ್ಯವಾಗುವಂತೆ ಅಂತರವನ್ನು ಕಾಯ್ದುಕೊಂಡಿವೆ ಎಂಬ ಅಂಶವು ಅಧ್ಯಯನದಿಂದ ತಿಳಿದುಬರುತ್ತದೆ. ಇವು ಗ್ರಾಮದ ಜನರ ರಕ್ಷಣೆಗೆ ಅಷ್ಟೇ ಅಲ್ಲದೆ ರಾಜ್ಯದ ಮೇಲೆ ದಾಳಿ ಮಾಡುವ ಶತ್ರುಗಳ ಸೈನಿಕರ ಚಲನವಲನಗಳನ್ನು ಅರಿತು ಶತ್ರುಗಳ ಆಕ್ರಮಣದ ವಿಷಯವನ್ನು ರಾಜ್ಯದ ರಾಜಧಾನಿಗೆ ಅಥವಾ ಸಂಬಂಧಪಟ್ಟ ಸೈನ್ಯಾಧಿಕಾರಿಗಳಿಗೆ ರವಾನಿಸಲು ಹುಡೆಗಳು ಸಹಾಯಕವಾಗಿದ್ದವು. ಅಂದರೆ ಹುಡೆಗಳ ಮೇಲ್ಭಾಗದಲ್ಲಿ ಸೌದೆಯನ್ನು ಸುಟ್ಟಾಗ ಹೊರಹೊಮ್ಮುವ ಹೊಗೆ, ಧ್ವಜ ಅಥವಾ ಪಂಜನ್ನು ಹಿಡಿದು ಅಪಾಯದ ಮುನ್ಸೂಚನೆಯನ್ನು ದೂರದ ಮುಂದಿನ ಗ್ರಾಮಗಳಿಗೆ ರವಾನಿಸುವ ವ್ಯವಸ್ಥೆ ಇವುಗಳ ಸಹಾಯದಿಂದ ನಡೆಯುತ್ತಿತ್ತು ಎಂಬ ಅಂಶವನ್ನು ನಾವು ಗುರುತಿಸಬಹುದು. ಕೆಲವು ಹುಡೆಗಳ ಮೇಲ್ಭಾಗದ ಗೋಡೆಗಳಲ್ಲಿ ಸುಟ್ಟು ಕರಕಲಾದ ಅವಶೇಷಗಳು ಕಂಡುಬಂದಿವೆ. ವೈರಿಗಳ ಆಕ್ರಮಣಗಳ ಅಪಾಯಗಳನ್ನು ಹುಡೆಗಳ ಉಸ್ತುವಾರಿಯನ್ನು ಹೊಂದಿದವರು ಸಂಕೇತಗಳ ಮೂಲಕ ರವಾನಿಸುತ್ತಿದ್ದ ವ್ಯವಸ್ಥೆ ಇಲ್ಲಿ ಕಂಡುಬರುತ್ತದೆ. ಹುಡೆದ ರಕ್ಷಣೆಯ ಹಕ್ಕುಗಳನ್ನು ಹುಡೆದವರು ಅಥವಾ ನಾಯಕವಾಡೆ ಎನ್ನುವ ಮನೆತನಗಳು ಹೊಂದಿದ್ದರು ಎಂದು ಹೇಳುತ್ತಾರೆ.[೨] ಇಂದಿಗೂ ಜಿಲ್ಲೆಯ ಸಿಂದಗಿ ತಾಲೂಕಿನ ಬಂದಾಳ, ಬೂದಿಹಾಳ, ಚಾಂದಕವಠೆಗಳಲ್ಲಿ ಈ ಅಡ್ಡಹೆಸರಿನ ಮನೆತನಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ಕೆಲವು ವಿದ್ವಾಂಸರು ಹುಡೆಗಳ ರಚನಾವಿನ್ಯಾಸವು ಧಾನ್ಯಗಳನ್ನು ಸಂಗ್ರಹಿಸಿಡುವ ಕಣಜ(ಹಗೇವು)ಗಳ ಹಾಗೆ ಇರುವುದರಿಂದ ಇವುಗಳನ್ನು ಗ್ರಾಮದ ಕೃಷಿಕರಿಗೆ ನಿರ್ಮಿಸಿದ ಉಗ್ರಾಣಗಳೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೆಲವು ಹುಡೆಗಳು ಮಧ್ಯಭಾಗ ಟೊಳ್ಳಾಗಿರದೆ ಪೂರ್ತಿ ಕಲ್ಲು ಮತ್ತು ಮಣ್ಣನ್ನು ತುಂಬಿದ್ದಾರೆ. ಟೊಳ್ಳಾಗಿರುವ ಹುಡೆವುಗಳಲ್ಲಿ ವೀಕ್ಷಣಾ ಮತ್ತು ಬಂದೂಕುಕಿಂಡಿಗಳಿರುವುದನ್ನು ಕಾಣಬಹುದು. ಹೀಗಾಗಿ ಇವು ರಕ್ಷಣಾ ಕಟ್ಟಡಗಳೆಂದೇ ಹೇಳಬಹುದು.

ಒಟ್ಟಾರೆಯಾಗಿ ಮಧ್ಯಕಾಲೀನದಲ್ಲಿ ನಡೆದ ರಾಜಕೀಯ ಸಂಘರ್ಷಗಳಿಂದ ಗ್ರಾಮದ ರಕ್ಷಣೆ ಮಾಡಿಕೊಳ್ಳುವುದು ಒಂದು ಸವಾಲಿನ ಕೆಲಸವಾಗಿತ್ತು. ಯುದ್ಧದ ವೇಳೆ ಮತ್ತು ತದನಂತರದ ಸಂದರ್ಭದಲ್ಲಿ ಸೈನಿಕ ಕಾರ್ಯಾಚರಣೆಯಿಂದ ಗ್ರಾಮಗಳು ಹಾನಿಗೊಳಗಾಗುತ್ತಿದ್ದವು. ಅಂತಹ ವಿಷಯಗಳನ್ನು ಗ್ರಾಮಸ್ಥರು ಮುಂಚಿತವಾಗಿ ತಿಳಿದುಕೊಂಡು ಅದರ ವಿರುದ್ಧ ತಾತ್ಕಾಲಿಕವಾಗಿ ರಕ್ಷಣೆಯನ್ನು ಪಡೆಯಲು ಇವುಗಳನ್ನು ನಿರ್ಮಿಸಿಕೊಂಡರು. ವಿಜಾಪುರ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಈ ರೀತಿಯ ಹುಡೆವುಗಳ ರಚನೆ ಕಂಡುಬರುತ್ತವೆ. ಆದರೆ ಇಂದು ಗ್ರಾಮೀಣ ಭಾಗದಲ್ಲಿ ಇವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕೆಲವೇ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಹುಡೆವುಗಳು ಪೂರ್ತಿಯಾಗಿ ನಾಶ ಹೊಂದುವ ಸ್ಥಿತಿಯಲ್ಲಿವೆ. ರಾಜಧಾನಿಯಾಗಿದ್ದಂತಹ ವಿಜಾಪುರವನ್ನು ಕೇಂದ್ರವಾಗಿರಿಸಿಕೊಂಡು ಇವುಗಳನ್ನು ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ವಿಜಾಪುರ ತಾಲೂಕು

ವಿಜಾಪುರ ತಾಲೂಕು ೨,೬೪೫.೨೪ ಚ.ಕಿ.ಮೀ. ವಿಸ್ತೀರ್ಣವಾಗಿದ್ದು, ಜಿಲ್ಲೆಯ ಒಟ್ಟು ಭೂ ಪ್ರದೇಶದ ಪಶ್ಚಿಮಭಾಗದಲ್ಲಿ ಹರಡಿಕೊಂಡಿದೆ. ಈ ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದ ಹುಡೆವುಗಳು ನಿರ್ಮಾಣವಾದಂತೆ ಕಂಡುಬರುವುದಿಲ್ಲ. ನಿರ್ಮಾಣವಾಗಿದ್ದರೂ ಇಂದು ಬಹುತೇಕ ನಾಶ ಹೊಂದಿವೆ. ಗೊಗ್ಗಲದಿನ್ನಿ, ಜಂಬಗಿ ಈ ಎರಡು ಗ್ರಾಮಗಳಲ್ಲಿ ಮಾತ್ರ ಉಳಿದು ಕೊಂಡುಬಂದಿದ್ದು ಇವು ಕೂಡ ಶಿಥಿಲಾವಸ್ಥೆಯಲ್ಲಿವೆ. ಹೀಗಾಗಿ ವೃತ್ತಾಕಾರವಾಗಿ ಅರ್ಧಭಾಗ ಮಾತ್ರ ಉಳಿದುಕೊಂಡಿದ್ದು ಉಳಿದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ವಿಜಾಪುರವನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ನೋಡಿದರೆ ಈ ಪ್ರದೇಶದಲ್ಲಿ ಹೆಚ್ಚಿನ ಹುಡೆವುಗಳು ನಿರ್ಮಾಣವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳ ಸಾಮ್ರಾಜ್ಯ ಪಶ್ಚಿಮದಲ್ಲಿ ಬೆಳಗಾವಿಯವರೆಗೂ ವಿಸ್ತರಿಸಿತ್ತು. ಹೀಗಾಗಿ ಗಡಿಪ್ರದೇಶವಾದ ಬೆಳಗಾವಿ ಪರಿಸರದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಕೋಟೆ ಕೊತ್ತಲಗಳು ನಿರ್ಮಾಣವಾಗಿವೆ. ಇವೆರಡರ ಮಧ್ಯದಲ್ಲಿ ಈ ತಾಲೂಕುಪ್ರದೇಶವು ಹರಡಿಕೊಂಡಿರುವುದರಿಂದ ರಕ್ಷಣಾಸ್ಮಾರಕಗಳ ನಿರ್ಮಾಣದ ಅವಶ್ಯಕತೆ ಇದ್ದದ್ದು ಕಂಡುಬರುವುದಿಲ್ಲ. ಅದರೂ ಕೆಲವು ಗ್ರಾಮಗಳಲ್ಲಿ ಹುಡೆವುಗಳು ನಿರ್ಮಾಣವಾಗಿದ್ದರೂ ಅವು ಕಾಲನ ತುಳಿತಕ್ಕೆ ಸಿಕ್ಕು ಇಂದು ನಾಶ ಹೊಂದಿವೆ.

ಇಂಡಿ ತಾಲೂಕು

ಇಂಡಿ ತಾಲೂಕು ೨,೨೨೪.೮೭ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ಜಿಲ್ಲೆಯ ಉತ್ತರ ಭಾಗದಲ್ಲಿ ಈ ತಾಲೂಕಿನ ಭೂಪ್ರದೇಶ ಹರಡಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಮಹತ್ವ ಪಡೆದ ಈ ತಾಲೂಕಿನ ತದ್ದೇವಾಡಿ ಗ್ರಾಮವು ಪ್ರಾಚೀನ ಕಾಲದ ತರ್ದವಾಡಿ ಸಾಸಿರದ ಆಡಳಿತ ವಿಭಾಗವಾಗಿತ್ತು ಇಡೀ ವಿಜಾಪುರ ಜಿಲ್ಲಾ ಭೌಗೋಳಿಕ ಪ್ರದೇಶವೆಲ್ಲ ಈ ತರ್ದವಾಡಿ ಸಾಸಿರದಲ್ಲಿ ಸಮಾವೇಶಗೊಂಡಿತ್ತು. ಮಧ್ಯಕಾಲೀನ ಇತಿಹಾಸದಲ್ಲಿ ಈ ತಾಲೂಕು ಪ್ರದೇಶವು ಕೂಡ ರಾಜಕೀಯ ಸಂಘರ್ಷಗಳಿಗೆ ಎಡೆಯಾಗಿತ್ತು. ಪದೇ ಪದೇ ನಡೆಯುವ ಯುದ್ಧದಂತಹ ಸನ್ನಿವೇಶಗಳಿಂದ ರಕ್ಷಿಸಿಕೊಳ್ಳಲು ಗ್ರಾಮಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೋಟೆಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣುತ್ತೇವೆ. ಜೊತೆಗೆ ಸಣ್ಣಪುಟ್ಟ ಗ್ರಾಮಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಹುಡೆವುಗಳನ್ನು ಕೂಡ ನಿರ್ಮಿಸಿಕೊಳ್ಳಲಾಗಿದೆ. ಇವುಗಳಲ್ಲಿ ಬಹುತೇಕ ಹುಡೆವುಗಳು ಅವನತಿ ಹೊಂದಿದ್ದು ಇಂದು ಚೌಡಿಹಾಳ, ಹಡಲಸಂಗ, ನಿವರಗಿ, ಸಾವಳಂಗ, ತಾಂಬಾಗಳಲ್ಲಿ ಮಾತ್ರ ಉಳಿದುಕೊಂಡು ಬಂದಿವೆ. ಅವು ಕೂಡ ಶಿಥಿಲಾವಸ್ಥೆಯಲ್ಲಿದ್ದು ಸುಮಾರು ೧೦ ರಿಂದ ೨೦ ಅಡಿ ಮಾತ್ರ ಉಳಿದುಕೊಂಡಿವೆ. ನಿವರಗಿಯಲ್ಲಿರುವ ಹುಡೆವು ಮಾತ್ರ ಸ್ಥಳೀಯರು ಜೀರ್ಣೋದ್ಧಾರಗೊಳಿಸಿದ್ದರಿಂದ ಅದು ಇಂದಿಗೂ ಪೂರ್ಣಪ್ರಮಾಣದಲ್ಲಿ ಉಳಿದುಕೊಂಡು ಬಂದಿದೆ. ಇದು ಸುಮಾರು ૩೦ ಅಡಿ ಎತ್ತರವಾಗಿದ್ದು ೮ ಅಡಿ ಎತ್ತರದ ಮೇಲೆ ಮೇಲ್ಭಾಗಕ್ಕೆ ಹೋಗಲು ಚೌಕಾಕಾರದ ಬಾಗಿಲು ಮತ್ತು ಮೆಟ್ಟಿಲುಗಳು ಕಂಡುಬರುತ್ತವೆ. ಹುಡೆವಿನ ಸುತ್ತಲೂ ಬಂದೂಕು ಮತ್ತು ವೀಕ್ಷಣಾ ಕಿಂಡಿಗಳನ್ನು ಕಾಣಬಹುದು. ತಾಂಬಾ ಗ್ರಾಮದಲ್ಲಿ ಚೌಕಾಕಾರ ಮತ್ತು ವೃತ್ತಾಕಾರದ ಎರಡು ಹುಡೆವುಗಳಿವೆ. ಅದರಲ್ಲಿ ಗ್ರಾಮದ ಉತ್ತರಕ್ಕೆ ಬರುವ ಹುಡೆವನ್ನು ಸ್ಥಳಿಯರು ಪ್ರಾಚೀನ ೨೦ ಅಡಿ ಎತ್ತರದ ಹುಡೆವನ್ನು ಮಧ್ಯಮಾಡಿ ಅದರ ಸುತ್ತಲೂ ಹೊಸದಾಗಿ ವೃತ್ತಾಕಾರವಾಗಿಯೇ ಗೋಡೆಯನ್ನು ನಿರ್ಮಿಸುತ್ತಿದ್ದಾರೆ. ಇದರಿಂದ ಮುಂದೆ ಮೂಲಸ್ವರೂಪ ಕಂಡುಬರುವುದಿಲ್ಲ. ಉಳಿದ ಗ್ರಾಮಗಳಲ್ಲಿ ಕಂಡುಬರುವ ಹುಡೆವುಗಳು ಶಿಥಿಲಾವಸ್ಥೆಯಲ್ಲಿದ್ದು ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ.

ಸಿಂದಗಿ ತಾಲೂಕು

ಸಿಂದಗಿ ತಾಲೂಕು ಪ್ರದೇಶವು ೨,೧೭೬.೪೦ ಚ.ಕಿ.ಮೀ. ವಿಸ್ತೀರ್ಣವಾಗಿದ್ದು ಜಿಲ್ಲಾಕೇಂದ್ರದಿಂದ ಪೂರ್ವದಿಕ್ಕಿನಲ್ಲಿದೆ. ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನ ಹುಡೆವುಗಳು ಈ ತಾಲೂಕು ಪರಿಸರದಲ್ಲಿ ಕಂಡುಬರುತ್ತವೆ. ಈ ಪ್ರದೇಶದ ಮೇಲೆ ಮಧ್ಯಕಾಲೀನದಲ್ಲಿ ನಡೆದ ದಾಳಿಗಳ ಪ್ರಭಾವ ಗಮನಾರ್ಹವಾಗಿ ಕಂಡುಬರುವುದಿಲ್ಲ. ಸ್ಥಳೀಯ ವೈರಿಗಳು, ಕಳ್ಳಕಾಕರ ಆಕ್ರಮಣಗಳ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಕೋಟೆಗಳ ಬದಲಿಗೆ ಈ ಪ್ರದೇಶದಲ್ಲಿ ಹೆಚ್ಚು ಹುಡೆವುಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ತಾಲೂಕಿನ ೧೪ ಗ್ರಾಮಗಳಲ್ಲಿ ಹುಡೆವುಗಳು ಉಳಿದುಕೊಂಡು ಬಂದಿದ್ದು ಚೌಕಾಕಾರ, ವೃತ್ತಾಕಾರದ ರಚನೆಯನ್ನು ಹೊಂದಿವೆ. ಭಂಟನೂರು, ಚಾಂದಕವಟೆ, ಗಬಸಾವಳಗಿ, ಗಣಿಹಾರ, ಹಂಚಿನಾಳ, ಕಕ್ಕಳಮೇಲಿ, ಕೆರೂರ, ಕೊಕಟನೂರ, ಮಲಘಾಣ, ನಿವಾಳಖೇಡ, ರುಕುಮಾಪುರ, ಸಾಸಾಬಾಳ, ತೋಂಟಾಪುರ, ಯರಗಲ್‌ಗಳಲ್ಲಿ ಹುಡೆವುಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿಯೇ ಅತಿ ಎತ್ತರವಾದ ಹುಡೆವುಗಳು ಕಂಡುಬರುವುದು ಭಂಟನೂರು ಮತ್ತು ಮಲಘಾಣ ಗ್ರಾಮಗಳಲ್ಲಿ. ಇವು ಸುಮಾರು ೬೦ ಅಡಿ ಎತ್ತರವನ್ನು ಹೊಂದಿವೆ. ಬಹುತೇಕ ಈ ತಾಲೂಕಿನ ಗ್ರಾಮಗಳಲ್ಲಿ ಕಂಡುಬರುವ ಹುಡೆವುಗಳು ಮಧ್ಯಭಾಗದಲ್ಲಿ ಟೊಳ್ಳಾಗಿದ್ದದ್ದು ಕಂಡುಬರುತ್ತವೆ. ಹೀಗಾಗಿ ಹುಡೆವಿನ ಹೊರಭಾಗದಲ್ಲಿ ಎರಡು ಹಂತದಲ್ಲಿ ಬಂದೂಕು ಮತ್ತು ವೀಕ್ಷಣಾಕಿಂಡಿಗಳಿರುವುದನ್ನು ಕಾಣಬಹುದು. ಕೂರವಾರ ಗ್ರಾಮದಲ್ಲಿ ನಿರ್ಮಾಣವಾಗಿರುವ ಹುಡೆವು ಸುಮಾರು ೩೦ ಅಡಿ ಎತ್ತರವನ್ನು ಹೊಂದಿದ್ದು ಈ ಹುಡೆವಿನ ಮೇಲೆ ಹತ್ತಲು ಪ್ರತ್ಯೇಕವಾಗಿಯೇ ಮೆಟ್ಟಿಲುಗಳುಳ್ಳ ಚೌಕಾಕಾರವಾದ ಕಟ್ಟಡ ನಿರ್ಮಿಸಿ ಅದರ ಪ್ರವೇಶದಲ್ಲಿ ದ್ವಾರವನ್ನು ಕೂರಿಸಿದ್ದಾರೆ. ಇನ್ನುಳಿದಂತೆ ಎಲ್ಲ ಹುಡೆವುಗಳ ರಚನೆ ಮತ್ತು ಲಕ್ಷಣಗಳು ಒಂದೇ ರೀತಿಯಾಗಿ ಕಂಡುಬರುತ್ತವೆ.

ಬಸವನ ಬಾಗೇವಾಡಿ ತಾಲೂಕು

ಬಸವನ ಬಾಗೇವಾಡಿ ತಾಲೂಕು ಪ್ರದೇಶವು ೧,೯೭೩.೯೬ ಚ.ಕಿ.ಮೀ. ವಿಸ್ತೀರ್ಣವಾಗಿದ್ದು, ಜಿಲ್ಲಾ ಕೇಂದ್ರದಿಂದ ಆಗ್ನೇಯ ಮತ್ತು ದಕ್ಷಿಣಭಾಗದಲ್ಲಿ ಈ ಭೂಪ್ರದೇಶವು ಹರಡಿಕೊಂಡಿದೆ. ಮಧ್ಯಕಾಲೀನ ಸಂದರ್ಭದಲ್ಲಿ ಮುದ್ದೇಬಿಹಾಳ ಪ್ರದೇಶದಲ್ಲಿ ತಾಳಿಕೋಟೆ ಯುದ್ಧದಂತ. ಘಟನೆಗಳಿಂದ ಇದೊಂದು ರಣಭೂಮಿಯಾಗಿದ್ದಂತೆ ತೋರುತ್ತದೆ. ಈ ಮುದ್ದೇಬಿಹಾಳ ತಾಲೂಕಿನ ಗಡಿಗೆ ಹೊಂದಿಕೊಂಡಿರುವ ಈ ಪ್ರದೇಶದ ಮೇಲೆಯೂ ಪ್ರಭಾವವನ್ನು ಉಂಟುಮಾಡಿರಬಹುದು. ತಾಲೂಕಿನ ಅನೇಕ ಗ್ರಾಮಗಳಲ್ಲಿ ಹುಡೆವುಗಳು ನಿರ್ಮಾಣವಾಗಿದ್ದರೂ ಅವು ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿವೆ. ಗುಡದಿನ್ನಿ, ಹಲ್ಯಾಳ, ಜಾಯವಾಡಗಿ, ಕಡಕೋಳ, ಕಾಮನಕೇರಿ, ಮನಗೂಳಿ, ಮಡ್ಡಿ ಉಪ್ಪಲದಿನ್ನಿ, ರೆಬಿನಾಳ, ಅಗಸಬಾಳಗಳಲ್ಲಿ ಹುಡೆವುಗಳು ಉಳಿದುಕೊಂಡು ಬಂದಿರುವುದು ಕಾಣುತ್ತೇವೆ. ಇವುಗಳ ಜೊತೆಗೆ ಉಳಿದುಕೊಂಡು ಬಂದಿರುವ ಹುಡೆವುಗಳು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿವೆ. ಆದರೆ ಮನಗೂಳಿ ಮತ್ತು ಮಡ್ಡಿ ಉಪ್ಪಲದಿನ್ನಿ ಹುಡೆವುಗಳು ಸ್ಥಳೀಯರಿಂದ ಜೀರ್ಣೋದ್ಧಾರಗೊಂಡಿದ್ದರಿಂದ ಇದುವರೆಗೆ ಪೂರ್ಣಪ್ರಮಾಣದಲ್ಲಿ ಉಳಿದುಕೊಂಡು ಬಂದಿವೆ.

ಇತಿಹಾಸ ಪುಟಗಳಲ್ಲಿ ಕೋಟೆ, ಅಗಸೆಬಾಗಿಲು, ಕೆರೆ ನಿರ್ಮಾಣ ಸಂದರ್ಭದಲ್ಲಿ ನರಬಲಿ ಕೊಟ್ಟ ಪ್ರಸಂಗಗಳು ಜಾನಪದ ಸಾಹಿತ್ಯ ಮತ್ತು ಮೌಖಿಕ ಆಕರಗಳಿಂದ ತಿಳಿದುಬಂದಿದೆ. ಅದೇ ರೀತಿ ಈ ತಾಲೂಕಿನ ಮನಗೂಳಿ ಗ್ರಾಮದಲ್ಲಿ ಹುಡೆವು ನಿರ್ಮಾಣದಲ್ಲಿ ರೇಬವ್ವ ಎಂಬ ಹೆಣ್ಣುಮಗಳನ್ನು ಬಲಿ ಕೊಟ್ಟ ಮೌಖಿಕ ಚರಿತ್ರೆ ಸ್ಥಳೀಯರಲ್ಲಿ ಪ್ರಚಲಿತದಲ್ಲಿದೆ.

ಮನಗೂಳಿಯಲ್ಲಿ ಗುಜಗೊಂಡ ಎಂಬ ಮನೆತನದವರು ಊರಿನ ಒಡೆತನವನ್ನು ಹೊಂದಿದ್ದರು. ಗ್ರಾಮದ ರಕ್ಷಣೆಗೆ ಹುಡೆವನ್ನು ಕಟ್ಟಿಸುವುದು ಇವರಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಆದರೆ ಹುಡೆ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದರೂ ಹುಡೆ ಪದೇ ಪದೇ ಬೀಳತೊಡಗಿತು. ಆಗ ಜ್ಯೋತಿಷಿಗಳನ್ನು ಕೇಳಿದಾಗ ಹುಡೆಯ ನಿರ್ಮಾಣಕ್ಕೂ ಮೊದಲು ಮದುವೆಯ ವಯಸ್ಸಿಗೆ ಬಂದ ಹೆಣ್ಣುಮಗಳನ್ನು ಬಲಿ ಕೊಟ್ಟರೆ ಅದು ದೃಢವಾಗಿ ನಿಲ್ಲುತ್ತದೆ ಎಂದು ಹೇಳಲಾಯಿತು. ಇದನ್ನು ಕೇಳಿದ ಊರಿನ ಇನ್ನಿತರ ಪ್ರಮುಖರು ಯಾರೂ ತಮ್ಮ ಮಕ್ಕಳನ್ನು ಬಲಿ ಕೊಡಲು ಮುಂದಾಗುವುದಿಲ್ಲ. ಹುಡೆವು ನಿರ್ಮಾಣ ಪ್ರತಿಷ್ಠೆ ವಿಷಯವಾಗಿ ತೆಗೆದುಕೊಂಡ ಗ್ರಾಮದ ಪ್ರಮುಖರಾದ ಗುಜಗೊಂಡ ಮನೆತನದವರು ತಮ್ಮ ಮನೆಯ ರೇಬವ್ವ ಎಂಬ ಹೆಣ್ಣು ಮಗಳನ್ನೇ ಬಲಿ ಕೊಟ್ಟ ಪ್ರಸಂಗ ಗ್ರಾಮದಲ್ಲಿ ಪ್ರಚಲಿತದಲ್ಲಿದೆ. ಈಗಲೂ ಗ್ರಾಮದ ಹುಡೆವು ಹತ್ತಿರವಿರುವ ಗುಜಗೊಂಡ ಮನೆತನದವರ ಮನೆಯಲ್ಲಿ ರೇಬವ್ವನ ಗುಡಿಯನ್ನು ಕಟ್ಟಿ ಪೂಜಿಸುತ್ತಿದ್ದಾರೆ.

ಮುದ್ದೇಬಿಹಾಳ ತಾಲೂಕು

ಮುದ್ದೇಬಿಹಾಳ ತಾಲೂಕು ೧,೫೦೧.೭೬ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ತಾಲೂಕಿನ ಗಡಿರೇಖೆಯಾಗಿ ಕೃಷ್ಣಾನದಿ ಹರಿಯುತ್ತದೆ. ಈ ಪ್ರದೇಶವು ವಿಜಾಪುರ ಜಿಲ್ಲೆಯ ರಣಭೂಮಿ ಎಂದೇ ನನ್ನ ಅಭಿಪ್ರಾಯ. ಆದಿಲ್‌ಶಾಹಿಗಳು ಅಧಿಕಾರಕ್ಕೆ ಬಂದಾಗಿನಿಂದ ವಿಜಯನಗರದ ಜೊತೆ ಕೃಷ್ಣಾ ಮತ್ತು ತುಂಗಭದ್ರಾ ದೋಅಬ್ ನದಿಗಳ ಮಧ್ಯದ ಪ್ರದೇಶ, ರಾಯಚೂರು, ಮುದಗಲ್ ಕೋಟೆಯನ್ನು ಪಡೆಯುವ ಪ್ರತಿಷ್ಠೆಯಿಂದ ಅನೇಕ ಸಂಘರ್ಷಗಳಲ್ಲಿ ತೊಡಗಿಕೊಂಡರು. ಅಲ್ಲದೆ ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧ ನಡೆದದ್ದು ಈ ಪ್ರದೇಶದಲ್ಲಿಯೇ ಈ ಸಂದರ್ಭದಲ್ಲಿ ಶಾಹಿಸುಲ್ತಾನರ ಸೈನ್ಯ ಬೀಡುಬಿಟ್ಟಿದ್ದವು ಎಂದು ಹೇಳಲಾಗುತ್ತದೆ. ಅಲ್ಲದೇ ಆದಿಲ್‌ಶಾಹಿ ಸುಲ್ತಾನರು ಬೇರೆ ಪ್ರದೇಶದ ಮೇಲೆ ದಾಳಿ ಕೈಗೊಳ್ಳಬೇಕಾದರೂ ಈ ಪ್ರದೇಶ ಅವರ ಸೈನ್ಯ ಹಾದುಹೋಗುವ ದಂಡಿನ ದಾರಿಯಾಗಿತ್ತು. ಈಗಲೂ ವಿಜಾಪುರದಿಂದ ಹೂವಿನ ಹಿಪ್ಪರಗಿ, ತಾಳಿಕೋಟೆ, ನಾಲತವಾಡಕ್ಕೆ ಹೋಗುವ ರಸ್ತೆಯನ್ನು ದಂಡಿನ ದಾರಿಯೆಂದೇ ಕರೆಯುತ್ತಾರೆ. ಈ ರೀತಿ ಅನೇಕ ರಾಜಕೀಯ ಸಂಘರ್ಷಗಳು ಈ ಪ್ರದೇಶದಲ್ಲಿ ನಡೆದದ್ದು ಕಂಡುಬರುತ್ತದೆ. ಹೀಗಾಗಿ ಸಾಮಾನ್ಯವಾಗಿ ಆಂತರಿಕ ಮತ್ತು ಬಾಹ್ಯದಾಳಿಗಳಿಂದ ರಕ್ಷಿಸಿಕೊಳ್ಳಲು ಈ ಪ್ರದೇಶದಲ್ಲಿ ಪ್ರತಿ ಗ್ರಾಮಕ್ಕೂ ಕೋಟೆ ಕೊತ್ತಲಗಳಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಸುಮಾರು ೩೫ ಗ್ರಾಮಗಳಲ್ಲಿ ರಕ್ಷಣಾಸಂಬಂಧಿ ಕಟ್ಟಡಗಳು ಉಳಿದುಕೊಂಡು ಬಂದಿವೆ. ಅದರಲ್ಲಿ ೧೧ ಗ್ರಾಮಗಳಲ್ಲಿ ಹುಡೆವುಗಳು ಕಂಡುಬರುತ್ತವೆ. ಅವುಗಳಲ್ಲಿ ಆಲಕೊಪ್ಪ, ಬಿಜ್ಜೂರ, ಚಿರ್ಚನಕಲ್ಲು, ಗುಂಡಕನಾಳ, ಕಲ್ಲದೇವನಹಳ್ಳಿ, ಕೊಡಗಾನೂರು, ಕುಂಚಗನೂರ, ನಾಲತವಾಡ, ನಾವದಗಿ, ಶಿವಪೂರಗಳಲ್ಲಿ ಕಾಣುತ್ತೇವೆ. ನಾವದಗಿಯಲ್ಲಿರುವ ಹುಡೆವು ರಚನೆಯಲ್ಲಿ ಅಲ್ಪ ಭಿನ್ನತೆಯನ್ನು ಕಾಣುತ್ತೇವೆ. ವೃತ್ತಾಕಾರದ ಹುಡೆವನ್ನು ನಿರ್ಮಿಸಿ ಅದಕ್ಕೆ ೧೫ ಅಡಿ ಎತ್ತರದ ಮೇಲೆ ದ್ವಾರವನ್ನು ಬಿಟ್ಟಿದ್ದಾರೆ. ಈ ದ್ವಾರಕ್ಕೆ

ತಲುಪಲು ಮತ್ತೆ ಅದೇ ಹುಡೆವಿಗೆ ಹೊಂದಿಕೊಂಡು ಅರ್ಧವೃತ್ತಾಕಾರದ ರಕ್ಷಣಾಗೋಡೆಯನ್ನು ಹೊಂದಿರುವ ಹಾಗೆ ಅದರ ಮಧ್ಯೆ ಮೆಟ್ಟಿಲುಗಳನ್ನು ನಿರ್ಮಿಸಿ ನೆಲಮಟ್ಟದಲ್ಲಿ ಒಂದು ದ್ವಾರವನ್ನು ಬಿಟ್ಟಿದ್ದಾರೆ. ಈ ಪ್ರದೇಶದ ಸ್ಥಳೀಯರು ಹೇಳುವ ಪ್ರಕಾರ ಕೃಷ್ಣಾನದಿ ತೀರದಲ್ಲಿ ಇರುವ ಪ್ರತಿಯೊಂದು ಗ್ರಾಮಗಳಲ್ಲಿ ಮತ್ತು ಗ್ರಾಮದ ಹೊರವಲಯದ ಎತ್ತರವಾದ ಪ್ರದೇಶಗಳಲ್ಲಿ ಹುಡೆವುಗಳು ಇದ್ದವು ಎಂದು ಹೇಳುತ್ತಾರೆ. ಬಿಜ್ಜೂರ ಗ್ರಾಮದಿಂದ ಅನತಿ ದೂರದಲ್ಲಿ ನದಿ ತೀರದ ಎತ್ತರವಾದ ದಿಬ್ಬದ ಮೇಲೆ ಹುಡೆವು ಉಳಿದುಕೊಂಡು ಬಂದಿದೆ. ವಿಜಯನಗರ ಮತ್ತು ಆದಿಲ್‌ಶಾಹಿಗಳಿಗೆ ಕೃಷ್ಣಾನದಿಯು ಗಡಿರೇಖೆಯಾಗಿರುವುದರಿಂದ ಶತ್ರುಗಳ ಮೇಲೆ ನಿಗಾ ಇಡಲು ಈ ರೀತಿಯ ರಚನೆಗಳಾಗಿರುವುದನ್ನು ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಹುಡೆವುಗಳು, ಮೇಲೆ ಉಲ್ಲೇಖಿಸಿದ ಲಕ್ಷಣಗಳನ್ನು ಬಹುತೇಕ ಒಳಗೊಂಡಿದ್ದು ಕಂಡುಬರುತ್ತವೆ. ಇವು ಸಣ್ಣಪುಟ್ಟ ಗ್ರಾಮಗಳ, ಜನರ ರಕ್ಷಣೆಯನ್ನು ಮಾಡುತ್ತಿದ್ದವಲ್ಲದೆ ಬೇರೆ ರಾಜ್ಯದ ಶತ್ರುಗಳ ಆಕ್ರಮಣದ ಸಂದರ್ಭದಲ್ಲಿ ರಾಜ್ಯದ ರಾಜಧಾನಿಗೆ ಸಂದೇಶವನ್ನು ರವಾನಿಸುವ ಮಾಧ್ಯಮಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಹೇಳಬಹುದು. ಜಿಲ್ಲೆಯಾದ್ಯಂತ ಇಂದು ಹುಡೆವುಗಳು ಇರುವ ಗ್ರಾಮಗಳಲ್ಲಿ ಇವುಗಳನ್ನು ಹುಡೆದ ಲಕ್ಷ್ಮೀ ಎಂದು ಪೂಜಿಸುತ್ತಿದ್ದಾರೆ.

೫.೧ ಅಗಸೆ ಬಾಗಿಲುಗಳು

ರಕ್ಷಣೆಯ ಉದ್ದೇಶವನ್ನಿಟ್ಟುಕೊಂಡು ಕೆಲವು ಗ್ರಾಮಗಳಲ್ಲಿ ಕೇವಲ ದ್ವಾರಗಳು ಮಾತ್ರ ನಿರ್ಮಾಣ ಗೊಂಡಿರುವುದನ್ನು ಕಾಣಬಹುದು. ಇವುಗಳಿಗೆ ಸ್ಥಳೀಯವಾಗಿ ಅಗಸೆ ಬಾಗಿಲುಗಳೆಂದು ಕರೆಯುತ್ತಾರೆ. ಗ್ರಾಮವನ್ನು ವಿವಿಧ ದಿಕ್ಕುಗಳಿಂದ ಪ್ರವೇಶಿಸದಂತೆ ತಡೆಯಲು ಪ್ರತಿ ಊರಿಗೊಂದು ದ್ವಾರಗಳನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಕಾಡುಪ್ರಾಣಿಗಳಿಂದ, ಕಳ್ಳಕಾಕರಿಂದ ಮತ್ತು ತಾತ್ಕಾಲಿಕವಾಗಿ ಶತ್ರುಗಳಿಂದ ರಕ್ಷಣೆಯನ್ನು ಪಡೆಯುವ ಉದ್ದೇಶದಿಂದ ಊರಿನ ಸುತ್ತಲೂ ಮುಳ್ಳುಕಂಟಿಗಳ ಬೇಲಿಯನ್ನು ಹಾಕಿ ಗ್ರಾಮವನ್ನು ಪ್ರವೇಶಿಸಲು ಒಂದೇ ದ್ವಾರವನ್ನು ನಿರ್ಮಿಸುತ್ತಿದ್ದರು. ಈ ರೀತಿ ಕೋಟೆಯಂತಹ ರಕ್ಷಣಾತ್ಮಕ ರಚನೆಗಳು ಪ್ರಾಚೀನ ಗ್ರಾಮಗಳಲ್ಲಿ ಕಂಡುಬರುತ್ತವೆ. ಸ್ಥಳೀಯವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಬಳಸಿ ನಿರ್ಮಾಣ ಮಾಡಿದ ದ್ವಾರಗಳು ಕೆಲವು ಗ್ರಾಮಗಳಲ್ಲಿ ಉಳಿದುಕೊಂಡುಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ಉಪ್ಪಲದಿನ್ನಿ(ವಿಜಾಪುರ ತಾಲೂಕು), ನಿವರಗಿ (ಇಂಡಿ ತಾಲೂಕು), ಭಟ್ಟರಕಿ, ಕೊರವಾರ(ಸಿಂದಗಿ ತಾಲೂಕು), ಕುದರಿ ಸಾಲೋಟಗಿ(ಬಸವನ ಬಾಗೇವಾಡಿ ತಾಲೂಕು)ಗಳಲ್ಲಿ ಕಂಡುಬರುತ್ತವೆ. ಇವು ಕೂಡ ಶಿಥಿಲಾವಸ್ಥೆಯಲ್ಲಿದ್ದು ಕೆಲವು ಗ್ರಾಮಗಳಲ್ಲಿ ಸಂಪೂರ್ಣವಾಗಿ ನಾಶವಾಗಿವೆ. ಬಹುಶಃ ಇಲ್ಲಿ ಗ್ರಾಮದ ಸುತ್ತಲೂ ಕೋಟೆ ಇದ್ದು ಕಾಲಾನಂತರದಲ್ಲಿ ಕೋಟೆಗೋಡೆ ಸಂಪೂರ್ಣವಾಗಿ ನಾಶ ಹೊಂದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕೆಲವೊಂದು ಗ್ರಾಮಗಳಲ್ಲಿ ಹುಡೆ ಹಾಗೂ ಅಗಸೆ ಬಾಗಿಲುಗಳು ಎರಡೂ

ಕಂಡುಬರುತ್ತವೆ. ಹಾಗೆಂದು ಇಲ್ಲಿ ಕೋಟೆ ಇದ್ದವು ಎಂದು ಹೇಳಲಿಕ್ಕಾಗದು. ಕಾರಣ ಹುಡೆವಿನ ಮತ್ತು ಅಗಸೆ ಬಾಗಿಲುಗಳ ನಿರ್ಮಾಣ ಪ್ರಮಾಣಬದ್ಧವಾಗಿರದೆ ಬೇರೆ ಬೇರೆ ದಿಕ್ಕುಗಳಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಸದ್ಯ ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿರುವ ಅಗಸೆ ಬಾಗಿಲುಗಳನ್ನು ಗಮನಿಸಿದಾಗ ಇವು ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿಯೇ ನಿರ್ಮಾಣವಾಗಿವೆ ಎಂದು ಹೇಳಬಹುದು. ಕಾರಣ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣವಾಗಿರುವ ಕೋಟೆಯ ದ್ವಾರದ ಬಾಗಿಲುಗಳ ಲಕ್ಷಣಗಳಿಗೆ ಇವು ಸಾಮ್ಯತೆಯನ್ನು ಹೊಂದಿವೆ. ಇವು ಕೂಡ ಕಮಾನಾಕೃತಿಯ ದ್ವಾರವನ್ನು ಹೊಂದಿದ್ದು, ಸುಮಾರು ೨೦ರಿಂದ ೨೫ ಅಡಿ ಎತ್ತರವಾಗಿವೆ. ಕುದರಿ ಸಾಲೋಟಗಿಯಲ್ಲಿ ಎದೆಮಟ್ಟದವರೆಗೆ ಮಾತ್ರ ಉಳಿದುಕೊಂಡಿದೆ. ದ್ವಾರದ ಪ್ರವೇಶದ ಇಕ್ಕೆಲಗಳಲ್ಲಿ ಕಾವಲುಗಾರರಿಗಾಗಿ ನಿರ್ಮಿಸಿದ ಅಂಕಣಗಳಿವೆ. ಕೋಟೆಗಳಿಗಿರುವಂತೆ ದ್ವಾರದ ಇಕ್ಕೆಲಗಳಲ್ಲಿ ಬುರುಜುಗಳು ಇವುಗಳಿಗೆ ಕಂಡುಬರುವುದಿಲ್ಲ. ಇಂತಹ ಗ್ರಾಮಗಳಲ್ಲಿ ಸೈನ್ಯದ ಬದಲಿಗೆ ಕಾವಲು ಕಾಯುವ ಹೊಣೆ ಆ ಊರಿನ ತಳವಾರನದ್ದಾಗಿರುತ್ತದೆ. ಗ್ರಾಮದ ರಕ್ಷಣೆಯನ್ನು ಉದ್ದೇಶವಾಗಿಟ್ಟುಕೊಂಡು ನಿರ್ಮಾಣವಾಗಿರುವ ಇವುಗಳನ್ನು ಅಗಸೆ ಬಾಗಿಲುಗಳೆಂದು ವಿಂಗಡಿಸಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

೫.೩ ಹಗೇವುಗಳು

ಕೋಟೆ ರಕ್ಷಣೆಗೆ ಕಾವಲುಗೋಪುರ, ಸೈನಿಕರು ಹಾಗೂ ಯುದ್ಧನೀತಿಯಲ್ಲಿನ ತಂತ್ರ ಎಷ್ಟು ಮುಖ್ಯವಾಗಿದ್ದವೋ ಅದೇ ರೀತಿ ಕೋಟೆಯ ಒಳಗೆ ಮೂಲಭೂತ ಅವಶ್ಯಕತೆಗಳಾದ ಆಹಾರ ಮತ್ತು ನೀರನ್ನು ಸಂಗ್ರಹಿಸುವುದು ಅಷ್ಟೇ ಅವಶ್ಯಕವಾಗಿತ್ತು. ಹೀಗೆ ಸಂಗ್ರಹಿಸಿದ ಆಹಾರಧಾನ್ಯಗಳು ಕೆಡದಂತೆ ಅಥವಾ ಅವು ಸುಲಭವಾಗಿ ಶತ್ರುಗಳ ವಶವಾಗದಂತೆ ತಡೆಯಲು ಕಣಜಗಳನ್ನು ನಿರ್ಮಿಸಿಕೊಂಡಿದ್ದನ್ನು ಕಾಣುತ್ತೇವೆ. ಪ್ರಸ್ತುತ ಜಿಲ್ಲೆಯಲ್ಲಿ ಇವುಗಳನ್ನು ಹಗೇವು, ವಖಾರ ಎಂದು ಕರೆಯುತ್ತಾರೆ. ಈ ಪದಗಳು ಉತ್ತರ ಕರ್ನಾಟಕವಷ್ಟೇ ಅಲ್ಲದೆ ದಕ್ಷಿಣ ಮಹಾರಾಷ್ಟ್ರದಲ್ಲಿಯೂ ಪ್ರಚಲಿತದಲ್ಲಿರುವುದನ್ನು ಕಾಣುತ್ತೇವೆ.

ಪ್ರಾದೇಶಿಕ ಪರಿಸರದಲ್ಲಿನ ಭಿನ್ನತೆ, ಹವಾಗುಣ, ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಇವು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಭೂಮಿಯ ಮೇಲ್ಮಟ್ಟದಲ್ಲಿ ನಾಲ್ಕು ಗೋಡೆಗಳನ್ನು ನಿರ್ಮಿಸಿ ಅದಕ್ಕೆ ಒಂದೇ ಕಿಂಡಿಯನ್ನು ಬಿಟ್ಟು ಸಂಗ್ರಹಿಸುವ ವ್ಯವಸ್ಥೆ ಒಂದು ಕಡೆಯಾದರೆ, ನೆಲದಡಿಯಲ್ಲಿ ಕಂದಕ ಅಥವಾ ತಗ್ಗನ್ನು ತೆಗೆದು ನಿರ್ಮಿಸುವ ವ್ಯವಸ್ಥೆ ಇನ್ನೊಂದು ರೀತಿಯಾಗಿ ಕಂಡುಬರುತ್ತದೆ. ಕೃಷಿಯಲ್ಲಿನ ಕ್ರಾಂತಿಕಾರಿ ಬದಲಾವಣೆಯೇ ಇವುಗಳ ನಿರ್ಮಾಣಕ್ಕೆ ಕಾರಣವಾಗಿರಬಹುದು. ಸಿಂಧೂಕೊಳ್ಳದ ನಾಗರಿಕತೆಯಲ್ಲಿ ಇವು ಬಳಕೆಯಲ್ಲಿದ್ದುದ್ದು ತಿಳಿದುಬರುತ್ತದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಶತ್ರುಗಳ ದೀರ್ಘಕಾಲೀನ ಆಕ್ರಮಣವನ್ನು ತಡೆಯಲು ಕೋಟೆಯ ಒಳಗೆ ಆಹಾರ ಸಂಗ್ರಹಣೆಯು ಅವಶ್ಯಕವಾದುದೆಂದು ಹೇಳಿದ್ದಾನೆ. ಅನೇಕ ರಾಜನೀತಿಶಾಸ್ತ್ರಜ್ಞರು ಈ ವಾದವನ್ನು ಬೆಂಬಲಿಸುತ್ತಾರೆ.

ರಾಜ್ಯದ ರಾಜಧಾನಿಯಲ್ಲಿ ನಿರ್ಮಾಣವಾದ ಕೋಟೆಗಳಲ್ಲಷ್ಟೇ ಅಲ್ಲದೆ, ಚಿಕ್ಕಪುಟ್ಟ ಕೋಟೆಗಳಲ್ಲಿಯೂ ಹಾಗೂ ಅಧಿಕ ಉತ್ಪಾದನೆ ಮಾಡಿದ ಕೃಷಿಕನು ವೈಯಕ್ತಿಕವಾಗಿ ಇವುಗಳನ್ನು ನಿರ್ಮಿಸಿಕೊಂಡಿದ್ದು ಕಂಡುಬರುತ್ತದೆ. ಹೀಗಾಗಿ ಜಿಲ್ಲೆಯ ಪ್ರತಿ ಗ್ರಾಮದಲ್ಲಿಯೂ ಕಣಜ ಅಥವಾ ಹಗೇವುಗಳಿರುವುದನ್ನು ಇಂದಿಗೂ ಕಾಣಬಹುದು. ಜಿಲ್ಲೆಯಲ್ಲಿ ಕಂಡುಬರುವ ಹಗೇವುಗಳು ನೆಲಮಟ್ಟದ ಕೆಳಗೆಯೇ ನಿರ್ಮಾಣವಾದವುಗಳಾಗಿವೆ. ಆದರೂ ರಾಜಧಾನಿಕೇಂದ್ರಿತ ವಿಜಾಪುರ ಮತ್ತು ದೇಸಗತಿ ಮನೆತನಗಳಲ್ಲಿ ಇವುಗಳಿಗಾಗಿಯೇ ನೆಲದ ಮೇಲ್ಮೈಯಲ್ಲಿಯೇ ಪ್ರತ್ಯೇಕವಾಗಿಯೇ ಕಣಜಗಳನ್ನು ನಿರ್ಮಿಸಿಕೊಂಡಿದ್ದನ್ನು ಕಾಣುತ್ತೇವೆ. ಅದರೆ ಜಿಲ್ಲೆಯ ಕೋಟೆಯಲ್ಲಿ ನಿರ್ಮಾಣವಾದ ಕಣಜಗಳನ್ನು ಬಲದಿನ್ನಿ ಮತ್ತು ಕೋಟ್ನಾಳಗಳಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸಲು ಬಳಸುತ್ತಿದ್ದರು ಎಂದು ಹೇಳಲಾಗುತ್ತದೆ. ಆದರೆ ಬಹುತೇಕ ಭಾಗಗಳಲ್ಲಿ ಇವುಗಳನ್ನು ಸಂಪೂರ್ಣವಾಗಿ ಧಾನ್ಯಗಳನ್ನು ಸಂಗ್ರಹಿಸಲು ನಿರ್ಮಿಸುತ್ತಿದ್ದರು ಎಂದು ಹೇಳಬಹುದು. ಇವುಗಳನ್ನು ಯುದ್ಧಸಂದರ್ಭದಲ್ಲಿ ಶತ್ರುಗಳ ಮೇಲೆ ಎರಚಲು ತುಪ್ಪ ಅಥವಾ ಎಣ್ಣೆಯನ್ನು ಸಂಗ್ರಹಿಸುತ್ತಿದ್ದರು ಎಂಬುದು ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಸ್ಥಳೀಯ ಆಡಳಿತ ನಿರ್ವಹಣೆಯಲ್ಲಿ ಪಾತ್ರ ವಹಿಸಿದ ದೇಸಗತಿ ಮನೆತನಗಳಲ್ಲಿ ಈಗಲೂ ಬಳಕೆಯಲ್ಲಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದು. ಆದರೆ ಬದಲಾದ ವೈಜ್ಞಾನಿಕತೆಗನುಗುಣವಾಗಿ ಅವುಗಳ ಮಹತ್ವ ಕೂಡ ಕಡಿಮೆಯಾಗುತ್ತಿದೆ. ಅಲ್ಲದೆ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ಹಗೇವುಗಳು ಇಂದು ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿವೆ.

ಹಗೇವುಗಳನ್ನು ನಿರ್ಮಿಸಲು ಮೊದಲು ಆಳವಾಗಿ ಚೌಕಾಕಾರ ಅಥವಾ ವೃತ್ತಾಕಾರವಾಗಿ ಕಂದಕ ಅಥವಾ ತಗ್ಗನ್ನು ತೆಗೆದು ಅದರ ಆಕಾರಕ್ಕನುಗುಣವಾಗಿ ತಳಮಟ್ಟದಿಂದಲೇ ಸುತ್ತಲೂ ಇಟ್ಟಿಗೆ, ಕಲ್ಲು ಮತ್ತು ಮಣ್ಣನ್ನು ಬಳಸಿ ಗೋಡೆಯನ್ನು ನಿರ್ಮಿಸುತ್ತಿದ್ದರು. ಕೆಲವು ಹಗೆವುಗಳಲ್ಲಿ ಗಾರೆಯನ್ನು ಬಳಕೆ ಮಾಡಿರುವುದನ್ನು ಕಾಣಬಹುದು. ಈ ರೀತಿಯಾದ ಗೋಡೆ ರಚನೆಯಾದ ಮೇಲೆ ನೆಲಮಟ್ಟಕ್ಕೆ ಸಮಾನಾಂತರವಾಗಿ ಕಲ್ಲು ಅಥವಾ ಮರದ ಛಾವಣಿಯನ್ನು ಹಾಕಿ ಒಬ್ಬ ಮನುಷ್ಯ ಮಾತ್ರ ಇಳಿಯುವಷ್ಟು ಕಿಂಡಿಯನ್ನು ಬಿಡುತ್ತಿದ್ದರು. ಧಾನ್ಯ ಕೆಡದಂತೆ ಹಾಗೂ ಹುಳುಗಳು ಹತ್ತದಂತೆ ಇವುಗಳನ್ನು ನಿರ್ಮಿಸುವಾಗ ಗಾಳಿ–ಬೆಳಕು ಪ್ರವೇಶಿಸದಂತೆ ಮುತುವರ್ಜಿ ವಹಿಸಲಾಗುತ್ತಿತ್ತು. ಜೊತೆಗೆ ಧಾನ್ಯಗಳನ್ನು ಒಳಗೆ ಹಾಕುವುದಕ್ಕಿಂತಲೂ ಪೂರ್ವದಲ್ಲಿ ದನಗಳ ಸಗಣಿಯನ್ನು ಗೋಡೆಗೆ ಬಳಿದು ಜೋಳ ಅಥವಾ ಸಜ್ಜೆಯ ದಂಟನ್ನು ಸುತ್ತಲೂ ಹೊಂದಿಸಿ ಮಧ್ಯದಲ್ಲಿ ಧಾನ್ಯವನ್ನು ಹಾಕುತ್ತಿದ್ದರು. ಅದರ ಮೇಲೆ ಚಪ್ಪಡಿಕಲ್ಲನ್ನು ಎಳೆದು ಮತ್ತೆ ಮಣ್ಣನ್ನು ಹಾಕುತ್ತಿದ್ದರು. ಇದರಿಂದ ಇಲ್ಲಿ ಸಂಗ್ರಹಿಸಿದ ಧಾನ್ಯವು ವರ್ಷಗಟ್ಟಲೆ ಅಲ್ಲಿಯೇ ಬಿಟ್ಟರೂ ಕೆಡದಂತೆ ಹಾಗೆಯೇ ಇರುತ್ತಿದ್ದವು. ಆ ಸ್ಥಳದಲ್ಲಿ ಹಗೇವು ಇದ್ದಿರಬಹುದಾದ ಕುರುಹು ನಿರ್ಮಾಣಕಾರರಿಗೆ ಬಿಟ್ಟು ಬೇರೆ ಯಾರಿಗೂ ತಿಳಿಯುತ್ತಿರಲಿಲ್ಲ. ಹೀಗೆ ಹೆಚ್ಚಿನ ಪ್ರಮಾಣದ ಧಾನ್ಯವನ್ನು ಕೆಡದಂತೆ ಸಂಗ್ರಹಿಸುವ ತಂತ್ರ ಒಂದು ಕಡೆಯಾದರೆ ಅದು ಶತ್ರುಗಳ ವಶವಾಗದಂತೆ ತಡೆಯುವ ಮತ್ತೊಂದು ತಂತ್ರವಾಗಿತ್ತು.

ಶತ್ರುಗಳು ಅಥವಾ ಕಳ್ಳಕಾಕರು ಆಕ್ರಮಣ ಮಾಡಿದರೂ ಯಾವ ಸ್ಥಳದಲ್ಲಿ ಧಾನ್ಯ ಸಂಗ್ರಹಿಸಿಟ್ಟಿದ್ದಾರೆ ಎಂಬುದೇ ತಿಳಿದುಬರುವುದಿಲ್ಲ. ಕೆಲವು ಸಂದರ್ಭದಲ್ಲಿ ದಾಳಿಕೋರರ ಆಕ್ರಮಣ ಸುದ್ದಿ ತಿಳಿಯುತ್ತಿದ್ದಂತೆ ತಮ್ಮಲ್ಲಿದ್ದ ಸಂಪತ್ತು, ಧಾನ್ಯ ಎಲ್ಲವನ್ನು ಈ ಹಗೇವುಗಳಲ್ಲಿ ಮುಚ್ಚಿಟ್ಟು ಜನರೆಲ್ಲ ಗ್ರಾಮವನ್ನು ತೊರೆದು ಬೆಟ್ಟಗುಡ್ಡ ಅಥವಾ ಕಾಡಿಗೆ ಹೊರಟುಹೋಗುತ್ತಿದ್ದರು ಇಂತಹ ಸಂದರ್ಭದಲ್ಲಿ ದಾಳಿಕೋರರು ಆಕ್ರಮಣ ಮಾಡಿ ಗ್ರಾಮವನ್ನು ನಾಶ ಮಾಡಿದರೂ ಅವರ ಸಂಪತ್ತು ಮಾತ್ರ ಅವರ ಕೈವಶವಾಗುತ್ತಿರಲಿಲ್ಲ. ಇಂತಹ ಒಂದು ತಾಂತ್ರಿಕತೆಯು ಗ್ರಾಮದ ಸಂಪತ್ತಿನ ರಕ್ಷಣೆಗೆ ಇದ್ದದ್ದು ಕಂಡುಬರುತ್ತದೆ.

ಜಿಲ್ಲೆಯ ಪ್ರತಿಕೋಟೆ, ಗ್ರಾಮದಲ್ಲಿ ಇಂತಹ ಹಗೇವುಗಳಿರುವುದನ್ನು ಈಗಲೂ ಕಾಣುತ್ತೇವೆ. ಕೃಷ್ಣಾನದಿಯ ದಂಡೆಯ ಮೇಲೆ ನಿರ್ಮಿತವಾದ ಬಲದಿನ್ನಿಯ ಎರಡು ಸುತ್ತಿನ ಕೋಟೆಯ ಮಧ್ಯೆ ಮತ್ತು ಒಳಕೋಟೆಯಲ್ಲಿ ಇಂತಹ ಹತ್ತಾರು ಹಗೇವುಗಳನ್ನು ಅಲ್ಲಿ ಕಾಣುತ್ತೇವೆ. ಇಂದು ಕೃಷ್ಣಾನದಿಯ ಹಿನ್ನೀರಿನಿಂದ ಅವು ಕುಸಿದುಬೀಳುತ್ತಿವೆ. ವಿಜಾಪುರ ತಾಲೂಕಿನ ಜೈನಾಪುರ, ನಾಗಠಾಣ, ತಿಡಗುಂದಿ, ಕಾರ್ಜೋಳಗಳಲ್ಲಿ, ಇಂಡಿ ತಾಲೂಕಿನ ಅಥರ್ಗಾ, ಹೊರ್ತಿ, ಕೋಟ್ನಾಳ, ನಿಂಬಾಳ, ಸಾತಲಗಾಂವ, ಮುದ್ದೇಬಿಹಾಳ ತಾಲೂಕಿನ ನಾಗಬೇನಾಳ, ಯರಲಘೋರಿ, ಹಿರೇಮುರಾಳ, ಬಸರಕೋಡ, ಬಸವನ ಬಾಗೇವಾಡಿ ತಾಲೂಕಿನ ಬ್ಯಾಲ್ಯಾಳ, ಕೂಡಗಿ, ಕೋಲಾರ, ಗಣಿ, ಸಿಂದಗಿ ತಾಲೂಕಿನ ರಾಂಪೂರ, ಮಣೂರ, ಜಾಲವಾದಗಳಲ್ಲಿ ಕೋಟೆ ಮತ್ತು ವಾಡೆ ಒಳಗೆ ಮತ್ತು ಹೊರಗೆ ಹಗೇವುಗಳಿದ್ದದ್ದು ಕಂಡುಬರುತ್ತವೆ. ಸ್ಥಳೀಯರು ಇವುಗಳಿರುವ ಸ್ಥಳಗಳನ್ನು ಈಗಲೂ ಗುರುತಿಸುತ್ತಾರೆ. ಕೋಟ್ನಾಳ ಕೋಟೆಯಲ್ಲಿ ಈ ರೀತಿಯ ರಚನೆಯನ್ನು ಮದ್ದುಗುಂಡುಗಳನ್ನು ಸಂಗ್ರಹಿಸಿಡಲಿಕ್ಕಾಗಿ ಬಳಸುತ್ತಿದ್ದರು ಎಂದು ತಿಳಿದುಬರುತ್ತದೆ. ಪ್ರಭುತ್ವಕೇಂದ್ರಿತ ಸ್ಥಳಗಳಲ್ಲಿ ಅಷ್ಟೇ ಅಲ್ಲದೆ ಅಧಿಕ ಪ್ರಮಾಣದ ಧಾನ್ಯಗಳು ಉತ್ಪಾದನೆಯಾಗುವ ಪ್ರತಿಯೊಂದು ಗ್ರಾಮಗಳಲ್ಲಿ ಇವುಗಳ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಕೃಷಿಕರು ಈಗಲೂ ಇವುಗಳನ್ನು ಬಳಕೆ ಮಾಡುತ್ತಿದ್ದಾರೆ. ಆದರೆ ಆಧುನಿಕ ಜಗತ್ತಿನ ವಿಭಕ್ತ ಕುಟುಂಬಗಳು ಹೆಚ್ಚಾದಂತೆ ಉತ್ಪಾದನೆಯ ಸಂಗ್ರಹವು ಕೂಡ ಕಡಿಮೆಯಾಗುತ್ತಿದೆ. ಹೀಗಾಗಿ ಅವುಗಳ ಮಹತ್ವ ಕಳೆದುಕೊಂಡು ಅವುಗಳ ಪ್ರತಿರೂಪವೆಂಬಂತೆ ಪ್ರತಿ ತಾಲೂಕು, ಗ್ರಾಮಗಳಲ್ಲಿ ಉಗ್ರಾಣಗಳು ನಿರ್ಮಾಣವಾಗುತ್ತಿವೆ.

೫.೪. ನೀರಿನ ಸಂಗ್ರಹಣೆ

ಕೋಟೆಯ ಒಳಗೆ ಆಹಾರಧಾನ್ಯಗಳ ಸಂಗ್ರಹಣೆ ಜೊತೆಗೆ ನೀರಿನ ಸಂಗ್ರಹಣೆಯು ಅತಿ ಅವಶ್ಯಕವಾಗಿತ್ತು. ಮಾನವ ಜೀವನಾಧಾರವಾದ ಮೂಲ ಅಗತ್ಯಗಳಲ್ಲಿ ಗಾಳಿ, ನೀರು, ಅನ್ನ ಪ್ರಮುಖವಾದವುಗಳು. ನೈಸರ್ಗಿಕ ಸಂಪನ್ಮೂಲಗಳಾದ ಇವುಗಳ ಉಪಯುಕ್ತತೆ ಜನವಸತಿ ಹೆಚ್ಚಿದಂತೆಲ್ಲ ಹೊಸ ಆಯಾಮಗಳನ್ನು ಪಡೆದುಕೊಂಡವು. ಪ್ರಾಚೀನ ಕಾಲದಿಂದಲೂ ನೀರಿನ ಪೂರೈಕೆಗೆ

ಹೆಚ್ಚಿನ ಆದ್ಯತೆ ನೀಡಿದ್ದಾರೆ. "ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು ಒಂದು ದೇವಸ್ಥಾನ ನಿರ್ಮಾಣದಲ್ಲಿ, ಮತ್ತೊಂದು ತಟಾಕ ನಿರ್ಮಾಣದಲ್ಲಿ" ಎಂಬ ಮಾತು ಸುಳ್ಳೇನಲ್ಲ.

ಹೀಗಾಗಿ ಕೋಟೆಯ ಒಳಗೆ ಹೇರಳವಾದ ನೀರಿದ್ದು ಎರಡು ನದಿಗಳು ಬಂದು ಸೇರುವಲ್ಲಿ, ನದಿಯ ತೀರದಲ್ಲಿ, ಯಾವಾಗಲೂ ನೀರಿರುವ ಸರೋವರ, ಕೆರೆಯ ಸಮೀಪ ಹಾಗೂ ನೀರಿನ ಒಸರನ್ನು ಹೊಂದಿದ ಪ್ರದೇಶಗಳಲ್ಲಿ ಕೋಟೆಗಳನ್ನು ನಿರ್ಮಿಸಬೇಕು ಎಂದು ಹೇಳಲಾಗುತ್ತದೆ. ಹಾಗಾಗಿ ಕೌಟಿಲ್ಯ, ಕಾಮಂದಕ, ಮನು, ಶುಕ್ರ ಮೊದಲಾದವರು ನೀರಿನಿಂದಾವೃತವಾದ ಜಲದುರ್ಗದ ಕುರಿತು ಹೇಳುತ್ತಾರೆ. ಸಮತಟ್ಟಾದ ಬಯಲುಪ್ರದೇಶವನ್ನು ಹೊಂದಿದ ವಿಜಾಪುರ ಜಿಲ್ಲೆಯಲ್ಲಿ ಮುಖ್ಯವಾಗಿ ಕೃಷ್ಣಾ, ಭೀಮಾ, ಡೋಣಿ ನದಿಗಳು ಹಾಗೂ ಅನೇಕ ಚಿಕ್ಕಪುಟ್ಟ ಹಳ್ಳಗಳು ಹರಿದಿವೆ. ಆದರೆ ಇವುಗಳ ತೀರದುದ್ದಕ್ಕೂ ಕೋಟೆಗಳ ನಿರ್ಮಾಣವಾಗಿದ್ದು ಅವುಗಳಲ್ಲಿ ನದಿಯಿಂದ ನೀರನ್ನು ಪಡೆದು ಸಂಗ್ರಹಿಸುತ್ತಿದ್ದರು.

ವಿಜಾಪುರ ಜಿಲ್ಲೆಯಲ್ಲಿ ಆಡಳಿತ ಮಾಡಿದ ಅನೇಕ ರಾಜಮನೆತನಗಳು, ಸಣ್ಣಪುಟ್ಟ ದೇಸಗತಿ ಮನೆತನಗಳು ತಮ್ಮ ಹಾಗೂ ಜನರ ರಕ್ಷಣೆಗಾಗಿ ಅನೇಕ ಕೆರೆ-ಕಟ್ಟೆಗಳು, ಬಾವಿಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಅನೇಕ ಶಾಸನಗಳು, ಪುರಾತತ್ವೀಯ ಮತ್ತು ಮೌಖಿಕ ಆಕರಗಳು ಸ್ಪಷ್ಟ ಮಾಹಿತಿಯನ್ನು ಒದಗಿಸುತ್ತವೆ. ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳು ಕೋಟೆಯೊಳಗೆ ನೀರನ್ನು ಸಂಗ್ರಹಿಸುವ ವ್ಯವಸ್ಥೆ ಎಲ್ಲರನ್ನೂ ಬೆರಗುಗೊಳಿಸುವಂತಹದ್ದು. ಈ ಕಾಲಾವಧಿಯ ಕಾಲಘಟ್ಟದ ನೀರಾವರಿ ವ್ಯವಸ್ಥೆಯ ಕುರಿತಾಗಿ ಪ್ರತ್ಯೇಕ ಅಧ್ಯಯನಗಳೇ ನಡೆದಿವೆ. ಒಂದು ಹನಿ ಮಳೆ ನೀರಿಗೂ ಶ್ರಮ ವಹಿಸಿ ಅದನ್ನು ಸಂಗ್ರಹಿಸಿಡುವ ಪ್ರಯತ್ನ ಮಾಡಿದ್ದಾರೆ. ಹಾಗೆ ಸಂಗ್ರಹಿಸಿದ ನೀರನ್ನು ಭೂಗತ ಕಾಲುವೆಗಳ ಮೂಲಕ ಕೋಟೆಯೊಳಗೆ ಹರಿಸಿ ಬಾವಿ, ಕೊಳ, ಹೌಜುಗಳಲ್ಲಿ ಹಾಗೂ ಕಂದಕದಲ್ಲಿ ಸಂಗ್ರಹಿಸುವ ವ್ಯವಸ್ಥೆ ಮಾಡಲಾಗಿತ್ತು. ಕ್ರಿ.ಶ. ೧೮೧೮ರಲ್ಲಿ ಕ್ಯಾಪ್ಟನ್ ಸೈಕ್ ಎಂಬುವವನು ವಿಜಾಪುರದಲ್ಲಿ ಬಿಡಾರ ಹೂಡಿದ್ದಾಗ ಕೋಟೆಯ ಒಳಗಡೆ ಏಳುನೂರು ಮೆಟ್ಟಿಲುಗಳಿದ್ದ ಬಾವಿಗಳನ್ನು, ಮೂರುನೂರು ಸೇದುವ ಬಾವಿಗಳನ್ನು ಗುರುತಿಸಿ ದಾಖಲಿಸಿದ್ದಾನೆ. ಈ ರೀತಿ ಅವಶ್ಯತೆಗನುಗುಣವಾಗಿ ನೀರನ್ನು ಸಂಗ್ರಹಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದು ತಿಳಿದುಬರುತ್ತದೆ.

ರಾಜಧಾನಿಕೇಂದ್ರಿತವಾದ ವಿಜಾಪುರ ಕೋಟೆಯನ್ನು ಹೊರತುಪಡಿಸಿದರೆ, ನದಿಗಳ ತೀರದಲ್ಲಿ ನಿರ್ಮಾಣವಾದ ಕೋಟೆಗಳು ನೈಸರ್ಗಿಕವಾಗಿ ಹರಿಯುವ ನೀರನ್ನೇ ಕಾಲುವೆಗಳ ಮೂಲಕ ಕೆರೆ, ಕಂದಕಗಳಲ್ಲಿ ಸಂಗ್ರಹಿಸುವ ಮತ್ತು ಕೃಷಿ ಬಳಕೆಗೆ ಉಪಯುಕ್ತವಾಗುವಂತೆ ಶ್ರಮ ವಹಿಸಿದ್ದು ಕಂಡುಬರುತ್ತದೆ. ಜಿಲ್ಲೆಯ ಅನೇಕ ಶಾಸನಗಳು ಕೆರೆ ಹಾಗೂ ಬಾವಿಗಳನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತವೆ. ಆದಿಲ್‌ಶಾಹಿಗಳ ಕಾಲಘಟ್ಟದಲ್ಲಿ ಮಮದಾಪುರದಲ್ಲಿ ಮಹಮ್ಮದ್ ಆದಿಲ್‌ಶಾಹನ ಆಡಳಿತದಲ್ಲಿ

ಎರಡು ಬೃಹತ್ ಕೆರೆಗಳನ್ನು ಕಟ್ಟಿಸಿ ಶಾಸನಗಳನ್ನು ಹೊರಡಿಸಿದ್ದಾನೆ. ಬಹುತೇಕ ದೇಸಗತಿ ಮನೆತನಗಳು ತಮ್ಮ ವೈಯಕ್ತಿಕ ಉಪಯೋಗಕ್ಕಾಗಿ ವಾಡೆಯೊಳಗೆ, ಸಾರ್ವಜನಿಕರ ಬಳಕೆಗಾಗಿ ಕೋಟೆಯೊಳಗೆ ಬಾವಿಗಳನ್ನು ತೋಡಿಸಿ ನೀರಿನ ಕೊರತೆಯನ್ನು ಪೂರೈಸಿದ್ದಾರೆ.

ಜಿಲ್ಲೆಯಲ್ಲಿ ಪ್ರಾಚೀನಕಾಲದಿಂದಲೂ ನೀರಿನ ಸಂಗ್ರಹಕ್ಕಾಗಿ ಪುಷ್ಕರಿಣಿ, ಬಾವಿಗಳು ನಿರ್ಮಾಣವಾಗಿದ್ದನ್ನು ಕಾಣುತ್ತೇವೆ. ಸಿಂದಗಿ ತಾಲೂಕಿನ ಜಾಲವಾದದಲ್ಲಿ ನಿರ್ಮಾಣವಾದ ಕೋಟೆಯು ಚಿಕ್ಕದಾಗಿದ್ದು ಇದಕ್ಕೆ ಹೊಂದಿಕೊಂಡು ಕೋಟೆಯ ಹೊರಗೆ ಬಾವಿಯನ್ನು ನಿರ್ಮಿಸಿದ್ದಾರೆ. ಕೋಟೆಗೋಡೆಯಲ್ಲಿ ಬಾಗಿಲನ್ನು ಬಿಟ್ಟು ಒಳಗಿನಿಂದಲೇ ಬಾವಿಗೆ ಸಂಪರ್ಕವನ್ನು ಕಲ್ಪಿಸಿದ್ದಾರೆ. ಇಂಡಿ ತಾಲೂಕಿನ ಸಾತಲಗಾಂವದಲ್ಲಿ ವಾಡೆಯೊಳಗೆ ಕಮಾನಾಕೃತಿಯ ದ್ವಾರವುಳ್ಳ ಬಾವಿಯಿದೆ. ಈ ರೀತಿಯ ರಚನೆಗಳು ಸಿಂದಗಿ, ದೇವರಹಿಪ್ಪರಗಿ, ಗೋಲಗೇರಿ, ಆಲಮೇಲ, ಯರಲಝೇರಿ, ಸಾಲೋಟಗಿ, ಕಲಕೇರಿ, ಕೋಟ್ನಾಳ, ಹಿರೇಮುರಾಳ ಇನ್ನೂ ಅನೇಕ ಗ್ರಾಮಗಳಲ್ಲಿ ಕಂಡುಬರುತ್ತವೆ. ಇವೆಲ್ಲವೂ ಆದಿಲ್‌ಶಾಹಿಗಳ ಕಾಲದ ಇಂಡೋ-ಇಸ್ಲಾಮಿಕ್ ಮಾದರಿಯ ರಚನೆಯನ್ನು ಹೊಂದಿವೆ.

ಒಟ್ಟಾರೆಯಾಗಿ ಕೋಟೆಗೆ ಮುತ್ತಿಗೆ ಹಾಕುವ ಶತ್ರುಗಳಿಗಿಂತಲೂ ಅವರನ್ನು ಎದುರಿಸಿ ಕೋಟೆಯನ್ನು ಉಳಿಸಿಕೊಳ್ಳಲೆಂದು ಹೋರಾಡುವವರಿಗೆ ಆಕ್ರಮಣಕಾರರಿಗಿಂತ ಹೆಚ್ಚಿನ ಸಿದ್ಧತೆಯ ಅಗತ್ಯವಿತ್ತು. ಎಷ್ಟೇ ದೀರ್ಘಾವಧಿಯವರೆಗೆ ಆಕ್ರಮಣ ನಡೆಸಿದರೂ ಅವರ ತಂತ್ರಗಳನ್ನೆಲ್ಲ ವಿಫಲಗೊಳಿಸುವಲ್ಲಿ ಕೋಟೆಯ ಒಳಗೆ ಇವರು ಮಾಡಿಕೊಂಡ ಸೂಕ್ತ ಏರ್ಪಾಡುಗಳಲ್ಲಿ ರಾಜ್ಯದ ಅಳಿವು-ಉಳಿವು ನಿರ್ಧಾರವಾಗುತ್ತಿತ್ತು. ಯಾವ ತಂತ್ರಕ್ಕೂ ಶತ್ರು ಮಣಿಯದಿದ್ದಾಗ ಅಥವಾ ಕೋಟೆಯೊಳಗಿನ ಆಯುಧೋಪಕರಣಗಳು, ಆಹಾರ ಮತ್ತು ನೀರಿನ ಸಂಗ್ರಹ ತೀರಿಹೋದಾಗ ಬೇರೆ ದಾರಿಯಿಲ್ಲದೆ ಕೋಟೆಯಿಂದ ಹೊರಬರಬೇಕಾಗುತ್ತದೆ. ಈ ಉದ್ದೇಶದಿಂದ ಕೋಟೆಯಲ್ಲಿ ಆಹಾರಧಾನ್ಯಗಳನ್ನು ಮತ್ತು ನೀರನ್ನು ಸಂಗ್ರಹಿಸುತ್ತಿದ್ದ ಕಟ್ಟಡಗಳು ಒಂದಲ್ಲಾ ಒಂದು ರೀತಿಯಿಂದ ರಕ್ಷಣಾಸ್ಮಾರಕಗಳಾಗಿ ಕಂಡುಬರುತ್ತವೆ.

೫.೫. ದೇವಾಲಯಗಳು

ನಮ್ಮ ಸಂಸ್ಕೃತಿಯಲ್ಲಿ ದೇವರು ಮತ್ತು ದೇವಾಲಯಗಳ ಪಾತ್ರ ಬಹುಮುಖ್ಯವಾದುದು. ಜೀವನದ ಎಲ್ಲ ಆಚಾರ ವ್ಯವಹಾರಗಳನ್ನೂ ಚಲನವಲನಗಳನ್ನೂ ಅದು ವ್ಯಾಪಿಸಿದೆ. ಜೀವನದಲ್ಲಿ ಬರುವ ಕಷ್ಟಸುಖಗಳಿಗೂ ಒಳಿತುಕೆಡಕುಗಳಿಗೂ ರಕ್ಷಣೆಯನ್ನು ನೀಡುತ್ತದೆ ಎಂಬ ನಂಬಿಕೆಯಿದೆ. ಜನರ ಬದುಕಿನಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿ ಬೆಳೆದುಬಂದಿರುವ ದೇವರ ಬಗೆಗಿನ ನಂಬಿಕೆಯು ಜನಪದರ ಬದುಕಿನ ಒಂದು ಭಾಗವಾಗಿದೆ. ತಾವು ಮಾಡುವ ಕಾರ್ಯ ಕೈಗೂಡಲು ದೇವರ ರಕ್ಷಣೆ ಬೇಕು.

ಭೂಮಿಪೂಜೆ ಮತ್ತು ಮಾತೃಪೂಜೆಯನ್ನು ಭಯ, ಭಕ್ತಿ, ಭೀತಿಯಿಂದ ಆರಾಧಿಸುತ್ತಿದ್ದ ಗ್ರಾಮೀಣರಲ್ಲಿ ಅವು ಮುಂದೆ ಗ್ರಾಮದೇವತೆಗಳಾಗಿಯೂ ರೂಪುಪಡೆದುಕೊಂಡವು. ಅಲ್ಲದೆ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಅಥವಾ ಚಾರಿತ್ರಿಕ ವ್ಯಕ್ತಿಗಳು ಮೃತರಾದ ನಂತರ ಹಲವು ವರ್ಷಗಳು ಕಳೆದಂತೆ ಗ್ರಾಮದೇವತೆಗಳೆನಿಸಿಕೊಂಡವು. ಹಾಗೇಯೇ ಮಹಾಸತಿಯರಾದ ಹೆಣ್ಣುಮಕ್ಕಳು ಗ್ರಾಮದೇವತೆಗಳೆನಿಕೊಂಡರು. ಕಾಲಘಟ್ಟದಲ್ಲಿ ತಮ್ಮ ಜೀವನದ ಅನುಭವದಿಂದಲೇ ಹುಟ್ಟಿದ ಇವುಗಳಿಗೆ ಪುರಾಣಕಥೆಗಳನ್ನು ಜೋಡಿಸಿದರು. ಅಲ್ಲದೆ ದೇವಾಲಯಗಳ ನಿರ್ಮಾಣ ಮಾಡುವುದು ಪುಣ್ಯಕಾರ್ಯವೆಂದು ಪರಿಗಣಿತವಾಗಿದ್ದಿತು. ಈ ಹಿನ್ನೆಲೆಯಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾದವು. ಜಿಲ್ಲೆಯಲ್ಲಿ ಇದುವರೆಗೆ ಲಭ್ಯವಾದ ಶಾಸನಗಳು ಹಾಗೂ ಪುರಾತತ್ವೀಯ ಆಕರಗಳ ಹಿನ್ನೆಲೆಯಲ್ಲಿ ರಾಷ್ಟ್ರಕೂಟರ ಕಾಲದಿಂದ ದೇವಾಲಯಗಳು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ.

ರಾಷ್ಟ್ರಕೂಟರಿಂದ ಸೇವುಣರ ಕಾಲಾವಧಿಯಲ್ಲಿ ತರ್ದವಾಡಿ(ಇಂದಿನ ತದ್ದೇವಾಡಿ) ಸಾವಿರ ಹಳ್ಳಿಗಳಲ್ಲಿ ವಿಜಾಪುರ ಜಿಲ್ಲೆಯು ಸೇರಿಕೊಂಡಿತ್ತು. ಈ ಪ್ರದೇಶದ ಕಲೆ, ಸಾಹಿತ್ಯದ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಲಾಗಿತ್ತಲ್ಲದೆ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದಂತೆ ನಮಗೆ ಸಿಂದಗಿ ತಾಲೂಕಿನ ಯಂಕಂಚಿ, ಯರಗಲ್, ಜಟ್ಟಗಿ, ಇಂಡಿ ತಾಲೂಕಿನ ಸಾಲೋಟಗಿಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದನ್ನು ಕಾಣುತ್ತೇವೆ. ಅದೇ ರೀತಿ ಕಲ್ಯಾಣ ಚಾಳುಕ್ಯರ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ಸುಮಾರು ೧೩೬ಕ್ಕಿಂತಲೂ ಅಧಿಕ ದೇವಾಲಯಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಸೇವುಣರ ಕಾಲದಲ್ಲಿ ಯಾವುದೇ ದೇವಾಲಯಗಳ ನಿರ್ಮಾಣದ ಉಲ್ಲೇಖ ಕಂಡುಬರದಿದ್ದರೂ ಈ ಮೊದಲು ನಿರ್ಮಾಣವಾದ ದೇವಾಲಯಗಳಿಗೆ ಭೂಮಿ ದಾನವನ್ನು ಕೊಡುವುದರ ಮೂಲಕ ಅವುಗಳ ಜೀರ್ಣೋದ್ಧಾರಗೊಳಿಸಿದ್ದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಕ್ರಿ.ಶ. ೧೫ರಿಂದ ೧೭ನೇ ಶತಮಾನದವರೆಗೆ ಜಿಲ್ಲೆಯು ಮುಸ್ಲಿಂ ಪ್ರಭುತ್ವಕ್ಕೆ ಒಳಪಟ್ಟಿದ್ದರೂ ಇಲ್ಲಿ ಆಡಳಿತ ಮಾಡಿದ ಸುಲ್ತಾನರು ಸರ್ವಧರ್ಮ ಸಮನ್ವಯತೆಯನ್ನು ಹೊಂದಿದ್ದರು. ಹೀಗಾಗಿ ಇವರ ಆಡಳಿತಾವಧಿಯಲ್ಲಿ ಅನೇಕ ದೇವಾಲಯಗಳು ಜೀರ್ಣೋದ್ಧಾರಗೊಂಡವು. ಜೊತೆಗೆ ಹೊಸದಾಗಿ ದೇವಾಲಯಗಳನ್ನು, ಮಸೀದಿಗಳನ್ನು ನಿರ್ಮಾಣ ಮಾಡಿರುವುದನ್ನು ಕಾಣುತ್ತೇವೆ.

ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ಕೋಟೆಯೊಳಗೆ ಕೆಲವು ದೇವಾಲಯಗಳು ನಿರ್ಮಾಣವಾಗಿದ್ದನ್ನು ಕಾಣುತ್ತೇವೆ. ಇಂಡಿ ತಾಲೂಕಿನ ನಿಂಬಾಳದಲ್ಲಿ ನಿರ್ಮಾಣವಾದ ದೇವಾಲಯವನ್ನು ಕೋಟಿಶಂಕರಲಿಂಗ ದೇವಾಲಯವೆಂದೇ ಶಾಸನಗಳು ಉಲ್ಲೇಖಿಸುತ್ತವೆ. ಅದೇ ರೀತಿ ತಾಳಿಕೋಟೆ, ವಿಜಾಪುರದ ಈಗಿನ ಅರಕಿಲ್ಲಾ ಪ್ರದೇಶ, ಇಂಗಳೇಶ್ವರ, ಮುತ್ತಗಿ, ಹೆಬ್ಬಾಳ, ಮುದ್ದೇಬಿಹಾಳಗಳಲ್ಲಿ ನಿರ್ಮಾಣವಾದ ದೇವಾಲಯಗಳು ಕೋಟೆಯೊಳಗೆ ನಿರ್ಮಾಣವಾಗಿದ್ದು ಕಂಡುಬರುತ್ತವೆ. ಇವು ಅರಸರಾದಿಯಾಗಿ ಜನಸಾಮಾನ್ಯರಲ್ಲಿ ಆತ್ಮಸ್ಥೈರ್ಯವನ್ನು ತುಂಬುವ

ಕಾರ್ಯವನ್ನು ನಿರ್ವಹಿಸುತ್ತಿದ್ದವಲ್ಲದೆ, ಆಪತ್ಕಾಲದಲ್ಲಿ ದೇವರು ನಮ್ಮ ಕೈ ಹಿಡಿಯುತ್ತಾನೆ ಎಂಬ ನಂಬಿಕೆ ಜನರಲ್ಲಿ ಮೂಡಿತ್ತು. ಈ ಹಿನ್ನೆಲೆಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿಕೊಂಡಿರುವುದನ್ನು ಕಾಣುತ್ತೇವೆ.

ಸೈನಿಕರ ವೀರತ್ವದ ಸಂಕೇತವಾಗಿ ಅಥವಾ ಯುದ್ಧಕ್ಕೆ ಹೋಗುವಾಗ ಆಂಜನೇಯನ ಬಲ ಸೈನಿಕರಲ್ಲಿ ತುಂಬಿಕೊಳ್ಳಲಿ ಎಂಬ ನಂಬಿಕೆ ಮತ್ತು ಗ್ರಾಮದ ರಕ್ಷಣೆಯ ದೃಷ್ಟಿಯಿಂದ ಕೋಟೆಯ ಹೊರಗೆ ಪ್ರತಿ ದ್ವಾರಬಾಗಿಲಿನ ಹತ್ತಿರ ಆಂಜನೇಯ ದೇವಸ್ಥಾನಗಳು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ.

ಒಂದನ್ನು ಕಳೆದುಕೊಳ್ಳುವುದರಿಂದ ಇನ್ನೊಂದನ್ನು ಉಳಿಸಿಕೊಳ್ಳುವ ತ್ಯಾಗದ ಪ್ರತೀಕವಾಗಿ ಚಾರಿತ್ರಿಕ ವ್ಯಕ್ತಿ ಸತ್ತಾಗ, ಯುದ್ಧದಲ್ಲಿ ವೀರಮರಣವನ್ನಪ್ಪಿದ ಸೈನಿಕರಿಗಾಗಿ ಹಾಗೂ ಮಹಾಸತಿಯಾದ ಹೆಣ್ಣುಮಕ್ಕಳಿಗಾಗಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವು ಇಂದು ಗ್ರಾಮದೇವತೆಗಳ ರೂಪದಲ್ಲಿ ಆರಾಧನೆಗೊಳ್ಳುತ್ತಿವೆ. ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಾಳಿಕೋಟೆ, ಇಂಡಿ ತಾಲೂಕಿನ ಹಲಸಂಗಿ ಹಾಗೂ ವಿಜಾಪುರ ತಾಲೂಕಿನ ಮನಗೂಳಿಯಲ್ಲಿ ನಿರ್ಮಾಣವಾದ ಕೋಟೆ ಮತ್ತು ಹುಡೆವುಗಳಿಗೆ ಹೆಣ್ಣುಮಕ್ಕಳನ್ನು ನರಬಲಿಯಾಗಿ ಕೊಟ್ಟ ಪ್ರಸಂಗಗಳು ಜನಪದರ ಬಾಯಲ್ಲಿ ಹಾಸುಹೊಕ್ಕಾಗಿವೆ. ಹೀಗೆ ಬಲಿಯಾದ ಸ್ತ್ರೀಯರು ಗ್ರಾಮದೇವತೆಗಳಾಗಿ ಪೂಜೆಗೊಳ್ಳುತ್ತಿದ್ದಾರೆ. ಇಂದಿಗೂ ಗ್ರಾಮದ ರಕ್ಷಣೆಯನ್ನು ಈ ದೇವತೆಗಳು ಮಾಡುತ್ತಾರೆ ಎಂಬುದು ಸ್ಥಳೀಯರ ನಂಬಿಕೆಯಾಗಿದೆ.

ಜನರ ರಕ್ಷಣೆಗಾಗಿ ಹಾಗೂ ತಮ್ಮ ಸಂಪತ್ತಿನ ರಕ್ಷಣೆಗಾಗಿ ಹುಟ್ಟಿಕೊಂಡ ಕೋಟೆ, ವಾಡೆ, ಹುಡೆವುಗಳು ಕೂಡ ದೇವಾಲಯಗಳ ಹಾಗೆ ಇಂದು ಒಂದಲ್ಲಾ ಒಂದು ರೀತಿಯಿಂದ ಪೂಜೆಗೊಳ್ಳುತ್ತಿವೆ. ಅದರಲ್ಲಿ ಜಿಲ್ಲೆಯಲ್ಲಿ ನಿರ್ಮಾಣವಾದ ಬಹುತೇಕ ಹುಡೆವುಗಳು ಸಂಪತ್ತಿನ ಸಂಕೇತವಾಗಿ 'ಹುಡೆದ ಲಕ್ಷ್ಮಿ' ಎಂದು ಪೂಜೆಗೊಳ್ಳುತ್ತಿವೆ. ಅವು ಸಂಪೂರ್ಣವಾಗಿ ನಾಶ ಹೊಂದಿದರೂ ನಿರ್ಮಾಣವಾದ ಸ್ಥಳದಲ್ಲಿ ನಾಲ್ಕು ಚಪ್ಪಡಿಕಲ್ಲುಗಳ ಗುಡಿಗಳನ್ನು ನಿರ್ಮಿಸಿ ಪೂಜಿಸುತ್ತಿದ್ದದ್ದು ಕಂಡುಬರುತ್ತದೆ.

ಜಿಲ್ಲೆಯಲ್ಲಿ ಆಂಜನೇಯನ ದೇವಸ್ಥಾನಗಳ ಹಾಗೆ ಗ್ರಾಮದ ರಕ್ಷಣೆಯನ್ನು ಮಾಡುವ ಗ್ರಾಮದ ದೈವವಾಗಿ ಹಿರೋಡ್ಯ ಎಂಬ ಗ್ರಾಮದೇವತೆ ಕಾಣಿಸಿಕೊಳ್ಳುತ್ತದೆ. ಹಿರೋಡ್ಯ ಎಂಬ ದೈವವು ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಕೆಲವು ಗ್ರಾಮಗಳಲ್ಲಿ ಕಂಡುಬರುವ ಗ್ರಾಮದೇವತೆಯಾಗಿದೆ. ಇದನ್ನು ಬಯಲುಪ್ರದೇಶಗಳಲ್ಲಿಯೇ ಹೆಚ್ಚಾಗಿ ಪೂಜಿಸುತ್ತಾರೆ. ಇದು 'ಊರಿನ ಹಿರಿಯ ಒಡೆಯ' ಎಂಬ ಅರ್ಥವನ್ನು ಸೂಚಿಸುತ್ತದಲ್ಲದೆ ಚಾರಿತ್ರಿಕ ವ್ಯಕ್ತಿಯಾಗಿ ಪೂಜೆಗೊಳ್ಳುತ್ತಿದೆ. ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಊರಿನ ಪ್ರವೇಶದ್ವಾರ, ಕೋಟೆಗೋಡೆಯ ಚಿಕ್ಕ ಗೂಡಿನಲ್ಲಿ, ಇಲ್ಲವೆ ರಸ್ತೆಯ ಬದಿಯ ಚಿಕ್ಕ ಗುಡಿಯಲ್ಲಿ ಒಂದು ನಿರಾಕಾರ ಕಲ್ಲನ್ನು ಇಟ್ಟು

ಪೂಜಿಸುತ್ತಾರೆ. ಗ್ರಾಮದ ಜನರ, ಪ್ರಾಣಿಪಕ್ಷಿಗಳ ಹಾಗೂ ಗ್ರಾಮವನ್ನು ರಾತ್ರಿಯೆಲ್ಲ ಈ ದೈವವು ಕಾವಲು ಕಾಯ್ದು ರಕ್ಷಣೆ ಮಾಡುತ್ತದೆ ಎಂಬ ನಂಬಿಕೆಯಿದೆ. ಅಲ್ಲದೆ ಈ ಗ್ರಾಮವು ಈತನಿಂದಲೇ ಸ್ಥಾಪಿತವಾಯಿತು ಎಂಬ ನಂಬಿಕೆಯು ಕೂಡ ಜನರಲ್ಲಿ ಹಾಸುಹೊಕ್ಕಾಗಿದೆ. ಇನ್ನೂ ಕೆಲವು ಗ್ರಾಮಗಳಲ್ಲಿ ಮನೆಯ ದನಗಳ ಕೊಟ್ಟಿಗೆಯ ಗೂಡಿನಲ್ಲಿ ಪೂಜಿಸುವುದು ಕಂಡುಬರುತ್ತದೆ. ಮನೆಯಲ್ಲಿ ಹಾವು, ಚೇಳುಗಳಂತಹ ವಿಷಕಾರಿ ಕ್ರಿಮಿಕೀಟಗಳು ಮನೆಯಲ್ಲಿ ಕಂಡುಬಂದರೆ ಮೊದಲು ಹಿರೋಡ್ಯನಿಗೆ ಎಣ್ಣೆ ಹಾಕಿ ದೀಪ ಹಚ್ಚಿ ಬರುತ್ತಾರೆ. ಇದರಿಂದ ಮನೆಯಲ್ಲಿ ಸೇರಿಕೊಂಡಿರುವ ವಿಷಕಾರಿ ಸರೀಸೃಪಗಳು ಹೊರಹೋಗುತ್ತವೆ ಎಂಬ ನಂಬಿಕೆಯು ಕಂಡುಬರುತ್ತದೆ. ಹೀಗೆ ಹುಟ್ಟಿನಿಂದ ಸಾಯುವವರೆಗೆ ನಮಗೆ ದೈವೀಶಕ್ತಿಯ ಬೆಂಬಲ, ಆಶೀರ್ವಾದ ಅವಶ್ಯ ಎಂದು ಭಾವಿಸಿದ ಮಾನವನು ದೈವಿಶಕ್ತಿಯಿಂದ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಿದ್ದನ್ನು ಕಾಣಬಹುದು.

೫.೬. ಭಿತ್ತಿಶಿಲ್ಪಗಳು

ಜಿಲ್ಲೆಯಲ್ಲಿ ನಿರ್ಮಾಣವಾದ ಕೋಟೆ-ಕೊತ್ತಲಗಳ ಮೇಲೆ ವಿವಿಧ ರೀತಿಯ ಭಿತ್ತಿಶಿಲ್ಪಗಳು ಕಂಡುಬರುತ್ತವೆ. ಇವು ಕೋಟೆಯ ಬಲಿಷ್ಠತೆಯ ಸಂಕೇತ ಹಾಗೂ ಅಲಂಕಾರಕ್ಕಾಗಿ ಮಾಡಿದವುಗಳಾಗಿವೆ. ವಿಜಾಪುರ ಕೋಟೆಗೋಡೆಯ ಮೇಲೆ ಕೋಟೆಯ ಬಲಿಷ್ಠತೆಯನ್ನು ಸೂಚಿಸಲು ಹಲವು ಭಿತ್ತಿಶಿಲ್ಪಗಳಿವೆ. ಅವು ಆನೆಯನ್ನು ತುಳಿಯುತ್ತಿರುವ ಹುಲಿ, ಎರಡು ಸಿಂಹಗಳು ಆನೆಯನ್ನು ಕೆಳಗೆ ಮೀಟುತ್ತಿರುವಂತೆ ಚಿತ್ರಿಸಲಾಗಿರುವ ಶಿಲ್ಪಗಳು, ಎರಡು ಮುಖಗಳಿರುವ ಗಂಡಭೇರುಂಡ ಶಿಲ್ಪವು ಎರಡು ಬಾಯಲ್ಲಿ ಮತ್ತು ಎರಡು ಕಾಲುಗಳಲ್ಲಿ ಆನೆಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಧೃಡಕಾಯದ ಎರಡು ಆನೆಗಳು ಗುದ್ದಾಡುತ್ತಿರುವಂತೆ ಅಥವಾ ಬಲಿಷ್ಠವಾದ ಆನೆ ಹಾಗೂ ಹುಲಿಯನ್ನು ಸಂಕೇತಿಸುವ ಶಿಲ್ಪಗಳು ಕೋಟೆಯ ಸುತ್ತಲೂ ಗೋಡೆಯ ಮೇಲೆ ಶತ್ರುಗಳಿಗೆ ಕೋಟೆಯ ಬಲಿಷ್ಠತೆಯನ್ನು ಸೂಚಿಸುವ ಶಿಲ್ಪಗಳಾಗಿ ಕಂಡುಬರುತ್ತವೆ. ಈಗಿನ ಮಾಲಿಕ್-ಎ-ಮೈದಾನ್ ತೋಫಿರುವ ಬುರುಜಿನಲ್ಲಿ ಸಿಂಹದ ಶಿಲ್ಪಗಳಿಂದ ಇದನ್ನು ಸಿಂಹದ ಬುರುಜು ಅಥವಾ ಶಾರ್ಜಾಬುರುಜು ಎಂದು ಕರೆಯುತ್ತಾರೆ. ಪಾದಶಾಹಾಪುರ ದ್ವಾರದ ಮುಂಭಾಗದಲ್ಲಿ ಎರಡು ಕಡೆ ಗೋಡೆಯಲ್ಲಿ ಭಿತ್ತಿಶಿಲ್ಪಗಳಿವೆ. ಎಡಭಾಗದ ಗೋಡೆಯಲ್ಲಿ ಕುದುರೆಯ ಮೇಲೆ ಹೋರಾಡುತ್ತಿರುವ ವೀರರ ಶಿಲ್ಪ, ಇನ್ನೊಂದು ನೃತ್ಯ ಮಾಡುತ್ತಿರುವ ಸ್ತ್ರೀಯ ಶಿಲ್ಪ, ಬಲಭಾಗದ ಗೋಡೆಯಲ್ಲಿ ಆನೆಯ ಮೇಲೆ ಕುಳಿತ ವ್ಯಕ್ತಿಗಳು ಹೋರಾಡುತ್ತಿರುವ ಶಿಲ್ಪಗಳು ಕಂಡುಬರುತ್ತವೆ.

ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ಕೆಲವು ಕೋಟೆಗಳಲ್ಲಿ ಸೂರ್ಯ, ಚಂದ್ರ, ಗಣೇಶನ ಉಬ್ಬುಶಿಲ್ಪಗಳು ದ್ವಾರದ ತೊಲೆಯಲ್ಲಿ ಕಂಡುಬರುತ್ತವೆ. ಸೂರ್ಯ ಚಂದ್ರರಿರುವವರೆಗೂ ಕೋಟೆಯು ಉಳಿದುಕೊಂಡು ಬರಲಿ ಎಂಬ ನಂಬಿಕೆಯಿಂದ ಈ ಶಿಲ್ಪಗಳನ್ನು ಬಿಡಿಸಿರುವುದನ್ನು ಕಾಣುತ್ತೇವೆ.

ಹೋರಾಟದಲ್ಲಿ ಅರಸನ ಪರವಾಗಿ ಅಥವಾ ಊರಿನ ಹಿತರಕ್ಷಣೆಗಾಗಿ ಶತ್ರುವಿನಿಂದ ಮಡಿದ ವೀರರ ಸ್ಮಾರಕಶಿಲ್ಪಗಳು ಜಿಲ್ಲೆಯ ಅನೇಕ ಕಡೆ ಕಂಡುಬರುತ್ತವೆ. ಇವು ಸೂಕ್ಷ್ಮವಾಗಿ ಸತ್ತ ವ್ಯಕ್ತಿಗಳ ಸಾವಿನ ಹಿಂದೆ ಇರುವ ಮನೋಧರ್ಮವನ್ನು, ಅವನ ಸಾವಿನಿಂದ ಅವನ ಬಗ್ಗೆ ಜನರಲ್ಲಿ ಗೌರವ ಭಾವನೆಯನ್ನು ಮೂಡಿಸುತ್ತವೆ. ಅಲ್ಲದೆ ವೀರನ ಪರಾಕ್ರಮ, ಸಚ್ಚಾರಿತ್ರ್ಯ, ಸಂಯಮಶೀಲತೆ ಇವುಗಳಿಂದ ವೀರರನ್ನು ದೈವಗಳೆಂದು ಪರಿಗಣಿಸಿ ಆರಾಧನೆ ಮಾಡುತ್ತಾರೆ. ಜೊತೆಗೆ ಅವನನ್ನು ತಮ್ಮ ಆದರ್ಶಪುರುಷನನ್ನಾಗಿ ಸ್ವೀಕರಿಸುತ್ತಾರೆ. ಈ ರೀತಿಯ ಹಲವು ವೀರಗಲ್ಲುಗಳು ಜಿಲ್ಲೆಯ ಯರಗಲ್ಲು, ಮಲಘಾಣ, ಕಕ್ಕಳಮೇಲಿ, ಸಾತಲಗಾಂವ, ಸಾಲೋಟಗಿ, ಜಟ್ಟಗಿ ಮುಂತಾದ ಕಡೆ ಕಾಣುತ್ತೇವೆ.

ಈ ರೀತಿಯ ರಕ್ಷಣಾಸಂಬಂಧಿ ಸ್ಮಾರಕಗಳಲ್ಲಿ ಹುಡೆವುಗಳು ಮತ್ತು ಅಗಸೆ ಬಾಗಿಲುಗಳು ಚಿಕ್ಕಪುಟ್ಟ ಗ್ರಾಮಗಳ ಜನರನ್ನು ರಕ್ಷಣೆ ಮಾಡಿದರೆ, ಅವರು ಸಂಗ್ರಹಿಸಿದ ಸಂಪತ್ತನ್ನು ರಕ್ಷಿಸುವಲ್ಲಿ ಹಗೇವುಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವೆಲ್ಲವುಗಳಿಗಿಂತಲೂ ಮೇಲಾಗಿ ಅರಸರಾದಿಯಾಗಿ ಜನಸಾಮಾನ್ಯರ ಬದುಕನ್ನು ರಕ್ಷಿಸುವ ದೈವೀಶಕ್ತಿಯು ಮೂಲರಕ್ಷಣಾಸ್ವರೂಪವಾಗಿ ಕಂಡುಬರುತ್ತದೆ. ಮನುಷ್ಯರ ಆರ್ಥಿಕ ಚಟುವಟಿಕೆ ಮತ್ತು ಅವರ ಸಂಸ್ಕೃತಿ ನಿರ್ಮಾಣದಲ್ಲಿ ಅಪೂರ್ವವಾದ ಪಾತ್ರ ವಹಿಸುವ ಇಂತಹ ರಕ್ಷಣಾತ್ಮಕ ಕಟ್ಟಡಗಳು ಇಂದು ನಾಗರಿಕತೆಯ ಹೊಡೆತಕ್ಕೆ ಸಿಕ್ಕು ಸಂರಕ್ಷಣೆಯಿಲ್ಲದೆ ಹಾಳಾಗುತ್ತಿವೆ. ಇವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಅರುಣಿ ಎಸ್. ಕೆ. (ಲೇ.), ೨೦೦೬, ಹುಡೆ ಅಥವಾ ಹುಡೇವು: ಮಧ್ಯಕಾಲೀನ ಡೆಕ್ಕನದ ಗ್ರಾಮ-ರಕ್ಷಣಾವಾಸ್ತು ಒಂದು ಅವಲೋಕನ, Studies in Karnataka History and Culture Proceedings of Karnataka History Congress Vol.VI, ಪು-೧೩೯.

೨. ಮಹದೇವ ಸಿ., ೨೦೧೧, ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪು-೧೦.

೩. ಅರುಣಿ ಎಸ್. ಕೆ.(ಲೇ.), ೨೦೦೬, ಹುಡೆ ಅಥವಾ ಹುಡೇವು: ಮಧ್ಯಕಾಲೀನ ಡೆಕ್ಕನದ ಗ್ರಾಮ-ರಕ್ಷಣಾವಾಸ್ತು: ಒಂದು ಅವಲೋಕನ, Studies in Karnataka History and Culture Proceedings of Karnataka History Congress Vol.VI, ಪು-೧೩೯.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಪ್ರಾಚೀನ ಕಾಲದಿಂದ ತನ್ನದೇ ಆದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ವಿಜಾಪುರ ಜಿಲ್ಲೆಯು ಪ್ರಮುಖ ಐತಿಹಾಸಿಕ ತಾಣವಾಗಿದೆ. ಇಂದು ಸುಮಾರು ೧೦,೫೪೧ ಚ.ಕಿ.ಮೀ. ವಿಸ್ತೀರ್ಣವುಳ್ಳ ಈ ಪ್ರದೇಶವು ಪ್ರಾಚೀನ ಕಾಲದಲ್ಲಿ ಅನೇಕ ಪ್ರಮುಖ ಆಡಳಿತ ವಿಭಾಗಗಳನ್ನು ಹೊಂದಿತ್ತು. ಇಂದು ಆಡಳಿತದ ಅನುಕೂಲಕ್ಕೋಸ್ಕರ ಅವುಗಳನ್ನೆಲ್ಲ ಒಟ್ಟುಗೂಡಿಸಿ ಐದು ತಾಲೂಕುಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಈ ಆಡಳಿತದ ವಿಭಾಗಗಳನ್ನು ಸಮೀಕ್ಷಿಸಿ ವಿಜಾಪುರ ಜಿಲ್ಲೆಯಾದ್ಯಂತ ಹರಡಿಕೊಂಡಿರುವ ಕೋಟೆ-ಕೊತ್ತಲಗಳ ಸಮಗ್ರ ಅಧ್ಯಯನವನ್ನು ಪ್ರಸ್ತುತ ಮಹಾಪ್ರಬಂಧವು ಒಳಗೊಂಡಿದೆ.

ಮಾನವನ ಭಾವನೆಗಳ ದ್ವೇಷ, ಅಸೂಯೆ, ಮತ್ಸರ, ಸ್ವಾರ್ಥ, ಅಸಹಿಷ್ಣುತೆ ಇವು ಐತಿಹಾಸಿಕ ಕೋಟೆಗಳ ನಿರ್ಮಾಣಕ್ಕೆ ಕಾರಣವಾಗಿವೆ. ಅವು ಬರಿ ಕಲ್ಲು ಮಣ್ಣಿನಿಂದ ಸುತ್ತುವರಿದ ಗೋಡೆಗಳಲ್ಲ. ಆ ಕೋಟೆಗಳ ನಿರ್ಮಾಣದ ಹಿಂದೆ ಶ್ರದ್ಧೆ, ಭಯ, ಭಕ್ತಿ, ಶಿಲ್ಪ, ಸಾಹಿತ್ಯ, ನಿರ್ಮಾಣ ತಾಂತ್ರಿಕತೆ, ಬುದ್ಧಿ ಕೌಶಲ್ಯ ಇತ್ಯಾದಿ ಅಂಶಗಳು ಅಂದಿನ ಸಾಂಸ್ಕೃತಿಕ ಚರಿತ್ರೆಯನ್ನು ಹಸಿರಾಗಿಸಿವೆ. ರಾಜಸ್ವದ ಬದುಕಿನ ಹಾಗೂ ರಕ್ಷಣಾವ್ಯೂಹಗಳಿಗೆ ಅಂತರ್‌ಪ್ರಾಯವಾದ ಕೋಟೆಗಳನ್ನು ನಿರ್ಮಿಸಿ, ಅವುಗಳನ್ನು ಸಮಯಕ್ಕೆ ಅನುಸಾರವಾಗಿ ಜೀರ್ಣೋದ್ಧಾರ ಮಾಡುವ ಹಾಗೂ ಜನಸಂಖ್ಯೆ, ಆಡಳಿತದ ವ್ಯವಸ್ಥೆಯ ಅಂಗಗಳು ಬೆಳೆದಂತೆ ಆ ಕೋಟೆಗಳ ರಕ್ಷಣಾವ್ಯವಸ್ಥೆಯು ವಿಸ್ತಾರರೂಪ ಪಡೆದುಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ಅಧ್ಯಯನಕ್ಕೊಳಪಡಿಸಿದ ಕೋಟೆಗಳು ಅಗಣ ರಾಜಕೀಯ ಶಕ್ತಿಗಳ ಪ್ರತಿರೂಪವಾಗಿವೆ. ವಿಸ್ತಾರವಾದ ಕೋಟೆಯ ಗೋಡೆಗಳನ್ನು, ಬುರುಜುಗಳನ್ನು, ಪ್ರವೇಶದ್ವಾರಗಳನ್ನು, ಅರಮನೆಗಳನ್ನು, ನೀರಿನ ಸಂಗ್ರಹಗಳನ್ನು ಕೇವಲ ಕಟ್ಟುವುದಷ್ಟೇ ಅಲ್ಲ ಅವುಗಳನ್ನು ಕಾಲಕಾಲಕ್ಕೆ ಅವಶ್ಯಕತೆಗೆ ಅನುಗುಣವಾಗಿ ದುರಸ್ತಿ ಮಾಡಿರುವುದು ಕೂಡ ಅಧ್ಯಯನದಿಂದ ತಿಳಿದುಬರುತ್ತದೆ.

ಪ್ರಾಕೃತಿಕವಾಗಿ ಸಮತಟ್ಟಾದ ಭೂಪ್ರದೇಶವನ್ನು ಹೊಂದಿದ ಜಿಲ್ಲೆಯಲ್ಲಿ ಅನೇಕ ಶಾಸನಗಳು, ದೇವಾಲಯಗಳು, ಕೋಟೆಗಳು ಹಾಗೂ ಇತರೆ ಪ್ರಾಚ್ಯಾವಶೇಷಗಳು ಕಂಡುಬರುತ್ತವೆ. ಇವು

ಜಿಲ್ಲೆಯ ಇತಿಹಾಸ ರಚನೆಗೆ ದೊರೆತ ಮಹತ್ವದ ಆಕರಗಳಾಗಿವೆ. ಈ ಪ್ರದೇಶವು ರಾಷ್ಟ್ರಕೂಟರ ಕಾಲದಿಂದ ತರ್ದವಾಡಿ ಸಾವಿರ ಆಡಳಿತ ವಿಭಾಗ, ಆದಿಲ್‌ಶಾಹಿಗಳಂತಹ ರಾಜ್ಯಗಳ ಹಾಗೂ ದೇಸಗತಿ ಮನೆತನಗಳ ಹುಟ್ಟಿಗೆ ಕಾರಣವಾಗಿದೆ. ಅದರ ಕುರುಹುವಾಗಿಯೇ ಜಿಲ್ಲೆಯಲ್ಲಿ ಇಂದು ೪೪ಕ್ಕಿಂತ ಹೆಚ್ಚು ಕೋಟೆಗಳು ಕಂಡುಬರುತ್ತವೆ. ಇಂತಹ ರಕ್ಷಣಾ ಸಂಬಂಧಿ ಅವಶೇಷಗಳನ್ನು ಶಾತವಾಹನರ ಕಾಲದಿಂದ ಕ್ರಿ.ಶ. ೧೯ನೆಯ ಶತಮಾನದವರೆಗೆ ಗುರುತಿಸುವ ಉದ್ದೇಶವನ್ನಿಟ್ಟು ಕೊಳ್ಳಲಾಗಿತ್ತಾದರೂ ನಮಗೆ ರಾಷ್ಟ್ರಕೂಟರಿಂದ ಇಲ್ಲಿ ಕೋಟೆಗಳ ನಿರ್ಮಾಣ ಆಗಿರಬಹುದಾದ ಸುಳುಹು ಸಿಗುತ್ತದೆ. ಆದರೆ ಈ ಕಾಲಾವಧಿಯಲ್ಲಿ ನಿರ್ಮಾಣವಾದ ಯಾವುದೇ ಕೋಟೆಗಳ ಅವಶೇಷಗಳು ಕಂಡುಬರುವುದಿಲ್ಲ. ಜಿಲ್ಲೆಯಲ್ಲಿ ಸದ್ಯ ನಮಗೆ ಕಲ್ಯಾಣ ಚಾಳುಕ್ಯರ ಕಾಲಾವಧಿಯಿಂದ ಕೋಟೆಗಳ ನಿರ್ಮಾಣವಾಗಿರುವ ಕುರುಹುಗಳು ಸಿಗುತ್ತವೆ. ಇದಕ್ಕೆ ಪ್ರಮುಖ ಉದಾಹರಣೆಯೆಂದರೆ ಇಂಗಳೇಶ್ವರ ಕೋಟೆ. ನಂತರ ಬಹಮನಿ, ಆದಿಲ್‌ಶಾಹಿಗಳು, ಮರಾಠರು ಹೀಗೆ ಕ್ರಿ.ಶ. ೧೯ನೆಯ ಶತಮಾನದವರೆಗೆ ಬೆಳೆದುಬಂದ ಕೋಟೆ-ಕೊತ್ತಲಗಳನ್ನು ಆಯಾ ತಾಲೂಕುವಾರು ವಿಂಗಡಿಸಿ ಶಾಸನ, ಸಾಹಿತ್ಯ, ಮೌಖಿಕ ಆಕರ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಪ್ರತಿ ಕೋಟೆ-ಕೊತ್ತಲಗಳ ಐತಿಹಾಸಿಕತೆಯನ್ನು ವಿಶ್ಲೇಷಿಸಲಾಗಿದೆ. ಅಲ್ಲದೆ ಜಿಲ್ಲೆಯ ಕೋಟೆ, ವಾಡೆ ಹಾಗೂ ರಕ್ಷಣಾ ಸಂಬಂಧಿ ಸ್ಮಾರಕಗಳ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಅವುಗಳ ಹಿಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಗತಿಗಳ ತಲಸ್ಪರ್ಶಿ ಅಧ್ಯಯನವನ್ನು ಮಾಡಲಾಗಿದೆ.

ಪ್ರಾಚೀನ ಕಾಲಘಟ್ಟದಿಂದಲೂ ಆಡಳಿತ ವ್ಯವಸ್ಥೆಯಲ್ಲಿ ರಾಜನ ನಂತರ ಮಹಾಮಂಡಳೇಶ್ವರ, ಸಾಮಂತ, ಮಹಾಪ್ರಧಾನ, ಮಾಂಡಲಿಕ, ಮಹಾಸಾಮಂತ, ಮಹಾನಾಡುಪ್ರಭು ಇವರು ಆಡಳಿತ ವಲಯದ ಪ್ರಮುಖ ಸ್ಥಾನದಲ್ಲಿದ್ದದ್ದು ತಿಳಿದುಬರುತ್ತದೆ. ಮುಸ್ಲಿಂ ಅರಸರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಾಗ ದೇಸಾಯಿ, ದೇಸಗತಿ, ದೇಶಪಾಂಡೆ, ನಾಡಗೌಡ, ಜಹಗೀರದಾರರು ಸ್ಥಳೀಯ ಆಡಳಿತ ವಲಯದಲ್ಲಿ ಸುಲ್ತಾನರ ಅಧೀನಕ್ಕೆ ಒಳಪಟ್ಟು ಅನೇಕ ಪ್ರದೇಶಗಳಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಅದೇ ರೀತಿ ಮರಾಠರ ಆಡಳಿತಾವಧಿಯಲ್ಲಿ ಘೋರ್ಪಡೆ, ರಾಸ್ತಿಯಾ, ಪೆನ್ಸೆ ಎಂಬುವರು ಪ್ರಮುಖ ಸ್ಥಾನವನ್ನು ಪಡೆದಿದ್ದರು. ಇವರಿಗೆ ಸಹಾಯಕರಂತೆ ಪಾಟೀಲ, ಗೌಡ, ಕುಲಕರ್ಣಿ, ಶಾನುಭೋಗ, ದಳವಾಯಿ, ಸುಬೇದಾರ, ತಳವಾರ ಎಂಬ ಆಡಳಿತ ನಡೆಸುವ ಮತ್ತೊಂದು ವರ್ಗವು ಇತ್ತು. ಈ ವರ್ಗವು ಮೇಲಿನ ವರ್ಗದ ಆಜ್ಞಾನುವರ್ತಿಯಾಗಿ ಆಡಳಿತವನ್ನು ನಡೆಸುತ್ತಿತ್ತು ಎಂಬುದು ಕೋಟೆಗಳ ಅಧ್ಯಯನದಿಂದ ತಿಳಿದುಬರುತ್ತದೆ. ಸುಲ್ತಾನರಿಂದ ನೇಮಿಸಲ್ಪಟ್ಟಿದ್ದ ಇವರು ಜಿಲ್ಲೆಯಲ್ಲಿ ಕಂಡುಬರುವ ಅನೇಕ ರಾಜಕೀಯ ಸಂಘರ್ಷಗಳಿಂದ ತಮ್ಮ ಹಾಗೂ ತಮ್ಮ ಜನರ ರಕ್ಷಣೆಗೋಸ್ಕರ ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ.

ವಿವಿಧ ಅರಸುಮನೆತನಗಳಿಗೆ ಒಳಪಟ್ಟ ಈ ಪ್ರದೇಶವು ಮುಂದೆ ಅನ್ಯಧರ್ಮಿಯರಿಗೂ ಇದು ಆಕರ್ಷಣೀಯ ಸ್ಥಳವಾದಂತಿದೆ. ಅಂದರೆ ಬಹಮನಿ, ಆದಿಲ್‌ಶಾಹಿ, ಹೈದರಾಬಾದ್ ನಿಜಾಮರ ಆಡಳಿತಾವಧಿಯಲ್ಲಿ ಇದೊಂದು ಪ್ರಮುಖ ಪ್ರಾಂತವಾಗಿ, ರಾಜಧಾನಿ ಪಟ್ಟಣವಾಗಿ ಇರುವುದು ಲಭ್ಯ ಆಕರಗಳ ಹಿನ್ನಲೆಯಲ್ಲಿ ಸ್ಪಷ್ಟಗೊಳ್ಳುತ್ತದೆ. ರಾಷ್ಟ್ರಕೂಟರ ಕಾಲಾವಧಿಯಿಂದ ಶೈವಧರ್ಮವು ಈ ಪ್ರದೇಶದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಬಹಮನಿಗಳು ಅಧಿಕಾರಕ್ಕೆ ಬಂದ ಮೇಲೆ ಇಲ್ಲಿ ಇಸ್ಲಾಂಧರ್ಮವನ್ನು ಗಟ್ಟಿಯಾಗಿ ನೆಲೆಗೂಳಿಸುವ ಪ್ರಯತ್ನ ಮಾಡಿದ್ದಾರೆ. ಹೀಗಾಗಿ ಈ ಸ್ಥಳವು ಧಾರ್ಮಿಕ ಸಂಘರ್ಷದ ತಾಣವಾಗಿತ್ತೇನೋ ಎನಿಸುತ್ತದೆ. ವಿಭಿನ್ನ ಧರ್ಮದ, ಭಿನ್ನ ಭಾಷಿಕ ಅರಸರ ಆಡಳಿತಕ್ಕೆ ಈ ಪ್ರದೇಶವು ಒಳಗಾಗಿದ್ದರೂ ಇಲ್ಲಿ ಅರಸರಾದಿಯಾಗಿ ಸಣ್ಣಪುಟ್ಟ ದೇಸಗತಿಗಳು ಕೋಟೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಕೋಟೆಗಳನ್ನು ಅಧ್ಯಯನಕ್ಕೊಳಪಡಿಸಿದಾಗ ಇವುಗಳ ನಿರ್ಮಾಣದಲ್ಲಿ ಮುಸ್ಲಿಂ ವಾಸ್ತುಶೈಲಿಯ ಪ್ರಭಾವ ಕಂಡುಬಂದರೂ ಕೋಟೆಯ ನಿರ್ಮಾಣ ಮತ್ತು ವಿಸ್ತರಣೆಯಲ್ಲಿ ಯಾವುದೇ ಸುಲ್ತಾನರು ದೇಸಗತಿ ಮನೆತನಗಳ ಮೇಲೆ ಧಾರ್ಮಿಕ ನಿರ್ಬಂಧವನ್ನು ಹೇರಿದಂತಿಲ್ಲ. ಹೀಗಾಗಿ ಈ ಪ್ರದೇಶಗಳಲ್ಲಿ ಬ್ರಾಹ್ಮಣ, ಲಿಂಗಾಯತ, ರೆಡ್ಡಿ ಹೀಗೆ ಅನೇಕ ಹಿಂದೂ ಹಾಗೂ ಮುಸ್ಲಿಂ ದೇಸಗತಿ ಮನೆತನಗಳು ಕೋಟೆಗಳನ್ನು ನಿರ್ಮಿಸಿಕೊಂಡರಲ್ಲದೆ ಅವುಗಳನ್ನು ವಿಸ್ತರಿಸಿದ್ದು ಕಂಡುಬರುತ್ತದೆ. ಇದಕ್ಕೆ ಇಲ್ಲಿಯ ವಿವಿಧ ಅರಸುಮನೆತನಗಳ ಹಾಗೂ ಜನರ ಧಾರ್ಮಿಕ ಸಹಿಷ್ಣುತೆ ಕಾರಣವಾಗಿರಬೇಕು ಎಂಬುದು ತಿಳಿದುಬರುತ್ತದೆ. ಈ ಪ್ರದೇಶದ ಧಾರ್ಮಿಕ ಸ್ಥಿತಿಗತಿಯ ಜೊತೆಗೆ ಇಲ್ಲಿಯ ಆಡಳಿತ ವ್ಯವಸ್ಥೆಯು ಯಾವ ಬಗೆಯದ್ದು, ಜನರ ಸಾಮಾಜಿಕ ಜೀವನದ ವಿಧಾನ ಎಂಥದ್ದು, ಇವರ ಆರ್ಥಿಕ ಚಟುವಟಿಕೆಗಳು ಹೇಗಿದ್ದವು ಎನ್ನುವ ಅಂಶಗಳು ಸಹ ಕೋಟೆಗಳ ಅಧ್ಯಯನದಿಂದ ಬೆಳಕಿಗೆ ಬಂದಿವೆ.

ಒಟ್ಟಾರೆಯಾಗಿ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಅನೇಕ ಕೋಟೆಗಳನ್ನು ಗುರುತಿಸಲಾಗಿದೆ. ಇಲ್ಲಿ ಕಂಡುಬರುವ ಕೋಟೆಗಳ ಅಧ್ಯಯನವು ಈ ಪ್ರದೇಶದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಹಲವಾರು ಮಹತ್ವದ ವಿಷಯಗಳನ್ನು ನೀಡಬಲ್ಲದು. ಹಾಗೆಯೇ ಅವು ಅಂದಿನ ರಾಜಕೀಯ ಸಂಘರ್ಷಗಳಲ್ಲಿ ಪ್ರತಿ ಗ್ರಾಮಕ್ಕೆ ಎಷ್ಟರಮಟ್ಟಿಗೆ ಅವಶ್ಯಕವಾಗಿದ್ದವು ಎಂಬುದನ್ನು ತಿಳಿಯುವಲ್ಲಿ ಮಹತ್ವದ ಸಂಗತಿಗಳನ್ನು ತಿಳಿಸುತ್ತವೆ. ಈ ಪ್ರದೇಶದ ರಾಜಕೀಯ ಸ್ಥಿತಿಗಳನ್ನು ರೂಪಿಸುವಲ್ಲಿ ಕೋಟೆಗಳ ಪಾತ್ರವೇನಿತ್ತು ಎಂಬುದರ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಅವುಗಳಲ್ಲಿ ಕೆಲವು ಕಣ್ಮರೆಯಾಗಿದ್ದರೂ ಇನ್ನೂ ಕೆಲವು ಕೋಟೆಗಳು ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ್ದಾಗಿವೆ. ಇವು ವಿಜಾಪುರ ಜಿಲ್ಲೆಯು ಕರ್ನಾಟಕದ ವಾಸ್ತುಶಿಲ್ಪಕ್ಕೆ ಕೊಟ್ಟ ಅಪರೂಪದ ಕೊಡುಗೆಗಳಾಗಿವೆ. ಅದರಲ್ಲಿ ವಿಜಾಪುರ ಕೋಟೆಯು ರಕ್ಷಣಾ ವಾಸ್ತುಶಿಲ್ಪ ಅಧ್ಯಯನಕ್ಕೆ ಅಪೂರ್ವ ಆಕರವಾಗಿದೆ. ಇವೆಲ್ಲವುಗಳನ್ನು ಇಲ್ಲಿ ವಿಸ್ತೃತವಾದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಫಲಿತಗಳು

* ಜಿಲ್ಲೆಯ ಭೌಗೋಳಿಕ ಅಂಶಗಳಾದ ನದಿ, ಹಳ್ಳ–ಕೊಳ್ಳಗಳು, ಹವಾಗುಣ ಹಾಗೂ ಇಲ್ಲಿನ ಫಲವತ್ತಾದ ಭೂಮಿ ಜಿಲ್ಲೆಯಲ್ಲಿ ಅನೇಕ ಕೋಟೆ–ಕೊತ್ತಲಗಳು ನಿರ್ಮಾಣವಾಗಲು ಕಾರಣವಾಗಿವೆ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ.

* ಮೌರ್ಯರಿಂದ ಕ್ರಿ.ಶ. ೧೯ನೆಯ ಶತಮಾನದವರೆಗಿನ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ, ಶಾಸನ, ಸಾಹಿತ್ಯ, ಐತಿಹ್ಯ ಹಾಗೂ ಪುರಾತತ್ವೀಯ ಆಕರ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಕೋಟೆಗಳ ನಿರ್ಮಾಣಕ್ಕೆ ಪೂರಕವಾಗಿ ಚಾರಿತ್ರಿಕ ಅಂಶಗಳನ್ನು ಸಮಗ್ರವಾಗಿ ದಾಖಲಿಸಿ ವಿಶ್ಲೇಷಿಸಲಾಗಿದೆ.

* ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ೪೪ ಕೋಟೆಗಳನ್ನು ಮೊದಲ ಬಾರಿಗೆ ಶೋಧಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

* ವಿಜಾಪುರ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಕೋಟೆಗಳು ಕಂಡುಬರುವುದು ಮುದ್ದೇಬಿಹಾಳ ತಾಲೂಕು ಪ್ರದೇಶದಲ್ಲಿ. ಬಹಮನಿ ಮತ್ತು ಆದಿಲ್‌ಶಾಹಿಗಳು ಅಧಿಕಾರಕ್ಕೆ ಬಂದಾಗಿನಿಂದ ವಿಜಯನಗರದ ಜೊತೆ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಮಧ್ಯದ ದೋ ಅಬ್ ಪ್ರದೇಶ, ರಾಯಚೂರು, ಮುದಗಲ್ ಕೋಟೆಯನ್ನು ಪಡೆಯುವ ಪ್ರತಿಷ್ಠೆಯಿಂದ ಅನೇಕ ಸಂಘರ್ಷಗಳಲ್ಲಿ ತೊಡಗಿಕೊಂಡರು. ಅಲ್ಲದೆ ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧ ನಡೆದದ್ದು ಈ ಪ್ರದೇಶದಲ್ಲಿಯೇ. ಈ ಸಂದರ್ಭದಲ್ಲಿ ಶಾಹಿಸುಲ್ತಾನರ ಸೈನ್ಯ ತಾಳಿಕೋಟೆ ಪರಿಸರದಲ್ಲಿ ಬೀಡುಬಿಟ್ಟಿದ್ದು ತಿಳಿದುಬರುತ್ತದೆ. ಆದಿಲ್‌ಶಾಹಿ ಸುಲ್ತಾನರು ಬೇರೆ ಪ್ರದೇಶದ ಮೇಲೆ ದಾಳಿ ಕೈಗೊಳ್ಳಬೇಕಾದರೂ ಈ ಪ್ರದೇಶ ಅವರ ಸೈನ್ಯ ಹಾದುಹೋಗುವ ದಂಡಿನ ದಾರಿಯಾಗಿತ್ತು. ಈಗಲೂ ವಿಜಾಪುರದಿಂದ ಹೂವಿನ ಹಿಪ್ಪರಗಿ, ತಾಳಿಕೋಟೆ, ನಾಲತವಾಡಕ್ಕೆ ಹೋಗುವ ರಸ್ತೆಯನ್ನು ದಂಡಿನ ದಾರಿಯೆಂದೇ ಕರೆಯುತ್ತಾರೆ. ಈ ರೀತಿ ಅನೇಕ ರಾಜಕೀಯ ಸಂಘರ್ಷಗಳು ಈ ಪ್ರದೇಶದಲ್ಲಿ ನಡೆದದ್ದು ಕಂಡುಬರುತ್ತದೆ. ಹೀಗಾಗಿ ಇದು ಜಿಲ್ಲೆಯ ರಣಭೂಮಿ ಎಂದೇ ಅಭಿಪ್ರಾಯಿಸಬಹುದು. ಸಾಮಾನ್ಯವಾಗಿ ಆಂತರಿಕ ಮತ್ತು ಬಾಹ್ಯ ದಾಳಿಗಳಿಂದ ರಕ್ಷಿಸಿಕೊಳ್ಳಲು ಈ ಪ್ರದೇಶದಲ್ಲಿ ಪ್ರತಿ ಗ್ರಾಮಕ್ಕೂ ಕೋಟೆ–ಕೊತ್ತಲಗಳಿರುವುದನ್ನು ಕಾಣಬಹುದು.

* ತಾಳಿಕೋಟೆ ಯುದ್ಧ ನಡೆದ ಸ್ಥಳದ ಕುರಿತಾಗಿ ಅನೇಕ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ನನ್ನ ಕ್ಷೇತ್ರಕಾರ್ಯದ ಅಧ್ಯಯನದ ಹಿನ್ನೆಲೆಯಲ್ಲಿ ನೋಡುವುದಾದರೆ ಜಿಲ್ಲೆಯ ತಾಳಿಕೋಟೆ, ರಕ್ಕಸಗಿ ಮತ್ತು ತಂಗಡಗಿ ಮಧ್ಯದ ಬಹುಪಾಲು ಗ್ರಾಮಗಳಲ್ಲಿ ಹಾಗೂ ಕೃಷ್ಣಾನದಿಗೆ ಹೊಂದಿಕೊಂಡಂತೆ ಕೋಟೆಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಬಹುತೇಕ ಕೋಟೆಗಳು ನಾರಾಯಣಪುರ ಅಣೆಕಟ್ಟೆಯ ಹಿನ್ನೀರಿನಿಂದ ಜಲಾವೃತಗೊಂಡು ಸಂಪೂರ್ಣವಾಗಿ ನಾಶ ಹೊಂದಿವೆ. ಈಗ ಉಳಿದಿರುವ

ಕೋಟೆಗಳನ್ನು ಅಧ್ಯಯನಕ್ಕೊಳಪಡಿಸಿ, ಮುಳುಗಡೆಯಾಗಿರುವ ಅನೇಕ ಕೋಟೆಗಳ ಬಗ್ಗೆ ಸ್ಥಳೀಯರಿಂದ ಮಾಹಿತಿ ಪಡೆದು ದಾಖಲಿಸಲಾಗಿದೆ. ಇವು ಯುದ್ಧದ ಸಂದರ್ಭದಲ್ಲಿ ಮದ್ದು, ಗುಂಡುಗಳನ್ನು ಸಂಗ್ರಹಿಸಲು ಮತ್ತು ಗ್ರಾಮದ ಜನರ ರಕ್ಷಣೆಗಾಗಿ ನಿರ್ಮಿಸಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಮತ್ತು ಶಾಹಿಸುಲ್ತಾನರ ಮಧ್ಯೆ ನಡೆದ ಯುದ್ಧದ ಕುರಿತಾಗಿ ಇರುವ ವಿದ್ವಾಂಸರ ಚರ್ಚೆಗಳನ್ನು ವಿಶ್ಲೇಷಿಸಿದಾಗ ತಾಳಿಕೋಟೆ ಯುದ್ಧವು ಕೃಷ್ಣಾನದಿಯ ಉತ್ತರ ಭಾಗದಲ್ಲಿ ರಕ್ಕಸಗಿ ಮತ್ತು ತಂಗಡಗಿ ಗ್ರಾಮಗಳ ಮಧ್ಯದಲ್ಲಿ ನಡೆದಿದೆ ಎಂದು ಸ್ಪಷ್ಟಪಡಿಸಬಹುದು.

* ಇಂಗಳೇಶ್ವರ ಗ್ರಾಮದಲ್ಲಿ ಕಲ್ಯಾಣ ಚಾಳುಕ್ಯರ ಅವಧಿಗೆ ಸಂಬಂಧಿಸಿದ ಕೋಟೆಯನ್ನು ಹೊಸದಾಗಿ ಶೋಧಿಸಿ ವಿಶ್ಲೇಷಿಸಲಾಗಿದೆ.

* ರಾಜಧಾನಿಕೇಂದ್ರಿತ ವಿಜಾಪುರ ಕೋಟೆಯ ಕುರಿತಾಗಿ ಶಾಸನಗಳು, ಆದಿಲ್‌ಶಾಹಿ ಸಾಹಿತ್ಯ ಕೃತಿಗಳು, ಮೌಖಿಕ ಆಕರ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಹಾಗೂ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ವಿಜಾಪುರ ಕೋಟೆಗೋಡೆ, ದ್ವಾರಗಳು, ಬುರುಜುಗಳು ಹಾಗೂ ತೋಪುಗಳ ನಿರ್ಮಾಣದ ಚಾರಿತ್ರಿಕ ಹಿನ್ನೆಲೆ ಮತ್ತು ಅವುಗಳ ಲಕ್ಷಣ ಕುರಿತು ಮೊದಲ ಬಾರಿಗೆ ಕೋಟೆಯ ಸಮಗ್ರ ಅಧ್ಯಯನವನ್ನು ಮಾಡಲಾಗಿದೆ.

* ರಾಜಧಾನಿಕೇಂದ್ರಿತ ವಿಜಾಪುರದಲ್ಲಿ ನಿರ್ಮಾಣವಾದ ಅರಕಿಲ್ಲೆಯು ಮೊದಲು ಯುಸೂಫ್ ಆದಿಲ್‌ಶಾಹಿಯಿಂದ ನಿರ್ಮಾಣವಾಯಿತು ಎಂದು ವಿದ್ವಾಂಸರ ನಿರ್ಣಯವಾಗಿತ್ತು. ಆದರೆ ಈತನಿಗಿಂತಲೂ ಮೊದಲೇ ಇಲ್ಲಿ ಬಹಮನಿ ಸುಲ್ತಾನರ ಠಾಣೇದಾರ ಸಿರಾಜಖಾನ ಜುನೇದಿ ಇಲ್ಲಿಯ ಕಚ್ಚಾಕೋಟೆಯಲ್ಲಿ ನೆಲೆ ನಿಂತಿದ್ದನು ಎಂದು ಆಕರಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಹೀಗಾಗಿ ಯುಸೂಫನಿಗಿಂತಲೂ ಮೊದಲೇ ಇಲ್ಲಿ ಕೋಟೆ ನಿರ್ಮಾಣವಾಗಿತ್ತು ಎಂದು ಹೇಳಬಹುದು.

* ವಿಜಾಪುರ ನಗರವನ್ನು ಸುತ್ತುವರಿದಿರುವ ಹೊರಕೋಟೆಯನ್ನು ಕ್ರಿ.ಶ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸೋಲಿಸಿ ಅಲ್ಲಿ ಕೊಳ್ಳೆ ಹೊಡೆದ ಸಂಪತ್ತನ್ನು ತಂದು ನಿರ್ಮಿಸಲಾಯಿತು ಎಂದು ಹೇಳಲಾಗುತ್ತದೆ. ಆದರೆ ಈ ಕೋಟೆಯನ್ನು ತಾಳಿಕೋಟೆ ಯುದ್ಧಕ್ಕಿಂತಲೂ ಮೊದಲೇ ಕ್ರಿ.ಶ. ೧೫೫೮ರಲ್ಲಿ ಕಟ್ಟಲು ಪ್ರಾರಂಭಿಸಿ ಕ್ರಿ.ಶ. ೧೫೬೬ರ ವೇಳೆಗೆ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಯಿತು ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಮಲ್ಲಿಕ್‌ಕಾಫರ್‌ನ ನೇತೃತ್ವದಲ್ಲಿ ದೆಹಲಿ ಸುಲ್ತಾನರ ಸೈನ್ಯ ದಕ್ಷಿಣ ಭಾರತದ ಮೇಲೆ ದಂಡೆತ್ತಿ ಬಂದಾಗ ಇವರ ಒಂದು ಪಡೆ ಹಲಸಂಗಿಯನ್ನು ತಮ್ಮ ಸೈನ್ಯದ ಠಾಣೆಯನ್ನಾಗಿ ಮಾಡಿಕೊಂಡು ಅಲ್ಲಿ ಕೋಟೆ ನಿರ್ಮಿಸಿದ್ದರು ಎಂದು ಅಧ್ಯಯನದಿಂದ ತಿಳಿದುಬರುತ್ತದೆ. ನಂತರ ಅದು ಬಹಮನಿ ಮತ್ತು ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ಜೀರ್ಣೋದ್ಧಾರಗೊಂಡಿತು ಎಂದು ಹೇಳಬಹುದು.

* ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಸ್ತಿತ್ವಕ್ಕೆ ಬಂದ ವಿಜಾಪುರದ ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ಹೆಚ್ಚಿನ ಕೋಟೆಗಳು ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಅವು ಮರಾಠರ ಆಡಳಿತಾವಧಿಯಲ್ಲಿ ಮತ್ತಷ್ಟು ವಿಸ್ತರಣೆಗೊಂಡವು. ಅಲ್ಲದೆ ಮರಾಠರು, ಹೈದರಾಬಾದ್ ನಿಜಾಮ, ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷರ ಮಧ್ಯದ ಸಂಘರ್ಷಗಳಿಂದ ತಪ್ಪಿಸಿಕೊಳ್ಳಲು ಕೋಟೆಗಳನ್ನು ಮತ್ತಷ್ಟು ಬಲಿಷ್ಠಪಡಿಸಿಕೊಂಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

* ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಆದಿಲ್‌ಶಾಹಿಗಳ ಅವನತಿಯ ನಂತರವೂ ಅವರ ಅಧೀನದಲ್ಲಿದ್ದ ಕೆಲವು ದೇಸಾಯಿ, ದೇಶಪಾಂಡೆ, ನಾಡಗೌಡ, ಜಹಗೀರದಾರ ಹಾಗೂ ಸಣ್ಣಪುಟ್ಟ ದೇಸಗತಿ ಮನೆತನಗಳು ತಮ್ಮ ಆಡಳಿತವನ್ನು ಮರಾಠರ ಮತ್ತು ಬ್ರಿಟಿಷರ ಆಡಳಿತಾವಧಿಯವರೆಗೂ ಮುಂದುವರಿಸಿಕೊಂಡು ಬಂದಿರುವುದು ಕೋಟೆಗಳ ಅಧ್ಯಯನದಿಂದ ತಿಳಿದುಬರುತ್ತದೆ.

* ಮರಾಠರು ಮತ್ತು ಬ್ರಿಟಿಷರ ಕಾಲಾವಧಿಯಲ್ಲಿ ಕೋಟೆಗಳ ನಿರ್ಮಾಣದ ಬದಲಿಗೆ ವಾಡೆಗಳ ನಿರ್ಮಾಣಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ರಕ್ಷಣಾತ್ಮಕವಾಗಿ ನಿರ್ಮಿಸಿದ್ದು ಕಂಡುಬರುತ್ತದೆ. ಇವು ಜಿಲ್ಲೆಯ ಆಲಮೇಲ, ಹಿರೇಮುರಾಳ, ಬಸರಕೋಡ, ಬ್ಯಾಲ್ಯಾಳ, ಮಮದಾಪುರ, ಮಣೂರ, ಸಾತಲಗಾಂವ, ನಾಗಬೇನಾಳ, ಕೇಸಾಪುರ, ತಾಳಿಕೋಟೆ ಹೀಗೆ ಇನ್ನು ಕೆಲವು ಗ್ರಾಮಗಳಲ್ಲಿ ಇದುವರೆಗೂ ಉಳಿದುಕೊಂಡು ಬಂದಿದ್ದು ಅವುಗಳ ನಿರ್ಮಾಣದ ತಾಂತ್ರಿಕತೆಗೆ ಸಾಕ್ಷಿಯಾಗಿವೆ.

* ವಿಜಾಪುರ ಜಿಲ್ಲೆಯ ದೇಸಗತಿ ಮನೆತನಗಳ ಚರಿತ್ರೆಯನ್ನು ಕಟ್ಟಿಕೊಡುವ ಅಧ್ಯಯನಗಳು ನಡೆದಿವೆಯಾದರೂ ಪೂರ್ಣಪ್ರಮಾಣದಲ್ಲಿ ಕೈಗೊಂಡಿಲ್ಲ. ಅಂತಹ ಇನ್ನೂ ಅನೇಕ ದೇಸಗತಿ ಮನೆತನಗಳ ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ಜೊತೆಗೆ ಸಮಗ್ರವಾಗಿ ಜಿಲ್ಲೆಯ ದೇಸಗತಿ ಮನೆತನಗಳ ಕುರಿತು ಅಧ್ಯಯನ ಮಾಡುವವರಿಗೆ ಇನ್ನಷ್ಟು ಮಾಹಿತಿಯನ್ನು ಪ್ರಸ್ತುತ ಮಹಾಪ್ರಬಂಧವು ಒದಗಿಸುತ್ತದೆ.

* ಆದಿಲ್‌ಶಾಹಿಗಳ ಆಡಳಿತಾವಧಿಯಲ್ಲಿ ಹಲಸಂಗಿ, ತಾಳಿಕೋಟೆ, ತಿಕೋಟ, ಮಮದಾಪುರ, ಕೂಡಗಿಯಂತಹ ಕೆಲವು ಪ್ರದೇಶಗಳು ಮುಸ್ಲಿಂ ಅಧಿಕಾರಿಗಳ ಆಡಳಿತಕ್ಕೆ ಒಳಪಟ್ಟಿದ್ದವು. ಇನ್ನುಳಿದಂತಹ ಪ್ರದೇಶಗಳು ಸ್ಥಳೀಯ ಆಡಳಿತಗಾರರಿಗೆ ಒಳಪಟ್ಟಿರುವುದು ಕಂಡುಬರುತ್ತದೆ. ಇವರ ಅಧೀನದಲ್ಲಿ ಅನೇಕ ಕೋಟೆಗಳು ನಿರ್ಮಾಣವಾದವು. ಈ ಕೋಟೆಗಳ ನಿರ್ಮಾಣಕ್ಕೆ ಶಾಹಿ ಸುಲ್ತಾನರು ಯಾವುದೇ ನಿರ್ಬಂಧ ಹೇರಲಿಲ್ಲ. ಈ ಸ್ಥಳೀಯ ಅಧಿಕಾರಿಗಳನ್ನು ಬಳಸಿಕೊಂಡು ಆದಿಲ್‌ಶಾಹಿಗಳು ಈ ಪ್ರದೇಶದಲ್ಲಿ ಪ್ರಬಲವಾಗಿ ನೆಲೆ ನಿಲ್ಲಲು ಸಾಧ್ಯವಾಯಿತು.

* ಜಿಲ್ಲೆಯ ಹಲಸಂಗಿ, ತಾಳಿಕೋಟೆ ಹಾಗೂ ಮನಗೂಳಿಗಳಲ್ಲಿರುವ ಕೋಟೆ ಹಾಗೂ ಹುಡೆವುಗಳ ನಿರ್ಮಾಣಕ್ಕೆ ನರಬಲಿ ಕೊಟ್ಟ ಪ್ರಸಂಗ ಜನಮನದಲ್ಲಿ ಉಳಿದುಕೊಂಡು ಬಂದಿದೆ. ಹೀಗಾಗಿ ಜಿಲ್ಲೆಯಲ್ಲಿಯೂ ಈ ಆಚರಣೆ ಪ್ರಚಲಿತದಲ್ಲಿತ್ತು ಎಂಬ ಅಂಶ ತಿಳಿದುಬರುತ್ತದೆ.

ಹಲಸಂಗಿ ಕೋಟೆಯ ನಿರ್ಮಾಣದಲ್ಲಿ ಜಕ್ಕವ ಎಂಬ ಮಾದಿಗ ಜಾತಿಯ ಗರ್ಭಿಣಿ ಸ್ತ್ರೀಯನ್ನು ಬಲಿ ಕೊಟ್ಟ ಪ್ರಸಂಗವಿದೆ. ಈಕೆಯ ವಂಶಸ್ಥರಿಗೆ ಬಾದಶಹನು ಭೂಮಿಯನ್ನು ದಾನ ಕೊಟ್ಟನಲ್ಲದೆ, ಊರಿನ ಗೌಡಕಿಯನ್ನು ವಹಿಸಿಕೊಟ್ಟನೆಂದು ಹೇಳಲಾಗುತ್ತದೆ. ಈ ಮನೆತನದ ವಂಶಸ್ಥರು ಇಂದಿಗೂ ಈ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಹಲಸಂಗಿ ಕೋಟೆಯ ಪಶ್ಚಿಮ ಭಾಗಕ್ಕೆ ಹೊಂದಿಕೊಂಡು ಜಕ್ಕವ್ವಳ ಗುಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಪ್ರತಿದಿನವೂ ಪೂಜೆಯನ್ನು ಸಲ್ಲಿಸುತ್ತಿದ್ದಾರಲ್ಲದೆ ವರ್ಷಕ್ಕೊಮ್ಮೆ ಗ್ರಾಮದ ಜನರೆಲ್ಲಾ ಕೂಡಿಕೊಂಡು ಜಾತ್ರೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ರೀತಿಯ ಹಲವು ನಂಬಿಕೆ ಮತ್ತು ಆಚರಣೆಗಳನ್ನು ಇದುವರೆಗೂ ಪರಿಪಾಲಿಸುತ್ತಿರುವುದು ಕಂಡುಬರುತ್ತದೆ. ಇಲ್ಲಿಯ ಐತಿಹ್ಯ ಮತ್ತು ಸ್ಮಾರಕಗಳ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಐತಿಹ್ಯದಲ್ಲಿ ಸಾಮ್ಯತೆ ಇರುವ ನಿದರ್ಶನಗಳು ನಮಗೆ ದೊರೆಯುತ್ತವೆ.

* ಜಿಲ್ಲೆಯಲ್ಲಿ ನಿರ್ಮಾಣವಾದ ಕೋಟೆಗಳು ವಾಸ್ತುಗ್ರಂಥಗಳ ಪ್ರಕಾರ ಸ್ಥಳದುರ್ಗಗಳಾಗಿದ್ದು ಇವು ಚೌಕಾಕಾರ, ವೃತ್ತಾಕಾರ ಮತ್ತು ಆಯತಾಕಾರವನ್ನು ಹೊಂದಿವೆ. ಕೋಟೆಯ ನಿರ್ಮಾಣದ ಕುರಿತಾಗಿ ವಾಸ್ತುಗ್ರಂಥಗಳಲ್ಲಿ ಉಲ್ಲೇಖವಾದಂತಹ ಲಕ್ಷಣಗಳನ್ನು ಕೆಲವು ಕೋಟೆಗಳಲ್ಲಿ ಗುರುತಿಸಲಾಗಿದೆ.

* ಜಿಲ್ಲೆಯಲ್ಲಿ ಕಂಡುಬರುವ ಇತರೆ ರಕ್ಷಣಾಸಂಬಂಧಿ ಸ್ಮಾರಕಗಳಾದ ಹುಡೆವು, ಅಗಸೆಬಾಗಿಲು, ಹಗೇವುಗಳ ಕುರಿತು ಇದುವರೆಗೆ ಯಾವುದೇ ಅಧ್ಯಯನಗಳು ನಡೆದಿಲ್ಲ. ಹೀಗಾಗಿ ಇವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿಕೊಂಡು ಅವುಗಳ ರಚನಾವಿಧಾನ, ಸ್ವರೂಪ ಮತ್ತು ಅವುಗಳ ಕಾರ್ಯವೈಖರಿಯ ಕುರಿತು ಮೊದಲ ಬಾರಿಗೆ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

* ಆದಿಲ್‌ಶಾಹಿಗಳು ಮತ್ತು ಅವರ ಆಡಳಿತ ವರ್ಗವು ಕೋಟೆ–ಕೊತ್ತಲಗಳ ನಿರ್ಮಾಣದಂತಹ ಕಾರ್ಯಗಳ ಜೊತೆಗೆ ಸಾಮಾನ್ಯ ಜನರಿಗೂ ಅಗತ್ಯವಾಗಿದ್ದ ಕೆರೆ, ಬಾವಿ, ಸತ್ರಗಳನ್ನು ಕೋಟೆ ಒಳಗೆ ಮತ್ತು ಹೊರಗೆ ಯೋಜನಾಬದ್ಧವಾಗಿ ನಿರ್ಮಿಸಿದ್ದಾರೆ. ವಿಜಾಪುರ ಕೋಟೆಯ ಒಳಗೆ ಯೋಜನಾಬದ್ಧವಾಗಿ ನಿರ್ಮಿಸಿದ ಏಳುನೂರು ಬಾವಡಿಗಳು ಇದ್ದವು ಎಂದು ಕ್ಯಾಪ್ಟನ್ ಸೈಕ್ ಅವರು ಗುರುತಿಸಿದ್ದಾರೆ. ಅದೇ ರೀತಿ ಮಮದಾಪುರದಲ್ಲಿ ಕೋಟೆಯನ್ನು ಕಟ್ಟಿ ಕೋಟೆಯ ಮುಂಭಾಗದಲ್ಲಿಯೇ ಎರಡು ಬೃಹತ್ತಾದ ಕೆರೆಗಳನ್ನು ನಿರ್ಮಿಸಿದ್ದಾರೆ. ಕೋಟೆಗಳನ್ನು ನಿರ್ಮಾಣ ಮಾಡಿಕೊಳ್ಳುವಲ್ಲಿ ಸಮಸ್ತ ರಾಜ್ಯದ ಹಿತಾಸಕ್ತಿಗಿಂತ ಆಳುವ ವರ್ಗದ ಸುರಕ್ಷತೆಯ ದೃಷ್ಟಿ ಮುಖ್ಯವಾಗಿರುತ್ತದೆ. ಆದರೂ ಆದಿಲ್‌ಶಾಹಿಗಳು ಕೆರೆ, ಬಾವಿಗಳಂತಹ ಅನೇಕ ಲೋಕೋಪಯೋಗಿ ಕಾರ್ಯಗಳನ್ನು ಬಹುತೇಕ ಸಾಮಾನ್ಯ ಜನಕ್ಕಾಗಿ ನಿರ್ಮಾಣಮಾಡಿದ್ದು ಕಂಡುಬರುತ್ತದೆ.

* ಅಧ್ಯಯನಕ್ಕೆ ಪೂರಕವಾಗಿ ಅನುಬಂಧದಲ್ಲಿ ಕೋಟೆ ಪದಕೋಶ, ಕೆಲವು ಕೋಟೆಗಳ ತಲನಕ್ಷೆ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಈ ರೀತಿಯಾಗಿ ಜಿಲ್ಲೆಯಲ್ಲಿ ಬೆಳೆದುಬಂದ ಕೋಟೆಗಳ ನಿರ್ಮಾಣದ ಬಗ್ಗೆ ಇಡಿಯಾಗಿ ಗಮನಿಸಿ ಜಿಲ್ಲೆಯ ರಾಜಧಾನಿಕೇಂದ್ರಿತ, ಸ್ಥಳೀಯ ಆಡಳಿತ ವಿಭಾಗಗಳಲ್ಲಿ ಹಾಗೂ ಪ್ರತಿ

ಗ್ರಾಮಗಳಲ್ಲಿ ನಿರ್ಮಾಣಗೊಂಡ ಕೋಟೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ಪ್ರತಿ ಕೋಟೆ-ಕೊತ್ತಲಗಳ ಚಾರಿತ್ರಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ನಿರ್ಮಾಣದ ಉದ್ದೇಶ, ರಚನೆ, ವಾಸ್ತುವಿನ್ಯಾಸ, ತಂತ್ರಗಾರಿಕೆ ಹಾಗೂ ಅವುಗಳ ಮಹತ್ವದ ಕುರಿತು ಮೊದಲ ಬಾರಿಗೆ ತಲಸ್ಪರ್ಶಿಯಾಗಿ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಐತಿಹಾಸಿಕ ದಾಖಲೆಗಳೂ ಆಗಿರುವ ಕೋಟೆಗಳು ಹಾಗೂ ರಕ್ಷಣಾಸಂಬಂಧಿ ಸ್ಮಾರಕಗಳು ಇಂದು ಕಾಲನ ತುಳಿತಕ್ಕೆ ಸಿಕ್ಕು ವಿನಾಶದ ಅಂಚಿನಲ್ಲಿವೆ. ಸಾಧ್ಯವಾದಷ್ಟು ಮಟ್ಟಿಗಾದರೂ ಇವುಗಳನ್ನು ಸಂಕರಕ್ಷಿಸುವುದು ನಮ್ಮ ಆದ್ಯಕರ್ತವ್ಯಗಳಲ್ಲೊಂದು. ಕೇವಲ ಸರಕಾರದಿಂದ ಮಾತ್ರ ರಕ್ಷಣೆ ಮಾಡುವುದು ಸಾಧ್ಯವಿಲ್ಲ. ಅವು ಪ್ರಕೃತಿಯ ವಿಕೋಪ, ಜನರ ಅಜ್ಞಾನಗಳಿಂದಾಗಿ ಅವು ನಾಶವಾಗುತ್ತಿವೆ. ಹೀಗಾಗಿ ಅವುಗಳ ಬಗ್ಗೆ ಸ್ಥಳೀಯ ಜನರಿಗೆ ತಿಳುವಳಿಕೆಯನ್ನು ನೀಡುವ ಮೂಲಕ ಅವುಗಳ ರಕ್ಷಣೆಯ ಕಾರ್ಯವು ವಿದ್ಯಾವಂತರಾದ ನಮ್ಮೆಲ್ಲರ ಮೇಲಿದೆ.

ಅನುಬಂಧಗಳು

ಗ್ರಂಥಋಣ

ಪದಕೋಶ

ತಲನಕ್ಷೆಗಳು

ಛಾಯಾಚಿತ್ರಗಳು

ಗ್ರಂಥಸೂಚಿ

ಪ್ರಾಥಮಿಕ ಆಕರಗಳು

೧. ಅಬ್ದುಲ್ ಮಜೀದ್ ಖಾನ್(ಅನು.), ೧೯೯೭, **ಕಿತಾಬ್ ಎ ನೌರಸ್**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಕಲಬುರ್ಗಿ ಎಂ.ಎಂ., ೧೯೭೬, **ವಿಜಾಪುರ ಜಿಲ್ಲೆಯ ಶಾಸನ ಸೂಚಿ**, ಕನ್ನಡ ಅಧ್ಯಯನ ಪೀಠ, ಧಾರವಾಡ.

೩. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, **ಗುಲದಸ್ತಾಯೆ ಬಿಜಾಪುರ**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೪. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ(ಅನು.), ೨೦೧೪, **ತಾರೀಖೆ ಹಪ್ತಕುರ್ಸಿ**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೫. ಕುಲಕರ್ಣಿ ಆರ್.ಕೆ.(ಅನು.), ೨೦೧೪, **ಫುತೂಹತೆ ಅಲಂಗೀರ್**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೬. ಕೃಷ್ಣ ಕೊಲ್ಹಾರಕುಲಕರ್ಣಿ(ಅನು.), ೨೦೧೪, **ಬಸಾತೀನೆ ಸಲಾತೀನ**, ಆದಿಲಶಾಹಿ ಸಾಹಿತ್ಯ ಸಂ.೫, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೭. ದೇವರಕೊಂಡಾರೆಡ್ಡಿ(ಸಂ.), ೨೦೧೧, **ಬಿಜಾಪುರ ಶಾಸನ ಸಂಪುಟ–೧೦**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಫಕೀರ್ ಮುಹಮ್ಮದ್ ಕಟ್ಪಾಡಿ(ಅನು.), ೨೦೧೫, **ತಝ್ಕೀರತುಲ್ ಮುಲೂಕ್**, ಆದಿಲಶಾಹಿ ಸಾಹಿತ್ಯ ಸಂ.೧೦, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೯. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೪, **ಇಬ್ರಾಹೀಮನಾಮಾ**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೦. ಮಹಮ್ಮದ್ ಸಿಬ್ಘತ್‌ಉಲ್ಲಾಹ್(ಅನು.), ೨೦೧೫, **ಅಲಿನಾಮಾ**, ಆದಿಲಶಾಹಿ ಸಾಹಿತ್ಯ ಸಂ.೮, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೧. ಮಹನೂರ್ ಜಮಾನಿ ಬೇಗಂ ಮತ್ತು ಇತರರು(ಅನು.), **ಮೊಹಮ್ಮದ ನಾಮಾ**, ಆದಿಲಶಾಹಿ ಸಾಹಿತ್ಯ ಸಂ.೦೭, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೨. ಯಾಸೀನ್ ಖುದ್ದೂಸಿ ಎಂ., ಸೀತಾರಾಮ ಜಾಗೀರ್‌ದಾರ್(ಸಂ.), ೨೦೦೯, **ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ವಸಂತ ಕುಷ್ಟಗಿ ಮತ್ತು ಇತರರು(ಅನು.), ೨೦೧೪, **ತಾರೀಖ ಎ ಫರಿಶ್ತಾ**, ಭಾಗ.೩, ಆದಿಲಶಾಹಿ ಸಾಹಿತ್ಯ ಸಂ.೩, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೪. Ephigraphia Indica volumes.

೧೫. Karnataka Inscription volumes.

೧೬. South Indian Inscription volumes.

ಕನ್ನಡ ಗ್ರಂಥಗಳು

೧. ಅಣ್ಣಿಗೇರಿ ಎ.ಎಂ., ೧೯೮೦, **ವಿಜಾಪುರದ ಶಿಲ್ಪಕಲಾ ವೈಭವ**, ಭವಾನಿ ಪ್ರಕಾಶನ, ಧಾರವಾಡ.

೨. ಕಡಕೋಳ ಎಚ್.ಎಂ.(ಸಂ.), ೨೦೧೦, **ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ.

೩. ಕಲಬುರ್ಗಿ ಎಂ.ಎಂ.(ಪ್ರ.ಸಂ.), ೧೯೯೮, **ಮಾನಸೋಲ್ಲಾಸ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಕಲಬುರ್ಗಿ ಎಂ.ಎಂ., ೧೯೮೦, **ಸಮಾಧಿ ಬಲಿದಾನ ವೀರ ಮರಣ ಸ್ಮಾರಕಗಳು**, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

೫. ಕಲಬುರ್ಗಿ ಎಂ.ಎಂ., ೧೯೯೯, **ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು**, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಕೊಟ್ರೇಶ್ ಎಂ., ೨೦೧೦, **ಬಳ್ಳಾರಿ ಜಿಲ್ಲೆಯ ಕೋಟೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಕೊಪ್ಪಾ ಎಸ್.ಕೆ., ೧೯೯೦, **ತರ್ದವಾಡಿ ನಾಡು: ಒಂದು ಅಧ್ಯಯನ**, ಪ್ರತಿಭಾ ಪ್ರಕಾಶನ, ಇಂಡಿ.

೮. ಕೃಷ್ಣಕೋಲ್ಹಾರ ಕುಲಕರ್ಣಿ, ೨೦೦೨, **ಬಿಜಾಪುರ ಆದಿಲ್‌ಷಾಹಿ**, ಸಿಕ್ಯಾಬ ಆದಿಲ್‌ಷಾಹಿ ಅಧ್ಯಯನ ಸಂಸ್ಥೆ, ವಿಜಾಪುರ.

೯. ಗುರವ ಆರ್., ೧೯೭೭, **ತರ್ದವಾಡಿ ನಾಡು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಚನ್ನಬಸಪ್ಪ ಪಾಟೀಲ್, ೧೯೯೯, **ಕರ್ನಾಟಕದ ಕೋಟೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಚಿದಾನಂದಮೂರ್ತಿ ಎಂ., ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨.ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, **ಸಾಮ್ರಾಜ್ಯ ಮತ್ತು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಜೋಶಿ ಎಸ್.ಕೆ., ೨೦೦೮, **ಕರ್ನಾಟಕದ ಕೋಟೆ-ಕೊತ್ತಲಗಳು**, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ.

೧೪. ಜ್ಞಾನಾನಂದ ಜಿ., ೨೦೦೧, **ಶಿಲ್ಪಾದರ್ಶ ಸಂ.೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ತಿಪ್ಪೇರುದ್ರಸ್ವಾಮಿ ಎಚ್., ೧೯೬೮, **ಕರ್ಣಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೧೬. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಶ್ರೀನಿವಾಸ ರಿತ್ತಿ., ೨೦೦೦, **ನಿತಿವಾಕ್ಯಾಮೃತಂ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ನರಸಿಂಹಮೂರ್ತಿ ಎ.ವಿ., ೧೯೭೧, **ಕರ್ನಾಟಕದ ಸೇವುಣರ ಇತಿಹಾಸ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೮. ನರಸಿಂಹಮೂರ್ತಿ, ಎ.ವಿ.(ಅನು.), **ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಸಂ.೩, ಸಂ.೧೪**, ಭಾರತೀಯ ವಿದ್ಯಾಭವನ, ಬೆಂಗಳೂರು.

೧೯. ನಾಗೇಗೌಡ ಎಚ್.ಎಲ್., ೨೦೦೬, **ಪ್ರವಾಸಿ ಕಂಡ ಇಂಡಿಯಾ ಸಂ.೧**, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

೨೦. ನಾಯಕ ಹಾ.ಮಾ.(ಪ್ರ.ಸಂ.), ೨೦೦೫, **ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂ.೧**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೧. ಪಂಚಮುಖಿ ಆರ್.ಎಸ್., ೧೯೮೦, **ಕರ್ನಾಟಕ ಇತಿಹಾಸ ಸಂಪುಟ–೧**, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಧಾರವಾಡ.

೨೨. ಪ್ರಭಾಕರ ಎಂ.ಎನ್., ೨೦೧೧, **ದೇವಾಲಯ ವಾಸ್ತು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಬಡಿಗೇರ ವಿ.ಎಸ್., ೧೯೯೪, **ಬಸವನ ಬಾಗೇವಾಡಿ ತಾಲೂಕಿನ ಪುರಾತತ್ವ ಅವಶೇಷಗಳು ಒಂದು ವರದಿ**, ಇತಿಹಾಸ ದರ್ಶನ ಸಂಪುಟ–೯, ಬೆಂಗಳೂರು.

೨೪. ಬೇಟಗೇರಿ ಕೃಷ್ಣಶರ್ಮ, ೧೯೭೧, **ಕರ್ನಾಟಕ ಜನಜೀವನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೫. ಮಂಜುನಾಥ್ ಸಿ.ಯು., ೨೦೧೨, **ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ**, ಚಿತ್ಕಲಾ ಪ್ರಕಾಶನ, ಕುಪ್ಪಂ.

೨೬. ಮುದ್ದುವೀರಪ್ಪ, ೨೦೧೧, **ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು**, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

೨೭. ಮುನಿಸ್ವಾಮಿ ಆರ್.(ಮು.ಸಂ.), ೧೯೯೯, **ವಿಜಾಪುರ ಜಿಲ್ಲಾ ಗ್ಯಾಸೆಟಿಯರ್**, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು

೨೮. ಮಲ್ಲೇಪುರಂ ಜಿ. ವೆಂಕಟೇಶ(ಸಂ.), ೧೯೯೯, **ಶಿವತತ್ವ ರತ್ನಾಕರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಮಹದೇವ ಸಿ., ೨೦೦೧, **ಕರ್ನಾಟಕ ಪುರಾತತ್ವ ಶೋಧ**, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ.

೩೦. ಮಹಾದೇವ ನಾ. ಜೋಶಿ, ೨೦೧೧, **ಪ್ರಾಚೀನ ಭಾರತೀಯ ರಾಜನೀತಿ**, ರೂಪ ಪ್ರಕಾಶನ, ಧಾರವಾಡ.

೩೧. ಲೀಲಾ ಶಾಂತಕುಮಾರಿ, ೧೯೭೨, **ಕರ್ನಾಟಕದ ಅಗ್ರಹಾರಗಳು, ಅಗ್ರಹಾರ, ಪಾವಿಟ್ಟಿಗೆ,** ಕರ್ನಾಟಕ ಭಾರತಿ ಸಂಪುಟ-೪, ಧಾರವಾಡ.

೩೨. ಲಕ್ಷ್ಮಣ ತೆಲಗಾವಿ, ೨೦೦೪, **ಮೌರ್ಯ ಮತ್ತು ಶಾತವಾಹನ ಯುಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ವಾಸುದೇವ ಬಡಿಗೇರ, ೨೦೧೨, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಶೇಷಶಾಸ್ತ್ರೀ ಆರ್., ೧೯೮೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೫. ಷೇಕ್ ಅಲಿ. ಬಿ., ೧೯೯೯, **ಕರ್ನಾಟಕ ಚರಿತ್ರೆ ಸಂ.೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಶಿವತಾರಕ ಕೆ.ಬಿ., ೨೦೦೧, **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಶೇಷನವರತ್ನ(ಅನು.), ೨೦೦೫, **ಮನುಸ್ಮೃತಿ**, ಸಮಾಜ ಪುಸ್ತಕಾಲಯ, ಧಾರವಾಡ.

೩೮. ಶ್ರೀಧರ್ ಎಚ್.ಜಿ., ೨೦೦೨, **ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ**, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.

೩೯. ಸದಾನಂದ ಕನವಳ್ಳಿ(ಅನು.), **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ಅಂಕಿತ ಪುಸ್ತಕ, ಬೆಂಗಳೂರು.

೪೦. ಸುಂದರ ಅ., ೧೯೯೫, **ಕರ್ನಾಟಕ ಪ್ರಾಗಿತಿಹಾಸ ಕಲೆ**, ಕರ್ನಾಟಕ ಲಲಿತ ಕಲಾ ಆಕಾಡೆಮಿ, ಬೆಂಗಳೂರು.

೪೧. ಸುಂಕಂ ಗೋವರ್ಧನ, ೨೦೧೨, **ಕನ್ನಡನಾಡಿನ ಪ್ರಮುಖ ಕೋಟೆಗಳು**, ಓದು-ಬರಹ ಬಳಗ, ಬೆಂಗಳೂರು.

೪೨. ಸೋಮಶೇಖರ್ ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನಿತಿ**, ಸಂಚಿಕೆ ಪ್ರಕಾಶನ, ಚಿತ್ರದುರ್ಗ.

ಇಂಗ್ಲಿಷ್ ಗ್ರಂಥಗಳು

1. Abdul Gani Imaratwale, 2007, *History of Bijapur Shubhah*, Islamic Wonders Bureau, New Delhi.

2. Bird James,1844, *The Ruined City of Bijapur*, JBBRAS, Bombay.

3. Basavaraj K.R., 1984, *History and Culture of Karnataka*, Karnatak University, Dharwad.

4. Dulari Qureshi, 2004, *Fort of Daulatabad*, Bharatiya kala Prakashan, Delhi.

5. Gopal B.R., 1981, *The Chalukays of Kalyan*, Prasaranga, Karnatak University, Dharwad.

6. Gururaj Rao B.K., 1972, *Megalithic Culture in South India*, Prasaranga University of Mysore, Mysore.

7. Henry Cousen, 1977, *Bijapur and its Architectural Remains*, Bharatia Publishing House, Varanasi.

8. Joshi S.K., 1985, *Defence Architecture in Early Karnataka*, Sundeep Prakashan, Delhi.

9. Joshi R.V., 1956, *Plestocene Studies of the Malaprabha Basin*, Prasaranga Karnatak University, Dharwad.

10. Joshi P.M., 1936, *The Kingdom of Bijapur*, University of London, London.

11. Jouveau Dubreivil, '1920, *Anicient History of the Deccan*, Pandichary.

12. Khaodaey Zaman, 1989, *Persion Elements in the Cultural Art and Architecture of Bijapur*, Osmaniya university, Hyderabad.

13. Khare G.H.(Ed.), 1961, *Persian Sources of Indian History*, Bharat Itihas Samshodhak Mandal, Pune.

14. Kodad S.B., 1986, *The Battle of Talikota*, Shri Ramachandra Pub lication, New Delhi.

15. Madan A.P., 1990, *The History of the Rastrakutas*, Harman Publising, New Delhi.

16. Malik Zahiruddin, 1977, *The Reigon of Muhammad Shah 1719-1748 A.D.*, New Delhi.

17. Nayeem M. A., 2008, *The Heritage of The Adil Shahis of Bijapur* Hyderabad Publishers, Hyderabad.

18. Nayeem M. A., 1974, *External Realations of Bijapur Kingdom* Hyderabad Publishers, Hyderabad.

19. Pappu R.S., 1986, *The Pleistoscene Studies of the Krishna Basin*, Deccan College Poona, Poona.

20. Ritti S.N., 1977, *The Seunas*, Prasaranga Karnatak University, Dharwad.

21. Sherwani H.K. and Joshi P.M., 1973, *History of Medievel Deccan vol-I and vol-II*, Govt of Andhrapradesh, Hyderabad.

22. Sheshadri M., 1962, *The Stone are Tools from Salvadagi, Bijapur District*, Journal of the Mysore University vol-21, Mysore.

23. Satish Grover, 1996, *Islamic Architecture in India*, Golgotia Pub lishing company, New Delhi.

24. Sundar A.,1990, *Archaeology in Karnataka*, Directorate of Archae ology and Museum, Mysore.

25. Verma D.C., 1989, *Socio, Economic and Cultural History of Bijapur* New Delhi,

26. Vasant Madhuva K.G., 1978, *Kannada Sourcess of the Adilshahis of Bijapur (1555-1686)*, I.H.C., Hyderabad.

27. Verma D.C., 1978, *History of Bijapur*, Kumar Brothers, NewDelhi.

28. Zendekar A.L., 2002, *History and Antiquities of Tardawadi*, Karnatak University, Dharwad.

ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧಗಳು

೧. ಆನಂದ ಕುಲಕರ್ಣಿ, ೨೦೦೨, **ತಾಳಿಕೋಟೆ ಯುದ್ಧ: ಒಂದು ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಅಕ್ಕಿ ಮಹಾಂತೇಶ, ೨೦೦೬, **ಕಲ್ಯಾಣ ಚಾಳುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಕಲ್ಲೋಳಿಕರ ಅರುಣ ಸಿ., ೨೦೦೫, **ಬೆಳಗಾಂವ ಪ್ರದೇಶದ ಕೋಟೆ ಕೊತ್ತಲಗಳು: ಒಂದು ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಕಲ್ಯಾಣಿ ಸಂಗಪ್ಪ, ೨೦೦೬, **ಬಾಗಲಕೋಟೆ ಜಿಲ್ಲೆಯ ದೇಸಗತಿಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಚನ್ನಬಸಪ್ಪ ಕೆ., ೨೦೧೫, **ಎರಡನೇ ಇಬ್ರಾಹಿಂ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಚಿಂಚೋಳ್ಳಿ ಸುಭಾಸ್ ರಾ., ೧೯೯೯, **ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣದ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ತಿಪ್ಪೇಸ್ವಾಮಿ ಎಸ್., ೨೦೦೫, **ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ದೊಡ್ಡಮನಿ ಗಂಗಾಧರ, ೨೦೦೨, **ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜಧಾನಿ ಪಟ್ಟಣಗಳು ಒಂದು ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ಢವಳಗಿ ಸಂಗನಗೌಡ, ೨೦೦೧, **ವಿಜಾಪುರದ ಒಂದನೆಯ ಅಲಿ ಆದಿಲ್‌ಶಹಾನ ಜೀವನ ಮತ್ತು ಸಾಧನೆಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಮುಸ್ತಾಕ್ ಅಹಮ್ಮದ್, ೨೦೧೩, **ಮಹ್ಮಮದ್ ಆದಿಲ್‌ಶಹಾನ ಜೀವನ ಮತ್ತು ಸಾಧನೆಗಳು, ಕನ್ನಡ ವಿಶ್ವವಿದ್ಯಾಲಯ,** ಹಂಪಿ.

೧೧. ರಂಗರಾಜ ದೇವಿಂದ್ರಪ್ಪ, ೨೦೦೨, **ಸುರಪುರ ಸಂಸ್ಥಾನದ ಇತಿಹಾಸ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಶಂಭುಲಿಂಗ ಎಸ್.ವಾಣಿ, ೨೦೧೦, **ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಶ್ರೀನಿವಾಸ ಬಡಿಗೇರ, ೨೦೧೦, **ರಕ್ಷಣಾ ವಾಸ್ತುಶಿಲ್ಪ ಬೆಳಗಾವಿ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಶೇಕದಾರ ವಿಜಯಕುಮಾರ ಎಸ್., ೨೦೦೬, **ವಿಜಾಪುರ ಜಿಲ್ಲೆಯ ದೆಸಗತ್ತಿಗಳು ಒಂದು ಅಧ್ಯಯನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೫. ಸುಜಾತಾ ಮಲ್ಲನಗೌಡ, ೨೦೦೦, **ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು: ಒಂದು ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿಘಂಟುಗಳು

ಕನ್ನಡ ನಿಘಂಟು, ೮ ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦

ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫

ಸಂಸ್ಕೃತ-ಕನ್ನಡ ನಿಘಂಟು, ಚಕ್ರವರ್ತಿ ಜಿ.ಎನ್., ಗೀತಾ ಬುಕ್ ಹೌಸ್, ಮೈಸೂರು, ೨೦೦೯

ಸಂಸ್ಕೃತ-ಕನ್ನಡ ಶಬ್ದಕೋಶ, ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ, ಬೆಂಗಳೂರು ಪ್ರೆಸ್, ಬೆಂಗಳೂರು, ೨೦೧೨

ಗ್ಯಾಜೆಟಿಯರ್‌ಗಳು

ಹಯವದನರಾವ್ ಸಿ., ೧೯೮೩, ಮೈಸೂರು ಗ್ಯಾಜೆಟಿಯರ್ ಸಂಪುಟಗಳು, ಬಿ.ಆರ್. ಪಬ್ಲಿಕೇಶನ್, ನವದೆಹಲಿ.

ಮುನಿಸ್ವಾಮಿ ಆರ್.(ಮು.ಸಂ.), ೧೯೯೯, ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಸರಕಾರ, ಬೆಂಗಳೂರು.

ಜೇಮ್ಸ್ ಎಮ್. ಕ್ಯಾಂಬೆಲ್.(ಸಂ), ೧೮೮೪, ಗ್ಯಾಸೆಟಿಯರ್ ಆಫ್ ದ ಬಾಂಬೆ ಪ್ರೆಸಿಡೆನ್ಸಿ, ಗೌವರ್ನಮೆಂಟ್ ಸೇಂಟ್ರಲ್ ಪ್ರೆಸ್, ಬಾಂಬೆ.

ವೆಂಕಟರಂಗೊಕಟ್ಟಿ(ಅನು.), ೧೯೮೪, ಗ್ಯಾಝೇಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಏಶಿಯನ್ ಎಜುಕೇಶನಲ್ ಸರ್ವಿೀಸಸ್, ಹೊಸ ದೆಹಲಿ.

ಪತ್ರಿಕೆಗಳು

ಇತಿಹಾಸ ದರ್ಶನ, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು

ಕರ್ನಾಟಕ ಭಾರತಿ, ಧಾರವಾಡ

ಜಯಕರ್ನಾಟಕ, ಹುಬ್ಬಳ್ಳಿ

ಮಾನವಿಕ ಭಾರತಿ, ಮೈಸೂರು

ಪ್ರಬುದ್ಧ ಕರ್ಣಾಟಕ, ಮೈಸೂರು

ಸಾಧನ, ಬೆಂಗಳೂರು

Journals

Indian Archaeology Review

Indian Historical Review

Indian Historical Quarterly

Journal of Indian History

Journal of Oriental Research, Madras

Revised Lists of Antiquarian Remains in the Bombay Presidency. Vol-VIII


The Indian Antiqury.

The Journal of the Karnataka University, (Social Science and Humanities)

ಪದಕೋಶ

ಅಗಸೆ	–	ಗ್ರಾಮದ ಪ್ರವೇಶದ್ವಾರ
ಅಗಳು	–	ತಗ್ಗಾದ ಪ್ರದೇಶ
ಅಟ್ಟಾಲಕ	–	ಕೋಟೆಗೋಡೆಯ ಮೇಲೆ ಇರುವ ವೇದಿಕೆ
ಆಳ್ವೇರಿ	–	ಕೋಟೆಗೋಡೆ
ಇನಾಂ	–	ಬಹುಮಾನ, ಭಕ್ಷೀಸ್ ಪತ್ರ
ಕಣಜ	–	ದಾನ್ಯ ಸಂಗ್ರಹಿಸುವ ಸ್ಥಳ
ಕಿಲ್ಲೆ	–	ಕೋಟೆ
ಕೊತ್ತಳ	–	ಬುರುಜು
ಗೊಂಟು	–	ಕೋಟೆಗೋಡೆಗಳು ಒಂದಕ್ಕೊಂದು ಸಂಧಿಸುವ ಸ್ಥಳ
ಚಾವರಾತ್	–	ದೇಸಗತಿ ಅಧೀನಕ್ಕೆ ಒಳಪಟ್ಟ ಹಳ್ಳಿಗಳು
ಜಗತಿ	–	ವೇದಿಕೆ
ಠಾಣ್ಯ	–	ಸೈನ್ಯದ ಶಿಬಿರ
ತಲಾಬ್	–	ಬಾವಿ
ತೆನೆ	–	ಕೋಟೆಗೋಡೆಯ ಮೇಲೆ ಜೋಳದ ತೆನೆಯಾಕಾರದ ರಚನೆ.
ತೋಪು	–	ತುಪಾಕಿ, ಫಿರಂಗಿ
ದಂಡು	–	ಸೈನ್ಯ, ತುಕಡಿ
ದಫ್ತರ	–	ಲೆಕ್ಕಪತ್ರ ಬರೆದಿಟ್ಟ ಪುಸ್ತಕ
ದರ್ಬಾರ	–	ಸಭಾಭವನ
ದರ್ವಾಜ	–	ಬಾಗಿಲು
ದಿಡ್ಡಿಬಾಗಿಲು	–	ಉಪದ್ವಾರ
ಪಟ್ಟಾ	–	ವ್ಯಾಪಾರ
ಫರ್ಮಾನ್	–	ರಾಜಾಜ್ಞೆ
ಪುಲಿಮೊಗ	–	ಕೋಟೆಯ ದ್ವಾರ
ಫತೇದ್ವಾರ	–	ವಿಜಯದ ಬಾಗಿಲು
ಪ್ರಾಕಾರ	–	ಸುತ್ತುಗೋಡೆ
ಬುರುಜು	–	ಕೋಟೆಗೋಡೆಗೆ ಹೊಂದಿಕೊಂಡು ನಿರ್ಮಿಸಿರುವ ವೃತ್ತ, ಆಯತ, ಚೌಕ, ಅರ್ಧವೃತ್ತಾಕಾರದ ರಚನೆ
ಭೀತ್ತಿ	–	ಗೋಡೆ
ಮಹಾಲ	–	ಪರಗಣ

ಮೊಕ್ಕಾಂ	–	ನೆಲೆನಿಲ್ಲು
ವಜೀರ	–	ಪ್ರಧಾನಮಂತ್ರಿ
ಸನ್ನದು	–	ದಾನಪತ್ರ
ಹಗೆವು	–	ಧಾನ್ಯವನ್ನು ನೆಲದಲ್ಲಿ ಸಂಗ್ರಹಿಸುವ ಸ್ಥಳ
ಹುಡೆ	–	ಗ್ರಾಮಗಳಲ್ಲಿ ನಿರ್ಮಿಸಿರುವ ಕಾವಲುಗೋಪುರ




ಕರ್ನಾಟಕ ನಕ್ಷೆ



ವಿಜಾಪುರ ಜಿಲ್ಲೆಯ ನಕ್ಷೆ


MAP OF BIJAPUR AND ENVIRONS (AINAPUR, SHAHPUR, NAURASPUR, & ZOHRAPUR)
(1489-1686 A.D.)




FOR NUMERICAL FIGURES REFER TO APPENDIX TO THE MAP

(BASED ON HENRY COUSENS, 1887 AND 1916)

ತಲನಕ್ಷೆಗಳು




ಮೆಕ್ಕಾ ದ್ವಾರದ ತಲನಕ್ಷೆ, ವಿಜಾಪುರ ಕೋಟೆ




ಶಹಾಪುರ ದ್ವಾರದ ತಲನಕ್ಷೆ, ವಿಜಾಪುರ ಕೋಟೆ

ಕೃಪೆ: Nayeem M. A., 2008, 'The Heritage of The Adil Shahis of Bijapur




[illegible]




[illegible]

ಕೃಪೆ: Nayeem M. A., 2008, 'The Heritage of The Adil Shahis of Bijapur




ಫತೇದ್ವಾರದ ತಲನಕ್ಷೆ, ವಿಜಾಪುರ ಕೋಟೆ

ಕೃಪೆ: Nayeem M. A., 2008, 'The Heritage of The Adil Shahis of Bijapur




ಹೈದರ ಬುರುಜುವಿನ ತಲನಕ್ಷೆ, ವಿಜಾಪುರ

ಕೃಪೆ: Revised Lists of Antiquarian Remains in the Bombay Presidency. Vol-VIII




ಬುರುಜುವಿನ ತಲನಕ್ಷೆ, ವಿಜಾಪುರ ಕೋಟೆ

★ಕೋಟೇಶ್ವರ ಕೋಟೆ







★ ಬ್ಯಾಲ್ಯಾಳ ಕೋಟೆ




★ ನಾಗಬೇನಾಳ ಕೋಟೆ



ಪ
ದ
ಉ
ಪೂ
ಪ್ರಹರಿ ಕೋಣೆಗಳು
ವಾಡೆ
ಐದನೇ ದ್ವಾರಬಾಗಿಲು
ಬಾವಿ
ದಿಡ್ಡಿ ಬಾಗಿಲು
ನಾಲ್ಕನೇ ದ್ವಾರಬಾಗಿಲು
ಮೂರನೇ ದ್ವಾರಬಾಗಿಲು
ಎರಡನೇ ದ್ವಾರಬಾಗಿಲು
ಒಂದನೇ ದ್ವಾರಬಾಗಿಲು





★ ಬಲದಿನ್ನಿ ಕೋಟೆ




ಸುರಂಗ ಮಾರ್ಗ
1
2
ಮೂರನೇ ದ್ವಾರಬಾಗಿಲು
ಎರಡನೇ ದ್ವಾರಬಾಗಿಲು
ಆಂಜನೇಯ ದೇವಸ್ಥಾನ
ಮೊದಲನೇ ದ್ವಾರಬಾಗಿಲು
✦ 1 ಮತ್ತು 2 ಸೈನಿಕರ ಕೊಠಡಿಗಳು

★ ಸರಜಾರ ಕೋಟೆ





ಸಂಗಮೇಶ್ವರ ದೇವಸ್ಥಾನ


1
2



✸ ಮಣೂರ ಕೋಟೆ



ಛಾಯಾಚಿತ್ರಗಳು



ಆಗ್ನೇಯ ಭಾಗದ ಕೋಟೆಗೋಡೆ, ಅರಕಿಲ್ಲೆ, ವಿಜಾಪುರ



ದಕ್ಷಿಣ ಭಾಗದ ಕೋಟೆಗೋಡೆ, ಅರಕಿಲ್ಲೆ, ವಿಜಾಪುರ



ಪೂರ್ವ ಭಾಗದ ಎರಡು ಸುತ್ತಿನ ಕೋಟೆಗೋಡೆ ಮತ್ತು ಮಧ್ಯದ ಕಂದಕ, ಅರಕಿಲ್ಲೆ, ವಿಜಾಪುರ



ಒಳಸುತ್ತಿನ ಕೋಟೆಯ ಬುರುಜು ಮತ್ತು ಕಂದಕ, ಅರಕಿಲ್ಲೆ, ವಿಜಾಪುರ




ಪೂರ್ವಾಭಿಮುಖ ದ್ವಾರ, ಅರಕಿಲ್ಲೆ, ವಿಜಾಪುರ



ಗಗನ ಮಹಲ್, ಅರಕಿಲ್ಲೆ, ವಿಜಾಪುರ



ಜಲ ಮಂಜಿಲ್ ಮತ್ತು ಸಾತ್ ಮಂಜಿಲ್ ಅರಕಿಲ್ಲೆ, ವಿಜಾಪುರ



ದಕ್ಷಿಣ ಭಾಗದ ಹೂರಕೋಟೆಗೋಡೆ, ವಿಜಾಪುರ



ದಕ್ಷಿಣ ಭಾಗದ ಹೂರಕೋಟೆಗೋಡೆ, ವಿಜಾಪುರ



ಆಗ್ನೇಯ ಭಾಗದ ಹೂರಕೋಟೆಗೋಡೆ, ವಿಜಾಪುರ



ಪಶ್ಚಿಮ ಭಾಗದ ಹೂರಕೋಟೆಗೋಡೆ, ವಿಜಾಪುರ

ಕೋಟೆಗೋಡೆಯ ಮೇಲಿನ ತೆನೆಗಳು, ವಿಜಾಪುರ









ವಿಜಾಪುರ ಕೋಟೆಯ ಪ್ರಮುಖ ದ್ವಾರಗಳು



ಮಕ್ಕಾ ದ್ವಾರ



ಬಹಮನಿ ದ್ವಾರ



ಫತೇ ದ್ವಾರ




ಅಲ್ಲಾಪುರ ದ್ವಾರ

ಬುರುಜುಗಳು, ವಿಜಾಪುರ ಕೋಟೆ



ಅಲಿ ಬುರುಜು



ಶಾರ್ಜಾ ಬುರುಜು




ಗನ್ ಫಿರಂಗಿಶಾಹಿ ಬುರುಜು



ಹೈದರ್ ಬುರುಜು

ವಿವಿಧ ಪ್ರಕಾರದ ಬುರುಜುಗಳು, ವಿಜಾಪುರ ಕೋಟೆ











ಬುರುಜುವಿನಲ್ಲಿರುವ ಸೈನಿಕರ ಕೋಣೆ, ವಿಜಾಪುರ



ಬುರುಜುವಿನ ಮೇಲೆ ತೋಫು ಇಡುವ ಸ್ಥಳ, ವಿಜಾಪುರ



ಬುರುಜುವಿನ ಹಿಂಬಂದಿಯ ನೋಟ, ವಿಜಾಪುರ



ಬುರುಜುವಿನ ಮೇಲಿನ ಚಿಕ್ಕ ತೋಪುಗಳ ಕಿಂಡಿಗಳು, ವಿಜಾಪುರ

ವಿಜಾಪುರ ಕೋಟೆಯ ಪ್ರಮುಖ ತೋಫುಗಳು



ಮಾಲಿಕ್-ಎ-ಮೈದಾನ್ ತೋಫು



ಹೈದರ ಬುರುಜುವಿನ ಮೇಲಿನ ತೋಫುಗಳು



ವಸ್ತುಸಂಗ್ರಹಾಲಯ ಮುಂದಿನ ತೋಫುಗಳು



ಫೀರಂಗಿ ಶಾಹಿ ಬುರುಜುವಿನ ಮೇಲಿನ ತೋಫುಗಳು

ವಿವಿಧ ಪ್ರಕಾರದ ಬಂದೂಕು ಕಿಂಡಿಗಳು, ವಿಜಾಪುರ ಕೋಟೆ









ಕೋಟೆಗೋಡೆಯ ಮೇಲಿನ ಶಿಲ್ಪಗಳು, ವಿಜಾಪುರ





ಕೋಟೆಗೋಡೆ ಮತ್ತು ಬುರುಜು, ತಾಳಿಕೋಟೆ, ಮುದ್ದೇಬಿಹಾಳ ತಾಲೂಕು



ಕೋಟೆಯ ಆಗ್ನೇಯ ಪಾರ್ಶ್ವನೋಟ, ಹಿರೇ ಮುರಾಳ, ಮುದ್ದೇಬಿಹಾಳ ತಾಲೂಕು



ಕೋಟೆಗೋಡೆ, ನಾಗಬೇನಾಳ, ಮುದ್ದೇಬಿಹಾಳ ತಾಲೂಕು



ಕೋಟೆಗೋಡೆ, ಹಲಸಂಗಿ, ಇಂಡಿ ತಾಲೂಕು




ಕೋಟೆಗೋಡೆ ಮತ್ತು ಚೌಕಾಕಾರದ ಬುರುಜುಗಳು, ಹಲಸಂಗಿ, ಇಂಡಿ ತಾಲೂಕು



ಕೋಟೆ, ಕೋಟ್ನಾಳ್, ಇಂಡಿ ತಾಲೂಕು




ಕೋಟೆಗೋಡೆಯ ಅವಶೇಷಗಳು, ನಿಡಗುಂದಿ, ಬಸವನ ಬಾಗೇವಾಡಿ ತಾಲೂಕು



ಕೋಟೆಗೋಡೆ, ಮಣೂರ, ಸಿಂದಗಿ ತಾಲೂಕು

ಕೋಟೆ ದ್ವಾರಗಳು
(ವಿಜಾಪುರ ತಾಲೂಕು)


ಉಪ್ಪಲದಿನ್ನಿ


ನಾಗಠಾಣ


ಮಮದಾಪುರ


ಜೈನಾಪುರ

ಕೋಟೆ ದ್ವಾರಗಳು


(ಇಂಡಿ ತಾಲೂಕು)



ಹಲಸಂಗಿ



ಸಾಲೋಟಗಿ



ಕೋಟ್ನಾಳ




ಹೋರ್ತಿ


ಕೋಟೆ ದ್ವಾರಗಳು
(ಮುದ್ದೇಬಿಹಾಳ ತಾಲೂಕು)




ಮಡಕೇಶ್ವರ



ಹಡಲಗೇರಿ



ಬಸರಕೋಡ



ಮುದ್ದೇಬಿಹಾಳ

ಕೋಟೆ ದ್ವಾರಗಳು

(ಬಸವನ ಬಾಗೇವಾಡಿ ತಾಲೂಕು)





ನಿಡಗುಂದಿ



ಬ್ಯಾಲ್ಯಾಳ



ಬಸವನ ಬಾಗೇವಾಡಿ

ಕೋಟೆ ದ್ವಾರಗಳು
(ಸಿಂದಗಿ ತಾಲೂಕು)



ಆಲಮೇಲ



ಕೋರವಾರ



ಮಣೂರ



ಜಾಲವಾದ

ಬುರುಜುಗಳು



ಕಾರ್ಜೋಳ , ವಿಜಾಪುರ ತಾಲೂಕು



ಮಮದಾಪುರ, ವಿಜಾಪುರ ತಾಲೂಕು



ನಿಂಬಾಳ, ಇಂಡಿ ತಾಲೂಕು



ಕೋಟ್ನಾಳ, ಇಂಡಿ ತಾಲೂಕು



ಹಿರೂರು, ಮುದ್ದೇಬಿಹಾಳ ತಾಲೂಕು



ಮಿಣಜಗಿ, ಮುದ್ದೇಬಿಹಾಳ ತಾಲೂಕು



ರಾಂಪೂರ, ಸಿಂದಗಿ ತಾಲೂಕು



ಜಾಲವಾದ, ಸಿಂದಗಿ ತಾಲೂಕು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ